ಜಯಂತಿ

ಬದುಕಿನ ಹದಗಾರಿಕೆ

' ನಾನೆ ಬದುಕಬೇಕು, ನಾನೊಬ್ಬನೆ ಬದುಕಬೇಕು —
ಏನೆಲ್ಲ ಸುಖಸಲಕರಣೆಗಳೂ ನನಗೇ ಬೇಕು, ನನಗೇ ಬೇಕು ' !
ಹೊಸಯುಗದ ಮಾನವನ ಮನದ ಮಹದಾಶೆಯಿದು,
ಈ ಆಶೆಯೆ ಲೋಕದಲಿ ಅಶಾಂತಿಯ ಹರಡಿಹುದು !

ಅಯ್ಯಾ, ' ನಾನು ' ಎಂಬ ನಿನ್ನನು ಶೂನ್ಯದಿಂದ ಸೃಷ್ಟಿಸಿ,
ಒಲವಿನ ಒಳ್ಳಣಿಸನಿತ್ತು ಮೈಮನವ ಬೆಳೆಯಿಸಿದ
ತಾಯಿ–ತಂದೆಗಳನೂ ಮರೆಯಿಸಿತಲ್ಲ, ನಿನ್ನ ಮಹದಾಶೆ !
ಆ ಹಿರಿಯ ಜೀವಿಗಳ ಹಂಗು ನಿನಗಿಲ್ಲನೇನಣ್ಣಾ ?

ನೀನೊಬ್ಬನೆ ಈ ಲೋಕಕ್ಕೆ ಇಳಿದು ಬಂದ ಬಂಟನೇನಯ್ಯಾ,
ನಿನ್ನಂತಹ ಆಶೆಯನರೆ ಇಲ್ಲಿ ಬಹುಜನ ಬಾಳಿಹರಯ್ಯಾ !
ಒಬ್ಬೊಬ್ಬನೂ ಕಡಿವಾಣವಿರದ ಕುರುಡು ಕುದುರೆಯನೇರಿ
ಗುರಿಯ ಗಳಿಸಲು ಹೊರಟರೆ, ಎಂತಹ ಗೊಂದಲವೊದಗೀತಯ್ಯಾ !

ನಿನ್ನ ಬಲದ ಗಳಿಕೆ ನಿನ್ನದೆಂದಾದರೆ, ನಿನ್ನವರ ಪಾಡೇನು ತಂದೆ !
ನಿನ್ನಿಂದಲೂ ಹೆಚ್ಚಿನ ಬಲಗಳು ಇಳೆಯಲುಂಟು ಕೇಳಯ್ಯಾ,
ಬಲದಿಂದಲೆ ಬದುಕಬಲ್ಲೆನೆಂಬ ಚಲಗಾರನಿಗೆಡೆಯಿಲ್ಲವಯ್ಯಾ!
ಬಲಕ್ಕೆ ಬಲವು ಎದುರಾದರೆ, ಕಲಹವಲ್ಲದೆ ಇನ್ನೇನಯ್ಯಾ !

' ಬದುಕಬೇಕು, ಬಹುಕಾಲ ಬದುಕಬೇಕು ' ಎಂಬವನು,
ಹದವರಿತು ಹಜ್ಜೆಯಿಡಬೇಕು ಎಲ್ಲಿಯೂ ಏಗಲೂ !
ತನ್ನ ಬದುಕಿನ ಸುಖವ ಮರೆತು, ಇನ್ನೆಲ್ಲರ ಇರವನರಿತು
ಕರುಣೆ–ಮೈತ್ರಿಗಳನು ಕರುಳಲ್ಲಿ ಬೆಳೆಯಿಸುವುದೇ
ಬದುಕಿನ ಹದಗಾರಿಕೆಯೆಂಬ ನಮ್ಮ ಕಣ್ಣುಳ್ಳ ಕಾಲರಾಯ !

— ಸಾಮಾಜಿಕ

JAYANTI

★ ಈ ಸಂಚಿಕೆಯಲ್ಲಿ ★



ಕರ್ನಾಟಕ ಏಕೆ ಬೇಕಿಲ್ಲ ? (ಸಂವಾದಕೀಯ)
ಸಂಪಾದಕರು ೨೨೧

ನಾಡನಡೆ (ಪ್ರಾಸಂಗಿಕ ಟಪ್ಪಣಿ)
'ಕಾಲಭೈರವ' ೨೨೩

ಚಿರಕಾಲವ ಏಕಾಕಿನಿ (ಅನುವಾದಿತ ಸಣ್ಣ ಕಥೆ)
ಶ್ರೀ ನುಪೇನೂರ ಸಂಗಣ್ಣ, ಚಿಗಟೇರಿ ೨೨೫

ಅಸಾಮದಲ್ಲಿ ಮಳೆಗಾಲ (ಪ್ರದೇಶನರಿಚಯ)
ಶ್ರೀ. ಪಿ. ವಿ ಗುಡಿ, ಗೋಹಟ್ಟಿ (ಅಸಾಮು) ೨೩೩

ಚಕ್ರವ್ಯೂಹ (ಕವನ)
ಶ್ರೀ ನಿರಂಜನಭಟ್ಟ, ಮದ್ರಾಸ ೨೩೬

ಅಭಿಸಾರ (ಕವನ)
ಶ್ರೀ. ಸುಂದರ ನಾಡಕರ್ಣಿ, ವಲ್ಲಭನಗರ ೨೩೬

ನಾರದ ಮಲ್ಲಪ್ಪನವರು (ವ್ಯಕ್ತಿಪರಿಚಯ)
ಶ್ರೀ. ಬಿ. ಪಿ ಎಸ್. ರಾವ್, ಧಾರವಾಡ ೨೩೭

ಮುರುಗಿ ಮುಸಲ್ಲಂ (ಸಣ್ಣಕಥೆ)
ಶ್ರೀ. ಅಶ್ವತ್ಥ, ಬನಾರಸ ೨೪೦

ಮೆಚ್ಚುಗಾಣಿಕೆ (ಕವನ)
ಶ್ರೀ. ಚನ್ನಯ್ಯ ಸೋನೇಶ್ವರ, ಕೋಟೆಗಾರು ೨೪೫

ಭಾರ್ಗವಿ (ಪೌರಾಣಿಕ ರೂಪಕ)
ಶ್ರೀಮತಿ ಎಂ ಕೆ ಜಯಲಕ್ಷ್ಮಿ, ಕರಗಡ ೨೪೬

ನರ್ತನಮಾನ ಚಿತ್ರ (ಕವನ)
"ಆನಂದಕಂದ" ೨೫೦

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಕುಮಾರಿ ಪಿ. ಎಚ್. ಲಕ್ಷ್ಮಿ—ಪಾಡಿ, ಕುಮಾರಿ ಉಮಾ ಅಕ್ಕಿ ೨೫೧

ಸೆಳೆತದ ಶಿಲುಬೆ (ಪುಸ್ತಕ ಪರಿಚಯ)
ಶ್ರೀ. ಈಶ್ವರ, ಒರೇನಂದಿಹಳ್ಳಿ ೨೫೬

ಸಾದರಸ್ವೀಕಾರ .... ಕವರ್ ೩ನೆಯ ಪುಟ

ಜಯಂತಿ

ಸಂಪುಟ ೩೩] [ಸಂಚಿಕೆ ೭

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ನಾಸಪತ್ರಿಕೆ

ಸಂಪಾದಕರು :
ಬೀ. ಬಿಟೆಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

"ಕರ್ನಾಟಕ" ಏಕೆ ಬೇಕಲ್ಲ ?

ಕಳೆದ ತಿಂಗಳಲ್ಲಿ ಮೈಸೂರು ವಿಧಾನಸಭೆಯಲ್ಲಿ, ರಾಜ್ಯದ ಹೆಸರು 'ಕರ್ನಾಟಕ' ಎಂದಿರ ಬೇಕೆಂಬುದರ ಚರ್ಚೆ ನಡೆದು, ಪದ್ಧತಿಯಂತೆ ನಿರ್ಣಯವನ್ನು ಕಾಣದೆ ಮುಗಿಯಿತು. ಇಂದಿನ ನಮ್ಮ ಪ್ರಜಾಪ್ರಭುತ್ವದ ಆಡಳಿತ ವಿಲಕ್ಷಣವಾದುದಾಗಿದೆ. ಆಡಳಿತದಲ್ಲಿರುವ ವ್ಯಕ್ತಿಗಳ ಅಧಿಕಾರ ಮೋಹ, ಪ್ರಜೆಗಳ ಅಭಿಪ್ರಾಯವನ್ನು ತುಳಿದು ಮೆಟ್ಟುತ್ತಲಿದೆ. ಪ್ರತ್ಯಕ್ಷವಾಗಿ ಪ್ರಜೆಗಳ ಜೀವನಕ್ಕೆ ಯಾವ ರೀತಿಯಿಂದಲೂ ಉಪಕಾರಕವೆನಿಸದ—ಅಸಾಂಪ್ರದಾಯಿಕ ಕಟ್ಟು-ಕಟ್ಟಳೆಗಳೆಷ್ಟೋ ಸಹಜವಾಗಿ ಅಲ್ಲಿ ಪಾಸಾಗುತ್ತವೆ; ಆದರೆ ಕನ್ನಡಿಗರ ಜೀವಭಾವದ ವಿಷಯವಾಗಿರುವ, ಈ ಕರ್ನಾಟಕವೆಂದು ಹೆಸರಿರಿಸಬೇಕೆನ್ನುವ ಮಾತು, ಹುಚ್ಚಾಟದ ವಾದ-ವಿವಾದಗಳಲ್ಲಿಯೆ ಕೊನೆಗೊಳ್ಳುತ್ತಿರುವುದು, ಕನ್ನಡದ ಅಭಿಮಾನಿಗಳಲ್ಲಿ ಅಸಮಾಧಾನ, ಅತೃಪ್ತಿಗಳನ್ನು ಹೆಚ್ಚಿಸುವಂತಹದಾಗಿದೆ.

ರಾಜ್ಯದ ಹೆಸರು 'ಕರ್ನಾಟಕ' ಎಂದಿರಬೇಕೆನ್ನುವವರು, ರಾಜ್ಯದಲ್ಲಿ ಅಲ್ಪಸಂಖ್ಯಾಕರಿರುವರೆನ್ನಬೇಕೆ ? ಹಳೆಯ ಮೈಸೂರಿನ ಹೊರಗಿನ ಕನ್ನಡಿಗರೆಲ್ಲರೂ 'ಕರ್ನಾಟಕ' ಎಂಬ ಹೆಸರಿನ ಪುರಸ್ಕರ್ತರಾಗಿದ್ದಾರೆ. ಹಳೆಯ ಮೈಸೂರಿಗರಲ್ಲಿಯೂ 'ಕರ್ನಾಟಕ' ನಾಮಾಭಿಲಾಷಿಗಳು ಕಡಮೆ ಜನರೇನಿಲ್ಲ. ವಿಧಾನಸಭೆಯ ಸದಸ್ಯರನ್ನು ವೈಯಕ್ತಿಕವಾಗಿ ಕೇಳಿದರೆ, 'ಕರ್ನಾಟಕ' ಎಂದು ಇರಬೇಕೆಂದು ಹೇಳುವವರೇ ಖಂಡಿತ ಬಹುಜನರಿದ್ದಾರೆ. ಹೀಗಿದ್ದರೂ ಈ ವಿಷಯ ಮತ್ತೆ ಮತ್ತೆ ಮುಂದೆ ಬಂದು, ಯಾರು ಯಾರಿಂದಲೋ ಮೂರ್ಖತನದ ಏಟುಗಳನ್ನು ತಿಂದು, ಮತ್ತೆ ಮತ್ತೆ ಹಿಂದೆ ಸರಿಯುತ್ತಿದೆಯಲ್ಲ! ಇದಾವ ಯಕ್ಷಿಣಿಯ ಮೋಡಿ? ಎಂತಹ ರಾಜಕಾರ್ಯದ ಕೈಚಳಕ ?

'ಕರ್ನಾಟಕ' ನಾಮಾಭಿಧಾನದ ಗೊತ್ತುವಳಿಯನ್ನು ಈ ಸಲ ಎದುರಿಸಿ ಮಾತನಾಡಿದವರ ತಿಳಿನಳಿಕೆಯಿಲ್ಲದ ತುಂಟ ಮಾತುಗಳನ್ನು ನೋಡಿದರೆ, ವಿಧಾನಸಭೆಯ ಸದಸ್ಯರೆಂಬವರ ಯೋಗ್ಯತೆ ಇಂತಹದೇ—ಎಂದು, ಎಂತಹ ಸಾಮಾನ್ಯ ಮನುಷ್ಯನಿಗೂ ಎನಿಸುವಂತಿದೆ. ಪ್ರಸವಾಪಕ್ಷದ ಸದಸ್ಯರೊಬ್ಬರು ಈ ಗೊತ್ತುವಳಿಯನ್ನು ಮಂಡಿಸಿದುದರಿಂದ, ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಈ ವಿಷಯದಲ್ಲಿ ಮೌನವನ್ನು ತಾಳಿದ್ದರು. ಒಬ್ಬಿಬ್ಬರು ಬಾಯಿಬಿಟ್ಟರೂ, ಗೊತ್ತುವಳಿಯನ್ನು ವಿರೋಧಿಸಿ ಮಾತನಾಡಿದರು. ಅಚ್ಚ ಕನ್ನಡಿಗರಾದ ಭೀಮಪ್ಪನಾಯಕರಂತಹರೂ, ಈ ಗೊತ್ತುವಳಿಯ ವಿರೋಧಕರಿಗೆ ಬೆಂಬಲವಾಗಿ ನಿಂತುದು, ಬಹುಜನರಿಗೆ ಆಶ್ಚರ್ಯವನ್ನು ಉಂಟುಮಾಡಿದೆ. ಈ ಸಂದರ್ಭವನ್ನು ನೋಡಿದಾಗ, ಪಕ್ಷಾಭಿಮಾನದಿಂದ ಅಂಧರಾದ ಭಾರತೀಯ ಕಮ್ಯುನಿಸ್ಟರು, ಸ್ವರಾಷ್ಟ್ರವಿದ್ರೋಹಿಯಾದ ಕೆಂಪುಚೀನಾವನ್ನು ಎತ್ತಿ ಹಿಡಿದು ಅದನ್ನು ಬೆಂಬಲಿಸುತ್ತಿರುವ ಸ್ವಜನದ್ರೋಹದ ಸಂಗತಿ ನೆನಪಾಗದೆ ಹೋಗದು.

ಮೊನ್ನೆಯ ಚರ್ಚೆಯ ಕಾಲದಲ್ಲಿ, ಕರ್ನಾಟಕದ ಗೊತ್ತುವಳಿಯನ್ನು ಪ್ರತ್ಯಕ್ಷವಾಗಿ ವಿರೋಧಿಸಿದವರೆಂದರೆ, ಒಬ್ಬರು ತಮಿಳು ಮನೆಮಾತಿನವರು; ಇನ್ನೊಬ್ಬರು ತೆಲುಗು ಮನೆಮಾತಿನವರು; ಮತ್ತೊಬ್ಬರು ಉರ್ದು ಮನೆಮಾತಿನವರು. ಇದು ನಮ್ಮ ನಾಡಿನ ಸಾರ್ವಜನಿಕ ಜೀವನದಲ್ಲಿಯ ಕನ್ನಡಿಗರ ದುರ್ಬಲತೆಯ ಲಕ್ಷಣವಾಗಿದೆ. ಎಲ್ಲ ಕಡೆಯಲ್ಲಿಯೂ ಕನ್ನಡಿಗರ ಬೆಂಬಲವನ್ನು ಪಡೆದೇ ಹೊಣೆಗಾರಿಕೆಯ ಸ್ಥಾನವನ್ನು ಹಿಡಿದು ಕುಳಿತ ಹಿತಶತ್ರುಗಳು ತುಂಬಿದ್ದಾರೆ. ಕನ್ನಡ—ಕರ್ನಾಟಕಗಳನ್ನು ಒಂದು ಬಗೆಯಿಂದ ತಿರಸ್ಕರಿಸುವ ಜನರಿವರು. ಏನೇನೋ ರಾಜಕಾರಣದ ವಂಚನೆಯಾಟಗಳನ್ನಾಡಿ, ಕನ್ನಡಿಗರನ್ನು ನೋಹದಲ್ಲಿ ಕೆಡಹಿ, ತಮ್ಮ ರೊಟ್ಟಿಯನ್ನು ತುಪ್ಪದಲ್ಲಿ ಚೆಲ್ಲಿಕೊಳ್ಳುವರು. ಆ ನೆಲೆ, ಮೊರೆತಿರುವ ಸ್ಥಾನ-ಮಾನಗಳ ಬಲದಿಂದ, ಕನ್ನಡ—ಕರ್ನಾಟಕಗಳ ವಿಷಯವನ್ನು ಹಿಂದಕ್ಕೆ ದಬ್ಬುವ ಸತ್ಕಾರ್ಯವನ್ನಿವರು ಮಾಡುವರು.

ಈ ತಮಿಳು, ತೆಲುಗು, ಉರ್ದು ಮನೆಮಾತಿನ ವಿರೋಧಿಗಳು, ಇದೇ ಬಗೆಯ ಹಿತಶತ್ರುಗಳಾಗಿದ್ದಾರೆ. ಇವರಿಗೆ 'ಕರ್ನಾಟಕ' ಎಂಬ ಶಬ್ದದಲ್ಲಿ ಹುದುಗಿರುವ ಕನ್ನಡಿಗರ ಹೆಮ್ಮೆಯ ವಿಷಯ ಅಸಹ್ಯ ವೆನಿಸಿದೆಯೇನೋ! ವಾಸ್ತವವನ್ನು ಬದಿಗೆ ಸರಿಸಿ ಇವರು "ಕರ್ನಾಟಕ" ಎಂಬ ಹೆಸರಿನ ಮೇಲೆ ಕೊಳೆಯನ್ನು ಎರಚುವ ಪ್ರಯತ್ನವನ್ನು ಮಾಡಿದ್ದಾರೆ. ತಮಿಳು ಆರ್ಮೊಗಂ ಅವರಿಗೆ "ಕರ್ನಾಟಕ" ಎಂಬುದರ ಅರ್ಥ, "ಮೂರ್ಖ" "ಹುಂಬ" ಎಂದಿರುವುದು ಗೊತ್ತಿದೆಯಂತೆ. ಆದುದರಿಂದ "ಕರ್ನಾಟಕ" ಎಂಬ ಹೆಸರು ಬೇಡ— ಎಂದು ಅವರ ವಾದ. ಇನ್ನೊಬ್ಬ ತೆಲುಗುಮಹನೀಯರಿಗೆ ವೈಸೂರಿನ ಇತಿಹಾಸ ವಷ್ಟೇ ಗೊತ್ತಿದೆ; ಕರ್ನಾಟಕದ ಇತಿಹಾಸದ ಕಡೆಗೆ ಅವರು ಕಣ್ಣು ಹರಿಸಿಯೇ ಇಲ್ಲ. ಅವರೂ "ಕರ್ನಾಟಕ" ಎಂಬ ಹೆಸರಿಗೆ ಐತಿಹಾಸಿಕ ಮಹತ್ತ್ವವಿಲ್ಲವೆಂದು ಆಭಾಸದ ಮಾತುಗಳನ್ನಾಡಿದ್ದಾರೆ. ಇನ್ನೊಬ್ಬ ಉರ್ದು ಮಹನೀಯರು ಕಾಂಗ್ರೆಸ್ಸಿಗರಾದರೂ, ವೈಸೂರು ಹೆಸರಿನ ಅಭಿಮಾನಿಗಳ ವಕೀಲರಾಗಿ, ಅತಾರ್ಕಿಕ ರೀತಿಯಲ್ಲಿ ತರ್ಕ ಮಾಡಿದ್ದಾರೆ. ಅವರಿಗೆ ಭೀಮಪ್ಪನಾಯಕರು ಬೆಂಬಲ ನೀಡಿದ್ದಾರೆ. ವಿಧಾನಸಭೆಯಲ್ಲಿ ಕುಳಿತ ಕನ್ನಡ ಸದಸ್ಯರು, ದ್ರೌಪದೀವಸ್ತ್ರಾಪಹರಣ ಸಂದರ್ಭದಲ್ಲಿ ಮೌನವಹಿಸಿದ ಭೀಷ್ಮ-ದ್ರೋಣರಂತೆ, ಬಾಯಿ ಮುಚ್ಚಿಕೊಂಡು ಕುಳಿತು, ತಮ್ಮ ತಾಯಿಯನ್ನು ಹೀನಯಿಸುವ ಮಾತುಗಳನ್ನು ಕೇಳುತ್ತ ಸುಮ್ಮನೆ ಇದ್ದರು. ಹೇಗಿದೆ ನೋಡಿರಿ ಪ್ರಜಾಪ್ರಭುತ್ವದ ಮೌಲ್ಯ. ನಮ್ಮ ಮನೆಯಲ್ಲಿರುವ ನಮ್ಮ ಆಶ್ರಿತ ಕೆನ್ನೆಗೆ ಹೊಡೆಮ ಅವಮಾನಗೊಳಿಸಿದರೂ ಹೊಡೆಸಿಕೊಂಡು ಸುಮ್ಮಗಿರಬೇಕು. ಇಲ್ಲವಾದರೆ, ದೊರೆತಿರುವ ಕುರ್ಚಿಗಳನ್ನು ಕಳೆದುಕೊಳ್ಳಬೇಕಾದೀತೆಂದು ಹೆದರಿಕೆ. ಕುರ್ಚಿ ಮುಖ್ಯ; ಕನ್ನಡ-ಕರ್ನಾಟಕಗಳು ಗೌಣ!

ಹಳೆಯ ಕಾಲದಲ್ಲಿ ನೆರೆ-ಸೆರೆಯ ಪ್ರಾಂತದವರು, ಪರಸ್ಪರರನ್ನು ಅಣಕಿಸಿ ನಿಂದಿಸಿ ಮಾತನಾಡಿರುವುದು, ಎಲ್ಲ ಕಡೆಯಲ್ಲಿಯೂ ಕಂಡು ಬರುವ ಮಾತು. ತಮಿಳರು 'ಕರ್ನಾಟಕ' ಎಂಬುದಕ್ಕೆ ಅಪಾರ್ಥ ಕಲ್ಪಿಸಿದ್ದರೆ, ಕನ್ನಡಿಗರು ತಿಗಳರನ್ನು— ಎಂದರೆ ತಮಿಳರನ್ನು— ಕಾಳ ಕೂಟದ ವಿವ, ಜೇಳು, ನಂಬಿದ ಹಸೆ, ಹಾಳೂರೆ ತುರುಚಿ, ನಸುಗುನ್ನಿ ಇವುಗಳಿಗೆ ಹೋಲಿಸಿ ಜೇಳಿ, ತಿಗಳರತ್ತಣ ಗಾಳಿ ಕೂಡ ಸಲ್ಲದುದೆಂದು ಹೇಳಿದ್ದಾರೆ. ಆರ್ಮೊಗಂ ಅವರು ಈ ಮಾತನ್ನು ಕೇಳಿಲ್ಲವೇ ? ಪಾಪ, ಹೇಗೆ ಕೇಳಬೇಕು ? ಅವರಿಗೆ ಕನ್ನಡ ಭಾಷೆ ಬಂದರಲ್ಲವೇ ಇದನ್ನು ಕೇಳಿ ತಿಳಿದುಕೊಳ್ಳುವುದು ?

'ಕರ್ನಾಟಕ' ಎಂಬ ಹೆಸರಿನ ರಾಜ್ಯಕ್ಕಾಗಿ ಕನ್ನಡಿಗರು ಇನ್ನೆಷ್ಟು ದಿನ ದಾರಿಕಾಯಬೇಕು ? ನಮ್ಮ ಮನೆಯಲ್ಲಿಯೆ ನಮ್ಮ ಮಾತು ನಡೆಯಬಾರದೆ ? ಬರಲಿರುವ ಮಹಾರಾಷ್ಟ್ರರಾಜ್ಯಕ್ಕೆ ಮರಾಠಿಗರ ಭಾಷೆ-ಸಂಸ್ಕೃತಿಗಳ ಅಭಿಮಾನ, ಮಹಾರಾಷ್ಟ್ರ ಎಂದಿರಿಸಲಿಕ್ಕೆ ಸಿದ್ಧವಿಲ್ಲ. ಅವರು ಅವಕ್ಕೆ 'ಮರಾಠೀ ರಾಜ್ಯ' ಎಂದು ಹೆಸರನ್ನು ಇರಿಸುವವರಿದ್ದಾರೆ. ಉದಯಿಸುತ್ತಿರುವಾಗಲೇ ಅದು ಮರಾಠೀ ರಾಜ್ಯವಾಗಿ ಉದಯಿಸುವುದು. ಕನ್ನಡಿಗರ ರಾಜ್ಯ ಉದಯಿಸಿ ಎಷ್ಟೋ ದಿನಗಳಾದರೂ, ಇನ್ನೂ ಅದಕ್ಕೆ 'ಕರ್ನಾಟಕ' ಎಂಬ ಹೆಸರು ಬರಲೊಲ್ಲದು ! ಇದೊಂದು ಕನ್ನಡಿಗರಲ್ಲಿರುವ ಉದಾಸೀನ ಸ್ವಭಾವದ ಲಕ್ಷಣವಾಗಿದೆ.

ಆದರೆ ಎಷ್ಟು ಕಾಲ ಈ ಔದಾಸೀನ್ಯ ಉಳಿದೀತು ? ಹೀಗೆಯೆ ಹೃದಯಕ್ಕೆ ಪೆಟ್ಟುಗಳು ಬೀಳತೊಡಗಿದರೆ, ಕನ್ನಡಿಗರಲ್ಲಿ ಚಟುವಟಿಕೆ ಉಂಟಾಗದೆ ಹೋಗದು. ಕೇವಲ ರಾಜ್ಯದ ಹೆಸರಿಗಾಗಿ ಬಹುಸಂಖ್ಯಾಕ ಪ್ರಜರು ಸತ್ಯಾಗ್ರಹಕ್ಕೆ ಸಿದ್ಧರಾಗುವ ಮೊದಲೇ, ನಮ್ಮ ವಿಧಾನಸಭೆಗೂ ಮಂತ್ರಿಮಂಡಲಕ್ಕೂ ಸರಿಯಾದ ಬುದ್ಧಿ ಬಂದರೆ, ಎಲ್ಲ ರೀತಿಯಿಂದಲೂ ಕ್ಷೇಮವಾದೀತು.

ಜಯಂತಿಯ ಮುನವಿ

ಕಳೆದ ಸಂಚಿಕೆಯಲ್ಲಿಯು ಸಂಪಾದಕೀಯವನ್ನು ಓದಿ, ಕೆಲವು ಜನರು ಮರುಕದ ಪತ್ರಗಳನ್ನು ಬರೆದಿದ್ದಾರೆ. ನಾಲ್ಕಾರು ಜನರು ಚಂದಾದಾರರನ್ನು ಹೆಚ್ಚಿಸುವ ಆಶ್ವಾಸನದ ಮಾತುಗಳನ್ನೂ ಬರೆದಿದ್ದಾರೆ. ಮೂರೋ ನಾಲ್ಕೊ ಜನರು ಹೊಸತಾಗಿ ಚಂದಾಹಣವನ್ನು ಕಳುಹಿ, ಜಯಂತಿಯ ಸಂಬಂಧವನ್ನು ತಂದುಕೊಂಡಿದ್ದಾರೆ. ಕೆಲವು ವ್ಯಕ್ತಿಗಳು ಜಯಂತಿ ಮುಂದೆ ನಡೆದೀತೋ ? ಇಲ್ಲವೋ— ಎಂಬ ಸಂದೇಹದಿಂದಲೇನೋ, ತಮ್ಮ ಚಂದಾದಾರಿಕೆಯನ್ನು ಸಿಲ್ಲಿಸಲು ಕಾಗದ ಬರೆದ್ದಾರೆ.

ಇಂದಿನ ಕನ್ನಡ ವಾಚಕರಲ್ಲಿರುವ ಸಾಹಿತ್ಯ-ಸಂಸ್ಕೃತಿಗಳ ವಿಷಯಕವಾದ ಪ್ರೀತಿ-ಅಭಿಮಾನಗಳ ಅಳಿಗೋಲು ಇದು. ಇದೇ ಅಳತೆಯಿಂದಲೇ ಜಯಂತಿಗೆ ನೆರವು ದೊರೆತರೆ, ಅದರ ಶುಭಭವಿಷ್ಯಕ್ಕೆ ಅಕೆಯೆಲ್ಲಿ ?

ಜಯಂತಿಗೆ ಸಹಾಯಧನ

ಡಾ. ರಂ. ಶ್ರೀ. ಮುಗಳಿಯವರು ಪ್ರತಿವರ್ಷದಂತೆ ಈ ಸಲವೂ ಜಯಂತಿಗೆ ಸಹಾಯಧನವೆಂದು ೧೦ ರೂ. ಗಳನ್ನು ಕೊಟ್ಟಿದ್ದಾರೆ. ಅವರಿಗೆ ಜಯಂತಿ ಸಾದರ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಅಂಚೆಯವರ ವಿಚಿತ್ರ ವ್ಯವಸ್ಥೆ

ಪತ್ರಿಕೆಗಳಿಗಾಗಿರುವ ಅಂಚೆಯ ರಿಯಾಯಿತಿ ತಿಂಗಳಲ್ಲಿ ಗೊತ್ತುಮಾಡಿದ ಒಂದು ದಿನ ಮಾತ್ರ ಸಿಕ್ಕುವುದು. ಮಿಕ್ಕ ದಿನಗಳಲ್ಲಿ ಜಯಂತಿಯನ್ನು ಕಳುಹಬೇಕಾದರೆ ೮ ನ. ಪೈಸೆಗಳ ಅಂಚೆಯ ಟಿಕೇಟನ್ನು ಅಂಟಿಸಬೇಕಾಗುವುದು. ಹರಕಿನಲ್ಲಿ ಕಾಲು ಸಿಕ್ಕಂತೆ, ಮೊದಲೇ ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿರುವ ಜಯಂತಿ, ಇನ್ನೂ ಹೆಚ್ಚಿನ ವೆಚ್ಚದ ಹೊರೆಯನ್ನು ಹೊರಬೆಕಾಗುವುದು. ಆದುದರಿಂದ ಚಂದಾದಾರರು, ಜಯಂತಿಯೊಂದಿಗೆ ಸಹಕಾರಭಾವದಿಂದ ನಡೆದುಕೊಳ್ಳಬೇಕಾಗಿ ಬಿನ್ನಹ.

—ಸಂಪಾದಕರು

ನಾಡನಡೆ

ಪಾಟೇಲರ ವತನದ ಮೇಲೆಯೂ ದಾಳಿ

ಮುಂಬಯಿಯ ಮುರಾರಜಿ ಸರಕಾರವು, ಉತ್ತರಕರ್ನಾಟಕದಲ್ಲಿಯ ಕುಲಕರ್ಣಿಕೆಯ ವತನದಾರಿಯನ್ನು ಕಡಮೆ ಮಾಡಿತು. ಅದರಿಂದ ಇವರ ಜವಿನಾನುಗಳ ವತನ ಹೋಯಿತಿಷ್ಟೇ ಅಲ್ಲ; ಪರಂಪರೆಯಿಂದ ಬಂದ ಕುಲಕರ್ಣಿಕೆಯೂ ಕೈಬಿಟ್ಟ ಹೋಯಿತು. ಇದರ ಪರಿಣಾಮವಾಗಿ ಸಂಬಳವ 'ತಲಾಠಿ'ಗಳು ಹಳ್ಳಿ-ಹಳ್ಳಿಗಳಲ್ಲಿ ತಲೆಯೆತ್ತಿ ನಿಂತರು.

ಸರಕಾರವ ಯಾವುದೇ ಕಾನೂನು, ಕೇವಲ ಹೊಸ ವಾತಾವರಣವನ್ನು ನಿರ್ಮಿಸುವುದಕ್ಕಷ್ಟೇ ಅಲ್ಲದೆ, ಜನತೆಯ ಕಲ್ಯಾಣಸಾಧನೆಗಾಗಿ ಮುಂದೆಬರಬೇಕು. ವತನದಾರ ಕುಲಕರ್ಣಿಯರನ್ನು ತೆಗೆದುಹಾಕಿ, ಸಂಬಳವ ತಲಾಠಿಗಳನ್ನು ನಿಯಮಿಸುವುದರಿಂದ, ಜನತೆಯ ಯಾವ ಕಲ್ಯಾಣಸಾಧನೆಯಾಗಿದೆ ?

ಮೊದಲಿನ ಕುಲಕರ್ಣಿಯರು, ರೈತರು ಒಂದೆಕಡೆಯಲ್ಲಿ ಬಾಳಿ ಕೊಂಡಿರಬೇಕಾಗಿದ್ದುದರಿಂದ, ಪರಸ್ಪರರು ವಿಶ್ವಾಸ-ಆತ್ಮೀಯತೆಗಳಿಂದ ನಡೆದುಕೊಳ್ಳಬೇಕಾಗುತ್ತಿತ್ತು. ಹಳ್ಳಿಯ ಸಾಮಾಜಿಕಜೀವನದಲ್ಲಿ ಒಂದಾಗಿ ನಡೆಯಬೇಕಾಗಿ ಬರುತ್ತಿದ್ದುದರಿಂದ, ಅಂದಿನ ಕುಲಕರ್ಣಿಯರು, ತಾವು ಸರಕಾರೀ ಅಧಿಕಾರಿಗಳೆಂಬುದನ್ನು ಮರೆತು, ಎಲ್ಲರೊಂದಿಗೆ ಸಹಕರಿಸಿ ನಡೆಯುತ್ತಿದ್ದರು. ಮಾಮೂಲನ್ನು ತೆಗೆದುಕೊಂಡರೂ, ಹಿತಮಿತವಾಗಿ ತೆಗೆದುಕೊಳ್ಳುತ್ತಿದ್ದರು. ಜನರ ಕೆಲಸಗಳನ್ನು ವಂಚನೆಯಿಲ್ಲದೆ ಮಾಡಿಕೊಡುತ್ತಿದ್ದರು.

ಇಂದಿನ 'ತಲಾಠಿ'ಗಳ ರೀತಿಯೆ ಬೇರೆ ಮಾದರಿಯದಾಗಿದೆ. ಎಲ್ಲೆಲ್ಲಿಂದಲೋ ಬಂದು ಗ್ರಾಮಾಧಿಕಾರಿಗಳಾಗಿ ಇರುವುದರಿಂದ, ಹಳ್ಳಿಗರೊಂದಿಗೆ ಅವರ ಆತ್ಮೀಯ ಸಂಬಂಧವೇ ಇಲ್ಲದಂತಾಗಿದೆ. ಅವರ ಲಂಚಗುಳಿತನಕ್ಕಂತೂ ಲೆಕ್ಕವೇ ಇಲ್ಲ. ಹಳ್ಳಿಯ ಜನತೆ ಅವರಿಗಾಗಿ ಬೇಸತ್ತುಹೋಗಿದೆ. ಮೇಲಿನ ಅಧಿಕಾರಿಗಳೆದುರು ದೂರುಹೇಳಿದರೂ ಏನೂ ಪ್ರಯೋಜನವಿಲ್ಲದಂತಾಗಿದೆ. ಏಕೆಂದರೆ, ಎಲ್ಲರೂ ಒಂದೇ ಕಂಟೆಯ ಮುಳ್ಳುಗಳು. ಎಷ್ಟೋ ಜನ 'ತಲಾಠಿ'ಗಳು, ಸರಕಾರವ ಹಣವನ್ನು ಎತ್ತಿಹಾಕಿ ಓಡಿಹೋದ ಉದಾಹರಣೆಗಳೂ ಸಾಕಷ್ಟಿವೆ. ಕುಲಕರ್ಣಿ ವತನದಾರಿಕೆಯನ್ನು ಕೊನೆಗೊಳಿಸಿದುವರ ಕಲ್ಯಾಣಗುಣವಿದು.

ಈಗ ಪಾಟೇಲರ ವತನದಾರಿಕೆಯನ್ನೂ 'ವಜಾ' ಮಾಡಬೇಕೆಂದು, ಮೈಸೂರ ಸರಕಾರ ಮಿಸುಕಾಡುತ್ತಲಿದೆ. ಇದರ ಬಗೆಗೆ ಮಾತುಕಥೆಗಳೂ ನಡೆಯುತ್ತಿವೆ. ಅಧಿಕಾರಬಲದಿಂದ ಪಾಟೇಲರ ವತನದಾರಿಕೆಯನ್ನೂ ಕಡಮೆಮಾಡಿ ಬಿಡಬಹುದು; ಆದರೆ ಅದರಿಂದ ಉಂಟಾಗಬಹುದಾದ ಸಾಮಾಜಿಕ ಕಲ್ಯಾಣವೇನೆಂಬುದನ್ನು, ಸಮಜಂಸ ಬುದ್ಧಿಯಿಂದ ಮೊದಲೇ ವಿಚಾರ ಮಾಡುವುದು ಒಳ್ಳೆಯದು. ಕುಲಕರ್ಣಿಯರ ವತನದ ಮೇಲೆ ಗದೆ ಬಂದಾಗ, ಪಾಟೇಲರು ಖುಷಿಯಿಂದ ನಗುತ್ತಿದ್ದರು; ಈಗ ತಮ್ಮ ತಲೆಯಮೇಲೂ ಆ ಗದೆಯ ಏಳುಬೀಳಲಿದೆ. ಈಗ ಪಾಟೇಲರು ಏನುಮಾಡುವರು ?

ಅಂಚೆಯ ಇಲಾಖೆಯ ಅನನುಕೂಲ ವ್ಯವಸ್ಥೆ

ಸ್ವಾತಂತ್ರ್ಯೋತ್ತರ ಭಾರತದಲ್ಲಿ, ನಮ್ಮ ಅಂಚೆಯ ಇಲಾಖೆಯೂ, ಹೊಸ ಹೊಸ ಕಟ್ಟು-ಕಟ್ಟಳೆಗಳನ್ನು ಜಾರಿಯಲ್ಲಿ ತರುತ್ತಲಿದೆ. ಅವುಗಳಿಂದ ಜನರಿಗಾಗುವ ಅನನುಕೂಲತೆಗಳ ಕಡೆಗೆ ಅದರ ಲಕ್ಷ್ಯವೇ ಇದ್ದಂತಿಲ್ಲ.

ಸಾಪ್ತ, ದೇಶಭಾಷೆಯ ಬಡಪತ್ರಿಕೆಗಳು, ತಮಗಿರುವ ಆರ್ಥಿಕ ತೊಂದರೆಯ ಮೂಲಕ, ಒಂದೆರಡುದಿನ ಹಿಂದುಮುಂದಾಗಿ ಹೊರಟು, ಎಂದೋ ಒಂದು ದಿನ ಚಂದಾದಾರರಿಗೆ ಸಲ್ಲುತ್ತಿದ್ದುವು; ಅಲ್ಲದೆ ತಿಂಗಳ ಎಲ್ಲ ದಿನಗಳಲ್ಲಿಯೂ ಬಿಡಿ ಸಂಚಿಕೆಗಳನ್ನು ಗ್ರಾಹಕರಿಗೆ ಕಳುಹುತ್ತಿದ್ದುವು. ಇದೆಲ್ಲಕ್ಕೂ ಅಂಚೆಯ ಇಲಾಖೆಯ ರಿಯಾಯಿತಿಯ ದರ ದೊರೆಯುತ್ತಿತ್ತು. ಎಂದೂ ಯಾವ ಪೋಸ್ಟಿನ ಅಧಿಕಾರಿಯೂ ಇದಕ್ಕೆ ತಕರಾರು ಮಾಡುತ್ತಿರಲಿಲ್ಲ. ಆದರೆ ಇಂದಿನ ನೂತನ ವ್ಯವಸ್ಥೆಯಲ್ಲಿ ಪತ್ರಿಕೆಗಳು, ಗೊತ್ತುಪಡಿಸಿದ ಒಂದು ದಿನ ಮಾತ್ರ ರಿಯಾಯತಿಯ ಅನುಕೂಲತೆಯನ್ನು ಪಡೆಯಬಹುದು. ಒಂದೆ ದಿನದ ಹೆಚ್ಚು ಕಡಮೆಯಾದರೆ, ಆ ರಿಯಾಯತಿಯು ದೊರೆಯುವಂತಿಲ್ಲ. ಸಾಮಾನ್ಯವಾದ ಅಂಚೆಯ ದರದ ಭಾರವನ್ನೇ ವಹಿಸಬೇಕು. ಕನ್ನಡ ಪತ್ರಿಕೆಗಳನ್ನು ಅಷ್ಟೊಂದು ನಿಯಮಿತವಾಗಿ ಪ್ರಕಟಿಸುವಂತಹ ಪರಿಸ್ಥಿತಿಯು, ಅವುಗಳ ಸಂಚಾಲಕರಿಗೆ ಎಲ್ಲಿದೆ ? ಇಲ್ಲವಾದುದರಿಂದಲೇ ಈ ರಿಯಾಯಿತಿಗೆ ಅವರು ಹೊರತಾಗಬೇಕಾಗುತ್ತದೆ. ಬೇರೆಯ ದಿನ ಕಳುಹುವ ಸಂಚಿಕೆಗಳಿಗಂತೂ ಪೂರ್ಣಬೆಲೆಯ ಟಿಕೇಟನ್ನು ಹಚ್ಚಲೇಬೇಕಾಗುವುದು. ಇವರಿಂದ ಅನೇಕ ಬಡ ಪತ್ರಿಕೆಗಳಿಗೆ, ತಮ್ಮ ಪ್ರಕಟನೆಯನ್ನು ನಿಲ್ಲಿಸುವಂತಹ ಸಂದರ್ಭ ಒದಗಿರುವುದು.

ಈಗ ಇನ್ನೊಂದು ಇಂತಹದೇ ಒಂದು ವಿಲಕ್ಷಣ ಕಟ್ಟಳೆ, ಮುಂಬಯಿಯ ಪಿ. ಎಂ. ಜಿ. ಆಫೀಸಿನಿಂದ ಹೊರಬಿದ್ದಿದೆ. ಅದೇನು ಗೊತ್ತಿದೆಯೆ ? ಸಂಕ್ರಮಣ ಹಬ್ಬದ ಕಾಲದಲ್ಲಿ, ಜನರು ಸ್ನೇಹ ಬಾಂಧವ್ಯಗಳನ್ನು ಬೆಳೆಯಿಸುವ ಸದುದ್ದೇಶದಿಂದ, ಒಬ್ಬರಿಗೊಬ್ಬರು ಕುಸುರೆಳ್ಳಿನ ಕೆರುಚೀಲಗಳನ್ನು, ಸ್ಯಾಂಪಲ್ ಪೋಸ್ಟಿನಿಂದಲೊ, ಬುಕ್ ಪೋಸ್ಟಿನಿಂದಲೊ ಕಳುಹುತ್ತಿದ್ದರು. ಬ್ರಿಟಿಷ ಸರಕಾರದ ಕಾಲದಿಂದಲೂ ಈ ಪದ್ಧತಿ ನಡೆದುಕೊಂಡು ಬಂದಿದೆ. ಇನ್ನು ಮೇಲೆ ಹೀಗೆ ಕುಸುರೆಳ್ಳಿನ ಚೀಲಗಳನ್ನು ಕಳುಹಬಾರದಂತೆ; ಮುಂಬಯಿಯ ಪಿ. ಎಂ. ಜಿ. ಯವರು ಹೀಗೆ ಆಜ್ಞೆಮಾಡಿದ್ದಾರೆ. ಇದರಿಂದ ಅಂಚೆಯ ಇಲಾಖೆಯವರಿಗೆ ಯಾವ ಅನುಕೂಲತೆ

ಯಿದೆಯೋ ಏನೋ! ಜನತೆಗೆ ಮಾತ್ರ ಇದರಿಂದ ಸಾಕಷ್ಟು ಅನನುಕೂಲವಾಗುವುದು. ಹಬ್ಬದ ಕಾಲದಲ್ಲಿ ಅವರು ಅನುಭವಿಸ ಬೇಹುದಾಗಿದ್ದ ಭಾವನಾತ್ಮಕ ಆನಂದವು ಇದರಿಂದ ಇಲ್ಲದಂತಾಯಿತು. ಪ್ರಜಾಪ್ರಭುತ್ವದಲ್ಲಿ ಅಧಿಕಾರಸ್ಥಾನದಲ್ಲಿರುವವರು, ತಮ್ಮ ಮೆದುಳಿನ ಲಹರಿಯೊಂದಿಗೆ ನಡೆಯತೊಡಗಿದರೆ, ಜನತೆಗೆ ಅದರಿಂದ ಸುಖವು ಸಿಕ್ಕೀತೆ? ಮುಂಬಯಿಯ ಇಂದಿನ ಸಿ. ಎಂ. ಜಿ. ಆಫೀಸಂತೂ ವಿಕ್ಷಿಪ್ತತನಕ್ಕೆ ಹೆಸರಾಗಿದೆ. ಜನತೆಗೆ ಇರುವ ಅನುಕೂಲತೆಗಳನ್ನು ಒಂದೊಂದಾಗಿ ಕಸಿದುಕೊಳ್ಳುತ್ತಿರುವ ಇವರ ಸುಧಾರಣೆಗಳನ್ನು ತೆಗೆದುಕೊಂಡು ಏನುಮಾಡಬೇಕೆಂಬುದೇ ತಿಳಿಯದಾಗಿದೆ.

ಬೆಳಗಾಂವಿಯಲ್ಲಿ ಮತ್ತೆ ಮರಾಠಿಗರ ಮಿಸುಕಾಟ

ಇದುವರೆಗೂ ಸುಮ್ಮಗಿದ್ದ ಬೆಳಗಾಂವಿಯ ಸಂ. ಮ. ಪಕ್ಷದ ಧುರೀಣರು, ಮತ್ತೆ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಮುಂಬಯಿ ರಾಜ್ಯ ಎರಡು ಭಾಗವಾಗಿ ಮಹಾರಾಷ್ಟ್ರ, ಗುಜರಾಥ ಗಳೆಂಬ ಹೆಸರಿನ ರಾಜ್ಯಗಳಾಗಿ ಪರಿವರ್ತನೆಗೊಳ್ಳುವುದರಲ್ಲಿದೆ. ಕೇಂದ್ರ ಸರಕಾರ, ಅಖಿಲಭಾರತ ಕಾಂಗ್ರೆಸ್ಸಿನ ಹಿರಿಯಮುಂದಾಳುಗಳು, ಬರೀ ಮುಂಬಯಿ ರಾಜ್ಯವನ್ನು ಒಡೆಯುವ ಮಾತುಗಳನ್ನು ಮಾತ್ರ ಆಡುತ್ತಿರುವರೆಂದೂ, ತಮ್ಮ ಅನ್ಯಾಯದ ಬೇಡಿಕೆಯಾದ ಬೆಳಗಾಂವಿ-ಕಾರವಾರ ಪ್ರದೇಶಗಳ ಬಗ್ಗೆ ಯಾರೂ ಯಾವುದೇ ಮಾತನಾಡಲೊಲ್ಲರೆಂದೂ ಇವರಿಗೆ ತುಂಬ ಸಂತಾಪವಾಗಿದೆ. ಈ ಸಂತಾಪದ ಸಂಕಟದಲ್ಲಿ ಮತ್ತೆ ಅವರು ಕನ್ನಡಿಗರನ್ನೂ ಮೈಸೂರು ಸರಕಾರವನ್ನೂ ಬಾಯಿಗೆ ಬಂದಂತೆ ಬೈಯತೊಡಗಿದ್ದಾರೆ. ಅವರು ನಿಜವಾಗಿಯೂ ಬುದ್ಧಿವಂತ ರಾಜಕಾರಣಿಗಳಾಗಿದ್ದರೆ, ಯಾವಾಗಲೂ ಕೊನೆಯು ಅಯಶಸ್ವಿಯಾಗುವ ಈ ಚಳವಳಿಯನ್ನು, ಎಂದೋ ನಿಲ್ಲಿಸಿಬಿಡಬೇಕಾಗಿತ್ತು. ಆದರೆ ಆ ಮುಂದಾಳುಗಳಲ್ಲಿರುವ ದುರ್ಯೋಧನವೃತ್ತಿ ಅವರನ್ನು ರೇಗಿಸಿ ರೇಗಿಸಿ ಮುಂದೆ ದೂಡುತ್ತಲಿದೆ. ಬೆಳಗಾಂವಿ, ಕಾರವಾರಗಳು ತಮಗೆ ದಕ್ಕದ ತುತ್ತು—ಎಂಬುದು ಅವರಿಗೆ ತಿಳಿಯದುದು ಆಶ್ಚರ್ಯದ ವಿಷಯವಾಗಿದೆ. ಇವರು ಎಷ್ಟೇ ಚಳವಳಿ ನಡೆಯಿಸಿ, ಕೆಳಗಿನ ಲೋಕವನ್ನು ಮೇಲೆಮಾಡಲೇ; ಕನ್ನಡಿಗರ ಸ್ವಾಭಾವಿಕ ಪ್ರದೇಶಗಳಾದ ಬೆಳಗಾಂವಿ, ಕಾರವಾರಗಳು ಮರಾಠಿಗರ ಕಡೆಗೆ ಎಂದೂ ಹೋಗಲಾರವು. ಬರೀ ಚಳವಳಿಯ ಬಲದಿಂದ ಬಯಸಿದುದು ಸಿಗುವಂತಿದ್ದರೆ, ಎಲ್ಲರೂ ಅದೇ ಕುಚೇಷ್ಟೆಯನ್ನು ಆರಂಭಿಸಬಹುದು. ಆದರೆ ಕೇಂದ್ರದಲ್ಲಿ ನ್ಯಾಯಾನ್ಯಾಯಗಳನ್ನು ಸರಿಯಾದ ದೃಷ್ಟಿಯಿಂದ ತೂಗಿನೋಡಿ ನಿರ್ಣಯಿಸುವ ಸರಕಾರವಿದೆ; ವಿವೇಕ ಶಾಲಿಗಳಾದ ಧುರೀಣರಿದ್ದಾರೆ. ಅವರು ಅನ್ಯಾಯವನ್ನೆಂದೂ ಮಾಡರೆಂಬ ನಂಬುಗೆ ಕನ್ನಡಿಗರಲ್ಲಿ ಧೈರ್ಯ-ಸ್ಥೈರ್ಯಗಳನ್ನು ಹುಟ್ಟಿಸುತ್ತಿದ್ದರೆ, ಅದೇ ನಂಬುಗೆ ಮಹಾರಾಷ್ಟ್ರೀಯರನ್ನು ಅಸ್ಥಿರಭಾವಕ್ಕೆ ಗುರಿಮಾಡುತ್ತಲಿದೆ; ಅದೇ ಅವರಲ್ಲಿ ಕಳವಳವನ್ನು ಹೆಚ್ಚಿಸುತ್ತಲಿದೆ. ತಮ್ಮನ್ನರೇ ಮರಾಠೀರಾಜ್ಯದೊಂದಿಗೆ ಕೂಡಿಕೊಳ್ಳದೆ / ಪ್ರತ್ಯೇಕ ರಾಜ್ಯವನ್ನು ಬೇಡುವ ಉಗ್ರ ಚಳವಳಿಯನ್ನು ಹೂಡುವುದರಲ್ಲಿ ಇದ್ದಾರೆ. ಅವರ ಮನಸ್ಸನ್ನು ಒಲಿಸಿ ತಮ್ಮೊಂದಿಗೆ ಕೂಡಿ ಇರಿಸಿಕೊಳ್ಳಲಿಕ್ಕೆ, ಮಹಾರಾಷ್ಟ್ರೀಯರು ತುಂಬ ಶ್ರಮಪಡಬೇಕಾಗಿದೆ. ಬೆಳಗಾಂವಿಯ ಮರಾಠಿಗರು, ತಮ್ಮ ಶ್ರಮವನ್ನು ಬೆಳಗಾಂವಿ-ಕಾರವಾರಗಳಿಗಾಗಿ ವ್ಯರ್ಥವೆಚ್ಚಮಾಡದೆ, ವರ್ಹಾಡಕ್ಕೆ ಹೋಗಿ ಅಲ್ಲಿಯ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದಕ್ಕಾಗಿ ವೆಚ್ಚಮಾಡಿ, ಸಾರ್ಥಕಗೊಳಿಸಿಕೊಳ್ಳಲಿ. ಶುದ್ಧ ಮಹಾರಾಷ್ಟ್ರೀಯರು, ಬೆಳಗಾಂವಿ ಕಾರವಾರಗಳನ್ನು ತಮ್ಮ ಗಮನದಲ್ಲಿಯೇ ಇಟ್ಟುಕೊಂಡಿಲ್ಲ. ಈ ವಿಷಯವೂ ಬೆಳಗಾಂವಿಯ ಮರಾಠಿಗರನ್ನು ಬಾಧಿಸುತ್ತಲಿದೆ. ತಮ್ಮ ಈ ದುರ್ಯೋಧನ ಪ್ರಯತ್ನ ಫಲಕಾರಿಯಾಗದೆ ಹೋದರೆ, ಭವಿಷ್ಯ ಕಾಲದಲ್ಲಿ ತಾವು, ಬೆಳಗಾಂವಿಯ ಬೀದಿಗಳಲ್ಲಿ, ಮುಖವೆತ್ತಿ ತಿರುಗುವುದು ಹೇಗೆ?— ಎಂಬ ಚಿಂತೆಯೂ ಬೆಳಗಾಂವಿಯ ಮರಾಠೀ ಧುರೀಣರನ್ನು ಸುಮ್ಮನೆ ಕೂಡಗೊಡಿಸದಾಗಿದೆ. ಇದು ಅವರ ಚಳವಳಿಯ ಅಂತ್ಯಕಾಲದ ಗೊರಗೊರಿಕೆಯೆಂಬುದನ್ನು ಯಾರೂ ಮರೆಯಲಾಗದು.

ಸೊಲ್ಲಾಪುರ ಜಿಲ್ಲೆಯ ಕನ್ನಡ ಪ್ರದೇಶ

ಮುಂಬಯಿರಾಜ್ಯ ಒಡೆದು ಎರಡು ಭಾಗವಾಗಲಿರುವ ಸಂಕ್ರಮಣಕಾಲದಲ್ಲಿ, ಮುಂಬಯಿ ರಾಜ್ಯದಲ್ಲಿ ಸೇರಿರುವ ಕನ್ನಡಪ್ರದೇಶಗಳು, ಕನ್ನಡ ರಾಜ್ಯಕ್ಕೆ ಸೇರುವಂತೆ ನಾವು ಗಟ್ಟಿಯಾಗಿ ಕೇಳಬೇಕು; ಕೂಗಾಡಬೇಕು; ಸಮಯ ಬಂದರೆ ಚಳವಳಿಯನ್ನೂ ಹೂಡಬೇಕು.

ಈಗ ಮರಾಠೀ, ಗುಜರಾಥೀ ರಾಜ್ಯಗಳು, ಕೇವಲ ಏಕಭಾಷಾಪ್ರಭುತ್ವದುವಾಗಿ ನಿರ್ಮಾಣಗೊಳ್ಳುತ್ತಲಿವೆ. ಹೀಗಿರುವಾಗ, ಮರಾಠೀರಾಜ್ಯಕ್ಕೆ ಸೇರಬಹುದಾಗಿದ್ದ ಕನ್ನಡ ಪ್ರದೇಶ, ಅಲ್ಲಿಯ ಬಹುಸಂಖ್ಯಾತರ ಭಾಷಾಭಿಮಾನದ ಅತಿವಾದದ ಮೂಲಕ, ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸಂದರ್ಭವೊದಗುವುದಕ್ಕೆ ಮೊದಲೇ ಆ ಪ್ರದೇಶಕ್ಕಾಗಿ ಕನ್ನಡಿಗರು ಕಸುವಿನ ಬೇಡಿಕೆಯನ್ನು ಮುಂಡಿಸಬೇಕು. ಅಲ್ಲಲ್ಲಿಯ ಸ್ಥಳೀಯ ಸಂಸ್ಥೆಗಳು, ಈ ಗೊತ್ತುವಳಿಯನ್ನು ಪಾಸ್‌ಮಾಡಿ, ಕೇಂದ್ರಸರಕಾರಕ್ಕೂ ಮುಂಬಯಿ ಸರಕಾರಕ್ಕೂ ಕಳುಹಬೇಕು. ರಾಜ್ಯದ ವಿಧಾನಸಭೆ, ಪ್ರಜಾಪ್ರತಿನಿಧಿಗಳ ಸಭೆಗಳಲ್ಲಿ, ಈ ವಿಷಯದ ಚರ್ಚೆನಡೆದು, ಸ್ಪಷ್ಟವಾದ ಮಾತುಗಳಿಂದ ಏಕಕಂಠದ ಬೇಡಿಕೆಯು ಪುರಸ್ಕೃತವಾಗಬೇಕು. ಮುಖ್ಯ ಮಂತ್ರಿದ್ವಯದ ಮಾತು-ಕಥೆಗಳಲ್ಲಿ ಈ ಮಾತಿನ ಬಗೆಗೆ ಚರ್ಚೆಯಾಗಿ ಯಾವುದಾದರೊಂದು ಸಮಂಜಸ ನಿರ್ಣಯವನ್ನು ಇಬ್ಬರೂ ಒಪ್ಪಿಕೊಂಡಿದ್ದರೆ, ಅದು ಸಂತೋಷದ ವಿಷಯವೆ; ಆದರೆ ಅಂತಹ ಸಂತೋಷಕ್ಕೆ ಅವಕಾಶವಿರುವಂತಿಲ್ಲ. ಏಕೆಂದರೆ, ಇಬ್ಬರೂ ಮುಖ್ಯಮಂತ್ರಿಗಳ ಮಾತಿನಲ್ಲಿ ಯಾವ ಮಾತಿನ ನಿರ್ಣಯವೂ ಆದಂತಿಲ್ಲ. ಹಾಗಾದರೆ ಸೊಲ್ಲಾಪುರಕ್ಕಾಗಿ ಕನ್ನಡಿಗರ ನಿಲುಮೆಯೇನು?

ಚಿರಕಾಲದ ಏಕಾಕಿನಿ!

(ಮಹಾಭಾರತದ ಕಥೆ)*

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ (ಹರಪನಹಳ್ಳಿ)

ಯಾವ ಕಾಲವಾದರೇನು? ಗಂಡು–ಹೆಣ್ಣುಗಳ ಅಂತಃಸ್ವರೂಪ ತ್ರಿಕಾಲದಲ್ಲಿಯೂ ಒಂದೇ ತೆರ ಹೆಣ್ಣಿನ ಒಂದು ಮನಸ್ತರ ಅಕ್ಷಯವಾದ ವಿಲಾಸವನ್ನು ಬಯಸುವುದಾದರೆ ಅದರ ಮೂಲ–ಪ್ರವೃತ್ತಿ ಸಂತಾನದ ಪಾಲನೆ– ಪೋಷಣೆಗಳ ಕಡೆಗಿದೆ. ಗಂಡಿನ ಒಂದು ಮನಸ್ತರ ವಿಲಾಸಿನಿಯ ಜೊತೆಯನ್ನು ಬಯಸುವುದಾದರೂ, ಗೃಹಸ್ಥ ಜೀವನವೇ ಅದರ ಮೂಲ-ಪ್ರವೃತ್ತಿಯಾಗಿದೆ. ಲಪಿತಾ, ಜರಿತಾ, ಮಂದಪಾಲರ ಚಿತ್ರ ಸ್ವಭಾವ ಸುಂದರವಾಗಿವೆ.

೧

'ಇದೇನು ? ಇಂದು ಕೂಡ ಏಕಾಕಿನಿ ನೀನು ?'

'ಹೌದು !'

'ಏಕೆ ?'

'ಇದುವರೆಗೂ ಯಾರೂ ಬಂದಿಲ್ಲ.'

'ಯಾವಾಗ ಬರಬಹುದು ?'

'ಗೊತ್ತಿಲ್ಲ !'

ನಿಕುಂಜದ ಏಕಾಂತದಲ್ಲಿ ನಿಂತು, ಯಾವುದೋ ಒಂದು ಪ್ರತಿ–ಧ್ವನಿಯೊಂದಿಗೆ ಮಾತಾಡುತ್ತ ಉತ್ತರ ಕೊಟ್ಟಳು, ಋಷಿಕುಮಾರಿ ಲಪಿತಾ. ಆದರೆ. ಈ ಪ್ರತಿಧ್ವನಿ, ಸಮೀರನು ಹೊತ್ತತಂದ ನಿಜವಾದ ಒಂದು ಪ್ರತಿಧ್ವನಿಯಾಗಿರಲಿಲ್ಲ; ಲಪಿತಾಳ ಶ್ರವಣೇಂದ್ರಿಯವನ್ನು ಪ್ರವೇಶಿಸಿ ಕಂಪನವನ್ನುಂಟು ಮಾಡಿ ನೋವಿತ್ತಂತಹ ಸಹಜ ಪ್ರತಿಧ್ವನಿಯಾಗಿರಲಿಲ್ಲ ಅದು. ಆದರೂ ಇಂತಹ ಪ್ರತಿಧ್ವನಿ ಕೇಳಿಸಿತು ಅವಳಿಗೆ. ಅವಳ ಜೀವನವ ಸಾರಸರ್ವಸ್ವಕ್ಕೂ ಹೆಚ್ಚು ಸುಖಕರವಾದ ಏಕಾಂಕ್ಷೆಯ ಭಾಷೆಯೊಂದು, ಅವಳ ಮನದ ಆಕಾಶದಲ್ಲಿ ನಿರಂತರವಾಗಿ ಸಂಚರಿಸುವ ಚಂದನಾನಿಲವೊಂದರ ಸ್ಪರ್ಶದಿಂದ ಪುಲಕಿತವಾಗಿ ಮಧುರ ಪ್ರತಿಧ್ವನಿಯನ್ನು ಸೃಷ್ಟಿಸಿತ್ತು. ಸುಂದರೀ ಲಪಿತಾಳ ಕಲ್ಪನೆಯು ಪುಲ್ಲಮೆಲ್ಲನೆ ಕಿವಿಗೊಟ್ಟು ಅದನ್ನು ಕೇಳುತ್ತಿತ್ತು.

ಲಪಿತಾಳ ಋಷಿಪಿತನ ಆಶ್ರಮದ ಸುತ್ತಲೂ ತಪೋವನವಿದೆ; ಆದರೆ ಆ ತಪೋವನದ ತರುಗಳ ನೆರಳಿನ ಹತ್ತಿರ ಕೂಡ ಅವಳಿಂದೂ ಒಂದು ನಿಂತಿರಲಿಲ್ಲ. ತಪೋವನದ ಹತ್ತಿರದಲ್ಲಿಯೇ ಇರುವ ಭ್ರಮರ–ಗುಂಜನ ಭರಿತ ಪುನ್ನಾಗ ತರುವೃಂದದ ಮೇಖಲೆಯಿಂದ ಪರಿವೃತವಾದ ಆ ನಿಕುಂಜದ ನೆಳಲನ್ನು ಪ್ರೀತಿಸುತ್ತಿದ್ದಳು ಲಪಿತಾ.

ಯಾವಾಗ ನೋಡಿದರೂ, ನಿಕುಂಜದ ಲತಾಪಲ್ಲವ ಯಾವುದೋ ಒಂದು ಛಾಯೆಯ ಸ್ಪರ್ಶದಿಂದ ಕಂಪಿಸುತ್ತಿರುವಂತೆ ಲಪಿತಾಗೆ ಕಾಣುತ್ತಿತ್ತು. ಸಂತುಷ್ಟ ಕೆನ್ನರ ದಂಪತಿಗಳು, ಲಪಿತಾಳಿಗೆ ವರದಾನಮಾಡಿ ಹೋದಂದಿನಿಂದಲೂ ಅವರ ಮಾಯಾಶರೀರ ಬಂದು, ಆ ನಿಕುಂಜದ ಲತಾನುಂಟಪದಿಂದ ಅವಳತ್ತ ದಿಟ್ಟಿಸಿ ನೋಡುತ್ತಲೇ ಇರುವಂತೆ ತೋರುತ್ತಿತ್ತು.

'ಸುಂದರಿ ಲಪಿತಾ ?'

'ಏನು ?'

'ನಿರಾಶಳಾಗಬೇಡ !'

'ಎಂದೂ ಆಗುವುದಿಲ್ಲ.'

'ವಿಶ್ವಾಸವಿಡು, ನಾವಿತ್ತ ವರ ಒಂದು ದಿನ ನಿಜವಾಗುವುದು'

'ನಿಶ್ವಾಸವಿಟ್ಟಿರುವೆ.'

ನಿಜವಾಗಿಯೂ ಛಾಯೆಯಿಲ್ಲ; ಕೆನ್ನರದಂಪತಿಗಳ ಮಾಯಾ–ಶರೀರವೂ ಇಲ್ಲ. ವಾಯುವಿನ ತಿರುಗಾಟದಿಂದ ಕಂಪಿಸುತ್ತಿದ್ದ ಲತಾ–ಮಂಟಪದ ದಿಕ್ಕಿನತ್ತ ಕಲ್ಪನಾವಿಷ್ಟ ನೇತ್ರಗಳೊಂದಿಗೆ ನಿಟ್ಟಿಸುತ್ತಿದ್ದ ಲಪಿತಾ, ತನ್ನದೇ ಮನದ ಅಂತರಾಳದಲ್ಲಿಯ ಒಂದು ಉಪವನದ ಚಿತ್ರವನ್ನು ನೋಡುತ್ತಿದ್ದಳು. ಇದೇ ಉಪವನದಲ್ಲಿಯೇ ಲಪಿತಾ ಮತ್ತು ಅವಳ ಪ್ರಿಯತಮೆ ಇದ್ದಾರೆ; ಮತ್ತಿನ್ನಾರೂ ಇಲ್ಲ.

ಇದೇ ನಿಕುಂಜದಲ್ಲಿಯೇ ವಾಸವಾಗಿತ್ತು ಒಂದು ಕೆನ್ನರ ಜೋಡು ಒಂದು ದಿನ ತೃಷ್ಣಾರ್ತರಾಗಿದ್ದ ಕೆನ್ನರ ದಂಪತಿಗಳಿಗೆ ಜಲದಾನ ಮಾಡಿದ್ದಳು ಲಪಿತಾ. ಸಂತೃಪ್ತರಾದ ಅವರು ಅವಳನ್ನು ಪ್ರಶ್ನಿಸಿದ್ದರು:

'ಏನು ವರ ಬಯಸುವಿ ನೀನು ಋಷಿಕುಮಾರಿ ?'

'ಏನು ವರ ಕೊಡಬಲ್ಲಿರಿ ?'

'ನಮ್ಮಂತೆಯೆ ಆಗು. ಇದರ ಹೊರತು ಇನ್ನಾವ ವರದಾನ ಮಾಡುವ ಶಕ್ತಿಯೂ ನಮ್ಮಲ್ಲಿಲ್ಲ.'

'ಯಾರು ನೀವು ?'

'ನಾವು ಚಿರಸಂಗಲೀನರಾದ ನಲ್ಲ ಮತ್ತು ನಲ್ಲೆಯರು. ನಾವೆಂದಿಗೂ ಅಗಲಿ ಭಿನ್ನರಾಗುವುದಿಲ್ಲ. ನಾವು ಚಿರಕಾಲವೂ ದಂಪತಿಗಳು. ನಾವೆಂದಿಗೂ ತಂದೆ–ತಾಯಿ ಆಗುವುದಿಲ್ಲ. ನಮ್ಮ ಗರ್ಭ–ವಲ್ಲಿಂಜೂ ಸಂತಾನವಾಗದು. ಚಿರವಾದ ಆಲಿಂಗನದಲ್ಲಿ ಸಮರ್ಪಿತರಾದ ಪ್ರಿಯ ಮತ್ತು ಪ್ರಿಯತಮೆಯರು ನಾವು. ಮೂರನೆಯ ಯಾವುದೊಂದು ಜೀವಿಗೂ ನಮ್ಮ ಪ್ರೇಮವನ್ನು ಪಡೆದು ಸ್ನೇಹಭಾಗಿಯಾಗಲು ಅವಕಾಶಕೊಡೆವು. ನಮ್ಮ ಜೀವನ ನಿರಂತರ ಸುಖ-ಕ್ರೀಡಾ-ಸಂಗಜೀವನ'

*ಪ್ರಸಿದ್ಧ ಬಂಗಾಲಿ ಕಥೆಗಾರರಾದ ಶ್ರೀಸುಬೋಧ ಘೋಷರ ಕಥೆಯೊಂದರ ಅನುವಾದವಿದು.

' ಇದುವೇ ಜೀವನ !' ಲಪಿತಾ ನುಡಿದಳು.

' ಬಯಸುವೆಯೇನು ಈ ಜೀವನವನ್ನು ?'

' ಬಯಸುವೆ. '

' ಯಾವುದನ್ನು ಬಯಸುವಿಯೋ ಅದನ್ನು ನಿಶ್ಚಯವಾಗಿಯೂ ಪಡೆಯುವೆ '

ವರದಾನ ಮಾಡಿ ಹೊರಟುಹೋದರು ಕಿನ್ನರ ದಂಪತಿಗಳು. ಅಂದಿನಿಂದ ಪ್ರತಿದಿನವೂ ಆ ನಿಕುಂಜದ ಏಕಾಂತಕ್ಕೆ ಬಂದು ತನ್ನ ಮನದ ಆಕಾಂಕ್ಷೆಯ ಭಾಷೆಯಲ್ಲಿ, ಛಾಯೆಯ ಸಂಗಡ ನೀರವವಾಗಿ ಸಂಭಾಷಿಸಿ ಹೋಗುತ್ತಾಳೆ ಲಪಿತಾ. ಆದರೇನು! ಯಾರನ್ನು ಆಹ್ವಾನಿಸಿ ತನ್ನ ಜೀವನದ ಸುಖಸ್ವಪ್ನವನ್ನು ಸಫಲಗೊಳಿಸಿಕೊಳ್ಳಲು ಮನಸ್ಸನ್ನು ತೊಗುತ್ತಿದ್ದಳೋ, ಅಂಥ ಯಾವನೊಬ್ಬ ಪಥಿಕ ಮೂರ್ತಿಯು ಆ ನಿಕುಂಜದ ಮಾರ್ಗದಲ್ಲಿ ಇಂದಿನವರೆಗೂ ಕಾಣಿಸಿಗಲಿಲ್ಲ.

ಅದಕ್ಕಾಗಿಯೇ ಇಂದೆ ಕೂಡ ಲಪಿತಾ ಏಕಾಕಿನಿ. ನಿಕುಂಜದ ಏಕಾಂತದಲ್ಲಿರುವ ಪುಷ್ಪದಾಮಸಜ್ಜಿತ ತೂಗುಮಂಚದ ಪ್ರೇಮಿಗಳ ಎರಡು ಆಸನಗಳಲ್ಲಿ, ಒಂದು ಶೂನ್ಯವಾಗಿಯೇ ಉಳಿದಿದೆ. ಎಂದು ಪೂರ್ಣವಾದೀತು ಈ ಶೂನ್ಯ ಆಸನ ? ಲಪಿತಾ ಇನಿಯಳ ಬಸಿಯಲ್ಲಿ ನುಡಿಯುವುದೆಂದು ? ಅವಳ ಕಲ್ಪನೆಯ ಪ್ರಿಯತಮನ ಆಗಮನ ಎಂದು ? ಅವನ ಪಕ್ಕವನ್ನಾಶ್ರಯಿಸಿ ಅವಳ ಬಲಬಾಹು ಧನ್ಯತೆ ಪಡೆವುದು ಯಾವಾಗ? ಅವನ ವಾಮಪಂಗಿನಿಯಾಗಿ ಪುಷ್ಪದಾಮಸಜ್ಜಿತ ತೂಗುಮಂಚದಲ್ಲಿ ಕುಳಿತು, ಲಪಿತಾಳ ಚಿರಮಧುರ ಕಾಮಿನಿಯ ಸ್ವಪ್ನ ಉಯ್ಯಾಲೆಯಾಡುವುದೆಂದು ?

ಮುಹಿಕುಮಾರಿ ಲಪಿತಾ ಹತಾಶಳಾಗಿಲ್ಲವೆಂಬ ವಿಶ್ವಾಸವೇನೋ ಇದೆ; ಆದರೆ ಈ ವಿಧದ ನಿರೀಕ್ಷೆ ಸಹಿಸಲಸಾಧ್ಯವಾದದ್ದು. ನಿಕುಂಜದ ಹೊರವಲಯದ ಪುನ್ನಾಗತರುಗಳ ಛಾಯೆಯಲ್ಲಿ ಹಬ್ಬಿ ಹರಿದಿರುವ ಹಾದಿಯ ದಿಕ್ಕಿನತ್ತ, ಉತ್ಸುಕ ನೇತ್ರಗಳಿಂದಿಗೆ ನಿಟ್ಟಿಸುತ್ತಲೇ ಇದ್ದಾಳೆ ಲಪಿತಾ. ಪ್ರೌಢ ತರುಣರು, ಕಿಶೋರರು ಎಷ್ಟೋ ಜನ ಪಥಿಕರು ಅಲ್ಲಿ ಹಾಯ್ದು ಹೋದರು. ನಿಕುಂಜಛಾಯೆಯಲ್ಲಿ ಉಯ್ಯಲೆಯಾಡುವ ಯೌವನ ಶೋಭೆಯತ್ತ ಕಣ್ಣಿಟ್ಟುನೋಡಿ,ಎಲ್ಲರೂ ಹೊರಟು ಹೋದರು. ಇವರಲ್ಲಿ ಮುಗ್ಧರಾದವರುಂಟು; ವಿಸ್ಮಿತರಾದವರುಂಟು; ಶಂಕಿತರಾದವರೂ ಉಂಟು.

ಆದರೆ ಕೊನೆಗೊಂದು ದಿನ, ಉಯ್ಯಾಲೆಯಾಡುತ್ತಿದ್ದ ಪುಷ್ಪ ಸಮೂಹದ ತೂಗಾಟದೊಂದಿಗೆ, ಯಾವುದೋ ಒಂದು ಸ್ವಪ್ನದಲ್ಲಿ ಕಂಡರೂಪ-ಯಾರೋ ಒಬ್ಬ ಅಮರ್ತ್ಯ ಮಾನವ-ವಸಂತ ಸಮೀರದಲ್ಲಿ ತೇಲುತ್ತಾ ಬಂದು ಈ ನಿಕುಂಜದ ಆಶ್ರಯದಲ್ಲಿಳಿದಂತಾಯಿತು. ಪುಷ್ಪ ದಾಮಸಜ್ಜಿತ ತೂಗುಮಂಚ ತೂಗಾಡಿತು. ಲಪಿತಾಳ ಆಲಸ್ಯ ನಯನಗಳ ಸ್ಮರಣಾನಿಶ್ರಾಂತ ದೃಷ್ಟಿ ತೂಗಾಡಿತು. ಅವಳ ಆನೇಶ-ವಿಲೋಲಕೇಶ ರಾಶಿ ತೂಗಾಡಿತು. ಮುಗ್ಧ ಪಥಿಕನ ಮುಖವನ್ನೇ ಲಪಿತಾ ನಿಟ್ಟಿಸಿದಳು— ತನ್ನ ಸೊಗಸನ್ನು ತಿರುಗಿಸದಂತೆ. ಅವಳೇನೂ ಮುಗ್ಧಳಾಗಲಿಲ್ಲವಾದರೂ ಮತ್ತೊಮ್ಮೆ ಮುಖ ತಿರುಗಿಸಿ ನೋಡಲಾಗಲಿಲ್ಲ ಅವನನ್ನು !

ಪುನ್ನಾಗತರುವಿನ ಛಾಯೆಯ ಹತ್ತಿರ ಬಂದು, ವಿಸ್ಮಿತನಯನಗಳಿಂದ, ನವೀನ ಕಿಂಶುಕ ಪುಷ್ಪದಂತಿದ್ದ ರೂಪಶಾಲಿ ಋಷಿಯುವಕನೊಬ್ಬ ತನ್ನನ್ನೇ ನಿಟ್ಟಿಸಿತ್ತಿರುವುದನ್ನು ಲಪಿತಾ ಕಂಡಳು.

ಸತ್ಯಸಂಧ, ನಿರ್ಮತ್ಸರಿ, ಪ್ರಿಯವಾದಿ ಹಾಗೂ ವೇದವಿದ ಮುಂದಪಾಲ, ತನ್ನ ಬಗ್ಗೆ ಆಕಾಂಕ್ಷಿತಳಾಗಿ ವ್ರತ ಕೈಕೊಂಡಿರುವನ ಹೊಬ್ಬಳ ಆಹ್ವಾನವನ್ನು ಮನ್ನಿಸಿ ಹೊರಟಿದ್ದ. ಸ್ವರ್ಗಸ್ಥನಾದ ತನ್ನ ತಂದೆಯ ವಿಶೇಷ ಆಗ್ರಹದ ಮಾತೊಂದು, ಎಷ್ಟೋ ದಿನಗಳಿಂದ ಅವನ ಮನದ ನೆನಪಿನಲ್ಲಿತ್ತು: " ವಿವಾಹವಾಗಿ ಪುತ್ರವಂತನಾಗು ಮಗನೇ" ತಂದೆಯ ಈ ಬೇಡಿಕೆಯನ್ನು ನಿರಾಕರಿಸಿ ಸಮಾಜನಿಂದಿತನಾಗಿದ್ದ ಮುಂದಪಾಲ. ಕೇವಲ ಸಮಾಜನಿಂದನೆಯ ಆಘಾತದಿಂದ ಆತ್ಮರಕ್ಷಣೆ ನೂಡಿಕೊಳ್ಳಲಿಕ್ಕಾಗಿ ಮಾತ್ರವೇ ಅವನಿಂದು ಹೊರಟಿರಲಿಲ್ಲ; ತನ್ನ ಸ್ವರ್ಗಸ್ಥ ತಂದೆಯ ಮತ್ತೊಂದು ಮಾತು ಇಷ್ಟುದಿನಗಳಿಂದಲೂ ಮುಂದಪಾಲನ ಜ್ಞಾಪಕದಲ್ಲಿತ್ತು:— " ಖಾಂಡವ ಪ್ರಸ್ಥದ ಶಾಂಗಿರ್ಕ ಕುಮಾರಿ ಜರಿತಾಳ ಪಾಣಿಗ್ರಹಣ ಮಾಡಿಕೋ ! ಪುತ್ರ ! ಅವಳು ನಿನ್ನ ಅನುರಾಗಿಣಿಯೆಂಬು ನನಗೆ ಗೊತ್ತಾಗಿದೆ ! "

ಶಾಂಗಿರ್ಕಕುಮಾರಿ ಜರಿತಾಳ ವಿಷಯ ನೆನಪಿಗೆ ಬಂತು. ಅದಕ್ಕಾಗಿಯೇ ಖಾಂಡವ ಪ್ರಸ್ಥದತ್ತ ಹೊರಟಿದ್ದಾನೆ ಮುಂದಪಾಲ. ಈ ನಿಕುಂಜದ ಅಂಚಿನ ನೆರಳಿನಲ್ಲಿ ಹರಿದಿದ್ದ ಹಾದಿಯಲ್ಲಿ ನಿಂತು ನೋಡುತ್ತಿರುವ ಅವನಿಗೆ, ಕಾನನಭರಿತ ಖಾಂಡವ ಪ್ರಸ್ಥದ ಹಸುರು-ಶೋಭೆ, ಭಂಗಗೊಂಡ ತರಂಗಗಳಂತೆ ನಿಸ್ತಾರಗೊಂಡಿರುವುದು ಕಾಣುತ್ತದೆ. ಈ ಹರಿತಶೋಭೆಯ ಏಕಾಂತ ತಾಣವೊಂದರ ಮಡಿಲಲ್ಲಿ, ಜರಿತಾ ಎಂಬ ಹೆಸರಿನ ಅವನ ಪ್ರಾಣಯಾಕಾಂಕ್ಷಿಣೀ ನಾರಿಯೊಬ್ಬಳು ವ್ಯರ್ಥ ಅನುರಾಗದ ವೇದನೆಯ ಅಶ್ರುಭಾರಹೊತ್ತು ಕುಳಿತಿದ್ದಾಳೆ. ಇವರ ಕಲ್ಪನೆ ಇದೀಗ ತನ್ನಲ್ಲಿ ಮೂಡುತ್ತಿರುವಂತೆಯೇ, ಮುಂದಪಾಲ ವಿಸ್ಮಯಗೊಂಡ. ಮುಂದಪಾಲನ ಕಣ್ಣೆದುರಿಗೆ. ತನ್ನ ಮಾರ್ಗದಲ್ಲಿಯ ಯಾವುದೋ ಅಡೆತಡೆಯಂತೆ ಕಾಣುತ್ತಿರುವ ಈ ವಿಸ್ಮಯಕಾರಿಣಿ ಯಾರು ?

ತುಗುಮುಂಚದಿಂದಿಳಿದಳು ಲಪಿತಾ. ಉತ್ಸುಕ ನೇತ್ರ ಮತ್ತು ಹರ್ಷ ಭರಿತ ಅಧರಗಳನ್ನು ವಿಕಸಿಸುತ್ತಾ ಪೂರ್ಣ ವಿಕಸಿತ ಯೌವನೆ ಲಪಿತಾ, ಮೆಲ್ಲಮೆಲ್ಲನೆ ಮುಂದೆ ಬಂದು ಮುಂದಪಾಲನ ಸನ್ಮುಖದಲ್ಲಿ ನಿಂತಳು.

" ನೀನೇಕೆ ವಿಸ್ಮಿತರಾಗಿರುವಿರಿ ಋಷಿ ?" ಪ್ರಶ್ನಿಸಿದಳು ಲಪಿತಾ.

" ನನ್ನ ವಿಸ್ಮಯವನ್ನು ಕಂಡು ನೀನೇಕೆ ವಿಚಲಿತಳಾಗಿರುವೆ ಕುಮಾರಿ ?"

" ಸತ್ಯವನ್ನೇ ನುಡಿದಿರಿ ಋಷಿ ! ನೀವಾರೆಂಬುದನ್ನರಿಯೆ. ಆದರೂ ನನ್ನ ಜೀವನದ ತಾರುಣ್ಯ ಮತ್ತು ಬಯಕೆಗಳು ಎವೆಯಿಕ್ಕದೆ ಯಾರನ್ನು ಪ್ರತೀಕ್ಷಿಸುತಿದ್ದುವೋ, ಆ ನನ್ನ ಕಲ್ಪನೆಯ ಪ್ರಿಯತಮ ನೀವೇಯೆಂದು ಭಾವಿಸಿರುವೆ. "

''ತಪ್ಪುಮಾಡಿದೆ ಕುಮಾರೀ ನೀನು.. ಸತ್ಯಸಂಧನಾದ ವೇದವಿದ ಮುಂದಪಾಲ. ನಾನು ಇಲ್ಲಿರುವ ಕಾನನಮಯ ಖಾಂಡವ ಪ್ರದೇಶದಲ್ಲಿ

ಹಚ್ಚ ಹಸುರಿನಿಂದ ಶೋಭಿಸುವ ಏಕಾಂತ ತಾಣವೊಂದರಲ್ಲಿ, ನನ್ನ ಬರವನ್ನೇ ಎವೆಯಿಕ್ಕದ ನೇತ್ರದಿಂದ ನಿರೀಕ್ಷಿಸುತ್ತಲಿದ್ದಾಳೆ ಒಬ್ಬ ನಾರಿ"

— ಯಾರು ಆ ನಾರಿ ?

— ಜರಿತಾ.

—ಶಾರ್ಂಗಿಕ ಕುಮಾರಿ ಜರಿತಾ ?

— ಹೌದು.

— ಅವಳು ನಿಮ್ಮ ಪತ್ನಿಯೇನು ?

— ನನ್ನ ಪತ್ನಿಯಾಗಲಿದ್ದಾಳೆ.

— ಇದುವರೆಗೂ ಅಡೆ ತಡೆ ಏನಿತ್ತು ? ಜರಿತಾ ನಿಮ್ಮ ಪತ್ನಿಯಾಗಲು ಸಾಧ್ಯವಿರಲಿಲ್ಲವೇನು ?

— ನನ್ನದೇ ತಪ್ಪು. ನನ್ನದೇ ವಿಸ್ಮೃತಿ– ಮರೆತು ಬಿಟ್ಟಿದ್ದೆ. ತಂದೆಯ ಆಜ್ಞೆಯನ್ನು, ಅವಿವಾಹಿತ ಹಾಗೂ ಅಪುತ್ರಕ ಜೀವನವು ಜೀವನವಲ್ಲವೆಂಬುದನ್ನು ತಿಳಿದಿರಲಿಲ್ಲ.

ವಿಸ್ಮಿತ ಹಾಗೂ ಕಂಪಿತಸ್ವರದಲ್ಲಿ ಲಪಿತಾ ನುಡಿದಳು:— 'ಸಪುತ್ರಿಕಜೀವನದ ಲಾಭದ ಪ್ರಲೋಭದಿಂದಲೇ ಅನುರಾಗಿಣಿ ಜರಿತಾಳತ್ತ ಹೊರಟಿರುವಿರೇನು ನೀವು ?"

— ಹೌದು.

— ಆದರೆ ಆ ಜೀವನ ನಿಜವಾದ ಸುಖದ ಜೀವನವೇ ?

— ಇದೆಂತಹ ಅದ್ಭುತ ಪ್ರಶ್ನೆ ಕುಮಾರಿ ?

— ನೀವು ತಪ್ಪು ಮಾಡುತ್ತಿರುವಿರಿ ಋಷಿ ! ನೀವು ನೀರನ್ನು ಹುಡುಕಲು ಮರುಭೂಮಿಯತ್ತ ಹೊರಟಿರುವಿರಿ; ಮುತ್ತುಗಳನ್ನರಸಿ ಶಿಲೆಗಳತ್ತ ಚಲಿಸುತ್ತಿರುವಿರಿ; ಅಮೃತವನ್ನು ಬಯಸಿ ಹಾಲಾಹಲದ ನಾಡಿನತ್ತ ನಡೆಯುತ್ತಿರುವಿರಿ. ಶಾರ್ಂಗಿಕ ಕುಮಾರಿ ಜರಿತಾಳ ಒಲವಿನಲ್ಲಿ ನೀವು ಪುತ್ರಸಂತರಾಗಬಹುದು; ಆದರೆ ಪ್ರೇಮದ ಆನಂದವನ್ನು ನೀವು ಪಡೆಯಲಾರಿರಿ ಋಷಿ !

— " ಏಕೆ ?" ಮುಂದಪಾಲ ಕೇಳಿದ.

" ನಿಮ್ಮ ಸಂತಾನ, ನಿಮ್ಮನಲ್ಲೇ ಆದ ಪ್ರಿಯತಮೆ ಜರಿತಾಳ ನಯನ ಮತ್ತು ಅಧರಗಳ ಸಕಲ ಮಮತೆ--ಪ್ರೀತಿಗಳನ್ನು, ದರೋಡೆ ಖೋರರಂತೆ ಕಿತ್ತುಕೊಂಡು ಬಿಡುತ್ತದೆ." ಲಪಿತಾ ಉತ್ತರಿಸಿದಳು.

" ಜೀವನದ ನಿಯಮವೇ ಇದಲ್ಲವೆ ?"

" ನಿಜವಾಗಿಯೂ ಅನಿಯಮವಿದು."

" ನೀನು ಈ ಮೃತ್ಯವ ಕುಮಾರಿಯಲ್ಲವೇನು ?"

" ನಾನು ಇದೇ ಮರ್ತ್ಯದನಾರಿ. ಆದರೆ ಮರ್ತ್ಯದ ದೀನತೆ ಹೀನತೆ ಮತ್ತು ವೇದನೆಗಳನ್ನುಳಿದು ಚಿರಸಂಗ ಸುಖವನ್ನನುಭವಿಸುವ ರೀತಿಯನ್ನು ಬಲ್ಲೆ ನಾನು; ಆ ಜೀವನದ ಮಾರ್ಗವೂ ಗೊತ್ತು ನನಗೆ."

" ಎಂಥ ಜೀವನವದು ?"

" ನನ್ನ ಈ ಪುಷ್ಪದಾಮಸಜ್ಜಿತ ತೂಗುಮಂಚದಂತೆ ಸರ್ವದಾ ಉಲ್ಲಾಸದಿಂದ ಆಂದೋಳನ ಗೈಯುವ ಜೀವನ !— ಒಂದರ ಪಕ್ಕದಲ್ಲೊಂದು ಕೇವಲ ಎರಡೇ ಆಸನಗಳು,— ಕೇವಲ ಪ್ರಿಯೆ ಮತ್ತು ಪ್ರಿಯತಮರಿಗಾಗಿ ಎರಡೆ ಸ್ಥಳಗಳು; ಸರ್ವದಾ ಬಾಹುಬಂಧನದಲ್ಲಿ ವಿಲೀನವಾದ ಎರಡು ಜೀವಿಗಳು ! ಈ ಬಂಧನ ಯಾವ ಹೊತ್ತಿನಲ್ಲೂ ಛಿನ್ನವಾಗದು ! ಇಡಿ ಜೀವನದೆಲ್ಲೇ ಯಾವ ಶಿಶುವಿನ ಕಂಠಸ್ವರವನ್ನೂ ಕೇಳುವಂತಿಲ್ಲ !"

" ನಿನ್ನ ಪರಿಚಯವನ್ನು ತಿಳಿಯಬಯಸುವೆ ಕುಮಾರಿ" ಮುಂದಪಾಲ ನುಡಿದ.

" ನಾನು ಲಪಿತಾ, ಋಷಿಯ ತಪೋವನದ ನೆರೆಯಲ್ಲಿರುವೆ ನಾನು. ಆದರೆ ತಪೋವನದ ತರುಗಳ ಛಾಯೆ ಎಂದೂ ನನ್ನನ್ನು ಸ್ಪರ್ಶಿಸಿಲ್ಲ. ವಸಂತಕಾಲದ ಸಮೀರನಂತೆ ಈ ನಿಕುಂಜದ ತರುಲತೆಗಳ ನೆರೆಯಲ್ಲಿ ನನ್ನ ಜೀವನದ ಸ್ವಪ್ನವನ್ನು ನಿಮಗೆ ನಿವೇದಿಸುತ್ತಿರುವೆ."

ಒಮ್ಮೆಗೇ ಪ್ರಣಯಾಭಿಭೂತ ಸ್ವರದಲ್ಲಿ ಬೇಡಿಕೊಂಡಳು ಲಪಿತಾ: "ದಯೆಯಿಟ್ಟು ನನ್ನ ನಿಕುಂಜದ ಈ ಪುಷ್ಪದಾಮ ಸಜ್ಜಿತ ಆಂದೋಲನದಲ್ಲಿ ಚಿರಕಾಲದ ಪ್ರಿಯತಮನಾಗಿ ನನ್ನ ಜೊತೆಗೆ ಆಸೀನರಾಗಿರಿ ನೀವು ಋಷಿ !"

" ಕ್ಷಮಿಸು ಲಪಿತಾ !"

"ಮೋಸಗಾತಿಯಲ್ಲ ನಾನು. ಕುಹಕಿನಿಯಲ್ಲ ನಾನು, ಅಮರ್ತ್ಯ ಮಾನವಿಯೂ ನಾನಲ್ಲ ಋಷಿ. ನಿಮ್ಮ ಚಿರಪ್ರಿಯೆಯಾಗಾಗಿ ನನ್ನ ಜೀವನ ಮತ್ತು ಯೌವನಗಳ ಪ್ರತಿಚಣದ ಅಕಾಂಕ್ಷೆಯನ್ನೂ ನಿಮ್ಮ ಮಡಿಲಿಗೆ ಸಮರ್ಪಿಸ ಬಯಸುವೆ. ಜರಿತಾ ಅಲ್ಲ ನಾನು ಋಷಿ ! ಸಂತಾನದ ಕಲರವ ಮತ್ತು ಕ್ರಂದನಗಳ ಗದ್ದಲಗಳಿಂದ ಪ್ರತಿಧ್ವನಿಸುವ ಗೃಹಧರ್ಮ ನನ್ನದಲ್ಲ. ನಾನು ಕೇವಲ ಪ್ರಿಯತಮೆ; ಪ್ರಿಯತಮನ ಮಡಿಲಲ್ಲಿ ಚಿರಂತನವೂ ಒಂದಾಗಿರುವಂತಹ ಲಲನಾ."

" ನೀನು ಸುಂದರಿ; ಆದರೆ ನಿನ್ನ ಕಾಮನೆ ಸುಂದರವಾದುದ ಲಪಿತಾ !"

" ಅಪಮಾನ ಮಾಡದಿರಿ ಋಷಿ" ಲಪಿತಾಳ ಆರ್ತಸ್ವ ಬೇಡಿತು.

" ನಿಜವಾಗಿಯೂ ನೀನು ನಿಸ್ಮಯಕಾರಿಣಿ. ವಸಂತಕಾಲದ ಲತೆಯು ಪುಷ್ಪಾಸ್ಪಿತವಾಗಬಯಸದಿರುವುದನ್ನು ಕೇಳಿದ್ದು, ನನ್ನ ಜೀವನವಲ್ಲಿಯೇ ಇದು ಪ್ರಥಮ ಸಲ ಲಪಿತಾ !"

ನೂರನಲ್ಲಿ ಕಾನನಸಿಬಿಡ ಖಾಂಡವಪ್ರಸ್ಥದ ಹಸುರಿನ ಶೋಭೆಯತ್ತ ನಿಟ್ಟಿಸುತ್ತಲೇ ಇದ್ದ ಮುಂದಪಾಲ; ಅನಂತರ ನಿಕುಂಜದ ಅಂಚಿನ ವೃಕ್ಷರಾಶಿಯ ನೆರಳಿನಡಿಯಿಂದ ಸರಿದು ಹೊರಟ.

" ಋಷಿ !"

— ಕರೆಯನ್ನು ಕೇಳಿ ಮುಖವನ್ನು ಹಿಂತಿರುಗಿಸಿ ನೋಡಿದ ಮುಂದಪಾಲ. ನಿಕುಂಜಚಾರಿಣಿಯಾದ ಮಾಯಾಹರಿಣಿಯಂತೆ

ನಿಟ್ಟಿಸುತ್ತಲೇ ಇದ್ದಾಳೆ ಲಪಿತಾ; ಬಾಷ್ಪವೃಷ್ಟಿಯನ್ನು ಕರೆಯುತ್ತಿರುವ ಅವಳ ನೇತ್ರದ್ವಯದ ದೃಷ್ಟಿ, ಪ್ರಶಾಂತಮಯ ಮೃದುತ್ವವನ್ನು ವ್ಯಕ್ತ ಪಡಿಸುತ್ತಿದೆ.

ಲಪಿತಾ ಹೇಳಿದಳು:— "ಹೋಗಿರಿ ಋಷಿ, ಆದರೆ ಈ ನಿಕುಂಜದ ಏಕಾಂತದಲ್ಲಿರುವ ಈ ಪುಷ್ಪಾಲಂಕೃತ ತೂಗುಮಂಚದ ಒಂದು ಆಸನ ಶೂನ್ಯವಾಗಿದೆ, ಎಂದಾದರೂ ನೀವು ತಿರುಗಿ ಬಂದಾಗ ಕೂಡ ಈ ಆಸನ ಶೂನ್ಯವಾಗಿಯೇ ಇರುವುದನ್ನು ನೋಡುವಿರಿ. ಲಪಿತಾಳ ಜೀವನದಲ್ಲಿ ನಿಮ್ಮ ಹೊರತು ಇನ್ನಾರಿಗೂ ಸ್ಥಾನವಿಲ್ಲ!"

ನಿಬ್ಬೆರಗಾದ ಮಂದಪಾಲ. ವ್ಯಥೆಯಿಂದ ತುಂಬಿ ತುಳುಕುವ ನೇತ್ರಗಳಿಂದ ಲಪಿತಾಳ ಮುಖವನ್ನೆ ನೆಟ್ಟ ನೋಟದಿಂದ ನೋಡಿಯೇ ನೋಡಿದ. ಒಂದು ಕ್ಷಣದ ಮೋಹದ ತಪ್ಪನ್ನಾಡುತ್ತ, ಅಸ್ಥಿರ ಕಾಮದ ವಿಭ್ರಮೆಯಿಂದ ಎಂತಹ ಕಠೋರ ಪ್ರತಿಜ್ಞೆಯನ್ನು ಘೋಷಿಸಿದಳಲ್ಲ ಲಪಿತಾ; ಅವಳ ಹೂವಿನ ತೂಗುಮಂಚದ ಒಂದು ಆಸನ ಶೂನ್ಯವಾಗಿಯೇ ಇರುವುದು! ಇನ್ನೆಂದೂ ನುತ್ತೆ ತಿರುಗಿ ಬರುವುದಿಲ್ಲ ಇಲ್ಲಿಗೆ ಮಂದಪಾಲ! ಇದೇ ನಿಕುಂಜದ ಏಕಾಂತದಲ್ಲಿಯೇ ಚಿರಂತನ ಏಕಾಕಿನಿ ಲಪಿತಾ ತನ್ನದೇ ವ್ಯಥಿತ ಹಾಗೂ ವಿಷಣ್ಣದೇಹದ ನೆರಳನ್ನು ಈಕ್ಷಿಸುತ್ತಾ ಜೀವನಯಾಪನೆ ಮಾಡುವಳು! ತಪ್ಪುಮಾಡಿದಳು, ಭಯಂಕರ ತಪ್ಪುಮಾಡಿದಳು ಈ ಕಲ್ಪನಾಸುಖೀ ನಾರಿ!

ಮಂದಪಾಲ ಹೇಳಿದ:— "ಬೀಳ್ಕೊಡು ಲಪಿತಾ. ಪ್ರಾರ್ಥಿಸುವೆ— ನಿನ್ನ ತಪ್ಪು ಬೇಗ ಮಾಯವಾಗಲಿ!"

೨

ಕಾನನ ಭರಿತ ಖಾಂಡವ ಪ್ರಸ್ಥದ ಹಸುರು ಶೋಭೆಯ ಏಕಾಂತದ ಮಡಿಲಲ್ಲಿ ಶಾಂಗಿಕ ಕುಮಾರಿ ಜರಿತಾಳ ನಿರೀಕ್ಷಾಯೋಗ ಸಮಾಪ್ತವಾಗಿ ಬಿಟ್ಟಿದೆ. ಜರಿತಾಳ ಪಾಣಿಗ್ರಹಣ ಮಾಡಿಕೊಂಡಿದ್ದಾನೆ ಮಂದಪಾಲ. ಅವರಿಬ್ಬರ ಸಂಸಾರ ಜೀವನಜ್ಯೋತಿಯು ಕುಲು ಕುಲು ನಗುತ್ತಿದೆ. ಈ ನಗುವಿನಿಂದ ಮಧುರಗೊಂಡಿದೆ ಕುಟೀರದ ಪಕ್ಷ.

ಕಾಲಚಕ್ರದ ದ್ರುತಗತಿಯನ್ನನುಸರಿಸಿ ಉರುಳಿಹೋದುವು ಮಾಸ, ಋತು, ಸಂವತ್ಸರಗಳು— ಬೇಗ ಬೇಗ ಗ್ರೀಷ್ಮ ಬಂದಿತು, ವರ್ಷಾ ಬಂದಿತು, ಶಿಶಿರ ಮತ್ತು ವಸಂತ ಋತುಗಳೂ ಬಂದುವು. ಖಾಂಡವನದ ಲತಾಕುಂಜದಂತೆ ಮಂದಪಾಲ ಮತ್ತು ಜರಿತಾರ ಜೀವನಕುಂಜದಲ್ಲಿಯೂ ನೂತನ ಜೀವಿಯೊಂದರ ಆವಿರ್ಭಾವದ ಪೂರ್ವ ಸೂಚನೆಯು ಪುಷ್ಪವರಳತೊಡಗಿತು. ಗರ್ಭಾಧಾನ ಮಾಡಿದ ತನ್ನ ಸ್ವಾಮಿ ಮಂದಪಾಲನ ಮುಖವನ್ನು ಸ್ಮಿತನೇತ್ರಗಳಿಂದ ನೋಡಿ ಲಜ್ಜೆಗೊಂಡು, ನತಮುಖಿಯಾದಳು ಪತ್ನಿ ಜರಿತಾ.

ಶಿಶುಕಂಠದ ಕ್ರಂದನಸ್ವರದಿಂದ ಮಂದಪಾಲನ ಕುಟೀರ ಕಾತರಗೊಂಡಿತ್ತು; ವಿಹ್ವಲವಾಗಿತ್ತು.

ಮಂದಪಾಲ ನುಡಿದ:— "ನನ್ನ ಸ್ವಪ್ನವನ್ನು ಸಫಲಗೊಳಿಸಿದೆ ನೀನು ಜರಿತಾ. ಈ ಕುಟೀರದಲ್ಲಿಯು ಸಂಚಾರಿತ ವಾಯುವಿನೊಂದಿಗೆ ನೇಹವನ್ನು ಬೆರೆಸಿದೆ ನೀನು. ಕೆಸಲಯದೇಹದ ಶಿಶುವಿನ ಮಧುರ ಸ್ಪರ್ಶವನ್ನು ನನ್ನೆದೆಗೆ ತಂದು ತುಂಬಿದೆ ನೀನು!"

ಖಾಂಡವನದ ಏಕಾಂತದ ಕುಟೀರವೊಂದರ ಎಡೆಯಲ್ಲಿ ಜಾಗೃತವಾಗಿ ನಿಂತಿದೆ ಗೃಹದರ್ಮ. ದಂಪತಿಗಳಿರ್ವರ ಪರಿತೃಪ್ತ ಜೀವನದ ಆನಂದ ಅರಳಿನಿಂತಿದೆ. ಆ ಆನಂದದ ಹೆಸರೇ ಸಂತಾನ; ಪುರುಷನೊಬ್ಬನಿಗೆ ಪಿತೃತ್ವಲಾಭವಾಗಿದೆ, ಮಾತೃತ್ವ ಭೂಷಿತಳಾಗಿದ್ದಾಳೆ ಒರ್ವನಾರಿ. ದಂಪತಿಗಳ ಪ್ರೇಮಜೀವನವೇ ವಾತ್ಸಲ್ಯದಲ್ಲಿ ಮಿಂದು ವಿಕಸಿತದಲದ ನವಕುಸುಮದಂತೆ ಪ್ರಸ್ಫುಟವಾಗಿ ನಿಂತಿದೆ.

ವರ್ಷದ ಮೇಲೆ ವರ್ಷ ಉರುಳಿದುವು. ನಾಲ್ಕು ಮಕ್ಕಳ ತಾಯಿ ಜರಿತಾ, ಒಂದು ದಿನ ಮಂದಪಾಲನ ಮುಖದತ್ತ ದೃಷ್ಟಿಸಿ ನೋಡಿ ವಿಸ್ಮಿತಳಾದಳು:— "ಏನಿದು, ನೀನೇಕೆ ವಿಷಣ್ಣರಾಗಿದ್ದೀರಿ?"

ಮಂದಪಾಲ ಉತ್ತರಿಸಿದ:— "ಹೀಗೆ ನನ್ನನ್ನು ಕಾಣುತ್ತಿರುವುದು ಪ್ರಥಮ ಸಲವೇ ನೀನು?"

"ಹೌದು."

"ನನ್ನ ಅನುಮಾನ ಸತ್ಯವಾಯಿತು ಜರಿತಾ!"

"ಯಾರ ಬಗ್ಗೆ ಆ ಶಂಕೆ?" ವೇದನಾರ್ತಭಾವದಿಂದ ನೋಡಿದಳು ಜರಿತಾ.

"ನಿನ್ನ ಹತ್ತಿರನೇ ಇದ್ದರೂ ಕೂಡ ನಾನಿಂದು ಏಕಾಕಿ!"

"ಈ ಮಾತನ್ನೇಕೆ ನುಡಿಯುತ್ತಿರುವಿರಿ ಸ್ವಾಮೀ?"

"ಹೌದು ನಾನು ಏಕಾಕಿ; ನಿಃಸಂಗಿ. ನಾನಿಂದು ಈ ನಿನ್ನ ವಾತ್ಸಲ್ಯ ವಿಹ್ವಲ ಕುಟೀರದಲ್ಲಿ, ನಿನ್ನ ನಿರಂತರ ವ್ಯಾಕುಲತೆ ಕಾತರತೆಗಳ ನೆರೆಯಲ್ಲಿಯ ಒಂದು ಗೌಣವಾದ ಹಾಗೂ ಅಪ್ರಾಸಂಗಿಕವಾದ ಛಾಯೆ ಮಾತ್ರ."

ವ್ಯಥಿತ ಭಾವದಿಂದ ಜರಿತಾ ನುಡಿದಳು:— "ನಿಮ್ಮ ದುಃಖವನ್ನು ತಿಳಿದೆ ಸ್ವಾಮೀ— ಆದರೆ...."

"ಆದರೆ ಅದೇ ಅಂದಿನ ಹೃದಯ ನಿನಗಿನ್ನಿಲ್ಲವೆಂಬುದನ್ನು ತಿಳಿದುಕೊಂಡೆ ಕೂಡ?"

"ಯಾವ ಹೃದಯ?"

"ಪ್ರಿಯತಮೆಯ ಹೃದಯ! ನೀನಿಂದು ಕೇವಲ ಮಕ್ಕಳ ಮಾತೆ. ನಿನ್ನ ಸಂತಾನದ ಅಧರಹಾಸ ನಿನ್ನ ಚುಂಬನಗಳನ್ನೆಲ್ಲಾ ಲೂಟಿಮಾಡಿದೆ. ಆ ಸಂತಾನದ ಅಧರ ಸ್ಪಂದನವನ್ನು ನೋಡಿ ನೀನವರ ತೃಷ್ಣೆಯನ್ನು ತಿಳಿದುಕೊಳ್ಳಬಲ್ಲವಳಾದೆ. ಆದರೆ ನಿನ್ನದೇ ಅನುರಾಗದ ಆಹ್ವಾನಕ್ಕಾಗಿಯೇ ಬಹುದೂರದಿಂದ ಬಂದು, ಒಂದು ಶುಭದಿನ ನಿನ್ನ ಕಂಠಕ್ಕೆ ಲಗ್ನದ ಮಾಲ್ಯದಾನಗೆಯ್ದು ಈ ಪ್ರೇಮಿಯನ್ನು ನೀನು ಮರೆತುಬಿಟ್ಟಿರುವೆ. ಈಗ ಕೂಡ ಅವನು ನಿನ್ನ ಹತ್ತಿರನೇ ಇದ್ದಾನೆ, ಅವನ ಹೃದಯದಲ್ಲಿ ಇಂದಿಗೂ ಪ್ರೇಮ ಪಿಪಾಸೆ ಇದೆ—ಎಂಬುದನ್ನು ಮರೆತುಬಿಟ್ಟಿರುವೆ ನೀನು. ಇಂದಿಗೂ ಆ ಪ್ರೇಮ ಹೃದಯ ಹರ್ಷೋತ್ಸವದ ಅನ್ವೇಷಣೆಯಲ್ಲಿಯೇ ಇದೆ–ಎಂಬುದು ನಿನ್ನ ಜ್ಞಾಪಕವಲ್ಲಿಲ್ಲ....

ಆದರೆ.... ವ್ಯರ್ಥವಾಗಿ ಈ ಕಾನನ ಭೂಮಿಗು ಏಕಾಂತದಲ್ಲಿ ಚಂದ್ರ-ಕಿರಣಗಳು ಚೆಲ್ಲಿಬಿದ್ದು ಹೊರಳಾಡುತ್ತಿವೆ. ವ್ಯರ್ಥವಾಗಿ ವಾಸಂತೀ ಕುಸುಮ ಅರಳಿನಿಂತಿದೆ. ವ್ಯರ್ಥವಾಗಿ ನೀರವವಾಗಿದೆ ಇರುಳಿನ ಮಧ್ಯ ಪ್ರಹರ. ಇನ್ನು ಪ್ರೇಮೀ ಮಂದಪಾಲ ತನ್ನ ಪ್ರಿಯತಮೆಯನ್ನು ಹುಡುಕಲಾರ.''

ಅಶ್ರುಸಿಕ್ತ ನಯನೆಯಾಗಿ ಜರಿತಾ ನುಡಿದಳು:— 'ನನ್ನ ತಪ್ಪನ್ನು ಕ್ಷಮಿಸು ಸ್ವಾಮೀ !'

ಮರುಕ್ಷಣದಲ್ಲಿಯೇ ಸುಸ್ಮಿತ ನೇತ್ರಗಳಿಂದ ಮಂದಪಾಲನ ಮುಖದತ್ತ ನೋಡುತ್ತಾ, ಮಧುರ ಪ್ರತಿಶ್ರುತಿಯಂತೆ ಮಂಜುಳ ದನಿಯಲ್ಲಿ ಜರಿತಾ ನುಡಿದಳು:— ''ಇನ್ನೆಂದೂ ಮತ್ತೆ ಈ ತಪ್ಪಾಗ-ಲಾರದು. ಹಿಂದೊಮ್ಮೆ ಯಾವ ಕುಸುಮಮಾಲೆಯನ್ನಿತ್ತು ನಿಮ್ಮನ್ನು ನನ್ನ ಜೀವನದಲ್ಲಿ ಪ್ರಥಮಸಲ ಆಹ್ವಾನಿಸಿ ಸ್ವೀಕರಿಸಿದ್ದೆನೋ, ಅದೇ ವಾಸಂತೀ ಕುಸುಮಮಾಲೆಯನ್ನೇ ಇಂದು ಈ ರಾತ್ರಿಯಲ್ಲಿ ನಿಮ್ಮ ಕಂಠಕ್ಕೆ ಇನ್ನೊಮ್ಮೆ ಅರ್ಪಿಸಲು, ನಿಮ್ಮವಳೇ ಆದ ಈ ಜರಿತಾಳಿಗೆ ಅನುಗೊಡಿ. ಈಗಲೂ ನಿಮ್ಮ ವಾಮಬಾಹು ನಿಮ್ಮ ಪ್ರಿಯತಮೆ ಜರಿತಾಳಿಗೆ ತಲೆದಿಂಬಾಗಿರುವುದು !"

ಆದರೆ ತಪ್ಪಾಗಿತ್ತು ಜರಿತಾಳಿಂದ!

ಎದೆಯ ಪಕ್ಕದಲ್ಲಿ ಮಲಗಿದ್ದ ಶಿಶುವಿನ ಕ್ರಂದನದಿಂದಾಗಿ, ನಿದ್ರಾ-ಮಗ್ನ ಜರಿತಾಳ ಸ್ವಪ್ನ ಭಂಗವಾದಾಗ, ಖಾಂಡವ ವನದಲ್ಲಿ ಪ್ರಾತಃ-ಕಾಲದ ಸಮೀರ ಜಾಗೃತ ಕೋಕಿಲಗಾನದಿಂದ ಮಾರ್ದನಿಗೊಡು-ತಿತ್ತು. ತನ್ನ ವಾಸಂತೀ ಕುಸುಮಮಾಲೆಯು ಯಾವುದೋ ವ್ಯರ್ಥ ನಿರೀಕ್ಷೆಯ ವೇದನೆಯಿಂದ ವಿಷಣ್ಣನಾಗಿ ತಲೆದಿಂಬಿನ ಹತ್ತಿರವೇ ಬಿದ್ದಿದ್ದುದನ್ನು ಅವಳು ಕಂಡಳು.

ಆ ನ್ಯರ್ಥ – ಪುಷ್ಪಮಾಲೆಯನ್ನೆತ್ತಿಕೊಂಡು ಜರಿತಾ ಓಡಿದಳು. ಕುಟೀರದ ನಾಲ್ಕೂ ದಿಕ್ಕು ಹುಡಕತೊಡಗಿದಳು. ಮಂದಪಾಲನಿಲ್ಲ. ಜರಿತಾಳ ಪ್ರಿಯತಮ ಮಂದಪಾಲ, ಜರಿತಾಳ ಸ್ವಾಮಿ ಮಂದಪಾಲ, ಜರಿತಾಳ ಸಂತಾನವ ತಂದೆ ಮಂದಪಾಲ— ಹೊರಟು ಹೋಗಿದ್ದ.

''ಸ್ವಾಮೀ !"

ವ್ಯರ್ಥವಾಗಿ ಆರ್ತನಾದ ಮಾಡಿದಳು ಜರಿತಾ. ಖಾಂಡವ ವನದಲ್ಲಿ ನರ್ತಿಸುತ್ತಿದ್ದ ಪ್ರಾತಃಕಾಲವು ಅವಳ ಈ ವ್ಯಾಕುಲತುಂಬಿದ ಕರೆಗೆ ಯಾವ ಉತ್ತರವನ್ನೂ ಕೊಡಲಿಲ್ಲ.

೩

ಭ್ರಮರ ಗುಂಜನದ ಗದ್ದಲದಿಂದ ಸುತ್ತುಗಟ್ಟಿದ ಪುನ್ನಾಗ-ತರುವಿನ ಛಾಯೆಯಲ್ಲಿ, ಮನೋಹರ ಕಂಠದ ಆಹ್ವಾನಪೂರ್ಣ ಧ್ವನಿ ಕೇಳಿಸಿತು:— 'ನಾನು ಬಂದಿದ್ದೇನೆ ಲಪಿತಾ !'

'ಬಾ, ನೋಡು ನನ್ನ ಹೂವಿನ ತೂಗುಮಂಚದ ಒಂದು ಆಸನ, ಇಂದಿಗೂ ಕೂಡ ಶೂನ್ಯವಾಗಿಯೇ ಉಳಿದಿಲ್ಲವೆ ?' ಲಪಿತಾ ಹೇಳಿದಳು.

'ನೋಡಿದೆ ಲಪಿತಾ! ನನ್ನ ಸಕಲ ಕಠೋರತನವನ್ನೂ ಕ್ಷಮಿಸಿ, ಇಂದು ನಿನ್ನ ಜೀವನದ ಜೊತೆಗಾರನಾಗಿರಲು ಬಂದ ನನ್ನನ್ನು ಪರಿ-ಗ್ರಹಿಸು ಲಪಿತಾ ! ನಿನ್ನ ಹೂಮಂಚದ ಆ ಆಸನವೇ ಸ್ವಪ್ನದಲ್ಲಿ ಬಂದು ನನ್ನನ್ನು ಕರೆದು ತಂದಿದೆ ಇಲ್ಲಿಗೆ. ಮರಿಯಲಾರದಾದೆ ನಿನ್ನನ್ನು. ತಿಳಿದೆ ನಾನು – ನೀನೆ ಪ್ರಿಯತಮೆ; ಸತ್ಯವಾದದ್ದು ನಿನ್ನ ಪ್ರೇಮ !'

ಲಪಿತಾಳ ಪಾಣಿಗ್ರಹಣ ಮಾಡಿದ ಮಂದಪಾಲ. ಅವಳು ನುಡಿದಳು:— ಬಾ, ವಿರಹವಿಹೀನವಾದ, ಚಿರಮಿಲನದ ಮಧುರ ಜೀವನದ ನಾಯಕನಾಗಿ ಆಗಮಿಸು ನನ್ನ ಬಾಳ ಮಂಟಪಕ್ಕೆ!

ಉಯ್ಯಾಲಾಡಿತು;— ನಿಕುಂಜದ ಏಕಾಂತದಲ್ಲಿಯ ಪುಷ್ಪ ಸಜ್ಜಿತ ಉಯ್ಯಾಲೆಯ ಎರಡು ಪ್ರೇಮಕಾತರ ಜೀವಿಗಳ ಪ್ರತೀಕ್ಷಾ-ಹೀನ ಆಕಾಂಕ್ಷೆ ಉಯ್ಯಾಲಾಡಿತು. ಮಂದಪಾಲ ಮತ್ತು ಲಪಿತಾ ಚಿರಕಾಲದ ಪ್ರಿಯತಮ ಮತ್ತು ಚಿರಕಾಲದ ಪ್ರಿಯತಮೆ. ಅವರ ಜೀವನ ಯಾವ ಸಾಂಸಾರಿಕ ಕುಟೀರವನ್ನೂ ಬಯಸದು. ಅವರ ಮಡಿಲು ಮತ್ತು ಎದೆಗಳು ಯಾವ ಶಿಶುದೇಹದ ಸ್ಪರ್ಶವನ್ನೂ ಅಪೇ-ಕ್ಷಿಸವು. ಮಂದಪಾಲ ಕೇವಲ ಲಪಿತಾಳಿಗಾಗಿ; ಲಪಿತಾ ಕೇವಲ ಮಂದ-ಪಾಲನಿಗಾಗಿ. ಮತ್ತೆ ಇನ್ನಾರಿಗಾಗಿಯೂ ಅವರಿಲ್ಲ.

ಕಾಲಚಕ್ರದಲ್ಲಿ ಮಾಸ, ಋತು ಮತ್ತು ಸಂವತ್ಸರಗಳು ಉರುಳಿ ಹೋದುವು. ಬಂದಿತು ಗ್ರೀಷ್ಮ, ಬಂದಿತು ವರ್ಷಾಋತು, ಶಿಶಿರ ಹಾಗೂ ವಸಂತ ಋತುಗಳೂ ಆಗಮಿಸಿದುವು.

ನಿಕುಂಜದ ಹೂವಿನ ತೂಗುಮಂಚದ ಆಸನದಲ್ಲಿ ಮಂದಪಾಲ ಕುಳಿತಿದ್ದ. ದೂರದಲ್ಲಿ ಕಾನನಭರಿತ ಖಾಂಡವಪ್ರಸ್ಥದ ಹಸಿರು ಶೋಭೆ, ತರಂಗ ತರಂಗವಾಗಿ ಎದ್ದಿರುವುದು ಅವನ ಕಣ್ಣಿಗೆ ಕಾಣು-ತ್ತಿತ್ತು. ಆದರೆ ಅದು ಕಂಡರೂ, ಆ ಹಸುರು ಶೋಭೆಯ ಏಕಾಂತದಲ್ಲಿ ಸುಂಜುನುಟ್ಟಿದ ಯಾವ ಅಶ್ರುಪೂರ್ಣ ಕುಟೀರದ ಕಥೆಯೂ ಅವನ ನೆನಪಿಗೆ ಬರಲಿಲ್ಲ. ಖಾಂಡವ ಕಾನನದ ಒಂದು ಪ್ರೇಮಹೀನ ಮತ್ತು ಆನಂದಹೀನ ಶುಷ್ಕ ಪತ್ರದ ರಾಶಿಯ ಮೋಸದ ಗೂಡಿನಿಂದ ಮುಕ್ತ-ನಾಗಿ ತಾನು ಹೊರಟು ಬಂದದ್ದು ಮಾತ್ರ ಮೆಲ್ಲ ಮೆಲ್ಲನೆ ಮಂದಪಾಲನ ಪ್ಲಾಪಕಕ್ಕೆ ಬರಹತ್ತಿತು.

ಸುಖಿಯಾಗಿದ್ದಳು ಲಪಿತಾ. ಪ್ರತಿದಿನವೂ ಪ್ರಶ್ನಿಸುತಿದ್ದಳು— 'ನೀವು ಸುಖಿಯಾಗಿದ್ದೀರಲ್ಲವೇ ಋಷಿ ?'

'ಸುಖಿಯಾಗಿದ್ದೇನೆ ಲಪಿತಾ !' ಮಂದಪಾಲ ನುಡಿಯುತ್ತಿದ್ದ.

ಆದರೆ ಅಕಸ್ಮಾತ್ ಒಂದು ದಿನ ಪ್ರಶ್ನಿಸಿದರೂ ಉತ್ತರ ಬರಲಿಲ್ಲ. ವಿಸ್ಮಿತಳಾಗಿ ಮಂದಪಾಲನ ಮುಖದತ್ತ ನಿಟ್ಟಿಸಿ ನೋಡಿದಳು ಲಪಿತಾ. ಹಸುರು ಚಿಮ್ಮುವ ಖಾಂಡವಕಾನನದ ದಿಕ್ಕಿನತ್ತ ಎನೆಯಿಕ್ಕದೆ ಕಣ್ಣಿಟ್ಟು ಮಂದಪಾಲ ಈಕ್ಷಿಸುತ್ತಲಿರುವುದನ್ನು ಕಂಡಳು.

'ಏನನ್ನು ನೋಡುತ್ತಿದ್ದೀರಿ ಸ್ವಾಮಿ ?' ಲಪಿತಾ ಕೇಳಿದಳು. ಒಮ್ಮೆಗೆ ಆರ್ತಧ್ವನಿಯಲ್ಲಿ ನುಡಿದ ಮಂದಪಾಲ:— 'ರಕ್ಷಿಸು !' ಈ ತೂಗುಮಂಚದಿಂದ ಕೆಳಗಿಳಿಸು,' ವ್ಯಥಿತ ಸ್ವರದಲ್ಲಿ ಅವನು ಮತ್ತೆ ಯೇಳಿದ:— 'ಅಲ್ಲೋ ನೋಡು ಲಪಿತಾ, ಅಗ್ನಿಜ್ವಾಲೆಯು ಬಿರುಗಾಳಿ

ಖಾಂಡವ ವನದತ್ತ ಧಾವಿಸುತ್ತಿದೆ.... ಅದೋ ನೋಡು, ಖಾಂಡವ-ದಹನಕ್ಕಾಗಿ ಹೊರಟಿದ್ದಾನೆ ಭಗವಾನ್ ಹುತಾಶನ !'

— ಆದರೆ 'ಅದಕ್ಕಾಗಿ ನೀವೇಕೆ ಇಷ್ಟು ವಿಚಲಿತರಾದಿರಿ ಸ್ವಾಮಿ ?'

'ಅದೇ ಖಾಂಡವಕಾನನದ ಏಕಾಂತದ ಕುಟೀರದಲ್ಲಿ ನನ್ನ ಪ್ರಾಣ ಪುಷ್ಪಿತ ಆನಂದದ ನಾಲ್ಕು ಮೂರ್ತಿಗಳಿವೆ; ನಾಲ್ಕು ಶಿಶುಗಳಿವೆ, ಲಪಿತಾ !'

ಕಂಪಿಸುತ್ತಾ ಲಪಿತಾ ನುಡಿದಳು— 'ಬಲ್ಲೆ ಋಷಿ.'

'ಏನನ್ನು ?'

'ನೀವು ಸಂತಾನದ ತಂದೆ. ನಿಮ್ಮ ಹೃದಯದ ಆಳದಲ್ಲಿ ಪಿತೃತ್ವದ ಪ್ರಾಣವೊಂದು ಅಡಗಿ ಕುಳಿತಿದೆ. ಆದರೆ ಅದಕ್ಕಾಗಿ ದುಃಖಿಸುತ್ತಿಲ್ಲ ನಾನು, ಋಷಿ ನನ್ನ ಸಂದೇಹ....' ಮುಂದಪಾಲ ಚೀತ್ಕಾರ ಭಾವದಲ್ಲಿ ನುಡಿದ— 'ಸಂದೇಹವನ್ನು ದೂರಮಾಡು ಲಪಿತಾ ! ನಡೆ, ನನ್ನ ನಾಲ್ಕು ಶಿಶುಪುತ್ರರ ಪ್ರಾಣ ರಕ್ಷಣೆಮಾಡಲು ಹುತಾಶನನಲ್ಲಿಗೆ ಹೋಗಿ ಪ್ರಾರ್ಥಿಸುವ!'

ಈ ಮಾತನ್ನು ಕೇಳಿ ಲಪಿತಾ ಪ್ರಸನ್ನಳಾಗದಿದ್ದರೂ, ಒಂದು ದುಃಸಹ ಪೀಡನದಿಂದ ಮುಕ್ತಳಾದಂತೆನಿಸಿ ನಿಶ್ಚಿಂತಳಾದಳು. ಕೇವಲ ತನ್ನ ನಾಲ್ಕು ಜನ ಶಿಶುಪುತ್ರರ ಪ್ರಾಣಕ್ಕಾಗಿ ಮಾತ್ರವೇ ತಂದೆ ಮುಂದಪಾಲನ ಜೀವ ಅಳತೊಡಗಿತ್ತು. ಅದರೂ ಒಳ್ಳೆಯದೇ ! ಮತ್ತಿನ್ನಾರಿಗಾಗಿಯೂ ಅವನು ಅಳುತ್ತಲಿಲ್ಲವಲ್ಲ !

ನಿಕುಂಜದ ಏಕಾಂತದಿಂದ ಮುನ್ನಡೆದು ದೀರ್ಘವಾದ ದಾರಿಯನ್ನು ಕ್ರಮಿಸಿ, ಭಗವಾನ್ ಹುತಾಶನನ ಹತ್ತಿರ ಬಂದು, ಮುಂದಪಾಲ ಮತ್ತು ಲಪಿತಾರು ನಿಂತರು. ಮುಂದಪಾಲ ಪ್ರಾರ್ಥಿಸಿದ:— 'ಖಾಂಡವ ದಹನಾಭಿಲಾಷಿಯಾದ ಭಗವಂತ, ಓ ಪಿಂಗಳಾಕ್ಷ, ಲೋಹಿತಗ್ರೀವಹುತಾಶನ, ಮುಂದಪಾಲನ ಕುಟೀರವು ನಿನ್ನ ಜ್ವಾಲೆಯಲ್ಲಿ ಭಸ್ಮೀಭೂತವಾಗದಿರಲಿ !'

"ಏಕೆ ? ಯಾರಿದ್ದಾರೆ ನಿನ್ನ ಕುಟೀರದಲ್ಲಿ ?" ಹುತಾಶನ ಪ್ರಶ್ನಿಸಿದ.

'ನನ್ನ ಪತ್ನಿ ಜರಿತಾ ಮತ್ತು ನನ್ನ ನಾಲ್ಕು ಜನ ಶಿಶುಪುತ್ರರು!' ಮುಂದಪಾಲ ಉತ್ತರಿಸಿದ.

'ಚಿಂತಿಸದಿರು ಋಷಿ. ಅಗ್ನಿಯು ಯಾವ ಜ್ವಾಲೆಯೂ ನಿನ್ನ ಕುಟೀರವನ್ನು ಸ್ಪರ್ಶಿಸಲಾರದು' ಹುತಾಶನ ಆಶ್ವಾಸನವನ್ನು ದಾನಗೈದ.

ಸಮಾಧಾನಗೊಂಡು ಮರಳಿ ಬಂದ ಮುಂದಪಾಲ.

ಮತ್ತೆ ಅದೇ ನಿಕುಂಜದ ಏಕಾಂತದಲ್ಲಿಯು ಅದೇ ಹೂವಿನ ತೂಗುಮಂಚ.

ಲಪಿತಾ ಕ್ಷೋಭ-ಕಠೋರ ಕಂಠದಲ್ಲಿ ನುಡಿದಳು:— 'ನನ್ನ ಸಂದೇಹ ಸುಳ್ಳಲ್ಲ ಋಷಿ. ನೀವೇ ಸಪ್ರಮಾಣವಾಗಿ ತೋರಿಕೊಟ್ಟಿರಿ. ಇದನ್ನು. ನನ್ನ ಸಂದೇಹ ಸತ್ಯವಾಗಿದ್ದು!'

'ಯಾರ ಬಗ್ಗೆ ಸಂದೇಹ ?'

'ನಿಮ್ಮ ಮೊದಲಿನ ಸಂಪತ್ತಾದ ಜರಿತಾ, ಈಗಲೂ ನಿಮ್ಮ ಸ್ವಪ್ನದಲ್ಲಿ ಅಡಗಿ ಕುಳಿತಿದ್ದಾಳೆ ಋಷಿ !'

'ಹೇಗೆ ತಿಳಿದೆ ನೀನು ?'

'ನೀವು ಕೇವಲ ನಾಲ್ಕು ಮುಂದಿ ಪುತ್ರರ ಪ್ರಾಣರಕ್ಷಣೆಗಾಗಿ ಮಾತ್ರವೇ ಅಲ್ಲ; ನಿಮ್ಮ ಪ್ರಥಮ ಪ್ರಣಯಿನಿ ಜರಿತಾಳ ಪ್ರಾಣರಕ್ಷಣೆಗಾಗಿಯೂ ಹುತಾಶನರಲ್ಲಿ ಪ್ರಾರ್ಥನೆ ಮಾಡಿಕೊಳ್ಳಲು ಮರೆಯಲಿಲ್ಲ!'

'ಈ ಜಗತ್ತಿನಲ್ಲಿಯ ನಾಲ್ಕು ಶಿಶುಗಳ ತಾಯಿಯೊರ್ವಳು, ಅಪರಾಧಿನಿಯಲ್ಲದಿದ್ದರೂ ಅಗ್ನಿಜ್ವಾಲೆಯಲ್ಲಿ ಭಸ್ಮೀಭೂತಳಾದರೆ, ನಿನಗೆ ನಿಜವಾಗಿಯೂ ಸಂತೋಷವಾಗುವುದೇ ?'

'ಇಲ್ಲ. ಋಷಿ, ಜರಿತಾಳ್ಕಂತೆಯೇ ನನ್ನ ಪ್ರಿಯತಮ ಮುಂದಪಾಲನು ನನ್ನ ಮೇಲಿರುವ ಮನೋರಾಗದ ಕೊನೆಯ ಸ್ಮೃತಿಕೂಡ ಭಸ್ಮವಾಗಿದೆಯೆಂದು, ನನ್ನ ಪ್ರೇಮಜೀವನದ ಸಮಸ್ತ ಬಯಕೆಗಳ ಬಾಧೆ ನನಗೆ ಹೇಳುತ್ತಿದೆ.'

ಉತ್ತರಿಸಲಿಲ್ಲ ಮುಂದಪಾಲ. ವಿಪುಲವಾದ ಅಗ್ನಿಜ್ವಾಲೆ ಯಾಗೂ ಹೊಗೆಯಿಂದ ಪರಿವೃತವಾದ ಖಾಂಡವಕಾನನದತ್ತ ಮತ್ತೆ ನಿಟ್ಟಿಸ ತೊಡಗಿದ ಅವನು.

'ಸ್ವಾಮೀ' ಲಪಿತಾ ಕರೆದಳು.

ಮುಂದಪಾಲ ಮೃಧುಸ್ಮಿತನಾಗಿ ಉತ್ತರವಿತ್ತ:— 'ಸಂದೇಹಿಸ ಬೇಡ ಲಪಿತಾ' ಮುಂದಹಾಸದಿಂದ ಅಧರ ದ್ವಯಗಳನ್ನು ನಡುಗಿಸುತ್ತ ಲಪಿತಾ ಹೇಳಿದಳು:— 'ಸಂದೇಹಿಸುವ ಇಚ್ಛೆಯಿಲ್ಲ ಸ್ವಾಮಿ.'

ನಿಕುಂಜದ ಏಕಾಂತದಲ್ಲಿಯು ಹೂವಿನ ತೂಗುಮಂಚ ಮತ್ತೆ ತೂಗಾಡ ತೊಡಗಿತು. ಅವಿರತವಾದ ದೃಢಪ್ರೇಮದ ಪರಸ್ಪರ ಬಾಹು ಬಂಧಿತ ಎರಡು ಜೀವಿಗಳ ಉಲ್ಲಾಸ, ಮತ್ತೆ ಉಯ್ಯಲೆಯಾಟ ತೊಡಗಿತು.

ಆದರೆ ಮರುಕ್ಷಣವೇ ಯಾವುದೋ ತಡೆಯಲಾಗದ ಆಲಸ್ಯದಿಂದ ಶಿಥಿಲಗೊಂಡು ಸಡಲಿ ಬಿದ್ದುವು— ಮುಂದಪಾಲನ ಅನ್ಯಮನಸ್ಕ ಬಾಹುದ್ವಯಗಳು. ಯಾವುದೋ ದುಸ್ಸಹ ಕ್ಲೇಶದ ವೇದನೆಯೊಂದು ಇಷ್ಟು ದಿನಗಳನಂತರ ಬಂದು ಈ ನಿರಂತರ ಚಲಿತ ತೂಗುಮಂಚದ ಜೀವನವನ್ನು ಕಳುಳಿಸುತ್ತಲಿತ್ತು.

ಲಪಿತಾ ವಿಸ್ಮಯ ಹಾಗೂ ವ್ಯಥಿತ ಸ್ವರದಲ್ಲಿ ಪ್ರಶ್ನಿಸಿದಳು: 'ಏನಿದು ? ಅನ್ಯ ಮನಸ್ಕರಾದಿರೇಕೆ ನೀವು ಸ್ವಾಮಿ ?'

'ಕಾತರತೆಯಿಂದ ಮುಕ್ತನಾಗಲಾರದವನಾಗಿದ್ದೇನೆ ಲಪಿತಾ !' ಮುಂದಪಾಲ ನುಡಿದ.

'ಯಾರಿಗಾಗಿ ಕಾತರತೆ ?'

'ತಿಳಿಯ ಬಯಸುವೆಯಾ ? ನನ್ನ ಕುಟೀರದ ಜೀವ ನಿಜವಾಗಿಯೂ ಸುರಕ್ಷಿತವಾಗಿದೆಯಲ್ಲವೆ ?'

'ಭಗವಾನ್ ಹುತಾಶನರಿಂದ ಆಶ್ವಾಸನ ಪಡೆದು ಕೂಡಾ ವೃಥಾ ದುಶ್ಚಿಂತೆ ಮಾಡುತ್ತಿರುವುದೇಕೆ ಸ್ವಾಮಿ !'

'ಆಶ್ವಾಸನ ಪಡೆದಿದ್ದರೂ ಸಮಾಧಾನವಾಗುತ್ತಲಿಲ್ಲ ಲಪಿತಾ. ಖಾಂಡವವನಕ್ಕೆ ಹೋಗಬಯಸುವೆ. ನನ್ನ ಕಣ್ಣುಗಳಿಂದಲೇ ನೋಡುವವರೆಗೆ ನಿಶ್ಚಿಂತನಾಗಲಾರೆ ಲಪಿತಾ.'

ಕಾಳ್ಗಿಚ್ಚಿನ ಕಿಡಿಗಳಂತೆ ಲಪಿತಾಳ ಕಣ್ಣಾಲಿಗಳು ಜ್ವಲಿಸಿದುವು. 'ಸತ್ಯವನ್ನು ಹೇಳು ಸತ್ಯಸಂಧ ಋಷಿ, ಯಾರ ಮುಖನೋಡುವುದಕ್ಕಾಗಿ ವ್ಯಾಕುಲಗೊಂಡಿದೆ ನಿಮ್ಮ ಮನಸ್ಸು ?'

'ಪುತ್ರರನ್ನು ನೋಡಲಿಕ್ಕಾಗಿ !'

'ಮತ್ತಾರಿಗಾಗಿಯೂ ಅಲ್ಲವೆ ?'

'ಅಲ್ಲ.'

'ಹಾಗಾದರೆ ಹೋಗಿರಿ. ಆದರೆ ಭಾಷೆಕೊಟ್ಟು ಹೋಗಿರಿ. ನಿಮ್ಮ ಲಪಿತಾಳಲ್ಲಿಗೆ ಮತ್ತೆ ತಿರುಗಿ ಬರಬೇಕು !'

'ಬರುವೆ.'

'ಮರೆಯದಿರಿ, ಇಂದಿಗೆ ಒಂದು ವರ್ಷದ ಪೂರ್ವದಲ್ಲಿ, ಶುಕ್ಲ ಪಕ್ಷದ ಚತುರ್ದಶಿಯ ಒಂದು ಸಂಜೆ, ನಿಮ್ಮ ಕಂಠಕ್ಕೆ ಪುನ್ನಾಗ ಪುಷ್ಪಮಾಲೆಯನ್ನು ದಾನಮಾಡಿದ್ದಳು ಇದೇ ಲಪಿತಾ.'

'ಮರೆಯಲಾರೆ !'

'ಹೇಳಿಹೋಗಿರಿ,— ಅದೇ ರೀತಿ ಇಂದೇ ಸಾಯಂಕಾಲ ಪ್ರಣಯ ಕಾಮನಾವಾಸಿತ ಪುನ್ನಾಗ ಪುಷ್ಪಮಾಲೆಯನ್ನು ನಿಮ್ಮ ಕಂಠಕ್ಕೆ ಹಾಕಿಸಿಕೊಳ್ಳಬೇಕು ನನ್ನ ಕೈಯಿಂದ ನೀವು !'

'ಪ್ರಿಯೆ ಲಪಿತಾ ! ಇಂದೇ ಸಂಜೆಗೆ ನಿನ್ನಲ್ಲಿಗೆ ಬಂದು ನಿನ್ನ ಉಡುಗೊರೆಯನ್ನು ಸ್ವೀಕರಿಸುತ್ತಾನೆ— ನಿನ್ನ ಪ್ರಿಯಸ್ವಾಮಿ ಮುಂದಪಾಲ.'

'ಒಂದು ಪಕ್ಷ ಬರಲಾಗದಿದ್ದರೆ ?'

'ಏಕೆ ಬರಲಾಗುವುದಿಲ್ಲ ಲಪಿತಾ ?'

'ಒಂದು ಪಕ್ಷ ಬರದಿದ್ದರೆ ? ಆಗ ನೆನಪಿಡಿ ಸ್ವಾಮಿ, ಈ ಮಾಲೆಯನ್ನೇ ನಾಲ್ಕು ತಂಡವಾಗಿ ಹರಿದು ಅಗ್ನಿಕುಂಡಕ್ಕೆಸೆದುಬಿಡುವೆ.'

ಭಯದಿಂದ ನಡುಗಿದ ಮುಂದಪಾಲ. ಶರಾಘಾತ ಹರಿಣದಂತೆ ವ್ಯಥಿತ ನೇತ್ರಗಳಿಂದ ಲಪಿತಾಳನ್ನು ನೋಡತೊಡಗಿದ.

ಅವಳು ಹೇಳಿದಳು:— 'ನಿಮ್ಮ ನಾಲ್ವರು ಪುತ್ರರ ಜೀವನದ ಬಗ್ಗೆ ನಿಮಗೇನಾದರೂ ಮಮತೆಯಿದ್ದರೆ, ಲಪಿತಾಳ ಅಭಿಶಾಪದಿಂದ ನಿಮ್ಮ ನಾಲ್ವರೂ ಪುತ್ರರ ಜೀವರಕ್ಷಣೆ ಮಾಡಬಯಸುತ್ತಿದ್ದರೆ, ಲಪಿತಾಳ ಪ್ರೇಮಕ್ಕೆ ಅಪಮಾನ ಮಾಡದಿರಿ ಋಷಿ !'

ನೀರವವಾಗಿ ತೀಕ್ಷ್ಣದೃಷ್ಟಿಯಿಂದ ಲಪಿತಾಳ ಮುಖವನ್ನು ನೋಡುತ್ತಲೇ ಇದ್ದ ಮುಂದಪಾಲ. ವಿಷಲತೆಯ ಹೃದಯದಲ್ಲಿಯೂ ಮಾಯಾಮಯ ವಾತ್ಸಲ್ಯ ಭಾವನೆ ಇರುತ್ತದೆ. ಅಂಗಾಂಗಗಳಲ್ಲೆಲ್ಲಾ ಪುಷ್ಪಗಳನ್ನರಳಿಸಿಕೊಂಡು ತೃಪ್ತವಾಗಿರುತ್ತದೆ— ಆ ವಿಷಲತೆ ಕೂಡ. ಆದರೆ ಇವಳಿಂತಹ— ಸೃಷ್ಟಿಗೆ ವಿರುದ್ಧಳಾದ ಪಿಯೂಷವಿಹೀನ ಕಾಮಿನಿ ? ನಿಜವಾಗಿಯೂ ರಕ್ತಪಿಪಾಸೂ ನಾರಿ ಇವಳು !'

ಯಾವ ಮಾತನ್ನೂ ಆಡದೆ ವ್ಯಾಕುಲದ ಹೆಜ್ಜೆಹಾಕುತ್ತ ಹೊರಟು ಹೋದ ಮುಂದಪಾಲ.

೪

ಖಾಂಡವ ವನದ ಏಕಾಂತದ ಮಡಿಲಲ್ಲಿಯ ಆದೇ ಕುಟೀರ ಹಾಗೇ ಇದೆ. ಅಗ್ನಿಜ್ವಾಲೆಯ ಸ್ಪರ್ಶವಾಗಿಲ್ಲ ಅದಕ್ಕೆ. ಮೆಲ್ಲ ಮೆಲ್ಲಗೆ ಮುಂದೆ ಸರಿಯುತ್ತ ಕುಟೀರದ ಅಂಗಣದಲ್ಲಿ ಬಂದು ನಿಂತ ಮುಂದಪಾಲ.

ಜರಿತಾ ಬಂದು ಅವನ ಸಮ್ಮುಖದಲ್ಲಿ ನಿಂತಳು. ಯಾವ ಮಾತನ್ನೂ ಆಡಲಿಲ್ಲ. ಕೇವಲ ಪ್ರಣಾಮು ಮಾಡಿದಳಷ್ಟೇ. ಸುಸ್ಮಿತಳಾಗಲಿಲ್ಲ, ಅಚ್ಚರಿಗೊಳ್ಳಲಿಲ್ಲ, ವಿಚಲಿತಳಾಗಲಿಲ್ಲ, ದಿಗ್ಭ್ರಮೆಗೊಳ್ಳಲಿಲ್ಲ—ಜರಿತಾ. ಹೇಗೋ ಇಲ್ಲಿಯ ವರೆಗೆ ಮುಂದಪಾಲನ ಜೀವನದ ನಾಲ್ಕು ಶಿಶುಮೂರ್ತಿಗಳನ್ನು ತನ್ನ ಸ್ನೇಹದ ಸೆರಗಿನ ನೆರಳಿನ ದಾನ ಗೈದು ರಕ್ಷಕಿಯಾಗಿ, ಇದೇ ಕುಟೀರದ ಏಕಾಂತದಲ್ಲಿ ದಿನಗಳೆದಿದ್ದಾಳೆ-ಅವಳು. ನೋಡಿ ತೃಪ್ತಿಹೊಂದಲಿ, ಶಾಂತಿಪಡೆಯಲಿ ಮುಂದಪಾಲ— ಅವನ ಸಂತಾನಕ್ಕೆ ಯಾವ ವಿನಾಶವೂ ತಟ್ಟಲ್ಲ.

ಮಕ್ಕಳು ಒಂದೊಂದಾಗಿ ಬಂದು ಮುಂದಪಾಲನ ಹತ್ತಿರ ನಿಂತುವು— ನಾಲ್ಕೂ ಕಿಸಲಲಯ ದೇಹದ ಶಿಶುಗಳು. ಒಂದೋದೇ ಮಗುವಿನ ಮುಸ್ತಕವನ್ನು ಚುಂಬಿಸಿದ ಮುಂದಪಾಲ.

ಈ ಸುಂದರ ದೃಶ್ಯದ ಪಕ್ಕದಲ್ಲಿ, ಒಂದು ಅಪ್ರಾಸಂಗಿಕ ಮತ್ತು ಅಪ್ರಯೋಜಕ ಛಾಯೆಯಂತೆ, ನಿಶ್ಶಬ್ದಳಾಗಿ ನಿಂತಿದ್ದಳು ಜರಿತಾ. ಹೌದು ನಿಶ್ಚಿಂತಳಾಗಿದ್ದಳು ಜರಿತಾ. ನೋಡಲು ಸುಖವಾಗಿಯೇ ಇದ್ದಳು; ಆದರೆ ಈ ಘಟನೆಯಿಂದಾಗಿ ಅವಳ ಜೀವನದಲ್ಲಿ ಯಾವ ಪ್ರಶ್ನೆಯೂ ಉದ್ಭವಿಸಿಲ್ಲ, ಹೇಳಬೇಕಾದ ಯಾವ ಮಾತೂ ಅವಳಲ್ಲಿಲ್ಲ. ಬಂದಿದ್ದಾನೆ— ನಿಜವಾದ ಸಂತಾನ ಪ್ರಿಯ ತಂದೆ. ಸಂಕಟದಲ್ಲಿ ಸಿಕ್ಕಿ ಬಿದ್ದಿದ್ದ ತನ್ನ ಮಕ್ಕಳಿಗಾಗಿ ಉದ್ವಿಗ್ನಚಿತ್ತನಾಗಿ ಪಿತನೊರ್ವನ ಹೃದಯ ಓಡಿ ಬಂದಿದೆ. ಜರಿತಾಳ ಕೈಯಿಂದ ವಾಸಂತೀಕುಸುಮ ಮಾಲೆಯನ್ನು ತನ್ನ ಕಂಠಕ್ಕೆ ಹಾಕಿಸಿಕೊಳ್ಳಲಿಕ್ಕಾಗಿ, ಯಾವ ಪ್ರಿಯ ತಮೆಯ ಸ್ವಾಮಿಯ ಮನವೇನೂ ಬಂದಿರಲಿಲ್ಲ ಅಲ್ಲಿಗೆ.

ಆದರೆ ಅಕಸ್ಮಾತ್ ಮುಖನೆತ್ತಿ ನೋಡಿದಾಗ, ನಿಸ್ಮಿತಳಾದಳು ಜರಿತಾ. ಯಾವುದೋ ಒಂದು ವಿಭ್ರಮವಶನಾಗಿ ವಿಜಲಿತಚಕ್ಷುಗಳಿಂದ ನತಮುಖಿ ಜರಿತಾಳ ಮುಖವನ್ನೆತ್ತ ತೃಷ್ಣಾರ್ತನಂತೆ ನಿಟ್ಟಿಸುತ್ತಲಿದ್ದ ಮುಂದಪಾಲ.

'ಜರಿತಾ !'

ಮುಂದಪಾಲನ ಕರೆಯು ಕೇಳಿಸಿದ್ದರೂ ಉತ್ತರಿಸಲಿಲ್ಲ ಜರಿತಾ. ಅಭಿಮಾನಕುಂಠಿತ ಪ್ರಣಯಿನಿಯಂತಲ್ಲ, ಜೀವನದೆಯ ಉರಿಯಲ್ಲಿ

ಬೆಂದ ವಾಸಂತೀಕುಸುಮದಂತೆ ಅವಮಾನಿತ—ಹಾಗೂ ಉಪೇಕ್ಷಿತ ಸೌರಭದ ವೇದನೆಯಿಂದ ಕುಂಠಿತಳಾಗಿ, ಮ್ಲಾನಮುಖಿಯಾಗಿ ನಿಂತಿದ್ದಳು ಅವಳು.

ಮುಂದಪಾಲ ಹೇಳಿದ :—' ಇಂದು ನನ್ನ ಕರೆಯ ಅರ್ಥ ನಿನಗಾಗುತ್ತಿಲ್ಲವೇನು ಜರಿತಾ ?'

' ತಿಳಿದಿರುವೆ ಸ್ವಾಮಿ, ವಿಶ್ವಾಸವಿಡಲಾಗಲೊಲ್ಲದು ನನಗೆ. '

' ಏನು, ವಿಶ್ವಾಸವಿಡಲಾಗಲೊಲ್ಲದೊ ?'

' ನಿಮ್ಮ ನಯನಗಳ ಆ ದೃಷ್ಟಿ, ನಿಮ್ಮ ಕಂಠಸ್ವರದ ಆ ಕರೆ ಇವನ್ನು ತೃಪ್ತಿಪಡಿಸುವಂತಹ ಯಾವುದೇ ರೂಪವಾಗಲಿ ಗುಣವಾಗಲಿ ಇವೆಯೇನು ಈ ಜರಿತಾಳಲ್ಲಿ ?'

' ಈ ಸಂದೇಹವನ್ನು ಈಗಲೂ ಕೂಡ ಹೃದಯಲ್ಲಿ ತುಂಬಿ ಪೋಷಿಸುತ್ತಿರುವೆ ಜರಿತಾ ? '

' ಸಂದೇಹ ಅಲ್ಲ, ಸ್ವಾಮಿ !'

' ಏನು ಹಾಗಾದರೆ ?'

' ಶಿಕ್ಷೆ '

' ಯಾರ ಶಿಕ್ಷೆ ?'

'—ನಾನು ಚಿರಸಂಗಮಧುರೆಯಾದ ಹೂಮುಂಚದ ಹೆಣ್ಣಲ್ಲ ಋಷಿ ! ನಿಜವಾಗಿಯೂ ಒಂದು ವಾತ್ಸಲ್ಯಕಾತರ ಕುಟೀರವಷ್ಟೇ ನಾನು. '

ಮುಂದಪಾಲ ನುಡಿದ : ' ಪುತ್ರವತಿ ಜರಿತಾ, ಪುಷ್ಪಿತಲತೆಯಿದ್ದಂತೆ ನೀನು. ನಿನ್ನ ಶ್ವಾಸೋಚ್ಛ್ವಾಸದ ಸೌರಭ ನನ್ನ ಈ ಕುಟೀರದಲ್ಲಿ ನಾಲ್ಕು ಪುಷ್ಪಗಳ ಮೂರ್ತಿಗಳನ್ನರಳಿಸಿದೆ ! '

' ನೀವು ಕ್ಷಣಿಕ ಕರುಣೆಯ ತಪ್ಪಿನಿಂದಾಗಿ, ಇವಳನ್ನು ಪರಿಗ್ರಹಿಸಿರುವಿರಿ ಋಷಿ ! '

' ಇಲ್ಲ ಜರಿತಾ !'

' ನೀವು ನಿಮ್ಮ ಚಕ್ಷುದ್ವಯಗಳನ್ನೇ ಪ್ರಶ್ನಿಸಿ ಕೊಳ್ಳಿ ಋಷಿ !'

' ಪ್ರಶ್ನಿಸಿರುವೆ ಜರಿತಾ ನನ್ನ ಕಣ್ಣುಗಳೆರಡೂ ಇಂದು ಸತ್ಯ ಒಂದನ್ನು ಕಂಡಿವೆ !'

' ಏನು ? ಯಾವ ಸತ್ಯ ? '

' ನೀನು ಪ್ರಭಾಮಯಿ, ಅಂತೆಯೇ ನೀನು ಸುಂದರವಾಗಿರುವಿ'

' ಸ್ವಾಮೀ.... ! '

' ನೀನು ಕೇವಲ ಸುಂದರಿ ಮಾತ್ರನಲ್ಲ, ಜರಿತಾ, ನೀನೇ ಸೌಂದರ್ಯ. ನೀನು ನನ್ನ ಪ್ರಿಯತಮೆ ಮಾತ್ರವಲ್ಲ, ನನ್ನ ಪ್ರೇಮವೇ ನೀನು !'

ಕುಟೀರದ ಒಳಭಾಗವನ್ನು ಪ್ರವೇಶಿಸಿದಳು ಜರಿತಾ. ಪುಷ್ಪ ಮಾಲಿಕೆಯೊಂದನ್ನು ಕೈಗೆತ್ತಿಕೊಂಡು ಬಂದು ಮುಂದಪಾಲನ ಎದುರಿಗೆ ನಿಂತಳು ಅವಳ ಸ್ಮಿತ ಅಧರಗಳಂತೆಯೆ ಬಿಳಿಯ ಶ್ರೀಗಂಧದಲ್ಲಿ ಮಿಂದ, ಅದೇ ಆಗಲೇ ಕಟ್ಟಿದ ವಾಸಂತೀ ಕುಸುಮಮಾಲೆ, ಸ್ನಿಗ್ಧವಾಗಿದ್ದರೂ ನಿಷ್ಪಲವಾಗಿತ್ತು.

ಮುಂದಪಾಲನ ಕೊರಳಿಗೆ ಪುಷ್ಪಮಾಲೆಯನ್ನರ್ಪಿಸಿದಳು ಜರಿತಾ.

ಮುಂದಪಾಲ ನುಡಿದ :—'ಇಲ್ಲಿರುವುದು ಬೇಡ ಪ್ರಿಯೆ ಜರಿತಾ ! ನಡೆ ಈ ಪಾಂಡವವನದ ಏಕಾಂತವನ್ನು ತೊರೆದು, ಬಹುದೂರದ ದೇಶಕ್ಕೆ ಹೋಗೋಣ. ಯಾವ ಹೂವಿನ ತೂಗುಮಂಚದ ಘೋರ ಸ್ವಪ್ನವು, ನೂರು ಬಾರಿ ಹುಡುಕಿದರೂ ಕೂಡ ನಮ್ಮ ಈ ಸ್ನಿಗ್ಧ ತೃಪ್ತ ಸಂತಾನಯುತ ಗೃಹಸ್ಥ ಜೀವನದ ಸುಳಿವು ಸಿಗದಂತಹ ಸ್ಥಳ ವೆಲ್ಲಿದೆಯೋ ಅಲ್ಲಿಗೆ ತೆರಳೋಣ '

ಜರಿತಾ ನುಡಿದಳು—' ನಡೆಯಿರಿ ಸ್ವಾಮಿ ! '

' ಆದರೆ ..... ಆ ಹೂಮುಂಚದ ಕಠೋರಸ್ವಪ್ನ ನನ್ನನ್ನು ಕ್ಷಮಿಸಲಾರದು ಜರಿತಾ! ಅವಳಿಗೆ ಯಾವ ವಚನವನ್ನಿತ್ತು ಸಂತಯಿಸಿ ಬಂದಿರುವೆನೋ, ಅದೇ ವಚನ ನನ್ನನ್ನು ಭಗ್ನಮನೋರಥನನ್ನಾಗಿ ಮಾಡುವುದು. ಒಂದು ಪಕ್ಷ ನನ್ನ ಅಪರಾಧಕ್ಕಾಗಿ ಅವಳು ಪ್ರತಿಹಿಂಸೆ ಹಾಗೂ ಅಭಿಶಾಪ....

ಒಮ್ಮೆಲೇ ಅದೇ ಅಭಿಶಾಪೋತ್ಪನ್ನ ಕಠೋರ ಸ್ವಪ್ನವನ್ನು, ತನ್ನ ಸಮ್ಮುಖದಲ್ಲಿಯೇ ಕಂಡ ಮುಂದಪಾಲ. ಅವನ ಭಯಗ್ರಸ್ತ ಹೃದಯದಿಂದ ಕಂಪನಯುಕ್ತ ಆರ್ತನಾದ ಹೊರಟಿತು ' ನೀನು !!! '

' ಹೌದು, ನಾನು ' ಕುಟೀರದ ಪ್ರಾಂಗಣದಲ್ಲಿದ್ದ ಲತಾಂತರಾಳದಿಂದ ಮೆಲ್ಲಮೆಲ್ಲನೆ ಮುಂದೆ ಬಂದು, ಮುಂದಪಾಲನ ಸಮ್ಮುಖದಲ್ಲಿ ನಿಂತಳು ಲಪಿತಾ.

ನಗತೊಡಗಿದಳು ಲಪಿತಾ—'ಭಯ ಪಡದಿರು ಸ್ವಾಮಿ—ಕೇಳಿ ಸುಖಿಯಾಗು. ಸೋಲನ್ನೊಪ್ಪಿ ಕೊಂಡಿರುವಳು ಲಪಿತಾ. ಈ ಸೋಲನು ಘೋಷಿಸಿ ಹೊರಟು ಹೋಗಲಿಕ್ಕಾಗಿಯೇ ಬಂದಿದ್ದಾಳೆ ಅವಳು !'

' ಸೋಲು ? '

' ಹೌದು; ಆದರೆ ನಿಮಗೋಸ್ಕರವಾಗಿಯೇ ಈ ಪರಾಜಯವಲ್ಲ ಋಷಿ!'

ಈ ಮಾತನ್ನಾಡಿ ನೀರವವಾದಳು ಲಪಿತಾ. ಅನಂತರ ಜರಿತಾಳ ಮುಖವನ್ನೇ ನೋಡುತ್ತಾ ನುಡಿದಳು:-'ಈ ಪರಾಜಯ ನಿನಗೋಸ್ಕರವಾಗಿಯೂ ಅಲ್ಲ ಜರಿತಾ ! ಯಾರು ನನಗಿಂತ ನಿನ್ನನ್ನು ಚೆಲುವೆಯನ್ನಾಗಿಸಿರುವರೋ ಅವರೇ ನನ್ನನ್ನು ಪರಾಜಯಗೊಳಿಸಿದ್ದು—ಇದ್ದಾರಲ್ಲ ಈ ನಾಲ್ಕುಜನ.....'

ಚೀತ್ಕಾರದ ಧ್ವನಿಯಲ್ಲಿ ನುಡಿದ ಮುಂದಪಾಲ:— ' ಅಭಿಶಾಪವನ್ನೀಯದಿರು ಲಪಿತಾ. ಅವರಾರೂ ಯಾವ ಅಪರಾಧವನ್ನೂ ಗೈದಿಲ್ಲ."

ಮತ್ತೆ ನಗತೊಡಗಿದಳು ಲಪಿತಾ— ' ನಾನು ಹೇಳಿದ್ದೆ ನೀವು

[ಅಖಿಲನೆಯ ಪುಟನೋಡಿರಿ]

ಆ ಸಾಮದಲ್ಲಿ ಮಳೆಗಾಲ

(ಆಸಾಮು-೫)

ಲೇ. ಪಿ. ವಿ. ಗುಡಿ, ಗೋಹಟ್ಟಿ (ಆಸಾಮು)

ನೈಸರ್ಗಿಕ ವೈಲಕ್ಷಣ್ಯಗಳ ಮೂಲಕ, ಆಸಾಮವು ಒಂದು ವೈತಿಷ್ಟ್ಯಪೂರ್ಣ ದೇಶ. ಇಲ್ಲಿಯ ಮಳೆಗಾಲದ ಜೀವನವೆಂದರೆ, ಹೊರಗಿನಿಂದ ಹೋದ ಹೊಸಬರಿಗೆ ಭೀತಿಯನ್ನು ಉಂಟುಮಾಡುವುದು. ಸಿರಿವಂತಿಕೆ-ಬಡತನಗಳಲ್ಲಿರುವ ಸ್ವರ್ಗ-ನರಕಾಂತರವು ಇಲ್ಲಿ ಸ್ಪಷ್ಟವಾಗಿ ಗೋಚರವಾಗುವುದು.

ಬೆಳಗಿನಲ್ಲಿ ಎಚ್ಚರಾದೊಡನೆ, ಮೊದಲು ಕಿಡಕಿಯ ಬಾಗಿಲನ್ನು ತೆರೆದು ನೋಡಿದೆ: ಮಳೆನಿಂತಿರುವುದೋ ಇಲ್ಲವೋ ಎಂದು. ಮೇಲೆ ಶುಭ್ರವಾದ ನಿಲಾಕಾಶವನ್ನು ನೋಡಿ, ನನ್ನ ಕಣ್ಣುಗಳನ್ನು ನಾನೇ ನಂಬದಾದೆ. ಈಗ ಮೂರು ದಿವಸಗಳಿಂದಲೂ ಬಿಸಿಲಿನ ಮೋರೆಯನ್ನು ಕೂಡ ನೋಡಿಲ್ಲ. ಹತ್ತಿದ ಹನಿ ಕಡಿದಿರಲಿಲ್ಲ. ಮೊನ್ನೆ ಸಂಜೆ ಪಂಡಿತಜಿಯವರ ಮನೆಯಿಂದ ಬರುವಾಗ, ಸಂಪೂರ್ಣವಾಗಿ ತೋಯಿಸಿಕೊಂಡು ಮನೆ ಸೇರಿದವನು, ಈ ಮಳೆಯ ಸಲುವಾಗಿ ಕಳೆದ ಮೂರು ದಿನಗಳಿಂದಲೂ ಹೊರಗೆ ಹೋಗಿರಲಿಲ್ಲ. ನಮ್ಮ ಮನೆ ಆಫೀಸಿನ ಕಂಪೌಂಡಿನಲ್ಲಿಯೇ ಇದ್ದುದರಿಂದ, ಅಲ್ಲಿಗೊಂದು ಹೋಗಿ ಬರುತ್ತಿದ್ದೆ. ಬೇಸಗೆಯ ಸೆಕೆಯಿಂದ ಬೇಸತ್ತು, 'ಯಾವಾಗ ಮಳೆ ಬಂದಿತೋ, ಎಂದು ದಾರೀ ನೋಡುತ್ತಿದ್ದೆ; ಆದರೆ ಈಗ ಮೂರು ದಿವಸಗಳಲ್ಲಿಯೇ 'ಮಳೆ ಯಾವಾಗ ನಿಂತೀತೋ' ಎಂದೆನಿಸಿತ್ತು ಯಾರ ಸಂಗಡಲಾದರೂ ಮಾತನಾಡುವಾಗ, 'ಈ ಮಳೆಯ ಬಗ್ಗೆ ಸಹಜವಾಗಿ ಅನ್ನುತ್ತಿದ್ದರು: 'ಅಂತೂ ಒಮ್ಮೆ ಸುರುವಾಯಿತು. ಇನ್ನು ೩-೪ ತಿಂಗಳು ಅನುಭವಿಸಬೇಕು.' ಎಂದು. ಮಳೆಯಿಂದ ಇಲ್ಲಿಯ ಜನರ ದಿನಚರಿಯಲ್ಲಿ ಏನೂ ಬದಲಾದಂತೆ ಕಂಡು ಬರಲಿಲ್ಲ; ಆದರೆ ಪ್ರತಿಯೊಬ್ಬರ ಕೈಯಲ್ಲಿ ಕೊಡೆ ಮತ್ತು ಕಾಲಲ್ಲಿ ರಬ್ಬರಿನ ಬೂಟು ಮಾತ್ರ ಕಾಣುತ್ತಿದ್ದುವು. ಮಳೆ ಹತ್ತಿದಾಗಿನಿಂದ ನಾನು ಹೊರಬಿದ್ದಿರಲೇ ಇಲ್ಲವಾದುದರಿಂದ, ಮನೆಯಲ್ಲಿಯ ಕೆಲವು ನಿತ್ಯೋಪಯೋಗಿ ಸಾಮಾನುಗಳನ್ನು ತರಬೇಕಾಗಿತ್ತು. ಹೊರಗೆ ಮಳೆ ನಿಂತದ್ದನ್ನು ನೋಡಿದ ಕೂಡಲೆ, ಬೇಗನೆ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಪೇಟೆಯ ಕಡೆಗೆ ಹೊರಟೆ.

ನಾನು ಈ ಮೊದಲೇ ಹೇಳಿದಂತೆ ಕಾಂಗ್ರೆಸಿನ ಅಧಿವೇಶನ ಇಲ್ಲಿ ಜರುಗಿದಾಗಿನಿಂದ (೨ ವರ್ಷಗಳಿಂದೆ), ಕೆಲವು ಸುಧಾರಣೆಗಳೇನೋ ಆಗಿವೆ. ನಾನಾತರದ ಉದ್ಯೋಗ. ಧಂದೆಗಳು ಪ್ರಾರಂಭವಾಗಿವೆ; ಹೊಸ ಹೊಸ ಆಫೀಸುಗಳು ಆಗಿವೆ; ಅದರಿಂದಾಗಿ ಜನವಸತಿ ಹೆಚ್ಚಾಗಿದೆ—ಇನ್ನೂ ಹೆಚ್ಚಾಗುತ್ತಲಿದೆ. ಆದರೆ ಅದಕ್ಕೆ ತಕ್ಕಂತೆ ಇಲ್ಲಿ ಉಳಿದ ಸೌಕರ್ಯಗಳಿಲ್ಲ. ಆರೋಗ್ಯ ದೃಷ್ಟಿಯಿಂದಂತೂ ಕೇಳುವಂತೆಯೇ ಇಲ್ಲ. ಇಲ್ಲಿಯ Drainage System ಚೆನ್ನಾಗಿಲ್ಲ; ಅಥವಾ ಇಲ್ಲವೆ ಇಲ್ಲವೆಂದರೂ ಅಡ್ಡಿ ಇಲ್ಲ. ರಸ್ತೆಯ ಎಡಬಲಕ್ಕೆ ದೊಡ್ಡ ದೊಡ್ಡ ಗುಂಡಿಗಳು ಮಾತ್ರ ಅವೆ. ನೀರು ಹರಿದು ಹೋಗುವುದರ ಬದಲು ಅಲ್ಲಿಯೇ ಅವು ನಿಲ್ಲುತ್ತವೆ. ಎಲ್ಲಿ ನೋಡಿದಲ್ಲಿ ಕೊಳಚೆ-ಹೊಲಸು ನೀರು. ಮಳೆಯಿಂದ ಆ ಹೊಲಸು ಎಲ್ಲ ಕಡೆಗೆ ಪಸರಿಸಲಿಕ್ಕೆ ಮಾರ್ಗವಾಗುತ್ತದೆ. ಮನೆಬಿಟ್ಟು ಹೊರಬಿದ್ದೊಡನೆ, ಆ ಹೊಲಸು ನೀರಿನಲ್ಲಿಯೇ ಹೋಗಬೇಕು. ಆ ಹೊಲಸಿನದೇ ನಾತ. ಇಂತಹ ವಾತಾವರಣದಲ್ಲಿಯೇ ಜನರು ಇರುತ್ತಾರೆ. ನಾನು ನಾಲ್ಕೆಂಟು ಜನರನ್ನು ಕೇಳಿದೆ, 'ನೀವು ಹೇಗೆ ಮಾಡುತ್ತೀರಿ?' ಎಂದು. 'ಮಾಡುವುದೇನು, ಎಲ್ಲ ಕಡೆಯಲ್ಲಿಯೂ ಹಾಗೇನೇ !! ಈ ಮಳೆಗಾಲ ಕಳೆಯುವವರೆಗೆ ಇದನ್ನು ಅನುಭವಿಸಬೇಕು,' ಎಂದು ಹೇಳಿದರು.

ಹೊರಗೆ ನೀರಲ್ಲಿಯ ಹೇಸಿಗೆ, ಹೊಲಸುನಾತ ಎಂದು ಮನೆಯೊಳಗೇ ಕುಳಿತರೆ, ಅಲ್ಲಿಯದು ಮತ್ತೊಂದು ಪ್ರಕಾರ. ಬಚ್ಚಲುಮನೆ-ಅಡಿಗೆಯ ಮನೆತುಂಬ ಮಳೆಹುಳುಗಳು, ಸಣ್ಣ ಸಣ್ಣ ಕಪ್ಪೆಗಳು, ಮತ್ತು ನಾನಾತರದ ಇರುವೆಗಳು— ಕಾಲಿಡಲಿಕ್ಕೆ ಸಹ ಹೇಸಿಗೆ. ಫಿನಾಯಿಲು, ಫ್ಲಿಟ್ ಎಷ್ಟು ಉಪಯೋಗಿಸಿದರೂ ಪರಿಣಾಮವಾಗುವಂತಿಲ್ಲ. ರಾತ್ರಿಯಲ್ಲಿ ದೀಪ ಹಚ್ಚಿದೊಡನೆ ಮನೆತುಂಬ ದೀಪದ ಹುಳುಗಳೇ; ಅವುಗಳನ್ನು ಹಿಡಿಯುವುದಕ್ಕಾಗಿ ನಾನಾತರದ ಜಿಟ್ಟೆಗಳು. ಅಂತೂ ಎಲ್ಲ ತರದ ಪ್ರಾಣಿಗಳೊಂದಿಗೆ 'ಸಹಜೀವನ'— Co-existence ದ ತತ್ತ್ವ ಕಲಿಯಲು ಆಸಾಮವು ಮಾದರಿಯ ಸ್ಥಳವಾಗಿದೆ. ನನ್ನ ಸಹೋದ್ಯೋಗಿ ಮಿತ್ರನೊಬ್ಬನೊಡನೆ ಇದನ್ನು ಹೇಳಿದಾಗ ಅವನೆಂದ : 'ಇನ್ನೂ ಈ ಗೌಹಾಟ ಎಷ್ಟೋ ಪಾಲಿಗೆ ಬೇಕು; ಒಳಪ್ರದೇಶದಲ್ಲಿ ಹೋದರೆ, ಈ ಮಳೆಗಾಲದಲ್ಲಿ ಹೊರಗೆ ಹೋಗುವುದೇ ಕಷ್ಟ. ಎಲ್ಲ ಕಡೆಯಲ್ಲಿಯೂ ನೀರು ನಿಂತು ಅದರಲ್ಲಿ ಸಾಕಷ್ಟು ಜಿಗಣೆಗಳು ಇರುತ್ತವೆ. ೪-೫ ಹೆಜ್ಜೆ ಹೋಗುವಷ್ಟರಲ್ಲಿ ೪-೧೦ ಜಿಗಣೆಗಳು ನಿಮ್ಮ ಕಾಲನ್ನು ಹಿಡಿದಿರುತ್ತವೆ.' ಅವನು ಇನ್ನೂ ಒಂದು ಮಾತಿನ ಬಗ್ಗೆ ಎಚ್ಚರಿಸಿದ: 'ಇಲ್ಲಿ ಈ ಹೊಲಸು ನೀರಿನ ಮೂಲಕ ಸಾಕಷ್ಟು ಹಾವುಗಳನ್ನು ನೀವು ನೋಡಬಹುದು. ಕಪ್ಪೆಗಳ ಸಲುವಾಗಿ ಅವು ಒಂದು ವೇಳೆ ಮನೆಯಲ್ಲಿಯೂ ಬರಬಹುದು. ಆದರೆ ಅವುಗಳು ಕಡಿಯುವುದಿಲ್ಲ. ಅವುಗಳಿಂದ ಹೆದರಿಕೆ ಏನೂ ಇಲ್ಲ; ಅವುಗಳನ್ನು ನೋಡಿ ಗಾಬರಿಯಾಗಬೇಡಿರಿ.'

ನಾನು ಪೇಟೆಯಲ್ಲಿ ಬಂದಾಗ ಬೆಳಗಿನ ೮ ಗಂಟೆಯಾಗಿರಬೇಕು. ಆದರೂ ಬಿಸಿಲು ಚುರುಕಾಗಿತ್ತು. ಮಳೆಯ ಚಿಹ್ನೆಯೇ

ಇರದುದರಿಂದ, ಕೊಡೆಯನ್ನೂ ರಬ್ಬರಿನ ಬೂಟುಗಳನ್ನೂ ಕೊಂಡೇ ತೀರಬೇಕೆಂದು, ಮುಂಜಿಯ ದಿನ ಮಾಡಿದ ನಿಶ್ಚಯ ಜ್ಞಾಪಕದಲ್ಲಿರಲಿಲ್ಲ. ಮನೆಯ ಸಾಮಾನುಗಳನ್ನು ಕೊಳ್ಳುವುದಕ್ಕಾಗಿ ಕಿರಾಣಿಯ ಅಂಗಡಿಗೆ ಹೋದೆ. ಒಂದೇ ವಾರದಲ್ಲಿ ಅದೆಂತಹ ಹೆಚ್ಚುಕಡಿಮೆ ! ಪ್ರತಿಯೊಂದರ ಬೆಲೆ ೨॥-೩ ಮಡಿ ಹೆಚ್ಚಾಗಿದೆ. ಹೀಗೇಕೆಂದು ಕೇಳಿದರೆ ' ಮಳೆಯಿಂದ Ferry service ಬಂದಾಗಿದೆ ' ಎಂಬುದೊಂದೇ ಉತ್ತರ. ನಿರ್ವಾಹವಿಲ್ಲದೆ, ಬೇಕಾದದ್ದರ ಅರ್ಧದಷ್ಟು ಮಾತ್ರ ಸಾಮಾನುಗಳನ್ನು ಕೊಂಡು ಮನೆಯ ಕಡೆಗೆ ಹೊರಡಬೇಕಾಯಿತು. ಅಂಗಡಿ ಬಿಟ್ಟು ೮-೧೦ ಹೆಜ್ಜೆ ಮುಂದೆ ಬಂದಿರಬಹುದು; ಎಲ್ಲಿಂದಲೋ ಮೋಡ ಕವಿದು ಮಳೆ ವ್ಯಾರಂಭವಾದಾಗಲೆ, ನಾನು ಕೊಡೆಕೊಳ್ಳಬೇಕೆಂದದ್ದು ನೆನಪಾಯಿತು. ಇಲ್ಲಿಯ ಮಳೆಯ ರೀತಿಯೇ ಹೀಗೆ; ಯಾವಾಗ ಮಳೆ ಬರುವುದೋ ಯಾವಾಗ ಬಿಸಿಲು ಬೀಳುವುದೋ ಗೊತ್ತೇ ಆಗುವುದಿಲ್ಲ. ಮಳೆ ಬಂದಿತೆನ್ನುವಷ್ಟರಲ್ಲಿ ಬಿಸಿಲುಬಿದ್ದು, ಆನಂತರ ಕೆಲವೇ ನಿಮಿಷಗಳಲ್ಲಿ ಮಳೆ ಮತ್ತೆ ಪ್ರಾರಂಭವಾಗುತ್ತದೆ. ಆದ್ದರಿಂದ ಮಳೆಗಾಲ ಮುಗಿಯುವವರೆಗೆ ಯಾವಾಗಲೂ ಹತ್ತಿರ ಕೊಡೆ ಇರಲೇಬೇಕು. ಇದು ಇಲ್ಲಿಯ ಮುಖ್ಯ ಆವಶ್ಯಕ ವಸ್ತು.

' Ferry service ನಿಲ್ಲಬೇಕಾದರೆ ನದಿಯಲ್ಲಿ ಅದೆಷ್ಟು ನೀರು ಬಂದಿರಬಹುದೋ ' ಎಂದು ಯೋಚಿಸಿ, ನೋಡುವುದಕ್ಕೆಂದು ಅತ್ತ ತಿರುಗಿದೆ. ಆ ನದಿಯ ಪ್ರವಾಹನೋಡಿ ನನ್ನ ಕಣ್ಣುಗಳನ್ನು ನಾನೇ ನಂಬದಾದೆ. ರಸ್ತೆಯಿಂದ ೩-೪ ಫರ್ಲಾಂಗು ದೂರವಿದ್ದ ಪ್ರವಾಹ ಈಗ ರಸ್ತೆಯವರೆಗೂ ಬಂದಿದೆ. ಎರಡೂ ದಂಡೆಗಳ ಅಂತರ ಈಗ ಒಂದು ಫರ್ಲಾಂಗಿಗಿಂತಲೂ ಹೆಚ್ಚಾಗಿದೆ. ಪ್ರವಾಹದ ಸೆಳವಂತೂ ಹೇಳಲಾಸಲ್ಲ. ಪ್ರವಾಹದ ವೇಗವನ್ನು, ನದಿಯಲ್ಲಿ ತೇಲಿಹೋಗುತ್ತಿದ್ದ ಗಿಡಗಂಟೆಗಳಿಂದ ಕಂಡುಹಿಡಿಯಬಹುದಾಗಿತ್ತು. ಅಂತಹ ಪ್ರವಾಹದಲ್ಲಿ ' ಉಮಾನಂದ ' ದ್ವೀಪವು ಚಿಕ್ಕ ತೆಪ್ಪದಂತೆ ತೋರುತ್ತಿತ್ತು. ಆ ದ್ವೀಪಕ್ಕೆ ರಭಸದಿಂದ ಅಪ್ಪಳಿಸುತ್ತಿರುವ ನೀರಿನ ತೆರೆಗಳು, ಮತ್ತು ಪ್ರವಾಹದ ವೇಗ, ಈ ದ್ವೀಪ ಇನ್ನೇನು ಈ ತೆರೆಗಳ ಅಬ್ಬರಕ್ಕೆ ಉಳಿಯಲಾರದು— ಎಂಬ ಭಾವನೆಯನ್ನು ಯಾರಲ್ಲಿಯೂ ಹುಟ್ಟಿಸುತ್ತಿದ್ದುವು. Ferry service ಬಂದಾಗಿದ್ದರ ಕಾರಣ ಈ ಪ್ರವಾಹ ನೋಡಿದ ನಂತರವೇ ಗೊತ್ತಾಯಿತು. ಸಾಧಾರಣವಾಗಿ ಎಲ್ಲ ನದಿಗಳಿಗೆ Bridge (ಸೇತುವೆ) ಕಟ್ಟುದ್ದಾರೆ; ಆದರೆ ಇಡೀ ಅಸಾಮುಪ್ರಾಂತವನ್ನೇ ಭಾರತದಿಂದ ಬೇರ್ಪಡಿಸುತ್ತಿರುವ ಈ ನದಿಗೇನೇ ಕಟ್ಟದಿದ್ದುದರ ಕಾರಣವೂ ಇದೇ ಇರಬಹುದು. ಮುಂಬರುವ ಪಂಚವಾರ್ಷಿಕ ಯೋಜನೆಯಲ್ಲಿ Bridge ಕಟ್ಟುವ ಕಾರ್ಯಕ್ರಮವನ್ನೇನೋ ಇಟ್ಟುಕೊಂಡಿದ್ದಾರೆ; ನೋಡಬೇಕು, ಎಷ್ಟರ ಮಟ್ಟಿಗೆ ಸಾಧ್ಯವಾಗುವುದೋ !!

ಅಸಾಮುದಲ್ಲಿಯ ಎಲ್ಲ ನದಿಗಳೂ ಹಾಗೆಯೇ ! ಬೇಸಗೆಯಲ್ಲಿ ಚಿಕ್ಕ ಹಳ್ಳಗಳಂತೆ ಕಾಣುತ್ತಿರುವ ಈ ನದಿಗಳು, ಮಳೆಗಾಲದಲ್ಲಿ ಕಲ್ಪನೆಗೆ ನೀರಿದ ಗಾತ್ರವನ್ನು ಹೊಂದಿ, ನೂರಾರು ಹಳ್ಳಿಗಳನ್ನೇ ಕೊಚ್ಚಿಕೊಂಡು ಹೋಗುತ್ತವೆ. ಸೊದಲೇ ಇಲ್ಲಿ ನದಿಗಳ ಸಂಖ್ಯೆ ಹೆಚ್ಚು. ಅತಿ ಸಮೀಪದ ಊರಿಗೆ ಹೋಗಬೇಕಾದರೂ ಕನಿಷ್ಟ, ಒಂದು ನದಿ, ಒಂದು ಗುಡ್ಡಗಳನ್ನು ದಾಟಲೇಬೇಕು. ಆ ನದಿಗಳಿಂದರೆ ಬೇಸಗೆಯಲ್ಲಿ ಚಿಕ್ಕ ಹಳ್ಳಗಳಂತಿದ್ದರೂ, ಮಳೆಗಾಲದಲ್ಲಿ ದಂಡೆಯ ಮೇಲಿನ ಹಳ್ಳಿಗಳಿಗೆ ಮೃತ್ಯುವಿದ್ದಂತೆಯೇ. ಬೇಸಗೆಯಲ್ಲಿ ಬಂಬು (Bamboos) ಗಳನ್ನು (ಇಲ್ಲಿ ವಿಪುಲವಾಗಿ ಸಿಗುತ್ತವೆ.) ಉಪಯೋಗಿಸಿ, ದಾಟುವುದಕ್ಕಾಗಿ ಸೇತುವೆಗಳಂತೆ ಮಾಡಿರುತ್ತಾರೆ. ಮಳೆಗಾಲದಲ್ಲಿ ಅವು ಕೊಚ್ಚಿಕೊಂಡು ಹೋಗಿ, ಆಯಾ ಹಳ್ಳಿಗಳಿಗೆ ಆಹಾರ ಸಾಮಗ್ರಿಗಳನ್ನು ಸುಟ್ಟಿಸುವುದೇ ಕಠಿಣವಾಗುತ್ತದೆ. ಮೊನ್ನೆ ಮೊನ್ನೆಯ ಉದಾಹರಣೆಯನ್ನೇ ತೆಗೆದುಕೊಳ್ಳಬಹುದು: ೩೦-೩೫ ಮೈಲು ಉದ್ದದ ರೈಲು ದಾರಿಯನ್ನು ಮಾಡಬೇಕಾದರೆ, ೭ ದೊಡ್ಡ ಪೂಲುಗಳನ್ನೂ ೩೫-೪೦ ಚಿಕ್ಕ ಪೂಲುಗಳನ್ನೂ ಕಟ್ಟಬೇಕಾಯಿತು.

ಬ್ರಹ್ಮಪುತ್ರ ನದಿಯ ದಂಡೆಯ ಮೇಲೆ ಎಂದರೆ ಈಗ ರಸ್ತೆಯ ಮೇಲೆ (ರಸ್ತೆಯವರೆಗೂ ಪ್ರವಾಹ ಬಂದದ್ದರಿಂದ)-ಅನೇಕ ಬಡ ಜನ-

---

[೨೩ನೆಯ ಪುಟದಿಂದ ಬಂದುದು.]

ಮರಳಿ ನನ್ನಲ್ಲಿಗೆ ಬರದಿದ್ದರೆ, ನಾನು ನನ್ನ ಪ್ರೇಮದ ಪುನ್ನಾಗಮಾಲೆಯನ್ನು ನಾಲ್ಕು ತುಂಡುಮಾಡಿ.....'

ಒಮ್ಮೆಗೇ ಸುಂದರಿ ಲಪಿತಾಳ ಕಪಪುಗದ್ದಗಳ ಮೇಲಿನ ಕುಂಕುಮಗಳನ್ನು ತೊಳೆಯುತ್ತಾ ಅಶ್ರುಧಾರೆ ಮುನ್ನುಗ್ಗಿ ತೊಡಗಿತು.

ಅವಳು ನುಡಿದಳು:—' ನಿಮಗೆ ಸಲ್ಲಬೇಕಾಗಿದ್ದ ಮಾಲೆಯನ್ನು ನಾಲ್ಕು ತುಂಡುಗೈದು, ನಾಲ್ಕುಪುಟ್ಟ ಮಾಲೆಗಳನ್ನಾಗಿ ಮಾಡಿರುವೆ ಮುಂದಪಾಲ ! ಭಯಗೊಳ್ಳದಿರು, ಪುತ್ರವತ್ಸಲ ಪಿತಾ !'

ಇಷ್ಟನ್ನು ಹೇಳಿ ಬಂಡಳು ಲಪಿತಾ. ಮುಂದಪಾಲ ಮತ್ತು ಜರಿತಾರ ಪಕ್ಷಪಲಗೆಳನ್ನು ಹಾಗೂ ನಾಲ್ವರು ಶಿಶುಗಳ ಅಧರಗಳನ್ನು, ಚುಂಬಿಸಿದಳು. ಆ ನಾಲ್ಕೂ ಶಿಶುಗಳ ಕೊರಳುಗಳಿಗೆ ಪ್ರೇಮದಿಂದ ಪುಷ್ಪಮಾಲೆಗಳನ್ನು ಹಾಕುತ್ತ ನುಡಿದಳು:— ಯಾರಿಗೋಸ್ಕರವಾಗಿ ಸೋಲನ್ನೊಪ್ಪಿಕೊಂಡೆನೋ ಅವರ ಕೊರಳಿಗೆ ಮಾಲೆಗಳನ್ನು ಹಾಕಿ ಬಿಟ್ಟಿರುವೆ. ಸುಖಿಯಾಗು ಋಷಿ ಮುಂದಪಾಲ, ಸುಖಿಯಾಗು ಜರಿತಾ ! '

ಹೊರಟು ಹೋದಳು ಲಪಿತಾ.

ನಿಕುಂಜದ ಏಕಾಂತದಲ್ಲಿ ಹೂವಿನ ತೂಗುಮಂಚ ತೂಗಾಡುತ್ತಿತ್ತು. ಭ್ರಮರ ಮುತ್ತಿದ ಪುನ್ನಾಗತರುವಿನ ಛಾಯೆ ತಂಪಾಗಿಯೇ ಇತ್ತು. ವಸಂತಸಮೀರನ ಸ್ಪರ್ಶದಿಂದ ಲತಾಪಲ್ಲವ ಕಂಪಿಸುತ್ತಿತ್ತು. ತೂಗಾಡುತ್ತಿತ್ತು! —ಪೀಯೂಷ ವಿಹೀನ ಪ್ರೇಮದ ಅಯಾಸ ಮತ್ತು ವೇದನಾಭರಿತ ಭಾರವನ್ನು ಹೊತ್ತ ಜೀವವೊಂದು ತೂಗುಮಂಚದಲ್ಲಿ ತೂಗಾಡುತಿತ್ತು ! ತೂಗಾಡುತಿತ್ತು ಬಹಿಷ್ಕೃತ ಅಪೂರ್ಣವಾಸನೆಯೊಂದು ! ಪ್ರತಿಧ್ವನಿ ನುಡಿಯಿತು:— ' ಇದೇನು ಲಪಿತಾ ? ಈಗ ಕೂಡ ನೀನು ಏಕಾಕಿನಿ ? '

ಲಪಿತಾ ಹೇಳಿದಳು:- 'ಹೌದು, ನಾನು ಚಿರಕಾಲದ ಏಕಾಕಿನಿ!'

ರನ್ನು— ಹುಡುಗರು-ಹೆಂಗುಸರನ್ನು ನೋಡಿ ಬಹಳೇ ಕೆಡುಕೆನಿಸಿತು. ಮೊದಲು ದಂಡೆಯ ಮೇಲೆ ಗುಡಿಸಿಲು ಕಟ್ಟಿಕೊಂಡು ಇದ್ದ ಜನರು, ಈಗ ಅವೆಲ್ಲ ಗುಡಿಸಿಲುಗಳು ನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದುದರಿಂದ, ಮಳೆಯಲ್ಲಿ ರಸ್ತೆಯ ಮೇಲೆ ಕುಳಿತ ಇವರಿಗೆ ಆಹಾರ, ಅರಿವೆ, ಇರಲಿಕ್ಕೆ ಸ್ಥಳ ಇವುಗಳ ಗತಿ ಏನು ? ಪೇಟೆಯಲ್ಲಿ ನೋಡಿದರೆ ಪ್ರತಿಯೊಂದರ ಬೆಲೆ ೨-೩ ಮಡಿ ಹೆಚ್ಚಾಗಿದೆ. ಸಾಮಾನುಗಳು ಸಿಗುವಂತಿಲ್ಲ. ಸಿಕ್ಕರೂ ಅಡಿಗೆ ಮಾಡಿಕೊಳ್ಳಲಿಕ್ಕೆ, ಉಣ್ಣಲಿಕ್ಕೆ ಸ್ಥಳವಿಲ್ಲ. ಇಂತಹ ಜನರು ಇನ್ನೂ ಎಷ್ಟು ಇರವರೋ !

ಎದುರಿಗೇನೇ ೨-೩ ಮೈಲು ಅಂತರದ ಮೇಲೆ ನೀಲಾಚಲ; ಅದರ ಮೇಲಿನ 'ಕಾಮಾಖ್ಯಾ ಮಂದಿರ' ಕಾಣುತ್ತಿತ್ತು. 'ಈ ಪ್ರದೇಶವೆಲ್ಲ ಈ ಕಾಮಾಖ್ಯಾದೇವಿಯ Spiritual Dominatiiu ನಲ್ಲಿ ಇದೆಯಂತೆ. ನಿಜವಾಗಿಯೂ ಈ ಕಾಮಾಖ್ಯಾದೇವಿಯ ಅಧಿಪತ್ಯದಲ್ಲಿ ಈ ಪ್ರದೇಶವಿದ್ದದ್ದಾದರೆ, ಅವಳ ಮೊದಲನೆಯ ಕೆಲಸ ಈ ಜನರಿಗೆಲ್ಲ ಆಹಾರ ಮತ್ತು ಇರಲಿಕ್ಕೆ ಸ್ಥಳ ಕೊಟ್ಟು, ಅನಂತರ ಅವರ ಆಧ್ಯಾತ್ಮ ಜೀವನದ ವಿಕಾಸಕ್ಕೆ ಲಕ್ಷ್ಯಕೊಡಬೇಕು. ಜಗನ್ಮಾತೆಯು ತನ್ನ ಸೃಷ್ಟಿಶಕ್ತಿಯನ್ನೆಲ್ಲ ಕೇಂದ್ರೀಕರಿಸಿ ಇಲ್ಲಿ ಇಟ್ಟಿಳಂತೆ; ಅದರ ಚಿಹ್ನವೇ ಈ ಯೋನಿಮುದ್ರೆ. ಬ್ರಹ್ಮನು ಜಗತ್ತನ್ನು ಸೃಷ್ಟಿಸುವ ಮೊದಲು ಇದನ್ನು ಧ್ಯಾನಿಸಬೇಕು; ಅನಂತರವೇ ಸೃಷ್ಟಿಸುವ ಶಕ್ತಿ ಅವನಿಗೆ ಉಂಟಾಗುತ್ತದೆ.' ಎಂದು ಯೋಗಿನೀತಂತ್ರದಲ್ಲಿ ಹೇಳಿದೆ. ಆಹಾರ, ಅರಿವೆ, ಇರಲಿಕ್ಕೆ ಸ್ಥಳ ಇಲ್ಲದೆ ಗೋಳಾಡುತ್ತಿರುವ ಇಂತಹ ಜನರನ್ನೇ ಬ್ರಹ್ಮನು ಸೃಷ್ಟಿಸಬೇಕೆಂದು ಜಗನ್ಮಾತೆಯ ಇಚ್ಛೆ ಇತ್ತೇ ?

ಅಥವಾ ಕಾಲಿಕಾಪುರಾಣದಲ್ಲಿ ಹೇಳಿದಂತೆ, ಈ ನೀಲಾಚಲವು ಶಿವ-ಪಾರ್ವತಿಯರ ಪ್ರೇಮಚೇಷ್ಟೆಗಾಗಿ Secret meeting place ಮಾತ್ರ ಆಗಿರಬಹುದು. ಪಾರ್ವತಿಯು ಯಾರಿಗೂ ಗೊತ್ತಿಲ್ಲದಂತೆ ಶಿವನ ವಾಸಸ್ಥಾನವಾದ ಈ ನೀಲಾಚಲಕ್ಕೆ ಬಂದು, ತನ್ನ ಮನದನ್ನನ ಸಲುವಾಗಿ ಕಾಯುತ್ತಾಳೆ. ಎಂತಲೇ ಅವಳಿಗೆ 'ಕಾಮಾಖ್ಯಾ' ಎಂಬ ಹೆಸರು ಬಂದಿದೆ. ಪ್ರಣಯ ಚೇಷ್ಟೆಯಲ್ಲಿಯೇ ನಿರತಳಾಗಿರುವ ಈ ಕಾಮಾಖ್ಯಾದೇವಿಗೆ ಈ ಜನರ ದುಃಖ-ಸಂಕಟಗಳ ಅರಿವು ಹೇಗಾಗಬೇಕು ?

ಅಷ್ಟರಲ್ಲಿ ಮೋಡ ಕನಿದುಬಂದು ಮತ್ತೆ ಮಳೆ ಪ್ರಾರಂಭವಾಯಿತು. ಕೂಡಲೆ ರಸ್ತೆಯ ಆಚೆಯ ತುದಿಗೆ ಇದ್ದ ಒಂದು ದೊಡ್ಡ ಮನೆಯ ಹತ್ತಿರ ಬಂದು ಬಂಕದಲ್ಲಿ ನಿಂತುಕೊಂಡೆ. ಅದೊಂದು ದೊಡ್ಡ ಮೂರಂತಸ್ತಿನ ಮನೆ. ಒಳ್ಳೇ ಶ್ರೀಮಂತರ ಮನೆಯ ಠೀವಿ ಇದ್ದಿತು. ಆದುದರಿಂದಲೇ ಇದೊಬ್ಬ ಮಾರವಾಡಿಯ ಮನೆಯೇ ಇರಬಹುದೆಂದು ಕೊಂಡೆ. ಅದು ನಿಜವಾಗಿತ್ತು. ಅದೆಂತಹ Contrast !! ರಸ್ತೆಯ ಒಂದು ಕಡೆಗೆ, ಹೊಟ್ಟೆಗೆ ಒಣರೊಟ್ಟಿ ಕೂಡ ಇಲ್ಲದೆ ಅರೆ ಬೆತ್ತಲೆಯಾಗಿ ತೋಯಿಸಿಕೊಂಡು ಕುಳಿತ ಈ ಅನಾಥರು; ಅವರೆಲ್ಲರ ಎದುರಿಗೇನೇ ದೊಡ್ಡ ಅಂತಸ್ತಿನ ಮನೆಯಲ್ಲಿ, ಅಜೀರ್ಣವಾಗುವಂತೆ ಬೆಚ್ಚಗೆ ತಮ್ಮ ಹೆಂಡತಿ-ಮಕ್ಕಳೊಂದಿಗೆ ಸುಖವಾಗಿ ಕಾಲಕಳೆಯುವ ಈ ಶ್ರೀಮಂತ ಜನರು !! ನನ್ನ ಸಹೋದ್ಯೋಗಿಯೊಬ್ಬ ಹೇಳುತ್ತಿದ್ದ ಮಾತು . ನೆನಪಾಯಿತು: 'ಮತ್ತೊಬ್ಬರ ಸುಖದುಃಖದ ಬಗ್ಗೆ ಯೋಚಿಸುವವರು ಶ್ರೀಮಂತರಾಗಲಿಕ್ಕೆ ಎಂದಿಗೂ ಶಕ್ಯವಿಲ್ಲ. ಮಳೆ ಪ್ರಾರಂಭವಾದೊಡನೆ ನೋಡಬೇಕು—ವ್ಯಾಪಾರಸ್ಥರು ಪ್ರತಿಯೊಂದರ ಬೆಲೆ ೨-೩ ಪಟ್ಟು ಹೆಚ್ಚಿಸುವುದನ್ನು ನೋಡು ತ್ತಾರೆಯೇ ವಿನಾ, ಇಷ್ಟು ಹಣಕೊಟ್ಟು ಬಡವರು ಹೊಟ್ಟೆ ಹೇಗೆ ತುಂಬಿಕೊಳ್ಳಬಹುದೆಂಬದನ್ನು ಯೋಚಿಸುವುದಿಲ್ಲ. ಮಳೆಗಾಲವೆಂದರೆ ತಮಗೆ ಲಾಭದ ದಿನಸಗಳೆಂದೇ ತಿಳಿದುಕೊಳ್ಳುತ್ತಾರೆ ಈ ಜನ'

ಮಳೆ ನಿಂತಂತಾಯಿತು. ಮತ್ತೆ ಪ್ರಾರಂಭವಾಗುವುದಕ್ಕೆ ಮುಂಚೆಯೇ ಮನೆ ಮುಟ್ಟಬೇಕೆಂದು ಅಲ್ಲಿಂದ ಧಾವಿಸಿದೆ. ಮನೆ ತಲುಪಿದಾಗ, ಕಳೆದ ಮೂರು ದಿವಸಗಳ ವೃತ್ತಪತ್ರಗಳೂ ಬಂದಿದ್ದುವು. ಮಳೆ ಪ್ರಾರಂಭವಾದಾಗಿನಿಂದ ವಿಮಾನಗಳು ಕೂಡ ಬಂದಿರಲಿಲ್ಲ. ಇಲ್ಲಿಗೆ ದಿನದ ಪತ್ರಿಕೆಗಳು ಕಲಕತ್ತೆಯಿಂದ ಬರಬೇಕು. ಇಂದು ಮುಂಜಾನೆ ಮಳೆ ಇರದುದರಿಂದ, ವಿಮಾನ ಬಂದಿತೆಂದು ಕಾಣುತ್ತದೆ; ಎಂತಲೇ ಮೂರೂ ದಿನದ ಪತ್ರಿಕೆಗಳೂ ಬಂದಿದ್ದುವು.

ಪೇಪರುಗಳಲ್ಲಿ ನುಸಾಪೂರದ ಸುದ್ದಿಯೇ: 'ಆಸಾಮದಲ್ಲಿಯ ಎಲ್ಲ ನದಿಗಳೂ ತುಂಬಿ ಹರಿಯುತ್ತಿವೆ. ನೂರಾರು ಹಳ್ಳಿಗಳು ಸರೋವರಗಳಂತೆ ಕಾಣುತ್ತವೆ. ಎಲ್ಲಕ್ಕೂ ಹೆಚ್ಚು ಬಲಿಯಾದದ್ದು ಕಾಮರೂಪ ಜಿಲ್ಲೆ. ಜೀವ ಕಳೆದುಕೊಂಡ ದನಕರುಗಳ— ಜನರ— ಲೆಕ್ಕವಿಲ್ಲ. ಎಷ್ಟೋ ಜನರು ಮನೆಗಳ ಮಾಳಿಗೆಯ ಮೇಲೆ, ಗಿಡಗಳ ತುದಿಯ ಮೇಲೆ ಕುಳಿತಿದ್ದಾರೆ. ಅವರಿಗೆ ಆಹಾರ ಕೊಟ್ಟು ಅವರನ್ನು ಪಾರುಮಾಡುವ ಕೆಲಸ, ಸೈನ್ಯಖಾತೆಯವರಿಗೇನೇ ಒಪ್ಪಿಸಲಾಗಿದೆ.... ಸುಂ.'

'ಅಯ್ಯೋ ಆಸಾಮವೇ !' ಎಂದುಕೊಂಡೆ. ಆಸಾಮು ಇವಕ್ಕೆ ಅಸಮ—ಸರಿಯಾವದ್ದು-ಯಾವುದೂ ಇಲ್ಲ—ಎಂದು ಅರ್ಥಮಾಡುತ್ತಾರೆ. ನಾನು ಇಲ್ಲಿಗೆ ಬಂದಾಗ ಸಹ ಇಲ್ಲಿಯ ಸೃಷ್ಟಿಸೌಂದರ್ಯ ನೋಡಿ, ಇದಕ್ಕೆ ಸರಿಯಾದ ಸುಂದರವಾದ ಸ್ಥಳವೇ ಇಲ್ಲ; ಅದಕ್ಕೆಂತಲೇ ಇದಕ್ಕೆ ಅಸಮ-ಆಸಾಮವೆಂದು ಹೆಸರು ಬಂದಿರಬಹುದು— ಎಂದು ತಿಳಿದಿದ್ದೆ. ಆದರೆ ಈಗ ದುರ್ದೈವಿ ಸ್ಥಳಗಳಲ್ಲಿ ಇವಕ್ಕೆ ಸಮಾನವಾದ ಪ್ರದೇಶ ಮತ್ತೊಂದಿಲ್ಲವೆಂದೆನಿಸಿತು.

* ಚಕ್ರ-ವ್ಯೂಹ * ಅಭಿಸಾರ

ಶ್ರೀ. " ರಂಜನ " ಭಟ್ಟ, ಮದ್ರಾಸ

ಇದೆ ಚಕ್ರವ್ಯೂಹ –
ಬಾಗಿಲಿಲ್ಲದ ಗೋಡೆ
ಗಾಳಿಯಿಲ್ಲದ ಕೋಣೆ
ಅರೆಬಿರಿವ ಹೂವುಗಳು
ಪೂರ್ತಿಯಾಗದ ಶಿಲ್ಪ
ಭಗ್ನವಾಗಿಹ ಕನಸು
ಅಳಿದುಳಿವ ಅಸೆಗಳು –
ಹೋದ ಹೋದೆಡೆಯಿಲ್ಲಿ ಬರಿದಾದ ಕೋಣೆ
ಎತ್ತ ನೋಡಿದರಿಲ್ಲಿ ಸಾಲಾದ ಗೋಡೆ
ಇದೆ ಚಕ್ರವ್ಯೂಹ :

ಪಾರವಿರದ ಬಂಧನ
ಸೀಮೆಯಿರದ ಸಾಗರ –
ಕಬ್ಬಿಣಕೂ ಬಲು ಬಿರುಸು ಕಲ್ಲಿನೀ ಬಂಧ !
ಇದೆ ಚಕ್ರವ್ಯೂಹ :

ನೆಲೆ ನಿಂತು ನೋಡಿಹುದು
ಹರಿವ ನೀರೂ ಮರೆತು
ಗಾಳಿಯೂ ಕುಂಟಿಹುದು
ಇದೆ ಚಕ್ರವ್ಯೂಹ — ಚ-ಕ್ರ-ವ್ಯೂ-ಹ !

§ § § §

ಓ ಯುವಕ – ಅಭಿಮನ್ಯು,
ಹೋರುವಾಸೆಯೆ ನೀನು !
ಒಳಸೇರು, ಹೋರಾಡು –
ನಾಲುಗೋಡೆಗಳೆದುರು
ಮರೆತೀಯ ನಿನ್ನ ಗುರಿ.
ಒಳಸೇರು – ಹೋರಾಡು !
ಮತ್ತೆ ಹೊರಬರುವಾಸೆ ಏಕೆ ನಿನಗೆ ?
ವ್ಯೂಹದೊಳಗಿನ ವ್ಯೂಹ
ಕೋಟೆಯೊಳಗಿನ ಕೋಟೆ
ಕನಸಿನೊಳಗಿನ ಕನಸು –
ನೀನಾಗಿ ನಿಲ್ಲು;
ಒಳಸೇರು, ಹೋರಾಡು –
ಕಾದು ನಿಂತಿದೆ ನಾಳೆ
ತಾಳಿ ವ್ಯೂಹದ ರೂಪ
ಒಳಸೇರು, ಹೋರಾಡು :
ಇದೆ ಚಕ್ರವ್ಯೂಹ
ಓ ಯುವಕ – ಅಭಿಮನ್ಯು :
ನಾಳೆಯಾಸೆಯೆ ನೀನು.

ಶ್ರೀ. ಸುಂದರ ನಾಡಕರ್ಣಿ, ವಲ್ಲಭವಿದ್ಯಾನಗರ

" ಮಿದುಬೆಣ್ಣೆ ಮೈಯವಳು ಮುದ್ದಾದ ತುಟಿಯವಳು
ನೆಲ್ಲಗೇ ಬರುವುದಿದು ಯಾರಿಗಾಗಿ ? "
" ಗಾಳಿಯಲಿ ಬಂದುಸಿರ ಬೆಳಕಿನಲಿ ಕಂಡರಸಿ
ಓಗೊಡಲು ಬಂದುದಿದು ಅವನಿಗಾಗಿ "

" ಇರುಳೇರಿ ಕವಿಯುತಲಿ ರಸಗಳಿಗೆ ರಚಿಸುತಲಿ
ಹೊಸದಾಗಿ ಬರುವುದಿದು ಯಾರಿಗಾಗಿ ? ''
" ಹಗಲಿನಲಿ ನೆನೆ-ನೆನೆದು ವಿರಹ ತಾಪವ ಕಳೆಯಿ
ಬಂದುದಿದು ತಂಪಿನಾ ನೆರಳಿಗಾಗಿ."

" ದಿನಕೊಂದು ಹೊಸ ಬೆಡಗು ದಿನದಿನಕು ಹೊಸ ಒನಪು
ಈ ಉಡುಪು ಶೃಂಗಾರ ಯಾರಿಗಾಗಿ ? ''
" ಜಗವೆಲ್ಲ ಅಳೆದಳೆದು ಜಿಲುವೆಲ್ಲ ಒಂದಾದ
ಒಲವಿನಾ ಕನ್ನಡಿಯ ಕಣ್ಣಿಗಾಗಿ ''

" ಹರಿವಾಣ ಹಸ್ತದಲಿ ಹಿಡಿದೇನ ತಂದಿರುವೆ ?
ಈ ಶ್ರದ್ಧೆ, ಈ ನೇಮ ಯಾರಿಗಾಗಿ ? "
" ಇಷ್ಟಾರ್ಥ ಸಿದ್ಧಿಸುವ ಪ್ರಾಣದೇವನಿಗೆಂದು
ತಂದಿರುವೆ ನೈವೇದ್ಯ ಪೂಜೆಗಾಗಿ.''

" ನಾಲಗೆಯ ಕುಣಿಸಾಡಿ ಮೆಲುನಗೆಯ ಮಾತಾಡಿ
ಮುಗ್ಧಗೊಳಿಸುವುದಿದುವೆ ಯಾರಿಗಾಗಿ ? ''
'' ಮಾತುಗಳ ತಿರುಳರಿತು ಕಾತರದಿ ಕೇಳುತಿಹ
ಸಲುಗೆ ಸೃಷ್ಟಿಯು ನನ್ನ ರಸಿಕಗಾಗಿ "

" ರತಿಯಾಗಿ ಬಂದಿರುವೆ ಋತುವಾಗಿ ತಂದಿರುವೆ
ಹೆಣ್ಣಾಗಿ ಮುಂದರಿವೆ ಯಾರಿಗಾಗಿ ? "
" ಹೂ ಬಾಣ ಸುರಿಸುತಿಹ ಋತುರಾಜನಂತಿರುವ
ಹಿರಿದಾದ ಬಯಕೆಯಲಿ ಮದನನಗಾಗಿ "

" ಸವಿಯಾಗಿ ರುಚಿಯಾಗಿ ಹಾಲು-ಸಕ್ಕರೆಯಾಗಿ
ಹಿತವಾದ ಸಲುಗೆ ಇದು ಯಾರಿಗಾಗಿ ? ''
" ಮಿತವಾದ ಬೆರಕೆ ಇದು ಸಂತಸನೆ ಇದಕೆ ಮದ್ದು
ನಾಕನೇ ಇಳಿದಿಹುದು ಅವನಿಗಾಗಿ ''
.... ಯಾ—ರಿ—ಗಾ—ಗಿ ....

———

ಕಾರ್ಯಕುಶಲ ವಾರದ ಮಲ್ಲಪ್ಪನವರು

(ವ್ಯಕ್ತಿಪರಿಚಯ)

ಶ್ರೀ. ಬಿ. ಪಿ. ಎಸ್. ರಾವ್, ಧಾರವಾಡ

ರಾಜಕೀಯ ಪರಾಧೀನತೆ; ಸಾಮಾಜಿಕ ಜಾಗೃತಿಯ ಅಭಾವ; ಬಂಡವಾಳದ ಬಲವೂ ಅಷ್ಟೊಂದು ಇರಲಿಲ್ಲ. ಆದರೂ ವಾರದ ಮಲ್ಲಪ್ಪನವರು ತಮ್ಮ ಕರ್ತೃತ್ವ ಶಕ್ತಿ, ವ್ಯವಹಾರನೈಪುಣ್ಯಗಳಿಂದ, ವರ್ತಕ ಪ್ರಪಂಚದಲ್ಲಿ ಸಮ್ರಾಟರಾಗಿ ಮೆರೆದರು; ಸಂಸ್ಕೃತಿಯ ಸಂವರ್ಧನೆಗೂ ನೆರವಾಗಿ ನಿಂತರು.

ಸಾಲೆಯ ಮಠದ ಮಲ್ಲಯ್ಯ ಸ್ವಾಮಿಗಳು ರುದ್ರಾವತಾರವನ್ನು ತಾಳಿದವರಾಗಿಯೆ ಚೆನ್ನಬಸಪ್ಪನವರ ಮನೆಗೆ ಬಂದರು. ಪಡಸಾಲೆಯಲ್ಲಿ ದಿಂಬಿಗೆ ಆತುಕೊಂಡು ಕುಳಿತ ಚೆನ್ನಬಸಪ್ಪನವರು, ಎದ್ದುನಿಂತು ಅವರನ್ನು ಬರಮಾಡಿಕೊಳ್ಳಬೇಕೆನ್ನುತ್ತಿರುವಾಗಲೇ, ಅಯ್ಯನವರು ಸಿಟ್ಟಿನ ಧ್ವನಿಯಲ್ಲಿ ಕೂಗಿ ಹೇಳಿದರು:

"ನಿಮ್ಮ ಹುಡುಗ ಮಲ್ಲಪ್ಪ, ನಮ್ಮ ಸಾಲೆಗೆ ಬರುವುದು ದೇಡವೇ ಬೇಡ !"

ಚೆನ್ನಬಸಪ್ಪನವರು ಮೆಲುದನಿಯಲ್ಲಿ ಕೇಳಿದರು :

"ಏಕೆ ಅಯ್ಯನವರೇ, ಏನಾಯಿತು ?"

"ಆಗುವುದೇನು, ಅವನ ಕಿಡಿಗೇಡಿತನ ಫನವಾಯಿತು ! ಅವನಿಂದ ನಮ್ಮ ಸಾಲೆಯ ಮಿಕ್ಕ ಹುಡುಗರೂ ಕೆಟ್ಟುಹೋಗುತ್ತಿದ್ದಾರೆ. ಆ ತುಂಟನನ್ನು ಜಾಣನನ್ನಾಗಿ ಮಾಡುವುದು ನನ್ನಿಂದಂತೂ ಸಾಧ್ಯವೇ ಇಲ್ಲ !"

ಚೆನ್ನಬಸಪ್ಪನವರು ಮಲ್ಲಯ್ಯನವರನ್ನು ಸಮಾಧಾನಗೊಳಿಸಿ ಮಠಕ್ಕೆ ಮರಳಿ ಕಳುಹಿದರು. 'ಹುಡುಗ ಹೀಗೆ ಕಿಡಿಗೇಡಿಯಾದರೆ, ಮುಂದೆ ಅತನ ಜೀವನ ಹೇಗೆ?' ಎಂದು ಚಿಂತೆ ಮಾಡುತ್ತ ಕುಳಿತರು.

ಇದೇ ಕಿಡಿಗೇಡಿ ಹುಡುಗ ಮಲ್ಲಪ್ಪನೇ, ಮುಂದೆ ಕರ್ನಾಟಕ-ಮಹಾರಾಷ್ಟ್ರಗಳಲ್ಲಿ, ತನ್ನ ಚರಿತ್ರ ಪ್ರಭಾವವನ್ನು ಜೆನ್ಯಾಗಿ ಮೆರೆಯಿಸಿದ. ಸಿಹಿಯಾಗುವ ಹಣ್ಣು ಮಿಡಿಯಾಗಿರುವಾಗ, ಹುಳಿಯಾಗಿಯೊ ಒಗರಾಗಿಯೊ ಇರುವುದು ನಿಸರ್ಗನಿಯಮ.

ಈ ಕಿಡಿಗೇಡಿ ಹುಡುಗನು ಯಾರು ? ಎಲ್ಲಿಯವನು ? ಹೇಗೆ ಬೆಳೆದನು ? ಬೆಳೆದು ಎಂತಹ ಮಹಾಕಾರ್ಯವನ್ನು ಸಾಧಿಸಿದನು—ಗೊತ್ತೇ ?

ತಿನಯೋಗಿ ಸಿದ್ಧರಾಮನ ಸೊನ್ನಲಾಪುರ, ಇಂದು ನಮ್ಮ ಜನರಿಂದಲೇ 'ಸೊಲ್ಲಾಪುರ' ಎಂದು ಕರೆಯಿಸಿಕೊಳ್ಳುತ್ತಲಿದೆ. ಮೊದಲಿನಿಂದಲೂ ಕನ್ನಡಿಗರ ಮಹಾನಗರವಾದ ಆ ಸೊನ್ನಲಾಪುರ, ಪರಿಸ್ಥಿತಿಯ ಪ್ರಭಾವದಿಂದ ಈಗ ಮಹಾರಾಷ್ಟ್ರಕ್ಕೆ ಸೇರಿ, ಅಲ್ಲಿಯ ಜನರ ಬಾಯಲ್ಲಿ 'ಸೋಲಾಪುರ' ಎಂದಾಗಿದೆ. ಕ್ರಿಸ್ತಶಕದ ೧೯ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಸೊಲ್ಲಾಪುರವು, ತನ್ನ ಹಿಂದಿನ ಸೊನ್ನಲಾಪುರದ ಮಹಾತ್ಮ್ಯವನ್ನೇ ಎಲ್ಲೆಲ್ಲಿಯೂ ಮೆರೆಯಿಸಿತು. ಅದಕ್ಕೆ ಮತ್ತೆ ಅಂತಹ ಫನತೆಯನ್ನು ಒದಗಿಸಿ ಕೊಟ್ಟವರೆಂದರೆ ಶ್ರೀಮಂತ ವಾರದ ಮಲ್ಲಪ್ಪನವರು.

ಸೊಲ್ಲಾಪುರದಲ್ಲಿ ಮೊದಲಿನಿಂದಲೂ ವೀರಶೈವ ವರ್ತಕರ ಮನೆತನಗಳು ಬಹಳ. ಅವುಗಳಲ್ಲಿ ವಾರದವರ ಮನೆತನವೂ ಒಂದು. ಈ ಮನೆತನವು ಎಂದಿನಿಂದಲೂ ಹಣದ ಸಿರಿವಂತಿಕೆಯಿಂದ ಕೂಡಿದುದಲ್ಲ; ಗುಣದ ಸಿರಿವಂತಿಕೆಯಿಂದ ಕೂಡಿದುದು, ದೈವದ ಮಹಾತ್ಮರ ಪ್ರಸಾದ ಸಂಪತ್ತನ್ನು ಹೊಂದಿದುದು; ಅನ್ನ-ವಸ್ತ್ರದಾನಕ್ಕೆ ಹೆಸರಾದುದು. ಈ ಮನೆತನದಲ್ಲಿ ಹುಟ್ಟಿದ ಚೆನ್ನಬಸಪ್ಪ, ಬಸಪ್ಪ ಎಂಬ ಹೆಸರಿನ ಅಣ್ಣ-ತಮ್ಮಂದಿರಿಬ್ಬರೂ ದೇವಭಕ್ತರು; ಧರ್ಮಾಭಿಮಾನಿಗಳು; ಸತ್ಯ ಪಕ್ಷಪಾತಿಗಳು; ಜಂಗಮದಾಸೋಹ ನಿತ್ಯವೂ ಇವರ ಮನೆಯಲ್ಲಿ ನಡೆಯುತ್ತಿತ್ತು. ಮಧ್ಯಾಹ್ನ ಎಷ್ಟು ಜನ ಬರುವರೋ, ಅಷ್ಟೆಲ್ಲರಿಗೂ ಊಟಕ್ಕೆ ಮುಕ್ತದ್ವಾರ.

ಈ ಅಣ್ಣ-ತಮ್ಮಂದಿರಲ್ಲಿ, ತನ್ನ ಬಸಪ್ಪನವರ ಒಬ್ಬನೆ ಒಬ್ಬ ಗಂಡುಮಗನೆಂದರೆ, ಈ ಮೊದಲು ಪರಿಚಿತನಾದ ಕಿಡಿಗೇಡಿ ಮಲ್ಲಪ್ಪ. ಮಲ್ಲಪ್ಪನನ್ನು, ತಂದೆ ಬಸಪ್ಪನವರಿಗಿಂತ ಹೆಚ್ಚಾಗಿ ಮೊಡ್ಡಪ್ಪ ಚೆನ್ನಬಸಪ್ಪನವರು ಪ್ರೀತಿಸುತ್ತಿದ್ದರು. ಆ ಒಳನೋಟದ ಶಿವಭಕ್ತ, ಈ ಕಿಡಿಗೇಡಿ ಮಲ್ಲಪ್ಪನ ದಿವ್ಯ ಭವಿಷ್ಯವನ್ನು ಮೊದಲೇ ಅರಿತುಕೊಂಡಿದ್ದನೆನೋ !

ಚೆನ್ನಬಸಪ್ಪನವರು ಚಿಕ್ಕ ಮಲ್ಲಪ್ಪನನ್ನು ಬೇರೆಯ ಶಾಲೆಗೆ ಹಾಕಿದರು. ವಿದ್ಯಾರ್ಥಿ ದಶೆಯಲ್ಲಿಯೆ ಮಲ್ಲಪ್ಪನಿಗೆ ಮದುವೆಯನ್ನು ಮಾಡಿದರು. ಮದುವೆಯ ಕಾಲದಲ್ಲಿ ಮಲ್ಲಪ್ಪ ಕೇವಲ ಒಂಬತ್ತು ವರ್ಷದವ. ಚಿಕ್ಕತನದಲ್ಲಿಯೇ ಮದುವೆ ಮಾಡುವುದು ನಮ್ಮ ಹಿಂದಿನ ಕಾಲದ ಪದ್ಧತಿ. ಇಂತಹ ಮದುವೆಯಿಂದ ಗಂಡ-ಹೆಂಡಿರಲ್ಲಿ ಸ್ನೀತಿ ಬೆಳೆದು, ಅವರ ಬಾಳು ಸವಿಮುಂಬಿ ಸಾಗುವುದೆಂದು ಅಂದಿನವರ ತಿಳಿವಳಿಕೆ.

ಸೀತಾರಾಮಪಂತ ಗುರುಗಳ ಶಾಲೆಯಲ್ಲಿ ಮಲ್ಲಪ್ಪನ ಕಿಡಿಗೇಡಿತನ ಕಡಮೆಯಾಗತೊಡಗಿತು. ಅವರು ಆಗಾಗ ನಿವರಿಸಿ ಹೇಳುತ್ತಿದ್ದ 'ರಾಮಾಯಣ' 'ಭಾರತ' ಗಳಲ್ಲಿಯ ಸ್ವಾರಸ್ಯ ಪ್ರಸಂಗಗಳು, ಮಲ್ಲಪ್ಪನ ಎಳೆಯ ಮನದ ಮೇಲೆ ತುಂಬ ಪರಿಣಾಮವನ್ನು ಬೀರಿದುವು. ಮಲ್ಲಪ್ಪನು ಸ್ವಭಾವತಃ ಬುದ್ಧಿಶಾಲಿ. ಆತನ ಒಲವನ್ನರಿತು ಕಲಿಸುವ ಗುರುಗಳು ಅವನಿಗೆ ದೊರೆತರು. ಆಗ ಅವನ ಮನದ ಮೋಡಿಯೆ ಬೇರೆ ಬಗೆಯದಾಯಿತು. ಶಾಲೆಯ ಅಭ್ಯಾಸವನ್ನು ತಪ್ಪದೆ ಮಾಡ ತೊಡಗಿದ; ಜಾಣಹುಡುಗರಲ್ಲಿ ಮೊದಲಿಗನಾಗಿ ನಿಂತ.

ಮಲ್ಲಪ್ಪನಿಗೆ ವ್ಯವಹಾರದ ಮಟ್ಟಿಗೆ ಕನ್ನಡ ಮರಾಠೀ ಓದು-ಬರೆಹ, ಗಣಿತ, ಜಮಾಖರ್ಚು ಇವುಗಳು ಅವಗತವಾದುವು. ಇಂಗ್ಲಿಷ್ ಕಲಿಯಬೇಕೆಂದು ಆತನಿಗೆ ಆಶೆ; ಆದರೆ ಸ್ವಧರ್ಮದಲ್ಲಿ ಶ್ರದ್ಧೆಯಿರಿಸಿದ ಚೆನ್ನಬಸಪ್ಪನವರು ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಕ್ರೈಸ್ತಧರ್ಮ ಪ್ರಸಾರದ ಅಪೇಕ್ಷೆಯಿಂದ ನಡೆಯಿಸುತ್ತಿದ್ದ ಮಿಶನರಿಗಳ ಶಾಲೆಗೆ, ಅವನನ್ನು ಕಳುಹುವುದೆಂದರೆ, ಅದೊಂದು ಮಹಾಅಪರಾಧ— ಎಂದು ಅವರು ನಂಬಿದ್ದರು.

ಚೆನ್ನಬಸಪ್ಪನವರು ಮಹಾಧರ್ಮಶೀಲರು. ತಮಗಿದ್ದ ಒಬ್ಬನೇ ಒಬ್ಬ ಮಗನು ದುರ್ಮಾರ್ಗಿಯಾದುದುದರಿಂದ, ಅವನು ಸಾಯುವ ವರೆಗೂ ಅವನೊಂದಿಗೆ ಮಾತನಾಡಲಿಲ್ಲ; ಕಣ್ಣೆತ್ತಿ ಅವನನ್ನು ನೋಡ ಲಿಲ್ಲ. ನಡುವರಯದಲ್ಲಿಯೆ ಅವನು ತೀರಿಹೋದರೂ, ಚೆನ್ನಬಸಪ್ಪ ನವರು ದುಃಖಿಸಲಿಲ್ಲ; ಪಾಪಿಯ ಸಂಬಂಧ ಕಡಿಯಿತೆಂದು ಸಮಾಧಾನ ಪಟ್ಟರಂತೆ. ಅವರು ಮಲ್ಲಪ್ಪನನ್ನು ತಮ್ಮ ಹೊಟ್ಟೆಯ ಮಗನಂತೆಯೆ ನೋಡುತ್ತಿದ್ದರು. ಆದುದರಿಂದಲೇ ಮಲ್ಲಪ್ಪ ಬೆಳೆದು ದೊಡ್ಡವನಾಗು ವುದರಲ್ಲಿಯೆ, ಅವರು ತಮ್ಮ ಅಂಗಡಿಗಳ ನೇಲ್ವಿಚಾರಣೆಯನ್ನು ಆತನ ಕಡೆಗೆ ಒಪ್ಪಿಸಿದರು.

ಮಲ್ಲಪ್ಪನವರ ತಂದೆ ಬಸಪ್ಪನವರೂ ಶಿವಶರಣರಂತಿದ್ದರು. ಮೊದಲಿನಿಂದಲೂ ವ್ಯವಹಾರದ ಕಡೆಗೆ ಅಷ್ಟೊಂದು ಎಳೆತವೇ ಅವರಿ-ಗಿರಲಿಲ್ಲ. ಆದುದರಿಂದ ಅವರೂ ಈಗ ತಮ್ಮ ಕಿರಾಣಿಯಂಗಡಿಯ ಕಾರ್ಯಭಾರವನ್ನು ಮಗನ ಕಡೆಗೆ ಒಪ್ಪಿಸಿದರು. ಎರಡೂ ಅಂಗಡಿ ಗಳನ್ನೂ, ತರುಣ ಮಲ್ಲಪ್ಪ ಶ್ರದ್ಧೆಯಿಂದ ನೋಡಿಕೊಳ್ಳತೊಡಗಿದ.

ಮಲ್ಲಪ್ಪನ ವ್ಯವಹಾರ ಬುದ್ಧಿ ಜಾಗೃತಗೊಂಡಿತು. ಎರಡೂ ಅಂಗಡಿಗಳಲ್ಲಿಯ ಹಳೆಯ ಕೊಳೆಯನ್ನೆಲ್ಲ ತೆಗೆದು, ಹೊಸ ರೀತಿಯಿಂದ ಅವುಗಳನ್ನು ನಡೆಯಿಸತೊಡಗಿದ. ಮಲ್ಲಪ್ಪನ ದೈವದ ಕೈವಾಡವೊ, ಅವನ ವ್ಯವಹಾರದ ಸಹಜ ನೈಪುಣ್ಯದ ಮಹಿಮೆಯೊ; ಆತನ ವ್ಯವ-ಹಾರ ಬೆಳೆಯತೊಡಗಿತು. ಸ್ವಲ್ಪ ಕಾಲದಲ್ಲಿಯೆ ಸೊಲ್ಲಾಪುರದ ಪೇಟೆಯಲ್ಲಿ ಮಲ್ಲಪ್ಪನ ಪ್ರಾಮಾಣಿಕ ವ್ಯವಹಾರದ ಕೀರ್ತಿಯು ಹಬ್ಬಿತು. ಜನರು ಮಲ್ಲಪ್ಪನನ್ನು 'ಮಲ್ಲಪ್ಪ ಅಣ್ಣನವರು' ಎಂದು ಕರೆಯತೊಡಗಿದರು.

ಮಲ್ಲಪ್ಪ ಅಣ್ಣನವರಿಗೆ ೨೦ ವರ್ಷದ ವಯಸ್ಸು. ಆಗ ಅವರಿಗೆ ಗಂಡುಮಾಲೆಯ ರೋಗ ಗಂಟುಬಿದ್ದಿತು. ರೋಗ ಕೆಟ್ಟುದು. ಮನೆ-ತನಕ್ಕೆ ಒಬ್ಬನೇ ಒಬ್ಬ ಮಗನಾದ ಮಲ್ಲಪ್ಪನವರಿಗೆ ತಗುಲಿದ ಈ ರೋಗ, ತಂದೆ-ದೊಡ್ಡಪ್ಪಂದಿರನ್ನು ಗಾಬರಿಗೊಳಿಸಿತು. ಕೂಡಲೆ ಅವ ರನ್ನು ಚಿಕಿತ್ಸೆಗಾಗಿ ಪುಣೆಗೆ ಕಳುಹಿದರು. ರಾಜವೈದ್ಯ ಬಾಪೂಸಾಹೇಬ ಮೇಹಂದಳೆ ಅವರಲ್ಲಿ ಇದ್ದು, ಇವರು ಔಷಧಿಯನ್ನು ತೆಗೆದುಕೊಂಡರು. ಈ ರೋಗ ಮಲ್ಲಪ್ಪನವರ ವ್ಯಕ್ತಿತ್ವವನ್ನು ಬೆಳೆಯಿಸುವುದಕ್ಕಾಗಿ ಬಂದಿ-ದ್ದಿತೇನೋ ! ಮಲ್ಲಪ್ಪನವರು ಪುಣೆಯಲ್ಲಿರುವಾಗ, ಆ ನಗರದಲ್ಲಿಯ ಅನೇಕ ಜನ ರಾಜಕಾರಣಿಗಳ ಮತ್ತು ಸಮಾಜ ಸುಧಾಶಕರ ಪರಿಚಯ ವನ್ನು ಮಾಡಿಕೊಂಡರು. ನ್ಯಾಯಮೂರ್ತಿ ರಾನಡೆಯವರಂತೂ ಮಲ್ಲಪ್ಪನವರನ್ನು ತಮ್ಮವರೆಂದೇ ತಿಳಿದುಕೊಂಡರು; ಆಗಾಗ ಅವರ ಬಳಿ ಬಂದು ಕುಳಿತು, ದೇಶದ ರಾಜಕೀಯ ಸಾಮಾಜಿಕ ವಿಷಯ ಗಳನ್ನು ಕುರಿತು ಚರ್ಚಿಸುತ್ತಲಿದ್ದರು. ಪುಣೆಯಲ್ಲಿ ಮಲ್ಲಪ್ಪನವರ ರೋಗದ ಭಾರ ಇಳಿಯಿತು; ಅವರೆ ಲೋಕಾನುಭವದ ಭಾರ ಬೆಳೆ ಯಿತು. ಮಲ್ಲಪ್ಪನವರ ಮಹಾರಾಷ್ಟ್ರದ ಸ್ನೇಹಿತರು, ಅವರನ್ನು 'ಅಪ್ಪಾಸಾಹೇಬ' ಎಂದು ಕರೆಯತೊಡಗಿದರು.

ಪುಣೆಯಿಂದ ಮಲ್ಲಪ್ಪನವರು ಮುಂಬಯಿಗೆ ಹೋದರು. ಅಲ್ಲಿಯ ತಜ್ಞ ಡಾಕ್ಟರರಿಗೂ ತಮ್ಮ ಪ್ರಕೃತಿಯನ್ನು ತೋರಿಸಬೇಕೆಂದು ಅವರ ಉದ್ದೇಶ. ಈ ಉದ್ದೇಶಸಾಧನೆಯೊಂದಿಗೆ ಮಲ್ಲಪ್ಪನವರಿಗೆ ಆಗ ಇನ್ನೊಂದು ದೊಡ್ಡ ಲಾಭವಾಯಿತು. ಮುಂಬಯಿಯ ಆಗಿನ ಧುರೀಣರಾದ ಡಾ. ಭಾವೂದಾಜಿ, ರಾ. ಬ. ಮಾಂಡಲಿಕ ಮೊದ-ಲಾದವರ ನಿಕಟಪರಿಚಯವಾಯಿತು; ಇಷ್ಟೇ ಅಲ್ಲ, ಅಲ್ಲಿಯ ಸುಪ್ರ-ತಿಷ್ಠಿತ ವ್ಯಾಪಾರಿಗಳ ಪ್ರತ್ಯಕ್ಷಸಂಬಂಧವೂ ಇದರಿಗೆ ಒದಗಿತು. ಈ ಪ್ರವಾಸವನ್ನು ಮುಗಿಸಿಕೊಂಡು ಮಲ್ಲಪ್ಪನವರು ಮರಳಿ ಸೊಲ್ಲಾಪುರಕ್ಕೆ ಬಂದರು. ಮಗನು ಆರೋಗ್ಯಶಾಲಿಯಾಗಿ ಬಂದುದನ್ನು ಕಂಡು ತಂದೆ, ದೊಡ್ಡಪ್ಪ ಇಬ್ಬರೂ ತುಂಬ ಸಂತೋಷಪಟ್ಟರು.

ಮುಂದೆ ಸ್ವಲ್ಪ ದಿನಗಳಲ್ಲಿಯೆ ಚೆನ್ನಬಸಪ್ಪನವರು ಕೈಲಾಸ-ವಾಸಿಗಳಾದರು; ಅವರು ಹೋಗಿ ಎರಡು ವರ್ಷ ಕಳೆಯುವುದರಲ್ಲಿಯೆ ಬಸಪ್ಪನವರೂ ಪರಲೋಕಕ್ಕೆ ತೆರಳಿದರು. ಇವರ ಅಗಲಿಕೆಯು ಮಲ್ಲಪ್ಪನವರಿಗೆ ದುಃಖವನ್ನುಂಟುಮಾಡಿತಾದರೂ, ಕರ್ತವ್ಯದ ಕಡೆಗೆ ದೃಷ್ಟಿಯಿರಿಸಿ ಅವರು ಅದನ್ನು ಸಹನಮಾಡಿಕೊಂಡರು. ಈಗ ಮಲ್ಲಪ್ಪ-ನವರಿಗೆ ಎರಡು ಸಂಸ್ಥೆಗಳನ್ನು ನಡೆಯಿಸಿಕೊಂಡು ಹೋಗುವ ಹೊಣೆ ಗಾರಿಕೆ ಅಂಟಿಕೊಂಡಿತು. ಮನೆತನದಲ್ಲಿ ನಡೆದುಕೊಂಡು ಬರಂದಿರುವ ಧರ್ಮಸಂಸ್ಥೆಯದೊಂದು; ಅಂಗಡಿಗಳ ವ್ಯಾವಹಾರಿಕ ಸಂಸ್ಥೆಯ-ದಿನ್ನೊಂದು. ಮಲ್ಲಪ್ಪನವರು ಎರಡನ್ನೂ ಸರಾಗವಾಗಿ ಸಾಗಿಸಿಕೊಂಡು ನಡೆದರು. ಬೇರೆ ಬೇರೆಯಾಗಿರುವ ತಮ್ಮ ಅಂಗಡಿಗಳ ವ್ಯವಹಾರವನ್ನು ಒಂದುಗೂಡಿಸಿ 'ಚೆನ್ನಬಸಪ್ಪ ವಾರದ' ಎಂಬ ಹೆಸರಿನಿಂದ ಅವರ ಕಾರ್ಯವನ್ನು ವಿಸ್ತಾರವಾಗಿ ಬೆಳೆಸಿದರು.

ಇದೇ ಕಾಲದಲ್ಲಿ ಮುಂಬಯಿ-ಸೊಲ್ಲಾಪುರ ರೈಲುಮಾರ್ಗವು ಪ್ರಾರಂಭವಾಯಿತು. ಇದರಿಂದ ಮಲ್ಲಪ್ಪನವರ ವ್ಯವಹಾರ ಬೆಳೆಯಲು ಹೆಚ್ಚಿನ ಅನುಕೂಲತೆ ದೊರೆತಂತಾಯಿತು. ಕಲಬುರ್ಗಿ, ಒರಂಗಲ್ಲು,

ವಿಜಯವಾಡ, ತಾಂಡೂರು, ಯಾದಗಿರಿ, ಪರಭಣಿ, ತಿಪಟೂರು, ಪೂರ್ಣಾ, ಜಾಲನಾ ಮೊದಲಾದ ವ್ಯಾಪಾರ ಕೇಂದ್ರಗಳಲ್ಲೆಲ್ಲ ಮಲ್ಲಪ್ಪನವರು ಅಡತಿಯ ಅಂಗಡಿಗಳನ್ನು ಸ್ಥಾಪಿಸಿದರು. ಕುಶಲತನದ ಆಡಳಿತದ ಮೂಲಕ, ಎಲ್ಲ ಅಂಗಡಿಗಳೂ ಉತ್ತಮರೀತಿಯಿಂದ ಸಾಗಿದುವು. ಸಾಕಷ್ಟು ಲಾಭವು ಬಂದು ಮನೆಯಲ್ಲಿ ಬೀಳತೊಡಗಿತು. ಇಷ್ಟಾದರೂ ಮಲ್ಲಪ್ಪನವರಿಗೆ ಸ್ವಲ್ಪವೂ ಅಹಂಕಾರವಿರಲಿಲ್ಲ. ಗಿರಾಕಿಗಳೊಂದಿಗೆ ವಿನಯದಿಂದ ವರ್ತಿಸುತ್ತಿದ್ದರು; ಕೆಲಸಗಾರರೊಂದಿಗೆ ವಿಶ್ವಾಸಗಳಿಂದ ನಡೆದುಕೊಳ್ಳುತ್ತಿದ್ದರು. 'ಇವರಂತಹ ಅಚ್ಚುಕಟ್ಟಾದ ನಂಬುಗೆಯ ವ್ಯವಹಾರ ಇನ್ನೆಲ್ಲಿಯೂ ನೋಡಲು ದೊರೆಯದು' ಎಂದು ಆಗಿನ ಸರಕಾರ, ಇವರ ಪ್ರಾಮಾಣಿಕ ವ್ಯವಹಾರದ ಬಗೆಗೆ ಪ್ರಶಸ್ತಿ ಕೊಟ್ಟಿತು. ೧೪೭೬-೭೭ರಲ್ಲಿ ಬಿದ್ದ ಭೀಕರ ಬರಗಾಲದಲ್ಲಿ, ಬಡಜನರಿಗೆ ಇವರಿಂದ ದೊರೆತ ನೆರವು ಅಷ್ಟಿಷ್ಟಲ್ಲ.

ಕ್ರಿ. ಶ. ೧೪೮೩ರಲ್ಲಿ ಮಲ್ಲಪ್ಪನವರು, ಮುಂಬಯಿ ನಗರದಲ್ಲಿಯೂ ತಮ್ಮ ಅಂಗಡಿಯನ್ನು ಪ್ರಾರಂಭಿಸಿದರು. ಇವರ ನಗದು ವ್ಯಾಪಾರ ಪದ್ಧತಿಯು, ಗಿರಾಕಿಗಳಿಗೆ ತುಂಬ ಅನುಕೂಲವಾದುದೆನಿಸಿತು. ಅದು ದರಿಂದ ಸ್ವಲ್ಪ ಕಾಲದಲ್ಲಿಯೇ ಮುಂಬಯಿ ಪೇಟೆಯಲ್ಲಿ ಇವರ ವ್ಯಾಪಾರವು ಬೆಳೆಯಿತು. ಗಿರಾಕಿಗಳೆಲ್ಲರೂ ಇವರ ಅಂಗಡಿಗೇ ಬಂದು ಮುತ್ತುತ್ತಿದ್ದರು. ಇಲ್ಲಿಯವರೆಗೆಂದರೆ ಮಲ್ಲಪ್ಪನವರ ವ್ಯಾಪಾರದ ಅನುಭವ ತುಂಬ ಬೆಳೆಯಿತು. ಅದರೊಂದಿಗೆ ದೇಶದ ರಾಜಕೀಯ ಪಾರತಂತ್ರ್ಯದ ಮೂಲಕ ವ್ಯಾಪಾರಕ್ಕೆ ಒದಗುವ ತೊಡಕು-ತೊಂದರೆಗಳೇನೆಂಬುದೂ ಸಾಕಷ್ಟು ಮನವರಿಕೆಯಾಯಿತು.

ಮಲ್ಲಪ್ಪನವರು, ವ್ಯಾಪಾರದಂತೆಯೆ ಆದರ್ಶ ಬೇಸಾಯವನ್ನು ಮಾಡಿ, ನಾಡಿನ ಒಕ್ಕಲಿಗರಿಗೆ ಮಾರ್ಗದರ್ಶಕರಾಗಬೇಕೆಂದು ಮನಸ್ಸು ಮಾಡಿದರು. ಬಣ್ಣಕ್ಕಾಗಿ ನೀಲಿಯ ಬೆಳೆ, ಎಣ್ಣೆಗಾಗಿ ಸೇಂಗಾದ ಬೆಳೆ, ಸಕ್ಕರೆಗಾಗಿ ಕಬ್ಬಿನ ಬೆಳೆ ಇವುಗಳನ್ನು ಸಮೃದ್ಧವಾಗಿ ಬೆಳೆದು ತೋರಿಸಬೇಕೆಂದು ಆ ಕಾರ್ಯಕ್ಕೆ ತೊಡಗಿದರು. ಅದರಲ್ಲಿ ಸಾಕಷ್ಟು ಯಶಸ್ಸನ್ನೂ ಪಡೆದರು. ತಾವು ಬೆಳೆಯಿಸಿದ ಕಬ್ಬಿನಿಂದ ಸಕ್ಕರೆಯನ್ನು ತಯಾರಿಸಲು, ವಿದೇಶಗಳಿಂದ ಯಂತ್ರಗಳನ್ನು ತರಿಸಿದರು. ಭಾರತದಲ್ಲಿ ಮೊದಲನೆಯ ಸಕ್ಕರೆಯ ಕಾರಖಾನೆಯೆಂದರೆ ವಾರದ ಮಲ್ಲಪ್ಪನವರದು. ಇವರು ಬೆಳೆಯಿಸಿದ ಸೇಂಗಾದ ಜಾತಿ 'ವಾರದ ಸೇಂಗಾ' ಎಂಬ ಹೆಸರಿನಿಂದಲೆ ಜನರಿಗೆ ಪರಿಚಿತವಾಯಿತು.

ಲೋಕಮಾನ್ಯ ಟಿಳಕರ ಸ್ವದೇಶೀ ಚಳವಳಿಯ ಮಹತ್ತ್ವ ಮಲ್ಲಪ್ಪನವರಿಗೆ ಚೆನ್ನಾಗಿ ಗೊತ್ತಾಗಿದ್ದಿತು. ಆದುದರಿಂದ, ಸೊಲ್ಲಾಪುರದಲ್ಲಿ ನೂಲುವ ನೇಯುವ ಗಿರಣಿಯನ್ನು ಪ್ರಾರಂಭಿಸಬೇಕೆಂದು ಮನದಲ್ಲಿ ವಿಚಾರ ಮಾಡಿದರು. ಬೇಗನೆ ಈ ವಿಚಾರವನ್ನು ಕೃತಿಯಲ್ಲಿಯೂ ತಂದು ತೋರಿಸಿದರು. ತಾವು ಶಕ್ಯವಿದ್ದಷ್ಟು ಬಂಡವಳವನ್ನು ಹಾಕಿ ಬೇರೆ ಶ್ರೀಮಂತರಿಂದಲೂ ಬಂಡವಾಳವನ್ನು ದೊರೆಕಿಸಿ, ಗಿರಣಿಯ ಕಾರ್ಯವನ್ನು ಪ್ರಾರಂಭಿಸಿಯೇ ಬಿಟ್ಟರು. ಕರ್ತೃತ್ವಶಾಲಿ ಕನ್ನಡಿಗನೊಬ್ಬನ ಪ್ರಾಮಾಣಿಕ ಪ್ರಯತ್ನದಿಂದ, ಸೊಲ್ಲಾಪುರದಲ್ಲಿ 'ದಿ ರಾಜಾ ಬಹಾದ್ದೂರ್ ನರಸಿಂಗ ಗಿರಜಿ ಮಿಲ್' ಎಂಬ ಗಿರಣಿ ತಲೆಯೆತ್ತಿ ನಿಂತಿತು. ಇದರ ವ್ಯವಹಾರವನ್ನು ಅನೇಕ ಜನರು ಸಂಶಯದಿಂದ ನೋಡುತ್ತಿದ್ದರು; ಆದರೂ ಮಲ್ಲಪ್ಪನವರು ಈ ಗಿರಣಿಯನ್ನು ಲಾಭಕರವಾಗಿ ನಡೆಯಿಸಿದರು.

ಯಾವ ವ್ಯವಹಾರವನ್ನು ಕೈಕೊಂಡರೂ ಮಲ್ಲಪ್ಪನವರಿಗೆ ಸೋಲೆಂಬುದು ಇರಲಿಲ್ಲ. ಧರ್ಮಕಾರ್ಯದಲ್ಲಿಯೂ ಇವರು ತಮ್ಮ ಧನವನ್ನು ಸಾಕಷ್ಟು ವಿನಿಯೋಗಿಸಿದರು. ಬೇಡಲು ಮನೆಗೆ ಬಂದವರನ್ನು ಇವರು ಬರಿಗೈಯಿಂದ ಎಂದೂ ಮರಳಿಸುತ್ತಿರಲಿಲ್ಲ. ಇವರ ಸಹಾಯದಿಂದ ಸೊಲ್ಲಾಪುರದಲ್ಲಿ ಅನೇಕ ಸಾಮಾಜಿಕ, ಶೈಕ್ಷಣಿಕ ಸಂಸ್ಥೆಗಳು ತಲೆಯೆತ್ತಿದುವು.

೧೯೧೦ ನೆಯ ಇಸ್ವಿಯ ಕೊನೆಯ ಭಾಗದಲ್ಲಿ ಮಲ್ಲಪ್ಪನವರು, ತಮ್ಮ ವ್ಯವಹಾರದ ಸಲುವಾಗಿ ಮುಂಬಯಿಗೆ ಹೋದರು. ಅಲ್ಲಿ ಇವರ ಆರೋಗ್ಯವು ದಿನದಿನಕ್ಕೆ ಕೆಡುತ್ತ ಹೋಯಿತು; ತೀರ ಹಾಸಿಗೆಯನ್ನೇ ಹಿಡಿದರು. ಬದುಕುವುದು ಅಸಾಧ್ಯವೆಂದು ಕಂಡು ಬಂದಾಗ, ಇವರನ್ನು ಸ್ಪೇಶಲ್ ಟ್ರೇನಿನಿಂದ ಸೊಲ್ಲಾಪುರಕ್ಕೆ ತರಲಾಯಿತು. ಆಗ ಸೊಲ್ಲಾಪುರದ ಜನತೆಯಲ್ಲಿ ತಲೆದೋರಿದ ಕಳವಳವು ಅಳತೆಯಿಲ್ಲದಂತಹದು. ದಿನಾಂಕ ೧೯-೧೧-೧೧ ರಂದು, ಬೆಳಗಿನಲ್ಲಿ ಮಲ್ಲಪ್ಪನವರು ತಮ್ಮ ಈ ಲೋಕದ ಜೀವನವನ್ನು ಮುಗಿಸಿದರು. ನಾಡಿನಲ್ಲಿ ವ್ಯವಹಾರದ ಅಭಿವೃದ್ಧಿಯನ್ನು ಮಾಡಬೇಕೆಂಬ ಅವರ ಎಷ್ಟು ಕನಸುಗಳು ಬಯಲಾದುವೇನೊ !

ಮರಣಕಾಲದಲ್ಲಿ ಮಲ್ಲಪ್ಪನವರಿಗೆ ಕೇವಲ ೬೦ ವರ್ಷದ ವಯಸ್ಸು. ೧೪೫೧ರಲ್ಲಿ ಈ ಲೋಕಕ್ಕೆ ಬಂದರು; ೧೯೧೧ರಲ್ಲಿ ಹೊರಟು ಹೋದರು. ಇಷ್ಟು ಚಿಕ್ಕ ಅವಧಿಯಲ್ಲಿ ಮಲ್ಲಪ್ಪನವರು ಮಾಡಿದ ಕಾರ್ಯಗಳು ಅತಿಮಾನುಷವೆನಿಸುವಂತಿವೆ. ಮಲ್ಲಪ್ಪನವರು ಹಣವನ್ನು ಹುಲುಸಾಗಿ ಬೆಳೆದರು; ಬೆಳೆದ ಬೆಳೆಯನ್ನು ಸತ್ಕಾರ್ಯಗಳಿಗೆ ವಿನಿಯೋಗಿಸಿದರು. ಧನ್ಯಧನ್ಯ ಕನ್ನಡ ಕಾರ್ಯಕುಶಲ !

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು ! ಪ್ರಾಮಾಣಿಕ ವ್ಯವಹಾರ !!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಮುರುಗಿ ಮುಸಲ್ಲಂ

ಲೇ. ಅಶ್ವತ್ಥ, ಬನಾರಸ

ಗಂಡುಬೀರಿ–ಬಂಜೆಯಾದ ಮೇರಿಯಮ್ಮನ ಹುಟ್ಟಿದ ಹಬ್ಬವನ್ನು, ಆಕೆಯ ಗಂಡ ಜೋಸಯ್ಯ ವಿಜೃಂಭಣೆ–ಸಂಭ್ರಮ-ಗಳಿಂದ ಆಚರಿಸುತ್ತಾನೆ; ಆದರೆ ಎಣಿಕೆಯಿಲ್ಲದಷ್ಟು ಸಂತಾನವನ್ನು ಪಡೆದು ಹೆರಿಗೆಯನ್ನು ನಿಲ್ಲಿಸಿದ ರಾಣಿಹೇಂಟಿ, ಬಂಜೆಯೆಂಬ ಕಾರಣದಿಂದ, ಅಂದಿನ ಹಬ್ಬದೂಟಕ್ಕೆ ಬಲಿಯಾಯಿತು ! ಮಾನವನ ತಲೆಕೆಳಗಾದ ತಿಳಿವಳಿಕೆಯ ಪರಿಣಾಮ !

"ಜೋಸಯ್ಯಾ ! ಜೋಸಯ್ಯಾ !"

"ನಿಂಗೆ ನೂರು ವರ್ಷ ಆಯುಸ್ಸು!" ಚಿಕ್ಕಪೇಟೆಯಲ್ಲಿ ಹೋಗು-ತ್ತಿದ್ದ ಜೋಸಯ್ಯ ಪ್ರೇಮದಾಸ, ಹಿಂದಿರಿಗಿ ನೋಡಿ ನಗುತ್ತ ಹೇಳಿದ.

" ಹಾಗೇನು ?.... ಯಾವತ್ತು ಊಟ ? ಅಥವಾ ತಿಂಡಿಯೋ?" ನಾನೂ ನಕ್ಕೆ.

" ಓಹೋ, ಊಹಿಸೇ ಬಿಟ್ಟಿಯಲ್ಲ, ಸರಿಯಾಗಿ !"

" ಅದೇನು ದೊಡ್ಡ ಸಮಸ್ಯೆ ಬಿಡು. ನೀನು ನನ್ನ ನೆನಸಿ-ಕೊಳ್ಳೋದು ಇಂಥಾದ್ದಕ್ಕೇ— ಅನ್ನೋದು ನಿದ್ದಾಂತವಾಗಿ ಹೋಗಿದೆ. ನಮ್ಮ ದೇವರ ಸತ್ಯ."

" ಇದೇನು, ತಿಂಗಳ ಕೆಳಗೇ ಬರಬೇಕಾಗಿತ್ತಲ್ಲವೆ ? ಇಷ್ಟು ದಿನ ನಿಂತುಬಿಟ್ಟಿ.... ಮಗಳ ಮನೇಲಿ ?"

" ಏನೋ ಇದ್ದುಬಿಟ್ಟಿ; ಈ ಮುದಿ ಹುಂಜ ಎಲ್ಲಿದ್ದರೇನು ಬಿಡು. ನನ್ನ ಮಗಳ್ದು ಕೋಳಿಯ ಸಂಸಾರದ ಹಾಗೇ ಬಲುಚೆಂದ. ಮನೆ-ತುಂಬ ಮಕ್ಕಳು ಮರಿ. ಮೂರು ಹೊತ್ತೂ ತೊಡೆಯ ಮೇಲೇ, ಹೆಗಲ ಮೇಲೇ, ತಲೆಯ ಮೇಲೇ ಹತ್ತಿಕೊಂಡು ಹಗರಣ ಮಾಡ್ತಾ ಇದ್ದುವು. ಹೊರಟಾಗಲೆಲ್ಲ ' ಹೋಗಬ್ಯಾಡ ಅಜ್ಜ, ಇರಜ್ಜ ' ಅಂತ ಅಡ್ಡಿಹಾಕ್ತಾ ಇದ್ದುವು. ನಾನೂ ಸೋಲ್ತಾ ಇದ್ದೆ, ಸಂತೋಷದಿಂದ.... ಹೀಗಾಗಿ ಈ ಐದಾರು ತಿಂಗಳಲ್ಲಿ ನಿನ್ನ ಮನೆಯ ಊಟ ಎಷ್ಟು ಕಳೆದು ಕೊಂಡೆನೋ ಏನೋ!"

" ಹ್ಹಹಾ !"

" ಅದೆಲ್ಲ ಹೋಗಲಿ, ಈಗೇನು ಸಂದರ್ಭ- ಈ ಮುದಿಗೊಡ್ಡನ್ನು ಜ್ಞಾಪಿಸಿಕೊಳ್ಳೋದಕ್ಕೆ ? ಮೇರಿಯಮ್ಮ ಮಾಡೋ ಕೋಳಿಯ ಸಾರೋ, ಪಲ್ಯವೋ ?"

" ಉಹುಂ, ಮೇರಿಯಮ್ಮ ಏನೂ ಮಾಡೋದಿಲ್ಲ; ನಾಡಿದ್ದು ಅವಳ ಹುಟ್ಟಿದ ಹೆಬ್ಬ."

" ಓ.... ಹೂಂ.... ಐವತ್ತು ನಾಲ್ಕನೇದಲ್ಲವೆ ?"

" ಹೂಂ.... ನೀನೂ ಚೆನ್ನಾಗಿ ನೆನಸಿಟ್ಟುಕೊಂಡಿದೀಯೆ."

" ಬೇಡವೆ, ಹೋದಸಾರಿ ಅಂಥಾ ಭಾರಿ ಊಟ ಹೊಡೆದು ? ಅದೂ ನಿನ್ನ ಕೈಯಿನ ಅಡಿಗೆ !"

" ಈ ಸಾರಿ ನನ್ನ ಕೈಯಿನ ಅಡಿಗೆಗಿಂತ ಚೆನ್ನಾಗಿರುತ್ತೆ; ಜಾನ್ ಬಂದಿದ್ದಾನೆ."

" ಏನು, ಜಾನ್ !"

ಜಾನ್ ಜೋಸಯ್ಯನ ಮೊದಲ ಹೆಂಡತಿಯ ಮಗಳಾದ ರೋಜಿಯ ಗಂಡ.

" ರೋಜಿ, ಮಕ್ಕಳೂ ಬಂದಿದ್ದಾರೆ."

" ಓಹೋ, ಬಹಳ ಸಂತೋಷ. ಎಲ್ಲ ಚೆನ್ನಾಗಿದಾರೆ ತಾನೇ ?"

" ಹೂಂ, ಆ ಫೋರಿ ತಾಯಿಯ ದಯದಿಂದ."

" ಅವನು, ಇನ್ನೂ ಬೊಂಬಾಯಿನಲ್ಲಿ.... ಅದೆಲ್ಲಪ್ಪಾ...."

" ಗ್ರೀನ್ಸ್ ಹೋಟೆಲ್."

" ಅಲ್ಲೇ ಇದಾನೇ ?"

" ಹಂ. ಈಗ ಅಸಿಸ್ಟೆಂಟ್ ಕುಕ್ ಆಗಿದಾನಂತೆ."

" ಛೇಷ್ ! ನಾಳೆ ಅವನದ್ದೇ ಕೈವಾಡ ಅನ್ನು."

" ಹುಂ, ಬಾಂಬೆ 'ಮೆನು' ಮಾಡ್ತಾನಂತೆ.... ಮುಖ್ಯವಾಗಿ ' ಮುರುಗಿ ಮುಸಲ್ಲಂ ' ಅಂತ...."

" ಏನು, ಮುರುಗಿ.... ಮುಸಲ್ಲಂ ? ಅಂದ್ರೆ ?"

" ನಂಗೂ ಸರಿಯಾಗಿ ಗೊತ್ತಿಲ್ಲ. ಅದೇನೋ ಉಂಡೆ ಕೋಳೇನೇ ಬೇಯಿಸಿಯೋ ಕರಿದೋ ಮಸ್ತಾಲೆ ತುಂಬಿ, ಏನೇನೋ ಮಾಡೋ ದಂತೆ—ಬಹಳ ರುಚಿಯಾಗಿರುತ್ತಂತೆ. "

" ಊಹೂಂ !"

" ಇದನ್ನು ರುಚಿ ನೋಡೋದಕ್ಕೆ ನೀನು ಇರೋದಿಲ್ಲವೇನೋ ಅಂತ ಯೋಚಿಸ್ತಾ ಇದ್ದೆ, ನೀನು ಕೂಗಿದಾಗ."

" ನೋಡು, ಸಮಯಕ್ಕೆ ಸರಿಯಾಗಿ ಹೇಗೆ ಬಂದಿದೀನಿ !..... ಇದೇನು ರಟ್ಟಿನ ಪೆಟ್ಟಿಗೆ ? ಮೇರಿಯಮ್ಮನಿಗೆ ಹುಟ್ಟಿದ ಹಬ್ಬದ ಉಡುಗೊರೆಯೋ ?"

"ಹುಂ. ನಾಳೆಯ ತನಕ ಅದು ಗುಟ್ಟು, ಅವಳಿಗೆ. ನಿಂಗಲ್ಲ."

ಜೋಸಯ್ಯ ಕೆಂಪು ರಿಬ್ಬನ್ ಬಿಚ್ಚಿ, ಪೆಟ್ಟಿಗೆಯೊಳಗಿನ ಬಿಳಿಯ ನೈಲಾನ್ ಸೀರೆಯನ್ನು ತೋರಿಸಿದ.

"ಚೆನ್ನಾಗಿದೆ. ನಿನ್ನ ಹಾಗೆ ಪ್ರೀತಿಸೋ ಪತಿಯನ್ನು ಪಡೆದ ಮೇರಿಯಮ್ಮ ಬಹಳ ಅದೃಷ್ಟವಂತೆ."

"ಅದೇನೋ ಕಾಣೆ. ಅವಳಿಗೆ ನಾನೇನೂ ಕಡಮೆ ಮಾತ್ರ ಮಾಡಿಲ್ಲ. ಆದರೆ ಮೇರಿತಾಯಿ ಮಾತ್ರ ಕಣ್ತೆರೆದು ಇವಳಿಗೂ ಒಂದು ಮಗುವನ್ನು ದಯೆ ಪಾಲಿಸಿದ್ದರೆ, ಕೊರತೆ ಯಾವುದೂ ಇರ್ತಾ ಇರಲಿಲ್ಲ."

"ನಿಜ, ಕೊರತೆ ಇಲ್ಲದ ಬಾಳೇ ಇಲ್ಲ. ಮೇರಿಯಮ್ಮನೇನೋ ರೋಜಿಯೆ ತನ್ನ ಮಗಳು ಅನ್ನೋ ಹಾಗೇ...."

"ಹೌದು, ತಬ್ಬಲಿಯಾದ ವರ್ಷದ ಮಗೂನ ಚೆನ್ನಾಗಿ ಸಾಕಿ ದಳು; ಆದರೇನು, ತನಗೂ ಒಂದು ಮಗು ಆಗಲಿಲ್ಲವಲ್ಲ— ಅಂತ ಅನ್ನಿಸೋದಿಲ್ಲವೆ? ಹೆಂಗಸಿನ ಎದೆ ಅಲ್ಲವೆ? ಬಂಜೆತನ ಸಾಮಾನ್ಯದ ಬವಣೆಯೇ? ನಂಗೂ ಕೂಡ ಅವಳಲ್ಲಿ ಒಂದು ಗಂಡು ಆದೀತು— ಅಂತ ಬಹಳ ಆಸೆಯಿತ್ತು. ಎಷ್ಟೊ ಪರೀಕ್ಷೆ, ಔಷಧಿ, ಯಾತ್ರೆ ಏನೆಲ್ಲಾ ಮಾಡಾಯ್ತು.....ಹುಂ, ಅದೆಲ್ಲ ಯಾಕೆ ಹಳೇ ಮಾತು, ಈಗ.... ನಾಡಿದ್ದು....ರಾತ್ರಿ ಎಂಟು ಗಂಟೆ....ಮರೀಬೇಡ."

"ನೀನು ಮರೆತರೂ ನಾನು ಮರೆಯೋದಿಲ್ಲ!"

ನನ್ನ ಹಳೆಯ ಗೆಳೆಯ, ಕಂಡಾಗಲೆಲ್ಲ ಊಟಕ್ಕೋ ತಿಂಡಿಗೋ ಕರೆಯುತ್ತಲೇಇದ್ದ. ಮೇರಿಯಮ್ಮನ ಅಡಿಗೆಯ ಆಕರ್ಷಣೆ ಅಷ್ಟಿಷ್ಟಾ-ಗಿರಲಿಲ್ಲ. ಅದರಲ್ಲಿಯೂ ಕೋಳಿಯ ಪದಾರ್ಥಗಳ ತಯಾರಿಕೆಯಲ್ಲಿ ಅವಳದ್ದು ಎತ್ತಿದ ಕೈ. ಇದಕ್ಕೆ ಅವಳ ಚೂಟಯಲ್ಲದೆ ಬೇರೆ ಕಾರಣ ಗಳೂ ಇದ್ದುವು. ಜೋಸಯ್ಯ ಕರ್ನಲ್ ಕಾರ್ತ್‌ರೈಟ್ ಸಾಹೇಬರಲ್ಲಿ ಹನ್ನೊಂದು ವರ್ಷ ಆಡಿಗೆಯವನಾಗಿದ್ದು, ಇಪ್ಪತ್ತುನಾಲ್ಕು ವರ್ಷ ಬಟ್ಲರ್ ಕೆಲಸ ಮಾಡಿ, ಸಾಹೇಬರು ಇಂಗ್ಲೆಂಡಿಗೆ ಹೋದ ಮೇಲೆ 'ರಿಟೈರ್' ಆಗಿದ್ದ; ಮೇರಿಯಮ್ಮನಿಗೆ ಪ್ರವೀಣನ ಸಲಹೆಗಳನ್ನು ಕೊಡುತ್ತಿದ್ದ. ಎರಡನೆಯದೆಂದರೆ ಜೋಸಯ್ಯ ಮಾರ್ಕೆಟ್‌ನಿಂದ ಎಂಥೆಂಥಾದ್ದೋ ಕೋಳಿಮಾಂಸವನ್ನು ತರಬೇಕಾಗಿರಲಿಲ್ಲ; ತಾನೇ ಸಾಕಿದ್ದ ಕೊಳಿಗಳಿಂದ ವಿಧವಿಧವಾದ ಹದವಾದ ಮಾಂಸವನ್ನು ಒದಗಿಸುತ್ತಿದ್ದ.

ಜೋಸಯ್ಯನ ಕೋಳಿಯ ಆಸ್ತಿ ಸ್ವಲ್ಪವಾದುದಾಗಲೀ, ಸಾಮಾನ್ಯವಾದುದಾಗಲೀ, ಆಗಿರಲಿಲ್ಲ. ಸುತ್ತಲೆಲ್ಲ ಹೆಸರುವಾಸಿ ಯಾಗಿದ್ದಿತು. ಕರ್ನಲ್" ಸಾಹೇಬರಿಗೆ ಕೋಳಿ ಸಾಕಣೆಯ ಖಯಾಲಿ ಬಹಳವಾಗಿತ್ತು. ಅವರು ಹೋಗುವಾಗ ಹಂಚಿದ ಕೋಳಿಗಳಲ್ಲಿ, ಐವತ್ತು ಜೋಸಯ್ಯನ ಪಾಲಿಗೆ ಬಂದಿದ್ದುವು. ಅವುಗಳಲ್ಲಿ ಬಿಳಿಯ 'ಲೆಗ್‌ಹಾರನ್,' ಕೆಂಪು 'ರ್ಹೋಡ್ ಐಲೆಂಡ್,' ಟರ್ಕಿ ಮೊದಲಾದು ವುಗಳೂ ಇದ್ದುವು. ಜೋಸಯ್ಯನೂ ಸಾಹೇಬರ ಉತ್ಸಾಹ-ಶ್ರದ್ಧೆ ಗಳನ್ನೇ ಹೊಂದಿ, ಈ ಸಣ್ಣ ಆಸ್ತಿಯನ್ನು ಮುನ್ನೂರಕ್ಕೆ ಮೇಲಾಗಿ ಬೆಳೆಸಿಕೊಂಡಿದ್ದ. ಅವನ ಕೋಳಿಗಳು ಪ್ರದರ್ಶನಗಳಿಗೂ ಹೋಗುತ್ತಿ-ದ್ದುವು. ಎರಡು ವರ್ಷದ ಕೆಳಗೆ 'ರಾಜ' ಹೆಸರಿನ ಲೆಗ್‌ಹಾರನ್ ಹುಂಜ, ಚಾಂಪಿಯನ್ ಬಹುಮಾನವನ್ನು ಪಡೆದಿದ್ದರೆ, ಮುಂದಿನ ಪ್ರದರ್ಶನದಲ್ಲಿ 'ರಾಣಿ' ಹೆಸರಿನ ಅದೇ ಜಾತಿಯ ಹೇಂಟೆ ಸೌಂದರ್ಯ, ತೂಕ, ಆರೋಗ್ಯಗಳಿಗಾಗಿ, ಇನ್ನೂರು ರೂಪಾಯಿ ಪ್ರಥಮ ಬಹು-ಮಾನವನ್ನು ಪಡೆಯಿತು. ಅಲ್ಲದೆ ವರ್ಷದಲ್ಲಿ ಮೂನ್ನೂರು ನಲವತ್ತೇಳು ಮೊಟ್ಟೆಗಳನ್ನಿಟ್ಟು ಸ್ವರ್ಣಪದಕವನ್ನೂ ಪಡೆದಿತ್ತು. ಒಂದು ಬಾರಿ ನಾನು ಜೋಸಯ್ಯನ ಮನೆಗೆ ಹೋಗಿದ್ದಾಗ, ಅವನು ತನ್ನ ಕೋಳಿ ಗಳನ್ನೆಲ್ಲ ತೋರಿಸುತ್ತ, 'ಅಗೋ ನೋಡು, ಅವೇ ರಾಜ ರಾಣಿ—ಜತೆ ಯಾಗಿರೋವು. ಯಾವಾಗಲೂ ಹೀಗೇ. ರಾಜನನ್ನು ಕೆಣಕೋ ಕೋಳಿ ಈ ಗುಂಪಿನಲ್ಲೇ ಇಲ್ಲ. ರಾಣಿಯೋ ಬೇರೆ ಯಾವ ಹುಂಜಾನೂ ಕಣ್ಣೆತ್ತಿಯೂ ನೋಡೋದಿಲ್ಲ. ರಾಜ ಸ್ವಲ್ಪ ಅತ್ತಿತ್ತ ಹೋದಾಗ, ಇನ್ನು ಯಾವುದಾದರೂ ಕಂತ್ರೀಹುಂಜ ಹತ್ತಿರ ಬರೋಣ ಅಂದರೇನು! ರಾಣಿಯೇ ಹಾರಿ ಕೂಗಿ ಕುಕ್ಕಿ ಬಿಡುತ್ತೆ; ರಾಜ ಕೂಡಲೇ ಓಡಿ ಬಂತು ಅಂತ ಇಟ್ಟುಕೊ. ಪ್ಪೋಲಿ ಹುಂಜ ಪರಾರಿಯಾಗದೆ ಇರೋ ಹಾಗೇ ಇಲ್ಲ. ಮುಂದಿನ ವರ್ಷ ರಾಣಿ ಇನ್ನೂ ಹೆಚ್ಚು ಮೊಟ್ಟೆಯಿಟ್ಟು ಪ್ರಪಂಚದ ರೆಕಾರ್ಡ್ ಮುರಿಯ ಬೇಕು – ಅಂತ ನನ್ನ ಇಷ್ಟ. ಇಷ್ಟು ಒಳ್ಳೆಯ ತಳಿಗೆ ಅದು ಸಾಧ್ಯ. ಅದಕ್ಕೆ ಏನೆಲ್ಲ ಮಾಡ್ತೀನಿ, ಬಿಡೋದಿಲ್ಲ,' ಎಂದು ಹೆಮ್ಮೆಯಿಂದ ಹೇಳಿಕೊಂಡ. ನಿಜ, ಆ ಶುಭ್ರ ಬಿಳುಪಿನ, ಸುಂದರವಾದ ಪುಷ್ಟ ಕೋಳಿಗಳ ನಾಟಕೀಯ ನಡಿಗೆ, ಬೆರಗುದೃಷ್ಟಿ, ಕತ್ತಿನ ಗತ್ತು ಎಲ್ಲವೂ ರಾಜ-ರಾಣಿಯರವೇ ಆಗಿದ್ದುವು. ಇವುಗಳ ಸುತ್ತ ಮರಿಗಳ ಪರಿವಾರವೂ ಇದ್ದಿತು. ಬಾಕಿಯ ಕೋಳಿಗಳೂ ಕೂಡ ಕಳಪೆಯೇನಲ್ಲ. ಅವೂ ಆಯಾ ಜಾತಿಯಲ್ಲಿ ಹೆಸರು ಗಳಿಸು ವಂಥವೇ. ನೂರೈವತ್ತು ಇನ್ನೂರು ಮೊಟ್ಟೆಗಳನ್ನಿಡುವ ಹೇಂಟೆಗಳೂ, ಎಷ್ಟೋ ಪಂಥಗಳಲ್ಲಿ ಗೆದ್ದ ಹುಂಜಗಳೂ ಬೇಕಾದಷ್ಟು ಇದ್ದುವು. ಇಂಥ ಆಸ್ತಿಯ ಒಡೆಯ, ತಿಂಗಳಿಗೆ ನೂರೈವತ್ತು ಇನ್ನೂರು ರೂಪಾಯಿ ಗಳನ್ನು ಸುಲಭವಾಗಿ ಸಂಪಾದಿಸುತ್ತ ನೆಮ್ಮದಿಯಾಗಿದ್ದ; ನನ್ನಂಥವ ನನ್ನೂ ಧಾರಾಳವಾಗಿ ಆಗಾಗ್ಗೆ ಆಹ್ವಾನಿಸಿ, ರುಚಿಕರವಾದ ಆಹಾರ ದಿಂದ ತಣಿಸುತ್ತಿದ್ದುದರಲ್ಲಿ ಸಂತೋಷಿಸುತ್ತಿದ್ದ. ಅದಕ್ಕೇ ಅವನು ಕರೆದಾಗಲೆಲ್ಲ. ನಾನು ಇಂದಿನಂತೆಯೇ ನಿರ್ದಾಕ್ಷಿಣ್ಯದಿಂದ ಒಪ್ಪಿ ಕೊಳ್ಳುತ್ತಿದ್ದೆ.

ಅದೇನು, 'ಮುರುಗಿ ಮುಸಲ್ಲಂ' ಅಲ್ಲವೆ— ಜೋಸಯ್ಯ ಹೇಳಿದ್ದು? ಹೆಚ್ಚು ತಿಳಿಯದಿದ್ದರೂ ನಾನು ನುತ್ತೊಮ್ಮೆ ನೆನೆಸಿಕೊಂಡು ಏನೇನನ್ನೋ ಊಹಿಸಿಕೊಂಡು ಚೆಪ್ಪರಿಸಿದೆ; ನಾಲಗೆಯಲ್ಲಿ ನೀರೂರಿತು.

೨

ಹುಟ್ಟಿದ ಹಬ್ಬದ ದಿನ ಹೊತ್ತಿಗೆ ಸರಿಯಾಗಿ ಕಬ್ಬನ್ ಪೇಟೆ ಯಲ್ಲಿ ಅವನ ಮನೆಗೆ ಹೋದಾಗ, ತಿನಿಸಿನ ಸುವಾಸನೆ ನನ್ನನ್ನು ಮುಂಬಾಗಿಲಿನಲ್ಲೇ ಸ್ವಾಗತಿಸಿತು. ಬಳಗೆ ಹಜಾರದಲ್ಲಿ ಊಟದ

ಸಿದ್ಧತೆ ಭರದಿಂದ ಸಾಗುತ್ತಿತ್ತು. ಕರ್ನಲ್ ಸಾಹೇಬರು ಕೊಟ್ಟಿದ್ದ ದೊಡ್ಡ ಅಂಡಾಕಾರದ ಸೇಜು ಚೈನಾ ಪಾತ್ರೆಗಳು, ತಟ್ಟೆ ಬಟ್ಟಲುಗಳಿಂದ ತುಂಬಿ ಹೋಗಿತ್ತು. ಎರಡು ಸಾಲು ಬೋಗುಣಿಗಳು ತಿನಿಸಿನಿಂದ ತುಂಬಿ ಆವಿಯಾಡುತ್ತಿದ್ದುವು. ಮಧ್ಯದಲ್ಲಿ ಐವತ್ತುನಾಲ್ಕು ದಳಗಳ ತಾವರೆಹೂವನ್ನು ಸೂಚಿಸುವ ಸುಂದರವಾದ 'ಕೇಕ್' ಜಾನ್‌ನ ಪ್ರವೀಣತೆ— ಅಭಿರುಚಿಗಳನ್ನು ತೋರಿಸುತ್ತಿತ್ತು; ಪ್ರತಿಯೊಂದು ದಳದ ಮೇಲೂ ಒಂದು ನೋಂಬತ್ತಿ. ಕೇಕಿನ ಎರಡು ಪಕ್ಕಗಳಲ್ಲಿಯೂ 'ಡೇಲಿಯಾ,' 'ಫಾಕ್ಸ್,' 'ಪ್ಯಾನ್ಸಿ' 'ಪಾಪಿ' ಮೊದಲಾದ ಪಾಶ್ಚಾತ್ಯ ಹೂಗಳಿಂದ ಕೂಡಿದ ಹೂದಾನಿಗಳು. ಮೇಜಿನ ಸುತ್ತಲೂ ಕರಿಯ ನುತ್ತಿಮರದ ಕುರ್ಚಿಗಳು. ಒಟ್ಟಿನಲ್ಲಿ ಎಲ್ಲವೂ ಸಾಹೇಬರ ಮನೆಯ ಅಣಿಯೇ— ಜೋಸಯ್ಯನಿಗೆ ಅಭ್ಯಾಸವಾಗಿದ್ದುದು.

ಥಳಥಳ ಹೊಳೆಯುವ ಚಮಚ, ಫೋರ್ಕ್-ಚಾಕುಗಳನ್ನು ಕೈಯಲ್ಲಿ ಹಿಡಿದು, ಒಳಗಿನಿಂದ ಹಜಾರವನ್ನು ಪ್ರವೇಶಿಸುತ್ತಿದ್ದ, ಮಿರಿ ಮಿರಿ ಮಿಂಚುವ ಶೃಂಗಾರವತಿ ನಾದರಿಯ ಬಟ್ಲರ್ ಜೋಸಯ್ಯನನ್ನು ಕಂಡು, ಅಗಲವಾಗಿ ಹಲ್ಲು ಕಿರಿದು ನಕ್ಕು ಮುಂದೆ ಬಂದು ಕೈಕುಲುಕಿದ. ನೀರು ತುಂಬಿ, ಮಣಿಕಟ್ಟಿದ ಕಸೂತಿ ವಸ್ತ್ರದಿಂದ ಮುಚ್ಚಲ್ಪಟ್ಟಿದ್ದ ಗಾಜಿನ ಹೂಜಿಯನ್ನು ತರುತ್ತಿದ್ದ ರೋಜಿ 'ಅಂಕಲ್!' ಎಂದು ಆದರಿಸಿ ಮಾತನಾಡಿಸಿದಳು; ಹೇಂಟೆಯನ್ನು ಸುತ್ತುಗಟ್ಟುವ ಮರಿಗಳಂತಿದ್ದ ತನ್ನ ಸಾಲು ಮಕ್ಕಳನ್ನು ನನಗೆ ಪರಿಚಯ ಮಾಡಿಸಿದಳು. ಎಲ್ಲ ಮಕ್ಕಳನ್ನೂ ಬೆನ್ನುತಟ್ಟಿ ಮಾತನಾಡಿಸಿ ಕಿರಿಯದನ್ನು ಎತ್ತಿಕೊಂಡಾಗ, ಮೇರಿಯಮ್ಮ ಇಬ್ಬರು ಅತಿಥಿಗಳೊಂದಿಗೆ ಒಳಕೋಣೆಯಿಂದ ಬಂದಳು. ಜೋಸಯ್ಯನ ಉಡುಗೊರೆಯಾದ ಬಿಳಿಯ ಸೈಲಾನ್ ಸೀರೆಯನ್ನುಟ್ಟು, ಜಾನ್ ಒಪ್ಪಿಸಿದ್ದ ಬಿಳಿಯ ಹರಳಿನ ಬ್ರೋಚನ್ನು ಭುಜದ ಸೆರಗಿಗೆ ಸಿಕ್ಕಿಸಿ, ರೋಜಿಯ ಕಸೂತಿ ಕೆಲಸದ ಬಿಳಿಯ ಬ್ಲೌಸ್‌ತೊಟ್ಟು, ಇಮಿಟೇಶನ್ ಮುತ್ತಿನ ಹಾರಗಳನ್ನು ಕೊರಳಿಗೆ ಸುತ್ತಿ, ಕೆಂಪು ಗುಲಾಬಿಯ ರಾಗಟೆಯನ್ನು ಮುಡಿದಿದ್ದ ಆ ಸ್ಥೂಲ ಕಾಯದ ಗತ್ತು, ಗಮ್ಮತ್ತು, ನನಗೆ ತಟ್ಟನೆ 'ರಾಣಿ' ಹೇಂಟೆಯನ್ನು ನೆನಪಿಗೆ ತಂದಿತು. ಆದರೆ ರಿಕಾರ್ಡ್ ಮೊಟ್ಟೆಗಳನ್ನಿಡಬಹುದಾಗಿದ್ದ ರಾಣಿಯ ಫಲಜಾಹುಳ್ಯವೂ, ಮೇರಿಯಮ್ಮನ ಅರೆಗೆಂಡು ಮುಖಛಾಯೆ ಮತ್ತು ಬಂಜೆತನವೂ ಮನಸ್ಸಿಗೆ ಬಂದು, ಸ್ವಲ್ಪ ಖೇದಗೊಳಿಸದಿರಲಿಲ್ಲ. ಹರ್ಷವನ್ನು ತಂದುಕೊಂಡು ಅವಳನ್ನು ಸಮೀಪಿಸಿ, ನಾನು ತಂದಿದ್ದ ತುರಾಯಿಯನ್ನು ಸಮರ್ಪಿಸಿ, ಹುಟ್ಟಿದ ಹಬ್ಬದ ಪ್ರಯುಕ್ತ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ, ಹಬ್ಬ ಮತ್ತೆಮತ್ತೆ ಬರುತ್ತಿರಲೆಂದು ಆಶಿಸಿ, ಅವಳ ಧನ್ಯವಾದಗಳನ್ನು ಪಡೆದು ಹಿಂದಿರಿಗಿದಾಗ, ಜಾನ್ ಹಜಾರವನ್ನು ಪ್ರವೇಶಿಸುತ್ತಿದ್ದ. ಅವನು ಎರಡು ಕೈಗಳಿಂದಲೂ ತಟ್ಟೆಯೊಂದನ್ನು ಹಿಡಿದಿದ್ದ. ಆ ತಟ್ಟೆಯಲ್ಲಿ ದೊಡ್ಡ ಕೋಳಿಯೊಂದು ನಿಂತಿತ್ತು—ಕೊಕ್ಕಿನಿಂದ ಕಾಲಿನ ಉಗುರಿನವರೆಗೂ ಪೂರ್ತಿಯಾಗಿ—ಜಾನ್ ಆದೇನು ಚಮತ್ಕಾರ ಮಾಡಿದ್ದನೋ ಏನೋ!

'ಮುರುಗಿ ಮುಸಲ್ಲಂ' ಎಂದು ಎರಡು ದಿನದಲ್ಲಿ ಹಲವು ಬಾರಿ ಜಪ ಮಾಡಿದ್ದ ನನಗೆ, ಇದೇ ಅದು ಎಂದು ವಿವರಿಸಬೇಕಾಗಿದ್ದಿತೆ? ನನ್ನ ನಾಲಗೆ ತುಟಿಯನ್ನು ತಾನಾಗಿ ಸವರಿತು. ಜಾನ್ ಅದನ್ನು 'ಕೇಕ್' ಬಳಿಯಲ್ಲಿ ಇಡುತ್ತಿದ್ದಾಗ, ನಾನು ಅವನ ಕುಶಲವನ್ನು ವಿಚಾರಿಸಿ, ಅವನ ಪಾಕಪ್ರವೀಣತೆಯನ್ನು ಪ್ರಶಂಸಿಸಿದೆ. ಅವನು ನಸುನಗುತ್ತ, "ಅಂಕಲ್, ಇನ್ನೂ ರುಚಿನೋಡಿಯೇ ಇಲ್ಲವಲ್ಲ! 'ಮುರುಗಿ ಮುಸಲ್ಲಂ' ಅಂಥ ಅಪೂರ್ವ ಅಡಿಗೆಯೇನಲ್ಲ," ಎಂದು ನಮ್ರತೆಯಿಂದ ಹೇಳಿದ.

ಸಿದ್ಧತೆಯೆಲ್ಲ ಮುಗಿದಮೇಲೆ, ಜೋಸಯ್ಯನ ಮನೆಯ ಸಂಪ್ರದಾಯದ ಆಚಾರಗಳೆಲ್ಲ ನಡೆದುವು. ರೋಜಿ ಹತ್ತಿಸಿದ ಐವತ್ತುನಾಲ್ಕು ಬತ್ತಿಗಳನ್ನು ಊದಿ ಆರಿಸುವಲ್ಲಿ ಮೇರಿಯಮ್ಮ ಆವಿಯ ಯಂತ್ರದಂತೆ ಬುಸುಗುಟ್ಟುತ್ತಿದ್ದಳು. ನಾನು ಅವಳ ಕೆನ್ನೆಗೆ ಮುತ್ತು ಕೊಟ್ಟಾಗ, ಮುಖದ ಪೌಡರನ್ನೂ ಮೀರಿ ಕಾಣುತ್ತಿದ್ದ ಮೇಲುತುಟಿ ಮತ್ತು ಗಲ್ಲಗಳ ಮೇಲಿನ ಸಣ್ಣ ಕೂದಲು, ಮುಚ್ಚಿಬಟ್ಟೊಂದರ ಮೂಲಕ ಬಂದ ದೊಡ್ಡ ಕೂದಲು, ನನ್ನ ಗಮನಕ್ಕೆ ಬರದಿರಲಿಲ್ಲ. ಮೇರಿಯಮ್ಮನ ದೀರ್ಘಾಯುಸ್ಸಿಗಾಗಿ ರುಜಾಶಯಗಳ ಸುರಿಮಳೆಯಾಯಿತು. ಅವಳು ಮುಖ್ಯವಾದ ಜಾಗದಲ್ಲಿ ಕುಳಿತಮೇಲೆ ಊಟ ಮೊದಲಾಯಿತು. ಜೋಸಯ್ಯನಿಂದ ಮೊದಲಾದ ಸಂಸಾರವ ಇತಿಹಾಸ, ವಿನೋದ ಪ್ರಕರಣಗಳು, ಇತರರನ್ನೂ ಕೆಣಕಿ ಅವರವರ ಕತೆ, ವಾಕ್‌ಚಾತುರ್ಯಗಳನ್ನು ಹೊರಗೆಳೆದುವು. ಹರ್ಷ ಅಲ್ಲೆಲ್ಲ ತಾಂಡವಾಡಿತು.

ಊಟ ಮುಂದೆ ಹೋದಂತೆಲ್ಲ ಮಾತು ಹಿಂದುಹಿಂದಕ್ಕೆ ಹೋಗುತ್ತಿತ್ತು. ತಿನಿಸುಗಳು ಒಂದಕ್ಕಿಂತ ಒಂದು ಚೆನ್ನಾಗಿದ್ದಂತಿತ್ತು. ಆಯ್ಕೆಯಲ್ಲಿ ನನಗೆ ಕೊಂಚ ಕಕ್ಕಾಬಿಕ್ಕಿಯಾಗಿಯೇ ಆಯಿತು. ಅದರೆ ಒಂದಂತೂ ಖಂಡಿತ; ಮುರುಗಿ ಮುಸಲ್ಲಂ ಎಲ್ಲಕ್ಕಿಂತ ಮುಖ್ಯವಾದುದು. ಅದು ನನ್ನ ತಟ್ಟೆಗೆ ಬರುವುದಕ್ಕಿಂತ ಮುಂಚೆಯೇ ಅದನ್ನು ದೃಷ್ಟಿಯಿಂದಲೇ ರುಚಿನೋಡುತ್ತಿದ್ದೆ. ಇತರರ ದೃಷ್ಟಿಯೂ ಹಾಗೇ ಹೊರಳುತ್ತಿದ್ದಿತೆಂದು ಊಹಿಸಿದೆ. ಹೀಗಿದ್ದು, ನನ್ನ ಪಕ್ಕದಲ್ಲಿದ್ದ ಜಾನ್ ಚಾಕುವನ್ನು ತೆಗೆದು ಮುರುಗಿಯಲ್ಲಿ ಹೊಳಿ, ಹೋಳನ್ನು ಕತ್ತರಿಸಿ ನನಗೆ ಬಡಿಸಿದಾಗ, ನಾನು ಕೊಂಚ ಆತುರದಿಂದಲೇ ಕೈಹಾಕಿ ಬಾಯಿಗಿಟ್ಟೆ. ನಿಜ, ನನ್ನ ನಿರೀಕ್ಷೆ ಸುಳ್ಳಾಗಿರಲಿಲ್ಲ. ಹೋಳು ಬಹಳ ಸೊಗಸಾಗಿತ್ತು. ಈ ವರೆಗೆ ಜಾನ್ ಇತರರಿಗೂ ಹಂಚಿದ್ದ. ಅವರ ಮುಖಭಾವವೇ ಅರ್ಥಪೂರ್ಣವಾಗಿತ್ತು. ಅತಿಥಿ ಜಾರ್ಜ್ ಜೋರಾಗಿಯೇ ಚಪ್ಪರಿಸಿದ. ನಾನು ಜೋಯ್ಯನನ್ನು ನೋಡಿದಾಗ, ಅವನೂ ನನ್ನ ಕಡೆಯೇ ನೋಡುತ್ತಿದ್ದ.

"ಜೋಸಯ್ಯ, ಅಡಿಗೆಗಳೆಲ್ಲ, ಹಿಂದುಗಳು ಹೇಳೋ ಹಾಗೆ ಸಳಪಾಕವೇ ಆಗಿವೆ. ಅವುಗಳೆಲ್ಲೂ ಈ ಮುರುಗಿ ಮುಸಲ್ಲಂ, ಅಡಿಗೆಗಳ ರಾಣಿಯಾಗಿದೆ. ಮೊನ್ನೆ ನೀನು ತೋರಿಸಿದ ಆಕರ್ಷಣೆ ಎಳ್ಳಷ್ಟೂ

ಟೊಳ್ಳಲ್ಲ ಬಿಡು,'' ಇನ್ನೊಂದು ಹೋಳಿಗೆ ನಾನೇ ಚಾಕುವನ್ನು ಹಾಕುತ್ತ ಹೇಳಿದೆ.

" ಹೂಂ, ನುತ್ತೆ! ಜಾನ್‌ನ ಕೈಚಳಕ ಅಂದಿರಲಿಲ್ಲವೆ? ಅದೆಷ್ಟು ಮಲಾಮತ್ತು ಮಾಡಿದಾನೆ ಅಂತ!'' ಜೋಸಯ್ಯ ತುಂಬಿದ ಬಾಯಿಯಿಂದಲೇ ಗೊಜಗುಟ್ಟಿದ.

'' ಅಭಿನಂದನೆ ಜಾನ್ !'' ನನ್ನಿಂದ.

'' ನಂದೂ ಜಾನ್ !", '' ನಂದೂ!'' ಅತಿಥಿಗಳು ಹೇಳುತ್ತಿದ್ದರು. ಜಾನ್ ನಮ್ರನಾಗಿ ನಸುನಗುತ್ತ, " ಥ್ಯಾಂಕ್ಸ್ ! ನಿಮಗೆಲ್ಲ ಇಷ್ಟವಾಯ್ತಲ್ಲ,'' ಎಂದ; '' ಅಲ್ಲದೆ, ಅಡಿಗೆಯಲ್ಲಿ ಮಾಡೋ ರೀತಿಯೇ ಎಲ್ಲವೂ ಅಲ್ಲ; ಪದಾರ್ಥವೂ ಚೆನ್ನಾಗಿರಬೇಕಲ್ಲ. ಇಲ್ಲಿ ಬಹಳ ಒಳ್ಳೆಯ ಹದವಾದ ಕೋಳಿ ಸಿಕ್ಕಿತು, ಅದೂ ಕಾರಣ,'' ಅಂದ.

" ಜೋಸಯ್ಯನ ಕೋಳಿಗಳು ಅಂದರೆ ಸಾಮಾನ್ಯವೇ !'' ನಾನು ಹೊಗಳಿದೆ. ಜೋಸಯ್ಯನ ಮುಖ ಊರಗಲವಾಯಿತು.

'' ಇದು ಇನ್ನೂ ಬಹಳ ವಿಶೇಷ— ರಾಣಿಯ ಮಾಂಸ ಕಣಯ್ಯಾ !''

" ಏನೂ !'' ನನ್ನ ಕೈಯಲ್ಲಿವ್ವ ಮೂರನೆಯ ಹೋಳು ಹಾಗೇ ತಟ್ಟೆಗೆ ಬಿದ್ದಿತು. '' ರಾಣಿಯ ಮಾಂಸನೇ ! ಆ !''

" ಹ್ಹ ಹ್ಹ ಹ್ಹಾ ! ಪೌಮು !'' ಜೋಸಯ್ಯ ಮೈ ಕುಣಿಸಿ ಕೊಂಡು ನಕ್ಕ. ಮೇರಿಯಮ್ಮನೂ ಜಾನ್ ರೋಜಿಯರೂ ನಕ್ಕರು.

''ಮುನ್ನೂರ ನಲವತ್ತೇಳು ಸೊಟ್ಟಿ ಇಟ್ಟು" ಇನ್ನೂರು ರೂಪಾಯಿ ಪ್ರಥಮ ಬಹುಮಾನ, ಚಿನ್ನದ ಪದಕ....'' ನಾನು ಸಂಬದನನಂತೆ ಕೇಳಿದೆ.

''ಹುಂ. ಹುಂ. ಅದೇ ! ನಾನು ಹುಚ್ಚ ಅಂದುಕೊಂಡಿದಿಯೋ? ಏನಿಲ್ಲ. ಆ ಕತೆ ನಿಂಗೆ ಹೇಳಿಲ್ಲ. ನೀನು ಊರಲ್ಲಿಲ್ಲದಾಗ ನಡೀತು. ಹ್ಹ ಹಾ !"

ನಾನು ಆತುರದಿಂದ ಕೇಳುತ್ತಿದ್ದೆ. ನನ್ನ ಊಟ ನಿಂತು ಹೋಯಿತು. ಜೋಸಯ್ಯ ಮಾತನ್ನು ಮುಂದುವರಿಸಿದ:

'' ರಾಣಿ ಈ ವರ್ಷ ಪ್ರಸಂಚದ ಸೊಟ್ಟಿ ರಿಕಾರ್ಡನ್ನು ಮುರೀಬೇಕು ಅಂದುಕೊಂಡಿರಲಿಲ್ಲವೆ ನಾನು? ನಿಂಗೂ ಹೇಳಿದ್ದೆನಲ್ಲ!"

'' ಹುಂ.''

'' ಅದೆಷ್ಟು ಆರೈಕೆ ಹೆಚ್ಚಿಸಿದೆ ಅಂತೀಯೆ? ರೋಜಿಯನ್ನೂ ಬಾಣಂತನದಲ್ಲಿ ಅಷ್ಟು ಚೆನ್ನಾಗಿ ನೋಡಿಕೊಳ್ಳಲಿಲ್ಲ ಅನ್ನು. ಕಾಳು, ಹಿಟ್ಟು, ಸೊಪ್ಪು, ತಂಗಳುಮಾಂಸ, ಏನೆಲ್ಲ ನಮ್ಮ ವೆಟರ್‌ನರಿ ಡಾಕ್ಟರ್ ಅಂಬೂ ಪಿಳ್ಳೆ ಹೇಳಿದ ಹಾಗೇ, ಹೊತ್ತುಹೊತ್ತಿಗೆ ಸರಿಯಾಗಿ ತೂಕಮಾಡಿ ಕೊಟ್ಟಿ, ಕೈಯಿಂದಲೇ ತಿನ್ನಿಸಿದೆ ಅನ್ನು. ಅದೆಷ್ಟೆಷ್ಟು ಎಚ್ಚರಿಕೆ ವಹಿಸಿದೆನೋ— ಕೇಳಬೇಡ. ನನ್ನ ಗುರಿ—ಸೊಟ್ಟಿ ಗುರಿ— ಮುಟ್ತೀನಿ— ಅಂತ ಭರವಸೇನೇ ಹೊಂದಿದ್ದೆ. ಅದಕ್ಕೆ ತಕ್ಕ ಹಾಗೆ ರಾಣ ದಿನಕ್ಕೊಂದು ಸೊಟ್ಟೀನೂ ತಪ್ಪದೇ ಇಡ್ತಾ ಇತ್ತು. ಹಾಗೇ ಇಟ್ಟಿದ್ದರೆ, ನೋಡು, ಮುನ್ನೂರ ಆರವತ್ತೈದು ಇಡಬೇಕಾಗಿತ್ತು. ಪ್ರಪಂಚದ ರೆಕಾರ್ಡು ಮುನ್ನೂರೈವತ್ತುಮೂರಂತೆ.— ನಂಗೆ ಜಯ ಖಂಡಿತ ಅಂದುಕೊಂಡಿದ್ದೆ.'' ಜೋಸಯ್ಯ ಇನ್ನೊಂದು ಹೋಳನ್ನು ತಿಂದು ತೇಗಿ ಮತ್ತೆ ಮುಂದುವರಿಸಿದ: ''ಆದರೆ, ಮೂರು ತಿಂಗಳಾದ ಮೇಲೆ— ನೀನು ಮಗಳ ಮನೆಗೆ ಹೊರಟ ಕಾಲವಿರಬೇಕು. ಮೊಟ್ಟೆಯ ಕ್ರಮ ಬದಲಾಯಿಸ್ತು. ಮಧ್ಯೆಮಧ್ಯೆ ಒಂದೊಂದು ದಿನ ಇಡ್ತಾಲೇ ಇರಲಿಲ್ಲ. ಇನ್ನೊಂದು ತಿಂಗಳಲ್ಲಿ ಎರಡು ದಿನ ಮೂರು ದಿನಕ್ಕೆ ಒಂದು ಬಾರಿ ಮೊಟ್ಟೆ ಇಡೋದಕ್ಕೆ ಮೊದಲು ಮಾಡೋದೇ ? ಏನು ಹೇಳೋಣ ಗ್ರಹಚಾರನ ! ನಾನೂ ' ಸ್ವಲ ದಿನ ನೋಡೋಣ, ಮೊಟ್ಟೆ ಇಟ್ಟೂ ಇಟ್ಟೂ ದಣಿದಿರಬಹುದು, ಸುಧಾರಿಸಿಕೊಳ್ಳಲಿ ಪಾಪ,' ಅಂತ ಇದ್ರೆ, ಮೊಟ್ಟೆ ಇಡೋದು ನಿಂತೇಹೋಯ್ತು ! ಎರಡು ದಿನ, ಮೂರು, ನಾಲ್ಕು, ಐದು.... ಕಡೆಗೆ ವಾರವಾದರೂ ಜುಂ ಅನ್ನಲೇಕಲ್ಲ ರಾಣಿ. ನೋಡಿದೆಯಾ ಹೇಗಾಯ್ತು ?" ಜೋಸಯ್ಯ ಇನ್ನೊಂದು ಹೋಳಿಗಾಗಿ ಚಾಕು ಹಾಕಿದ. ''ತಿನ್ನಯ್ಯಾ, ನಿನ್ನ ಊಟ ಸಾಗ್ತಾಲೇ ಇಲ್ಲ— ಇನ್ನೊಂದು ಹೋಳು ? ಓ, ಹಿಂದಿನದೇ ತಟ್ಟೆಯ ಮೇಲಿದೆ. ಹೊಡಿ, ಹೊಡಿ. ಕತೆ ಕೇಳ್ತಾ."

'' ಡಾಕ್ಟರಿಗೆ ತೋರಿಸಬೇಕಾಗಿತ್ತು," ನಾನು ಅವನ ಸಲಹೆಗೆ ಗಮನ ಕೊಡದೆ ಹೇಳಿದೆ.

'' ನಾನೂ ಅಲ್ಲಿಗೇ ಬರ್ತಾ ಇದೀನಿ. ಅದರ ಆರೋಗ್ಯವೇನು ಕೆಟ್ಟಿರಲಿಲ್ಲ. ಜೋರಾಗೇ ಬೆಳೀತಾ ಇತ್ತು ಅನ್ನು. ಹ್ಹ ಹಾ !" ಜೋಸಯ್ಯ ನಗುತ್ತಲೇ ಹೋಳೊಂದನ್ನು ಅಗಿದು ನುಂಗಿ ನೀರು ಕುಡಿದ.

'' ಇನ್ನೂ ಒಂದು ವಿಚಿತ್ರವೇನಾಯ್ತು ಅಂತೀಯೋ ? ರಾಣೇನ ಎಡೆಬಿಡದೆ ಇರ್ತಾ ಇದ್ದ ರಾಜ, ಅದರ ಮೇಲೆ ಹತ್ತೋದಿರಲಿ, ಹತ್ತಿರ ಇರೋದನ್ನೂ ಬಿಟ್ಟು, ಕಂತ್ರೀಹೆಣ್ಣು ಕೋಳಿಗಳನ್ನು ಹುಡುಕಿಕೊಂಡು ಹೋಗೋಕೆ ಆರಂಭಿಸಿತು !"

'' ಓ!"

'' ರಾಣಿ ಮುದಿಯಾಗಿತ್ತು ಅಂದುಕೋಬೇಡ. ಅದಕ್ಕೆ ನಡುಯೌವನವೇ. ಆದರೇನು, ರಾಜ ಹತ್ತಿರ ಇಲ್ಲದೆ ಇದ್ದರೂ, ಕಂತ್ರಿ ಹುಂಜ ಕೂಡ ರಾಣಿ ಬಳಿಗೆ ಬಂದು ಕುಕ್ಕಿಸಿಕೊಳ್ತಾ ಇರಲಿಲ್ಲ. ಆಗ ಇದೇನೋ ಬಲವಾದ ರೋಗ—ಹೀಗೆ ಸೊಡ್ಡು ಆಗ್ತಾ ಇದೆಯಲ್ಲ, ಇನ್ನು ತಡೆದರೆ ರೆಕಾರ್ಡು ಕೆಟ್ಟೀತು— ಅಂತ ಭಯಪಟ್ಟು, ಅಂಬೂ ಪಿಳ್ಳೆ ಹತ್ತಿರಕ್ಕೆ ತಗೊಂಡು ಹೋದೆ ರಾಣೇನ. ಪರೀಕ್ಷೆನೂಡಿ ಏನು ಹೇಳಿದರು ಗೊತ್ತೇ ? ಹ್ಹ ಹ್ಹಾ !"

ನುನೆಯವರೆಲ್ಲ ಜೋಸಯ್ಯನೊಡನೆ ನಕ್ಕರು.

'' ರಾಣಿ, ರಾಜ ಆಗ್ತಾ ಇದೆ ಅಂತ !"

ಈಗ ಅತಿಥಿಗಳೂ ನಗುವಿನಲ್ಲಿ ಸೇರಿಕೊಂಡರು. ನನಗೂ ಈ ಊದೆ ಹೊಳೆದಿತ್ತು.

"ಅದನ್ನು ಕೇಳಿದಾಗ ಅಳಬೇಕೋ ನಗಬೇಕೋ ಗೊತ್ತಾಗಲಿಲ್ಲ. ಹ್ಹ ಹಾ !..... ಹಾಗೂ ಡಾಕ್ಟರಿಗೆ 'ಇದನ್ನು ಹೆಣ್ಣಾಗಿಸೋದಕ್ಕೆ ಔಷಧಿ ಇಲ್ಲವೇ ಡಾಕ್ಟರೆ, ಏನಾದರೂ ಮಾಡಿ?' ಅಂತ ಅಂದೆ. ಅವರೂ ಅದೇನೇನೋ ಇಂಜಕ್ಷನ್ ಕೊಟ್ಟರು. ಇಲಾಜು ಮಾಡಿದರು. ನೋಡೋ ಅಷ್ಟು ದಿನ ನೋಡಿ ಕಡೆಗೆ ಕೈಬಿಟ್ಟರು.... ನನ್ನ ರೆಕಾರ್ಡ್ ಯಾವಾಗಲೋ ಹಾಳಾಗಿತ್ತು.... ಗೊಡ್ಡು ಕೋಳಿ ಮತ್ತೆ ರಾಣಿಯೂ ಆಗಲಿಲ್ಲ, ರಾಜನಂಥ ಭಾರಿ ಹುಂಜವಾಗುವ ಸೂಚನೆಯೂ ಕಾಣಲಿಲ್ಲ. ನಾನೂ ಸಾಕಾದಷ್ಟು ಕಾಲ ನೋಡಿ ಸುಮ್ಮನಾದೆ..... ಇಗೋ, ಈಗ ಜಾನ್ 'ದೊಡ್ಡ ಕೋಳಿ ಬೇಕು ಮುರುಗಿ ಮುಸಲ್ಲಂಗೆ' ಅಂದಾಗ, ಅದನ್ನೇ ತಗೋ ಅಂದೆ."

"ಛೆ ! ಛಿ !"

"ಮತ್ತೆ, ಇನ್ನೇನು ಮಾಡು ಅಂತೀಯ, ಅಂಥ ನಿಷ್ಪ್ರಯೋಜಕ ನಾದ ಕೋಳೀನ ಇಟ್ಟುಕೊಂಡು ? ಬರಿ ಕೂಳು ದಂಡ-ದಿನ ಕಳೆದ ಹಾಗೂ ಬಲಿತು ಕಟ್ರೆಯಾಗಿ ಮಾಂಸವೂ ಕೆಟ್ಟು ಹೋಗ್ತಿತ್ತು. ನಡೆದಾಡ್ತಾ ಇದ್ದ ಮಾಂಸದ ಮುದ್ದೆ—ಮತ್ತಿನ್ನೇನು, ಅದು ?— ತಟ್ಟೆಗೆ ಬಂದರೆ ಏನು ತಪ್ಪು ? ಅಂತೂ ಮೇರಿಯಮ್ಮನ ಹುಟ್ಟಿದ ಹಬ್ಬದಲ್ಲಿ ಒಳ್ಳೇ ಅಡಿಗೆಗಾದರೂ ಆಯ್ತಲ್ಲ-ಹ್ಹ! ಮಾಂಸ ಹದವಾಗಿ ಚೆನ್ನಾಗಿದೆ. ಎಲ್ಲರೂ ತಗೊಳ್ಳಿ ಇನ್ನೊಂದೊಂದು ಚೂರು," ಜೋಸಯ್ಯ ಚಾಕುವನ್ನು ತೆಗೆದುಕೊಂಡ.

ಇದ್ದಕ್ಕಿದ್ದಂತೆಯೇ ನನ್ನ ಹೆಳೆಯ ಹೊಟ್ಟೆನೋವು ಮರುಕಳಿಸಿತು; ಕಣ್ಣು ಮುಚ್ಚಿ, ಹೊಟ್ಟೆ ಹಿಡಿದು, ಮುಖವನ್ನು ಸೊಟ್ಟಗೆ ಮಾಡಿ ನೋವನ್ನು ಸಹಿಸಲು ಯತ್ನಿಸಿದೆ.

"ಏನಾಯ್ತು ?" ಜೋಸಯ್ಯನೆಂದ.

"ಏನು, ?" "ಏನು," ಯಾರು ಯಾರೋ ಕೇಳಿದರು.

"ನಿನ್ನ ಅಪೆಂಡಿಸೈಟಿಸೇ ಇರಬೇಕು." ಜೋಸಯ್ಯನಿಗೆ ಗೊತ್ತಿತ್ತು. ನಾನು 'ಹೌದು' ಎನ್ನುವಂತೆ ತಲೆಯಾಡಿಸಿದೆ. ಅವನೂ ಜಾನ್ ಇಬ್ಬರೂ ನನ್ನನ್ನು ಉಪಚರಿಸಿದರು. ಇತರರು ನನ್ನ ರೋಗದ ವಿಷಯವನ್ನು ವಿಚಾರಿಸಿಕೊಂಡರು.

"ಆಪರೇಷನ್ ಮಾಡಿಸಿಕೊಂಡು ಬಿಡು ಅಂದರೆ, ಸುಮ್ಮನೆ ಹಿಂದೆ ಗೀತಾ ಇದಿಯೆ. ಬಹಳ ಅಪಾಯಕರ ..... ಹುಂ, ಇನ್ನೇನು, ಒಂದು ಚೂರೂ....." ಜೋಸಯ್ಯ ಹೇಳುತ್ತಿದ್ದ. ನಾನು ಅತ್ತಿತ್ತ ತಲೆಯಾಡಿಸಿದೆ.

"ಛೆ, ಇಂಥ ಮುರುಗಿ ಮುಸಲ್ಲಂ ಇನ್ನೆರಡು ಚೂರನ್ನು ನೀನು ತಿನ್ನೋದಕ್ಕಾಗಲಿಲ್ಲವಲ್ಲ, ಹುಂ! ತಿಂದಿದ್ದರೆ ನಂಗೆ ಬಹಳ ತೃಪ್ತಿಯಾಗ್ತಾ ಇತ್ತು." ಜೋಸಯ್ಯ ಖಿನ್ನನಾದ.

ಮಾವ ಅಳಿಯ ನನ್ನನ್ನು ನುಂಚಕ್ಕೆ ಕರೆತಂದರು. ಇತರರೆಲ್ಲ ವ್ಯಸನವನ್ನು ಸೂಚಿಸಿದರು.

"ನೋವು ನಿಲ್ತಾ ಇದೆ. ನನ್ನ ಯೋಚನೆ ಮಾಡಬೇಡಿ," ನಾನು ಸನಾಧಾನ ಹೇಳಿದೆ.

ಅವರ ಊಟ ಮುಂದುವರಿಯಿತು. ●

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು : (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ಸೀಮೆ ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಮೆಚ್ಚುಗಾಣಿಕೆ

ಶ್ರೀ. ಅಮೃತ ಸೋಮೇಶ್ವರ, ಕೋಟೆಗಾರು

ನೀನೋದುವಂತಿಲ್ಲ, ನಿನಗಾಗಿ ಕಟ್ಟಿರುವ
ಈ ಹಾಡ ಬಲ್ಲೆ ನಾನು.
ಆದರೂ ನಿನ್ನೊಂದು ಚೆನ್ನೆನಪು ಹಾಡಿವುದು,
ಅಂತಿರಲು ಮಾಡಲೇನು ?

ಸೋಗೆಗರಿಗಳ ನೆಳಲು ನಲಿದಿರ್ದ ದಾರಿಯಲಿ,
ಮುರಿಜಿಂಕೆಯಂತೆ ನೀನಂದು ಬಂದೆ.
ಹಸುರಿನಗೆಗಳ ಮೇಲೆ ನಿನ್ನ ನೆರಳನು ಕುಣಿಸಿ,
ಸವಿನಗೆಯ ಹೂವನರಳಿಸುತ ಬಂದೆ;

ಬಳಿಯ ಕೇದಗಿಬನದಿ ಮುಳ್ಳುಗಿಡಗಳ ಹೃದಯ
ಪರಿಮಳಿಸಿ ಮನಕೆ ಧೂಪವನಿಕ್ಕಿರೆ,
ತಾಳೆಗುಬ್ಬಿಗಳೊಲಿದು ಜೋಲ್ವಗೂಡಲಿ ಕುಳಿತು,
ಉಯ್ಯಲಾಡುತ ನಕ್ಕು ಕುವಿಯುತ್ತಿರೆ–

ನಿನ್ನ ಮುದ್ದಿನ ಮೇಕೆಯನ್ನರಸಿ ನೀ ಬಂದೆ
ಹುಡುಕುನೋಟವನಟ್ಟಿ ಅತ್ತ ಇತ್ತ.
ಒಡನಾಡಿಯೊಂದಿರಲು, ಜತೆಗೆ ಸರಸವನಾಡಿ
ಹಸುರ ಮೆಲ್ಲುತಲಿತ್ತು ಬೇಲಿಯತ್ತ.

ಆಡ ಕರೆಯುತ ಬಂದ ನಿನ್ನ ಕರೆದುದು ಬೇಗ
ಕಂಪಿನೊಸಗೆಯ ಬೀರಿ, ಹೊಂಗೇದಗೆ.
ಆದರೇಂ, ತುದಿಯಲ್ಲಿ ಮುಳ್ಳ ಹಂದರದಲ್ಲಿ
ಅರಳಿರುವ ಹೂವು ಎಟಕುವುದೆ ಕೈಗೆ ?

ಚಪಲದಲಿ ಎಲೆಗಳನು ಮೆಲ್ಲ ಬಾಗಿಸಹೋಗಿ,
ಗಿಡದುಗುರು ಗೀರಿತ್ತು ನಳಿದೋಳನು.
ಹೂವಿನಾಶೆಯ ಬಿಟ್ಟು ನೀನು. ನಿಲೆ, ನಾ ಬಂದು
ನಿನಗಾಗಿ ಎರಿದೆನು ಕಂಟಕಿಯನು.

ಗಮಗಮಿಪ ಕೇದಗೆಯ ಗೊಂಚಲನು ಸುಲಿದಾಗ,
ಹೊಡೆಯೊಂದು ನಿನ್ನೆಡೆಗೆ ಸಿಡಿದು ಹಾರೆ,
ಆ ಪರಾಗದ ಧೂಲಿ ನಿನ್ನ ಕೆನ್ನೆಯ ಮೇಲೆ
ಹೊನ್ನಹುಡಿಗೆದರಿದೊಲು ದಟ್ಟೈಯಿಸಿರೆ.

ಬಣ್ಣದೇಟಿಗೆ ನಕ್ಕು ಮೊಗವನೊರಸುತ ನಿಂದೆ;
ಆ ನಗುವನೆಂತು ನಾ ಮರೆಯಬಲ್ಲೆ ?
ತಾಳೆಹೂವನು ನೀಡೆ, ಕಣ್ಣಕೊನೆಯಲಿ ಹೊಳೆದ
ಆ ಕೃತಜ್ಞತೆಯ ವಿಸ್ಮರಿಸಲೊಲ್ಲೆ.

ಚಿಗರೆಯುಂದದಿ ಚಿಗಿದು ನಿನ್ನ ನಲ್ಮೆಯ ಮೇಕೆ
ನಿನ್ನ ಬಳಿವಿಡಿದು ಸಾಗೆ,
ಅಡಿನೊಡನಾಡಿ ಮೇವನು ಮರೆತು, ನೋಟವನು
ಕೇಲಿಸಿತು ನಮ್ಮ ಕಡೆಗೆ !

ಜನವರಿ ೧೯೬೦

ಭಾರ್ಗವಿ

(ಪೌರಾಣಿಕ ರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

ದೃಶ್ಯ ೩

[ತಪೋವನದ ಒಂದು ಭಾಗ. ಸುಮನೋಹರ ಪುಷ್ಪಕುಂಡಗಳ ಮಧ್ಯೆ ಒಂದು ಶಿಲಾಸನ. ಸಂಧ್ಯಾಸಮಯ. ಹರಿಣಿ ಶಿಲಾಸನದ ಸನಿಯದಲ್ಲೇ ಮಲಗಿದೆ. ಧ್ಯಾನಾಸಕ್ತಳಾಗಿ ಭಾರ್ಗವಿ ಕುಳಿತಿರುವಳು.

ಭಾರ್ಗವಿ : (ವಿಷಾದದಿಂದ ಕಣ್ತೆರೆವು) ಓ, ಭುವನಸಮಾಯೆ, ಎಂತಹ ರಮ್ಯ ಸಂಜೆ— ಅಚ್ಚಹಳದಿ, ಅಚ್ಚಕೆಂಪು ! ನಾನು-ರೂಪ ರಹಿತೆಯಾದ ನಿನಗೆ ಅರಿಸಿನ ಕುಂಕುಮದ ಪೂಜೆ ನೈಗ್ಯುತ್ತಿಹಳೇನೋ ಪ್ರಕೃತಿ ! ಕೋಟಿ ಕೋಟಿ ಶಶಿ-ರವಿಗಳನ್ನು ತ್ಯಜಿಸಿರುವ ನೀನಾರು, ನೀನಾರು ? ಶುದ್ಧಹೃದಯದಿಂದ ಕೂಗಿದರೆ ಓ ಗೊಡುನೆಯಂತೆ. ದೀನಳಾಗಿ ಚೀರಾಡುತ್ತಿದ್ದರೂ ಏಕೆ ಕರುಣೆ ಬರದು ನಿನಗೆ ? ನಿನ್ನ ಮಹಾದ್ಭುತ ವಿಶ್ವರೂಪ ನೋಡಿ ನುಡಿಸುತ್ತಿರುವ ಕೋಟಿ ಕೋಟಿ ಭಕ್ತರ ನಡುವೆ ನಾನು ಕಣ್ಣಿಗೇ ಕಾಣೆನೇ ? [ಕಣ್ಣಿಂದ ನೀರಿಳಿಯುವುದು]

ದೇಹದಾ ದೇಗುಲದಿ, ಮನವೆ ಪೂಜಾರಿ,
ಅನುದಿನವು ತಪಿಸುತಿವೆ, ನಿನ್ನನೇ ಕೋರಿ,
ಕಂಬನಿಯೆ ಪಾದ್ಯವು, ಕಂಬನಿಯೆ ಅರ್ಘ್ಯವು,
ಕಂಬನಿಯೆ ಅಜಮನ, ಕಂಬನಿಯೆ ಸ್ನಾನ.

ನಿನಗಾಗಿ ಹೊರಬರುವ ನಿಡಿದುಸುರೆ ರಸಧೂಪ ! ಎನ್ನೆದೆಯ ಅಳಲೇ ನಿನಗೆ ದೀಪ ! ಎನ್ನೊಡಲೆ ನೈವೇದ್ಯ, ಎನ್ನಸುವೆ ವೀಳ್ಯ.

ಎನ್ನ ಈ ಜೀವನವೆ ಹೊನ್ನಗಾಣಿಕೆಯು !

ಓ, ಜಗಜ್ಜನನಿ, ಒಮ್ಮೊಮ್ಮೆ ನೀನು ಮಾನವ ಕಲ್ಪಿತ ಭ್ರಮೆಯೊ ಎಂಬ ಶಂಕೆ ಹೆಡೆಯೆತ್ತಿ, ನನ್ನಾತ್ಮನನೆ ಪಲ್ಲಟಿಸಿ ಬಿಡುವುದು. ಆದರೆ ಜಗದ ಈಗಾರುಡಿಯ ನೋಡಿದಂತೆಲ್ಲ, ಗಾರುಡಿಗಳುಂಟೆಂಬ ಭಾವ ದೃಢವಾಗುತ್ತಿದೆ. ಮಿಥ್ಯ ಜಗದಲ್ಲರುವ ಸತ್ಯವೇ ನೀನು. ನಿನ್ನ ಅರುಸುವು ದೊಂದೇ ನನ್ನ ಬಾಳಿನ ಗುರಿಯು. (ಸುತ್ತಲೂ ನೋಡಿ, ನಿಡುಸುಯ್ದು ಕಣ್ಮುಚ್ಚಿ ಭಾವವಶಳಾಗುವಳು. ಕೆಲಕಾಲದನಂತರ ಅತ್ತಣಿಂದ ಶೀಲಾ ಬರುವಳು. ಶೀಲಾ ದುಂಡುಮುಖದ, ಬೊಗಸೆಗಂಗಳ ಚೆಲುವೆ. ಭಾರ್ಗವಿಯ ತೇಜಸ್ಸಾಗಲೀ ಗಾಂಭೀರ್ಯವಾಗಲಿ ಇಲ್ಲ. ಚಿತ್ತಾರದ ಸೀರೆ ಉಟ್ಟು, ಬಣ್ಣಬಣ್ಣದ ಹೂಗಳಿಂದ ಚಿಟ್ಟೆಯಂತೆ ಅಲಂಕರಿಸಿದ್ದಾಳೆ.]

ಶೀಲಾ : (ಕುತೂಹಲದಿಂದ ಭಾರ್ಗವಿಯನ್ನು ಪರೀಕ್ಷಿಸಿ ನಗುತ್ತಾ) ಭಾರ್ಗವಿ, ಓ ಭಾರ್ಗವಿ ! ತಪೂಪೆಗೆ ಕಣ್ಮುಚ್ಚಿಕೊಂಡಿದ್ದಿಯಾ ? ನಿನ್ನ ಹುಡುಕಿ ಸಾಕಾಯಿತು. ಹರಿಣಿಯನ್ನು ಕಂಡು, ಇಲ್ಲಿರಬಹುದೇನೋ ಎಂದು ಬಂದೆ. [ಭಾರ್ಗವಿ ಅಲುಗದಿರುವುದನ್ನು ಕಂಡು ಅಚ್ಚರಿಯಿಂದ ಅವಳ ಕಣ್ಣುಗಳಿಗೆ ಊದುವಳು.] ಅಬ್ಬಾ, ಎಷ್ಟು ಗಟ್ಟಿ ಮನಸ್ಸಮ್ಮಾ ನಿನ್ನದು ! ನಾನಾಗಿದ್ದರೆ ತಡೆಯಲಾರದೆ ನಕ್ಕೇ ಬಿಡುತ್ತಿದ್ದೆ. ಹೂಂ, ಇನ್ನು ಆಟ ಸಾಕು. ಕಣ್ಬಿಡಮ್ಮ ! [ತನ್ನ ಮುಡಿಯಲ್ಲಿದ್ದ ಸೇವಂತಿಗೆಯಿಂದ ಭಾರ್ಗವಿಯ ಹೆಣಿಗೆ ಹೊಡೆಯುವಳು. ಭಾರ್ಗವಿ ಅಚಲಳಾಗಿರುವಳು. ಶೀಲಾ ನಸುಗೋಪದಿಂದ ಮುಖಗಂಟಿಕ್ಕುವಳು.] ಇನ್ನು ಸಾಕಮ್ಮಾ ಭಾರ್ಗವಿ. ಎಷ್ಟುಂತ ಕಾಯಿಸುತ್ತೀಯೆ ! ಕಣ್ಬಿಟ್ಟು ಮಾತಾಡಮ್ಮಾ [ಭಾರ್ಗವಿ ಹಾಗೇ ಇರುವಳು. ಶೀಲಾಳ ಕೋಪಕರಗಿ, ಆರ್ತತೆಯಿಂದ ಬಿಕ್ಕಿ ಬಿಕ್ಕಿ ಅಳುವಳು.] ನನ್ನ ಮೇಲೆ ಕೋಪವೆ ? ನಾನೇನು ತಪ್ಪು ಮಾಡಿದೆನಮ್ಮಾ—ನಿನ್ನ ಈ ನಿಷ್ಠುರವನ್ನು ಹೇಗೆ ಸಹಿಸಲಿ? ನನ್ನ ಕ್ಷಮಿಸಮ್ಮಾ! ನನ್ನ ತಪ್ಪೇನು ಹೇಳಮ್ಮಾ....

ಭಾರ್ಗವಿ : (ಕಣ್ಣಿಂದ ಅನಂದಾಶ್ರು ಇಳಿಯುವುದು. ಶಾಂತಳಾಗಿ ' ಜಗನ್ಮಾಯಾ ' ಎನ್ನುತ್ತಾ ಕಣ್ತೆರೆದು ಅಗಸದತ್ತ ನೋಡುವಳು. ಶೀಲಾಳ ಬಿಕ್ಕನ್ನು ಕೇಳಿ ಗಾಬರಿಯಿಂದ ಅತ್ತ ನೋಡುವಳು.) ಓ, ಇದೇನು ಶೀಲಾ— ಏನು ಅನಾಹುತ ಆಯ್ತು ? ಏಕೆ ಇಷ್ಟು ದುಃಖ ? [ಕರುಣೆಯ ಮೂರ್ತಿಯಾಗಿ ಅವಳ ಮೈದಡಹುವಳು] ಏನಾಯ್ತು ಹೇಳು ಶೀಲಾ ?

ಶೀ : (ಅನುಮಾನದಿಂದ ಅವಳ ಮುಖ ನೋಡುತ್ತ) ನನ್ನ ಮೇಲಿನ ಕೋಪ ಹೋಯ್ತೇ ಭಾರ್ಗವಿ ? ಎಷ್ಟು ಕರೆದರೂ ಮಾತನಾಡದೆ ಹಾಗೆ ನಿಷ್ಠುರವಾಗಿದ್ದರೆ, ನಾನು ಹೇಗೆ ಸಹಿಸಬೇಕು ? ನನಗಂತೂ ತುಂಬಾ ಸಂಕಟವಾಯ್ತು. ನಾನೇನು ತಪ್ಪು ಮಾಡಿದೆನಮ್ಮಾ?

ಭಾ : (ನಸುನಗುತ್ತಾ) ಓ, ಈಗ ಅರ್ಥವಾಯಿತು. ನಿನ್ನ ಮೇಲೇಕಮ್ಮಾ ನನಗೆ ಕೋಪ ? ನಾನು ಏಕಾಗ್ರತೆಯಿಂದ ಯೋಚಿಸಲು ಏಕಾಂತವನ್ನರಸಿ ಇಲ್ಲಿ ಬಂದಾಗ, ನನ್ನನ್ನು ಹುಡುಕಿಕೊಂಡು ಬಂದುದೇ ನಿನ್ನ ತಪ್ಪು. ನನ್ನ ಯೋಚನೆಯಲ್ಲಿ, ನೀನು ಬಂದಿದ್ದು, ಮಾತಾಡಿಸಿದ್ದು ಒಂದೂ ತಿಳಿಯಲಿಲ್ಲ.

ಶೀ : ಸದ್ಯ, ನನಗೇಷ್ಟೋ ಸಮಾಧಾನವಾಯಿತು. ಆದರೆ ನಿನಗೇನಮ್ಮಾ ಅಂತಹ ಯೋಚನೆ ? ಯಾವ ಯೋಚನೆ ?

ಭಾ : ಶೀಲಾ, ನೀನು ಎಂದೂ ಮೈಮರೆತು ಯೋಚಿಸಿಯೇ ಇಲ್ಲವೇ ?

ಶೀ : ನಿನ್ನಂತೆ ಒಬ್ಬಳೇ ಕುಳಿತು ಎಂದೂ ಯೋಚಿಸಿಲ್ಲಮ್ಮಾ! ಈಗ ನಾವಿಬ್ಬರೂ ಇಲ್ಲವೇ— ಹೀಗೆ ಮಾತನಾಡುತ್ತ ಆಡುತ್ತ ಯೋಚಿಸಬಲ್ಲೆ.

ಭಾ : ಓ, ಹಾಗೋ? ಹೋಗಲಿ. ಈಗ ನಿನ್ನ ಯೋಚನೆ ಏನು ಹೇಳು.

ಶೀ : (ಕ್ಷಣಬಿಟ್ಟು ಉತ್ಸಾಹದಿಂದ) ನಿನ್ನ ತಂದೆಯವರ ಶಿಷ್ಯ ನಾಗಿದ್ದ ಸುದೀಪ.... ನೆನಪಿದೆಯೇ ? ಕವಿತೆಗಳನ್ನು ಕಟ್ಟಿ ಹಾಡುತ್ತಿದ್ದ ನಲ್ಲಾ— ಅವನು ರಾಜಸನ್ಮಾನ ಕಡೆದು ಕ್ಷತ್ರಿಯ ಕನ್ಯೆಯನ್ನು ಲಗ್ನ ವಾದನಂತೆ. ಎಲ್ಲರ ಬಾಯಲ್ಲೂ ಅದೇ ಸುದ್ದಿ.

ಭಾ : ಇಷ್ಟೆಯೊ ನಿನ್ನ ಯೋಚನೆ ? ಅದಿರಲಿ, ಅತ್ತ ನೋಡು ಶೀಲಾ. ಸಂಧ್ಯಾಕಾಶದ ಈ ಸೊಬಗನ್ನು ನೋಡು. ಈ ಸೊಬಗನ್ನು ನೋಡುತ್ತಿದ್ದರೆ ನಸ್ಸಿರವೇ ಮರೆತು ಹೋಗುತ್ತಿದೆ.

ಶೀ : ನಿತ್ಯವೂ ನೋಡುತ್ತೇನೆ. ಅದರಲ್ಲಿ ಮೈಮರೆಯುವಂತಹ ಆಶ್ಚರ್ಯವೇನಮ್ಮ.

ಭಾ : (ಚಕಿತಳಾಗಿ) ಹಾಗೆ ನೋಡುವಾಗ ನಿನಗೇನೂ ಅನ್ನಿ ಸುವುದಿಲ್ಲವೇ ? ಇದೇಕೆ ಹೀಗಿದೆ? ಈ ಸೊಬಗಿನ ಸೃಷ್ಟಿಕರ್ತನಾರು? ಎಂಬ ಪ್ರಶ್ನೆಗಳೇಳುವುದಿಲ್ಲವೇ ?

ಶೀ : ಇಲ್ಲಮ್ಮಾ ಇಲ್ಲ. ಸುಖವಾಗಿ ಆಡುತ್ತಪಾಡುತ್ತ ಇರುವು ದನ್ನು ಬಿಟ್ಟು, ಹಾಗೆಲ್ಲ ಯೋಚಿಸುವುದರಿಂದ ಏನು ಫಲ ? ವ್ಯರ್ಥ ಶ್ರಮ, ಅಲ್ಲವೇ ? ಕೋಪಿಸಿಕೋ ಬೇಡವಮ್ಮಾ....

ಭಾ : ಕೋಪವೇಕಮ್ಮಾ. ನಿನ್ನ ಮನಸ್ಸಿನ ಜಾಡನ್ನು ಅರಿತು ಕೊಂಡೆ. ಒಂದು ರೀತಿಯಲ್ಲಿ ನೀನೇನೋ ನನಗಿಂತ ಸುಖಿ. ಹಾರುತ್ತಿ ರುವ ಆ ಚಿಟ್ಟೆಯನ್ನು ನೋಡು. ಆ ದಾಸವಾಳದ ಪುಷ್ಪದ ಮಧು ಹೀರಲು ಧಾವಿಸುತ್ತಿದೆ. ಆದರೆ ಹೂವಿನ ಸುತ್ತಲೂ ನೆಯ್ದಿರುವ ಜೇಡನ ಬಲೆ ಅದಕ್ಕೆ ಕಾಣುತ್ತಿಲ್ಲ. ಒಂದೆರಡು ಕ್ಷಣಗಳಲ್ಲೇ ಬಲೆಗೆ ಬಿದ್ದು, ಬಿಡಿಸಿಕೊಳ್ಳಲಾರದೆ ಗೋಳಾಡುವುದು. ತನ್ನದೇ ತಪ್ಪೆಂದು ಆಗಲೂ ಅದಕ್ಕೆ ತಿಳಿಯುವುದಿಲ್ಲ. ಜೀವನವೂ ಹೀಗೆಯೇ–ಒಮ್ಮೆ ನಗು, ಒಮ್ಮೆ ಅಳು. ನಿಮಿಷದ ಸುಖ, ನಿರಂತರ ಕಷ್ಟ. ಒಮ್ಮೆ ಮಿಲನ, ಚಿರವಿರಹ ! ಕೇವಲ ಸುಖಾನ್ವೇಷಿಯಾದರೆ, ಮಾನವನಿಗೂ ಮೃಗಕ್ಕೂ ಏನು ವ್ಯತ್ಯಾಸ ? (ಗಂಭೀರಳಾಗಿ) ಹುಟ್ಟಿ ಬೆಳೆದು, ಕಲತು ಕೆಲೆದು ಅಗಲಿ ಅತ್ತು ಮಣ್ಣುಗೂಡು ಕೂಡುವುದು—ಇದೇ ಬಾಳ್ವೆಯ ರೀತಿ. ಈ ಮಿಥ್ಯಜೀವನದಲ್ಲಿ ಶಾಶ್ವತತೆ ಯನರಸುವುದೇ ಮಾನವನ ಲಕ್ಷಣ. ಅದಿಲ್ಲದಿದ್ದರೆ ಅವನ ಬಾಳ್ವೆ ಮೃಗದ ಬಾಳ್ವೆಯೇ.

ಶೀ :— (ಮುಖ ದುಮ್ಮಿಸಿ) ಹೌದಮ್ಮಾ, ನಾನು ಅಜ್ಞೆ. ಸುತ್ತುಮಾತಿನಿಂದ ನನ್ನನ್ನು ಮೃಗ ಎಂದು ಬೈದಿಯಾ. ನನ್ನ ಕಂಡರೆ ನಿನಗೆ ಬೇಜಾರಮ್ಮಾ—ನಾನು ಹೋಗ್ತೇನೆ.

ಭಾ:— (ಸ್ನೇಹದಿಂದ ಅವಳ ಕೈ ಎಳೆದು ಕೂರಿಸಿ) ಅಬ್ಬಬ್ಬಾ, ಎಷ್ಟು ಬೇಗ ನಿನಗೆ ಸಿಟ್ಟು ! ನೋಡಿದೆಯಾ ಯಾರಿಗೆ ಕೋಪ ಬಂದಿದೆ ಅಂತ ? ಮಾತಿಗೆ ಮಾತು. ಅದಕ್ಕೆ ಸಿಟ್ಟೇ ? ನಾನೂ ಸಿಟ್ಟುಮಾಡಿ ಕೊಳ್ಳಲೇ ? (ಕೃತ್ರಿಮ ಕೋಪದಿಂದ ಅತ್ತ ತಿರುಗಿ). ನಾನೂ ಹೋಗ್ತೇನಮ್ಮಾ—ನಿನ್ನ ಕೈಲಿ ಮಾತನಾಡೋದಿಲ್ಲ.

ಶೀ:— (ನಗುತ್ತಾ) ನಾನು ಕೋಪಿಸಿಕೊಂಡಿರಲೇ ಇಲ್ಲ ! (ಭಾರ್ಗವಿಯ ಮುಖವನ್ನು ತನ್ನತ್ತ ತಿರುಗಿಸಿಕೊಂಡು) ಒಂದು ವಿಷಯ ಕೇಳಲೇ ? ನೀನು ನಿಜ ಹೇಳ್ಬೇಕು.

ಭಾ:— ಕೇಳಮ್ಮಾ ಕೇಳು. ನಗುನಗುತ್ತಾ ಏನು ಬೇಕಾದರೂ ಕೇಳು.

ಶೀ:— ಮತ್ತೇ....ಮು....ತ್ತೇ.... (ಹತ್ತಿರ ಸರಿದು) ನಿನಗೂ ಸುಮಂತನಿಗೂ ವಿವಾಹವಂತೆ ನಿಜವೇ ?

ಭಾ:— (ಮಿಡುಕಿಬಿದ್ದು, ಮುಖ ಗಂಟಿಕ್ಕುವಳು) ಸುಳ್ಳು, ಖಂಡಿತ ಸುಳ್ಳು !

ಶೀ:— (ಹಾಸ್ಯದಿಂದ) ಲೇ, ಕಳ್ಳಿ ! ನಿನ್ನ ಗುಟ್ಟು ನನಗೆ ಗೊತ್ತು ! ಹುಡುಗಿಯರೆಲ್ಲಾ ಮಾತನಾಡುತ್ತಿದ್ದರು. ಅವನಂತಹ ಯೋಗ್ಯ ದುರ್ಲಭವಂತೆ. ನೀನು ತಾನೆ ಏಕೆ ಬೇಡವೆನ್ನುತ್ತೀಯಾ ?

ಭಾ:— (ಕೆವಿ ಮುಚ್ಚಿಕೊಂಡು ನಿಲ್ಲುವಳು) ಸಾಕು ನಿಲ್ಲಿಸು, ಶೀಲಾ ! ನಾ ಕೇಳಲಾರೆ. ಎಲ್ಲಾ ಸುಳ್ಳು. ಆ ಸುದ್ದಿಕೇಳಿ ನನ್ನ ಮೈಗೆಲ್ಲಾ ಮುಳ್ಳು ಬಂದಂತಾಗಿದೆ !

ಶೀ:— ಅದು ಮುಳ್ಳಿರಲಾರದಮ್ಮಾ— ರೋಮಾಂಚನವಿರ-ಬೇಕು ! ಓ, ಸಂಜೆಗೆಂಪು ನಿನ್ನ ಮುಖಕ್ಕೆ ಓಕುಳಿ ಲೇಪಮಾಡಿದೆ— ಎಷ್ಟು ಚೆಲುವಾಗಿ ಕಾಣುತ್ತಿದ್ದೀಯೆ–ನಿನ್ನ ಜಡೆಯಲ್ಲಿ ಹೂವಿಲ್ಲವಲ್ಲಾ– ಆ ಸೇವಂತಿಗೆ ಹೂವನ್ನು ತರುತ್ತೇನೆ, ಇರು ! (ಉತ್ಸಾಹದಿಂದ ಓಡುವಳು.)

ಭಾ:— ನನ್ನೆದೆಯ ಅಳಲನ್ನು ಅರಿಯದ ಇವಳಿಗೆ ಪರಿಹಾಸ ! ನನ್ನ ಆಲೋಚನೆಯಲ್ಲಿ ನಾನು ಮುಳುಗಿದಾಗ, ಸುತ್ತಲೂ ಹೊಗೆ ಸುತ್ತಿದೆ; ಉಸಿರುಗಟ್ಟಿಸುತ್ತಿದೆ. ಏಕಾಗ್ರಳಾಗಿ ಯೋಚಿಸಲೂ ಅನಿ-ರ್ಬಂಧ ಸ್ವಾತಂತ್ರ್ಯವಿಲ್ಲ. ಅಷ್ಟು ದಿನದಿಂದ ಅಸ್ಪಷ್ಟವಾಗಿ ಗೋಚರಿ-ಸುತ್ತಿದ್ದ ಮಾರ್ಗ ಈಗ ಸ್ಪಷ್ಟವಾಯಿತು. ನಾನು ಈ ರಾತ್ರಿಯೇ ಗೃಹತ್ಯಾಗಮಾಡಿ, ಜಗತ್ಕರ್ತನನ್ನು ಅರಸುತ್ತೇನೆ. ನನ್ನ ಅಸ್ತಿತ್ವವ ಅರಿವೇ ನನಗಿಲ್ಲ— ಒಮ್ಮೆ ನಾನು ಆ ಅನಂತನ ಅಂಶವೆಂದು ಭಾಸ-ವಾಗಿ ಈ ದೇಹಭಾವವೇ ಮರೆಯುವುದು. ಇನ್ನೊಮ್ಮೆ ಈ ದೇಹ ಪಂಜರದಲ್ಲಿ ಬಂಧಿತಳಾಗಿ 'ಭಾರ್ಗವಿ' ಎಂದರೆ 'ಓ' ಗುಡುವೆನು. ಓ, ಶೀಲಾಗೆ ಏನು ಹೇಳಲಿ?— ಬಂದೇಬಿಟ್ಟಳಲ್ಲಾ.

ಶೀ:— (ಹೂಮುಡಿಸಿ) ಈಗ ಸೌಭಾಗ್ಯ ಲಕ್ಷ್ಮಿಯಂತೆ ಕಾಣ್ತೀ ಯಮ್ಮಾ. ಅಮ್ಮ ಕೂಗಿದಳು. ನಾನಿನ್ನು ಬರಲೇ ?

ಭಾ:— ಏನೇನೋ ಮಾತಾಡಿ ನಿನಗೂ ಬೇಸರ ಮಾಡಿದೆ-ನೇನೋ— ಹೋಗಿ ಬಾಮ್ಮಾ. (ಅವಳು ನಾಲ್ಕು ಹೆಜ್ಜೆ ಹೋದ ಮೇಲೆ, ಏನನ್ನೋ ನೆನೆದು ಕೂಗುವಳು) ಶೀಲಾ, ಕ್ಷಣ ನಿಲ್ಲು. ಈ ದಿನವನ್ನು ಮರೆಯದೆ ನೆನಪಿನಲ್ಲಿಡು. (ಯೋಚಿಸುತ್ತಾ) ನನ್ನ ಮನಸ್ಸಿನಲ್ಲಿ ಯಾವುದೋ 'ಸಂಕಲ್ಪವಿದೆ. ನೆರನೇರಿದ ಮೇಲೆ ನಿನಗೆ ಹೇಳುತ್ತೇನೆ.

ಶೀ:— ಏನದು ಭಾರ್ಗವಿ ? ವಿವರಿಸಿ ಹೇಳಮ್ಮಾ !

ಭಾ:— ನಾಳೆ ಬೆಳಗ್ಗೆ ಬಂದು ಅಮ್ಮನನ್ನು ಕಾಣು. ಎಲ್ಲ ತಿಳಿಯುತ್ತದೆ.

ಶೀ:— ನನಗೆಲ್ಲ ಗೊತ್ತಮ್ಮಾ— ನನ್ನ ಸ್ನೇಹ ನಿನಗೆ ಬೇಕಾಗಿಲ್ಲ. ನನ್ನ ಸಂಗಡ ಸರಿಯಾಗಿ ಮಾತನಾಡುವುದೇ ಇಲ್ಲ. (ಮುಖ ಜೋಲು ಹಾಕುವಳು.)

ಭಾ:— ಹಾಗಲ್ಲ ಶೀಲಾ ! ನಿನ್ನೆದುರು ನಾನೆಲ್ಲವನ್ನೂ ಮಾತನಾಡುವುದಿಲ್ಲವೇ ? ಭಾರ್ಗವಿಯನ್ನು ಸದ್ಯಕ್ಕೆ ಮರೆತುಬಿಡು.

ಶೀ:— ನೀನೇ ನನ್ನ ಮರೆಯುವುದು ! ನಿನ್ನ ಮರೆಯುವುದಕ್ಕೆ, ನಾನು ಬೇರೆ ಯಾವ ಯೋಚನೆಯನ್ನೂ ನೂಡುತ್ತ ನೈಮರೆಯುವುದಿಲ್ಲವಲ್ಲ! ಬೆಳಗ್ಗೆ ಅಶ್ರಮದಲ್ಲಿ ಸಿಕ್ತುವೆಯಾ? (ಭಾರ್ಗವಿ ಯೋಚನಾಕ್ರಾಂತಳಾಗಿ ನಿಲ್ಲುವಳು.) ಯಾಕವ್ಮಾ, ಸುಮ್ಮನೆ ನಿಂತುಬಿಟ್ಟೆ ? ಯಾರ ಬಗ್ಗೆಯೋ ತುಂಬಾ ಯೋಚಿಸುತ್ತಿರುವೆಯೆಲ್ಲಾ ?

ಭಾ:— (ಸ್ಮಿತಳಾಗಿ) ಹಾಸ್ಯಮಾಡುವೆಯಾ ? ನಾಳೆ ಬಾ ! ನಮಸ್ತೇ. (ಶೀಲಾ ಪ್ರತಿಪಂದಿಸಿ ಹೋಗುವಳು. ಅವಳು ಹೋದತ್ತ ನೋಡಿ ಭಾರ್ಗವಿ ನಿಡುಸುಯ್ಯುವಳು.) ಅಬ್ಬಾ, ಸುಮಂತನ ವಿಚಾರ ಎತ್ತಿ ಶೀಲಾ ನನ್ನ ಹೃದಯವನ್ನು ಉಲ್ಲೋಲಕಲ್ಲೋಲ ಮಾಡಿಬಿಟ್ಟಳು ! ಈ ರಾತ್ರಿಯೇ ಅದಕ್ಕೆ ಪರಿಹಾರವುಂಟು. ನನ್ನ ನಿರ್ಧಾರದಂತೆ ನಡೆಯುವೆ. (ಆಗಸವನ್ನೀಕ್ಷಿಸುತ್ತಾ) ಓ, ಅಗಮ್ಯ ಗಗನಾಕಾರೇ, ಅನಂತ ವಿಶ್ವಧಾರೆ !

' ನಾ ' ಇಲ್ಲ. ನೀನೆಯೇ ಎಲ್ಲಾ.

ನನ್ನೊಳಿಹ ನೀ ಒಲಿದು, ನಿನ್ನಿರವನೇ ಮರೆಸು; ಆನಂದವಾರಿಧಿಯೊಳ್ನೀ ತಣಿಸು (ಕಣ್ಮುಚ್ಚಿ ಧ್ಯಾನಾಸಕ್ತಳಾಗುವಳು) ಸುಮಂತ ಪ್ರವೇಶಿಸಿ, ಯೋಚನಾಕ್ರಾಂತನಾಗಿ ನಿಧಾನವಾಗಿ ಬರುತ್ತಾನೆ. ಭಾರ್ಗವಿಯನ್ನು ಕಂಡು ಚಕಿತನಾಗುವನು. ಅವಳ ಒಂದು ಮಗ್ಗುಲಲ್ಲಿ ನಿಂತು ಪಿಲ್ಲನೆ 'ಭಾರ್ಗವಿ' ಎಂದು ಕೂಗುವನು.)

ಭಾ:— (ಬೆಚ್ಚಿ ಕಣ್ತೆರೆದು) ಯಾರು ? ಯಾರು ಕೂಗಿದ್ದು ? (ಸುಮಂತ ಬೇಗ ಅವಳ ಹಿಂಬದಿಯ ಮರದಾಚೆ ಮರೆಯಾಗುವ; ಭಾರ್ಗವಿ ಮತ್ತೆ ಧ್ಯಾನಾಸಕ್ತಳಾಗುವಳು.)

ಸು:—ಈಗೇನು ಮಾಡಲಿ ? ಭಾರ್ಗವಿ ಕೋಪಿಸಿಕೊಳ್ಳುವಳೇ? ಇಂತಹ ಸುವರ್ಣಸಂಧಿ ಇನ್ನೆಂದೂ ದೊರೆಯದು. ಭಾರ್ಗವಿಯನ್ನು ನುಡಿಸಿಯೇ ಹೋಗುವೆನು. ನನ್ನ ಹೃದಯದೊಲವನ್ನು ಅವಳಿಗೆ ನಿವೇದಿಸಿ, ಅವಳ ಹೃದ್ಗತವನ್ನು ತಿಳಿಯುವೆ. (ಅವಳ ಇನ್ನೊಂದು ಪಕ್ಕಕ್ಕೆ ಬಂದು) ಭಾರ್ಗವಿ !

ಭಾ:— ಯಾರದು ಮತ್ತೆ ಕರೆದವರು ? (ಎದ್ದುನಿಲ್ಲುವಳು).

ಸು:— (ಮುಂದೆ ಬಂದು) ಕ್ಷಮಿಸು, ಭಾರ್ಗವಿ. ನಾನೇ ಕರೆದವನು. (ಭಾರ್ಗವಿಯ ಮುಖದಲ್ಲಿ ಅಸಮಾಧಾನ ಕಾಣಿಸುವುದು.) ನಿನ್ನ ಏಕಾಗ್ರತೆಗೆ ಭಂಗತಂದ ತಪ್ಪನ್ನು ಕ್ಷಮಿಸು.

ಭಾ:— (ನಿರ್ಭಾವದಿಂದ) ಚಿಂತೆಯಿಲ್ಲ. ಈಗ ಬಂದ ಕಾರಣ ?

ಸು:— (ಕಂಪಿಸಿ, ತಡವರಿಸುತ್ತಾ) ನೀ.... ನೀ....ನು.... ಭಾರ್ಗವಿ.... (ನೆಲ ನೋಡುತ್ತಾ ಚೇತರಿಸಿಕೊಂಡು, ಅರ್ತನಾಗಿ ಅವಳತ್ತ ನೋಡುವ) ಭಾರ್ಗವಿ, ನಿನ್ನೆದುರು ನನ್ನೆದೆಯಳಲನ್ನು ತೋಡಿಕೊಳ್ಳಬೇಕೆಂದು ನನ್ನ ಬಹುದಿನದ ಹಂಬಲ-ಭಾರ್ಗವಿ, ಅರಿತೋ ಅರಿಯದೆಯೋ ನನ್ನ ಹೃನ್ಮನಗಳನ್ನೆಲ್ಲಾ ನೀನೆ ತುಂಬಿದ್ದೀಯೆ. ನಿನ್ನ ನಾಮ ನನಗೆ ನಿತ್ಯನೂತನ ಜಪವಾಗಿದೆ. ಹಕ್ಕಿಯಿಂಚರ ನಿನ್ನ ಧ್ವನಿಯ ಮಂಜುಳತೆಯನ್ನು ನೆನಪಿಸುತ್ತದೆ. ಬಿರಿದ ಮುಗುಳು ನಿನ್ನ ವದನದ ಕೋಮಲತೆಯನ್ನು ನೆನಪಿಸುವುದು. ಪ್ರಕೃತಿಯ ಸೊಬಗಿನ ಸುಧೆಯು ಸಹ ನಿನ್ನೊಲವಿಲ್ಲದೆ ನಿಸ್ಸಾರವಾಗಿದೆ. ನನ್ನ ಹೃದಯವನ್ನೇ ನಿನ್ನೆದುರು ಹಾಸಿದ್ದೇನೆ. ಭಾರ್ಗವಿ, ನನ್ನ ಪ್ರೇಮಕ್ಕೆ ಪ್ರತಿಪ್ರೇಮ ನಿರೀಕ್ಷಿಸಲೇ ? (ಭಾರ್ಗವಿ ಅಪ್ರತಿಭಳಾಗುವಳು. ಬಾಯಿಂದ ಮಾತು ಹೊರಡದು. ಕಣ್ಣಿಂದ ನೀರಿಳಿಯುವುದು.)

ಸು:— (ಸಖೇದಾಶ್ಚರ್ಯದಿಂದ) ಹೀಗೇಕೆ ಭಾರ್ಗವಿ ? ನಾನಾಡಿದ್ದು ಮನಸ್ಸಿಗೆ ನೋವು ಕೊಟ್ಟಿತೇ ? ತಪ್ಪಾಯಿತು, ಕ್ಷಮಿಸು. ನಾನು ಹೋಗುತ್ತೇನೆ. (ವಿಷಾದದಿಂದ ನಾಲ್ಕು ಹೆಜ್ಜೆ ಹೋಗುವನು.)

ಭಾ:— (ನಿಡುಸುಯ್ದು) ನಿನ್ನಪೇನೂ ತಪ್ಪಿಲ್ಲ, ಸುಮಂತ. ಆದರೆ.... ಆದರೆ....

ಸು:— (ಆನಂದಾಶ್ಚರ್ಯದಿಂದ ತಿರುಗಿ) ಹೇಳು ಭಾರ್ಗವಿ ! ಆದರೆ....?

ಭಾ:— (ತಲೆತಗ್ಗಿಸಿ ಗಂಭೀರಳಾಗಿ) ನಾನು ಮನಸ್ಸಿನಲ್ಲಿ ಬೇರೊಬ್ಬರನ್ನು ವರಿಸಿದ್ದೇನೆ; ನನ್ನ ಜೀವನವನ್ನು ಅರ್ಪಿಸಿದ್ದೇನೆ.

(ಸುಮಂತ ನಿರಾಶೆಯಿಂದ ಬವಳಿಬಂದವನಂತೆ ಕುಸಿಯುವ. ಮಾತನಾಡಲು ಯತ್ನಿಸಿ ವಿಫಲನಾಗುವ. ಭಾರ್ಗವಿ ಕರುಣೆಯಿಂದ ಅವನೆಡೆಗೆ ಬರುವಳು) ಏಳು ಸುಮಂತ. ಇಷ್ಟೇಕೆ ದುಃಖಿಸುವೆ ? ಧೈರ್ಯ ತಾಳು.

ಸು:— (ಸುಯ್ದು) ಭಾರ್ಗವಿ.... ನನ್ನ ಹೃದಯವನ್ನೇ ಹಿಂಡಿದಂತಾಗಿದೆ..... ಆದರೆ ಇಷ್ಟು ನಿಜ. ನಿನ್ನ ಆನಂದವೇ ನನ್ನ ಆನಂದ. (ಕಂಪಿತ ಧ್ವನಿಯಲ್ಲಿ) ನಿನ್ನ ಪ್ರೇಮಕ್ಕೆ ಪಾತ್ರನಾದ ಆ ಪುಣ್ಯಶಾಲಿ ಯಾರು ?

(ಭಾರ್ಗವಿ ಆಕಾಶನೋಡುತ್ತ ಸುಮ್ಮನೆ ನಿಲ್ಲುವಳು.)

ಸಂಕೋಚವೇ ? ಸರಿ, ನೀ ಹೇಳದಿದ್ದರೂ ಚಿಂತೆಯಿಲ್ಲ. (ಮುಖ ಬಾಡಿಸಿಕೊಂಡು) ನನ್ನ ತಾಯಿ-ತಂದೆಯರು ಕನ್ಯಾರ್ಥಿಯಾಗಿ ಬರಬೇಕೆಂದಿದ್ದರು. ಅವರನ್ನು ವೆಸದಲು ತಡೆಯಬೇಕು....

(ತಲೆತಗ್ಗಿಸಿ) ಭಾರ್ಗವಿ, ನನ್ನ ಪ್ರೇಮ ಮಾತ್ರ ಅಚಲ. ಪ್ರತಿಪ್ರೇಮದ ಆಶೆಯನ್ನು ಆಳಿಸಿಬಿಡುತ್ತೇನೆ. ನಿನ್ನ ಪ್ರೇಮ ಗಳಿಸಿರುವ ಆ ಧನ್ಯನಿಗೆ ನನ್ನ ಹೃತ್ಪೂರ್ವಕ ಮನ್ನಣೆಗಳು. (ದುಃಖದಿಂದ) ಹೆಣ್ಣಿನ ಪ್ರೇಮ ಬಹು ಹಿರಿದು, ಆದುದರಿಂದ ನಿನ್ನ ಪ್ರೇಮಕ್ಕೇ ಹೆಚ್ಚು ಗೌರವ ಕೊಡುತ್ತೇನೆ.

ಭಾ:— (ಮೆಚ್ಚಿಗೆಯಿಂದ) ಸುಮಂತಾ, ಚಿನ್ನದಂತಹ ಮಾತನಾಡಿದೆ ! ಭಗ್ನಪ್ರೇಮಿಯಾಗಿಯೂ ಹೆಣ್ಣಿನ ಪ್ರೇಮಕ್ಕೆ ಹೆಚ್ಚು ಬೆಲೆ ಕಟ್ಟುವ ನಿನ್ನ ಉದಾರತೆ ನಿನ್ನ ಸುಸಂಸ್ಕೃತಿಯನ್ನು ಸಾರುತ್ತಿದೆ. ಆದರೆ ನಾನೇನು ಮಾಡಲಿ ? ಚಿಕ್ಕಂದಿನಿಂದ ನಿನ್ನನ್ನು ಸೋದರನಂತೆ ಕಂಡೆ. ಸ್ನೇಹವನ್ನು ಪ್ರಣಯಕ್ಕೆಳಸುವುದು ಸರಿಯಲ್ಲ.

ಸು:— ಇಳಿಸುವುದಲ್ಲ ಭಾರ್ಗವಿ, ಏರಿಸುವುದು. ಸ್ನೇಹದ ಮುಂಮೆಟ್ಟಲೇ ಪ್ರಣಯ. ನನಗೆ ಅಸೂಯೆ ಇಲ್ಲ. ಆ ಪುಣ್ಯಶಾಲಿ ಯಾರೆಂದು ತಿಳಿಯುವ ಕುತೂಹಲವಿದೆ.... ನಿನಗೆ ಇಷ್ಟವಿಲ್ಲದಿದ್ದಲ್ಲಿ, ಕಷ್ಟವಾದಲ್ಲಿ ಹೇಳಬೇಡ....

ಭಾ :— (ಶಂಕೆಯಿಂದ) ಹೇಳಬಹುದು; ಆದರೆ ನಿನಗರ್ಥವಾಗ ಲಾರದು.

ಸು :— (ಚಕಿತನಾಗಿ) ಹ್ಹ ! ಅರ್ಥವಾಗದೇ ? ವಿಚಿತ್ರ ನಿನ್ನ ಮಾತು ! ಈ ನಿನ್ನ ಈ ಒಗಟಿನ ಮಾತಿಗಿಂತಲೂ ಹೆಸರು ತೊಡಕಾಗಿದೆಯೇ ?

ಭಾ :— (ಆಕಾಶವನ್ನು ನೋಡಿ ಸುಯ್ದು, ಗಂಭೀರಳಾಗಿ) ತೊಡಕಲ್ಲ--ನಿನಗೆ ಹಾಸ್ಯವೆನಿಸುವುದೋ ಏನೋ. (ದೃಢವಾಗಿ) ಅಗಮ್ಯ ನಾದ ಜಗದಾಣ್ಮನಿಗೆ ನನ್ನ ಸರ್ವಸ್ವವನ್ನೂ ಒಪ್ಪಿಸಿದ್ದೇನೆ. ಅವನೇ ನನ್ನ ಸ್ವಾಮಿ.

ಸು :— (ಹರ್ಷೋದ್ರೇಕದಿಂದ) ಓ. ಭಾರ್ಗವಿ, ಭಾರ್ಗವಿ ! ಇಷ್ಟೇನೆ? ಅವನನ್ನು ಪ್ರೀತಿಸದವರಾರು? ನಾನು ಬೇರಾವ ವ್ಯಕ್ತಿಯೋ ಎಂದು ಹೆದರಿದ್ದೆ. ನಮ್ಮ ಒಲವು ಆ ಪ್ರೇಮಕ್ಕೆ ಎಂದೂ ಧಕ್ಕೆ ತರುವುದಿಲ್ಲ.

ಭಾ :— (ಅಸಮಾಧಾನದಿಂದ) ಇದಕ್ಕೇ ನಾನು ಅನುಮಾನಿಸಿದ್ದು—ನಿನಗರ್ಥವಾಗುವುದಿಲ್ಲವೆಂದದ್ದು. ವ್ಯಕ್ತಿಗತ ಪ್ರೇಮ ಮಾತ್ರ ಪ್ರೇಮವೇ ? ವ್ಯಕ್ತಿರಹಿತ ಪ್ರೇಮವೇ ವಿಶ್ವಪ್ರೇಮ, ಅಮಲಪ್ರೇಮ, ಅಮರಪ್ರೇಮ. ಶುದ್ಧಪ್ರೇಮ ಕಮಲದಂತೆ. ಆದರೆ ವ್ಯಕ್ತಿಯನ್ನರಸಿದರೆ, ಕಮಲದ ಮೂಲ ಶೋಧಿಸ ಹೊರಟು ಕೆಸರಲ್ಲಿ ಸಿಕ್ಕಿಕೊಂಡಂತಾಗುವುದು. ಪ್ರೇಮ ಕಾಮದ ಕೂಪಕ್ಕಿಳಿಯುವುದು.

ಸು :— ಭಾರ್ಗವಿ, ನೀದು ಹೇಳಿದ ಜಗದಾಣ್ಮನೂ ಪ್ರೇಮ ರೂಪಿ. ಪ್ರೇಮಾರಾಧಕನಿಗೂ ಅವನು ಲಭ್ಯ. ಭಕ್ತ ತನ್ನಿಷ್ಟ ದೇವನನ್ನು ವಿಗ್ರಹದಲ್ಲಿ ಕಾಣುವಂತೆ, ಪ್ರಣಯಿ ತನ್ನ ಪ್ರೇಮಿಯಲ್ಲಿ ದೇವನಂಶವನ್ನು ಕಂಡು ಉಪಾಸಿಸುವ. ಕೇಳು ಭಾರ್ಗವಿ, ವ್ಯಕ್ತಿಗತ ಪ್ರೇಮ ವಿಶ್ವಪ್ರೇಮಕ್ಕೆ ಅಡ್ಡಿಯಲ್ಲ! ವಿಶ್ವಪ್ರೇಮಕ್ಕೇರಲು ಸುಲಭದ ಹಂತ. ಪ್ರಣಯಿಗಳ ಬಂಧನ ದೈಹಿಕವಲ್ಲ—ಆತ್ಮಿಕವಾದುದು. ಶಿವ-ಶಕ್ತಿಯರ ಸಮ್ಮಿಳನದಂತೆ ರಹಸ್ಯಪೂರ್ಣವಾದುದು, ಪವಿತ್ರವಾದುದು.

ಭಾ :—ಪ್ರಣಯವೇ ಬಾಳ ಸರ್ವಸ್ವವಲ್ಲ. ವಿಶ್ವಪ್ರೇಮದಲ್ಲೇ ಎಲ್ಲ ಪ್ರೇಮಭಾವವೂ ಅಡಕವಾಗಿದೆ. ತಾಯಿ-ತಂದೆಯರ ವಾತ್ಸಲ್ಯ, ಸೋದರ ಪ್ರೀತಿ, ಗೆಳೆಯರ ಸ್ನೇಹ,ನರ-ನಾರಿಯರ ಪ್ರಣಯ—ಎಲ್ಲವೂ ವಿಶ್ವಪ್ರೇಮದ ನಾನಾಮುಖಗಳು. ಪ್ರೇಮದ ಮುಖ್ಯೋದ್ದೇಶ 'ನಾನು' ಎಂಬ ಸ್ವಾರ್ಥದೊಡಲಿನಿಂದ 'ನಾವು' ಎಂಬ ನಿಸ್ವಾರ್ಥದ ಮೊಳಕೆಯನ್ನು ಮೇಲೆಬ್ಬಿಸುವುದೇ ಅಲ್ಲವೇ ? ವಿಶ್ವಪ್ರೇಮದ ವ್ಯಾಪಕತೆಯನ್ನು ನೋಡು— 'ನಾನು' ಎಂಬುದನ್ನು ನಭದಷ್ಟು ವಿಶಾಲ ಮಾಡಿ, ಎಲ್ಲವೂ 'ನೀನೇ' ಎಂಬ ನಿಸ್ವಾರ್ಥ ತುತ್ತತುದಿಯನ್ನು ಮುಟ್ಟುವುದು.

ಸು :— ಅಟ್ಟಹಾರಿ ಬೆಟ್ಟಹಾರಬೇಕು. ಭಾರ್ಗವಿ. ವಿಶ್ವಪ್ರೇಮ ಕಡೆಯ ಗುರಿ. ಅದಕ್ಕಾಗಿ ಪ್ರಣಯವನ್ನು ಬಲಿಗೊಡಬೇಕಾಗಿಲ್ಲ. ನೋಡು ಭಾರ್ಗವಿ, ಪ್ರಣಯ ಪ್ರಕೃತಿ ಸಹಜ. ಹಕ್ಕಿಪಕ್ಕಿಗಳು, ಕ್ರೂರ ಮೃಗಗಳೂ ಸಹ ಪ್ರಣಯದ ಬೆಳಕಿಗೆ ಮರುಳಾಗಿವೆ. ಪವಿತ್ರ ಪ್ರೇಮ ಮೃತ್ಯುವನ್ನೇ ಗೆದ್ದಿದೆ.

ಭಾ :— ನಿಜ. ಸ್ವಾರ್ಥವೇ ಪರಮಾರ್ಥವಾಗಿ ಬದುಕುವುವು ಮೃಗಗಳು.ಅವುಗಳಲ್ಲಿ ಸ್ವಾರ್ಥ ಕುಗ್ಗಿ, ಸಹಕಾರ ಬೆಳೆಯಲು ಪ್ರಣಯ ಸಾಧನವಾಗಿದೆ. ಆದರೆ ಜೀವನದ ಪರಮೋಚ್ಚ ಗುರಿ ಪ್ರಣಯವಾಗಿದ್ದಲ್ಲಿ ಚಕ್ರವಾಕಗಳ ಸೃಷ್ಟಿಯಾದಾಗಲೇ ಜಗದೀಶನ ಸೃಷ್ಟಿಕಾರ್ಯ ನಿಲ್ಲುತ್ತಿತ್ತು. ಸತ್ಯಾನ್ವೇಷಣೆಯೊಂದೇ ಮಾನವನ ಬಾಳ ಗುರಿ. ವಿಶ್ವಪ್ರೇಮ ವೊಂದೇ ಬಾಳ ಬೆಳಕು. ಉಳಿದೆಲ್ಲ ಪ್ರೇಮಗಳೂ ಬೆಳಕಲ್ಲಡಗಿರುವ ಏಳು ಬಣ್ಣಗಳಂತೆ ಅಪೂರ್ಣ.

ಸು :— ಬಣ್ಣಗಳೂ ಬೆಳಕಿನಂಶ ತಾನೇ ? ಬರಿಯ ಬೆಳುಕು ಕಣ್ಣು ಕುಕ್ಕೀತು. ಬಣ್ಣವೇ ಹಿತವಲ್ಲವೇ ?

ಭಾ:—ಬೆಳಕನರಸಿ ಹೊರಟಿರುವ ನಾನು ಬಣ್ಣಕ್ಕೆ ಬೆರಗಾಗಲೇ? ಸಾಧ್ಯವಿಲ್ಲ. ನನ್ನ ಬಾಳೇ ಸತ್ಯಾನ್ವೇಷಣೆಗಾಗಿ ಮುಡಿಪು—ಇದು ನನ್ನ ನಿರ್ಧಾರ.

ಸು :—(ಉದ್ವಿಗ್ನನಾಗಿ) ಇದೆಲ್ಲಿಯ ವೈಪರೀತ್ಯ ಭಾರ್ಗವಿ ? ಈ ವಿಷಯಗಳನ್ನು ತರ್ಕಕ್ಕೆ ಬಿಡು. ಹೆಣ್ಣುಹೃದಯಕ್ಕೆ ನಿವೃತ್ತಿ ಮಾರ್ಗ ಅಸಹಜ. ನಿನ್ನಂತಹ. ಬಾಲೆಗಂತೂ ಅಸಾಧ್ಯ.

ಭಾ :— (ಅಭಿಮಾನದಿಂದ) ಅಪರೂಪವಾದಾಕ್ಷಣ ಅಸಾಧ್ಯವೆನ್ನದಿರು. ನಾನು ಸಾಮಾನ್ಯಳಿರಬಹುದು; ಆದರೆ ಸಾಮಾನ್ಯತೆ ನನಗೆ ರುಚಿಸದು. ಉತ್ತಮಾವರ್ಜಕ್ಕಾಗಿ ಸತತ ಹೋರಾಟವೇ ಜೀವನ. ಹೋರಾಟವಿಲ್ಲದ ಜೀವನ ಜೀವವಿಲ್ಲದ ಹೋರಾಟ. ಸಾವಿಗಿಂತಲೂ ಭಯಂಕರ ಅಂತಹ ಜೀವನ.

ಸು :— (ಕಾತರನಾಗಿ) ಆದರೆ ಯೋಚಿಸಿ ನೋಡು, ಭಾರ್ಗವಿ. ಇದು ಸ್ತ್ರೀಧರ್ಮವೇ ? ಪತಿಪರಾಯಣೆಯಾಗಿರುವುದೇ ಅವಳ ಬಾಳ

ಆದರ್ಶ. ಅವರವರ ಧರ್ಮಪಾಲನೆಯಲ್ಲೇ ಇಹಪರಸೌಖ್ಯ ಅಡಗಿದೆ. ತಪಸ್ಸಿನ ಪ್ರಭಾವದಿಂದ ಹಕ್ಕಿಯನ್ನು ಸುಟ್ಟು, ಪತಿವ್ರತೆಗೆ ಸೋತು ತಿಳಿವನ್ನು ಪಡೆದ ತಪಸ್ವಿಯ ಕತೆ ನಿನಗೆ ತಿಳಿಯದೇನು?

ಭಾ :— (ಬೇಸರದಿಂದ) ಇಂತಹ ನೂರಾರು ಕತೆ ಕೇಳಿ ಮನಸ್ಸು ರೋಸಿ ಹೋಗಿದೆ.

ಸು :— ಅಂ ! ಅತ್ರಿಪುತ್ರಿಯಾದ ನಿನ್ನ ಬಾಯಲ್ಲಿ ಈ ಮಾತೆ !

ಭಾ :— ನೀನು ತಪ್ಪು ತಿಳಿಯುವೆಯೆಂದೇ ನಾನು ಮಾತ ನಾಡಲು ಅನುಮಾನಿಸಿದೆ. ನನಗೀಗ ಉಪದೇಶ ಬೇಕಿಲ್ಲ. ನನ್ನ ಹೃದಯ ಮಥಿಸುತ್ತಿದೆ. ಸತ್ಯಕ್ಕಾಗಿ ನನ್ನ ದೇಹದ ಕಣಕಣವೂ ಹಂಬಲಿಸುತ್ತಿದೆ. ಏಕ ಕಾಲದಿ ನೂರು ಶಶಿಯರುದಿಸಿದರೂ ಕಮಲ ಕುಟ್ಮಲವನ್ನು ಅರಳಿಸಲು ಸಾಧ್ಯವೇ ? ರವಿಯುದಯವಾದೊಡನೆ ಕಮಲ ತಾನೇ ಅರಳುವುದು. ಶ್ರುತಿಸ್ಮೃತಿಗಳುಪದೇಶ ನನಗೀಗ ಒಣಮಾತು. ಜ್ಞಾನಭಾಸ್ಕರನುದಯ ಮಾತ್ರನೇ ಎನ್ನೆದೆಯಿಳಲ ತೊಡೆದು ಹೃತ್ಕಮಲವನರಳಿಸಬಹುದು. ದೇಹ ಆತ್ಮದ ತೊಡಿಗೆ. ಸತ್ಯಾನ್ವೇಷಣೆಗೆ ಗಂಡು ಹೆಣ್ಣೆಂಬ ಭೇದವಿಲ್ಲ.ನನ್ನ ಹಂಬಲದ ಉತ್ಕಟತೆ ನಿನಗೆ ತಿಳಿಯದು.

ಸು :— ಸಂಸಾರಬಂಧನ ಸತ್ಯಾನ್ವೇಷಣೆಗೆ ಅಡಿಯಲ್ಲ, ಭಾರ್ಗವಿ. 'ನಾನು' ಎಂಬುದನ್ನು ಉಳಿಸಬೇಕಾದರೆ ನಾನು ಎಂಬು-ದನ್ನು ಅಳಿಸಬೇಕು.

ಭಾ :— ಇದು ನಿನ್ನ ಅನುಭವದ ಮಾತಲ್ಲವಷ್ಟೇ? ಅನುಭವದ ಅಗ್ನಿಕುಂಡದಿಂದ ಸಿಡಿದು ಬರುವ ಅಧ್ಯಾತ್ಮವಾಕ್ಯಗಳು ಸತ್ವಹೀನ ಶಬ್ದಗಳು ! ಈಜು ಕಲಿಯಲು ನೀರಿಗಿಳಿಯಲೇ ಬೇಕು. ಸತ್ಯ ತಿಳಿ ಯಲು ಅದನ್ನು ಅರಸಲೇ ಬೇಕು. ಸತ್ಯಾನ್ವೇಷಿಗೆ ಸಂಸಾರ, ಪ್ರೇಮ ಎಲ್ಲವೂ ಕಾಲ್ತೊಡಕು.

ಸು :— (ಮುಂಡಿಯೂರಿ ಕುಳಿತು, ದೈನ್ಯದಿಂದ) ಭಾರ್ಗವಿ, ನಿನ್ನ ಹೃದಯದಲ್ಲಿ ಪ್ರೇಮ, ಕರುಣೆಗಳಿಲ್ಲವೆ ? ಹಾಯ್ ! ನನ್ನ ಮನ ನಿನ್ನ ಪ್ರೇಮಕ್ಕಾಗಿ ಹೇಗೆ ಹಂಬಲಿಸುತ್ತಿದೆ ಬಲ್ಲೆಯಾ ? ಕಾಣದ ಅಗ್ನಿ ನನ್ನ ಎದೆಯನ್ನು ದಹಿಸುತ್ತಿದೆ.

ಭಾ:— (ಕ್ಷಣ ಚಿಂತಿಸಿ) ಸುಮಂತ. ಈ ದೌರ್ಬಲ್ಯವನ್ನು ಮೆಟ್ಟಿನಿಲ್ಲು. ನಿನ್ನ ಮನವನ್ನರಿಯಲು ಯತ್ನಿಸು. ಈ ಜಗದ ಒಗಟನ್ನು ಬಿಡಿಸಲಾರದೆ ಜಗದೊಡೆಯನಿಗೆ ಶರಣಾಗಿದ್ದೇನೆ. ಸತ್ಯಪ್ರೇಮ ನನ್ನೆದೆಯನ್ನು ದಹಿಸುತ್ತಿದೆ. ನೂರುಬಾಳಿನ ನೋವನ್ನು ಎದುರಿಸಿ-ಯಾದರೂ ಸತ್ಯಸಾಕ್ಷಾತ್ಕಾರ ಮಾಡಿಕೊಳ್ಳುವಷ್ಟು ಉತ್ಕಟವಾಗಿದೆ ನನ್ನ ಹಂಬಲಿಕೆ. ಬೇರಾವ ಭಾವಕ್ಕೂ ಈಗೆನ್ನ ಹೃದಯದಲ್ಲಿ ಎಡೆ ಯಿಲ್ಲ. ನನ್ನ ಕ್ಷಮಿಸು. [ಅಗಸದತ್ತ ನೋಡಿ ಸುಯ್ದು, ಅನ್ಯ ಮನಸ್ಕ-ಳಾಗುವಳು.]

ಸು :— (ಅವಳ ತೇಜಃಪುಂಜ ಮುಖನೋಡಿ, ಭಕ್ತಿ ಗೌರವ ದಿಂದ ತಲೆಬಾಗಿ) ಭಾರ್ಗವಿ, ನಿಜ, ನಿನ್ನ ಮಾತು. ನೀನು ಮಹಾ-ತೇಜಸ್ವಿನಿ. ಮಾನವನ ಜಿಜ್ಞಾಸೆಯೇ ಮೂರ್ತಿವೆತ್ತಂತಿರುವ ಮಹಾ-ದೇವಿ ನೀನು. ನಿನಗೆದುರಾಡಲಾರೆ, ಜಗದೀಶ ನಿನಗೆ ಶುಭವೀಯಲಿ. ನಿನ್ನಭೀಷ್ಟ ನೆರವೇರಲಿ. [ನಿಧಾನವಾಗಿ ಹೋಗುವನು]

ಭಾ :— [ಕ್ಷಣಬಿಟ್ಟು, ಸುತ್ತಲೂ ನೋಡಿ] ಓ, ಸುಮಂತ ಹೋಗಿಬಿಟ್ಟರುವನು. ಪಾಪ, ಏನೆಂದುಕೊಂಡನೋ ! ನಾನೇನು ಮಾಡಲಿ ? ನನ್ನೆದೆಯಳಲನ್ನು ಹೇಗೆ ವಿವರಿಸಲಿ ? (ಯೋಚಿಸುತ್ತಾ) ಈ ರಾತ್ರಿ ಹೊರಡುವುದೇ ನಿಶ್ಚಯ ಮಾತೆಯ ಮುನುತೆಯ ರಕ್ಷೆ ಯನ್ನೂ ಮೀರಿ ಹೋಗಬೇಕು. ಎಷ್ಟು ತಾಪದಾಯಕವಿದು ! ನನ್ನೆದೆ ಯೆಲ್ಲಾ ಕಲಕಿದಂತಾಗಿದೆ. ಆದರೆ ಸತ್ಯವರಿವಿಲ್ಲದೆ ಹೇಗಿರಲಿ ? ಈ ಮಹಾವೇದನೆಯು ಕ್ಷಣಕ್ಷಣವೂ ನನ್ನೆದೆಯನ್ನು ದಹಿಸುತ್ತಿದೆ. ಅರಿವಿನ ಆನಂದವಿಲ್ಲ; ಸಾವಿನ ಶೀತಲತೆಯೂ ಇಲ್ಲ—ಕೇವಲ ಅಜ್ಞಾ-ನದ ಇರಿತ ! ಸತ್ಯವನ್ನರಸುತ್ತ ಏಕಾಂಗಿಯಾಗಿ ನಾ ಚರಿಸುವೆ— ಸತ್ಯದಾ ಹೆಂಬಲಿಕೆಯಲಿ ಎನ್ನೆದೆಯು ಉಕ್ಕಾಗಿ ಎಲ್ಲ ಕಷ್ಟಗಳನ್ನೆದುರಿ ಸಲು ಸ್ಫೂರ್ತಿಗೊಂಡಿದೆ. ಓ, ಸತ್ಯರೂಪೆ,— ನಿನಗಾಗಿ ನನ್ನ ಬಾಳನ್ನೇ ಅರ್ಪಿಸಿರುವೆ. ಸ್ವೀಕರಿಸಿ ಕೃಪೆಮಾಡು. [ಕೈ ಮುಗಿದು ತಲೆ ಬಾಗುವಳು.]

(ತೆರೆ ಬೀಳುವುದು.)

ವರ್ತಮಾನ ಚಿತ್ರ

' ಆನಂದಕಂದ '

ಬೀಸುತಲಿದೆ ಸ್ವೈರದ ಬಿರುಗಾಳಿ
ತೊತ್ತುಳಿದುಳಿವುದು ಸ್ವಾರ್ಥದ ಗೂಳಿ !
ಉಕ್ಕೇರಿದೆ ಅವಿವೇಕದ ಕಡಲು—
ವಿಲಯವ ಹೊತ್ತಿದೆ ತೆರೆಗಳ ಸಾಲು !

ಒಂದನೊಂದು ನುಂಗುವ ಬಯಕೆಯಲಿ
ಬಾಯ್ದೆರೆದಿವೆ ತಿಮಿ-ತಿಮಿಂಗಿಲಾಳಿ !
ಹುಟ್ಟುತಲಿದೆ ಭಸ್ಮಾಸುರಗಣವು —
ಸುಟ್ಟು ಲೋಕವನು ಕುಣಿವ ತವಕವು !

ದೆವ್ವಗಳಾಟವೆ ಎಲ್ಲೆಡೆ ನಡೆದು
ಮಸಣದ ಸೀಮೆಯು ಹಿಗ್ಗಿಹುದಿಂದು.
ಏತಕೆ ಈ ನರಿಗಳ ಊಳಾಟ ?
ಹಗಲಲಿಯೂ ಗೂಗೆಯ ಕೂಗಾಟ !

ಕತ್ತೆ-ಕೋಣಗಳು ಆಳಿಕೆಗಾಗಿ—
ಹೋರಾಡುತಲಿವೆ ಹಗೆಯಲಿ ರೇಗಿ;
ಸಿಂಹ-ಹುಲಿಗಳೆಲ್ಲಡಗಿಹವೋ—
ಗಜಗಳೆಲ್ಲಿ ನುರಿಯಾಗಿಹವೊ !

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, "೫೫ ನೆಯ ನಂಬರಿನ ಮಂಚ" ಎಂಬ ಕಥೆಯ ವಿಮರ್ಶೆಗಳು ೫ ಜನರಿಂದಲೂ "ರೋಮ್ಯಾಂಟಿಕ್ ಪೇಶಂಟ್" ಕಥೆಯ ವಿಮರ್ಶೆಗಳು ೮ ಜನರಿಂದಲೂ ಬಂದಿದೆ. ವಿಮರ್ಶಕರ ವಿವರ ಕೆಳಗೆ ಕಾಣಿಸಿದಂತಿದೆ.

"೫೫ ನೆಯ ನಂಬರಿನ ಮಂಚ" ಕಥೆಯ ವಿಮರ್ಶಕರು :

೧ ಶ್ರೀ. ವ್ಹಿ. ಎ. ಜೋಶಿ ಬಿ ಎ. ಭಾಗ ೨ ಅ. ಜನತಾ ಕಾಲೇಜ್, ಧಾರವಾಡ. ೨ ಶ್ರೀ. ಎನ್.ಎನ್. ನರಗುಂದ ಬಿ.ಎ.(ಆನರ್ಸ್), ಬಾಗಲಕೋಟೆ. ೩ ಕುಮಾರಿ ಸಿ. ಎಚ್. ಲಕ್ಷ್ಮಿ-ಪಾಡಿ, ಮುಟ್ಟಿತ್ತೋಡಿ ೪ ಶ್ರೀಮತಿ ಎಚ್. ವ್ಹಿ. ಉಷಾ, ಚಾಮರಾಜಪೇಟೆ, ಬೆಂಗಳೂರು. ೫ ಶ್ರೀಮತಿ ವನಮಾಲಾ, ಕೆ. ಎಚ್. ಕೆ. ಇನ್‌ಸ್ಟ್ಯೂಟ್, ಧಾರವಾಡ.

"ರೋಮ್ಯಾಂಟಿಕ್ ಪೇಶಂಟ್" ಕಥೆಯ ವಿಮರ್ಶಕರು :

೧ ಶ್ರೀ. ಎಂ. ಟಿ. ಧೂಪದ ಬಿ. ಎಸ್‌ಸಿ., ಎಮ್. ಎಚ್. ಸ್ಕೂಲ್, ಗುಳೇದಗುಡ್ಡ. ೨ ಕುಮಾರಿ ಮಾಯಾ ಅಕ್ಕಿ ಜ್ಯೂ. ಎಂ.ಎ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೩ ಶ್ರೀ. 'ಕಮಲಾಕರ' ಎಸ್. ಈ. ಸ್ಕೂಲ್, ಸದಲಗಾ. ೪ 'ವಸಂತಲಕ್ಷ್ಮಿ' ಮದ್ರಾಸ್, ೫ ಶ್ರೀ. ಎ. ಎಂ. ಗಿರಿಯಪ್ಪ, ಜಿ. ಬಿ. ಟಿ. ಸಿ. ಧಾರವಾಡ. ೬ ಶ್ರೀ. ಕೆ. ವಿ. ತಿರುಮಲೇಶ, ಕಾಸರಗೋಡು. ೭ ಶ್ರೀ. ಕೆ. ಜಿ. ಭೀಮರಾವ್ ಬಿ. ಎ., ಬಿ. ಇಡಿ., ಶಿಕ್ಷಕರು ಸರಕಾರಿ ಪ್ರೌಢಶಾಲೆ, ಚಿಟಗೊಪ್ಪ (ಬೀದರ) ೮ ಶ್ರೀ. ಪೂವಪ್ಪ ಪರಕಜೆ, ಕನ್ಯಾನ

ಎಲ್ಲ ವಿಮರ್ಶೆಗಳನ್ನೂ ಜಯಂತಿಯ ಸಂಪಾದಕಮಂಡಲಿಯವರೇ ನೋಡಿ ತಮ್ಮ ನಿರ್ಣಯ ಕೊಟ್ಟಿದ್ದಾರೆ.

"೫೫ ನೆಯ ನಂಬರಿನ ಮಂಚ" ಕಥೆಯ ಕುರಿತು ಬಂದ ವಿಮರ್ಶೆಗಳಲ್ಲಿ **ಕುಮಾರಿ ಸಿ. ಎಚ್. ಲಕ್ಷ್ಮಿ-ಪಾಡಿ** ಮತ್ತು **ಶ್ರೀಮತಿ ಎಚ್. ವಿ. ಉಷಾ** ಇವರವು ಉತ್ತಮವಾಗಿವೆ. ಶ್ರೀಮತಿ ವನಮಾಲಾ ಮತ್ತು ಶ್ರೀ. ವ್ಹಿ. ಎ. ಜೋಶಿ ಇವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುದೊಂದು ತೀರ ಸಾಮಾನ್ಯ.

"ರೋಮ್ಯಾಂಟಿಕ್ ಪೇಶಂಟ್" ಕಥೆಯ ಬಗೆಗೆ ಬಂದ ವಿಮರ್ಶೆಗಳಲ್ಲಿ **ಕುಮಾರಿ ಮಾಯಾ ಅಕ್ಕಿ** ಮತ್ತು **ಶ್ರೀ. ಕೆ. ವಿ. ತಿರುಮಲೇಶ** ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಕೆ. ಜಿ. ಭೀಮರಾವ ಮತ್ತು 'ವಸಂತಲಕ್ಷ್ಮಿ' ಇವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. 'ಕಮಲಾಕರ' ಅವರ ವಿಮರ್ಶೆ ಚೆನ್ನಾಗಿದೆ. ಮಿಕ್ಕವು ಸಾಮಾನ್ಯವಾಗಿವೆ.

ಈ ಸಲದ ಮೇಲಾಟದಲ್ಲಿ ಹೆಚ್ಚು ಜನ ಸೋದರಿಯರು ಭಾಗವಹಿಸಿದುದು ಸಂತೋಷದ ಸಂಗತಿಯಾಗಿದೆ; ಇಷ್ಟೇ ಅಲ್ಲ, ಇಬ್ಬರು ಸೋದರಿಯರ ವಿಮರ್ಶೆಗಳೇ ಪ್ರಥಮಸ್ಥಾನವನ್ನು ಪಡೆದಿರುವುದು ವಿಶೇಷವಾಗಿ ಗಮನಿಸತಕ್ಕ ಸಂಗತಿಯಾಗಿದೆ ಈ ವಿಭಾಗವು ಈಗೀಗ ನಮ್ಮ ಕರುಣ ಸಾಹಿತ್ಯಕರಿಗೆ ಪ್ರಿಯವಾಗತೊಡಗಿದುದು ಆಶಾದಾಯಕವಾದ ವಿಷಯ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ **'ಚಿರಕಾಲದ ಏಕಾಕಿನಿ'** ಎಂಬ ಅನುವಾದಿತ ಕಥೆಯನ್ನೂ **'ಮುರಗೀ ಮುಸಲ್ಲಂ'** ಎಂಬ ಸ್ವತಂತ್ರ ಕಥೆಯನ್ನೂ ಇರಿಸಲಾಗಿದೆ. ತಮ್ಮ ತಮ್ಮ ರೀತಿಯಿಂದ ಎರಡೂ ವೈಶಿಷ್ಟ್ಯಪೂರ್ಣ ಕಥೆಗಳು. ಅದರಲ್ಲಿಯೂ 'ಚಿರಕಾಲದ ಏಕಾಕಿನಿ' ಪೌರಾಣಿಕ ಸನ್ನಿವೇಶದಿಂದ ಕೂಡಿದುದು. ಹಣ್ಣು-ಗಂಡಿನ ಮನಸ್ಸಿನ ರೀತಿ-ನೀತಿಗಳನ್ನು ಒಂದು ಬಗೆಯ ರೂಪಕಮಾಲೆಯಲ್ಲಿ ಚಿತ್ರಿಸಿದುದು ಪ್ರತಿಮೆಗಳಲ್ಲಿ ಹುಟ್ಟಿ ಬೆಳೆದು ಪ್ರತಿಮೆಗಳಲ್ಲಿಯೇ ಕೊನೆಗೊಂಡಿದೆ. ನಮ್ಮ ವಿಮರ್ಶಕರು ಈ ಎರಡೂ ಕಥೆಗಳ ಒಳಗನ್ನು ಅರಿಯಲು, ತಮ್ಮ ಬುದ್ಧಿಶಕ್ತಿಯನ್ನು ಚೆನ್ನಾಗಿ ಪುಸಿದು ಹದಗೊಳಿಸಿಕೊಳ್ಳಬೇಕು. ಹೆಚ್ಚು ಜನ ಈ ಮೇಲಾಟದಲ್ಲಿ ಭಾಗವಹಿಸುವರೆಂದು ನಮ್ಮ ನಂಬುಗೆ.

— ಸಂಪಾದಕರು

---

೫೫ ನಂಬರಿನ ಮಂಚ

(ಅನುವಾದಿಕ ಸಣ್ಣ ಕಥೆಯ ವಿಮರ್ಶೆ.)

ಕುಮಾರಿ ಸಿ. ಹೆಚ್ ಲಕ್ಷ್ಮಿ-ಪಾಡಿ

ಮುಟ್ಟತ್ತೋಡಿ, ಕಾಸರಗೋಡು. (ದ.ಕ.)

●

ಎಲ್ಲಾ ಜೀವಿಗಳಿಗೂ ಬಾಳಿನಲ್ಲಿ ನೆಮ್ಮದಿಯಾಗಿರಲು ಪ್ರಾಮುಖ್ಯವಾಗಿ ಬೇಕು– ಆರೋಗ್ಯ ಭಾಗ್ಯ. ಆರೋಗ್ಯದಿಂದ ವಂಚಿತರಾದವರು ಎಂತಹ ಸೌಭಾಗ್ಯವನ್ನು ಹೊಂದಿದ್ದೂ ನಿಷ್ಫಲ. ಅವರಲ್ಲೂ ಬಡವರಿಗೆ, ಗತಿಹೀನರಿಗೆ ಆರೋಗ್ಯವೇ ದೊಡ್ಡ ನಿಧಿ. ಭಿಕಾರಿಗಳಾಗಿದ್ದವರು ರೋಗ ಪೀಡಿತರೂ ಆದರೆ, ಇವರ ಸ್ಥಿತಿ ಶೋಚನೀಯ, ಮತ್ತು ಕರುಣಾಜನಕವಲ್ಲದೆ ಮತ್ತೇನು? ಅಂತಹವರಿಗೆ ಭೂಮಿಯ ಮೇಲಣ ಆಸೆ ಮುಗಿದು, ಸಾದರದಿಂದ ಸಾವನ್ನು ಸ್ವಾಗತಿಸುತ್ತಿದ್ದರೆ ಅದೇನೂ ಆಶ್ಚರ್ಯವಲ್ಲ.- ಇಂತಹ ದುಃಸ್ಥಿತಿಗೀಡಾದ ಜೀವಿಯು, ಅನಿರೀಕ್ಷಿತವಾಗಿ ಆಶ್ವಾಸನೆಯೊಂದು ದೊರೆತಾಗ—ರೋಗಪೀಡೆಯಿಂದ ಬಿಡುಗಡೆ ಹೊಂದುತ್ತಾ, ಸಾವನ್ನು ಹೇಗೆ ಹಿಮ್ಮೆಟ್ಟಿಸಬಲ್ಲುದು ? ಅಂತೆಯೇ ಚೇತರಿಸುತ್ತಿರುವ ಆಶ್ವಾಸನೆಯ ಮೇಲೆ ನಿರಾಶೆಯ ಕಣ್ಣೀರೆರಚಲ್ಪಟ್ಟು ಪ್ರಾಣಜ್ಯೋತಿಯಾದರೂ ಹೇಗೆ ನೊಂದಿಸಲ್ಪಡುವುದೆಂಬುದನ್ನು ಪುನರಾಣಿಸುವ ವಾಸ್ತವ ಚಿತ್ರ– ಈ "೫೫ ನೆಯ ನಂಬರಿನ ಮಂಚ."

ಭಿಕಾರಿಯೂ, ಅನಾಥನೂ ಆದ ರೋಗಪೀಡಿತ ಅಮರನು– ನಿರಾಶೆ. ನಿಸ್ಸಹಾಯತೆಗಳಿಂದ ಜರ್ಝರಿತ ಮಾನಸನಾಗಿ, ಸಾವನ್ನು ಬಯಸಿ ಕ್ಷಯಿಸುತ್ತಿರಲು– " ಈ ಜಗತ್ತಿನಲ್ಲಿ ತನ್ನನ್ನು ಪ್ರೀತಿಸುವ ಜೀವಿಯೊಂದಿದೆ " ಎಂದು ತಿಳಿಯ ಬೇಕಾಗಿ ಬಂದಾಗ– ಬಾಳಿನ ಬಗ್ಗೆ ಮನದಲ್ಲಿ ಆಶೆ ಅಂಕುರಿಸಿ ಕಳೆಯೇರುತ್ತಿದ್ದಂತೆಯೇ—ಆಶ್ವಾಸನೆಯದು ಅಜಾತುರ್ಯ ಜನಿತ ಭ್ರಮೆ– ಹುಸಿಯೆಂದು ತಿಳಿದು, ಇಮ್ಮಡಿಯಾದ ನೋವಿನಿಂದ ಅಸುನೀಗುವುದೇ ಇದರೊಳಗಿನ ಮುಖ್ಯ ಕಥಾವಸ್ತು.

'ಸೀರಿಯಸ್ ಕೇಸಿಸ್' ವಾರ್ಡ್, ೫೫ ನೆಯ ನಂಬರಿನ ಮಂಚ, ಪೋಸಂಬಿ ತರುವ ತರುಣಿಯ ಚರಿತ್ರೆ, ನರ್ಸ್, ಡಾಕ್ಟರುಗಳ ಡ್ಯೂಟಿಗಳು– ಇನೆಲ್ಲಾ ಕಥೆಯ ಹೆಣೆಯುವಿಕೆಗೆ ಸಹಾಯಕವಾದ ವಸ್ತು-ವಿಷಯಗಳು.

ಅಮರನನ್ನು ಸೇರಿಸುವ ಆ ವಾರ್ಡಿನ ಬಾಗಿಲಿನ ಮೇಲ್ಗಡೆ 'ಸೀರಿಯಸ್ ಕೇಸಿಸ್' ಬೋರ್ಡು ಬರೆದಿರುವುದನ್ನೂ, ಅದಕ್ಕನುಗುಣವಾಗಿ ಅದರೊಳ ಹೊಕ್ಕ ರೋಗಿಗಳು ಅದೃಷ್ಟವಶದಿಂದಲೇ ಜೀವಂತವಾಗಿ ಹೊರಬರಬೇಕೆಂದೂ– ಅದರ ಗಂಭೀರತೆಯ ಪರಿಚಯ ಮಾಡಿಕೊಡುತ್ತಲೇ ಕತೆ ಪ್ರಾರಂಭವಾಗುವುದು.

ಆ ವಾರ್ಡಿನ ೫೫ ನೆಯ ನಂಬರಿನ ಮಂಚದ ರೋಗಿಯೊಬ್ಬನ ಮೃತದೇಹವನ್ನು ಹೊರಗೊಯ್ಯುತ್ತಿದ್ದಂತೆಯೇ, ಅಲ್ಲಿಗೆ ಅಮರನ ಪ್ರವೇಶವಾಗುವುದು. ಆಗ ಡಾಕ್ಟರರು ಕರುಣೆತುಂಬಿದ ದೃಷ್ಟಿಯಿಂದ ನೋಡುತ್ತಾರೆ. ನರ್ಸ್ ಅನ್ಯಮನಸ್ಕಳಾಗಿ ನೋಡುತ್ತಾಳೆ. ಆ ವಾರ್ಡಿನೊಳಗಣ ಆ ಮಂಚದಲ್ಲಿ ಅದೆಷ್ಟೋ ರೋಗಿಗಳು ತಮ್ಮ ಜೀವವನ್ನೊಪ್ಪಿಸಿ ಹೋದುದನ್ನು ಕಣ್ಣಾರೆ ಕಾಣುತ್ತಿರುವ ಅವರಲ್ಲಿ, ಎಂತಹ ಭಾವನೆಯುರಬಹುದೆಂಬುದನ್ನು ಒಡೆದು ತೋರಿಸುವಂತಹ ವಿವರಣೆಯದು !

ಅಮರನ ಕಾಯಿಲೆ ಕಠಿಣವಾಗಿತ್ತು. ಪರೀಕ್ಷಿಸಿದ ಡಾಕ್ಟರುಗಳೆಲ್ಲಾ ಮುಂದೆ ಒಂದೆರಡು ಗಂಟೆಗಳ ತನಕ ಮಾತ್ರವೇ ಜೀವಿಸಬಲ್ಲನೆಂದು ಅಭಿಪ್ರಾಯಪಡುತ್ತಾರೆ. ಆ 'ಕರ್ತವ್ಯಶೀಲ' ನರ್ಸ್ ಎಚ್ಚರಿಕೆಯಿಂದ ಅವನನ್ನು ಆರೈಕೆಮಾಡುತ್ತಿರುತ್ತಾಳೆ. ಒಂದೆರಡು ಗಂಟೆಯಲ್ಲಿ ಅವನ ಪ್ರಾಣಹೋಗುವುದೆಂದು ಊಹಿಸಿದ್ದರೂ, ಮಧ್ಯರಾತ್ರಿಯಿಂದ ಬೆಳಗಿನವರೆಗೆ ಅವನ ನಾಡಿ ಚಲಿಸುತ್ತಿದ್ದುದನ್ನು ನೋಡಿ— ನರ್ಸ್, ಡಾಕ್ಟರುಗಳೆಲ್ಲಾ ಆಶ್ಚರ್ಯಪಡುವರು.

ಕಥಾನಾಯಕ ಅಮರ, ಒಬ್ಬ ಬಡ ಏಕಾಂಗಿ. ಭೂಮಿಯ ಮೇಲೆ ಅವನಿಗೆ ಪರಿಚಿತರು, ಹಿತರು, ಬಂಧುಗಳಿರಲಿಲ್ಲ. ಬಡತನ, ಕಷ್ಟ, ದುಃಖ, ರೋಗವೇ ಮೊದಲಾದುವುಗಳಿಂದ ಬಹಳವಾಗಿ ನೊಂದು, ಜೀವನದಲ್ಲಿ ನಿರಾಶೆಹೊಂದಿಯೂ, ಹೇಗೆ ಹೇಗೋ ಬದುಕಿದ್ದು, ಸಾಯಲಾರದೆ ನವೆಯುತ್ತಿದ್ದ ಇಪ್ಪತ್ತೆರಡರ ತರುಣನಾತ. ಅವನ ಬಗ್ಗೆ ಯಾರಲ್ಲಿಯೂ ಸಹಾನುಭೂತಿ ಮೂಡಲೇಬೇಕು.

ಭಿಕಾರಿಗಳಿಂದ ಕ್ಷಯರೋಗ ಹರಡುತ್ತಿರುವುದೆಂದು ಮ್ಯುನಿಸಿಪಾಲಿಟಿಯವರು ಅವನನ್ನು ಆಸ್ಪತ್ರೆಗೆ ಹಾಕುತ್ತಾರೆ. ಜೀವ ಹೊತ್ತಿರುವುದೇ ಭಾರವೆಂದಿದ್ದ ಅವನಿಗೆ, ಆ ನೆಪದಿಂದಲಾದರೂ ಈ ಲೋಕದಿಂದ ಬಿಡುಗಡೆ ಹೊಂದಬಹುದಲ್ಲಾ ಎಂದು, ಅದನ್ನು ಒಳಿತೆಂದು ಭಾವಿಸುವನು; ಸಾವನ್ನು ಇದಿರು ನೋಡುವನು.

ರೋಗಪೀಡಿತರಾಗಿ, ಆರೈಕೆಗೆ ಜನರಿಲ್ಲದೆ ನರಳುವ ಬಡ ಭಾಂಧವರಿಗೆ, ಮಹಿಳೆಯರು ತಾಯಂದಿರಂತೆ ಯಾ ಸೋದರಿಯರಂತೆ ಯೋಗ್ಯರೀತಿಯಿಂದ ಶುಶ್ರೂಷೆ ಮಾಡುವ ಕ್ರಮವನ್ನು ತೋರಿಸಿ, ಮುಂದಡಿಯಿಟ್ಟವಳೆಂದರೆ— ಫ್ಲೋರಾನ್ಸ್ ನೈಟಿಂಗೇಲ್ ಪಾಶ್ಚಾತ್ಯ ದೇಶಗಳಲ್ಲಿ ಮಾತ್ರವಲ್ಲದೆ, ನಮ್ಮ ಭಾರತದಲ್ಲೂ ಎಷ್ಟೋ ಸೋದರಿಯರು ಆ ದಾರಿಯನ್ನು ಹಿಡಿದು, ನರ್ಸ್‌ಗಳಾಗಿ, ಅವಳ ಆದರ್ಶಕ್ಕೆ ಬೆಂಬಲ ನೀಡಿದರು. ದೀನ ಬಂಧುಗಳ ಸೇವೆಗಾಗಿ ಕಂಕಣಕೊಟ್ಟು, ತ್ಯಾಗಶೀಲೆಯರಾಗಿ, ವಾತ್ಸಲ್ಯದ ಮೂರ್ತಿಗಳಾಗಿ, ಸಾರ್ಥಕತೆ ಹೊಂದಿರುವರೆಷ್ಟೋ ಮುಂದಿಗಳಿರಬಹುದು. ಆದರೆ ಅಲ್ಲಲ್ಲಿ ಸ್ವಾರ್ಥ ಪ್ರಿಯೆಯರು, ರಕ್ಕಸೀ ಸ್ವಭಾವದರು 'ಸೇವೆಯೇ ತಮ್ಮ ಧ್ಯೇಯ'— ಎಂಬುದನ್ನು ಮರೆತು, ಅದಕ್ಕೆ ಕಳಂಕವನ್ನು ತಂದೊಡ್ಡುವುದರಿಂದ ರೋಗಿಗಳಿಗೆ ಶುಶ್ರೂಷೆಗೆ ಬದಲಾಗಿ ಪ್ರಾಣಸಂಕಟಗಳೊದಗುವುದುಂಟು. ಆದರೆ ಈ ಕತೆಯಲ್ಲಿ ಬರುವ ನರ್ಸ್ ಹೆಚ್ಚುಕಡಮೆ ನೈಟಿಂಗೇಲಳ ತತ್ತ್ವವನ್ನು ಎತ್ತಿಹಿಡಿದಿದ್ದಾಳೆ ಎನ್ನಲಡ್ಡಿಯಿಲ್ಲ. ಅದಕ್ಕೆ ಕತೆಯುದ್ದಕ್ಕೆ ಕಾಣುವ ಅವಳ ನಿರುದಾಸೀನ ಸೇವೆಯೂ, ಅವಳ ಕುರಿತಾಗಿ ಉಪಯೋಗಿಸಿದ 'ಕರ್ತವ್ಯಶೀಲ ನರ್ಸ್' ಎಂಬ ಮಾತು ನಿದರ್ಶನಗಳಾಗಿವೆ.

ಅಮರನ ಆ ವಾರ್ಡಿಗೆ ಸೇರಿದ ಮರುದಿನ ಬೆಳಿಗಿನ ಜಾವದಲ್ಲಿ, ಒರ್ವ 'ಚೆನ್ನಾಗಿರುವ ಹರೆಯದವಳು' ಅಮರನಿಗಾಗಿ–ಅಲ್ಲ ಋಜನೆಯ ಮಂಚದ ರೋಗಿಗಾಗಿ—ನರ್ಸ್‌ಳ ಮೂಲಕ ಒಂದು ಮೋಸಂಬಿಯನ್ನು ಕಳಿಸುತ್ತಾಳೆ. ತನಗದನ್ನು ತಿನ್ನಿಸುವ ಮೊದಲು ನರ್ಸ್ ಆ ವಿಚಾರವಾಗಿ ಹೇಳಿದುದೆಲ್ಲವನ್ನೂ ಕೇಳಿ, ಆಕೆ ಯಾರಿರಬಹುದೆಂದು ಅಮರ ಆಶ್ಚರ್ಯಪಡುತ್ತಾನೆ. ಯೋಚಿಸಿ, ಕೊನೆಗೆ— ತನ್ನನ್ನೊಬ್ಬಳು ಪ್ರೀತಿಸುತ್ತಿದ್ದಾಳೆ— ಎಂಬ ನಿರ್ಧಾರಕ್ಕೆ ಬರುತ್ತಾನೆ. ಅನರೊಡನೆಯೇ ಬದುಕುವ ಆಸೆಯನ್ನು ಸಂಪೂರ್ಣವಾಗಿ ತೊರೆದಿದ್ದ ಅವನ ಅಂತರಂಗದಲ್ಲಿ, ಬಾಳಿನ ಬಗ್ಗೆ ಆಶಾಕಿರಣ ಮೂಡಿ, ಸ್ವಲ್ಪಸ್ವಲ್ಪವಾಗಿ ಚೇತರಿಸುತ್ತಾನೆ. ಡಾಕ್ಟರರಿಗೆ ಇದು ಅಚ್ಚರಿಗೆ ಕಾರಣವಾಗುತ್ತದೆ. ದಿನಾಲೂ ಎರಡೆರಡು ಮೋಸಂಬಿಗಳು ಬರುತ್ತವೆ. ಪ್ರೇಮದ ನೆನಹಿನಿಂದ ಆ ಮೋಸಂಬಿಗಳ ರಸವು ಅವನಲ್ಲಿ ಕಳೆಯೇರುವಂತೆ ಮಾಡುತ್ತದೆ.

ಏನಾವತೊಂದು ಕಾರ್ಯದಲ್ಲಿ ಯಶಸ್ಸುಂಟಾಗುವಾಗ, ಅದರಲ್ಲಿ ಭಾಗಿಗಳಾದ ಪ್ರತಿಯೊಬ್ಬರೂ ತಮ್ಮಲ್ಲೇ ತಮ್ಮನ್ನು ಮೆಚ್ಚಿಕೊಳ್ಳುವುದು ಸ್ವಾಭಾವಿಕ. ಅದನ್ನೇ ಲೇಖಕರು— ಸಾಯುವ ಸ್ಥಿತಿಯಲ್ಲಿದ್ದ ಅಮರ Improve ಆಗುವುದನ್ನು ಕಂಡಾಗ ನರ್ಸ್— ತನ್ನ ಸೇವೆ ಸಫಲವಾಯಿತೆಂದು ತೃಪ್ತಳಾಗುವಳು; ಡಾಕ್ಟರರು ತಮ್ಮ ಪ್ರಯೋಗ ಸಫಲವಾಯಿತೆಂದು ಭಾವಿಸುತ್ತಾರೆ— ಎಂಬುದರ ಮೂಲಕ ತೋರಿಸಿಕೊಟ್ಟಿದ್ದಾರೆ.

ಆ 'ಅಲೌಕಿಕ ಪ್ರೇಮಮೂರ್ತಿ'ಯನ್ನು ನೋಡಬೇಕೆಂಬಾಸೆ ಅಮರನಲ್ಲಿ ಉಂಟಾಗಿ, ನರ್ಸ್‌ಳ ಸಹಾಯ ಕೋರುತ್ತಾನೆ. ಅವನು ಪೂರ್ಣ ಆರೋಗ್ಯ ಹೊಂದಲೆಂದು ಆ ಹೆಂಗುಸು ಒಂದೆರಡು ದಿನ ಮುಂದೆ ದೂಡುತ್ತಾಳೆ. ಅವಳು ಬರಲೊಪ್ಪಿದ ದಿನ–ಆರೋಗ್ಯ ಸುಧಾರಿಸುತ್ತಿದ್ದ ಅಮರನನ್ನು ಜನರಲ್ ವಾರ್ಡಿಗೆ ಸೇರಿಸುವುದಕ್ಕಾಗಿ, ಜವಾನರು ಅವನ ಮಂಚವನ್ನು ಬಾಗಿಲಿನ ಬಳಿಗೆ ತಂದಿದ್ದರು.

ತನ್ನ ಪ್ರಿಯತಮನನ್ನು ನೋಡಲು ಕಾತರಿಸುತ್ತಿದ್ದ– ಮೋಸಂಬಿ ತರುವ ಬಡಭಿಕ್ಷುಕಿ ಹೆಂಗುಸಿಗೂ, ಮರೆಯಲ್ಲಿ ತನ್ನನ್ನೊರ್ವಳು ಪ್ರೀತಿಸುತ್ತಾಳೆಂದು ಭಾವಿಸಿ, ಅವಳನ್ನು ನೋಡಬಯಸಿದ ಅಮರನಿಗೂ ಪರಸ್ಪರ ಮುಖದರ್ಶನವಾಗುವುದು. ಅದೆಂತಹ ವಿಲಕ್ಷಣ, ಕರುಣಾಜನಕ, ಭಾವಸಂಕಲಿತ ಸನ್ನಿವೇಶ! ಕೌತುಕದಿಂದಲೂ, ನೈಜತೆಯಿಂದಲೂ ಕೂಡಿವ ಅದರ ಚಿತ್ರಣವು ಉತ್ತಮವಾಗಿದೆ.

ಆ ಸ್ತ್ರೀಯು ಅಮರನಿಗಿಂತ ಮೊದಲು ಆ ಮಂಚದಲ್ಲಿದ್ದ ರೋಗಿಯ ಹೆಂಡತಿಯೆಂದು ತಿಳಿಯುವುದು. ಆ ದಿನವೂ ತನ್ನ ಪ್ರಿಯನಿಗಾಗಿ ತಂದಿದ್ದ ಮೋಸಂಬಿಯನ್ನು ಅಲ್ಲೇ ಬಿಸಾಡಿ ಓಡಿ ಹೋಗುತ್ತಾಳೆ. ಇದೆಲ್ಲವನ್ನೂ ಕಂಡು ಕೇಳಿದ ಅಮರನಿಗೆ ಸಿಕ್ಕಿದ್ದ ಆಶಾಸ್ವನೆಯೇ ಹೊರಟುಹೋಗುವುದು. ಅದರೊಡನೆ ಅವನ ಪ್ರಾಣಪಕ್ಷಿಯೂ ಹಾರಿಹೋಗುವುದು.

ಆ ವಾರ್ಡಿನ ಕುರಿತಾದ ಮಾತು, ಅದರ ಗಾಂಭೀರ್ಯ ಉಳಿಯಲೋಸುಗವೋ ಎಂಬಂತೆ, ಬಾಗಿಲಿನ ಮಧ್ಯದವರೆಗೆ ಬಂದ ಮಂಚದಲ್ಲಿ ಜೀವಂತನಾಗಿದ್ದ ಅಮರ ಹೊರಬರುವಷ್ಟರಲ್ಲಿ ನಿರ್ಜೀವನಾದ ವನ್ನು ಹೊರಗೆ ತರುವಾಗ, ಜವಾನನೊಬ್ಬನ ಕಾಲುತಾಗಿ ಉರುಳುತ್ತಿದ್ದ ಮೋಸಂಬಿಯನ್ನೇ ನರ್ಸ್ ಭಾವುಕಳಾಗಿ ನೋಡುತ್ತಿರುವಂತೆ ಕಥೆ ಶಿಖರವನ್ನೇರಿ ಕೊನೆಗೊಳ್ಳುತ್ತದೆ.

ಕಥೆಯ ಆರಂಭವಾಗುವಿಕೆ ಮತ್ತು ಅಂತ್ಯಗೊಳ್ಳುವಿಕೆ–ಇವುಗಳೊಳಗೆ ನಿಕಟವಾದ ಸಂಬಂಧವಿದೆ. ಒಂದೇ ವಿಷಯವನ್ನು ಸಮರ್ಥಿಸುತ್ತವೆ.

ಅಮರನು ಒಂದುವಾರದ ತನಕ ಬಾಳಿನಲ್ಲಿ ಆಸೆ ಚಿಗುರಿ ಜೀವಿಸಿರುವುದಕ್ಕೂ ಅನಿರೀಕ್ಷಿತವಾಗಿ ಆತನ ಸಾವಿಗೂ ಆ ಹೆಂಗುಸು ತಂದಿತ್ತ ಮೋಸಂಬಿಯೇ ಕಾರಣವಾಗಿದ್ದುದರಿಂದ, ನರ್ಸ್ 'ಉರುಳುತ್ತಿದ್ದ ಮೋಸಂಬಿಯನ್ನೇ ನೋಡುತ್ತಿದ್ದಳು' ಎಂಬ ವಾಕ್ಯವು ಭಾವಗರ್ಭಿತವಾಗಿದೆ.

ಫುಟ್‌ಪಾತಿನಲ್ಲಿ ಅಲೆಯುತ್ತಿದ್ದ ಅಮರನನ್ನು ಹಿಡಿದು ಆಸ್ಪತ್ರೆಗೆ ಹಾಕಿದ್ದರಿಂದ, ಅವನು ಭಿಕಾರಿಯೆಂದು ಅನಾಯಾಸವಾಗಿ ತಿಳಿಯಬಹುದು. ಒಬ್ಬಾಕೆ ಸುಂದರಿ ಅವನಿಗೋಸ್ಕರ ಹಣ್ಣು ತಂದೀಯುವಾಗ, ನರ್ಸ್–ಆಕೆಗೆ ರೋಗಿ ಏನಾಗಬೇಕೆಂದು ವಿಚಾರಿಸದಿರುವುದೇಕೆ— ಎನಿಸುತ್ತದೆ. ಅಮರನೂ ಅವಳನ್ನು ಕರಕೊಂಡು ಬರುವುದಕ್ಕೆ ಹೇಳುವನೇ ವಿನಾ, ಕುತೂಹಲದಿಂದ ಅವಳಾರೆಂದು ತಿಳಿಯ ಕೇಳುವುದಿಲ್ಲ. ಆನರು ಹಾಗೆ ಮಾಡಿದ್ದರೆ ಕತೆಯ ಜೀವಾಳವೇ ನಶಿಸಿ, ಸ್ವಾರಸ್ಯವೆಲ್ಲಿರುತ್ತಿತ್ತು?

ಅಮರನನ್ನು ವಾರ್ಡಿನೊಳಗೆ ಒಯ್ಯುವಾಗ, ಅವನ ಕಣ್ಣು ಮುಚ್ಚಿದ್ದುದರಿಂದ ಆ ಬೋರ್ಡನ್ನು ಓದಲಿಲ್ಲವೆಂದಿದೆ. ಆದರೆ ಅಮರನಿಗೆ ಅಕ್ಷರಾಭ್ಯಾಸವಿದೆಯೆಂದು ಕತೆಯಲ್ಲೆಲ್ಲೂ ಸೂಚ್ಯವಾಗದಿರುವುದು ಮಾತ್ರವಲ್ಲ, ಜೀವನದಲ್ಲಿ ಯಾವೊಂದು ಅನುಕೂಲತೆಗಳೂ ಇಲ್ಲದ ಆತನಿಗೆ, ವಿದ್ಯೆಗೆ ಆಸ್ಪದವೂ ಇದ್ದಿರಲಾರದೆಂದು ನನ್ನ ಭಾವನೆ.

"ಋಜನೆಯ ನಂಬರಿನ ಮಂಚದ" ರೋಗಿಯ ಮೃತದೇಹವನ್ನು ಹೊರಗೊಯ್ದು, ಮಂಚದಲ್ಲಿ ಅಮರನನ್ನು ಮಲಗಿಸಿದ್ದು ರಾತ್ರಿ ಹನ್ನೆರಡರ ಮೊದಲು— ಮಾರನೆಯ ಬೆಳಗ್ಗೆ ಏಳರ ಹೊತ್ತಿಗೆ ಮೋಸಂಬಿ ತಂದಳೆಂದು ಕಥೆಯಲ್ಲಿ ಉಲ್ಲೇಖಿಸಿದೆ. ಹಾಗೇ ಕೊನೆಗೆ—ಅಮರನನ್ನು ನೋಡಿ ಚಕಿತಳಾದ ಹೆಂಗುಸು 'ಅವನಿಗಿಂತ ಮೊದಲಿದ್ದ ರೋಗಿಯೆಲ್ಲಿ'ಂದು ವಿಚಾರಿಸಿದಾಗ, "ಅವನು ಅಂದೇ ನೀನು ಮೋಸಂಬಿಯನ್ನು ತರುವ ಒಂದು ಗಂಟೆ ಮುಂಚೆ ಸತ್ತುಹೋದ—" ಎನ್ನುತ್ತಾಳೆ ನರ್ಸ್. ಹಾಗಾದರೆ ರಾತ್ರಿ ಹನ್ನೆರಡಕ್ಕೂ—ಬೆಳಗ್ಗೆ ಏಳಕ್ಕೂ ನಡುವೆ ಒಂದೇ ಗಂಟೆ ಅಂತರ ಎಂದಹಾಗಾಯಿತು. —ಇನೇನೂ ದೊಡ್ಡ ಕೊರತೆಗಳಲ್ಲ. ಸಣ್ಣ ಅಜಾಗರೂಕತೆ, ಅಷ್ಟೆ.... ಕಥೆಯ ಶೋಭೆಗೂ ಏನೂ ಕುಂದನ್ನುಂಟುಮಾಡುವುದಿಲ್ಲ.

'ಭಾರವಾದ ರೆಪ್ಪೆಗಳನ್ನು ಮೇಲೆತ್ತಿದ,' 'ರೆಪ್ಪೆಗಳಿಂದ ಕೇಳಿ ಕೇಳಿ ತಿಂದ'— ಇಂತಹ ವರ್ಣನೆಗಳು ಯೋಗ್ಯವಾಗಿದ್ದು, ರೋಗಿಯ ಸ್ಥಿತಿಯನ್ನು ಸ್ಫುಟವಾಗಿ ತೋರಿಸುವುವು. ನರ್ಸ್ ಪ್ರಥಮಚಾರಿ

ಮೋಸಂಬಿ ಕೊಡಲು ಎಚ್ಚರಿಸಿದಾಗ, ಅವನು ಎಚ್ಚರುಗೊಂಡು, ಕಣ್ತೆರೆದು, ಆ ಸನ್ನಿವೇಶವನ್ನು ತಿಳಿದುಕೊಳ್ಳುವುದನ್ನು ಹೇಳಿದ ರೀತಿಯು ಬಹಳ ಚೆನ್ನಾಗಿದೆ. ಅಂದರೆ–ಸ್ವತಃ ರೋಗಿಯೇ ತನ್ನ ಅನುಭವವನ್ನು ಹೇಳುವಷ್ಟು ಮಟ್ಟಿಗೆ ನೈಜತೆಯನ್ನು ಹೊಂದಿದೆ. ಅಲ್ಲದೆ ಕೆಲವೆಡೆ ಓದುವಾಗ, ಆಸ್ಪತ್ರೆಯ ವಾತಾವರಣವೂ, ಅಲ್ಲಿಯ ಹೃದಯ ಕರಗುವ ವಿದ್ಯಮಾನಗಳೂ ಕಣ್ಣಮುಂದೆ ಸುಳಿಯುವಂತಾಗುತ್ತವೆ.

ಕಥಾವಸ್ತುವು ನೈಜನಾಗಿದ್ದು, ವಿಶಿಷ್ಟ ಗುಣಗಳನ್ನೊಳಗೊಂಡಿದೆ. ಎಳೆ ಎಳೆಯನ್ನು ಬಿಡಿಸಿ ತೋರಿಸುವಂತಿರುವ ಸರಳ ಸುಂದರ ಶೈಲಿ. ಶುದ್ಧವಾದ ಭಾಷೆ, ನೇರವಾದ ಮಾತುಗಳಿಂದ ಸುಲಭದಲ್ಲಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಕರುಣಾಪ್ರಧಾನವಾಗಿದೆ.

ಪಾತ್ರಗಳಲ್ಲಿಯೂ— ಅಮರ, ನರ್ಸ್, ಮೋಸಂಬಿಯಾಕೆ– ಇವು ಮೂರೇ ಮುಖ್ಯವಾಗಿದ್ದು ಜೀವಂತವಾಗಿವೆ. ಉಳಿದುವುಗಳು ಕೇವಲ ಸಣ್ಣವು, ನೆಪಮಾತ್ರಕ್ಕೆ ಒಮ್ಮೊಮ್ಮೆ ಬೆಳಕಿಗೆ ಬರುವಂತಹವುಗಳು.

ಮಂಚದ ನಂಬರನ್ನು ಹೇಳಿ ಆ ಹೆಂಗುಸು ಮೋಸಂಬಿಯನ್ನು ಕೊಟ್ಟುದರಿಂದ, ನರ್ಸ್ ಆ ನಂಬರಿನ ಮಂಚದ ರೋಗಿ ಅಮರನಿಗೆ ಅದನ್ನು ಕೊಡಬೇಕಾಯಿತು. ಅದೇ ಈ ಕತೆಯಲ್ಲಿ ಸ್ವಾರಸ್ಯಕ್ಕೆ ಕಾರಣವಾದ ವಿಷಯ. ಅದ್ದರಿಂದಲೇ ಈ ಕತೆಗೆ "೫೫ನೆಯ ನಂಬರಿನ ಮಂಚ" ಎಂಬ ನಾಮ ಉಚಿತವಾಗಿದೆ.

'ಪ್ರೇಮ' ಎಂಬುದು ಒಂದು ಸಂಜೀವಿನಿಶಕ್ತಿ. ಒಂದು ಜೀವಿಯ ಉಳಿವಿಗೂ ಅಳಿವಿಗೂ ಅದು ಹೇಗೆ ಕಾರಣವಾಗುವುದೆಂಬುದನ್ನು ಕತೆಯಲ್ಲಿ ಪ್ರತಿಪಾದಿಸಿದೆ.

ಹೆಚ್ಚಾದ ಶೃಂಗಾರರಸಗಳನ್ನೊಳಗೊಂಡ ಒಂದೇ ತೆರನಾದ ಕತೆಗಳೇ ಇಂದು ಹೆಚ್ಚಿನ ಪತ್ರಿಕೆಗಳನ್ನು ತುಂಬಿರುವಾಗ, ವೈವಿಧ್ಯಗಳಿಂದ ಕೂಡಿದ ಹಾಗೂ ಮನ ಮುಟ್ಟುವ ಇಂತಹ ಕತೆಗಳು ಅತ್ಯಾವಶ್ಯಕವುಳ್ಳವುಗಳಾಗಿವೆ. ಬೇರೆ ಬೇರೆ ಭಾಷೆಗಳ ಉತ್ತಮ ಕೃತಿಗಳನ್ನು ಅನುವಾದ ಮಾಡಿ, ಕನ್ನಡ ಸಾಹಿತ್ಯದೇವಿಗೆ ಕಾಣಿಕೆ ಕೊಡುವ ಕಥಾಕಾರರಾದ ಶ್ರೀ. ಜಿ. ಜೆ. ಹರಿಜೀತ್— ಅವರ ಯತ್ನವು ಕನ್ನಡಿಗರಿಗೆ ಅಭಿಮಾನಾಸ್ಪದವೆಂದು ನಿಸ್ಸಂದೇಹವಾಗಿ ಹೇಳಬಹುದು. ರುಚಿಯಾದ ಹಣ್ಣುಗಳನ್ನೇ ಹೆಕ್ಕಿ ಸವಿಯಲು ಕೊಡುವಂತೆ— ಉತ್ತಮ, ವೈಶಿಷ್ಟ್ಯ, ರಸಗಳಿಂದ ಕೂಡಿದ ಕತೆಗಳನ್ನಾಯ್ದು ಕನ್ನಡಿಗರಿಗೀಯುವ ಜಯಂತಿಯ ಕಾರ್ಯವು ಸ್ತುತ್ಯನಾಗಿದೆ.

ಈ ಲೇಖಕರಿಂದ—ಕನ್ನಡದ ಎಲ್ಲಾ ಲೇಖಕರಿಂದ—ಹೀಗೆಯೇ ಉತ್ತಮ ಕೃತಿಚಿಲುಮೆಗಳು ಚಿಮ್ಮಿ, ಜಯಂತಿಯಂತಹ ಸಣ್ಣ ದೊಡ್ಡ ತರಂಗಿಣಿಗಳ ಮೂಲಕ ಹೊಸತಾಗಿ ಹರಿದು, ಸಾಹಿತ್ಯ ಸಾರವನ್ನು ಸೇರಿ, ಅದರ ಕಣ ಕಣಗಳಾಗಿ ಶೋಭಿಸಲೆಂದು ಆಶಿಸುತ್ತೇನೆ.

॥ ಸಿರಿಗನ್ನಡಂ ಗೆಲ್ಗೆ ॥

ರೋಮ್ಯಾಂಟಿಕ್ ಪೇಶಂಟ್

(ಪತ್ರರೂಪ ಕಥಾವಿಮರ್ಶೆ)

ಕುಮಾರಿ **ಉಮಾ ಅಕ್ಕಿ**, ಜ್ಯೂ. ಎಂ. ಎ. ಕ. ವಿ.
ವಿದ್ಯಾಲಯ ಧಾರವಾಡ

ತಂಗಿ,

????. ಪ್ರಶ್ನೆಗಳು ಮಾಲೆಮಾಲೆಯಾಗಿ ತಲೆಯನ್ನು ತಿರುಹುತ್ತಲಿವೆ. ಅದೇನು ಅಂಥ ಪ್ರಶ್ನೆಗಳು ಎನ್ನುವಿಯಾ? ನೋಡು, ಈ ತಿಂಗಳ 'ಜಯಂತಿ' ಯಲ್ಲಿಯ 'ಆನಂದಕಂದ'ರ ಕಥೆ ಓದಿದೆಯಾ? ನಿನ ವಿಚಾರವೇನು? ಕತೆ ನನ್ನನ್ನು ಮಾತ್ರ ಸೆರೆಹಿಡಿದಿದೆ.

೨೦ನೆಯ ಶತಮಾನದಂತಹ ಪ್ರಗತಿಶೀಲ ಯುಗದಲ್ಲಿ, ಗಂಡಿನಂತೆ ಹೆಣ್ಣಿಗೂ ಹಕ್ಕು-ಬಾಧ್ಯತೆಗಳು ಇವೆ; ಜೀವನದ ವಿವಿಧರಂಗಗಳಲ್ಲಿ ಆಕೆಗೆ ಗಂಡಿಗೆ ಸರಿಯಾದ ಸ್ಥಾನವಿದೆ, ಸ್ವಾತಂತ್ರ್ಯವಿದೆ. ಭಾರತೀಯ ಮಹಿಳೆಗೆ ಹಿಂದಿನಂತೆ ಇಂದೂ "ಪತಿಯೇ ಪರದೈವ!" ಆದರೆ ವ್ಯತ್ಯಾಸ ವಿಷ್ಟೇ: ಇಂದಿನ ಮಹಿಳೆ ಮೋಸ, ವಂಚನೆ, ನೀಚ ಆಚಾರ ಕಂಡುಬಂದಲ್ಲಿ ಪ್ರತಿಭಟಿಸಬಲ್ಲಳು. ಹೀಗೆ ಪ್ರತಿಭಟಿಸಿದಲ್ಲಿ ಅದು ತಪ್ಪೆ? 'ಪ್ರೇಮದ ಮುಖಪರಿಚಯವೇ ಇಲ್ಲದ ಕಾಮಪಿಶಾಚಿಗಳನ್ನು ತ್ಯಜಿಸಿ ಪ್ರತಿಕಾರ ಬಗೆಯುವುದು ತಪ್ಪೇ? ಎಲ್ಲೆಲ್ಲಿ ಹೊಲಸು ಇದೆಯೊ ಅದನ್ನು ಹೊರಗೆಳೆಯುವುದು ತಪ್ಪೇ?

'ಮೃತ್ಯುವಿನ ಮಾರ್ಗದಲ್ಲಿದ್ದ ಕುಸುಮಮಾಲೆಯನ್ನು ಆಸ್ಪತ್ರೆಗೆ ತರುತ್ತಾರೆ— ಆಕೆ ಪೋಲಿಸ್ ಇನ್‌ಸ್ಪೆಕ್ಟರ ಹೆಂಡತಿ— " ಅಯ್ಯೋ ಪಾಪ! ಈತನ ಉತ್ಕಟ ಪ್ರೇಮಕ್ಕಾಗಿಯಾದರೂ ಈ ರೋಗಿ ಬದುಕಬೇಕು " ಎಂದು ಆಸ್ಪತ್ರೆಯ ನರ್ಸ್ ನುಡಿಯುವಂತಿತ್ತು, ಮಾಲೋಜರಾಯನ ಪ್ರೇಮ, ಅಲ್ಲಲ್ಲ ಕಾಮ—ಅವಳಲ್ಲಿ. ಆಕೆಯದು ಕ್ಷಯರೋಗವೆಂದು ಡಾಕ್ಟರರಿಂದ ತಿಳಿದು, ಆಕೆಯ ಸಾಮಿಪ್ಯ ಇನ್ನು ಇಲ್ಲವಾದುದರಿಂದ, ಅವಳು ಅವನ ದೃಷ್ಟಿಪಥದಿಂದ ದೂರವಾದಳು—ಅಲ್ಲದೆ ಅವಳ ತಂದೆಯ ದುರ್ವ್ಯಸನದ ಲಾಭ ಹಡೆದುಕೊಂಡು, ಮೋಸದಿಂದ ಆಕೆಯ ಸಮ್ಮತಿ ಪಡೆದು, ಬೇರೊಂದು ಲಗ್ನವಾಗುವನು ಆ ನೀಚ ಮಾಲೋಜಿರಾಯ. ಆಗ ಈ ಸುದ್ದಿ ತಿಳಿದ ಕುಸುಮಮಾಲೆಗೆ ಆಘಾತವಾಗುವುದು. ಆದರೆ ಅದರ ಪರಿಣಾಮವಾಗಿ ಪ್ರತಿಕಾರ ಭಾವ ಮೂಡುವುದು— ತನ್ನ ಬಾಳಬಟ್ಟೆಯಲ್ಲಿ ಸುಳಿದ ಮಂಜುನಾಥನ ನಿಷ್ಕಾಮ-ಪ್ರೇಮದ ಅರಿವಾಗಿ, ಅವನ ಆಶ್ರಯ ಬಯಸಿದಳು ಆಕೆ. '

ಇನಿಷ್ಟು ಕಥೆಯ ರೂಪರೇಷೆಗಳು. ಕತೆಗಾರರು ಚಿಕ್ಕದಾದ ಈ ಕಥೆಯನ್ನು ಚೊಕ್ಕವಾಗಿ ಹೇಳಿಸಿದ್ದಾರೆ, ಆಸ್ಪತ್ರೆಯ ನರ್ಸಿನ ಮುಖದಿಂದ.ಕಥೆಯ ಪ್ರಾರಂಭ ಸರಳವಾದರೂ ಸುಂದರವಾಗಿದೆ. ಕಥೆಯಲ್ಲಿಯ ಪಾತ್ರಗಳು ಜೀವಕಳೆಯಿಂದ ಕುಣಿಯುತ್ತವೆ. ಕಥಾಮುಖದಲ್ಲಿಯೇ ಕುಸುಮಮಾಲೆಯ ಪರಿಚಯವಾಗುವುದು ರೋಗಿಯಾಗಿ, ಪೋಲಿಸ್

ಇನ್‌ಸ್ಪೆಕ್ಟರನ ಹೆಂಡತಿಯಾಗಿ.—ಆ ಮೇಲೆ 'ದುಃಖದ ಪ್ರತಿಮೆ'ಯಂತೆ ದೀನಮುಖದಿಂದ ಮಾಲೋಜಿರಾಯ ಕಾಣಿಸಿಕೊಳ್ಳುತ್ತಾನೆ— ಅನಂತರ ಕ್ರಮವಾಗಿ ನರ್ಸ್, ಡಾಕ್ಟರ್, ಕುಸುಮಮಾಲೆಯ ತಂದೆ, ಪತ್ರವ ಮೂಲಕ ಪರಿಚಿತಳಾಗುವ ಅವಳ ಸಖಿ, ಮುಂದೆ ಅವಳ ಪಾಲಿನ ದೇವತೆಯಾದ ನಿಷ್ಕಾಮಕರ್ಮಿ ಮಂಜುನಾಥ— ಓದುಗರ ಎದುರು ಸುಳಿಯುತ್ತಾರೆ.

ಇನ್ನು ಕಥೆಯಲ್ಲಿಯ ಎಳೆಗಳನ್ನು ಎಳೆದು ನೋಡುವುದಾದರೆ, ಕಥೆಗಾರರು ಮುಖ್ಯವಾಗಿ ಪ್ರೇಮವಿಲ್ಲದ ಬರಿ ಕಾಮ ತ್ಯಾಜ್ಯ ಎನ್ನುವುದನ್ನು ಎತ್ತಿ ಹಿಡಿದಿದ್ದಾರೆ. ದೇಹಗಳ ಮಿಲನವು ಕಾಮವಾದರೆ, ಹೃದಯಗಳ ಮಿಲನವು ಪ್ರೇಮ. ಕಾಳಿದಾಸ ಹೇಳಿದಂತೆ " ಪರಸ್ಪರ ಪ್ರೇಮವಿಲ್ಲದ ಮಿಲನಕ್ಕಿಂತ, ಪರಸ್ಪರ ಪ್ರೇಮವಿದ್ದ ವಿಯೋಗವೇ ಶ್ರೇಷ್ಠ. " ಹೆಣ್ಣು ಒಲಿಯುವುದು ಗಂಡಿನ ಗುಣಕ್ಕೆ ಹೊರತು ರೂಪ, ಐಶ್ವರ್ಯಗಳಿಗಲ್ಲ. ಅಂತೆಯೇ ಇಲ್ಲಿ ಕುಸುಮಮಾಲೆ ಮಂಜುನಾಥನ ನಿಷ್ಕಾಮ-ಪ್ರೇಮಕ್ಕೆ ಮಾರುಹೋಗುತ್ತಾಳೆ.

ಮುಂದಿನ ಎಳೆಯೆಂದರೆ, ಇಂದಿನ ಆಸ್ಪತ್ರೆಯ ಅಧಿಕಾರಿಗಳ ಧನ-ಲಾಲಸೆ, ಮದ, ನೀಚದೃಷ್ಟಿಗಳನ್ನು ಬಯಲಿಗೆಳೆದಿದ್ದಾರೆ. " ಅಂತಹ ಅವಸ್ಥೆಯಲ್ಲಿ ನಮ್ಮ ಆಸ್ಪತ್ರೆಯಲ್ಲಿ ಪ್ರವೇಶವೇ ದೊರೆಯುತ್ತಿರಲಿಲ್ಲ. ಆದರೆ ಆಕೆ ಒಬ್ಬ ಪೋಲಿಸ್ ಇನಸ್ಪೇಕ್ಟರ ಹೆಂಡತಿ " ಎಂಬಲ್ಲಿ— 'ಸರಕಾರಿ ಅಧಿಕಾರಿಗಳು, ಅವರ ಸಂಬಂಧಿಗಳು ರೋಗಿಗಳಾಗಿ ಇಲ್ಲಿಗೆ ಬಂದಾಗ' ಮಿಕ್ಕವರಿಗಿಂತ ಅವರಿಗೆ ಹೆಚ್ಚಿನ ಸೌಕರ್ಯಗಳು, ದೊರೆಯುವುವು." ಎನ್ನುವಲ್ಲಿ, ಆಸ್ಪತ್ರೆಗಳಲ್ಲಿ ಇಂದು ನಡೆಯುವ ಪಕ್ಷಪಾತಕ್ಕೆ ಕನ್ನಡಿ ಹಿಡಿದಂತಾಗಿದೆ.

"ತಿಂಗಳ ಕೊನೆಗೆ, ಗಂಡನ ಕಡೆಯಿಂದ ಆಸ್ಪತ್ರೆಯ ಕಾರ್ಯಾಲಯದಲ್ಲಿ ಹಣದ ಸಲುವಳಿಯಾಗುವುದು. ಇಂತಹ ರೋಗಿ ಆಸ್ಪತ್ರೆಯಲ್ಲಿ ಇರುವುದರಿಂದ ಆಸ್ಪತ್ರೆಯ ಸಂಚಾಲಕರಿಗೆ ಬೇಸರವಾದರೂ ಏಕೆ ಆಗಬೇಕು ? ಇಂತಹ ರೋಗಿಗಳನ್ನೇ ಅಲ್ಲವೆ ಅವರು ವಾರವಾರ ಬಯಸುವುದು ! ಬಂದ ರೋಗಿ ಬೇಗನೆ ಗುಣಹೊಂದಿ ಮನೆಗೆ ಮರಳಿದರೂ ಅವರಿಗೆ ಪ್ರಯೋಜನವಿಲ್ಲ."— ಬೇಗನೆ ಸತ್ತು ಹೋದರೂ ಪ್ರಯೋಜನವಿಲ್ಲ. ಎಂದು ಧನಪಿಶಾಚಿಯನ್ನು ಬಯಲಿಗಿಡುವ ವ್ಯಂಗ್ಯೋಕ್ತಿ ಅತ್ಯಂತ ಮಾರ್ಮಿಕವಾಗಿದೆ.

ಕುಸುಮಮಾಲೆ ಗುಣವಾಗಿ ಮತ್ತೆ ತನ್ನ ತಾರುಣ್ಯದ ಚೆಲುವನ್ನು ಗಳಿಸಿದಾಗ ವಾರ್ಡ್ ಡಾಕ್ಟರು, ಮುಖ್ಯ ಡಾಕ್ಟರು ಆಕೆಯನ್ನು ನೋಡುವ ಕೀಳು ಕಾಮುಕ ದೃಷ್ಟಿಯನ್ನು ಸೂಚ್ಯವಾಗಿ ಚಿತ್ರಿಸಿದ್ದಾರೆ.

ಇದಲ್ಲದೆ ಮಾಲೋಜಿರಾಯ ಆಕೆಯ ಕೆನ್ನೆಗಳನ್ನು ತೀಡಿದಾಗ, ಕುರುಳು ನೇವರಿಸಿದಾಗ, ಕ್ರಿಮಿನಾಶಕ ಮಿಶ್ರಣದಿಂದ ಕೈತೊಳೆಯುವುದು, ಆಕೆಯ ಹತ್ತಿರ ಹೋಗಲು ಹವಣಿಸಿದಾಗ ಅತನನ್ನು ಡಾಕ್ಟರು ಕೈಹಿಡಿದು ನಿಲ್ಲಿಸುವುದು— ಹೀಗೆ ಎಲ್ಲವೂ ಒಂದೊಂದಾಗಿ ವಾಚಕನ ಹೃದಯದಲ್ಲಿ ಕರುಣೆಯನ್ನು ಮೂಡಿಸುತ್ತವೆ.

ದುಷ್ಟ ವ್ಯಸನಗಳ ದಾಳಿಯಲ್ಲಿ ಸಿಕ್ಕ ಮನುಷ್ಯ, ಹಣಕ್ಕಾಗಿ ಎಂತಹ ನೀಚ ಕೆಲಸಕ್ಕೂ ಸಿದ್ಧನಾಗುತ್ತಾನೆ-ಎನ್ನುವುದನ್ನು ಕುಸುಮ-ಮಾಲೆಯ ತಂದೆಯ ಪಾತ್ರದ ಮುಖಾಂತರ ಚಿತ್ರಿಸಿ ತೋರಿಸಿದ್ದಾರೆ. ಆ ನೀಚ, ಹೃದಯಹೀನ ತಂದೆಯ ನಟನೆ ಕುಸುಮಮಾಲೆಗಾಗಿ ಕರುಣೆಯೇ ಹೊಸಲನ್ನೇ ಹರಿಸುತ್ತದೆ.

ವಿಶ್ವಾಸಘಾತವಾದಾಗ ಯಾವ ಮಾನವಪ್ರಾಣಿಯೂ ಪ್ರತಿಕಾರ ಬಗೆಯಲು ಹಿಂಜರಿಯುವುದಿಲ್ಲವೆನ್ನುವುದನ್ನು ಕುಸುಮಮಾಲೆಯ " ಆತನಿಗೆ ಮತ್ತೆ ಮದುವೆ....ನನಗೇಕೆ ಬೇಡ ?' ಎನ್ನುವ ಮಾತಿನಲ್ಲಿ ಮಾನವ ಹೃದಯದ ಅಂತರಾಳವನ್ನೇ ತೆರೆದು ತೋರಿದ್ದಾರೆ.

ಮನುಷ್ಯನ ರೋಗಕ್ಕೆ ಅವನ ಮನಸ್ಸೆ ೯೯ ಅಂಶ ಕಾರಣ. ಜೀವನದಲ್ಲಿ ಆಸ್ಥೆ, ಇದ್ದು ಗೆದೆಯಬೇಕೆಂಬ ನಿರ್ಧಾರ ಇವು ಮನುಷ್ಯನ ರೋಗವನ್ನು ದೂರ ಮಾಡುತ್ತವೆ. ಪ್ರತಿಕಾರ ಬುದ್ಧಿ ಮೂಡಿದಾಗ, ಮಂಜುನಾಥನ ಕೃಪಾದೃಷ್ಟಿಯನ್ನು ಕಂಡಾಗ, ಕುಸುಮಮಾಲೆಯ ರೋಗ ಮಾಯವಾಗುತ್ತದೆ. " ಯಾವ ಔಷಧಿ ಇವಳ ಮೇಲೆ ಇಷ್ಟೊಂದು ಸುಪರಿಣಾಮ ಮಾಡಿರಬಹುದು ?" ಎಂದು ಮುಖ್ಯ ಡಾಕ್ಟರರು ಕೇಳುವ ಮಾತಿನಲ್ಲಿ ಸಂಪೂರ್ಣ ಮರ್ಮ ಅಡಗಿದೆ.

ಇನ್ನು ಪಾತ್ರಗಳನ್ನು ಹಿಂಜಿನೋಡುವಾಗ, ಮೊದಲಸ್ಥಾನ ಕುಸುಮಮಾಲೆಗೆ. ' ಒಲಿದರೆ ನಾರಿ ಮುನಿದರೆ ಮಾರಿ ' ಎಂಬಂತೆ ಸ್ತ್ರೀಯಲ್ಲಿ ಪ್ರತಿಕಾರಭಾವನೆ ಮೂಡಿದರೆ, ಅವಳೇ ಚಂಡಿ ಚಾಮುಂಡಿಯಾಗ ಬಲ್ಲಳು.— ಎಂಬುದಕ್ಕೆ ಆಕೆ ಸಾಕ್ಷಿ. ಆಕೆಯೇ ಕಥಾನಾಯಿಕೆ. ಆಕೆಯ ಪಾತ್ರಲತೆಯನ್ನು ಲೇಖಕರು ನೈಜವಾಗಿ ಬೆಳೆಸಿದ್ದಾರೆ. ಆಕೆ ಆದರ್ಶದ ಮೂರ್ತಿಯೇನಲ್ಲ. ಮಾನವ ಸಹಜವಾದ ಗುಣ-ದೋಷಗಳು ಅವಳಲ್ಲಿವೆ. ಮಾಲೋಜಿರಾಯ—ಮಂಜುನಾಥ ಇಬ್ಬರನ್ನು ತನ್ನ ವಿವೇಚನೆಯ ಒರೆಗಲ್ಲಿಗೆ ಹಚ್ಚಿ ನೋಡಿದಳು; ವಿಮರ್ಶೆಯ ತಕ್ಕಡಿಯಲ್ಲಿ ತೂಗಿ ನೋಡಿದಳು. ಮಂಜುನಾಥನಲ್ಲಿ ಹೆಚ್ಚಿನದನ್ನು ಕಂಡಳು. ಅವಳ ಜೀವನ ಪ್ರವಾಹದ ಗತಿಯೇ ಬೇರೆಯಾಯಿತು. ಅಂದಿನಿಂದ. ಕುಸುಮಮಾಲೆಯ ಪಾತ್ರವನ್ನು ಸೃಷ್ಟಿಸಿ, ಪರಿಸ್ಥಿತಿ ಹೆಣ್ಣಿನಲ್ಲಿ ಹೇಗೆ ಪ್ರತಿಕಾರವನ್ನು ನೂಡಿಸುತ್ತದೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಇನ್ನು ಮಾಲೋಜಿರಾಯನ ಪಾತ್ರವನ್ನು ಅವನ ಮಾತುಗಳಿಗಿಂತ ಅವನ ಕೃತಿಗಳೇ ಪೂರ್ಣವಾಗಿ ಬರೆಯುತ್ತವೆ. ಹೆಂಡತಿಯಿಂದ ಸಮ್ಮತಿ ಪಡೆದ ನಂತರ ಅವನು ನಮ್ಮೆದುರು ಸುಳಿಯುವುದಿಲ್ಲ. ಪ್ರೇಮದ ಪರಿಚಯವೇ ಇಲ್ಲದ ಕಾಮಪಿಶಾಚಿ ಅತ. ಅತನಿಗೆ ಬೇಕಾದುದು ಕುಸುಮಮಾಲೆಯ ಹೃದಯವಲ್ಲ, ದೇಹ.

ಮಂಜುನಾಥ, ಕತ್ತಲೆಯ ರಾತ್ರಿಯಲ್ಲಿ ದಿಕ್ಕುಗಾಣದೇ ನಿಂತ ಕುಸುಮಮಾಲೆಗೆ ಧ್ರುವತಾರೆಯಂತೆ ಕಾಣಿಸಿಕೊಂಡ. ಅವನ ಮಾತು-ಕೃತಿಗಳೇ ಅವನ ಪಾತ್ರದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಅವನ ಲೋಕ ಅನಂತ. "ನಾನು ಒಬ್ಬನೇ! ನನಗೆ ಯಾರೂ ಇಲ್ಲ. ಎಂತಲೇ ಲೋಕವೆಲ್ಲವನ್ನೂ ನನ್ನವೆಂದು ಭಾವಿಸಿದ್ದೇನೆ. " ಎನ್ನುವಲ್ಲಿ, ಅವನ ಹೃದಯವೈಶಾಲ್ಯವನ್ನು ಕಂಡರಿಯಬಹುದು.

ಇವರನ್ನುಳಿದು ಸಹಾಯಕಪಾತ್ರಗಳಾಗಿ ಪರಿಚಿತರಾಗುವವರು ಕುಸುಮಮಾಲೆಯ ಧನಪಿಶಾಚಿ ದುಷ್ಟ ತಂದೆ, ಸುಶೀಲಳಾದ ಆದರೆ

ಸೆಳೆತದ ಸಿಲುಬೆ

(ನೂತನ ಕಥಾಸಂಕಲನದ ಪರಿಚಯ)

ಪರಿಚಯಕಾರರು : ಶ್ರೀ. ಈಶ್ವರ ಹಿರೇಗಂದೀಹಳ್ಳಿ

ಸಂಕಲನಕಾರರು : ಶ್ರೀ. ವೆಂ. ಮು. ಜೋಶಿ

ಜಯಂತಿ ಪ್ರಕಾಶನ, ಧಾರವಾಡ

ಪುಟಗಳು ೬೨. ಅ. ೧೨೬; ಬೆಲೆ ೧-೬-೦.

ಇಂದು ಹತ್ತಿಪ್ಪತ್ತು ಪತ್ರಿಕೆಗಳನ್ನು ತಿರುವಿಹಾಕಿದರೆ ಹುಡುಗ-ಹುಡುಗಿಯರ ಪ್ರಣಯಕಥೆಗಳನ್ನೇ ಕಾಣುತ್ತೇವೆ. ಒಂದು ಗಂಡು-ಒಂದು ಹೆಣ್ಣು ಪೇಗೋ ಕೂಡುವದು, ಹೇಗೋ ಆಗಲುವದು. ಅತೃಪ್ತ ಕಾಮಪಿಪಾಸೆ, ಕೊನೆಗೆ ಮಧುರಮಿಲನವೋ ಆತ್ಮಹತ್ಯೆಯೋ ಆಗುವದು, ಬಹುತರ ಕಥೆಗಳ ಧಾಟಿಯಾಗಿರುತ್ತದೆ. ಹೀಗಾಗಿ ಇಂದು 'ಸಣ್ಣ ಕಥೆಗಳ ಪಾವಳಿ' 'ನಡೆದು ಹೋಗಿ ಬರ್ತೀವಿ' ಅನ್ನುವ ಸ್ಥಿತಿಯಲ್ಲಿದೆ. ಈ ಪಾವಳಿಯಲ್ಲಿ ಅಲ್ಲೊಂದು ಇಲ್ಲೊಂದು ಕೈಬೆರಳಿನಿಂದ ತೋರಿಸುವಷ್ಟು ಒಳ್ಳೊಳ್ಳೆಯ ಕಥೆಗಳು ತಮ್ಮ ತಮ್ಮ ದಾರ್ಢ್ಯಕ್ಕನುಸಾರವಾಗಿ ತೇಲುತ್ತ ನಡೆದಿವೆ. ಶ್ರೀನಿವಾಸ ಅನಂದಕಂದ ಮೊದಲಾದವರು ಅಗಿನ ಕಾಲದ ಶಾಂತ-ಗಂಭೀರ ಅಳವಾದ ಕಥಾಶೈಲಿಗೆ ಎರಡು ಮೂರು ದಶಕದಿಂದೀಚೆ, ಅನಂದರು, ಕೃಷ್ಣರಾಯರು, ತರಾಸು, ನಿರಂಜನ ಮೊದಲಾವವರು, ಮಿಂಚುಸೇಗದ ಓಟಕೊಟ್ಟು ಪ್ರಗತಿಶೀಲದ ಮಾರ್ಗದಲ್ಲಿ ನಡೆಸುತ್ತಿದ್ದು, ಇದೀಗ ಪ್ರಯೋಗಶೀಲತೆಯು ನಮ್ಮ ಸಾಹಿತಿಗಳುಹೊಸ ಹೊಸ ಶೈಲಿಗಳಿಗೆ ಸಾಗಿಸುವ ಕವಲುದಾರಿಯಾಗಿದೆ.

ಈ ದಾರಿಯಲ್ಲಿಯೇ ನೂರು ಕಥಾಕುಸುಮಗಳನ್ನು ಹೆಣೆದು ಕರುನಾಡ ದೇವಿಯ ಸಿಂಗೊರಳಿಗೆ ತೊಡಿಸಿದ ಶ್ರೀ. ವೆಂ. ಮು. ಜೋಶಿಯವರು, 'ಸೆಳೆತದ ಶಿಲುಬೆ'ಯನ್ನು ಸಮಾಜದ ನಗ್ನಸತ್ಯವನ್ನು ತೂಗಲು ನಿಲ್ಲಿಸಿದ್ದಾರೆ. ಪ್ರಸ್ತುತ ಶಿಲುಬೆಯಲ್ಲಿ ಹನ್ನೆರಡು ಕಥೆಯ ಮೊಳೆಗಳನ್ನೂ ಜೋಡಿಸಿದ್ದಾರೆ.

" ಪ್ರಸವವೇದನೆಯಿಲ್ಲದೆ ತಾಯಿಯಾದೆ. ಈಗ ಪ್ರಸವವೇದನೆಯಿಲ್ಲದೇ— ಅಜ್ಜಿಯಾಗು"ವ ಶಾರದಕ್ಕನ " ಬಗೆಹರಿಯದ ಬಾಯಿಲೆಕ್ಕವು " ಓರಗೆಯ ಮುಲಮಗಳು ವಿಮಲೆಯು ತುಂಬುಬಸುರಿನ ಭಾಗ್ಯತನಗಿಲ್ಲವೆಂಬ ಮನೋವೈಜ್ಞಾನಿಕದ ತುಮುಲ ಯುದ್ಧವು, ವಿಷಮ ವಿವಾಹದ ಶಿಲುಬೆಗೆ ಸೆಳೆದೊಯ್ದದೆ; ವಿವಾಹವಿಲ್ಲದ ಪದವೀಧರೆ 'ಶೋಭಾ' ಸಾಹಿತ್ಯದ ಹುಚ್ಚಿನಿಂದ ಕಲ್ಪನಾಸಾಮ್ರಾಜ್ಯದ ರಾಣಿಯಾಗಿ, ಕವಿಯಿತ್ರಿಯಾಗುವ ಹವ್ಯಾಸದಲ್ಲಿ, ತರುಣ ಕವಿ ಶೃಂಗಿಯ' ಪ್ರೇಮಪುಷ್ಪದ ಭೃಂಗಿಯಾಗಿ, ವಂಚಿತಳಾಗಿ 'ಸಿಂಬಳದಲ್ಲಿ ಬಿದ್ದ ನೊಣದಂತೆ ಚಡಪಡಿಸುವ' ಸ್ತ್ರೀಸಹಜವಾದ ವಯಸ್ಸಿನ ಮನೋದೌರ್ಬಲ್ಯವು ಮೊದಲು ತರುಣ ಶೃಂಗಿಗೆ. 'ಎಡವಿದಬೊಟ್ಟು' ಅರುವತ್ತರ ಮುದಿಗೂಬೆ ತಿಂಗಳೂರಿನ ಅಬಲಾಶ್ರಮದ ಡಾ. ಕಾಮೇಶ್ವರರಾವ'ನಿಗೂ ಎಡುನಲೇಬೇಕಾಗುತ್ತದೆ. ಶಾರದಕ್ಕನ 'ಬಗೆಹರಿಯದ ಬಾಯಿಲೆಕ್ಕ, ವಿವಾಹದ ಬಿಡಿಸದ ಲೆಕ್ಕವಾಗಿ' ಶೋಭೆಯ ಅನೈತಿಕ ಕಾಮ ಪ್ರಚೋದನೆಯಿಂದ 'ಎಂಜಲು ಎಲೆಯಲ್ಲಿ ಉಣ್ಣದ ಕಾಮೇಶ್ವರರಾವ್', ತೋಡಿದ ಒರತಿ ಬತ್ತುವವರೆಗೆ, ತನ್ನದೊಂದೂ ಕೊಡತುಂಬಿಸಿಕೊಳ್ಳುವಂತೆ' ಶಾರದಾ--ಶೋಭಾ ಸೆಳೆತದ ಶಿಲುಬೆಗೇರಿದ ಎರಡು ಮೂಕಬಲಿಗಳು. ಹೆಣ್ಣಿನ ಶರೀರಸೌಂದರ್ಯವು ಕಣ್ಮರೆಯಾದ ತಾಯಿ, ಸಹಾನುಭೂತಿಯನ್ನು ತೋರುವ ನರ್ಸ್, ನೀಚವಾದ ಕಾಮದ ಕಣ್ಣಿನಿಂದ ನೋಡುವ ಡಾಕ್ಟರುಗಳು, ಕುಸುಮ ಮಾಲೆಯ ಸಖಿ, ವಾರ್ಡಿನಲ್ಲಿಯ ಸ್ತ್ರೀರೋಗಿಗಳು—ಹೀಗೆ ಹಲವಾರು ಜನ ಕಥೆಯ ಓಟದಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರಲ್ಲಿಯೂ ಕಥೆಯನ್ನು ಹೇಳುವ ನರ್ಸ್ ನಮ್ಮ ನೆನಹಿನ ನಿರಂತರ ನಿವಾಸಿಯಾಗುತ್ತಾಳೆ. ಸಹಾನುಭೂತಿಯನ್ನು ಪಡೆಯುತ್ತಾಳೆ.

ಇನ್ನು ಕಥೆಯ ರೀತಿಯನ್ನು ಹೇಳುವುದಾದರೆ ' ಅನಂದಕಂದ ' ರಂತಹ ಕತೆಗಾರರ ಕಥನಕೌಶಲವನ್ನು ಬಣ್ಣಿಸುವ ಎದೆಗಾರಿಕೆಯೇ ಬೇಡವೆಂದು ನನಗೆ ಎನಿಸುತ್ತಿದೆ. ಇನ್ನೇನು ಒಂದು ಮಾತನ್ನು ಹೇಳಬೇಕೆಂದರೆ, ಸಂಭಾಷಣೆ ಅಷ್ಟಾಗಿ ಇಲ್ಲದಿಯೂ ಕಥೆ ರಸವತ್ತಾಗಿದೆ. ಸಂಭಾಷಣೆ ಬರುವುದು ಕೇವಲ ಕೊನೆಯಲ್ಲಿ ಸ್ವಲ್ಪ. ಭಾಷೆ ಸರಳವಾಗಿದ್ದು, ಲಲಿತವಾಗಿದೆ. ಕಥೆಯ ಓಟ ಸರಾಗವಾಗಿದೆ. ಕಥೆಯ ರೀತಿ ನವೀನವಾಗಿದೆ. ತಲೆಬರಹ ಉಚಿತವಾಗಿದೆ. " All is well that ends well" ಎಂದ ಹಾಗೆ, ಮಂಗಲಮಯವಾದ ಕೊನೆ ಕಥೆಯನ್ನು ಮಂಗಲಗೊಳಿಸಿದೆ.

ಆದರೆ ಮಾನವನ ಮನಸ್ಸಿನಲ್ಲಿ ಸಹಜವಾಗಿರುವ ಹೊಯ್ದಾಟ To be or not to be ಎಂಬ ತೂಗುಯ್ಯಾಲೆ ಇಲ್ಲಿ ತೂಗುವುದಿಲ್ಲ. ಪತಿ ವಂಚಿಸಿದನೆಂದು ತಿಳಿದಾಗ, ಕುಸುಮಮಾಲೆಗೆ ಆಘಾತವಾಗುತ್ತದೆ. ಮುಂದೆ ಮೂರೇ ದಿನಗಳಲ್ಲಿ ಆಕೆಯಲ್ಲಿ ಪ್ರತಿಭಟನೆ ಮೂಡಿ ಬರುತ್ತದೆ. ರೋಗದಿಂದ ಮುಕ್ತಳಾಗಿ ಮಂಜುನಾಥ ಪ್ರೇಮವೃಕ್ಷದ ನೆರಳನ್ನು ಪಡೆಯುತ್ತಾಳೆ.

ಇನ್ನೇನು ತಂಗಿ, ಉಳಿದುದೆಲ್ಲ. ಒಳಿತು. ಇಂತಹ ನವೀನ ಆದರ್ಶದ ದೃಷ್ಟಿಕೋನದಿಂದ ಸುಂದರವಾಗಿ ಚಿತ್ರಿಸಿದ ಇಂತಹ ಪ್ರಗತಿಪರ ಕಥೆಗಳನ್ನು ಇಂದು ಸ್ವಾಗತಿಸೋಣ, ಅಲ್ಲವೆ ?' ಕಾಲ ಬದಲಾದಂತೆ ದೃಷ್ಟಿಕೋನ, ಜೀವನದ ನೆಲೆ-ಬೆಲೆಗಳು ಬದಲಾಗುತ್ತವೆ. ಆದರೆ ಕಾಲ ಒಳ್ಳೆಯದನ್ನು ನಿರ್ಣಯಿಸಿ ಸ್ವಾಗತಿಸಲಿ ಅಷ್ಟೆ ! ನಿನ್ನ ವಿಚಾರವೇನು ? ತಿಳಿಸುವೆಯಾ ? ಹಾಗಾದರೆ ಇಲ್ಲಿಗೇ ಈಗ ಪೂರ್ಣವಿರಾಮ ಹಾಕಲೇ ?

ಇತಿ ನಿನ್ನ
ಅಕ್ಕ

ರಾಜಕೀಯ ಉಭಯ ಬಣಗಳಿಗೂ ಬೆಂಕಿಯನ್ನು ಹಚ್ಚಬಲ್ಲದೆಂಬುದಲ್ಲಿ ನಮ್ಮ ಇತಿಹಾಸ ಸಾರುತ್ತ ಬಂದಿರುವಂತೆ ೪೨ರ ಯುದ್ಧದ ಪ್ರಸಂಗದಲ್ಲಿ ಮಲಾಯಾದ ಜಾಲಿವರ್ಡಿನ ಕುಣಿತದ ಹೆಣ್ಣಾದ ಕೆಥರಿನ್ನಳು ಪೆಂಗಯಾನ್, ಹಾಗು ಕ್ಯಾಪ್ಟನ್ ಫಿಕ್‌ಫೋರ್ಡ ಈ ಉಭಯ ಪ್ರತಿಸ್ಪರ್ಧಿಗಳಿಗೆ ರಾಜಕೀಯ ಗೂಢಚಾರಿಣಿಯ ಹಿಂಸೆಯ ಬಾಣವಾಗಿ ಬಲಿಯ ಬೀಸುವ "ಮುತ್ತಿನಹಾರ" ಹಾಕಿಕೊಂಡು, ತಾನೇ ಶಿಲುಬೆಗೆ ಸಿಕ್ಕು ಬಲಿಯಾದ ಚಮತ್ಕಾರಿಕ ಹೃದಯಂಗಮ ಘಟನೆ ಕರುಣಾರ್ದ್ರವಾಗಿದೆ. ಕಾರಕೂನ ರಂಗಣ್ಣ, ಸೈನಿಕ ರಂಗಣ್ಣ ಇಬ್ಬರೂ ಬಡತನದ ಕೆಂಡದಲ್ಲಿ ಬೆಂದು,, ಕೊನೆಯವನು ಸಂನ್ಯಾಸಿಯಾಗಬೇಕಿದ್ದವನು – ಒಂದು ಸೆಳೆತಕ್ಕೆ ಸಿಕ್ಕು ಸೈನಿಕನಾಗಿ ಯುದ್ಧದ ಪ್ರಸಂಗದಲ್ಲಿ ತಲೆಮರೆಸಿಕೊಂಡು ಬಂದು, ಸತ್ತಸುದ್ದಿಗೆ ಗುರಿಯಾಗಿ ಹೆಂಡತಿಗೆ ಪೆನ್ಷನು ಗಿಟ್ಟಿಸುತ್ತ ಕೊನೆಗೆ ವರುಷನರುಷವೂ · ಸ್ವಂತದ ಶ್ರಾದ್ಧ ' ಹೊಡೆಯುವುದು ಬಹು ಮೋಜಿನ ಪ್ರಸಂಗ ನಡೆದರೆ, ಕಾರಕೂನ ರಂಗಣ್ಣನ ನೂರೆಂಟು ಹರಕು ಪ್ರಪಂಚದಲ್ಲಿ ದುಡ್ಡಿನ ಅಭಾವದಲ್ಲಿ, ಹಣದ ತಾಂಡವ ನೃತ್ಯದಲ್ಲಿ "ದೇವರಿದ್ದಾನೆಯೆ ?" ಎಂದು ಪ್ರಶ್ನಿಸಿಕೊಂಡು ಛೀ ! ಎಲ್ಲಿಯ ದೇವರೆಂದು ಬಳಲುತ್ತಿರುವಾಗ ಎಂದೋ ಮನೆಯಲ್ಲಿ ಕಳವು ಮಾಡಿಕೊಂಡು ಹೋದ ಅಡಿಗೆಯವಳು ತಾನೇ ತಿರುಗಿ ಕಾಲು ಬೀಳುತ್ತೇನೆ ಯಾರ ಮುಂದೆಯೂ ಹೇಳಬೇಡಿರಿಂದು ೫೦೦ ರೂ. ನಗದಿ ಹಣತಂದು ಇಡುವಾಗ ಮುಂತ್ರಮುಗ್ಧರಾಗಿ ' ದೇವರಿದ್ದಾದು ಸತ್ಯ !' ಎಂದು ನಮಗೆ ನಾವೇ ನುಡಿಯುವ ನಗು ಅಳುವುಗಳ ಸುಂದರ ಸಂಗಮವಾಗಿದೆ.

ಕಲ್ಲುದೇವರ ಮೂರ್ತಿಯ ಮೇಲೆ ನಾಜೂಕು ಹೂವಿನಂತೆ, ಭೀಮನಂತಿದ್ದ ರಾಮರಾವ ಕುಲಕರ್ಣಿಯ ಹೂವಿನ ಹುಡುಗಿ ಮಾಲಿನಿಯ ನಗುನಗುವ ಸಂಸಾರದಲ್ಲಿ ಝುನಾನಾ ಹಾಸ್ಪಿಟಲಿನಲ್ಲಿ ನಡೆಯುವ ವೇಶ್ಯೆಯರ ಕುತಂತ್ರದಿಂದ ವಿಷಮತೆಯು ತಲೆದೋರಿ ಹಾಳಾಗಿ ಗಂಡ ದುರ್ಮಾರ್ಕ್ಕಿಳದು ಸುಂದರ ಸಂಸಾರ "ಒಡೆದ ಮಡಿಕೆ" ಯಾದ ದೃಶ್ಯ ಮಾರ್ಮಿಕವಾಗಿದೆ. ಈ ಮಾಲಿನಿ ತನ್ನ ದೇಹ ದೌರ್ಬಲ್ಯದಿಂದ ರಸಿಕ ಪತಿಯ ಮನಾಕರ್ಷಣೆಗೆ ಎರವಾದರೆ, ರಸಿಕ ಪತಿಯನ್ನೂ ಸುಂದರ ಶರೀರ ಸಂಪತ್ತನ್ನೂ ಪಡೆದ ಆ ಮಾಲಿನಿಯು ಭೂತಬೇತಾಳದ ಕಥೆಯನ್ನು ಕೇಳಿ ' ಸ್ಮಶಾನ ಶಾಂತಿ ' ಯನ್ನೂ ಪಡೆದು "ಅವಿಧವೆ" ಯಾಗಿ ಮನೋದೌರ್ಬಲ್ಯದಿಂದ ಸಂಸಾರ ಶಿಲುಬೆಗೆ ಬರುತ್ತಾಳೆ.

ಒಡ್ಡರಕಾಲ, ತಾಳಿಕೋಟೆಯ ನಿಂಗಿ ಸಮಾಜದ ಕತ್ತಲೆಯಲ್ಲಿ ಒಡೆದು ಕಾಣುವ ಹಾವರದ ಹೆಣ್ಣುಗಳು ' ಸೆಳೆತದ ಶಿಲುಬೆಗೆ ಏರಿದ ಪ್ರಮುಖ ನಗ್ನ ಸತ್ಯಗಳು. ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡು ತಾಯಿಯ ಹಾವರವನ್ನೂ ಪರಮವೆಂದಾದರಿಸುವ ಶಂಕರ— ಯನ್ನಸದಲ್ಲಿ ಒಡ್ಡರ ಕಾಳಿಯ ಸಂಸರ್ಗದಲ್ಲಿ ತಾಯಿಯೇ ಮಾರಿ ಎಂದು ಹಲಬುವ ಹೃದಯದ ಹಿನ್ನೆಲೆಯಲ್ಲಿ "ಕತ್ತಲೆ ಕವಿಯುತ್ತದೆ" ಮಲ ತಾಯಿಯ ಮಹಾಕಾಟ, ಬಡತನದ ಜಿಂಜಾಟಕ್ಕೆ ಬೇಸತ್ತು, ಪಂಜಾಬದ ಸಂಚಾರಿ ವೈದ್ಯನ ಬೆನ್ನು ಹತ್ತಿ ಜಬಲ್‌ಪೂರ ವೇಶ್ಯಾನಾಟಕೆಯ ಮೋಹನಬಾಯಿಯ ಒನೆಯ ರಾಣಿಯಾದ ತಾಳೀಕೋಟೆ ನಿಂಗಿಯು ಪ್ರಸ್ತುತ ಸೆಳೆತದ ಶಿಲುಬೆಗೆ ಏರಿದ್ದು ಬಹು ಚುರುಕಾಗಿದೆ.

ಸಾದರ ಸ್ವೀಕಾರ

೪೩ ಕಿರ್ಲೋಸ್ಕರ (ಮರಾಠೀ ಮಾಸಪತ್ರಿಕೆಯ ದೀಪಾವಳಿಯ ಸಂಚಿಕೆ). ಸಂಪಾದಕರು ಶ್ರೀಮಾನ್ ಮು. ಶಂ, ಕಿರ್ಲೋಸ್ಕರ, ಕಿರ್ಲೋಸ್ಕರ ಪ್ರೆಸ್, ಸ್ವಾರಗೇಟ್, ಪುಣೆ— ೩. ಡಿ. ೧ದ ೨೦೦ ಪುಟಗಳು. ಬೆಲೆ ೨.೦೦.

೪೪ ಸ್ತ್ರೀ (ಮರಾಠೀ ಮಾಸಪತ್ರಿಕೆಯ ದೀಪಾವಳಿ ಸಂಚಿಕೆ.) ಸಂಪಾದಕರು ಶ್ರೀಮಾನ್ ಮು. ಶಂ. ಕಿರ್ಲೋಸ್ಕರ್, ಕಿರ್ಲೋಸ್ಕರ್ ಪ್ರೆಸ್, ಸ್ವಾರಗೇಟ್, ಪುಣೆ— ೩. ಡಿ. ೧ ೧೫೨ ಪುಟಗಳು ಬೆಲೆ ೧.೭೫.

ಮೇಲಿನ ಎರಡೂ ಸಂಚಿಕೆಗಳು, ಅಂತರಂಗ-ಬಹಿರಂಗಗಳೆರಡರಲ್ಲಿಯೂ ಆಕರ್ಷಕವಾಗಿವೆ. ಮಹಾರಾಷ್ಟ್ರದಲ್ಲಿಯ ಆಧುನಿಕ ಸುಪ್ರಸಿದ್ಧ ಲೇಖಕರನೇಕರ— ವಿವಿಧ ವಿಷಯಕ ಲೇಖನ-ಕಥೆ-ನಾಟಕ-ಪ್ರಬಂಧಗಳನ್ನು ಈ ವಿಶೇಷ ಸಂಚಿಕೆಗಳಲ್ಲಿ ಓದಿಕೊಳ್ಳಬಹುದು. ಈ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಅಸಂಖ್ಯ ಜಾಹೀರಾತುಗಳು, ಆ ಪತ್ರಿಕೆಗಳ ಆರ್ಥಿಕಪರಿಸ್ಥಿತಿಯ ಸ್ವಾಸ್ಥ್ಯವನ್ನು ತಿಳುಹುತ್ತವೆ.

ಕಿಡಿಗೇಡಿ ಸೈನಿಕ ಪಂಜಾಬದ ಗುಲಝುರಿಲಾಲಸಿಂಗನ ತಂಗಿಯ ಅಮಾನುಷ ಅನೈತಿಕ ಅತ್ಯಾಚಾರದ ಆಹುತಿಯ ಕಥೆಯ ಹಿನ್ನೆಲೆಯಲ್ಲಿ ಗಾಡಿಯಲ್ಲಿ ನಡೆದುಬಂದ ಘಟನೆಯು ಬಹುಮಾರ್ಮಿಕವಾಗಿದೆ. ಸಿಂಗನ ತಂಗಿಯನ್ನು ಮನುಷ್ಯನ ಪಾಶವಿಕವೃತ್ತಿಯು ಶಿಲುಬೆಗೇರಿಸಿದರೆ— 'ರಮ್ಯರಮಿಯ' ದ. ಚಿ. ಮೋಡಕನು ಸ್ವತಃ ಶ್ರೀಮಂತ ಅಧಿಕಾರಿಯ ಮಗನಾಗಿದ್ದರೂ ಪುಟ್ಟಸಂಸಾರವನ್ನು ಸಾಗಿಸಲಾರದ ಅಸಹಾಯ ವ್ಯಕ್ತಿಯಾಗಿ ಸ್ವತಃ ಈ ಶಿಲುಬೆಗೇರಿದ ಹೃದಯಂಗಮ ದೃಶ್ಯವು ಮಾರ್ಮಿಕವಾಗಿದೆ. ಸೈನಿಕನ ಮಗಳಾಗಿ ಬೆಳೆದು-ಸೈನಿಕನ ಹೆಂಡತಿಯಾಗಿ ಉಳಿದು ಸೈನಿಕನ ತಾಯಿಯಾಗಿ— ಇಂಫಾಲದ ಮಿಲ್ಟ್ರಿಹಾಸ್ಪಿಟಲದ ಮುಖ್ಯ ನರ್ಸಾಗಿ ದೈವದುರ್ವಿಪಾಕದಿಂದ ಯುದ್ಧದಲ್ಲಿ ಪತಿ ಅಚ್ಚಪ್ಪನನ್ನು ಪತ್ತು ಮಗ ಮೋಹನನ್ನೂ ಕಳೆದುಕೊಂಡು 'ಅನ್ನಪೂರ್ಣಾ' ಜೀವನದಲ್ಲಿ ಹಲವಾರು ಆಶಿಆಕಾಂಕ್ಷೆಗಳನ್ನು ಇಟ್ಟುಕೊಂಡು ಕೊನೆಗೆ 'ಅಪೂರ್ಣಾ' ಆಗುತ್ತಾಳೆ.

ಹೀಗೆ ಸೆಳೆತದ ಶಿಲುಬೆಯ ಹನ್ನೆರಡು ಕೀಲುಗಳು ಒಂದೊಂದ ಬಗೆಯ ಸಮಾಜದ ಇರಿತದ ಚೂರಿಗಳಾಗಿವೆ.

ಕಥೆಗಳಿಗೆ ಬಳಸಿದ ಭಾಷೆ— ತುಂಬ ಹಿತಮಿತವಾದ್ದಾಗಿದೆ. ಸಣ್ಣ ಸಣ್ಣ ವಾಕ್ಯಗಳು. ಘಟನೆಗಳನ್ನು ಸರಳವಾಗಿ ಮಾರ್ಮಿಕವಾಗಿ ವಿವರಿಸುವ ಸುಂದರ ಶೈಲಿ—ಓದುಗರ ಮನಸೆಳೆದು ಹೃದಯ ತನಿಸುತ್ತದೆ. ಕೆಲವೊಂದು ಒಗ್ಗದ ಶಬ್ದಗಳು ಮಾತ್ರ ಓದುವಾಗ ಹರಳು ಕಡಿದಂತೆ ಬರುತ್ತವೆ. ಕೆಲವೊಂದು ಸಾಮಾನ್ಯವಾದ ಅಚ್ಚುದೋಷಗಳೂ ಅಲ್ಲಲ್ಲಿ ತಲೆದೋರಿವೆ. ಒಂದೆರಡು ಕಡೆಗೆ ಪುನರಾವೃತ್ತಿ ಅನಿಸಿದೆ. ಒಟ್ಟಿನಮೇಲೆ "ಸೆಳೆತದ ಶಿಲುಬೆ" ಇಂದಿನ ಕೆಲವು ಒಳ್ಳೆಯ ಕಥೆಗಳಲ್ಲಿ ಒಂದಾಗಿದೆ. ಇನ್ನೂ ಇಂಥ ಹಲವಾರು ಕೃತಿಗಳು ಶ್ರೀಮಾನ್ ಜೋಶಿಯವರಿಂದ ನಾವು ನಿರೀಕ್ಷಿಸುವದು ಅವಶ್ಯವಾಗಿದೆ.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ ! ಜಾನಪದ ಪ್ರೀತಿಗೀತಗಳು !!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣಿಯಾಕೆ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವನನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತಳಗs — ಬೆಂದs ಗಂಧs ಹರಡೈತವ್ವಾ !

ಎಂಬ ಆನಂದಾನುಭವನವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಅ. ಲಂ ಪುಟಗಳು ಬೆಲೆ ರೂ. ೧. ೫೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು :

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ಸರ್ವೋದಯ

ಎಲ್ಲೆಲ್ಲಿಂದಲೂ ಎದ್ದು ಬರುತಲಿದೆ 'ಸರ್ವೋದಯ' ಎಂಬ ಸದ್ದು.
ಎಲ್ಲ ದಿಕ್ಕುಗಳನೂ ಆಪ್ಪಳಿಸುತಿದೆ ಸರ್ವೋದಯದ ಕೊಂಡಾಟದ ಕೂಗು.
ಎಲ್ಲರ ಬಾಯಲ್ಲಿಯೂ ಒಂದೆ ಮಂತ್ರದ ಜಪ: 'ಸರ್ವೋದಯ–ಸರ್ವೋದಯ!'

ಆಯ್ಯಾ, 'ಸರ್ವೋದಯ' ಎಂಬುದಿದೊಂದು ಅರ್ಥರಹಿತ ಅಕ್ಷರಮಾಲಿಕೆಯೇನಯ್ಯಾ! 'ಸರ್ವೋದಯ' ಎಂಬ ಶಬ್ದಕ್ಕೆ ಅರ್ಥವೇನಾದರೂ
ಇದೆಯೇನಯ್ಯಾ!

ಇದೆಯೆಂಬಿರಾದರೆ, ಅವನರಿತು ಕೂಗುವವರು ಎಸು ಜನರಯ್ಯಾ!
ಒಬ್ಬನ ಕೊರಳ ಮೇಲೆ ಇನ್ನೊಬ್ಬ ಕುಳಿತು ಕೂಗುತಿಹ: 'ಸರ್ವೋದಯ!'
ಇನ್ನೊಬ್ಬರ ಮನೆಯ ಕನ್ನ ಕೊರೆಯುತ್ತಲೆ ಗೊಣಗುವನೊಬ್ಬ:
'ಸರ್ವೋದಯ!'

ಎದುರಿರುವನ ಎದೆಗೆ ಗುಂಡಿನ ಗುರಿಯಿಟ್ಟು ಘೋಷಿಸುವನೊಬ್ಬ
'ಸರ್ವೋದಯ!'

ಕುರಿವಾನಿಸರ ನೆತ್ತರ ಕುಡಿದು ಕೊಬ್ಬಿ ಕಿರಿಚುವನೊಬ್ಬ 'ಸರ್ವೋದಯ!'
'ನನ್ನ ಮಡಿಲೆ ತುಂಬಿ ಹೊರಚೆಲ್ಲಲಿ! ಇದುವೆ ಸರ್ವೋದಯ!'
'ಸಾವಿರ ಜನರ ಕೈದುತ್ತು ನನ್ನ ಬಾಯಲಿಯೆ ಬೀಳಲಿ, ಇದೇ
ಸರ್ವೋದಯ!'
'ನನ್ನ ಭಾಂಡಾರವು ಬಡ್ಡಿಗೆ ಬಡ್ಡಿ ಬೆಳೆಯಿಸಲಿ! ಇದುವೇ ಸರ್ವೋದಯ!'
'ಇದ್ದ ಭೋಗವೆಲ್ಲ ನನಗೇ ದೊರೆಯಲಿ! ಇದುವೇ ಸರ್ವೋದಯ!'

ಆಹುದೇನು ತಂದೆ? ಇಂದಿನ 'ಸರ್ವೋದಯ'ದಲ್ಲಿ ಹುದುಗಿದ ಹುರುಳು
ಹೀಗಿದೆಯೆಂದು ಕವಿಯಲಿ ಹೇಳುತಿಹ ನಮ್ಮ ಕಿಡಿಗೇಡಿ ಕಾಲರಾಯ!

—ಸಾಮಾಜಿಕ

JAYANTI

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ ! **ಜಾನಪದ ಪ್ರೀತಿಗೀತಗಳು !!**

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣಿಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮೆರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳಿದೈತವ್ವಾ —
ಮುಂದ ಹಿಂದ ಮ್ಯಾಲ ತೆಳಗs — ಚೆಂದs ಗಂಧs ಹರಡೈತವ್ವಾ !

ಎಂಬ ಆನಂದಾನುಭವವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರೌ. ಅ. ೬೦ ಪುಟಗಳು **ಬೆಲೆ ರೂ. ೧. ೨೫ ನ. ಪೈ.**

ಬೇಕೆನ್ನುವವರು ಕೆಳಗಿನ ನಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು :

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ಸರ್ವೋದಯ

ಎಲ್ಲೆಲ್ಲಿಂದಲೂ ಎದ್ದು ಬರುತಲಿದೆ 'ಸರ್ವೋದಯ' ಎಂಬ ಸದ್ದು.
ಎಲ್ಲ ದಿಕ್ಕುಗಳನೂ ಆಪ್ಪಳಿಸುತಿದೆ ಸರ್ವೋದಯದ ಕೊಂಡಾಟದ ಕೂಗು.
ಎಲ್ಲರ ಬಾಯಲ್ಲಿಯೂ ಒಂದೆ ಮಂತ್ರದ ಜಪ: 'ಸರ್ವೋದಯ–ಸರ್ವೋದಯ!'

ಅಯ್ಯಾ, 'ಸರ್ವೋದಯ' ಎಂಬುದಿದೊಂದು ಅರ್ಥರಹಿತ ಅಕ್ಷರಮಾಲಿಕೆಯೇನಯ್ಯಾ! 'ಸರ್ವೋದಯ' ಎಂಬ ಶಬ್ದಕ್ಕೆ ಅರ್ಥವೇನಾದರೂ
ಇದೆಯೇನಯ್ಯಾ!
ಇದೆಯೆಂಬಿರಾದರೆ, ಅವನರಿತು ಕೂಗುವವರು ಏಸು ಜನರಯ್ಯಾ!
ಒಬ್ಬನ ಕೊರಳ ಮೇಲೆ ಇನ್ನೊಬ್ಬ ಕುಳಿತು ಕೂಗುತಿಹ: 'ಸರ್ವೋದಯ!'
ಇನ್ನೊಬ್ಬರ ಮನೆಯ ಕನ್ನ ಕೊರೆಯುತ್ತಲಿ ಗೊಣಗುವನೊಬ್ಬ:
'ಸರ್ವೋದಯ!'
ಎದುರಿರುವನ ಎದೆಗೆ ಗುಂಡಿನ ಗುರಿಯಿಟ್ಟು ಘೋಷಿಸುವನೊಬ್ಬ
'ಸರ್ವೋದಯ!'
ಕುರಿವಾನಿಸರ ನೆತ್ತರ ಕುಡಿದು ಕೊಬ್ಬಿ ಕಿರಿಚುವನೊಬ್ಬ 'ಸರ್ವೋದಯ!'
'ನನ್ನ ಮಡಿಲೆ ತುಂಬಿ ಹೊರಚೆಲ್ಲಲಿ! ಇದುವೆ ಸರ್ವೋದಯ!'
'ಸಾವಿರ ಜನರ ಕೈದುತ್ತು ನನ್ನ ಬಾಯಲಿಹೆ ಬೀಳಲಿ, ಇದೇ
ಸರ್ವೋದಯ!'
'ನನ್ನ ಭಾಂಡಾರವು ಬಡ್ಡಿಗೆ ಬಡ್ಡಿ ಬೆಳೆಯಿಸಲಿ! ಇದುವೇ ಸರ್ವೋದಯ!'
'ಇವ್ವ ಭೋಗವೆಲ್ಲ ನನಗೇ ದೊರೆಯಲಿ! ಇದುವೇ ಸರ್ವೋದಯ!'
ಅಹುದೇನು ತಂಪೆ? ಇಂದಿನ 'ಸರ್ವೋದಯ'ದಲ್ಲಿ ಹುದುಗಿದ ಹುರುಳು
ಏಗಿವೆಯೆಂದು ಕವಿಯಲಿ ಹೇಳುತಿಹ ನಮ್ಮ ಕಿಡಿಗೇಡಿ ಕಾಲರಾಯ!

—ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

ಬೆಂಗಳೂರಲ್ಲಿ ಕಾಂಗ್ರೆಸ್ ಮಹಾಸಭೆ (ಸಂಪಾದಕೀಯ)
ಸಂಪಾದಕರು ೨೫೭

ನಾಡನಡೆ (ಸ್ಥಾನಿಕ ಟಿಪ್ಪಣಿಗಳು)
'ಕಾಲಭೈರವ' ೨೫೯

ನಾಡೂ (ಮನೋವಿಶ್ಲೇಷಣಾತ್ಮಕ ಕಥೆ)
ಶ್ರೀ. ರಾಘವೇಂದ್ರ ಖಾಸನೀಸ, ಎಂ. ಎ., ಡಿಪ್. ಲಿಬ್. ಪುಣೆ. ೨೬೮

ಗೊಂಬೆಯಾಟದ ವೀರನು (ಕವನ)
ಶ್ರೀ. ರಂಜನಭಟ್ಟ, ಮದ್ರಾಸು ೨೭೫

ಮನುಜ ಸತ್ಯ !....? (ಕವನ)
ಶ್ರೀ. ಈಶ್ವರ ಹಿರೇನಂದಿಹಳ್ಳಿ, ಸೊರಬ ೨೭೫

ಬೆಲ್‌ಜಿಯಮ್ ಪ್ರವಾಸ (ಶ್ರೀ. ವಿ. ಕೃ. ಗೋಕಾಕರ)
ಶ್ರೀ. ಜಿ. ವಿ. ಕುಲಕರ್ಣಿ ಶ್ರೀ. ಕೆ. ಎಸ್. ಶರ್ಮಾ, ಧಾರವಾಡ ೨೭೬

ಮೇಘದೂತ : (ಕವನ)
ಶ್ರೀ. ಎ. ವಿ. ಸದರಜೋಶಿ, ಬೆಳಗಾಂವಿ ೨೮೦

ಭಾರ್ಗವಿ (ಪೌರಾಣಿಕ ಜೀವನರೂಪಕ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೨೮೧

ಆಸಾಮು (ಅಜ್ಞಾತವಾಸದ ಕೊನೆಯ ವರ್ಷ)
ಶ್ರೀ. ಪಿ. ವಿ. ಗುಡಿ, ಗೌಹಟ್ಟಿ ಆಸಾಮು ೨೮೪

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ವಿ. ಎ. ಜೋಶಿ, ಜನತಾ ಕಾಲೇಜ್, ಧಾರವಾಡ ಮತ್ತು
ಶ್ರೀ. ಎಸ್. ಆರ್. ಪಾಡಿ, 'ವಿಶಾರದ' ಕಲ್ಲಕಟ್ಟೆ. ೨೮೬

ಪುಸ್ತಕ ವಿಮರ್ಶೆ (ವಿಮರ್ಶೆ)
ಎನೆಸ್ಜಿ. ೨೯೨

ಸಾದರ ಸ್ವೀಕಾರ .... (ಹೊದಿಕೆಯ ಒಳಪುಟ)

ಜಯಂತಿ

ಸಂಪುಟ ೩೫] [ಸಂಚಿಕೆ ೮

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಡಿ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಬೆಂಗಳೂರಲ್ಲಿ ಕಾಂಗ್ರೆಸ್ ಮಹಾಸಭೆ

ಮೂವತ್ತೈದು ವರುಷಗಳ ಹಿಂದೆ ಬೆಳಗಾವಿಯಲ್ಲೊಮ್ಮೆ ಕಾಂಗ್ರೆಸಿನ ಮಹಾಸಭೆ ನಡೆದಿತ್ತು; ಈಗ ಮೊನ್ನೆ ಮೊನ್ನೆ ಬೆಂಗಳೂರಲ್ಲಿ ಅದೇ ೮ ಮಹಾಸಭೆ ಜರುಗಿತು. ಎರಡೂ ಅಧಿವೇಶನಗಳನ್ನು ಕಣ್ಣಾರೆ ಕಂಡವರು ಈಗಲೂ ಸಾಕಷ್ಟು ಜನರಿದ್ದಾರೆ. ಎರಡೂ ಸಲ ಈ ಮಹಾಸಭೆಯ ಅಧಿವೇಶನವನ್ನು ಕರೆದು ನಡೆಯಿಸಿದವರು ಕನ್ನಡಿಗರು. ಆದರೆ ಬೆಳಗಾಂವಿಯ ಕಾಂಗ್ರೆಸಿನ ಕಾಲದ ಕನ್ನಡಿಗರ ಪರಿಸ್ಥಿತಿ-ಮನಃಸ್ಥಿತಿಗಳೆಂತಹವು!

ಅಂದು ಬೆಳಗಾಂವಿಯಲ್ಲಿ ಕಾಂಗ್ರೆಸ್ ಮಹಾಸಭೆ ಸೇರಿದಾಗ, ಭಾರತವು ಪರರ ಅಧೀನದಲ್ಲಿತ್ತು; ಕರ್ನಾಟಕವು ಹೇಳಲು ಹೆಸರಿಲ್ಲದಂತೆ ಹದಿನೆಂಟು ತುಂಡಾಗಿ, ಬೇರೆ ಬೇರೆ ಆಡಳಿತಗಳಿಗೆ ಒಳಪಟ್ಟಿತ್ತು. ಅಂದಿನ ಕಾಂಗ್ರೆಸ್ ಅನುಯಾಯಿಗಳಾದ ಕನ್ನಡಿಗರಿಗೆ ಭಾರತೀಯ ಸ್ವಾತಂತ್ರ್ಯವು ಮುಖ್ಯ ಆದರ್ಶವಾಗಿತ್ತು; ಅದರೊಂದಿಗೆ ಕನ್ನಡ ನಾಡನ್ನು ಒಂದು ಗೂಡಿಸಬೇಕೆಂಬ ಗೌಣ ಆದರ್ಶವೂ ಇದ್ದಿತು. ಇನ್ನೆರಡೂ ಆದರ್ಶಸಾಧನೆಗಾಗಿ ನಡೆಸಬೇಕಾದ ಹೋರಾಟಗಳು ಜನರಿಂದ ತ್ಯಾಗ-ಸೇವೆಗಳನ್ನು ಬಯಸುತ್ತಿದ್ದುವು: ಅವುಗಳನ್ನು ಕೊಡಲು ಜನತೆಯ ಹೃದಯ-ಮನಗಳು ಹದಿನಾರಾಣೆ ಸಿದ್ಧವಾಗಿದ್ದುವು. ಅಂದಿನ ವಾತಾವರಣದಲ್ಲಿ ಅಧಿಕಾರ-ಸ್ಥಾನಮಾನಗಳ ಸುಳಿವು ಕೂಡ ಇರಲಿಲ್ಲ. ಎಲ್ಲರಿಂದಲೂ ಅದು ಬಲಿದಾನವನ್ನು ಮಾತ್ರ ಬೇಡುತ್ತಿದ್ದಿತು.

ಬೆಳಗಾಂವಿಯ ಕಾಂಗ್ರೆಸ್ಸು ಕರ್ನಾಟಕದ್ದಾದ್ದರಿಂದ, ಅದರ ಕಾರ್ಯಕರ್ತರ ಗುಂಪಿನಲ್ಲಿ, ಕನ್ನಡನಾಡಿನ ಎಲ್ಲ ಭಾಗದ ಜನರೂ ಕನ್ನಡತನದ ಅಭಿಮಾನದಿಂದ ಸೇರಿಕೊಂಡಿದ್ದರು. ಅವರ ಸ್ವದೇಶಾಭಿಮಾನವೇ ಕಾಂಗ್ರೆಸ್ ಸೇರಲಿದ್ದ ಸ್ಥಳಕ್ಕೆ 'ವಿಜಯನಗರ' ಎಂಬ ಹೆಸರನ್ನಿರಿಸಿತು; ಕಾಂಗ್ರೆಸ್ಸಿಗಾಗಿಯೇ ಅಗಿಸಿದ ಮಹಾವಾಪಿಗೆ 'ಪಂಪಾಸರೋವರ' ಎಂಬ ಹೆಸರನ್ನಿರಿಸಿತು. ಕನ್ನಡಿಗರ ಈ ಸಾಮುದಾಯಿಕ ಅಭಿಮಾನವೇ ಸಭಾಮಂಟಪದ ಮಹಾದ್ವಾರದ ಮೇಲೆ, ಹಂಪೆಯ ವಿರೂಪಾಕ್ಷನ ಭವ್ಯಗೋಪುರದ ಪ್ರತಿಕೃತಿಯನ್ನು ನಿಲ್ಲಿಸಿತು. ಆಗ ಜನತೆಯ ದೃಷ್ಟಿಯೆದುರು ಸ್ವತಂತ್ರಭಾರತ, ಅಖಂಡಕರ್ನಾಟಕ ಇವೆರಡೇ ಇದ್ದುವು. ಇವೆರಡರ ಸಾಧನೆಗಾಗಿ ಒಟ್ಟುಗೂಡಿ ಮಡಿಯಲು ಎಲ್ಲರೂ ಸಿದ್ಧರಿದ್ದರು.

ಈಗ ಬೆಂಗಳೂರಲ್ಲಿ ಕಾಂಗ್ರೆಸ್ಸು ಸೇರಿದಾಗ, ಭಾರತವು ಸ್ವತಂತ್ರವಾಗಿದೆ; ಯಾವುದೇ ಹೆಸರಿನಿಂದಾದರೂ ಕನ್ನಡಿಗರಿಗೊಂದು ಪ್ರತ್ಯೇಕ ರಾಜ್ಯ ದೊರೆತಿದೆ. ಅಂದಿನ ಕನ್ನಡಿಗರಿಗೆ ಆದರ್ಶವಾಗಿದ್ದ ಎರಡೂ ವಿಷಯಗಳು ಇಂದಿನವರಿಗೆ ಪ್ರತ್ಯಕ್ಷ ಸಿದ್ಧಿಗಳಾಗಿವೆ. ಹಿಂದೆ ಬ್ರಿಟಿಶರ ಬಗಲಗೂಸಾಗಿ ಅವರಿಗೆ ಸಹಕಾರಕೊಡುತ್ತಲಿದ್ದ ಅನೇಕ ಜನರು, ಇಂದು ವೇಷಬದಲಿಸಿ ಕಾಂಗ್ರೆಸಿಗರಾಗಿದ್ದಾರೆ. ಇಂದಿನ ವಾತಾವರಣದಲ್ಲಿ ಅಧಿಕಾರ-ಸ್ಥಾನ-ಮಾನಗಳು ಮೂಡಿ ಮಿಂಚುತ್ತಲಿವೆ ಕಾಂಗ್ರೆಸ್ಸಿಗರು ಅವುಗಳಿಗೆ ಮುಗ್ಧರಾಗಿದ್ದಾರೆ. ಪ್ರತಿಯೊಬ್ಬ ಕಾಂಗ್ರೆಸ್ಸಿಗನಲ್ಲಿಯೂ ವೈಯಕ್ತಿಕ ಸ್ವಾರ್ಥಲೋಭ ಬೆಳೆದುಕಾಣುತ್ತಲಿದೆ. ಈ ಸ್ವಾರ್ಥಲೋಭ ಪರಸ್ಪರರನ್ನು ಸಂದಿಗ್ಧ ದೃಷ್ಟಿಯಿಂದಲೂ ಸ್ಪರ್ಧಾಭಾವದಿಂದಲೂ ನೋಡಹಚ್ಚಿದೆ. ಆದುದರಿಂದಲೇ ಒಟ್ಟುಗೂಡಿ ಕಾರ್ಯಮಾಡಬೇಕೆಂಬ ಮನಃಪ್ರವೃತ್ತಿ ಕಡಮೆಯಾಗಿದೆ. ರಾಷ್ಟ್ರದ ಕಲ್ಯಾಣಕಾರ್ಯ ಯಾವಾಗಲೂ ಬಲಿದಾನವನ್ನು ಬೇಡುತ್ತಲೇ ಇರುತ್ತದೆ; ಆದರೆ ಇಂದು ಬಲಿದಾನಕ್ಕೆ ಸಿದ್ಧರಾಗುವ ಕಾಂಗ್ರೆಸ್ಸಿಗರ ಸಂಖ್ಯೆ ಕ್ಷೀಣವಾಗಿದೆ.

ಬೆಂಗಳೂರಿನ ಕಾಂಗ್ರೆಸ್ಸು ಕರ್ನಾಟಕದ್ದೆಂದೇ ನಡೆಯಿತು. ಇದರ ಕಾರ್ಯಕರ್ತರಲ್ಲಿಯೂ ಅಲ್ಪಸ್ವಲ್ಪ ಪ್ರಮಾಣದಿಂದ ಹೊರ ಮೈಸೂರಿನ ಕನ್ನಡಿಗರು ಇರಬಹುದು. ಕಾಂಗ್ರೆಸ್ ಸೇರಿದ ಸ್ಥಳಕ್ಕೆ 'ಕೃಷ್ಣರಾಜನಗರ' ಅಥವಾ 'ಜಯಚಾಮರಾಜನಗರ' ಎಂಬ ಹೆಸರನ್ನಿರಿಸದೆ. ದಿವಂಗತ ಕಾರ್ನಾಡು ಸದಾಶಿವರಾಯರ ಕಾರ್ಯ ಸ್ಮರಣೆಯಾಗುವಂತೆ 'ಸದಾಶಿವನಗರ' ಎಂದು ಇರಿಸಿದುದು ಅನೇಕರಿಗೆ ಆಶ್ಚರ್ಯದ ಸಂಗತಿಯಾಗಿದೆ. ಏಕೆಂದರೆ, ಬದುಕಿ ಇದ್ದಾಗ ತಂದೆಯ ಬಾಯಲ್ಲಿ ಎರಡು ಹನಿ ನೀರನ್ನು ಕೂಡ ಬಿಡದ ಉಪಕಾರಗೇಡಿ, ತಂದೆ ಸತ್ತನೆಲೆ ಧುರಂಧುರಿಯಿಂದ ಉತ್ತರಕ್ರಿಯೆಯನ್ನು ಮಾಡಿದನಂತೆ, ಹಾಗಿದೆ 'ಸದಾಶಿವನಗರ' ಹೆಸರಿನ ರೀತಿ. ಪಾಪ, ದೇಶಕ್ಕಾಗಿಯೆ ಮನೆ-ಮಠಗಳ ಮೇಲೆ ತುಲಸೀಪತ್ರವನ್ನಿಟ್ಟು ನಿಜವಾದ ದಾಸರಾದ ಸದಾಶಿವರಾಯರು, ತಮ್ಮ ಆಯುಷ್ಯದ ಕೊನೆಯ ಕಾಲವನ್ನು ಅಜ್ಞಾತವಾಸ-ವನವಾಸಗಳಲ್ಲಿ ಕಳೆಯಬೇಕಾಯಿತು. ಕನ್ನಡಿಗರು ಈ ಬಗೆಯಿಂದ ತನ್ನ ಋಣವನ್ನು ತೀರಿಸುವ ನಾಟಕನಾಡಿದುದು, ಆ ಸಾತ್ತ್ವಿಕ ಜೀವಿಗೆ ಯಾವರೀತಿಯ ತೃಪ್ತಿಯನ್ನು ಕೊಟ್ಟಿರಬಹುದೋ ಏನೋ ! ಇಂದಿನ ಕಾಂಗ್ರೆಸ್ ಕಾರ್ಯಕರ್ತರೆಂದರೆ, ಬದುಕಿ ಇದ್ದವರೊಡನೆ ಹೋರಾಟ; ಸತ್ತವರೊಡನೆ ಆದರ-ಭಕ್ತಿಗಳ ಆಟ !

ಅಂದು ಬೆಳಗಾಂವಿ— ಚಿಕ್ಕ ಬೆಳಗಾಂವಿ— ಅರೆಂಟು ಲಕ್ಷ ಜನರನ್ನು ಕಾಂಗ್ರೆಸಿಗಾಗಿ ಬರಮಾಡಿಕೊಂಡಿತ್ತು. ಉತ್ತರ ಕರ್ನಾಟಕದ ಹಳ್ಳಿ-ಹಟ್ಟಿಗಳ ಜನರೂ ಕಾಂಗ್ರೆಸ್ಸನ್ನು ನೋಡಬೇಕೆನ್ನುವ ಉತ್ಸಾಹದಿಂದ ಬೆಳಗಾಂವಿಗೆ ಬಂದರು. ಪರಾಧೀನ ಪ್ರಜೆಗಳಾದರೂ, ನಾಡಿನ ಮುಂದಾಳುಗಳು ಕೇಳಿದ ಎಲ್ಲ ಬಗೆಯ ಸಹಕಾರಗಳನ್ನು ಕೊಟ್ಟರು. ಕಾರ್ಯಕರ್ತರೆನಿಸಿಕೊಳ್ಳುವವರು ಉಚ್ಚ-ನೀಚಗಳನ್ನು ನೋಡದೆ, ಪ್ರತಿಯೊಂದು ಕಾರ್ಯವನ್ನೂ ಕರ್ತವ್ಯ ಬುದ್ಧಿಯಿಂದ ಮಾಡಿದರು. ಅಂದು ಕಾಂಗ್ರೆಸ್ ಮಹಾಸಭೆಗೆ ಅಧ್ಯಕ್ಷರಾಗಿದ್ದವರು ಸ್ವಾರ್ಥತ್ಯಾಗದ ಪುತ್ಥಳಿ—ಜಗದ್ವಂದ್ಯ ಮಹಾತ್ಮಾಗಾಂಧಿಯವರು.

ಇಂದು ಬೆಂಗಳೂರು—ರಾಜಧಾನಿ ಬೆಂಗಳೂರು— ಕಾಂಗ್ರೆಸ್ಸಿಗಾಗಿ ಹೆಚ್ಚು ಜನರನ್ನು ಬರಮಾಡಿಕೊಳ್ಳಲು ಸಮರ್ಥವಾಗಲಿಲ್ಲ. ಮೈಸೂರಿನ ದಸರೆಯ ಹಬ್ಬಕ್ಕೆ ಕಡಲತೆರೆಗಳಂತೆ ನುಗ್ಗುವ ಹಳ್ಳಿಗರಿಗೆ, ಬೆಂಗಳೂರು ಕಾಂಗ್ರೆಸ್ ಮಹಾಸಭೆಯ ಆಕರ್ಷಣೆಯು ಇದ್ದಂತೆ ಕಾಣಲಿಲ್ಲ. ಪ್ರಾರಂಭದಿಂದಲೂ ಮೈಸೂರಿನ ಕಾಂಗ್ರೆಸ್ ಮಂತ್ರಿ ಮಂಡಲಿಗಳಲ್ಲಿ ಹುಟ್ಟಿಕೆಪಂಡು ಬೆಳೆಯುತ್ತ ಬಂದಿರುವ ಜಗಳಾಟ-ಕಾದಾಟಗಳು, ಅಲ್ಲಿಯ ಮಧ್ಯಮವರ್ಗದವರಲ್ಲಿಯ ಆಕರ್ಷಣೆಯನ್ನೂ ಕಡಮೆಮಾಡಿಸೆಯೇನೋ ! ನಿರೀಕ್ಷಿಸಿದಷ್ಟು ಜನರೇ ಕಾಂಗ್ರೆಸ್ಸಿಗೆ ಬರಲಿಲ್ಲ. ಆದುದರಿಂದಲೇ ಕಾಂಗ್ರೆಸಿನ ಮುಖ್ಯ ಸಭೆ ಸೇರಲು, ವಿಷಯನಿಯಾಮಕ ಮಂಡಲಿಗಾಗಿ ನಿರ್ಮಿಸಿದ ಸಭಾಮಂಟಪ ಸಾಕಾಯಿತು. ಎಷ್ಟೋ ಲಕ್ಷ ರೂಪಾಯಿ ವೆಚ್ಚಮಾಡಿ ನಿರ್ಮಿಸಿದ ಮುಖ್ಯ ಸಭಾಮಂಟಪ ಹಾಳು ಹಾಳು ಸುರಿಯಿತು. ಇಲ್ಲಿಯ ಅಧಿವೇಶನಕ್ಕೆ ಅಧ್ಯಕ್ಷರಾಗಿ ಬಂದವರು, ಆಂಧ್ರರಾಜ್ಯದ ಮುಖ್ಯ ಮಂತ್ರಿಪದವನ್ನು ಪಡೆದುಕೊಂಡಿದ್ದ ಶ್ರೀಮಾನ್ ಸಂಜೀವ ರಡ್ಡಿಯವರು. ಮೇಲಿನವರು ಮನಸ್ಸು ಮಾಡಿದ್ದರೆ ಈ ರೆಡ್ಡಿಯವರ ಬದಲು ಇನ್ನಾವ ಸೆಟ್ಟಿಯೊ ಗೌಡನೊ ಕೂಡ ಆಗಬಹುದಾಗಿತ್ತು.

ಬೆಂಗಳೂರಿನ ಕಾಂಗ್ರೆಸಿನಲ್ಲಿ ಆಖಂಡವಾಗಿ ದಿವ್ಯಜ್ಯೋತಿಯಿಂದ ಬೆಳಗಿದುದು ಒಂದೇರವಿಬಿಂಬ. ಮಿಕ್ಕುವೆಲ್ಲ ಚಂದ್ರಗೋಲಗಳು; ಮಿನುಗುವ ಉಲ್ಕೆಗಳು. ರವಿಯ ದರ್ಶನವಾದಾಗ ಜನತೆಯ ಹೃದಯಕಮಲ ಅರಳುತ್ತಿತ್ತು; ಅದು ಮರೆಯಾದಾಗ ಇದು ಮುದುಡುತ್ತಿತ್ತು. ಪಂಡಿತ ಜವಾಹಾರಲಾಲರ ಅಭಾವ ಕಾಂಗ್ರೆಸ್ ಮಹಾಸಭೆಯ ವಿಷಾದಾಂತ ಪರಿಸ್ಥಿತಿಗೆ ಕಾರಣವಾಗಬಾರದೆಂದು, ನಿಯಮಿತ ಅವಧಿಗಿಂತ ಒಂದು ದಿನ ಮೊದಲೇ ಮಹಾಸಭೆಯ ಅಧಿವೇಶನ ಮುಗಿಯಿತು. ಮೂರೆ ಮೂರು ಠರಾವುಗಳನ್ನು ಪಾಸು ಮಾಡಿಕೊಳ್ಳಲು ೨೦ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಕೂಡಿಸಿದ ಈ ಕಾಂಗ್ರೆಸ್ ಅಧಿವೇಶನವು, ತುಂಬ ಯಶಸ್ವಿಯಾಗಿ ನೆರವೇರಿತೆಂದು ಹೊಗಳಿ ಹಾಡುವವರೂ ಇದ್ದಾರೆ; ತೀರ ಸಪ್ಪೆಯಾದ ಅಧಿವೇಶನವಿದು—ಎಂದು ಬೀಳುಗಳೆದು ಮಾತನಾಡುವವರೂ ಇದ್ದಾರೆ. ಪಕ್ಷ-ಪಕ್ಷಗಳಿಗೆ ಸಂಬಂಧಿಸಿದ ಮಾತುಗಳಿವು. ಇಬ್ಬರ ಮಾತುಗಳನ್ನೂ ತೂಕಮಾಡಿಯೆ ನಂಬಬೇಕು.

ಅಂತೂ ಕರ್ನಾಟಕ ಮತ್ತೊಂದು ಸೆಲ ವೈಭವಶಾಲಿಯಾಗಿ ಕಾಂಗ್ರೆಸ್ ಮಹಾಸಭೆಯನ್ನು ನೆರವೇರಿಸಿತು. ಅಭೂತಪೂರ್ವವಾದ ಪ್ರದರ್ಶನವನ್ನು ನಡೆಯಿಸಿತು. ಇಂತಹ ಕಾರ್ಯಗಳಿಗೆ ಸ್ವಾಮಾಣಿಕ ರೀತಿಯಲ್ಲಿ ಎಷ್ಟು ಹಣ ವೆಚ್ಚವಾದರೂ ಅದರಿಂದ ದೇಶಕ್ಕೆ ಹಾನಿಯೇನೂ ಇರದು. ಹಣ ಕೈಯಿಂದ ಕೈಗೆ ಹೋಗಿ ಚಲಾವಣೆಯ ಕಾರ್ಯ ನಡೆಯುವುದು. ಯಜ್ಞಕ್ಕೆ ಎಷ್ಟು ಹಣವನ್ನು ವೆಚ್ಚಮಾಡಿದರೂ ಅದು ಹಾನಿಯೆನಿಸದು; ತ್ಯಾಗವೆನಿಸಿಕೊಳ್ಳುವುದು. ತ್ಯಾಗ ಜನತೆಗೆ ಕಲ್ಯಾಣಕಾರಿ.

ಜಯಂತಿಗೆ ಸಹಾಯಧನ

ಜಯಂತಿ ಜೀವಿಸಲೇಬೇಕೆಂದು ಬಯಸುವ ಸಹೃದಯ ಕನ್ನಡಿಗರು ಅಲ್ಲಿ ಇಲ್ಲಿ ಇದ್ದೇ ಇರುವರು. ಅವರ ಬಯಕೆಯನ್ನು ಕನ್ನಪ ಭಾಗ್ಯವಿಧಾತ ಇಡೇರಿಸಲಿ.

೧. ಉತ್ತರಕನ್ನಡ ಜಿಲ್ಲೆಯ ಬಿಳಲೆ ಗ್ರಾಮದ **ಶ್ರೀಮಾನ್ ಗೋವಿಂದ ರಾಮರಾವ ದೇವ** ಅವರು, ಜಯಂತಿಗೆ ಸಹಾಯಧನವೆಂದು **೫೫ ರೂ. ಗಳನ್ನು** ಕಳುಹಿದ್ದು, ಅದರೊಂದಿಗೆ ಹೀಗೆಂದು ತಮ್ಮ ಸದಿಚ್ಛೆಯನ್ನು ಪ್ರಕಟಿಸಿದ್ದಾರೆ:

"ಜಯಂತಿಗೆ ಇದಕ್ಕೂ ಹೆಚ್ಚಿನ ಕೊಡುಗೆಗಳು ಸಿಗಲಿ. ಅದಕ್ಕೂ ಹೆಚ್ಚಾಗಿ ಚಂದಾದಾರರ ಮತ್ತು ಜಾಹೀರಾತುಗಳ ಸಂಖ್ಯೆ ಬೆಳೆಯಲಿ, ಜಯಂತಿಯು ಚಿರಕಾಲ ಬಾಳಿ ಬೆಳೆಯಲಿ !"

(೨೬ನೆಯ ಪುಟ ನೋಡಿರಿ)

ನಾಡನಡೆ

ಕೇರಳದ ಚುನಾವಣೆಯ ಚುರುಕು

ಕೇರಳ ರಾಜ್ಯದಲ್ಲಿ ನಡೆಯಲಿರುವ ಚುನಾವಣೆಯೊಂದು ಭಾರತೀಯ ಪ್ರಜಾಪ್ರಭುತ್ವದ ಮುಂದೆ ಬಂದುನಿಂತ ಒಂದು ಪರೀಕ್ಷೆಯ ಪ್ರಸಂಗವೇ ಆಗಿದೆ. ಕೇರಳದಲ್ಲಿ ಎದ್ದ ಕಮ್ಯುನಿಸ್ಟ್ ಆಡಳಿತವಿರೋಧಿ ಚಳವಳಿಯನ್ನು, ಕೇಂದ್ರ ಸರಕಾರವು ಜನತೆಯ ಚಳವಳಿಯೆಂದು ಭಾವಿಸಿ, ಅಲ್ಲಿಯ ಕಮ್ಯುನಿಸ್ಟ್ ಆಳಿಕೆಯನ್ನು ಕಿತ್ತುಹಾಕಿತೇನೋ ಸರಿಯೆ! ಈಗ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷದವರೇ ಹೆಚ್ಚಾಗಿ ಆರಿಸಿ ಬಂದರೆ, ಕೇಂದ್ರ ಸರಕಾರಕ್ಕೆ ಅದೊಂದು ದೊಡ್ಡ ಅವಮಾನ; ಹೇಗಾದರೂ ಮಾಡಿ ಕಮ್ಯುನಿಸ್ಟ್ ಪಕ್ಷವನ್ನು ಸೋಲಿಸಬೇಕೆಂದು ಕಾಂಗ್ರೆಸ್ ಪಕ್ಷ, ಪ್ರ. ಸೋ. ಪಕ್ಷ, ಮುಸ್ಲಿಂಲೀಗು ಕೂಡಿ, ಸಂಯುಕ್ತಪಕ್ಷವನ್ನು ಕಟ್ಟಿಕೊಂಡು, ಕಮ್ಯುನಿಸ್ಟ್ ಪಕ್ಷವನ್ನು ಎದುರಿಸಿ ಕಳಕ್ಕೆ ಇಳಿದಿವೆ. ಈ ಸಂಯುಕ್ತ ಪಕ್ಷಕ್ಕೆ ಗೆಲವನ್ನು ತಂದುಕೊಡಬೇಕೆಂದು ಕಮ್ಯುನಿಸ್ಟ್ ಪಕ್ಷವೊಂದನ್ನುಳಿದು, ಭಾರತದ ನಿಃಕ್ಕೆಲ್ಲ ರಾಜಕೀಯ ಪಕ್ಷದ ಧುರಂಧರರು ಕೇರಳದಲ್ಲಿ ಪ್ರಚಾರ ಮಾಡುತ್ತ ತಿರುಗುತ್ತಲಿದ್ದಾರೆ. ತಮ್ಮ ಪಕ್ಷಕ್ಕೆ ಗೆಲವು ದೊರೆಯುವುದೆಂದು, ಏನೇನೋ ಏನೇನೋ ಲೆಕ್ಕಾಚಾರವನ್ನು ಹಾಕಿದ ಮಾತುಗಳಿಂದ ಆಗಾಗ ಘೋಷಣೆ ಹೊರಡಿಸುತ್ತಲಿದ್ದಾರೆ. ಕಮ್ಯುನಿಸ್ಟೇತರ ಪತ್ರಿಕೆಗಳಲ್ಲಿ ಈ ಧುರಂಧರರ ಉಗ್ಗಡಣೆಯ ಮಾತುಗಳು ನಿತ್ಯವೂ ಪ್ರಕಟವಾಗುತ್ತಲಿವೆ.

ಹೊರನುಡಿಗಳಲ್ಲಿ ಈ ಬಗೆಯ ಗೆಲವಿನ ನಂಬುಗೆಯ ನುಡಿಗಳ ಮೂಲ ಕಾಣುತ್ತಿದ್ದರೂ, ಅಂತರಿಕವಾಗಿ ಈ ಧುರಂಧರರಿಗೆ ಕಮ್ಯುನಿಸ್ಟರ ಗೆಲವಿನ ಹೆದರಿಕೆಯು ಇಲ್ಲದೆ ಇಲ್ಲ; ಏಕೆಂದರೆ ಕೇರಳದಲ್ಲಿ ಜನತೆಯ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯು ಕಮ್ಯುನಿಸ್ಟರಿಗೆ ಹೆಚ್ಚು ಅನುಕೂಲವಾಗಿ ಇದೆ. ಇಂದಿನ ಕಮ್ಯುನಿಸ್ಟ್ ಚೀನದ ಆಕ್ರಮಣವನ್ನೂ ಭಾರತದ ಕಮ್ಯುನಿಸ್ಟರು ಚೀನೀಯರ ಪಕ್ಷ ಕಟ್ಟಿ ಮಾತನಾಡುತ್ತಿರುವುದನ್ನೂ, ಕಮ್ಯುನಿಸ್ಟ್ ವಿರೋಧೀ ಪಕ್ಷದ ಧುರೀಣರು ತಮ್ಮ ಪ್ರಚಾರದ ಬಂಡವಾಳವನ್ನು ಮಾಡಿಕೊಂಡು ಹೊರಟಿದ್ದಾರೆ. ಆದರೆ ಚುನಾವಣೆಯ ಕಾಲದ ಚುರುಕಿನಲ್ಲಿ, ಈ ಬಗೆಯ ವಿವೇಕ ನೀತಿಗಳ ಕಡೆಗೆ ಲಕ್ಷ್ಯಕೊಡುವ ಜನಸಾಮಾನ್ಯರು ಭಾರತದಲ್ಲಿ ಎಲ್ಲಿಯಾದರೂ ಇರುವರೇ? ಸ್ವಂತದ ತಾತ್ಪೂರ್ತಿಕಲಾಭದ ಕಡೆಗೇ ಆವರ ಮನಸ್ಸಿನ ಓಟ. ಈಗ ಕಾಂಗ್ರೆಸ್ಸಿನ ಆಡಳಿತವಿರುವ ರಾಜ್ಯಗಳಲ್ಲಾದರೂ ಜನಸಾಮಾನ್ಯರು ಮತದಾನವನ್ನು ತತ್ತ್ವವನ್ನರಿತು ಮಾಡುವರೇ? ಹಾಗೆ ಮಾಡಿದ್ದರೆ, ಇಂದು ಅಧಿಕಾರಸ್ಥಾನವನ್ನು ಹಿಡಿದು ಕುಳಿತ ಅನೇಕ ಜನ ಕಾಂಗ್ರೆಸ್ಸಿಗರು ಆರಿಸಿ ಒರುವ ಸಂಭವ ಕೂಡ ಇರಲಿಲ್ಲ.

ಇದೇ ಅಳಿಗೋಲಿನಿಂದ ಕೇರಳದ ಮತದಾರರ ಮನಸ್ಸನ್ನೂ ಅಳೆದು ನೋಡಿದರೆ, ಅಲ್ಲಿ ಕಮ್ಯುನಿಸ್ಟರಿಗೆ ಸೋಲು ಉಂಟಾಗುವುದು ಎಂತಹ ಮಾತೋ!

ಕಾಸರಗೋಡಿನ ಕನ್ನಡಹುರಿಯಾಳುಗಳು

ಕೇರಳದ ಸಂಯುಕ್ತ ಪಕ್ಷದವರು ಕಾಸರಗೋಡಿನ-ಕನರ್ಾಟಕ ರಾಜ್ಯಕ್ಕೆ ಸೇರಲಪೇಕ್ಷಿಸುವ— ಬಹುಸಂಖ್ಯಾಕ ಕನ್ನಡ ಜನತೆಯನ್ನು ಗಮನಕ್ಕೆ ತಾರದುಡರಿಂದ, ಅಲ್ಲಿಯ ಕರ್ನಾಟಕ ಪಕ್ಷದವರು, ಕಾಸರಗೋಡು ತಾಲ್ಲೂಕಿನ ಎರಡು ಫಿರ್ಕಾಗಳಲ್ಲಿ ತಮ್ಮ ಹುರಿಯಾಳುಗಳನ್ನು ಚುನಾವಣೆಗೆ ನಿಲ್ಲಿಸಿದ್ದಾರೆ. ಇವರನ್ನು ವಿರೋಧಿಸಿ ಕಮ್ಯುನಿಸ್ಟ್ಪಕ್ಷದ ಹುರಿಯಾಳುಗಳೂ, ಸ್ವತಂತ್ರ ಹುರಿಯಾಳುಗಳೂ ಚುನಾವಣೆಗೆ ನಿಂತಿದ್ದಾರೆ. ಕೇರಳ ಕಾಂಗ್ರೆಸ್ಪಕ್ಷವು ಈ ಕನ್ನಡ ಹುರಿಯಾಳುಗಳಿಗೆ ಬೆಂಬಲನೀಡುತ್ತಿಲ್ಲ. ಕೇರಳದಿಂದ ಹೊರಬೀಳಬೇಕೆನ್ನುವವರಿಗೆ ಅದೇಕೆ ಬೆಂಬಲ ನೀಡುವುದು? ಆದರೆ ಈ ಕರ್ನಾಟಕ ಪಕ್ಷದ ಹುರಿಯಾಳುಗಳಿಬ್ಬರೂ ಕಮ್ಯುನಿಸ್ಟರಲ್ಲ. ನಾಳೆ ಸಂದರ್ಭಬಂದರೆ, ಸಂಯುಕ್ತ ಪಕ್ಷದ ಬಲವನ್ನು ಹೆಚ್ಚಿಸಲು ಇವರು ಸಹಕರಿಸಬಹುದು. ಆದುದರಿಂದ ಕೇರಳ ಕಾಂಗ್ರೆಸ್ ಪಕ್ಷವು— ಅದರಲ್ಲಿಯೂ ಕಾಸರಗೋಡು ಮತದಾರ ಕ್ಷೇತ್ರದಲ್ಲಿಯ ಕಾಂಗ್ರೆಸ್ ಪಕ್ಷೀಯರು— ಈ ಸಂದರ್ಭದಲ್ಲಿ ವಿವೇಕದಿಂದ ನಡೆದುಕೊಂಡು, ಈ ಕರ್ನಾಟಕಪಕ್ಷದ ಹುರಿಯಾಳುಗಳನ್ನು ಎತ್ತಿ ಹಿಡಿಯಬೇಕು.

ಕಾಸರಗೋಡು ತಾಲ್ಲೂಕಿನಲ್ಲಿಯ ಕನ್ನಡಿಗರೆಂತೂ ಮಿಕ್ಕ ಪಕ್ಷಗಳನ್ನೆಲ್ಲ ಸಮ್ಯದ ಮಟ್ಟಿಗೆ ಬಿಟ್ಟು ಕನ್ನಡ ಪಕ್ಷದಲ್ಲಿ ಸಮರಸರಾಗಬೇಕು. ಕನ್ನಡಿಗರಾದ ಕಮ್ಯುನಿಸ್ಟ್ ಮತದಾರರೂ ಈಗ ತಮ್ಮ ಮುಂದಿನ ಹಿತದ ಕಡೆಗೆ ಗಮನಕೊಟ್ಟು, ಕನ್ನಡ ಹುರಿಯಾಳುಗಳಿಗೆ ಸಂಪೂರ್ಣ ಸಹಕಾರ ಕೊಡಬೇಕು. ತಾತ್ಪೂರ್ತಿಕವಾದ ಪಕ್ಷೀಯ ಅಭಿನಿವೇಶದಿಂದ, ಶಾಶ್ವತವಾದ ಸ್ವಸಂಸ್ಕೃತಿಯನ್ನು ಕಳೆದುಕೊಳ್ಳುವಂತಹ ಕಾರ್ಯವನ್ನು ಮಾಡಬಾರದು. ಕಾಸರಗೋಡು ತಾಲ್ಲೂಕಿನ ಕರ್ನಾಟಕ ಹುರಿಯಾಳುಗಳಿಬ್ಬರ ವಿಜಯವೆಂದರೆ, ಕಳೆದು ಹೋದ ಕಾಸರಗೋಡು ಪ್ರದೇಶ ಮರಳಿ ಕರ್ನಾಟಕಕ್ಕೆ ಬಂದುಕೂಡಲು ದಾರಿಮಾಡಿಕೊಟ್ಟಂತಾಗುವುದೆಂಬುದನ್ನು ಪ್ರತಿಯೊಬ್ಬ ಕನ್ನಡಿಗನೂ ಮರೆತು ನಡೆಯಲಾಗದು.

ಒಂದುವೇಳೆ ಸಂಯುಕ್ತ ಪಕ್ಷಕ್ಕೆ ಗೆಲವು ಸಿಕ್ಕರೆ!

ಸಂಯುಕ್ತ ಪಕ್ಷಕ್ಕೆ ಗೆಲವು ಸಿಕ್ಕರೆ, ಮುಂದೆ ಕೇರಳದಲ್ಲಿ ಯಾರ ಕೈಗೆ ಆಡಳಿತ ದೊರೆಯಬಹುದೆಂಬುವರ ಊಹಾಪೋಹವನ್ನೂ ಕೆಲವು ರಾಜಕೀಯ ನಾಯಕರು ಈಗಾಗಲೆ ನಡೆಯಿಸಿದ್ದಾರೆ. ನಡೆಯಿಸಬೇಕಾದುದು ಸಹಜವೇ ಆಗಿದೆ.

ಕಮ್ಯುನಿಸ್ಟ್ ವಿರೋಧದ ಉಗ್ರಕಾವಿನಿಂದ ಈಗ ಬೆಸುಗೆಗೊಂಡ ಮೂರು ಪಕ್ಷಗಳ ಹೊಂದಿಕೆ, ಗೆಲವಿನ ಕಾಲದ ತಂಪಿನಲ್ಲಿ ನೊದಲಿನಂತೆ ಉಳಿಯುವ ಸಂಭವವಿಲ್ಲ. ಆಗ ಅಧಿಕಾರ ಲಾಲಸೆಯ ಇನ್ನೊಂದು ಬಗೆಯ ಕಾವು ತಲೆದೋರಿ, ಈಗಿನ ಈ ಹೊಂದಿಕೆ ಬೆಸುಗೆ ಬಿಡಿಬಿಡಿಯಾಗುವುದೇ ಹೆಚ್ಚು ಸಹಜವಾದ ಮಾತಾಗಿದೆ.

ಫೆಬ್ರುವರಿ ೧೯೬೦

ಸಂಯುಕ್ತಪಕ್ಷದ ಮೂರು ಉಪಪಕ್ಷಗಳಲ್ಲಿ ಕಾಂಗ್ರೆಸ್ಸಿನ ಜದಸ್ಯರು ಹೆಚ್ಚು ಸಂಖ್ಯೆಯಲ್ಲಿ ಆರಿಸಿಬರಬಹುದು. ಆ ಮೇಲೆ ಪ್ರ. ಸೋ. ಪಕ್ಷದ ಸದಸ್ಯರ ಸಂಖ್ಯೆ, ತರುವಾಯ ಮುಸ್ಲಿಂಲೀಗಿನ ಸದಸ್ಯರ ಸಂಖ್ಯೆ. ಇವರಲ್ಲಿ ಯಾವ ಪಕ್ಷದವರನ್ನೂ ಅಸಂತುಷ್ಟಗೊಳಿಸುವಂತಿಲ್ಲ. ಸಂಖ್ಯಾಬಲದಿಂದಲೂ ಕೇಂದ್ರಸರಕಾರದ ಬಲದಿಂದಲೂ ಕಾಂಗ್ರೆಸ್ ಪಕ್ಷವು ಹೆಚ್ಚಿನ ಅಧಿಕಾರವನ್ನು ಅಪೇಕ್ಷಿಸಿದರೆ, ಅದರ ಅಧಿಕಾರ ಸುಯಂತ್ರಿತವಾಗಿ ಸಾಗಮು. ಮಿಕ್ಕ ಪಕ್ಷದವರಿಗೂ ಸಮಪಾಲನ್ನು ಕೊಡಬೇಕೆಂದರೆ, ಅಲ್ಲಿ ಕಾಂಗ್ರೆಸ್ಸಿನ ಧೋರಣೆಯನ್ನು ಅನುಸರಿಸಿದ ಆಡಳಿತವು ಹೇಗೆ ನಡೆದೀತು? ಮಿಕ್ಕ ರಾಜ್ಯಗಳಲ್ಲಿ ಕಾಂಗ್ರೆಸ್ ಆಡಳಿತವನ್ನು ವಿರೋಧಿಸಿ ನಿಂತ ಪ್ರ. ಸೋ. ಪಕ್ಷ, ಮುಸ್ಲಿಂಲಿಗೆ ಪಕ್ಷಗಳು, ಕೇರಳದಲ್ಲಿ ಕಾಂಗ್ರೆಸ್ಸಿಗರೊಂದಿಗೆ ಸಹಕರಿಸುವುದು ಹೇಗೆ? ಇವು ಬಿಡಿ-ಬಿಡಿಯಾಗಿ ಬಡಿದಾಡತೊಡಗಿದರೆ, ಎಲ್ಲವನ್ನೂ ಒಂದೊಂದಾಗಿ ಕಬಳಿಸಲು ಕಮ್ಯುನಿಸ್ಟ್ ಪಕ್ಷದ ಕರಡಿ, ಅಲ್ಲಿ ಬಾಯಿತೆರೆದುಕೊಂಡೇ ಕುಳಿತಿರುವುದು.

ಕೇರಳದಲ್ಲಿ ಕಮ್ಯುನಿಸ್ಟ್ ವಿರೋಧಿಗಳ ಆಡಳಿತವು ನೆಲೆಯೂರಿ ಬೆಳೆಯಬೇಕಾದರೆ, ಚುನಾವಣೆಯ ಕಾಲದ ಈ ಪಕ್ಷನೈತ್ರಿಯು ಕೊನೆಯವರೆಗೂ ಉಳಿಯಬೇಕು. ಅದಕ್ಕಾಗಿ ಪ್ರತಿ ಪಕ್ಷದವರೂ ಅಧಿಕಾರಲೋಭಕ್ಕಿಂತ ಅಭಿಮಾನರಕ್ಷಣೆಯ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು. 'ನಿಮ್ಮ ಯಾವ ಆಡಳಿತವಿದ್ದರೂ ಸರಿ! ಕಮ್ಯುನಿಸ್ಟ್ ಆಡಳಿತಮಾತ್ರ ನನಗೆ ಬೇಡ!' ಎಂಬ ಅಭಿಪ್ರಾಯಕ್ಕೆ ಪ್ರತಿಯೊಬ್ಬನೂ ಅಂಟಿಕೊಳ್ಳಬೇಕು. ಅದಕ್ಕಾಗಿ ಆವಶ್ಯಕವೆನಿಸಿದ ತ್ಯಾಗಕ್ಕೆ ಸಿದ್ಧನಾಗಬೇಕು.

ಆಯೂಬ್‌ಖಾನರ ಇಮ್ಮೊಗದ ಮಾತು

ಭಾರತ-ಪಾಕಿಸ್ತಾನಗಳ ಸಂಬಂಧ ಇತ್ತೀಚೆಗೆ ಸರಿಹೊಂದುತ್ತಲಿರುವುದು, ಎರಡೂ ರಾಷ್ಟ್ರಗಳ ಪ್ರಜಾಕೋಟಿಗೂ ಸಮಾಧಾನದ ಸಂಗತಿಯಾಗಿದೆ. ಇದಕ್ಕೆ ಪಾಕಿಸ್ತಾನದ ಅಧ್ಯಕ್ಷ ಆಯೂಬ್‌ಖಾನರು ತಳೆದ ಸಮಂಜಸವೃತ್ತಿಯೇ ಕಾರಣವೆಂದು ಅನೇಕಜನರು ಭಾವಿಸಿದ್ದಾರೆ. ಅದರಂತೆಯೆ ಆ ಅಧ್ಯಕ್ಷರು, ಭಾರತ-ಪಾಕಿಸ್ತಾನಗಳ ಮೈತ್ರಿಯ ಬಗೆಗೆ ಆಗಾಗ ಘೋಷಣೆಗಳನ್ನೂ ಮಾಡುತ್ತಿರುತ್ತಾರೆ. ಇಷ್ಟೇ ಅಲ್ಲ, ಭಾರತ-ಪಾಕಿಸ್ತಾನಗಳು ಒಂದೇ ಸಂಯುಕ್ತ ಸಂರಕ್ಷಣಾತಂತ್ರಕ್ಕೆ ಒಳಗಾದರೆ ಒಳ್ಳೆಯದೆನ್ನುವಷ್ಟು ದೂರವೂ ಹೋಗುತ್ತಾರೆ. ಆದರೆ ಕಾಶ್ಮೀರದ ವಿಚಾರದಲ್ಲಿ ಮಾತನಾಡುವಾಗ, ಆಯೂಬ್‌ಖಾನರಲ್ಲಿ ಒಂದು ಬೇರೆಯ ಜೀವದ ಆವೇಶವಾಗುವುದೇನೋ! ಆಗ ಭಾರತ-ರಾಷ್ಟ್ರದ ಮತ್ತು ರಾಷ್ಟ್ರನಾಯಕರ ಬಗೆಗೆ ಹೊಣೆಗೇಡಿಗಳಾಗಿ ಮಾತನಾಡುತ್ತಾರೆ. ಯಾವ ಪಾಕಿಸ್ತಾನೀನಾಯಕನೂ ಒಮ್ಮೆ ಮನೋವಿಕೃತಿಯಿಂದ ಮಿದುಳನ್ನು ಕಾಯಿಸಿಕೊಂಡನೆಂದರೆ, ರಣರಂಗಕ್ಕೆ ಕಾಲು ಕೆದರುವ ಮಾತುಗಳನ್ನೇ ಆಡುವನು. ಮೊನ್ನೆ ಮೊನ್ನೆಯ ಡಾಕಾದಲ್ಲಿ ಕಾಶ್ಮೀರದ ಬಗೆಗೆ ಮಾತನಾಡುವಾಗ, ಆಯೂಬ್‌ಖಾನರೂ ತಮ್ಮ ಹಿಂದಿನವರ ಪರಂಪರೆಯನ್ನೆ ಎತ್ತಿಹಿಡಿದಿರುವರು. ಆಯೂಬ್‌ಖಾನರ ಒಂದು ಮುಖ ನೈತ್ರಿಯಿಂದರೆ, ಇನ್ನೊಂದು ಮುಖ 'ಯುದ್ಧ' ಎನ್ನುತ್ತಿದೆ. ಇವರ ವ್ಯಕ್ತಿತ್ವದ ಗೂಢವೇ ತಿಳಿಯದಂತಾಗಿದೆ.

(ಎಲನೇ ಪುಟದಿಂದ ಬಂದಿದೆ.)

೨. ಬನಾರಸ ಹಿಂದು ಯುನಿವರ್ಸಿಟಿಯಲ್ಲಿ ಸ್ಥಾಪತ್ಯ ವಿಜ್ಞಾನದ ಪ್ರಾಧ್ಯಾಪಕರೂ, ಸುಪ್ರಸಿದ್ಧ ಲೇಖಕರೂ ಆದ ಶ್ರೀಮಾನ್ **ಕೆ. ಎ. ಎನ್. ರಾವ್ ಅವರು** ೧೦ ರೂಪಾಯಿಗಳನ್ನು ಕಳುಹಿ, ಹೀಗೆ ಹಿತಸೂಚನೆ ಮಾಡಿದ್ದಾರೆ:

"ಜಯಂತಿಗಾಗಿ ಈ ವರ್ಷದ ಚಂದಾ ೧೦ ರೂಪಾಯಿ ಕಳುಹಿದ್ದೇನೆ ಜಯಂತಿಯ ಕಷ್ಟ (ಇಲ್ಲ, ನಿಮ್ಮದು) ಬಗೆಹರಿಯಬೇಕಾದರೆ, ಇದರ ಹಣ-ಕಾಸಿನ ವ್ಯವಸ್ಥೆಯನ್ನು ಹಲವು ಜನರನ್ನೊಳಗೂಡಿದ ಒಂದು Trust ಗೆ ಒಪ್ಪಿಸಿ, ನೀವು ಸಂಪಾದಕರಾಗಿ ಮಾತ್ರ ಇರಬೇಕೆನ್ನಿಸುತ್ತದೆ. ಈ ರೀತಿ ಸಣ್ಣತುಣುಕುಗಳು ಬಹಳ ಸಹಾಯವಾಗಲಾರವು.

೩. ವಲ್ಲಭನಗರದ ವಲ್ಲಭವಿಶ್ವವಿದ್ಯಾಲಯದಲ್ಲಿ ಕೆಲಸಗಾರರಾಗಿರುವ **ಶ್ರೀಮಾನ್ ಸುಂದರ ನಾಡಕರ್ಣಿ**ಯವರು ೧೦ ರೂ. ಗಳನ್ನು ಕಳುಹಿರುವರಲ್ಲದೆ, ಹೆಚ್ಚಿಗೆ ಚಂದಾದಾರರನ್ನು ಕೂಡಿಸಿ ಕೊಡುವ ಆಶ್ವಾಸನವನ್ನು ಬರೆದು ತಿಳುಹಿದ್ದಾರೆ.

ಜಯಂತಿಯ ಮೊರೆ ಮತ್ತೆ ಯಾರ ಯಾರ ಹೃದಯಕ್ಕೆ ತಾಗಿದೆಯೇನೋ! ಪ್ರತ್ಯಕ್ಷ ಕೃತಿಯಿಂದ ಅದು ಸಿದ್ಧವಾಗಬೇಕಷ್ಟೆ!

ಚಂದಾದಾರರ ಸಹಕಾರ

ಅಂಚೆಯ ಕಾರ್ಯಾಲಯದವರ ಕಟ್ಟುನಿಟ್ಟಿನ ಏರ್ಪಾಡಿನ ಮೂಲಕ, ನಾವು ಕಳೆದ ಸಂಚಿಕೆಯಲ್ಲಿ ಚಂದಾದಾರರ ಸಹಕಾರವನ್ನು ಕೇಳಿದ್ದೆವು. ಇದರಲ್ಲಿ ತಾವು ಸಹಕರಿಸಬೇಕಾದುದು ಹೇಗೆಂಬುವನ್ನು ತಿಳಿದುಕೊಳ್ಳಲು ನಾಲ್ಕಾರು ಜನ ಚಂದಾದಾರರಿಂದ ಕಾಗದಗಳು ಬಂದಿವೆ.

ಚಂದಾದಾರರಿಂದ ನಾವು ಬಯಸುವ ಸಹಕಾರವಿಷ್ಟು: ಚಂದಾ ವರ್ಷ ಮುಗಿದು ಹೊಸ ವರ್ಷವನ್ನು ಆರಂಭಿಸಬೇಕಾದಪರು ಮನಿಯಾರ್ಡರಿನಿಂದ ಹಣ ಕಳುಹುವುದಾದರೆ, ಆ ಆ ತಿಂಗಳ ಕೊನೆಯೊಳಗಾಗಿಯೆ ಕಾರ್ಯಾಲಯಕ್ಕೆ ತಲ್ಪುವಂತೆ ಕಳುಹಬೇಕು. ಏಕೆಂದರೆ ಪ್ರತಿತಿಂಗಳ ೩೦ನೆಯ ದಿನಾಂಕದಂದು, ಹೊಸ ವರ್ಷದ ಚಂದಾದಾರರಿಗೆ ವ್ಹಿ. ಪಿ. ಯನ್ನು ಕಳುಹಬೇಕಾಗುವುದು— ಕಳುಹಲೇ ಬೇಕಾಗುವುದು. ಏಕೆಂದರೆ ಮರುದಿನ ಕಳುಹಿದರು ೨೮ ನ. ಪೈ. ಅಂಚೆಯ ವೆಚ್ಚ ಹೆಚ್ಚಿಗೆ ಬೀಳುವುದು. ಇದನ್ನು ಚಂದಾದಾರರ ತಲೆಯ ಮೇಲೆ ಹೊರಿಸುವುದೂ ಕಷ್ಟ; ನಾವು ಹೊರುವುದೂ ಕಷ್ಟ. ಒಂದೊಂದು ಸಲ ಇತ್ತ ನಾವು ವ್ಹಿ. ಪಿ ಕಳುಹಿರುತ್ತೇವೆ; ಮರುದಿನವೊ ಮೂರನೆಯ ದಿನವೋ ಚಂದಾಹಣದ M.O ಬಂದು ಬಿಡುವುದು. ಇದರಿಂದ V. P. ಮರಳಿ ಬಂದು, ಜಯಂತಿಗೆ ಪ್ರತಿಯೊಂದು ವ್ಹಿ. ಪಿ. ಗಾಗಿ ೫೬ ನ. ಪೈ. ವ್ಯರ್ಥ ಅಂಚೆಯ ವೆಚ್ಚದ ಹೊರೆಬೀಳುವುದು ಹೀಗಾಗದಂತೆ ನಡೆದುಕೊಳ್ಳುವುದೆಂದರೆಯೇ ನಮ್ಮೊಂದಿಗೆ ಸರಿಯಾಗಿ ಸಹಕರಿಸಿದಂತೆ. ಎಲ್ಲ ಚಂದಾದಾರರಿಂದಲೂ ಜಯಂತಿ ಈ ಬಗೆಯ ಸಹಕಾರವನ್ನು ಅಪೇಕ್ಷಿಸುತ್ತದೆ.

—ಸಂಪಾದಕ

ನಾಡೂ!

(ಮನೋವಿಶ್ಲೇಷಣಾತ್ಮಕ ಕಥೆ*)

ಶ್ರೀ ರಾಘವೇಂದ್ರ ಖಾಸನೀಸ ಎಂ. ಎ., ಡಿಪ್. ಲಿಬ್. ಪುಣೆ.

Cast a cold eye, on Life, on Death
Horseman, pass by. —*W. B. Yeats*

ವಾಸ್ತವ ಪ್ರಪಂಚ, ವಿವಿಧ ಭಾವ-ಸ್ವಭಾವಗಳಿಂದ ವ್ಯಾಪ್ತವಾಗಿರುವುದು. ವಿವಿಧ ವೇದನೆ-ಸಂವೇದನೆಗಳ ತಾಕಲಾಟಗಳ ಮೂಲಕ ವ್ಯಕ್ತಿ-ವ್ಯಕ್ತಿಗಳ ಮನದ ಮೇಲೆ ಕೃತ್ರಿಮಭಾವದ ತೆರೆಗಳು ಬಿದ್ದಿರುವುವು. ಈ ವಿಷಮ ಜೀವನದಲ್ಲಿಯೇ ಕಥೆಯೊಂದು ರೂಪುಗೊಂಡು, ಸಹೃದಯರಲ್ಲಿ ರಸಸಂವೇದನೆಯನ್ನು ಹುಟ್ಟಿಸುವುದು. ಹೀಗೆ ರೌದ್ರ-ಕರುಣಗಳ ದ್ವಂದ್ವವನ್ನು ಪರಿಣಾಮಕಾರಿಯಾಗಿ ರೂಪಿಸಿದ ನವಕಥೆಯಿದು.

ನಾಡೂ, ನಿನ್ನ ತಾಯಿ ತೀರಿಕೊಂಡಳು.

ಸಂತೋಷನು ಗೋಣನ್ನು ಹೊರಳಿಸಿ ತಲೆಯನ್ನು ಸ್ವಲ್ಪ ಕೆಳಗೆ ಮಾಡಿ ಹೇಳಿದನು. ನಾಡೂ ಬಸ್ಸಿನ ಕಡೆಗೆ ನೋಡತೊಡಗಿದ್ದನು. ಇದೇ ಈಗ ಬಸ್ಸಿನಲ್ಲಿ ಹತ್ತಿದ ಆ ಹುಡುಗ, ಸ್ವಲ್ಪ ಸಮಯದ ಹಿಂದೆ ತನ್ನ ನಾಲಗೆಯನ್ನು ಹೊರಗೆಳೆದು ನಾಡೂನನ್ನು ಅಣಕಿಸಿದ್ದನು. ಅಂತೆಯೇ ನಾಡೂ ಆ ಎರಡು ಅಂತಸ್ತಿನ ಬಸ್ಸಿನ ಕಡೆಗೆ ನೋಡುತ್ತ ನಿಂತಿದ್ದನು.

ಅವನ ಕೈಯಲ್ಲಿದ್ದ ಚೀಲದಲ್ಲಿ ಸೀರೆಯಿತ್ತು; ಅವ್ವನು ತನಗೆ ತರಲಿಕ್ಕೆ ಹೇಳಿದ್ದಳು. ಪೇರಲ ಹಣ್ಣು ಇದ್ದವು. ಅವ್ವನಿಗೆ ಅವು ಬಹಳ ಸೇರುತ್ತವೆ. ಅದೂ ನಾಡೂನಿಗೆ ಗೊತ್ತಿತ್ತು. ತನ್ನ ಎರಡೂ ಚಿಕ್ಕ ಕೈಗಳಿಂದ ಕೈಚೀಲವನ್ನು ಎದೆಗೆ ಗಟ್ಟಿಯಾಗಿ ಬಿಗಿದು ನಾಡೂ ತಂದೆಯ ಕಡೆಗೆ ನೋಡಹತ್ತಿದನು. ಸಂತೋಷನು ದೃಷ್ಟಿಯನ್ನು ಬೇರೆ ಕಡೆಗೆ ಹೊರಳಿಸಿದ. ಆಕಾಶದಲ್ಲಿ ನೋಡ ತುಂಬಿತ್ತು. ಎಂದರೆ ಈ ಹೊತ್ತು ಕೂಡ ಮಳೆ ಬರುವುದು. ಫುಟ್‌ಪಾಥ್ ಎಲ್ಲ ಕೆಸರಿನಿಂದ ಕೆಚ್ ಕೆಚ್ ಆಗಿತ್ತು. ಹಾಸ್ಪಿಟಲ್ಲಿನ ಗೋಡೆಗೆ ಹೊಂದಿ ಸುತ್ತೆಲ್ಲ ಹುಲ್ಲು ಬೆಳೆದಿತ್ತು.

ಹುಲ್ಲನ್ನು ತುಳಿಯುತ್ತ ಸಂತೋಷ ಮುಂದೆ ನಡೆದಿದ್ದ. ಹಿಂದೆ ಹಿಂದೆ ನಾಡೂ ಹೆಜ್ಜೆ ಇಡತೊಡಗಿದ್ದ. ಸಂತೋಷ ಒಮ್ಮೆಲೆ ತಡೆದನು. ಹೊರಳಿ ನಿಂತನು. ನೀನು ಮುಂದೆ ಬರಬೇಡ, ಇಲ್ಲಿಯೇ ಇರು. ನಾನು ಡಾಕ್ಟರರನ್ನು ಭೆಟ್ಟಿಯಾಗಿ ಬರುತ್ತೇನೆ.

ಯಾಕೆ, ಬಾಬಾ !

ಮುಂದಿನ ವ್ಯವಸ್ಥೆ ಮಾಡಬೇಕಲ್ಲವ್ವಾ. ಡಾಕ್ಟರರ ಸರ್ಟಿಫಿಕೇಟು ತಂದ ಹೊರತು ಏನೂ ಮಾಡಲಿಕ್ಕೆ ಬರುವಂತಿಲ್ಲ.

ನಾಡೂ ಅಲ್ಲಿಯೇ ನಿಂತನು. ತಂದೆ ಮುಂದೆ ಹೊರಟಿದ್ದನು. ಆಟ್ಟನನ್ನು ಏರಿ ಎರಡನೆಯ ಅಂತಸ್ತಿನ ಮೇಲೆ ಹೋದರಾಯಿತು; ಎಡಕ್ಕಿರುವ ಹಾಲಿನಲ್ಲಿ ಮೂಲೆಯಲ್ಲಿಯ ಕಾಟನ ಮೇಲೆ ಅವ್ವ ಇದ್ದಾಳೆ. ಆಟ್ಟದ ಹತ್ತಿರವೇ ಪಂಜರದಂತಹ ಒಂದು ಮನೆ ಕೆಳಗಿಳಿಯಿತು. ಅದಕ್ಕೆ 'ಲಿಫ್ಟ್' ಎನ್ನುವರು. ಅವರ ಬಾಗಿಲು ತೆಗೆಯುವ ಮುಂದೆ 'ಛಿನ್‌ನ್....' ಎಂದು ಸಪ್ಪಳವಾಯಿತು. ಆ ಸಪ್ಪಳಕ್ಕೆ ಮೈ ಜುಮ್ಮೆನ್ನುತ್ತದೆ. ತಲೆಗೆ ಅರಿವೆ ಕಟ್ಟಿಕೊಂಡ ಹೆಂಗುಸೊಬ್ಬಳು ಲಿಫ್ಟಿನಿಂದ ಹೊರ ಬೀಳುತ್ತ ನನ್ನ ಕಡೆಗೆ ನೋಡಿ ಹೋದಳು. ಅವಳು ಕೂಡ ಕಮಲಕ್ಕನಂತೆ ವಿಧವೆಯಿದ್ದಾಳೇನು? ಕಮಲಕ್ಕ ಮೀನ ತಿನ್ನುವುದಿಲ್ಲ. ಕಮಲಕ್ಕ ಪ್ರತಿದಿನ ಮಧ್ಯಾಹ್ನ ಅವ್ವನ ಕಡೆಗೆ ಬಂದು ಮಾತಾಡುತ್ತ ಕೂಡುತ್ತಿದ್ದಳು. ಅವ್ವನ ತೊಡೆಯಲ್ಲಿ ಮುಖ ಮುಚ್ಚಿ ಒಮ್ಮೆ ಅತ್ತಿದ್ದಳು. ಯಾರೋ ಇಬ್ಬರು ಲಿಫ್ಟಿನಲ್ಲಿ ಹೊಕ್ಕರು. ದೊಡ್ಡ ಸಪ್ಪಳವಾಡಿ ಲಿಫ್ಟಿನ ಬಾಗಿಲು ಇಕ್ಕೆಕೊಂಡಿತು.

ಮೈಜುಮ್ಮೆನ್ನುತ್ತದೆ. ಕಬ್ಬಿಣದ ಚೌಕಾನ, ಗೋಡೆಗುಂಟ ಸರಿಯುತ್ತ ಕೆಳಗೆ ಬರುವಾಗ ಒಂದು ಕಡೆಗೆ ನಿಂತಿತು. ತೂಗುಬಿದ್ದ ದಪ್ಪವಾದ ರಬ್ಬರಿನ ತಂತಿ ಹೊಯ್ದಾಡಿತು. ಮೇಲೆ ಲಿಫ್ಟಿನ ಬಾಗಿಲನ್ನು ತೆರೆದ ಸಪ್ಪಳವಾಯಿತು. ಮೈಜುಮ್ಮೆನ್ನುತ್ತದೆ.

ಹಾಸ್ಪಿಟಲ್ಲಿನ ಗೇಟಿನಿಂದ ಹೊರಬಿದ್ದು ನಾಡೂ ಫುಟ್‌ಪಾತಿನ ಮೇಲೆ ಬಂದು ನಿಂತ. ಒಂದು ಬಸ್ಸು ಹೋಗುತ್ತಿತ್ತು. ಎರಡನೆಯ ಅಂತಸ್ತಿನಿಂದ ಒಬ್ಬ ಮನುಷ್ಯ ಕೆಳಗೆ ಉಗುಳಿದನು. ರಸ್ತೆಯಲ್ಲಿಯ ಆ ತಗ್ಗಿನಲ್ಲಿ ಮಳೆಯ ನೀರು ಇನ್ನೂ ಹಾಗೇ ನಿಂತಿದೆ. ತಗ್ಗಿನ ಸುತ್ತಲೆಲ್ಲ ರಾಡಿ ಸಿಡಿದಿದೆ. ಒಂದು ಟ್ಯಾಕ್ಸಿ ಆ ತಗ್ಗಿನ ಮೇಲಿಂದ ಹಾಯ್ದು ಹೋಯಿತು. ಕೆಸರು ಮೈಗೆಲ್ಲ ಸಿಡಿಯಬಹುದಾಗಿತ್ತು. ಸಿಡಿದಿದ್ದರೆ ಬಹಳ ಕೆಟ್ಟೆನಿಸುತ್ತಿತ್ತು. ಕೆಟ್ಟೆನಿಸಿದರೆ ನಾನು ಅಳುತ್ತಿದ್ದೆ.

*ಬಂಗಾಲೀ ಕಥೆಗಾರ ಸೌತಿನಂದಿಯವರ ಕಥೆಯ ಅನುವಾದವಿದು.

ನಾಡುವಿನ ಎರಡೂ ತುಟಿಗಳೂ ಕಂಪಿಸತೊಡಗಿದುವು. ಮೆಲ್ಲ ಮೆಲ್ಲನೆ ಹಿಂದೆಸರಿದು ಗೇಟಿಗೆ ಆತುಕೊಂಡು ಅವನು ನಿಂತನು. ಕೈಚೀಲವನ್ನು ಎದೆಗೆ ಒತ್ತಿಹಿಡಿದು ತಲೆಬಾಗಿಸಿ ನಾಡೂ ಅತ್ತನು. ಬಹಳ ಹೊತ್ತು ಅತ್ತನು. ಬರೀ ಒಬ್ಬ ಮುದುಕಿ ಮಾತ್ರ ಹೋಗುತ್ತ ಹೋಗುತ್ತ ಸ್ವಲ್ಪ ಹೊತ್ತು ನಿಂತಳು. ಅವನ ಕಡೆಗೆ ಹೋಗಲು ಅವಳು ಹೊರಳಿದಳು. ಅನಂತರ ಅವಳ ತಲೆಯಲ್ಲಿ ಏನು ವಿಚಾರಬಂತೋ ಯಾರು ಬಲ್ಲರು; ತಲೆಯಲ್ಲಾಡಿಸುತ್ತ ಹೋಗಿಬಿಟ್ಟಳು. ನಾಡೂ ಬಹಳ ಜೋರಾಗಿ ಅತ್ತಿರಲಿಲ್ಲ. ಎರಡೂ ಕೈಗಳಿಂದ ಕಣ್ಣು ಮುಚ್ಚಿ ಹಿಡಿದಿದ್ದನು. ಬೆನ್ನು ಸ್ವಲ್ಪ ಕಂಪಿಸುತ್ತಿತ್ತು. ಅವನ ತೀರ ಹತ್ತಿರಕ್ಕೆ ಯಾರಾದರೂ ಬಂದಿದ್ದರೆ, ಅವರಿಗೆ ಹಾಡನ್ನು ಗುಣುಗುಟ್ಟಿದ ಸಪ್ಪಳದಂತೆ ಆ ಅಳುವು ಕೇಳಿಸಬಹುದಾಗಿತ್ತು. ಅವನ ಇದಿರಿನಲ್ಲಿ ಅದೆಷ್ಟು ಜನರು ಹಾಯ್ದು ಹೋಗಿದ್ದರು! ಎಲ್ಲೋ ಕೆಲವರು ಅವನ ಕಡೆಗೆ ನೋಡಿದ್ದರು. ನಿಂತವರೆಂದರೆ ಆ ಮುದುಕಿ ಮಾತ್ರ; ಅವಳು ಕೂಡ ತಲೆಯಲ್ಲಾಡಿಸುತ್ತ ಹೋಗಿಬಿಟ್ಟಿದ್ದಳು. ಬಹಳ ಸಮಯದ ನಂತರ ನಾಡೂ ಅಂಗಿಯ ತುದಿಯಿಂದ ಎಡಗಣ್ಣನ್ನು ಒರಸಿಕೊಂಡು, ಮತ್ತೆ ಎರಡಂತಸ್ತಿನ ಬಸ್ಸನ್ನು ನೋಡತೊಡಗಿದ.

ಡಾಕ್ಟರರು ವಯಸ್ಸಿನಿಂದ ಸಣ್ಣವರಿದ್ದರು. ತಮಗೆ ಬಹಳ ಕೆಡಕೆನಿಸಿತೆಂದು ಅವರು ಹೇಳಿದರು. ಅವರೆಂದರು, ನಾವು ಮಾಡುವ ಪ್ರಯತ್ನವನ್ನೆಲ್ಲ ಮಾಡಿ ನೋಡಿದೆವು. ಯಾವುದಕ್ಕೂ ಕಡಮೆ ಮಾಡಲಿಲ್ಲ. ಒಮ್ಮೆಲೆ ನೊನ್ನೆಯಿಂದ— ಆ ದಿವಸ ಸ್ವತಃ ನೀವೇ ಇದ್ದಿರಲ್ಲ. ಹೆಚ್ಚಿಗೆ ಏನು ಹೇಳುವುದಿದೆ? ನಿನ್ನೆಯಿಂದ ಗ್ಲೂಕೋಜ್ ಸಲಾಯಿನ್ ನಡೆದೇ ಇತ್ತು. ಮುಂದೆ ಮಾತಾಡಲು ಏನೂ ಸೂಚಿಸಲಿಲ್ಲ ಡಾಕ್ಟರರಿಗೆ. ಅವರು ಸುನ್ನಾದರು. ಸಂತೋಷನ ಮುಖ ನೋಡಿ ಅವರಿಗೆ ಏನೆನಿಸಿತೋ ಯಾರು ಬಲ್ಲರು! ಎಂದರು. ನಾನು ಈಗಿಂದೀಗಲೇ ಸರ್ಟಿಫಿಕೆಟ್ ಕೊಡುವ ವ್ಯವಸ್ಥೆ ಮಾಡುತ್ತೇನೆ.

ಸಂತೋಷ ಏನೂ ಮಾತಾಡದೆ ಹಾಗೇ ನಿಂತಿದ್ದ. ಒಬ್ಬ ನರ್ಸು ಪಡದೆಯನ್ನು ಬದಿಗೆ ಸರಿಸಿ ಒಳಗೆ ಹಣಿಕಿಹಾಕಿ ಹೋದಳು. ಔಷಧದ ವಾಸನೆ ಬರುತ್ತಿತ್ತು. ವ್ಹರಾಂಡದಿಂದ 'ಸಪ್‌ಸಪ್....' ಎಂದು ಸಪ್ಪಳ ವಾಗುತ್ತಿತ್ತು. ಕೋಲಿನ ತುದಿಗೆ ಕಟ್ಟಿದ್ದ ಅರಿವೆಯ ತುಂಡಿನಿಂದ, ಜಮಾದಾರ ಹೊರಗೆ ರೇಲಿಂಗನ್ನು ಝಾಡಿಸುತ್ತಿರಬೇಕು. ಭರ್ರ್ ಎಂದು ಟೇಬಲ್ಲಿನ ಮೇಲಿದ್ದ ಕಾಗದಗಳು ಹಾರಿದುವು. ಕೈಯಲ್ಲಿ ಕಾಜಿನ ಪೇಪರ್-ವೇಟನ್ನು ಹಿಡಿದು ಡಾಕ್ಟರರು ಅತ್ತಿಂದಿತ್ತ ಓಡಾಡಿದರು.

ಸಂತೋಷ ಹೊರಗೆ ವ್ಹರಾಂಡದಲ್ಲಿ ಬಂದನು. ಒಂದು ಕಟ್ಟಿಗೆಯ ಬೆಂಚ್ಚಿನಲ್ಲಿ ಉಗುಳಿದ. ವ್ಹರಾಂಡದ ಎಡಕ್ಕೆ ಎರಡು ಕ್ಯಾಬಿನ್ನುಗಳಿದ್ದುವು. ಬಾಗಿಲ ಮೇಲೆ ಪಡೆದೆ ತೂಗಾಡುತ್ತಿತ್ತು. ಕಾಟನ ಮೇಲೆ ಒಬ್ಬ ತರುಣ ಎದ್ದು ಕುಳಿತು ಏನನ್ನೋ ಮಾತಾಡುತ್ತಿದ್ದನು. ಬೈತಲೆಯಲ್ಲಿ ಕುಂಕುಮ ತುಂಬಿದ ಒಂದು ಹುಡುಗಿ, ಸಂತ್ರಿಯನ್ನು ಸುಲಿಯುತ್ತಿದ್ದಳು. ವ್ಹರಾಂಡದ ಬಲಕ್ಕೆ ಎಷ್ಟೋ ಬಾಗಿಲುಗಳಿವೆ. ಬಾಗಿಲ ಮೇಲೆ ಪಡದೆ ಇಲ್ಲ. ಒಳಗೆ ಸಾಲಾಗಿ ಕಾಟುಗಳನ್ನು ಇರಿಸಲಾಗಿದೆ. ಕಾಟಿನ ತುದಿಗೆಲ್ಲ ಜನರಿದ್ದಾರೆ. ಇದು ವ್ಹಿಜಿಟಿಂಗ್-ಅವರ್. ಇದು ಹೆಂಗುಸರ ವಾರ್ಡು. ಆ ಸಣ್ಣ ಹುಡುಗಿಯ ಕಾಲಿನ ಸಲುವಾಗಿ ಕಟ್ಟಿದ ಕಬ್ಬಿಣದ ಚೌಕಟ್ಟು ಇನ್ನೂ ಹಾಗೆಯೇ ಜೋತಾಡುತ್ತಿದೆ. ಎಷ್ಟು ದಿವಸಗಳಾದುವು ಅವಳು ಇನ್ನೂ ಇಲ್ಲಿಯೇ ಇದ್ದಾಳೆ. ಆ ದಿನ ಅವಳು ಮನೆಗೆ ಹೋಗುತ್ತೇನೆಂದು ಗಟ್ಟಿಸಿ ಗಟ್ಟಿಸಿ ಅತ್ತಿದ್ದಳು. ಒಂದು ದಿವಸ ಅವಳಿಗೆ ಗುಣವಾಗುತ್ತದೆ. ಗುಣವಾದ ಮೇಲೆ ಅವಳು ಮನೆಗೆ ಹೋಗವಳು.

ಹಾಸ್ಪಿಟಲ್ಲಿನ ಗ್ರೌಂಡಿನ ಮೇಲೆ ಫುಟ್-ಬಾಲ್ ಮ್ಯಾಚ್ ನಡೆದಿತ್ತು. ಒಂದು ಟೀಮಿನವರು ಗೋಲು ಹೊಡೆದರೆಂದು ಕಾಣುತ್ತದೆ; ಸಂತೋಷ ಕತ್ತು ಹೊರಳಿಸಿ ಆ ಕಡೆಗೆ ನೋಡಿದ. ಗ್ರೌಂಡಿನ ಸುತ್ತೆಲ್ಲ ಜನರು ಗುಂಪುಗುಂಪಾಗಿ ನೆರೆದಿದ್ದರು. ಕಪ್ಪು ಇರುವೆಗಳಂತೆ. ನೋಡಲು ಸಂತೋಷವೆನಿಸುತ್ತದೆ. ಆ ಪುಸ್ತಕ ಮಾರುವವನು ಈವೊತ್ತು ಕೂಡ ಬಂದಿದ್ದಾನೆ. ಅವನು ದಿನಾಲೂ ಬರುತ್ತಾನೆ. ಎರಡೂ ತೋಳು ತುಂಬುವಷ್ಟು ಮಾಸಿಕಗಳನ್ನು ಕೂಡಿಸಿಕೊಂಡು ತಂದಿರುತ್ತಾನೆ. ಕಾಲು ವಾಲಿದ ಆ ಹುಡುಗಿಗೆ ಒಂದು ಪುಸ್ತಕ ಕೊಂಡು ಕೊಟ್ಟರೆ ಹೇಗೆ? ಸಂತೋಷನು ಕಿಶೆಗೆ ಕೈಹಾಕಿದ. ಹತ್ತು-ಹತ್ತರ ನಾಲ್ಕು ನೋಟುಗಳು ಕಿಶೆಯಲ್ಲಿ ಜರಚರ ಸಪ್ಪಳ ಮಾಡಿದುವು.

ಎರಡೂ ಕೈಗಳನ್ನು ಎದೆಯ ಮೇಲಿಟ್ಟುಕೊಂಡು ಹುಡುಗಿ ಮಲಗಿದ್ದಾಳೆ. ಸಂತೋಷನು ಬಂದು ಅವಳ ಹತ್ತಿರಕ್ಕೆ ನಿಂತ. ಆ ಹುಡುಗಿ ಅವನ ಕಡೆಗೆ ನೋಡಿದಳು. ಅವಳಿಗೆ ಆಶ್ಚರ್ಯವೆನಿಸಿತು.

ಹೇಗಿದೆ ಪ್ರಕೃತಿ?

ನೆಟ್ಟಗಿದ್ದೇನೆ.

ಮನೆಯವರು ಯಾರೂ ಬಂದಿಲ್ಲವೇನು?

ಬಂದಿದ್ದರು. ಇದೇ ಈಗ ಹೋದರು.

ಸಂತೋಷ ಸ್ವಲ್ಪಹೊತ್ತು ನೋಡುತ್ತ ನಿಂತನು. ಆ ಹುಡುಗಿ ಮುಖ ತಿರುವಿದಳು.

ಇವಳಿಗೆ ಪುಸ್ತಕ ಕೊಟ್ಟೇನು ಉಪಯೋಗ? ಇವಳನ್ನು ಸಂತೋಷಪಡಿಸಿದರೆ ನನಗೇನು ಸುಖ ಸಿಗಬೇಕಾಗಿದೆ? ಇನ್ನೊಬ್ಬರ ಅನಂದ ನೋಡಿ ನನ್ನ ಯಾವ ಆಶೆ ಪೂರ್ತಿಯಾಗಬೇಕಾಗಿದೆ? ನನಗೆ ಜೀವನದಲ್ಲಿ ಈಗ ಆಶೆಯಾದರೂ ಯಾವುದು ಉಳಿದಿದೆ? ನನಗೆ ಏನೂ ಬೇಡ. ಸಂತೋಷನು ಮಗ್ಗಿಲಿಗಿದ್ದ ಕಾಟಿನ ಕಡೆಗೆ ನೋಡಿದ. ಕಾಟು ಖಾಲೀ ಇತ್ತು. ಮೇಲೆ ಕೆಂಪು ಬಣ್ಣದ ರಗ್ಗು ಹಾಸಿದೆ. ಬಹುಶಃ ಇವೊತ್ತೇ ಯಾರಾದರೂ ಬಂದರೂ ಬರಬಹುದು. ಮೂಲೆಯಲ್ಲಿಯ ಆ ನಗುಮುಖದ ಕೆಂಪು ಹುಡುಗಿಯ ಮೂಗಿನ ಮೇಲೆ ಆಕ್ಸಿಜನ್ನಿನ ನಳಿಕೆಯಿದೆ. ಇವತ್ತೇ ಮುಂಜಾನೆ ಅವಳಿಗೆ ಆಪರೇಶನ್ ಆಗಿರಬೇಕು. ಅವಳ ಹತ್ತಿರವೇ ಅವಳ ಕೈಯನ್ನು ತನ್ನ ಕೈಯಲ್ಲಿ ಗಟ್ಟಿಯಾಗಿ ಹಿಡಿದು ಕೊಂಡು ಕುಳಿತ ಅವಳು, ಈ ಹುಡುಗಿಯ ತಾಯಿಯೇ ಇರಬೇಕು. ತಾಯಿ ಅಳುತ್ತಿದ್ದಾಳೆ; ಮಗಳು ಸಂಕಟದಿಂದ ಪಾರಾದಳೆಂದು ತಾಯಿ ಅಳುತ್ತಿದ್ದಾಳೆ. ವಾಗಳಿಗೆ ಒಕರಿಕೆ ಬರುತ್ತಿದೆ. ಅವ್ವ ತನ್ನ ಸೀರೆಯ

ಸೆರಗಿನಿಂದ ಅವಳ ಬಾಯಿಯೊರಸಿದಳು. ಆ ಹುಡುಗನು ನಿನ್ನೆ ಸಹಿತ ಹೀಗೆಯೇ ಹುಚ್ಚನಂತೆ ಕುಳಿತಿದ್ದ. ಹುಡುಗಿ ನಿನ್ನೆ ಬಹಳ ನಿರ್ವಿಣ್ಣಳಾದವಳಂತೆ ಕಾಣಿಸುತ್ತಿದ್ದಳು. ಇವೊತ್ತು ಮತ್ತೆ ಅವನು ಅವಳಿಗೆ ತೊಂದರೆ ಕೊಡಲು ಬಂದಿದ್ದಾನೆ. ಯಾಕೆ ಬರುವನೋ ಯಾರಿಗೆ ಗೊತ್ತು.

ಸಂತೋಷನು ಒಂದೊಂದೇ ಹೆಜ್ಜೆ ಹಾಕುತ್ತ ಒಳಗೆ ಬಂದನು. ಎಲ್ಲರೂ ಅವನ ಕಡೆಗೆ ನೋಡಿದರು. ಆ ಹುಡುಗಿ ಏನೋ ಮಾತಾಡುತ್ತಿದ್ದಾಳೆ. ನಿಜವಾಗಿ ನೋಡಿದರೆ ಅವಳು ಹಾಗೆ ಮಾತಾಡುವುದು ಸರಿಯಲ್ಲ. ಅವಳ ಕಣ್ಣುಗಳು ಒದ್ದೆಯಾಗಿವೆ. ಅಳುತ್ತಿದ್ದಾಳೆ. ಅವಳಿಗೆ ಹೊಟ್ಟೆಯಲ್ಲಿ ಕಸಿವಿಸಿಯಾಗುತ್ತಿರಬೇಕು. ಸಂತೋಷನು ಬಾಗಿ ಹುಡುಗನಿಗೆ ಹೇಳಿದ, ಅವಳನ್ನು ಮಾತಾಡಗೊಡಬೇಡಿರಿ, ಅದರಿಂದ ಮತ್ತೆ ಅವಳಿಗೆ ಓಕರಿಕೆ ಬರುತ್ತದೆ.

ಮಾತಾಡಬೇಡವೆಂದು ಹೇಳಿದೆ, ಆದರೆ ಅವಳೆಲ್ಲಿ ಕೇಳುತ್ತಾಳೆ ?

ನಿಮಗೇನಾಗಬೇಕು ಅವಳು ?

ಉತ್ತರ ಕೊಡದೆ ಹುಡುಗ ಅವಳ ಮುಖ ನೋಡುತ್ತ ಕುಳಿತು ಬಿಟ್ಟ. ಇನ್ನೂ ಸಣ್ಣವನಿದ್ದಾನೆ. ಸಂಸಾರದ ಸೆಕೆ ಬಡಿದಿಲ್ಲ. ಅವನು ಬಹುಶಃ ಜನ್ಮ ಮುಗಿಯುವ ವರೆಗೂ ಅವಳನ್ನು ಹೀಗೆಯೇ ಹುಚ್ಚನಂತೆ ನೋಡುತ್ತ ಕೂಡುವನು. ಸಂತೋಷನು ಹೊರಳಿ ಹಿಂದೆ ನೋಡಿದ. ಮಗ್ಗಲಿಗೆ ನೋಡಿದ. ಎಲ್ಲ ಕಾಟುಗಳ ಮೇಲಿನ ಕಣ್ಣುಗಳು ಅವನಲ್ಲಿ ನೆಟ್ಟಿದ್ದವು. ಅವರು ಹಾಗೇಕೆ ನನ್ನನ್ನು ನೋಡುತ್ತಾರೆ, ನನಗೆ ಗೊತ್ತಿದೆ. ಅವರು ತಮ್ಮ ತಮ್ಮೊಳಗೆ ಏನು ಗುಜು ಗುಜು ಮಾಡುತ್ತಿದ್ದಾರೆಂಬುದು ಕೂಡ ನನಗೆ ಗೊತ್ತಿದೆ. ಅವರಿಗೆ ಆಶ್ಚರ್ಯವೆನಿಸಿದೆ, ನಾನು ಇನ್ನೂ ಯಾಕೆ ಅತ್ತಿಲ್ಲ ಎಂದು. ನಾನು ಅತ್ತರೆ ಅವರಿಗೆ ಹಗುರೆನಿಸುವುದು. ಆದರೆ ನಾನು ಏನೆಂದು ಅಳಬೇಕು ?

ಹಾಲಿನ ಎರಡನೆಯ ಮೂಲೆಯಲ್ಲಿಯ ಆ ಕಾಟಿನ ಸುತ್ತಲೂ ಕೆಂಪು ಪಡದೆ ಇವೆ. ಸಂತೋಷ ಆ ಕಾಟಿನಹತ್ತಿರ ಬಂದ. ಹಾಲಿನಲ್ಲಿಯ ಎಲ್ಲರೂ ಈಗ ನನ್ನನ್ನೇ ನೋಡುತ್ತಿದ್ದಾರೆ. ಸ್ವಲ್ಪ ಹಣಕೆ ಹಾಕಿ ನೋಡಿದರೆ ಪಡದೆಯ ಒಳಗಿನದೆಲ್ಲ ಕಾಣುವುದು; ಆದರೆ ಅದನ್ನು ಏನೆಂದು ನೋಡಬೇಕು ? ಈ ಜನರು ದಿನಾಲೂ ನಾನು ಬರುವಾಗ ನೋಡುತ್ತಿರುತ್ತಾರೆ. ಅವರಿಗೆ ನನ್ನಲ್ಲಿ ಏನಾದರೂ ಹೊಸತನ್ನು ಕಾಣಬೇಕಾಗಿದೆ. ಆದರೆ ನಾನೇನು ನೋಡಲಿ ? ಹಣಕೆ ಹಾಕಿ ನಾನು ನೋಡುವುದಾದರೂ ಏನಿದೆ ? ಅವಳು ಅಲ್ಲಿ ಇದ್ದಾಳೆಯೋ ಇಲ್ಲವೋ ಎಂಬುದನ್ನು ನೋಡಬೇಕೆ ? ಹಾಸ್ಪಿಟಲ್ಲಿಗೆ ಬರುವ ಮುಂಚೆ ಮಾತ್ರ ಅವಳು ಮನುಷ್ಯಳು. ಆಗ ಎಲ್ಲವೂ ಬೇರೆಯೇ ಇತ್ತು. ನಗುವುದು, ಅಳುವುದು, ಸಿಟ್ಟು, ಆ ಮೇಲೆ ಸಿಟ್ಟು ಕಡಿಮೆಯಾಗುವ ದಾರಿ ನೋಡುವುದು. ಅನಂತರ ಎಷ್ಟೋ ದಿನಸಗಟ್ಟಲೆ ಹಾಸಿಗೆ ಹಿಡಿದದ್ದರಿಂದ ಸ್ವಭಾವ ಬದಲಾಯಿತು. ಮುಖದ ಮೇಲಿನ ಕಳೆಯು ಕೂಡ ಬದಲಾಯಿತು. ಅಂದರೆ ಅವಳೊಬ್ಬ ಹೊಸ ವ್ಯಕ್ತಿಯೇ ಅಡಳು. 'ಹೊಸ' ಎಂದರೆ ಏನು? ಹೊಸತನ್ನೆ ಅರ್ಥವಾದರೂ ಏನಿದೆ? ನೊದಲು ಹಗಲು ರಾತ್ರಿ ಕೂಡಿಯೇ ನಾವಿಬ್ಬರೂ ಸಮೀಪವಾಗಿ ಇರುತ್ತಿದ್ದೆವು; ಆಮೇಲೆ ಹಾಸ್ಪಿಟಲ್ಲಿನ ಎರಡೇ ಎರಡು ತಾಸಿನ ಸಂಬಂಧ ಸಿದ್ಧವಾಯಿತು ನಿರ್ದಿಷ್ಟ ವೇಳೆಗೆ ದಿನಾಲೂ ಬರುವುದು. ಅದೇ ಮಾತನ್ನೇ ಆಡುವುದು. ಅದೇ ಮಾತನ್ನೇ ಕೇಳುವುದು. ದಣಿದು ಹೋಗಿರುತ್ತಿದ್ದೆ ನಾನು. ಇಲ್ಲಿಯವರೆಗೆ ಬರಲು ಮನಸ್ಸಿರುತ್ತಿರಲಿಲ್ಲ. ಇವತ್ತು ಕೊನೆಗೊಮ್ಮೆ ಆ ಚಕ್ರದಿಂದ ಮುಕ್ತಿದೊರೆತಂತಾಯಿತು. ಆದರೂ ನಾನು ಏನೆಂದು ಅಳಬೇಕು? ಅವಳ ಅಪೇಕ್ಷೆ ಪೂರಯಿಸಲು ನಾನು ಯಾಕೆ ಕಷ್ಟ ಪಡಬೇಕು ?

ಒಳಗೆ ಹಣಿಕಿ ಹಾಕಿದರೆ ಪಡದೆಯ ಒಳಗಿನದೆಲ್ಲ ಕಾಣಿಸುವುದು. ಆದರೆ ಸಂತೋಷನು ನೋಡಲಿಲ್ಲ. ಅವನು ಮತ್ತೆ ವ್ಹರಾಂಡಕ್ಕೆ ಮರಳಿದನು ಮೊದಲು ಸರ್ಟಿಫಿಕೇಟು ತೆಗೆದುಕೊಳ್ಳಲಿಕ್ಕೆ ಬೇಕು. ಆ ಮೇಲೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಬೇಕು. ಕಲಕತ್ತೆಯಲ್ಲಿ ಗುರುತಿನವರು ಯಾರೂ ಇಲ್ಲ. ಬೇರೆ ಯಾರದಾದರೂ ಸಲಹೆ ತೆಗೆದುಕೊಳ್ಳಬೇಕು.

ಎಲ್ಲವೂ ದೇವರ ಕೈಯೊಳಗಿನದು.

ಸಂತೋಷನು ಒಮ್ಮೆಲೆ ಬೆಚ್ಚಿ ಬಿದ್ದ. ಆ ಪುಸ್ತಕ ಮಾರುವವನು ಮೌನವಾಗಿ ಅಲ್ಲಿಯೇ ನಿಂತಿದ್ದ. ಹತ್ತಿರದಿಂದ ಹೋಗುವಾಗ ಅವನು ಏನೇನೋ ಅಂದಿದ್ದನು.

ಹೌದು ಪ್ರಯತ್ನಕ್ಕೇನೂ ಕಡಮೆ ಮಾಡಲಿಲ್ಲ. ಬಹಳ ದಿವಸ ಭೋಗಿಸಿದ್ದಾಯಿತು. ಏನಾಗಿತ್ತು ?

ಟ್ಯೂಮರ್! ಎರಡು ಸಲ ಆಪರೇಶನ್ ಆಗಿತ್ತು. ಇಷ್ಟೂ ಸಹಿಸುವುದಾಗಲಿಲ್ಲ.

ಸಂತೋಷನು ವ್ಹರಾಂಡದ ಹೊರಗೆ ನೋಡಿದನು. ಆ ಇಡೀ ವ್ಹರಾಂಡಕ್ಕೆ ಸುತ್ತಲೂ ಜಾಳಿಗೆ ಬಡಿದಿತ್ತು. ಯಾಕೆ? ಯಾವ ರೋಗಿಯೂ ಕೆಳಗೆ ಜಿಗಿಯಬಾರದೆಂದೇನು ? ಮರಣ ನಿಜವಾಗಿಯೂ ದೇವರ ಕೈಯೊಳಗಿನದೆ ? ನಾನೇನೋ ಹಾಗೆಂದು ಬಿಟ್ಟೆ. ವಿಚಾರ ಮಾಡದೆ ಅಂದೆ. ವಿಚಾರ ಮಾಡದೆ ನಾವು ಹೀಗೇ ಎಷ್ಟೋ ಸಂಗತಿಗಳನ್ನು ಅಂದುಬಿಡುತ್ತೇವೆ. ನನ್ನ ಮುಖದ ಮೇಲಿನ ಭಾವ ಇನ್ನೂ ಸ್ವಲ್ಪ ವಿಷಣ್ಣವಿರಲಿಕ್ಕೆ ಬೇಕು. ಇರದಿದ್ದರೆ ಮಾಡಲಿಕ್ಕೆ ಬೇಕು. ಇಲ್ಲದಿದ್ದರೆ ಆ ಜನರಿಗೆಲ್ಲ ಏನಾದರೂ ಅನಿಸೀತು. ಆದರೆ ನಾನು ಮುಖದ ಮೇಲೆ ವಿಷಣ್ಣಭಾವ ತರದಿದ್ದರೆ ಏನಾಗುತ್ತದೆ ? ಈವೊತ್ತು ಮಳೆ ಬರುತ್ತದೆ. ಬರದಿದ್ದರೆ ಒಳ್ಳೆಯದಾಗುವುದು. ಎಷ್ಟು ಹೊಡೆಯಿತು ? ರಾತ್ರಿ ಹೆಚ್ಚಾದಷ್ಟೂ ತೊಂದರೆ ಹೆಚ್ಚಾಗುವುದು. ಕಲಕತ್ತೆಯು ಹಗಲಲ್ಲಿ ಕೂಡ ಒಂದು ಚಕ್ರಬಂಧ ಸ್ಪರ್ಧೆಯಂತೆ ಭಾಸವಾಗುತ್ತದೆ.

ಮನೆಯಲ್ಲಿ ಮತ್ತೆ ಯಾರು ಇದ್ದಾರೆ ?

ಯಾರೂ ಇಲ್ಲ. ಕೇವಲ ಒಬ್ಬ ನಾಲ್ಕು ವರ್ಷದ ಹುಡುಗ.

ಬಾಯಲ್ಲಿಯ ಸಹಾನುಭೂತಿಪರ " ತ್ಸೊ ತ್ಸೊ ...." ಕೇಳಲು ಸಂತೋಷನೆನಿಸುತ್ತದೆ. ಈ ಮನುಷ್ಯ ನಿಜಕ್ಕೂ ಬಹಳ ಒಳ್ಳೆಯವನಿದ್ದಾನೆ. ಒಂದು ಪುಸ್ತಕಕೊಂಡು ಇವನಿಗೆ ಸಹಾಯ ಮಾಡಲಿಕ್ಕೆ

ಬೇಕು. ಪುಸ್ತಕ ಮಾರುವನನ ಕೈಯೊಳಗಿಂದ ಸಂತೋಷ ಒಂದು ಮಾಸಪತ್ರಿಕೆಯನ್ನು ಎತ್ತಿಕೊಳ್ಳುವನಿದ್ದ, ಪುಸ್ತಕದವನು ಅದನ್ನು ಒಮ್ಮೆಲೆ ಎಳೆದುಕೊಂಡ. ಸಂತೋಷನ ಎರಡೂ ಕೈಗಳನ್ನು ಹಿಡಿದು ಅವುಗಳನ್ನು ಅಲ್ಲಾಡಿಸುತ್ತ ಅವನು ಹೇಳಿದ. ಸಮಾಧಾನ ಮಾಡಿ ಕೊಳ್ಳಿರಿ. ಹುಡುಗನ ಮುಖ ನೋಡಿಯಾದರೂ ಧೈರ್ಯ ತಂದುಕೊಳ್ಳ ಬೇಕು. ಹೀಗೆ ಅಸ್ವಸ್ಥರಾದರೆ ಹೇಗೆ ನಡೆದೀತು?

ನಾಡೂ ಇನ್ನೂ ರಸ್ತೆಯ ಮೇಲೆ ನಿಂತಿವ್ವಾನೆ. ಪುಸ್ತಕದವನು ಅನ್ನುವುದು ಸತ್ಯಸಂಗತಿ, ಇಷ್ಟೇ ಸಣ್ಣ ಹುಡುಗ. ಈಗ ಅವನಿಗೆ ಏನಾದರೂ ತಿನ್ನಲಿಕ್ಕೆ ಕೊಡಬೇಕು. ಈ ಎಲ್ಲ ರಗಳೆ ಮುಗಿಯಲು ಎಷ್ಟು ನೇಳೆ ಬೇಕೋ ಯಾರಿಗೆ ಗೊತ್ತು?

ಏನು ಮಾಡಬೇಕು? ಒಂದೂ ಸೂಚಿಸುವುದಿಲ್ಲ. ಕಲಕತ್ತೆಯಲ್ಲಿ ನನ್ನ ಗುರುತಿನವರು ಒಬ್ಬರೂ ಇಲ್ಲ.

ನಾಲ್ಕು ಮನುಷ್ಯರು ಕೂಡ ಇಲ್ಲವೆ?

ಇಲ್ಲವಲ್ಲ! ಕಾರಖಾನೆಯು ಈಗ ಬಿಟ್ಟು ಹೋಗಿದೆ. ಅಲ್ಲಿ ಸಹಿತ ಈಗ ಹೋದರೆ, ಒಬ್ಬರೂ ಸಿಗುವಂತಿಲ್ಲ.

ಹಾಗಾದರೆ ಸಂಸ್ಕಾರಸಮಿತಿಗೆ ಹೋಗಬೇಕು. ಬೇರೆ ಮಾರ್ಗವೇ ಇಲ್ಲ.

ಆ ಮನುಷ್ಯ, ನಾನು ಇನ್ನು ಮಾಡಬೇಕಾದ ಕೆಲಸದ ನೆನಪನ್ನು ತಂದುಕೊಟ್ಟ. ಇನ್ನೂ ಬಹಳ ಕೆಲಸ ಬಿದ್ದಿದೆ. ಅದಕ್ಕಿಂತ ಈಗಿಂದೀಗಲೇ ಯಾರಿಗೂ ತಿಳಿಯದಂತೆ ಹೋಗಿಬಿಟ್ಟರೆ ಹೇಗೆ? ಅವರು ನನ್ನ ಹಾದಿ ನೋಡುವರು. ಮನೆಗೆ ಸುದ್ದಿ ಮುಟ್ಟಿಸುವರು. ನಾನು ಬರಲಿಲ್ಲವೆಂದ ಮೇಲೆ, ಹಣವನ್ನು ಒಂದು ತಗ್ಗಿನಲ್ಲಿ ಒಗೆದು ಬಿಡುವರು.

ಹತ್ತಿರ ಹಣವಿವೆಯೋ ಇಲ್ಲವೋ?

ಇದೆ.

ಹಾಗಾದರೆ ಇನ್ನು ತಡಮಾಡಬೇಡಿರಿ.

ಇಲ್ಲ ಹೊರಟೇ ಬಿಟ್ಟೆನು.

ಸಂತೋಷನು ಸಾವರಿಸಿಕೊಂಡು ಮುಂದೆ ನಡೆದನು. ನಿಸ್ಸೆಯೆ ಗೊತ್ತಾಗಿತ್ತು. ಅವಳು ಇನ್ನು ಉಳಿಯುವುದಿಲ್ಲವೆಂಬದು. ಪೋಸ್ಟಿನೊಳ ಗಿಂದ ಹಣ ತೆಗೆದಿಟ್ಟಿದ್ದೆನೆಂದು ಒಳ್ಳೆಯದಾಯಿತು. ಸೇವಿಂಗ್ಸ್ ಕಿಡಕಿ ಯಲ್ಲಿಯ ಆ ಮನುಷ್ಯ, ಬಹಳ "ಕಿಟಕಿಟ" ಕೂಡುತ್ತಾನೆ. ಸಹಿ ಎಂದೂ ಸರಿಹೊಂದುವುದೇ ಇಲ್ಲವಂತೆ. ಆದರೂ ಇವತ್ತು ಸರಿಯಾಗಿತ್ತು. ಏನೂ ತೊಂದರೆಯಾಗಲಿಲ್ಲ. ಬಹುಶಃ ಇವತ್ತು ಅವನು ಬಹಳ 'ಖುಶಿ' ಯಲ್ಲಿರಬೇಕು. ಅವನ ಹೆಂಡತಿಗೆ ರುಚಿಕಟ್ಟಾದ ವಡೆ ಮಾಡಲು ಬರುವು ದೇನೋ? ಪುಸ್ತಕದವ ಕೇಳಿದ. ಹತ್ತಿರ ಹಣ ಇದೆಯೋ ಇಲ್ಲವೊ ಎಂದು. ನನ್ನ ಹತ್ತಿರ ಇಲ್ಲವೆಂದಿದ್ದರೆ ಅವನೇನು ಕೊಡುವವನಿದ್ದನೆ? ಅವನಿಗೆ ಕೊಡಲು ಸಾಧ್ಯವೇ ಇದ್ದಿದ್ದಿಲ್ಲ. ಹಾಗಾದರೆ ಯಾಕೆ ಕೇಳ ಬೇಕು? ಅವನಿಗೆ, ನನಗೆ ಧೈರ್ಯಕೊಡುವ ಉದ್ದೇಶವಿತ್ತೆಂದು ಕಾಣು ತ್ತದೆ. ಅಥವಾ ಹಿಂದೆ ನಾನು ಒಮ್ಮೆ ಹೀಗೆಂದಿದ್ದೆ ಎಂದು, ಮುಂದೆ ಎಂದಾದರೂ ಒಮ್ಮೆ ಅವನು ತನ್ನ ವಿವೇಕತನವನ್ನು ಪ್ರಶಂಸಿಸಿ ಸಂತೋಷ ಪಡಬಹುದು—ಅದಕ್ಕಾಗಿ ಅವನು ಹಾಗೆ ಅಂದಿದ್ದರೆ....

ಬಾಬಾ,

ನೀನು ಇಲ್ಲೇಕೆ ಬಂದೆ?

ಸಂತೋಷನು ಕಡೆಯ ಪಾವಟಿಗೆಯ ಮೇಲೆ ನಿಂತಿದ್ದನು. ಭೈಯಾ ಅವನ ಕಡೆಗೆ ನೋಡತೊಡಗಿದ್ದ. ಅವನ ಒಂದು ಕೈ ನಾಡೂನ ಹೆಗಲಮೇಲಿತ್ತು. ಅವನು ನಾಡೂನನ್ನು ಸಂತೈಸತೊಡಗಿದ್ದನು. ಇವನ ಕೂಡ ನಾನು ಒಮ್ಮೆ ಬಡಿದಾಡಿದ್ದೆ; ಆಗ ನಾನು ಅವನಿಗೆ ಮನಬಂದಂತೆ ಬೈದಿದ್ದೆ. ಇವನೂ ನನಗೆ ಬೈದಿದ್ದ.

ನನಗೆ ಮೇಲೆ ಹೋಗಬೇಕಾಗಿದೆ.

ಯಾಕೆ?

ಹುಡುಗನಿಗೆ ಅವ್ವನನ್ನು ನೋಡುವುದಿತ್ತು. ಇನ್ನೇನು ನೂಡು ವುದು ನೋಡಿ? ಬಹುಶಃ ಅವಳ ಕಣ್ಣುಗಳು ಬೆಳ್ಳಗಾಗಿರಬೇಕು. ಅವಳ ನಾಲಗೆ ಕೂಡ ಹೊರಕ್ಕೆ ಜೋತು ಬಿದ್ದಿರಬೇಕು. ಅವಳಿಗೆ ತುಟಿ ನೆಕ್ಕುವ ಅಭ್ಯಾಸವಿತ್ತು. ಸಿಟ್ಟಿಗೆದ್ದಾಗ ಬಾಯಿಂದ ಶಬ್ದಗಳು ಬರದಿದ್ದರೆ ಅವಳು ನಾಲಗೆಯನ್ನು ತುಟಿಯ ಮೇಲೆ ಸವರಿಸುತ್ತಿದ್ದಳು. ಸಾಯುವ ವೇಳೆಯಲ್ಲಿ ಅವಳು ಅತಿಶಯ ಸಿಟ್ಟಿಗೆದ್ದಿರಬೇಕು. ಆದರೆ ಸಿಟ್ಟಿಗೇಳುವಷ್ಟು ಶುದ್ಧಿ ಆಗ ಅವಳ ಮೈಮೇಲೆ ಎಲ್ಲಿತ್ತು? ಎದೆ ಸಹಿತ ತಣ್ಣಗಾಗಿ ಹೋಗಿತ್ತು. ಆದರೆ ಸಿಟ್ಟಿಗೂ ಎದೆಗೂ ಸಂಬಂಧವೇನು? ತಲೆಗೆ ಮತ್ತು.....

ಬಾಬಾ, ನಾನು ನೋಡಲು ಹೋಗುತ್ತೇನೆ.

ಏನು ನೋಡುವುದಿದೆ? ಏನಿದೆ ಈಗ ಅಲ್ಲಿ ನೋಡುವಂತಹದು?

ನಾಡೂನ ಹೆಗಲಮೇಲೆ ಕೈಯಿಟ್ಟು ಸಂತೋಷನು ಮುಂದೆ ನಡೆ ಯಲುಪಕ್ರಮಿಸಿದನು. ಕತ್ತಲೆಯಾಗುತ್ತಿದೆ. ದೋಗಿಗಳನ್ನು ಭೆಟ್ಟಿ ಯಾಗಲು ಬಂದ ಜನರೆಲ್ಲ ತಿರುಗಿ ಹೋಗುತ್ತಿದ್ದಾರೆ. ನರ್ಸ್ ಕ್ವಾರ್ಟರ್ಸ್ ನಲ್ಲಿ ಯಾರೋ ಸುಶ್ರಾವ್ಯವಾಗಿ ಹಾಡುತ್ತಿದ್ದಾರೆ. ಔಟ್‌ಡೋರನ ಬಾಗಿಲಲ್ಲಿ ಮಧ್ಯಮ ವಯಸ್ಸಿನ ಒಬ್ಬ ಹೆಂಗಸು ಅಳುತ್ತಿದ್ದಾಳೆ. ಅವಳ ಕೈಯ ಮೂರು ಬೆರಳುಗಳು ಕತ್ತರಿಸಿವೆ. ಅವಳ ಬೈತಲೆಯಲ್ಲಿ ಕುಂಕುಮ ವಿದೆ.

ಟ್ರ್ಯಾಮು ಹೋಗುವ ರೂಳನ್ನು ದಾಟಿ ಅವರು ಒಂದು ಹೋಟೆ ಲನ್ನು ಹೊಕ್ಕರು.

ನಾಡೂ, ನಿನಗೆ ಏನಾದರೂ ತಿನ್ನಲಿಕ್ಕೆ ತೆಗೆದುಕೊ.

ಬೇಡ ನನಗೆ ಹಸಿವೆಯಿಲ್ಲ.

ಆ ಮೇಲೆ ಹಸಿವೆಯಾಗುವುದು. ಈಗೇ ಹೊತ್ತಾಯಿತುಂಬ ತಿನ್ನು.

ಒಲ್ಲೆ. ನನಗೆ ಹಸಿವೆಯಾಗಿಲ್ಲ.

ಸಂತೋಷ ಸ್ವಲ್ಪ ಹೊತ್ತು ಅವನ ಕಡೆಗೆ ನೋಡುತ್ತ ಕುಳಿತ. ಹುಡುಗನಿಗೆ ತಾಯಿಯ ನೆನಪು ಬರುತ್ತಿದೆ. ಪಾಪ, ಅವನಿಗೆ ಕೆಟ್ಟಿನಿಸು ತ್ತದೆ. ಅನಿಸಲಿ. ಇನ್ನೂ ಸಣ್ಣವನಿದ್ದಾನೆ.

ನಾಡೂ, ನೀನು ಇಲ್ಲಿಯೇ ಇರು. ನಾನು ಸಂಸ್ಕಾರಸಮಿತಿಯ ಆಫೀಸಿಗೆ ಹೋಗಿಬರುತ್ತೇನೆ. ಬೇಗನೆ ಬರುತ್ತೇನೆ, ಹಾಸ್ಪಿಟಲ್ಲಿನ ಗೇಟಿನ ಇದಿರು ನಿಂತು ಸಂತೋಷ ಹೇಳಿದ.

ಒಂದು ಸಿಗರೇಟ್–ಪಾಕೇಟು ತೆಗೆದುಕೊಳ್ಳುತ್ತೇನೆ.

ಅಪ್ಪಾ, ಅವ್ವ ನಿನಗೆ ಸಿಗರೇಟು ಸೇದಬೇಡ ಎಂದು ಹೇಳಿದ್ದಳು.

ಸಂತೋಷನು ಬೆಚ್ಚಿಬಿದ್ದನು. ಹುಡುಗ ಇನ್ನೂ ಲಕ್ಷ್ಯದಲ್ಲಿಟ್ಟು ಕೊಂಡಿದ್ದಾನೆ. ಅವನ ಇದಿರಿನಲ್ಲಿಯೇ ಒಮ್ಮೆ ಈ ವಿಷಯದ ಬಗ್ಗೆ ಮಾತುಕತೆಯಾಗಿತ್ತು. ಸಾವು ಮತ್ತು ನೆನಪು– ಒಂದಕ್ಕೊಂದು ಸಂಬಂಧ ವಿದೆ. ಹಳೆಯದೆಂದರೆ ಸತ್ತದ್ದು. ಅದೇ ಅದು— ನೆನಪೆಂದರೂ ಅದೆ. ಮನಸ್ಸಿನಲ್ಲಿ ನೆನಪುಗಳನ್ನು ಪೋಷಿಸಿದರೆ ಏನು ಉಪಯೋಗ ? ನೆನಪು ಗಳು ಜೀವಂತ ಮನುಷ್ಯನನ್ನು ಕೊಲ್ಲುತ್ತವೆ. ನನಗೆ ಇನ್ನೂ ಬದುಕ ಬೇಕಾಗಿದೆ. ಸತ್ತುಹೋದ ನೆನಪುಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವು ದೇನು ಅಗತ್ಯವಿದೆ. ನನಗೆ ಹಾಸ್ಪಿಟಲ್ಲಿನ ಭೈಯಾನೊಂದಿಗೆ ಆ ದಿವಸ ಜಗಳವಾಗಿತ್ತು. ಆ ದಿವಸ ಸಿಗರೇಟು ಸೇದಿದೆ. ರಾತ್ರಿ ಆಪರೇಶನ್ನು ಆಗಿತ್ತು. ಇಡೀ ರಾತ್ರಿ ರಾತ್ರಿಯೆಲ್ಲ ವಾರ್ಡಿನ ಬಾಗಿಲಿಗೆ ಕುಳಿತಿದ್ದೆ. ನನಸುಕಿನಲ್ಲಿ ಭೈಯಾನಿಗೆ ಹೇಳಿದೆ, ಸ್ವಲ್ಪ ಸುದ್ದಿ ತೆಗೆದುಕೊಂಡು ಬರ ಬಾರದೆ ? ಅವನು ಹೋಗಲು ಒಪ್ಪಲಿಲ್ಲ. ನಾನು ಸಿಕ್ಕಂತೆ ಬೈದಿದ್ದೆ. ಆದರೆ ಈಗ ಅವನು ನನ್ನನ್ನು ತಡೆಗಟ್ಟಬಲ್ಲಾರನು. ಯಾಕೆ ? ಸತ್ತವರ ಬಗ್ಗೆ ಆದರ ತೋರಿಸಲೆಂದೇನು ? ಅಥವಾ ಅವನಿಗೆ ನನ್ನಮೇಲೆ ಕರುಣೆ ಹುಟ್ಟಬಹುದೆಯೆಂದೋ ? ಈಗ ಅವನ ಮೇಲೆ ನನ್ನದು ಸ್ವಲ್ಪವೂ ಸಿಟ್ಟಿಲ್ಲ. ಆದರೆ ಆ ದಿವಸ ಮಾತ್ರ ಬಹಳ ಸಿಟ್ಟು ಬಂದಿತ್ತು. ಸಿಟ್ಟಿನ ಭರದಲ್ಲಿ ಎದ್ದು ಭರಭರ ಹೊರಗೆ ಬಂದು ಬಿಟ್ಟಿದ್ದೆ. ರಸ್ತೆಯ ಮೇಲೆ ಥಳಿ ಹೊಡೆ ಯುವ ಮೋಟಾರು ಹೋಗುತ್ತಿತ್ತೆಂದು ನಾನು ತಡೆದು ನಿಂತೆ. ಹತ್ತಿರವೇ ಸಿಗರೇಟಿನ ಅಂಗಡಿ ಇತ್ತು. ಮೂರುವರೆ ವರ್ಷಗಳ ನಂತರ ಆ ದಿವಸ ನುತ್ತೆ ಸಿಗರೇಟು ಸೇದಿದೆ. ಬಹಳ ಕೆಮ್ಮು ಬಂದಿತ್ತು. ಆದರೂ ಒಂದರ ಹಿಂದೊಂದು ಮೂರು ಸಿಗರೇಟು ಸೇದಿದ್ದೆ.

ಈ ನಾಲ್ಯಾಣೆ ಬೇರೆ ಕೊಡ್ರಿ, ರಾಯರೆ.

ಪಾಕೇಟನ್ನು ತೆಗೆಯುತ್ತ ತೆಗೆಯುತ್ತ ಸಂತೋಷ ಹಿಂಪೆ ನೋಡಿದ. ದೂರದಲ್ಲಿ ನಾಡೂ ನಿಂತಿದ್ದ. ಅವನು ಈ ಕಡೆಗೇನೇ ನೋಡುತ್ತಿದ್ದಾನೆ. ಈಗ ಅವನು ಏನು ವಿಚಾರ ಮಾಡುತ್ತಿರಬಹುದು? ಸಿಗರೇಟ್ ಪ್ಯಾಕಿನ ಮೇಲಿನ ಈ ಕಾಗದ, ಅವನ ಹರಿದುಹೋದ ಪುಸ್ತಕ ವನ್ನು ಅಂಟಿಸಲಿಕ್ಕೆ ಉಪಯೋಗ ಬೀಳುವುದೆಂದೆ ? ಹುಡುಗ ಅಭ್ಯಾಸ ದಲ್ಲಿ ಹುಷಾರಿದ್ದಾನೆ. ಅಳಲು ಸುರು ಮಾಡಿಲ್ಲವಷ್ಟೆ ?

ನಯೇ ಪೈಸೆ ಕೊಡಬೇಡ ಮಹಾರಾಯಾ ಟ್ರಾಮಿನಲ್ಲಿ ಬಹಳ ಜಂಜಾಟವಾಗಿ ಬಿಡುತ್ತದೆ.

ಹೊಗೆಯುತ್ತಿರುವ ಹಗ್ಗದ ತುದಿಯಿಂದ ಸಿಗರೇಟನ್ನು ಹೊತ್ತಿಸಿ ಕೊಂಡು, ಸಂತೋಷ ಒದ್ಮೆ ದೊಡ್ಡದಾಗಿ ಹೊಗೆ ಬಿಟ್ಟನು. ಎದೆಯ ಅಶಕ್ತತೆ ಇನ್ನೂ ಕಡಮೆಯಾಗಿದ್ದಿಲ್ಲ. ಬಹಳ ಜೋರಾಗಿ ಸೇದುವುದು ಒಳ್ಳೆಯದಲ್ಲ. ಅವಳಿಗೆ ಹೆದರಿಕೆ ಇತ್ತು. ಸಿಗರೇಟು ಸೇದಿದರೆ ನಾನು ಎಲ್ಲಿ ಬೇಗನೆ ಸಾಯುವೆನೋ ಎಂದು. ಆದರೆ ಅವಳೇ ಮೊದಲು ಸತ್ತಳು. ಅವಳು ಜೀವಂತವಿರುವವರೆಗೆ ನಾನು ಸಿಗರೇಟು ಸೇದಿದ್ದಿಲ್ಲ. ಯಾಕೆ ? ಎಲ್ಲಿಯಾದರೂ ತಪ್ಪಿ ಸತ್ತುಗಿತ್ತೇನು ಎಂದೇ? ಅಥವಾ ಅವಳು ಹೇಳಿದ ಮಾತು ಕೇಳಬೇಕೆಂದೊ ?

ಬಾಬಾ.

ನೀನು ಇಲ್ಲಿಯೇ ಇರು. ನಾನು ಬಹಳ ತಡಮಾಡುವುದಿಲ್ಲ.

ಜೋರುಜೋರಾಗಿ ಹೊಗೆ ಎಳೆಯುತ್ತ ಸಂತೋಷನು ಸಿಗರೇಟನ್ನು ಒಗೆದನು.

ಬಸ್ಸು ಬಂತು. ನೀನು ಇಲ್ಲಿಯೇ ಇರು. ಏನು ?

ಕಾಳಜೀಪೂರ್ವಕವಾಗಿ, ಸಿಗರೇಟು ಆರುವಂತೆ ತುಳಿದು ಸಂತೋಷ, ಓಡುತ್ತ ಹೋಗಿ ಬಸ್ಸು ಹಿಡಿದ.

ಆಕಾಶದಲ್ಲಿ ಮೋಡ ನೆರೆದಿತ್ತು. ತಲೆ ಕೆಳಗೆ ಹಾಕಿ ನಾಡೂ ಮೆಲ್ಲ ಮೆಲ್ಲನೆ ಮುಂದೆ ನಡೆದಿದ್ದನು. ಅವ್ವ ಅನ್ನುತ್ತಿದ್ದಳು. ನಾಡೂ ಇವೊತ್ತು ಮಳೆ ಬರುವುದು, ಶಾಲೆಗೆ ಹೋಗಬೇಡ— ಎಂದು. ನಿನ್ನ ಬಾಬಾನ ಗಂಜಿಫ್ರಾಕು ಇನ್ನೂ ಒಣಗಿಲ್ಲ. ಈಗ ಬಂದಮೇಲೆ ಅವರು ಸಿಟ್ಟಿಗೇಳು ತ್ತಾರೆ. ಅವರಿಗೆ ವಡೆ ಬಹಳ ಸೇರುತ್ತದೆ. ಚಟ್ಟನೆ ಕನ್ಹೈಯನ ಅಂಗಡಿಗೆ ಹೋಗಿ ಬಾಸ್ಪ, ನೋಡೋಣ, ಬಹಳ ಜಾಣ ಹುಡುಗ. ಬೇಗನೆ ಬಾ.

ನಾಡೂ ಇಟ್ಟಂಗಿಯ ತುಣುಕೊಂದನ್ನು ಒದೆದನು. ಅದು ಗಡ ಗಡ ಉರುಳುತ್ತ ರಸ್ತೆಯ ಮಧ್ಯದಲ್ಲಿ ಹೋಗಿಬಿತ್ತು. ಅದು ಒಂದು ವೇಳೆ ಟ್ರಾಮ್ಯಿನ ರೂಳಿನಮೇಲೆ ಬಿದ್ದಿದ್ದರೆ, ಟ್ರಾಮ್ಯನ್ನು ಉರುಳಿಸಿ ಬಿಡಬಹುದಾಗಿತ್ತು. ಟ್ರಾಮ್ಯಿನ ತಂತಿಗೆ ಇಷ್ಟೇಕೆ ಕೆಡಿ ಹಾರುವುವು ? ಅವ್ವನು ತನಗೆ ಒಮ್ಮೆ ಹೇಳಿದ್ದಳು. ಮೋಡಗಳಲ್ಲಿಯ ಮಿಂಚನ್ನು ಶೇಖರಿಸಿ ಮಶೀನಿನಲ್ಲಿ ಇಟ್ಟಿರುತ್ತಾರೆ— ಅದರಲ್ಲಿ ಸ್ವಲ್ಪ ಸ್ವಲ್ಪ ಉಪ ಯೋಗಿಸುತ್ತಾರೆ—ಎಂದು. ಮಿಂಚು ಬರೀ ಮಳೆಗಾಲದಲ್ಲಿ ಮಾತ್ರ ಹೊಳೆಯುತ್ತದೆ. ಅದೂ ಸಹಿತ ಯಾವಾಗಾದರೊಮ್ಮೆ ಅಷ್ಟರಮೇಲಿಂದ ವರ್ಷಾನುಗಟ್ಟಲೆ ಟ್ರಾಮ್ಯಮು ಹೇಗೆ ನಡೆಯುತ್ತದೆ? ಟ್ರಾಮ್ಯಿನಲ್ಲಿಯ ದೀಪಗಳು ಹೇಗೆ ಉರಿಯುತ್ತಿರುತ್ತವೆ ? ಆ ಹುಡುಗ. ಅವನು ನನಗೆ ಅಣಕಿಸಿದ. ಮನೆಯಲ್ಲಿ ಅವನ ತಾಯಿಗೆ ಆದು ತಿಳಿದರೆ ಅವಳು ಸಿಟ್ಟಿ ಗೇಳುತ್ತಾಳೇನು ?

ತಲೆ ಕೆಳಗೆ ಹಾಕಿ ನಡೆಯುತ್ತ ನಡೆಯುತ್ತ, ನಾಡೂ ಹಾಸ್ಪಿಟ ಲನ್ನು ಹೊಕ್ಕನು. ಎಲ್ಲವೂ ಶಾಂತವಿತ್ತು. ಔಟಡೋರ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳು ಹರಟೆ ಹೊಡೆಯುತ್ತಿದ್ದಾರೆ. ಲಗ್ನವಾಗಿದ್ದ ಆ ಹೆಂಗುಸಿನ ಬೆರಳಿಗೆ ಕಂಪೌಂಡರನು ಬ್ಯಾಂಡೇಜ್ ಕಟ್ಟುತ್ತಿದ್ದಾನೆ. ಒಂದು ಬೆಕ್ಕು ಒಳಗೆ ಹೊಕ್ಕಿತು. ಒಬ್ಬ ವಿದ್ಯಾರ್ಥಿಯು ಕಾಲು ಅಪ್ಪಳಿ ಸಿದ. ಬೆಕ್ಕು ಓಡಿಹೋಯಿತು. ಅರ್ಧ ಚಣ್ಣ ಹಾಕಿದ್ದ ವಾರ್ಡ್‌ಬಾಯ್ ಗೋಡೆಗೆ ಆತು ಕುಳಿತು ನಿದ್ದೆ ಮಾಡುತ್ತಿದ್ದಾನೆ ಆ ಬಿಲ್ಡಿಂಗು ಮುಗಿ ದರೆ ಇನ್ನೊಂದು ರಸ್ತೆ. ನಾಡೂ ಆ ರಸ್ತೆಗೆ ಬಂದನು.

ವಾಸನೆ ಬರುತ್ತದೆ. ಔಷಧದ ವಾಸನೆ. 'ಅತ್ಯಾ'ನಿಗೆ ಕೂಸು ಆಗುವ ವೇಳೆಯಲ್ಲಿ ಹೀಗೆಯೇ ಔಷಧದ ವಾಸನೆ ಬರುತ್ತಿತ್ತು. ಅವ್ವನು ಎರಡು ದಿವಸ ಅಲ್ಲಿಯೇ ಇದ್ದಳು. ಅತ್ಯಾ ತೀರಿಕೊಂಡಳು. ಎಲ್ಲರೂ ಅತ್ತರು. ಅವ್ವನೂ ಅತ್ತಳು. ಅತ್ಯಾ ಅಂದರೆ ನಮ್ಮ 'ಬಾಬಾ'ನ ತಂಗಿಯಲ್ಲ. ಅವಳು ನಮ್ಮ ಮಗ್ಗಿಲಿನ ಮನೆಯಲ್ಲಿ ಇರುತ್ತಿದ್ದಳು. ಬಾಬಾ ಆಗ ಅಳಲಿಲ್ಲ.

ಏ ಹುಡುಗಾ, ಬಾ. ಇಲ್ಲಿ ಕೂಡು.

ಭೈಯಾ ನಾಡೂನನ್ನು ಕರೆದನು. ನಾಡೂ ಅವನ ಹತ್ತಿರ ಹೋಗಿ ಮೌನವಾಗಿ ನಿಂತನು. ಅವನ ತಲೆಯ ಮೇಲೆ ಬೆನ್ನ ಮೇಲೆ ಕೈಯಾಡಿಸುತ್ತ ಭೈಯಾ ಕೂಡ ಸುಮ್ಮನೆ ಕುಳಿತಿದ್ದನು. ಅಷ್ಟರಲ್ಲಿ 'ಛನ್‌ನ್' ಎಂಬ ಸಪ್ಪಳದೊಂದಿಗೆ ಲಿಫ್ಟಿನ ಬಾಗಿಲು ತೆಗೆಯಿತು. ಖಟ್ ಖಟ್ ಎಂದು ಬೂಟಿನ ಸಪ್ಪಳ ಮಾಡುತ್ತ ಒಬ್ಬ ಡಾಕ್ಟರು ಹೊರಬಿದ್ದರು.

ನಿನ್ನ ಅಪ್ಪ ಎಲ್ಲಿ ಹೋದರು ?

ಸಂಸ್ಕಾರ-ಸಮಿತಿಯ ಆಫೀಸಿಗೆ.

ಮೇಲೆ ಹೋಗುತ್ತಿಯೇನು ? ನೋಡಲಿಕ್ಕೆ ?

ನಾಡೂ ಸುಮ್ಮನಿದ್ದನು.

ಹೋಗು. ಹೋಗು.

ಭೈಯಾನು ಅವನ ಬೆನ್ನಮೇಲೆ ಕೈಯಿಟ್ಟು ತುಸುವೇ ಒತ್ತಿದನು. ನಾಡೂ ಒಂದೊಂದೇ ಹೆಜ್ಜೆಯನ್ನು ಎತ್ತುತ್ತ ಅಟ್ಟದ ಕಡೆಗೆ ಹೊರಟನು. ಬೂಟಿನ ಸಪ್ಪಳ ಬರುತ್ತದೆ. ಆ ಡಾಕ್ಟರರ ಸಪ್ಪಳ ದಂತೆ. ಬೂಟು ಕೊಳ್ಳಲು ಹೋದಾಗ ಅವ್ವ ಹೇಳಿದ್ದಳು: ಲೇಸ್ ಇರುವ ಕರಿಯ ಬೂಟು ತರಬೇಕೆಂದು. ಬಾಬಾ ಅವ್ವನಿಗೆಂದು ಚಪ್ಪಲಿ ತೆಗೆದುಕೊಂಡಿದ್ದರು. ಅವು ಸಹಿತ ಕಪ್ಪು ಬಣ್ಣದುವಿದ್ದುವು.

ಏ ಹುಡುಗಾ, ನಿಲ್ಲು. ಲಿಫ್ಟಿನೊಳಗಿಂದ ಹೋಗುವುದಿದೆಯೇನು ?

ಭೈಯಾ ಎದ್ದು ನಿಂತನು.

ನಾಡೂ ಹಾಗೆಯೇ ನಿಂತಿದ್ದನು, ತಲೆ ಕೆಳಗೆ ಮಾಡಿ.

ಏ ಜಗದೀಶ, ಆ ಹುಡುಗನನ್ನು ಎರಡನೆಯ ಅಂತಸ್ತಿಗೆ ಬಿಡು.

ನಾಡೂ ಲಿಫ್ಟಿನೊಳಗೆ ಹೊಕ್ಕನು. ಬಟನ್ ಒತ್ತಿದ ಮೇಲೆ "ಗುಂಯಿ" ಎಂದು ಸಪ್ಪಳವಾಯಿತು. ಒಮ್ಮೆ ಯಾರೋ ಕೈ ಜಗ್ಗಿ ಬಿಟ್ಟಂತೆ ಭಾಸವಾಯಿತು. ಆಮೇಲೆ ಲಿಫ್ಟ್ ಮೇಲೆ ಹೋಗಲು ಪ್ರಾರಂಭಿಸಿತು. ಭೈಯಾ ನಗುತ್ತಿದ್ದಾನೆ. ಅವನ ಬೂಟು, ಅವನ ಹೊಟ್ಟೆ, ಎದೆ, ತಲೆ ಕ್ರಮೇಣ ಎಲ್ಲವೂ ಗೋಡೆಯ ಹಿಂದೆ ಕಾಣಿಸದಂತಾಯಿತು. ಎದೆ ಧಡಧಡವೆನ್ನುತ್ತದೆ. ಆ ಕಬ್ಬಿಣದ ಚೌಕೋನ ಇನ್ನೂ ಇನ್ನೂ ಕೆಳಗೆ ಹೋಗುತ್ತದೆ. ಹೊಟ್ಟೆಯೊಳಗೆ ಕಸಿವಿಸಿಯಾಗತೊಡಗಿದೆ. ಅವ್ವನು ದಿನಾಲು ನಿದ್ದೆಯೋಗಿಂದ ಎಬ್ಬಿಸಿಕೊಂಡು ಬಚ್ಚಲಕ್ಕೆ ಕರೆದುಕೊಂಡು ಹೋಗುತ್ತಿದ್ದಳು ಗಟ್ಟಿಯಾಗಿ ಹಿಡಿದು ನಿಲ್ಲುತ್ತಿದ್ದಳು. ಇಲ್ಲದಿದ್ದರೆ ನಾನು ಬಿದ್ದು ಬಿಡುತ್ತಿದ್ದೆ. ನಿದ್ದೆ ಕಣ್ಣಲ್ಲಿಯೇ ಇರುತ್ತಿತ್ತು.

ಲಿಫ್ಟ್ ನಿಂತಿತು. ನಾಡೂ ಹೊರಗೆ ಬಂದ. ಲಿಫ್ಟ್ ಮತ್ತೆ ಕೆಳಗೆ ಹೋಯಿತು. ಕಬ್ಬಿಣದ ಚೌಕೋನವು ಮೇಲೆ ಹೋಗುತ್ತ ಹೋಗುತ್ತ ನಡುವೆ ನಿಂತಿತು, ಕಬ್ಬಿಣದ ಆ ತಂತಿಯು ಹೊಯ್ದಾಡುತ್ತಿದೆ. ಒಂದು ವೇಳೆ ಆ ತಾರು ಕತ್ತರಿಸಿ ಹೋದರೆ—ನಾಡೂನ ಅಂತಃಕರಣವು ಕಂಪಿಸಿತು. ಸಿಡಿಲು ಬಿದ್ದ ಸಪ್ಪಳ ಬಂದು ಕಿವಿಗೆ ಅಪ್ಪಳಿಸಿದಾಗಲೂ ನಾನು ಹೀಗೆಯೇ ನಡುಗುತ್ತಿದ್ದೆ. ಇದ್ದಲ್ಲಿಂದ ಓಡಿಹೋಗಿ ಅವ್ವನ ಕಾಲನ್ನು ಅಪ್ಪಿಕೊಂಡು ಬಿಡುತ್ತಿದ್ದೆ.

ವ್ಹರಾಂಡದೊಳಗಿಂದ ನಾಡೂ ನಡೆಯತೊಡಗಿದನು. ಕ್ಯಾಬಿನ್ನಿನಲ್ಲಿ ಕಾಟನಮೇಲೆ ಬಿದ್ದುಕೊಂಡು ಒಬ್ಬ ಮನುಷ್ಯ ಓದತೊಡಗಿದ್ದಾನೆ. ಇಡಿ ವ್ಹರಾಂಡಾ ಎಲ್ಲವೂ ಜಾಳಿಗೆಯಿಂದ ಸುತ್ತಲ್ಪಟ್ಟಿದೆ. ಪಕ್ಷಿಗಳಿಗೆ ಒಳಗೆ ಬರಲು ಬರುವುದಿಲ್ಲ. ಬೂಟಿನ ಸಪ್ಪಳ ಬರುತ್ತಿದೆ. ರೋಗಿಗಳು ಗೋಣು ಹೊರಳಿಸಿ ಹೊರಳಿಸಿ ನೋಡುತ್ತಿದ್ದಾರೆ. ಒಮ್ಮೆಲೆ ಕಡೆಯ ಬಾಗಿಲಿಗೆ ಹೋಗಿ ನಾಡೂ ನಿಂತನು. ಒಳಗೆ ಕುರ್ಚಿಯ ಮೇಲೆ ಕುಳಿತು ನರ್ಸ್ ಏನನ್ನೋ ಬರೆಯುತ್ತಿದ್ದಳು. ನಾಡೂನನ್ನು ನೋಡಿ ಅವಳು ಎದ್ದು ನಿಂತು ಆಮೇಲೆ ಕೆಳಗೆ ಕುಳಿತಳು.

ಕಾಲಿನ ತುದಿಯ ಮೇಲೆ ನಾಡೂ ಮೆಲ್ಲಮೆಲ್ಲನೆ ಒಳಗೆ ಬಂದ. ಎಲ್ಲರೂ ನೋಡುತ್ತಿದ್ದಾರೆ. ತಲೆ ಕೆಳಗೆ ಹಾಗಿ, ಕೆಂಪುಪಡದೆಯಿಂದ ಮುಚ್ಚಿದ್ದ ಕಾಟಿನ ಹತ್ತಿರ ಅವನು ಬಂದು ನಿಂತ. ರೋಗಿಗಳು ಗೋಣು ಹೊರಳಿಸಿ ಹೊರಳಿಸಿ ನೋಡುತ್ತಿದ್ದಾರೆ. ಆದರೆ ಇನ್ನು ಇಲ್ಲಿಯದು ಯಾರಿಗೂ ಕಾಣಿಸುವುದಿಲ್ಲ. ಅವರು ಮಾತಾಡುತ್ತಿರುವುದು ಮಾತ್ರ ಎಲ್ಲವೂ ಇಲ್ಲಿ ಕೇಳಿಸುತ್ತದೆ.

ಇವನೇ ನೋಡಿರಿ. ಅಪ್ಪನ ಕೂಡ ದಿನಾಲು ಬರುತ್ತಿದ್ದವ.

ಹೌದು. ಇವನು ದೊಡ್ಡ ಹುಡುಗ. ಆದರೆ ಇನ್ನೂ ಒಬ್ಬ ಹುಡುಗನಿದ್ದಾನೆ.

ಹೀಗೋ ? ಹಾಗಾದರೆ ಪರವಾಗಿಲ್ಲ, ಒಟ್ಟು ಎರಡೇ ಹುಡುಗರಷ್ಟೇ ? ನನ್ನ ಹಾಗೆ ಇದ್ದರೆ ಅಪ್ಪನ ಸ್ಥಿತಿ ಏನಾಗಬೇಡ ?

ಏನಾಗಬೇಕಾಗಿದೆ ? ಅವನು ಮತ್ತೆ ಲಗ್ನ ಮಾಡಿಕೊಳ್ಳುವನು.

ಆಹಾ, ಲಗ್ನಮಾಡಿಕೊಳ್ಳುವುದು ಆಡಿದಷ್ಟು ಸುಲಭವಲ್ಲ.

ಬಿಳಿಯ ಚಾದರು ಮುಖವನ್ನು ಸಹಿತ ಮುಚ್ಚಿಬಿಟ್ಟಿತ್ತು. ನಾಡೂ ಸಾವಕಾಶವಾಗಿ ಚಾದರನ್ನು ಕುತ್ತಿಗೆಯವರೆಗೆ ಕೆಳಗೆ ತಂದನು. ಕಣ್ಣು ಮುಚ್ಚಿದ್ದುವು. ಬಾಯಿ ಸ್ವಲ್ಪವೇ ತೆರೆದಿತ್ತು. ಕಣ್ಣುಗಳ ಕೆಳಗೆ ಕಪ್ಪು ಛಾಯೆಬಿದ್ದಿತ್ತು. ನಾಡೂ ಅವಳ ಮುಖದ

ಹತ್ತಿರ ತನ್ನ ಮುಖ ಒಯ್ದು ಕೆಳಗೆ ಬಾಗಿದನು. ರಿಪ್ಪೆಗಳು ಒದ್ದೆಯಾಗಿದ್ದುವು. ಅವ್ವನು ಅತ್ತಿರಬೇಕು, ಅವ್ವನಿಗೆ ಬಹಳ ವೇದನೆಯಾಗಿರಬೇಕು. ಅಪ್ಪನು ಎದೆಹಿಡಿದುಕೊಂಡು ಎದೆ ಬಹಳ ನೋಯಿಸುತ್ತದೆ ಎಂದಾಗಲಿಲ್ಲ. ಅವ್ವನು ಅವನ ಎದೆಯ ಮೇಲೆ ಕೈಯಾಡಿಸುತ್ತ ಅಳುತ್ತಿದ್ದಳು.

ಚಾದರಿನಿಂದ ನಾಡೂ ಅವಳ ಕಣ್ಣೊರಸಿದನು. ಹಣೆ ಎಷ್ಟು ದೊಡ್ಡದಾಗಿ ಕಾಣಿಸುತ್ತದೆ. ಕೂದಲ್ಲೆಲ್ಲ ಉದುರಿ ಬಹಳ ಕಡಮೆಯಾಗಿವೆ. ತೊಡಕು ಬಿದ್ದು ಬಿಟ್ಟಿವೆ. ಕಮಲಕ್ಕನು ಯಾವಾಗಲಾದರೂ ಒಮ್ಮೊಮ್ಮೆ ಅವ್ವನಿಗೆ 'ಬುಚಡಾ' ಕಟ್ಟುತ್ತಿದ್ದಳು. ಈಗ ನಾನೇ ಅವ್ವನಿಗೆ ಹೆರಳು ಹಾಕಿದರೆ, ನರ್ಸ್ ಬಂದು ಬೈಯುವಳೇನೋ !

ಕಾಟಿನ ಮಗ್ಗಲಿಗಿದ್ದ ಸಣ್ಣ ಕಪಾಟನ್ನು ನಾಡೂ ತೆರೆದನು. ಹಣಿಗೆ, ಕುಂಕುಮದ ಬಾಟ್ಲಿ, ಕನ್ನಡಿ, ಸಾಬಾಣ, ಎಣ್ಣೆ—ಎಲ್ಲ ಇದೆ. ಪ್ರತಿಯೊಂದು ವಸ್ತುವನ್ನೂ ಅವನು ಕೈಯಲ್ಲಿ ತೆಗೆದುಕೊಂಡು ಪುನಃ ಪುನಃ ತಿರುಗಿಸಿ ತಿರುಗಿಸಿ ನೋಡಿದನು. ಸುತ್ತಲೂ ನೋಡಿ ಕಿವಿಗೊಟ್ಟು ಕೇಳಿದನು, ನರ್ಸಿನ ಬೂಟಿನ ಸಪ್ಪುಳ ಬರುವುದೇನೋ ಎಂದು.

—ಇವರೂ ಹಾಗೇ ಅನ್ನುತ್ತಾರೆ. ಗಾಯನದಲ್ಲಿ ರವೀಂದ್ರ-ಸಂಗೀತವೇ ಹೆಚ್ಚು ಒಳ್ಳೆಯದೆಂದು.

ಅರುವತ್ತು ನಂಬರ್ ಕಾಟಿನ ಮೇಲಿನ ಹುಡುಗಿಗೆ ಗಾಯನ ಬರುತ್ತಿದೆ. ಅವಳನ್ನು ಕರೆಯಿರಲ್ಲ.

—ನೀನೇ ಕರೆಯಿರಿ. ನಿನ್ನೆ ನಾನು ಅವಳಿಗೆ ಒಂದು ಪುಸ್ತಕ ಕೇಳಿದರೆ, ಅದನ್ನು ಕೂಡ ಕೊಡಗೊಡಲಿಲ್ಲ ಅವಳ ಮನೆಯವರು.

'ಖರ್' ಎಂದು ಸಪ್ಪಳವಾಯಿತು. ಬಹಳ ದಿವಸವಾದ್ದರಿಂದ ಕೂಪಲು ತೊಡಕಾಗಿದೆ. ಬಾಚಣಿಕೆ ನಡು-ನಡುವೆ ಗಂಟಾದ ಕೂದಲಲ್ಲಿ ತೊಡಕಿಕೊಳ್ಳುತ್ತಿದೆ. ತಲೆ ಅಲುಗಾಡತೊಡಗಲು ನಾಡೂ, ಬೆಳ್ಳಗೆ ನಿಸ್ತೇಜವಾದ ಮುಖವನ್ನು ನೆಟ್ಟದೃಷ್ಟಿಯಿಂದ ನೋಡ ತೊಡಗಿದ.

ಕೂದಲನ್ನು ಕೈಯಲ್ಲಿ ತೆಗೆದುಕೊಂಡು ಅವ್ವನು ಹೆರಳು ಹಾಕಿಕೊಳ್ಳುತ್ತಿದ್ದಳು. ಇಲ್ಲದಿದ್ದರೆ ಬಹಳ ಯಾತನೆಯಾಗುತ್ತಿತ್ತು. ಈಗ ಎಲ್ಲ ಕೂದಲು ಅವಳ ಬೆನ್ನಿನ ಕೆಳಗೆ ಬಿದ್ದಿದ್ದುವು.

ಶವದ ಹೆಗಲನ್ನು ಹಿಡಿದು ನಾಡೂ ತತ್‌ಕ್ಷಣ ಗಡಿಬಿಡಿಯಿಂದ ತಲೆಯನ್ನು ಸಾವರಿಸಿ, ಚಾದರನ್ನು ಪೂರ್ತಿಯಾಗಿ ಮುಖದ ಮೇಲೆ ಎಳೆದ. ತಿರುಗಿ ಬರುವಾಗ ಕಾಲು ಕೈಚೀಲಕ್ಕೆ ಬಡಿಯಿತು

ಎರಡು ಪೇರಲ ಹಣ್ಣುಗಳು ಹೊರಗೆ ಬಂದುವು. ನಾಡೂ ಚೀಲವನ್ನೆತ್ತಿ ಕೈಯಲ್ಲಿ ತೆಗೆದುಕೊಂಡ.

ಯಾಕೊ ? ನೀನೊಬ್ಬನೇ ಇದ್ದೀಯಾ ಇಲ್ಲಿ ? ನಿನ್ನ ಬಾಬಾ ಎಲ್ಲಿ ಹೋದರು ?

ಬಾಬಾ ಸಂಸ್ಕಾರಸಮಿತಿಯ ಆಫೀಸಿಗೆ ಹೋಗಿದ್ದಾರೆ.

ಹಾಗಾದರೆ ನೀನೊಬ್ಬನೇ ಇಲ್ಲಿ ಕೂಡ ಬಾರದಪ್ಪಾ. ಹೊರಗೆ ಹೋಗಿ ಕುಳಿತುಕೋ ನೋಡೋಣ.

ಅವನ ಹೆಗಲ ಮೇಲೆ ಕೈಯಿಟ್ಟು ನರ್ಸ್, ಅವನನ್ನು ಬಾಗಿಲವರೆಗೆ ಒಯ್ದು ಮುಟ್ಟಿಸಿದಳು. ಮುಖ ಸಣ್ಣಗೆ ಮಾಡಿ, ತಲೆ ಬಾಗಿಸಿಕೊಂಡು ನಾಡೂ ಒಬ್ಬನೇ, ವ್ಹರಾಂಡದ ತುದಿಗುಂಟ ನಡೆದು ಹೋದನು. ಎಲ್ಲ ಪಾವಟಿಗೆಗಳನ್ನು ಇಳಿದು ನಾಡೂ ಕೆಳಗೆ ನೋಡಿದ; ಭೈಯಾ ಕೂಡುತ್ತಿದ್ದ ಸ್ಟೂಲು ಬರಿಯದಾಗಿತ್ತು. ಅವನು ಮತ್ತೆ ಬೀದಿಗೆ ಬಂದನು.

ಧೋ ಧೋ ಎಂದು ಮಳೆ ಬೀಳತೊಡಗಿತ್ತು.

* * * *

ಸಂತೋಷ ಮತ್ತು ಬೂದಿಬಣ್ಣದ ಬಟ್ಟೆಯಲ್ಲಿದ್ದ ಸಂಸ್ಕಾರ ಸಮಿತಿಯ ಮನುಷ್ಯರು, ಎಲ್ಲರೂ ಕೂಡಿ ಸ್ಟ್ರೇಚರನ್ನು ಮೋಟರಿನಲ್ಲಿಟ್ಟರು. ಎರಡೂ ಬಾಗಿಲು ಮುಚ್ಚಿದನಂತರ, ಮೋಟರಿನ ಹಿಂದಿನ ಭಾಗವೆಂದರೆ ಒಂದು ಮುಚ್ಚಿದ ಪೆಟ್ಟಿಗೆಯಂತಾಯಿತು. ಡ್ರಾಯ್-ವ್ಹರ್ ಹಾಗೂ ಸಂಸ್ಕಾರ ಸಮಿತಿಯ ಇಬ್ಬರು ಮನುಷ್ಯರು—ಇಷ್ಟು ಜನ ಮುಂಭಾಗದಲ್ಲಿ ಕುಳಿತರು. ಹಿಂದೆ ಸಂತೋಷ ಹಾಗೂ ನಾಡೂ ಇಬ್ಬರೇ. ಹಾಸ್ಪಿಟಲಿನಲ್ಲಿ ಆವಾರದೊಳಗಿಂದ ಹೊರಬಿದ್ದು, ತಾವು ರಸ್ತೆಗೆ ಕೂಡಿದ ನಂತರ ಸಂತೋಷನೆಂದನು:

ಇಷ್ಟೊತ್ತಿನವರೆಗೆ ಹೊರಗೆ, ನಿನಗೊಬ್ಬನಿಗೇ ಅಂಜಿಕೆಬರಲಿಲ್ಲ ವಷ್ಟೇ ?

ಇಲ್ಲ.

ಬಹಳ ಹೊತ್ತಾಯಿತು. ಮೋಟರು ಇರಲಿಲ್ಲ. ಹೀಗಾಗಿ ಕೂಡಬೇಕಾಯಿತು.

ನಾಡೂ ಮುಖವನ್ನು ರಸ್ತೆಯ ಕಡೆಗೆ ಹೊರಳಿಸಿದ: ಹತ್ತಿರವೇ ಟ್ರ್ಯಾಮು ಬರುತ್ತಿದೆ. ಮೋಟಾರು ಮತ್ತು ಟ್ರ್ಯಾಮು ಎರಡೂ ಒಂದೇ ದಿಕ್ಕಿಗೆ ಒಂದರ ಮಗ್ಗಲಿಗೊಂದು ಓಡುತ್ತಿವೆ. ಗಂಟೆ ಬಾರಿಸಿತು. ಟ್ರ್ಯಾಮಿನ ವೇಗ ಒಮ್ಮೆಲೆ ಕಡಿಯಿತು. ನಾಡೂ ನಕ್ಕನು.

ಅಪ್ಪಾ, ಟ್ರ್ಯಾಮು ಮೊಟರಿಗಿಂತಲೂ ಹಿಂದೆ ಹೇಗೆ ಬೀಳುತ್ತದೆ ?

ಅದಕ್ಕೆ ನಿಂತು ನಿಂತು ಹೋಗಬೇಕಾಗುತ್ತದೆ. ಜನ ಏರುವವರು ಇರುತ್ತಾರೆ, ಇಳಿಯುವವರು ಇರುತ್ತಾರೆ. ಆದ್ದರಿಂದ—

ಸಂತೋಷನು ಓರೆನೋಟದಿಂದ ನಾಡೂನನ್ನು ನೋಡಿದ. ಹುಡುಗನ ಕಣ್ಣುಗಳು ಲಕಲಕಿಸುತ್ತಿವೆ. ಹೊರಗೆ ಕಾಣುವುದೆಲ್ಲವೂ ಅವನ ಕಣ್ಣುಗುಡ್ಡೆಗಳಲ್ಲಿ ಗಿರ್ ಗಿರ್ ಸುತ್ತಿ ಮಾಯವಾಗತೊಡಗಿದೆ. ಏನು ನೋಡುತ್ತಿದ್ದಾನೆ ಇಷ್ಟು ಗರ್ಕಾಗಿ ? ಅಂಗಡಿಗಳು, ಬೆಳಕು, ಮನುಷ್ಯರು !

ಸಂಸ್ಕಾರಸಮಿತಿಯ ಆಫೀಸಿನಲ್ಲಿಯ ಕಾರಕೂನನು ಬಹಳ ಮೌನನಾಗಿರುವ ಮನುಷ್ಯ. ಯಾರಾದರೂ ಫೋನ್ ಮಾಡಿ ಕರೆದರೆ

ಅವರು ಹೋಗುವುದಿಲ್ಲ. ಇಷ್ಟರಲ್ಲಿಯೇ ಎಷ್ಟೋ ಸಲ ಅವರು ಮೋಸಹೋಗಿದ್ದಾರೆ. ಎಷ್ಟೋ ಸಲ ಮದುವೆಮನೆಯ ವಿಳಾಸ ಕೊಟ್ಟಿದ್ದರು. ಇತ್ತೀಚೆಗೆ ಚೇಷ್ಟೆ ಮಾಡುವುದು ಇಲ್ಲಿಯವರೆಗೆ ಬಂದು ಮುಟ್ಟಿದೆ. ನಾಡೂ ಆಗ ಆರು ತಿಂಗಳಿನವನಿದ್ದನು. ಮುಖಕ್ಕೆ ವಸ್ತ್ರಕಟ್ಟಿಕೊಂಡು ತುಡುಗನ ಸೋಗು ಹಾಕಿಕೊಂಡು ನಾನು ಅವನ ತಾಯಿಗೆ ಅಲಜಿಕೆ ತೋರಿಸಿದ್ದೆ. ಅವ್ವೊತ್ತಿನಿಂದ ಬಾಗಿಲ ಚಿಲಕ ಬಡಿದವರಾರು ಎಂಬುದನ್ನು ಸಹಿತ ಅವಳು ಹೊರಳಿ ನೋಡುತ್ತಿರಲಿಲ್ಲ. ಎರಡು ಮೂರು ತಿಂಗಳಲ್ಲಿಯೇ ಅವಳು ಅದನ್ನು ಮರೆತು ಬಿಟ್ಟಿದ್ದಳು. ಚೇಷ್ಟೆ ಎಂಬುದೇ ಹೀಗಿದೆ. ನಾಡೂ ಹೊರಗೆ ನೋಡುತ್ತಿದ್ದಾನೆ. ನಮ್ಮ ಹಿಂದೆಯೇ ತಾಯಿ ಇದ್ದಾಳೆ ಎಂಬುದನ್ನು ಸಹಿತ ಅವನು ಮರೆತು ಬಿಟ್ಟಿದ್ದಾನೆ. ಅವನಿಗೆ ಏನೆನಿಸಿದೆಯೋ ಯಾರು ಬಲ್ಲರು ? ಅಥವಾ ಇದೊಂದು ಚೇಷ್ಟೆಯೆಂದು ಅವನು ಭಾವಿಸಿರುವನೊ ? ಸಾವು ಎನ್ನುವದು ಚೇಷ್ಟೆಯೇ ? ಹಾಗಾದರೆ ಜೀವಿಸುವುದು ಎಂದರೇನು ? ಅದೂ ಒಂದು ಚೇಷ್ಟೆಯೇ ಏನು ? ಮನುಷ್ಯ ಚೇಷ್ಟೆಯನ್ನು ಮರೆತುಬಿಡುತ್ತಾನೆ. ಇದೇ ರೀತಿ ಮನುಷ್ಯ ಜೀವಿಸುವುದನ್ನು ಕೂಡ ಮರೆಯುವನೇನು ? ಎಂದರೆ ನಾನು ಸದ್ಯ ಜೀವಂತನಿರುವೆನೋ ಇಲ್ಲವೊ ?

ಸಂತೋಷ ಒಮ್ಮೆಲೆ ಹೌಹಾರಿ ಎಚ್ಚತ್ತ. ಮೋಟರು ಒಂದು ತಗ್ಗಿನೊಳಗಿಂದ ಹಾಯ್ದಿತ್ತು. ಹಿಂದಿನ ಪೆಟ್ಟಿಗೆಯ ಝುಣ್ಣ್ ಝುಣ್ಣ್ ಎಂಬ ಸಪ್ಪಳ ಕೇಳಿ ಬಂತು. ಸಂತೋಷನು ತಲೆಯನ್ನು ಹಿಂದಿದ್ದ ತಗಡಿಗೆ ಆನಿಸಿದನು. ತಗಡು ತಣ್ಣಗಿತ್ತು. ಅದರ ಹಿಂದೆ ಒಂದು ಹೆಣವಿದೆ. ಮೋಟರಿನ ಧಡಿಕಿಗೆ ಆ ಹೆಣವು ಕೂಡ ನಿಶ್ಚಿತ—ಸರಿದಾಡಿರಬೇಕು. ಆದರೆ ಇದರಲ್ಲಿ ಚೇಷ್ಟೆ ಎಲ್ಲಿಂದ ಬಂತು ? ಜೀವನವಿರುವುದಾದರೂ ಏಕೆ ? ಸಾವಿನ ಅಸ್ತಿತ್ವವನ್ನು ನಮಗೆ ತಿಳಿಸಿಕೊಡಲೆಂದೆ ? ಹಾಗಾದರೆ ನಾನು ಜೀವಂತವಾಗಿದ್ದೇನೆ ಎಂಬುದರ ಅರಿವು ನನಗಿರಬೇಕೆಂದು ನಾನು, ನನ್ನ ಆಯುಷ್ಯ ಮುಗಿಯುವವರೆಗೂ ಒಂದು ಹೆಣವನ್ನು ನನ್ನ ಹಿಂದೆ ಕಟ್ಟಿಕೊಳ್ಳಬೇಕೇನು?

ಜೌಕಿನಲ್ಲಿ ರಹದಾರಿಯ ದೀಪದ ಆದೇಶದಂತೆ ಮೋಟರು ನಿಂತಿತು. ಒಮ್ಮೆಲೆ ಚಂಚಲನಾಗಿ ನಾಡೂ ಕೂಗಿದನು—ಅಪ್ಪಾ. ಆ ಟ್ಯಾಮು. ಆಗಳೇನದು.

ಅದೇ ಎಂಬುದು ಏತರ ಮೇಲಿಂದ ?

ಪಾ, ಆ ಲತ್ಯಮನುಷ್ಯ ಆಗಿನಿಂದಲೂ ಇನ್ನೂ ಪುಸ್ತಕ ಓದುತ್ತ ಕುಳಿತಿದ್ದಾನೆ ಒಳಗೆ.

ಹುಡುಗ ಸಂಪೂರ್ಣವಾಗಿ ಮರೆತುಬಿಟ್ಟಿದ್ದಾನೆ, ತನ್ನ ಹಿಂದೆ ಹಿಂದೆಯೇ ಒಂದು ಹೆಣ ಬರುತ್ತಿದೆ ಎಂಬುದನ್ನು. ಡ್ಯಾಶ್‌ಬೋರ್ಡಿನ ಕೆಂಪುದೀಪದ ಕಡೆಗೆ ಸಂತೋಷ ನೋಡಹತ್ತಿದ. ಇಲ್ಲ. ಸಾವು ಚೇಷ್ಟೆಯೆಂದು ಹುಡುಗ ಆದನ್ನು ಮರೆತಿಲ್ಲ. ಹೊರಗಿನ ವಸ್ತುಗಳು ಅವನನ್ನು ಮರೆಯುವಂತೆ ಮಾಡಿವೆ. ಕೋಮಲವಾದ ಮನಸ್ಸು ಜೀವನ–ಮರಣಗಳನ್ನು ಕೂಡ ಮರೆಯಬಲ್ಲದು. ಬರೀ ಕೋಮಲ ಮನಸ್ಸು ಮಾತ್ರ. ಅಂತೇ ಅವರು ಸದಾ ಸುಖಿಗಳಿರುತ್ತಾರೆ. ಸುಖಕ್ಕಾಗಿ ಈ ಅಲ್ಪ ಕ್ಷಣಗಳನ್ನು ಮರೆತುಬಿಡಲೆ ? ಬಿಟ್ಟರೆ ಏನು ತಪ್ಪಾಯಿತು ? ಹಾಗೆ ನೋಡಿದರೆ ವರ್ತಮಾನಕಾಲವೆಂಬುದು ಇದೆಯಾದರೂ ಏನು ? ಪ್ರತಿಕ್ಷಣವೂ ನಿಮಿಷಾರ್ಧದಲ್ಲಿ ಭೂತವಾಗಿ ಹೋಗುತ್ತದೆ. ಹಾಗಾದರೆ ನಾನು ಈಗ ಯಾವ ಅವಸ್ಥೆಯಲ್ಲಿದ್ದೇನೆ ನನ್ನ ಅವಸ್ಥೆ ನನಗೇ ಹೇಗೆ ತಿಳಿಯಬೇಕು ?

ಬಾಬಾ, ಈ ರಸ್ತೆಯ ಹೆಸರೇನು ?

ಸಂತೋಷ ಏನೂ ಮಾತಾಡದೆ ಹಾಗೇ ಹೊರಗೆ ನೋಡುತ್ತ ಕುಳಿತ. ರಸ್ತೆ ಮಿರಿ ಮಿರಿ ಮಿಂಚುತ್ತಿತ್ತು. ತೊಯ್ದು ಹೋಗಿದ್ದ ದಾರಿಯ ಮೇಲೆ ಬೆಳಕು ಬಿದ್ದಿತ್ತು. ಮಳೆ ಬಂದು ಹೋಗಿತ್ತು. ಕಟ್ಟಿಗೆಯೆಲ್ಲ ಹಸಿಯಾಗಿರಬೇಕು. ಅವು ಉರಿಯುವುದಿಲ್ಲ. ಹೊಗೆ ಯಾಗುವುದು. ಕಣ್ಣು ಭಗ ಭಗ ಉರಿಯುವುದು. ಚಿತೆ ಉರಿಯಲು ವೇಳೆ ಹತ್ತುವುದು. ಪೀಡೆ ಈ ಮಳೆ.

ಅಪ್ಪಾ, ಮಳೆ ಸುರುವಾದ ಕೂಡಲೆ ಈ ಪುಸ್ತಕದವರು ಏನು ಮಾಡುತ್ತಾರೆ ?

ಪುಸ್ತಕಗಳ ಮೇಲೆ ತಾಡಪತ್ರಿ ಒಗೆಯುತ್ತಾರೆ.

ಕಟ್ಟಿಗೆಯನ್ನು ಬಟ್ಟಬಯಲಲ್ಲಿ ಹಾಗೆಯೇ ಇಟ್ಟಿರುತ್ತಾರೇನೊ ? ಛಪ್ಪರದ ಕೆಳಗೆ ಏಕೆ ಇಡುವುದಿಲ್ಲ ? ಇಟ್ಟರೆ ಜನರಿಗೆ ಎಷ್ಟು ಅನುಕೂಲವಾಗುತ್ತದೆ ! ಯಾವತರದ ಜಂಜಾಟವಿಲ್ಲ ತ್ರಾಸಿಲ್ಲ. ಈಗ ಬಹುಶಃ ರಾತ್ರಿಯೆಲ್ಲ ಚಿತೆಯೊಡನೆ ಗುದುಮುರಿಗೆ ಹಾಕುತ್ತ ಕೂಡಬೇಕು.

ಅಪ್ಪಾ.

ಗ್ಞಾರೇ....

ಮೋಟರು ಮೆಡಿಕಲ್ ಕಾಲೇಜಿನ ಗೇಟಿನೊಳಗಿಂದ ಒಳಕ್ಕೆ ಸೇರಿತು. ಇಲ್ಲಿಂದ ಇನ್ನೊಂದು ಶವವನ್ನು ಮೋಟರಿನಲ್ಲಿ ಒಯ್ಯುವನಿದಿದೆ. ತಲೆದಿಂಬಿನಂತಿದ್ದ ಏನನ್ನೋ ಕೈಯಲ್ಲಿ ಆಡ್ಡವಾಗಿ ಹಿಡಿದುಕೊಂಡು ಇಬ್ಬರು ಮನುಷ್ಯರು ಮೋಟರಿನ ದಾರಿಯನ್ನೇ ನೋಡುತ್ತ ನಿಂತಿದ್ದನು. ಅವನ್ನು ಅವರು ಹಿಂದೆ ಇಟ್ಟು ಸಂತೋಷನ ಹತ್ತಿರ ಬಂದು ಕುಳಿತರು. ಇನ್ನು ಮೋಟರು ನೇರವಾಗಿ ಸ್ಮಶಾನಕ್ಕೆ ಹೋಗುವುದು.

ಮುಂದಿನ ಸೀಟಿನಲ್ಲಿ ಕುಳಿತಿದ್ದ ಸಂಸ್ಕಾರ ಸಮಿತಿಯ ನೌಕರರಿಬ್ಬರೂ ತಮ್ಮತಮ್ಮೊಳಗೆ ಏನೇನೋ ಮಾತಾಡುತ್ತಿದ್ದಾರೆ. ಸಂತೋಷ ಕಿವಿಗೊಟ್ಟು ಕೇಳತೊಡಗಿದ. ಮೊದಲೇ ಎಲ್ಲ ಜೀನಸುಗಳ ಬೆಲೆ ಏರತೊಡಗಿದೆ. ಅದರಲ್ಲಿ ಮತ್ತೆ ಈ ಮಳೆಯ ಮೂಲಕ ಅಗಸರು ವೇಳೆಗೆ ಸರಿಯಾಗಿ ಅರಿವೆಯನ್ನು ಕೂಡ ಕೊಡುವುದಿಲ್ಲ. ಸಂತೋಷನು ಗೋಣು ಹೊರಳಿಸಿದನು.

ಅವರು ತಮಗೇನಾಗಬೇಕು ?

ಅವಳು ನನ್ನ ಹೆಂಡತಿ.

ಈ ಕೂಸು ನನ್ನ ಅಣ್ಣನ ಮಗಳು. ಇವಳಿಗಿಂತ ಮೇಲೆ

ಎರಡಿದ್ದವು. ಅವೂ ಹೋದುವು. ನಾಪ ಬಹಳ ಜೀರ್ಣವಾಗಿ ಹೋಗಿದ್ದಾಳೆ.

ಸಂತೋಷ ಮತ್ತೊಮ್ಮೆ ಮುಖ ತಿರುಗಿಸಿದ. ಮಗ್ಗಿಲಿಗಿದ್ದ ಆ ಮನುಷ್ಯ ಗಿಡದ ಬೊಡ್ಡೆಯಂತಿದ್ದನು. ದಾರಿಯಲ್ಲಿ ಸರಿದು ಹೋಗುತ್ತಿದ್ದ ದೀಪಗಳ ಜಿಳಕಿಗೆ ಅವನ ಕಣ್ಣು ಮಿಂಚುತ್ತಿದ್ದುವು. ಕಣ್ಣುಗಳು ಅಕ್ಷರಶಃ ಕಾಗೆಯಂದೆ ಕಾಣಿಸುತ್ತಿದ್ದುವು. ಅವನ ಕಣ್ಣೊಳಗಿಂದ ಈಗ ಒಮ್ಮೆಲೆ ಒಂದು ಕಾಗೆಯ ಮರಿ ಹೊರಬಿದ್ದರೆ ? ..... ಆದು ಕಾ; ಕಾ, ಎನ್ನುವುದು. ತೆರೆದ ಅದರ ಬಾಯಿ ಕೆಂಪಗೆ ಕಾಣಿಸುವುದು, ನಾಡೂನ ತಾಯಿಯ ಹೊಟ್ಟೆಗೆ ಕಟ್ಟಿದ್ದ ಬ್ಯಾಂಡೇಜ್ ಕರಿಬಿದ್ದು ಹೋಗಿದೆ.

ಒಮ್ಮೆಲೆ ಮೋಟರು ಥರಥರ ಹೊಯ್ದಾಡ ತೊಡಗಿತು. ಟ್ರಾಮು-ರೂಳಿನ ದುರಸ್ತಿ ನಡೆದಿದೆ. ರಸ್ತೆಯನ್ನು ಕೆದರುತ್ತಿದ್ದಾರೆ. ನೆಲವನ್ನು ಆಗಿದು ತೆಗೆದಿದೆ. ಸಂತೋಷ ಕಿವಿ ಹಚ್ಚಿ ಕೇಳಿದ: ಹಿಂದಿನಿಂದ ಎಂಥದೋ ಸಪ್ಪಳಬರುತ್ತಿದೆ. ಆ ತಲೆಗಿಂಬಿನಂತಹ ಸುರುಳಿ ಬಹುಶಃ ಕೆಳಗೆ ಬಿದ್ದಿರಬೇಕು. ಅದರಲ್ಲಿ ಒಂದು ಸಣ್ಣ ಕೂಸಿದೆ. ಆದು ಉರುಳುತ್ತ ಉರುಳುತ್ತ ನಾಡೂನ ತಾಯಿಯ ತೊಡೆಯ ಹತ್ತಿರ ಹೋಗುವುದು. ಅವಳಿಗೆ ಕೂಸುಗಳೆಂದರೆ ಬಹಳ ಪ್ರೀತಿ. ತನ್ನ ಎರಡೂ ಕೈಗಳನ್ನು ಮುಂದೆ ಮಾಡಿ, ಆ ಸುರುಳಿಯನ್ನು ಎದೆಗೆ ಗಟ್ಟಿಯಾಗಿ ಅವುಚಿಕೊಳ್ಳುವಳು. ಎತ್ತಿ ಅದಕ್ಕೆ ಲಟಲಟ ಮುದ್ದು ಕೊಡುವಳು

ಒಂದು, ಎರಡು, ಮೂರು, ನಾಲ್ಕು. ಮೋಟರು ಝೋಲಿ ಹೊಡೆಯುತ್ತಿದೆ, ಜತೆಗೆ ಸಂತೋಷನೂ ಹೊಯ್ದಾಡಿದನು. ಒಮ್ಮೆಲೆ ಅವನು ನಾಡೂನ ಕೈಯನ್ನು ಬಿಡಿಸಿಕೊಳ್ಳುವ ಪ್ರಯತ್ನ ಮಾಡಿದ; ಮತ್ತೆ ತನ್ನ ಹಿಡಿತವನ್ನು ಗಟ್ಟಿಮಾಡಿದ. ಅವನ ಹಲ್ಲು ಒಂದರ ಮೇಲೊಂದು ಊರಿನಿಂತಿದ್ದುವು. ಕರ್‌ಕರ್ ಎಂದು ಸಪ್ಪಳವಾಯಿತು ನಾಡೂ ಅಸ್ಪಷ್ಟವಾಗಿ ಚೀರಿದ.

ಮೋಟರಿನ ಹೊಯ್ದಾಟ ನಿಂತು, ಧಡಿಕೆ ಕಡಮೆಯಾಗಿ ಅದು ಒಳ್ಳೆಯ ದಾರಿಗೆ ಹತ್ತಿತು. ಸಂತೋಷನು ಕೈಬಿಟ್ಟುಬಿಟ್ಟನು. ಆ ಮೇಲೆ ಅವನು ಆಳವಾಗಿ ಉಸಿರೆಳೆದು ಕೇಳಿದ; ನಿನಗೆ ಅಂಜಿಕೆ ಬಂತೇನು ?

ಇಲ್ಲ.

ನನಗೂ ಇಲ್ಲ.

ಹತ್ತುಗಂಟೆಯ ಕಾರಕೂನರಂತೆ ಮೋಟರು ಸ್ಮಶಾನದ ಕಡೆಗೆ ಧಾವಿಸುತ್ತಿದೆ. ಗಾಳಿ ಬರುತ್ತಿದೆ. ಸಂತೋಷನು ಕಣ್ಣು ಮುಚ್ಚಿದನು, ಹತ್ತಿರವಿದ್ದ ಇಬ್ಬರೂ ಮನುಷ್ಯರೂ ಮೌನವಾಗಿ ಕುಳಿತಿದ್ದಾರೆ. ನಾಡೂ ದಾರಿಯ ಮೇಲಿನ ಜನರನ್ನು ನೋಡುತ್ತಿದ್ದಾನೆ. ದೀಪ-ಅಂಗಡಿಗಳನ್ನು ನೋಡುತ್ತಿದ್ದಾನೆ.

* * * *

ಮುಂದೆ ಕೈಚಾಚಿ ಸಂತೋಷ ಪಾದಗಳ ಮೇಲೆ ಕುಳಿತಿದ್ದ. ದೊಡ್ಡ ದೊಡ್ಡ ಕಟ್ಟಿಗೆಯ ತುಂಡುಗಳನ್ನು ಕೆಳಗೆ ಸಾಲಾಗಿ ಇಟ್ಟಿತ್ತು. ಮೇಲೆ ಉದ್ದ-ಅಡ್ಡ, ಸಣ್ಣ ಸಣ್ಣ ಕಟ್ಟಿಗೆಗಳನ್ನು ಇಡುವ ಕೆಲಸ ನಡೆದಿತ್ತು. ನಾಡೂ ಗೋಡೆಯ ಮೇಲೆ ಬರೆದದ್ದನ್ನು ಓದುವ ಪ್ರಯತ್ನ ನಡೆಸಿದ್ದನು. ಇದ್ದಲಿಯಿಂದ ಬರೆದಿದ್ದ ಸತ್ತವರ ಹೆಸರು ಮತ್ತು ವಿಳಾಸ—ಮೂರು ನಾಲ್ಕು ಸಾಲಿನ ಕವಿತೆಯನ್ನು ಕೂಡ ಕೆಲವು ಕಡೆಗೆ ಬರೆದಿದ್ದರು. ಓದುತ್ತ ಓದುತ್ತ ನಾಡೂ ಬಹಳ ದೂರ ಹೋದನು. ಅಲ್ಲಿ ಸಣ್ಣ ಚಿತೆ ಹೊತ್ತಿತ್ತು.

ನಿಮ್ಮದುಇದೆಲ್ಲ ಮುಗಿಯಬೇಕಾದರೆ ನಡುರಾತ್ರಿಯಾಗುವುದು.

ಅಲ್ಲಿ ಕುಳಿತಿದ್ದ ಇಬ್ಬರಲ್ಲಿ ಒಬ್ಬನು ಅಂದನು. ನಾಡೂ ಸ್ತಬ್ಧವಾಗಿ ನಿಂತಿದ್ದನು. ಅವರು ನಾಡೂನ ಕಡೆ ಕ್ಷಣಹೊತ್ತು ನೋಡಿದರು. ಆ ಮೇಲೆ ಅವನು ನೆಲದ ಮೇಲೆ ಚೌಕಾಸನ ಹಾಕಿಕೊಂಡು ಕುಳಿತ ಇನ್ನೊಬ್ಬನಿಗೆ ಹೇಳಿದ: ನೀನು ಒಮ್ಮೆ ತಾರಕೇಶ್ವರಕ್ಕೆ ಹೋಗಿ ಬಾ. ಎಂಥೆಂಥವರ ಆಶೆಗಳೂ ಅಲ್ಲಿ ಫಲಿಸಿವೆ. ಇಲ್ಲದಿದ್ದರೆ ಸುಕುಮಾರನ ತಂಗಿಯನ್ನು ಲಗ್ನಮಾಡಿಕೊಂಡು ಬಿಡು. ಅವನ ಅಕ್ಕಂದಿರು ಒಬ್ಬೊಬ್ಬರು ಎಂಟೆಂಟು ಹುಡುಗರ ತಾಯಂದಿರಿದ್ದಾರೆ.

ಫುರ್, ಫುರ್, ಎಂದು ಚಿತೆ ಕಿಡಿಯುತ್ತಿತ್ತು. ಆದರೂ ಮುಖ ಕಾಣಿಸುತ್ತದೆ ಗಬ್ಬಿಯಂತಹ ಪುಟ್ಟ ಮುಖ. ನಾಡೂ ಸ್ವಲ್ಪ ಮಗ್ಗಿಲಿಗೆ ಸರಿದ. ಅವ್ವನು ಒಲೆ ಹೊತ್ತಿಸಿದಾಗಲೆಲ್ಲ ಅವ್ವನ ಕಣ್ಣಲ್ಲಿ ನೀರು ಬರುತ್ತಿತ್ತು. ಉಳ್ಳಿಗಡ್ಡಿಯನ್ನು ಹೆಚ್ಚುವಾಗ ಸಹಿತ ಆವಳ ಕಣ್ಣಲ್ಲಿ ನೀರಾಡುತ್ತಿತ್ತು. ಬಹಳ ಹೊಗೆಯಾಗಿದೆ. ಕಣ್ಣು ಚುರು ಚುರು ಎನ್ನುತ್ತಿವೆ. ಅವ್ವನ ಹೆಸರು ಮತ್ತು ಪತ್ತೆ ಗೋಡೆಯ ಮೇಲೆ ಬರೆವರೆ ? ಏನು ಯಾರಾದರೂ ಬೈಯುವರೆ? ಈ ಗೋಡೆಯಾರದಿದೆ? ಕಟ್ಟಿಗೆ ಕೊಳ್ಳುವಾಗ ಅಪ್ಪ ಹಣ ಕೊಟ್ಟರಲ್ಲ, ಅವರದೇನು? ಹೆಸರು ಬರೆಯಲು ರೊಕ್ಕ ಕೊಡಬೇಕಾಗುವುದೇನೊ ! ಅಪ್ಪನಿಗೆ ರೊಕ್ಕ ಕೇಳಿದರೆ ಅವನು ಸಿಟ್ಟಿಗೇಳುವನು. ಅಪ್ಪನು ಆಳಲೇ ಇಲ್ಲ. ಆ ಮನುಷ್ಯನು ಅಳುತ್ತಿದ್ದಾನೆ. ಅಥವಾ ಹೊಗೆಯಿಂದ ಅವನ ಕಣ್ಣಲ್ಲಿ ನೀರು ಬಂದಿದೆಯೋ ? ಆದರೆ ಅಲ್ಲಿ ಹೊಗೆ ಎಲ್ಲಿದೆ ? ಅವನಿಗೆ ಕೆಟ್ಟೆ ನಿಸಿದೆಯೆಂದು ಅವನು ಅಳುತ್ತಿದ್ದಾನೆ. ಅಪ್ಪನು ಅಳಲಿಲ್ಲ. ನಾನು ಅತ್ತಿದ್ದೆ. ನನಗೆ ಅವ್ವನು ಸೇರುತ್ತಾಳೆ.

ಸಂತೋಷ ಹಾಗೆಯೇ ಕುಳಿತುಕೊಂಡಿದ್ದ. ಚಿತೆಯನ್ನು ಒಟ್ಟುವುದು ಮುಗಿದಿತ್ತು. ಆ ಕಡೆ ಈ ಕಡೆ ನೋಡಿ ಅವನು ನಾಡೂನ ಹೆಸರು ಹಿಡಿದು ಕೂಗಿದನು. ಜೋರಾಗಿ ಕೂಗಿದನು. ಕತ್ತಲೆಯಲ್ಲಿ ನಾಡೂ ಗೋಡೆಗುಂಟ ಸರಿದನು. ಮೂರು ಮಂದಿ ಗೋಡೆಗೆ ಆತು ಕುಳಿತಿದ್ದಾರೆ. ಅವರನ್ನು ದಾಟಿ ನಾಡೂ ಕತ್ತಲೆಯಲ್ಲಿ ಇನ್ನೂ ಮುಂದುವರಿದನು. ಸ್ಮಶಾನದ ತುದಿಗಿದ್ದ ಕಟ್ಟೆಯವರೆಗೆ ಬಂದನು. ಕಟ್ಟೆಯ ಆಚೆಗೆ ಗಂಗಾ ನದಿಹರಿಯುತ್ತಿತ್ತು.

ಸಂತೋಷನ ಕರೆ ಕೇಳಬರುತ್ತಿತ್ತು. ನಾಡೂ ಆ ಕಟ್ಟೆಯನ್ನು ಗಟ್ಟಿಯಾಗಿ ಹಿಡಿದು ನಿಂತನು. ನಾನು ಹೋಗುವುದಿಲ್ಲ ಏನು ಮಾಡಿ-

ರೂ ಹೋಗುವುದಿಲ್ಲ. ಅಲ್ಲಿಯ ವಾಸನೆ ನನಗೆ ಹಿಡಿಸುವುದಿಲ್ಲ. ಲ್ಲಿಯ ಜನರು ಕೂಡ ಒಂದು ತರಹ ಇದ್ದಾರೆ. ನಾನು ಇಲ್ಲಿ ನಿಲ್ಲುವು ಲ್ಲ. ಗೋಡೆಯ ಮೇಲೆ ಅವ್ವನ ಹೆಸರು ಬರೆಯುತ್ತೇನೆ. ಯಾರಿಗೂ ಾತ್ತಾಗದಂತೆ, ಎಲ್ಲರ ಕಣ್ಣು ತಪ್ಪಿಸಿ ಬರೆದು ಬಿಡುತ್ತೇನೆ.

ಹುಡುಕುತ್ತ ಹುಡುಕುತ್ತ ಸಂತೋಷ ನಾಡೂನ ಹತ್ತಿರ ಂದ. ಮೃದುವಾದ ಸ್ವರದಲ್ಲಿ ಹೇಳಿದ: ನಡೆ, ನಾಡೂ. ಇಲ್ಲಿ ನಿಲ್ಲ ೀಡ.

ಅವರಿಬ್ಬರೂ ಸಿದ್ಧವಾಗಿದ್ದ ಚಿತೆಯ ಹತ್ತಿರ ಬಂದರು. ಂಸ್ಕಾರಸಮಿತಿಯ ಜನರು, ಹೋಗುವ ಮುಂದೆ ಶವವನ್ನು ೆಲದ ಮೇಲೆ ಹಾಕಿ ಹೋಗಿದ್ದರು. ಇದುವರೆಗೂ ಅದು ಹಾಗೆಯೇ ಬಿದ್ದಿತ್ತು. ಸಂತೋಷನು ಅವಳ ದೇಹವನ್ನು ಹೊಸ ಸೀರೆಯಲ್ಲಿ ುತ್ತಿಟ್ಟಿದ್ದನು ಮಾತ್ರ.

ನೀನು ಕಾಲಿನ ಕಡೆ ಹಿಡಿ. ಮೇಲೆ ಇಡೋಣ.

ಹೆಗಲಿನ ಕಡೆಗೆ ಎತ್ತಿಹಿಡಿದು ಸಂತೋಷ ಕಾಲಿನ ಕಡೆಗೆ ನೋಡಿದ. ನಾಡೂ ಗುಣುಗುಟ್ಟುತ್ತ ನಿಂತಿದ್ದ. ಚಿತೆಯನ್ನು ಸಿದ್ಧ ಮಾಡಿದ. ಹೆಣ ಕಾಯುವವನು ನಾಡೂನ ಹತ್ತಿರ ಬಂದು ನಿಂತನು.

ಅಂಜಬೇಡಿರಿ, ಛೋಟೇಬಾಬು, ಈ ಹೆಣ ಬಹಳ ಹಗುರಿದೆ.

ನಾಡೂ ಸೆಟೆದು ಹಾಗೇ ನಿಂತ. ಹೆಣಕಾಯುವವನು ನಕ್ಕ. ಆಮೇಲೆ ಸಂತೋಷನ ಕಡೆಗೆ ನೋಡುತ್ತ ಅಂದನು: ಪಾಪ, ಛೋಟೇ ಬಾಬುಗೆ ಬಹಳ ಕೆಟ್ಟೆನಿಸಿದೆ. ಹಾಗೆ ಅನಿಸುವುದು ಸ್ವಾಭಾವಿಕ.

ನೀನೇ ಸ್ವಲ್ಪ ಕೈ ಹಚ್ಚು.

ಹೆಗಲನ್ನು ಮತ್ತೆ ನೆಲದಮೇಲಿಂದ ಸ್ವಲ್ಪ ಎತ್ತಿ, ಸಂತೋಷ ಆ ಹೆಣ ಕಾಯುವವನ ಕಡೆಗೆ ನೋಡಿದ. ನಾಡೂ ಅತಿ ಅಸ್ವಸ್ಥನಾದ. ಅಪ್ಪ ಎಷ್ಟು ಕಠೋರ ಕಣ್ಣುಗಳಿಂದ ನನ್ನನ್ನು ನೋಡುತ್ತಿದ್ದಾರೆ. ಬಾಬಾ ಸಿಟ್ಟಿಗೆದ್ದಾಗಲೆಲ್ಲ ಹೀಗೆಯೇ ನೋಡುತ್ತಿರುತ್ತಾರೆ. ನಿತೂನ ಮನೆಗೆ ಬಿಳಿಯ ಬಣ್ಣ ಹಚ್ಚಿದಾಗ—ಅದರ ಮೇಲೆ ನಾನು ಚಿತ್ರ ತೆಗೆದೆನೆಂದು ನಿತೂನ ತಾಯಿ ಮನೆಗೆ ಬಂದು ತಕರಾರು ಮಾಡಿದಾಗ— ಅಪ್ಪನು ನನ್ನನ್ನು ಹೀಗೆಯೇ ನೋಡಿದ್ದರು. ಅವ್ವನು ಗಟ್ಟಿಯಾಗಿ ಹೊಟ್ಟೆಗೆ ಅವಚಿಕೊಂಡಿದ್ದಳೆಂದು ಬಡಿಗೆ ತಪ್ಪಿತು. ಅವ್ವನ ಕೈಮೇಲೆ ನೀಲಿಯ ಬಾರು ಮೂಡಿದ್ದುವು. ಕಾಚಿನ ಬಳೆಗಳು ಹೆಚ್ಚಿ ಹೋಗಿದ್ದುವು. ಹೆಣಕಾಯುವವನು ಅವ್ವನ ಕಾಲುಗಳನ್ನು ಗಟ್ಟಿಯಾಗಿ ಹಿಡಿದಿದ್ದಾನೆ. ಕಸಬಳೆಯುವ ಜಮಾದಾರ ಅವ್ವನನ್ನು ಮುಟ್ಟಿದನೆಂದು ಅವ್ವ ಅಂದು ಸ್ನಾನಮಾಡಿದ್ದಳು. ಅಪ್ಪ ಅವನನ್ನು ಕೆಲಸದಿಂದ ತೆಗೆದೊಗೆದಿದ್ದರು. ಈಗ ಇವನನ್ನು ಅಪ್ಪ ತಾವಾಗಿಯೇ ಹೋಗಿ ಕರೆದುಕೊಂಡು ಬಂದಿದ್ದಾರೆ.

ಏ, ಸರಿ. ನೀನೇನೂ ಹಿಡಿಯುವ ಕಾರಣವಿಲ್ಲ. ನಾನು ಹಿಡಿಯುತ್ತೇನೆ. ನಾಡೂ ಅವ್ವನ ಕಾಲುಗಳನ್ನು ತನ್ನ ಬದಿಗೆ ಎಳೆದು ಕೊಂಡ. ಹೆಣ ಕಾಯುವವನು ನಕ್ಕು ಮಗ್ಗಲಿಗೆ ಸರಿದ. ಹಗುರಾಗಿದ್ದ ಶರೀರ ಮೆಲ್ಲನೆ ಚಿತೆಯನ್ನೇರಿತು. ಚಿತೆಯಲ್ಲಯ ಕಟ್ಟಿಗೆ ಗಳು ಒಮ್ಮೆ ಕಚ್ ಕಚ್ ಎಂದು ಸಪ್ಪಳ ಮಾಡಿದುವು. ಕೆಲವು ಕಟ್ಟಿಗೆಗಳನ್ನು ಎದೆಯ ಮೇಲೆ ಒಟ್ಟಿದರು.

ನಾಡೂ, ಬಾ. ಮುಖಾಗ್ನಿಯನ್ನು ಕೊಡು.

ಕೈಗೆ, ಹಣಿಗೆ ಸಂತೋಷನು ತುಪ್ಪ ತೊಡೆದನು. ಕೂದಲಲ್ಲಿ ತೊಡಕಿಕೊಂಡ ವನಸ್ಪತೀ ತುಪ್ಪದ ಕರಣಿಗಳು, ಆ ಮಂದ ಬೆಳಕಿನಲ್ಲಿ ಬೆಳುದಿಂಗಳಂತೆ ಕಾಣುತ್ತವೆ. ಚಿತೆ ಉರಿಯತೊಡಗಿತೆಂದರೆ, ಕೂದಲಿ ನೊಂದಿಗೆ ಇವೂ ಕೂಡ ಇಲ್ಲವಾಗುವುವು. ಹತ್ತಿಯನ್ನು ಹೊಸೆದು ಬತ್ತಿಯನ್ನು ಮಾಡಿ ಸಂತೋಷನು ಪ್ರೇತದ ತುಟಿಯ ಮೇಲಿಟ್ಟನು.

ನಾಡೂ, ನನ್ನ ಹತ್ತಿರ ಬಾ.

ಕಡ್ಡಿಯನ್ನು ಕೊರೆದು ಸಂತೋಷನು ನಾಡೂನ ಕೈಯಲ್ಲಿ ಕೊಟ್ಟನು. ಕಡ್ಡಿ ಆರಿಹೋಯಿತು. ಇನ್ನೊಂದನ್ನು ಕೊರೆದನು. ಅದು ಹತ್ತಲೇ ಇಲ್ಲ. ನಾಲ್ಕು ಕಡ್ಡಿಗಳು ಹೀಗೆಯೇ ಹಾಳಾದನಂತರ ಸಂತೋಷನು ಬೇಸತ್ತನು. ಪಟಪಟ ನಾಲ್ಕು ಹನಿ ಮಳೆ ಉದುರಿ ನಿಂತಿತು. ಆ ಮಹಾಚಿತೆ ಇನ್ನೂ ಉರಿಯುತ್ತಿದೆ. ಸಂತೋಷ ಓಡುತ್ತ ಹೋಗಿ ಕಡ್ಡಿಪೆಟ್ಟಿಗೆಯನ್ನು ಬಿಸಿಮಾಡಿಕೊಂಡು ತಂದ. ಕಡ್ಡಿಯನ್ನು ಕೊರೆದು ಅದನ್ನು ನಾಡೂನ ಕೈಯಲ್ಲಿ ಕೊಟ್ಟು, ಅದು ಆರಬಾರದೆಂದು ತನ್ನ ಕೈಯನ್ನು ಅಡ್ಡವಾಗಿ ಹಿಡಿದ.

ಒಂದು ಕ್ಷಣ ನಾಡೂ ಸಂತೋಷನ ಮುಖದ ಕಡೆಗೆ ನೋಡಿದ. ಎರಡೂ ತುಟಿಗಳು ಕಂಪಿಸುತ್ತಿದ್ದುವು. ಈಗ 'ಉಫ್' ಎಂದು ಉದಿ ಆ ಕಡ್ಡಿಯನ್ನು ಆರಿಸಿಬಿಟ್ಟರೆ ಅಪ್ಪನಿಗೆ ತಿಳಿಯುವುದು. ಆ ಮೇಲೆ ಹೊಡೆಯುವನು.

ಅಥವಾ ಬಹುಶಃ ತಾನೇ ಆ ಬತ್ತಿಗೆ ಕಡ್ಡಿಕೊರೆದು ಹಚ್ಚುವನು. ಅವ್ವನಿಗೆ ಮುಖಾಗ್ನಿಯನ್ನು ಮಕ್ಕಳೇ ಕೊಡಬೇಕು, ಅಲ್ಲವೇನು? ಇಲ್ಲವಾದರೆ ಪಾಪ ಬರುವುದಿಲ್ಲವೆ? ಪಾಪ ಯಾರಿಗೆ ಬರುವುದು? ನನಗೋ ಅಥವಾ ಅವ್ವನಿಗೊ?

ಬತ್ತಿ ಉರಿಯತೊಡಗಿದ ನಂತರ ನಾಡೂ ಕಡ್ಡಿಯನ್ನು ಒಗೆದು ಬಿಟ್ಟನು. ಹೆಣ ಕಾಯುವವನು ಸಣ್ಣ ಸಣ್ಣ ಚಕ್ಕಿಗಳನ್ನು ಮುರಿಯ ತೊಡಗಿದ್ದ. ನಾಡೂ ಹಿಂದೆ ಸರಿದನು.

ಉರಿಯಲು ಎಷ್ಟು ವೇಳೆ ಬೇಕು?

ಮೂರುನಾಲ್ಕು ತಾಸು.

ಕಟ್ಟಿಗೆ ಒದ್ದೆಯಾಗಿಲ್ಲವಷ್ಟೆ? ಒಂದೇ ಸವನೆ ಎರಡು ದಿವಸಗಳಿಂದ ಮಳೆ ಬಿದ್ದಿದೆ.

ನಾಡೂ ಮುಂದೆ ನಡೆದನು. ಎರಡೂ ಮಗ್ಗಲಿಗೆ ಕೆದರಿದ್ದರಿಂದ ತಗ್ಗು ಬಿದ್ದು ಹೋಗಿದ್ದ ನೆಲ. ಆರಲು ಬಂದಿದ್ದ ಎರಡು ಚಿತೆಗಳ ಸುತ್ತಲು ಕೆಲವು ಜನರು ಗೋಲಾಕಾರವಾಗಿ ಕುಳಿತಿದ್ದರು. ನಡು ವಿನ ದಾರಿ ನೇರವಾಗಿ ಗಂಗೆಯಕಡೆಗೆ ಹೋಗಿತ್ತು. ನಾಡೂ ಘಟ್ಟದ ಮೇಲೆ ಬಂದನು. ಸ್ಮಶಾನದ ಬೆಳಕಿನಲ್ಲಿ ನೀರು ಲಕಲಕ ಹೊಳೆಯು

ತ್ತಿತ್ತು. ಅತ್ತಿಂದಿತ್ತ ಹೊಯ್ದಾಡುತ್ತಿತ್ತು. ಅವ್ವನು ನಗುವಾಗ ಅವಳ ಮೈ ಹೀಗೆಯೇ ಕಂಪಿಸುತ್ತಿತ್ತು. ನನಗೆ ಗಂಗಾನದಿಯಲ್ಲಿ ಸ್ನಾನ ಮಾಡಬೇಕೆಂದು ಇಚ್ಛೆಯಾಗಿದೆ.

ಏ, ಟೋಜೋ, ಹಿಟ್ಲರ್—ಸಬ್‌ಕೋಯಿ ಫಾಲ್ ಇನ್ ಹೋಜಾವೊ. ಹಮ್ ಗೋಲಿ ಕರೇಂಗಾ.

ಕೊರಳಲ್ಲಿ ಎಲೆಯ ಮಾಲೆಯನ್ನು ಹಾಕಿಕೊಂಡ ಒಬ್ಬ ಮನುಷ್ಯ, ಅತೀ ಹರ್ಷದಿಂದ ಆಕಾಶದ ಕಡೆಗೆ ಕೈಮಾಡಿ ಎದೆಯುಬ್ಬಿಸಿಕೊಂಡು ನೆಟ್ಟಿದು ನಿಂತಿದ್ದ:

ಟೀ—ನ್‌ಶನ್.

ಕಾಲನ್ನು ಎಳೆದು ಅವನು, ಮಣ್ಣಿನ ಮೇಲೆ ಮಲಗಿದ್ದ ಒಂದು ನಾಯಿಗೆ ಝಾಡಿಸಿ ಒದ್ದನು. ಅದು ಓಡಿಹೋಯಿತು. ಅನಂತರ ಅವನು ಹೊರಳಿ ನಾಡೂನ ಕಡೆಗೆ ನೋಡಿದ. ನಾಡೂ ಕೈಯಲ್ಲಿ ಜೀವ ಹಿಡಿದು ಓಡುತ್ತ ಓಡುತ್ತ ಅಪ್ಪನ ಹತ್ತಿರ ಬಂದನು. ಚಿತೆ ಹತ್ತಿ ಕೊಳ್ಳತೊಡಗಿತ್ತು. ಸುಟ್ಟ ಕಟ್ಟಿಗೆಗಳನ್ನು ಹೆಣಕಾಯುವವ ಒಳಗೆ ನುಗಿಸತೊಡಗಿದ್ದ.

ಎಲ್ಲಿ ಹೋಗಿದ್ದೆ ?

ಆ ಕಡೆಗೆ. ಗಂಗೆಯನ್ನು ನೋಡಲು.

ಒಬ್ಬನೇ ಹೋಗಬೇಡ ಎಲ್ಲಿಯೂ. ತುಡುಗರು— ಗಾಂಜಾ ಖೋರರು ಇರುತ್ತಾರೆ.

ಒಂದೇ ಸ್ವರದಲ್ಲಿ ಓದುವ ಸಪ್ಪಳ ಕೇಳಿಸುತ್ತಿದೆ. ಬಹಳ ಜನರು ಒಂದೇ ಕಡೆಗೆ ಕುಳಿತು ಓದುತ್ತಿರಬೇಕು. ಸಂತೋಷನು ಕುಳಿತಲ್ಲಿಂದಲೇ ಹೆಣಕಾಯುವವನನ್ನು ದೃಷ್ಟಿಸುತ್ತಿದ್ದಾನೆ. ಮಾಂಸ ಸುಟ್ಟ ವಾಸನೆ ಬರುತ್ತಿದೆ.

ಮತ್ತೆಲ್ಲಿಗೆ ಹೊರಟಿ ?

ನಾಡೂ ತಡೆದು ನಿಂತನು. ಅಲ್ಲಿಂದಲೇ ಹೇಳಿದ, ಅಲ್ಲಿ ಯಾರೋ ಹಾಡುತ್ತಿದ್ದಾರೆ. ನಾನು ನೋಡಲು ಹೋಗುತ್ತೇನೆ.

ನೀನು ಎಲ್ಲಿಯೂ ಹೋಗುವ ಕಾರಣವಿಲ್ಲ. ಇಲ್ಲಿಯೇ ಕೂಡು.

ನಾಡೂ ಸಂತೋಷನ ಹತ್ತಿರ ಬಂದು ನಿಂತನು. ಕಟ್ಟಿಗೆಯ ಸಂದಿನೊಳಗಿಂದ ಬೆಂಕಿ ಕಿಡಿಕಿಡಿಯಾಗಿ ಹಾರುತ್ತಿತ್ತು. ಕೂಪಲು ಸುಟ್ಟುಹೋಗಿವೆ. ಮುಖ ಕಾಣಿಸುತ್ತಿದೆ. ತುಟಿ ಸ್ವಲ್ಪವೇ ತೆರೆದಿವೆ. ಕೈಯ ಬೆರಳುಗಳೆಲ್ಲ ಕಪ್ಪಾಗಿ ಹೋಗಿವೆ. ಹಿಂಮಡಿಗಳು ಜಡವಾದಂತೆ-ನಿಸುತ್ತದೆ. ಒದ್ದೆಯಾದ ಗಾಳಿಬೀಸಿ ಹೋಯಿತು. ತಲೆಯ ಹತ್ತಿರದ ಬೆಂಕಿ ಒಮ್ಮೆಲೆ ಭಗ್ಗೆಂದು ಹತ್ತಿಕೊಂಡಿತು.

ನಾಡೂ ಮುಖಹೊರಳಿಸಿ, ಅಪ್ಪನನ್ನು ಓರೆನೋಟದಿಂದ ನೋಡಿದ. ನಿನ್ದೆಗೆಟ್ಟದ್ದರಿಂದ ಕಣ್ಣು ಜಡವಾದಂತೆನಿಸಿತು ಅವನಿಗೆ. 'ಪೂಜಾ' ಹಬ್ಬದಲ್ಲಿ ಯಾತ್ರೆಯನ್ನು ನೋಡಲು ಹೋಗಿಬಂದರೆಂದರೆ ಅಪ್ಪನ ಕಣ್ಣು ಹೀಗೆಯೇ ಆಗಿರುತ್ತಿದ್ದುವು. ಅವ್ವನು ಪರದೆಯ ಹಿಂದೆ ಇರುತ್ತಿದ್ದಳು. ಡಬ್ಬಿಯ ತುಂಬ ವೀಳೆಯದೆಲೆ ಇರದಿದ್ದರೆ ಅವ್ವನಿಗೆ ಯಾತ್ರೆ ನೋಡಲು ಕಠಿಣವಾಗುತ್ತಿತ್ತು. ಮತ್ತೊಮ್ಮೆ ಗಾಳಿಯ ಇನ್ನೊಂದು ತೆರೆ ಬಂತು. ಚಿತೆಯ ಕಾವು ನಾಡೂನ ಮೈಮೇಲೆ ತಿದಿಯೊತ್ತಿದಂತೆ ನುಗ್ಗಿಬಂತು.

ಈಗೆಲ್ಲಿ ಹೊರಟೆ ?

ಅಲ್ಲಿ. ಆ ಕಡೆಗೆ.

ಹೋಗಬೇಡ.

ಕೈಯನ್ನು ಮುಷ್ಟಿಮಾಡಿ ನಾಡೂ, ಅದನ್ನು ಹೊರಳಿಸಿ ನೋಡುತ್ತ ನಿಂತ. ಸಂತೋಷ ಕುಳಿತವ ಎದ್ದ ನಿಂತ. ಚಿತೆಯ ಕೆಂಪು ಬೆಳಕಿನಲ್ಲಿ ಅವನ ಕಣ್ಣು ಲಕಲಕ ಹೊಳೆಯುತ್ತಿವೆ.

ಹೀಗೇಕೆ ನೀನು ಪುನಃ ಪುನಃ ಓಡಿಹೋಗುತ್ತಿದ್ದಿ ? ಏನಾಗಿದೆ ನಿನಗೆ ? ಆಂ ? ಕೆಟ್ಟಿನಿಸಿತೆ ? ಅವ್ವ ಹೋದಳೆಂದು ಕೆಟ್ಟೆನಿಸಿತೆ ?

ಸಂತೋಷನು ನಾಡೂನ ಹೆಗಲು ಹಿಡಿದು ಅಲುಗಾಡಿಸಿದನು. ಚಟ್ ಚಟ್ ಎಂದು ಸಪ್ಪಳವಾಗುತ್ತದೆ. ಚಿತೆಯ ಮೂಲೆಗೆ ನಿಲ್ಲಿಸಿದ್ದ ದೊಡ್ಡ ಕಟ್ಟಿಗೆ ಧೊಪ್ಪೆಂದು ಬೆಂಕಿಯಲ್ಲಿ ಬಿತ್ತು.

ಅಲ್ಲೋ, ನೀನು ಯಾಕೆ ಮಾತಾಡುವುದಿಲ್ಲ? ನಿನಗೆ ಕೆಟ್ಟಿನಿಸಿದೆಯೆಂದು ಅವ್ವ ತಿರುಗಿ ಬರುತ್ತಾಳೇನು ? ಆಯುಷ್ಯದಲ್ಲಿ ಇನ್ನೂ ಇಂಥ ಪ್ರಸಂಗಗಳು ಎಷ್ಟೋ ಬರುವುವಿವೆ. ಅವನ್ನು ಹೇಗೆ ಎದುರಿಸುವವ ನೀನು ?

ಬೋಲ ಹರಿ, ಹರಿ ಬೋಲ !

ಬೋಲ ಹರಿ, ಹರಿ ಬೋಲ !

ಇಬ್ಬರೂ ಬೆಚ್ಚಿಬಿದ್ದು ಆ ಕಡೆಗೆ ನೋಡಿದರು. ಬಹಳ ಜನರು ಸ್ಮಶಾನವನ್ನು ಸೇರಿದರು. ಒಬ್ಬ ಮಧ್ಯಮ ವಯಸ್ಸಿನ ಹೆಂಗುಸು ಎದೆ ಹೊಡೆದುಕೊಂಡು ಅಳುತ್ತಿದ್ದಳು. ಅವರಲ್ಲಿಯ ಕೆಲವು ಜನರು ಅವಳನ್ನು ಹಿಡಿದುಕೊಂಡು ಘಟ್ಟದ ಕಡೆಗೆ ಒಯ್ದರು. ಹೆಣವು ಅವರ ಹತ್ತಿರದಿಂದಲೇ ಹಾಯ್ದು ಹೋಯಿತು, ನೀಲಗಿರಿ ಎಣ್ಣೆಯ ವಾಸನೆ ಹವೆಯನ್ನೆಲ್ಲ ತುಂಬಿತು. ಸಂತೋಷನು ಮುಖ ತಿರುವಿದ. ಘಟ್ಟದ ಕಡೆಯಿಂದ ಅಳುವ ಸ್ವರ ಕೇಳಿಬರುತ್ತದೆ.

ಗಾಳಿಯು ಉಷ್ಣತ್ವವಾಗಿ ಬೀಸತೊಡಗಿತ್ತು.

ಚಿತೆಯ ಕಡೆಗೆ ಬಾಗಿ ಕಟ್ಟಿಗೆಗಳನ್ನು ಆ ಕಡೆಗೆ ಈ ಕಡೆಗೆ ಸರಿಸುತ್ತ ಸಂತೋಷನು ನುಡಿದ : ಎಲ್ಲ ಉರಿಯೂ ತಲೆಯ ಕಡೆಗೇನೇ ಬಂದಿವೆ. ಕಾಲು ಇನ್ನೂ ಹಾಗೇ ಉಳಿದಿವೆ, ಸುಟ್ಟೇ ಇಲ್ಲ.

ಅಪ್ಪಾ, ನಾನು ಗೋಡೆಯ ಮೇಲೆ ಹೆಸರು ಬರೆಯುತ್ತೇನೆ.

ಏನು ಬರೆಯುತ್ತಿ ?

ಇಬ್ಬರ ಕಣ್ಣೂ ಕೂಡಿದುವು. ಉರಿಯುವ ಕಟ್ಟಿಗೆಯೊಂದನ್ನು

ಕಾಲಿನಿಂದ ಚಿತೆಯಲ್ಲಿ ನೂಕುತ್ತ ಸಂತೊಷನೆಂದ, ಬರೆದೇನು ಮಾಡುವುದು? ನಾಳೆಯೇ ಮಳೆ ಬಂದಿತೆಂದರೆ ಎಲ್ಲ ಅಳಿಸಿಹೋಗುವುದು.

ಹುಚ್ಚ ಚೀರುತ್ತಿದ್ದಾನೆ. ಬೊಬ್ಬೆ ಹಾಕುತ್ತಿದ್ದಾನೆ. ವಿಧವೆಯ ಅಳುವಿನ ಧ್ವನಿ ಕೇಳಿ ಬರುತ್ತಿದೆ. ಹೆಣವನ್ನು ಕೆಳಗಿಳಿಸಿ ಅವರೊಡನೆ ಬಂದ ಜನರು ತಗ್ಗಿದಧ್ವನಿಯಲ್ಲಿ ಮಾತಾಡುತ್ತಿದ್ದಾರೆ. ಇಡೀ ಸ್ಮಶಾನದ ತುಂಬೆಲ್ಲ ಸುಟ್ಟ ಮಾಂಸದ ವಾಸನೆ ಇಡಗಿದೆ. ಹೊರಗೆ ರೇಲ್ವೆ ಇಂಜಿನ್ನು ಒಮ್ಮೆಲೆ ಒಂದು ಸಿಳ್ಳು ಹಾಕಿತು.

ಕೆಳಗೆ ಬಾಗಿ ನಾಡೂ ಒಂದು ಹೂವನ್ನು ಎತ್ತಿಕೊಂಡನು. ಅದೇ ಆಗ ಹೆಣದ ಮೇಲಿಂದ ಬಿದ್ದಿತ್ತು. ಸಂತೋಷನ ದೃಷ್ಟಿಗೆ ಇದು ಬೀಳದೆ ಇರಲಿಲ್ಲ. ಅವನು ಕೈಮುಂದೆ ಮಾಡಿದನು. ನಾಡೂ ಮುಷ್ಟಿಯನ್ನು ಬಿಗಿದು, ಕೈಯನ್ನು ಬೆನ್ನಹಿಂದೆ ಒಯ್ದನು.

ನಿನಗೆ ಯಾಕೆ ಬೇಕು, ಅದು?

ನಾನು ಇದನ್ನು ಮನೆಗೆ ಒಯ್ಯುವನ.

ಯಾಕೆ?

ಮನೆಯಲ್ಲಿ ಇಟ್ಟುಕೊಳ್ಳುತ್ತೇನೆ.

ಇಲ್ಲಿಯದು ಏನೂ ಇಟ್ಟುಕೊಳ್ಳಬಾರದು. ತಾ—ತಾಯಿಲ್ಲಿ. ಸಂತೋಷನು ಕೈಮುಂದೆ ಮಾಡಿದನು.

ನಾನು ಗಂಗೆಯಲ್ಲಿ ಒಗೆದು ಬಿಡುವೆ.

ಇಲ್ಲ ನೀನು ಗಂಗೆಯ ಕಡೆಗೆ ಹೋಗಕೂಡದು.

ನನಗೆ ಸ್ನಾನ ಮಾಡುವುದಿದೆ.

ಊ ಹೂ. ನೀನು ಸ್ನಾನಮಾಡಬಾರದು. ನಿನಗೆ ಜ್ವರಬರುತ್ತದೆ.

ಸಂತೋಷನು ಎದ್ದು ನಿಂತನು. ನಾಡೂ ಹಿಂದೆ ಸರಿದನು. ಹಿಂದೆ ಗೋಡೆಯಿತ್ತು. ಮುಂದೆ ಕೈಚಾಚಿ ಸಂತೋಷನು ಮುಂದುವರಿದನು. ಹುಡುಗ ಮನಸ್ಸಿನಲ್ಲಿ ತಾಯಿಗಾಗಿ ನೆನಪನ್ನು ಸಿದ್ಧಮಾಡಿಡಲು ನೋಡುತ್ತಾನೆ; ಈ ವರ್ತಮಾನ ಕಾಲವನ್ನು ಭವಿಷ್ಯತ್ ಕಾಲದಲ್ಲಿಯೂ ತನ್ನ ಹತ್ತಿರವಿಟ್ಟುಕೊಳ್ಳಲು ಹವಣಿಸುತ್ತಿದ್ದಾನೆ. ಆದರೆ ಅದರ ಉಪಯೋಗವೇನು? ಸಾವಿನ ನೆನಪು ಮನಸ್ಸನ್ನು ಉದಾಸೀನಗೊಳಿಸಿ ಬಿಡುತ್ತದೆ. ಹುಡುಗ ಇನ್ನೂ ಸಣ್ಣವನಿದ್ದಾನೆ. ಈ ಜಗತ್ತಿನಲ್ಲಿ ಅವನಿಗೆ ಇನ್ನೂ ಬಹಳ ದಿವಸ ಕಳೆಯಬೇಕಾಗಿದೆ.

ಇಷ್ಟರಲ್ಲಿ ಒಂದು ನಾಯಿ ಓಡುತ್ತ ಬಂತು. ಹುಚ್ಚನು ಅದರ ಬೆನ್ನಟ್ಟಿ ಬಂದ. ಸಂತೋಷನು ದಾರಿಗೆ ಅಡ್ಡವಾಗಿ ನಿಂತನು. ಹುಚ್ಚ ಓಡುವುದನ್ನು ನಿಲ್ಲಿಸಿದ. ನಾಯಿಯು ನಾಡೂನ ಕಾಲಿಗೆ ತನ್ನ ಮೈ ತಿಕ್ಕ ತೊಡಗಿತು. ನಾಡೂ ಗಡಿಬಿಡಿಯಿಂದ ಕೈಯಲ್ಲಿ ಒಂದು ಮಣ್ಣಿನ ಹೆಂಟೆಯನ್ನು ಎತ್ತಿಕೊಂಡ.

ಅದನ್ನು ಹೊಡೆಯಬೇಡಪ್ಪಾ, ತಮ್ಮಾ. ಅದು ನಿನಗೆ ಕಡಿಯುವುದಿಲ್ಲ. ಸ್ಮಶಾನದ ಗೇಟಿಗೆ ಆನಿಸಿಕೊಂಡಿದ್ದ ಮನುಷ್ಯ ಬಿದ್ದಲ್ಲಿಂದಲೇ ಹೇಳಿದ. ಇವತ್ತು ಮುಂಜಾನೆ, ಪಾಪ, ಅದರ ಮರಿ ರೇಲ್ವೆ ಗಾಡಿಯ ಕೆಳಗೆ ಸಿಕ್ಕಿತು, ಅದಕ್ಕೆ ಹೊಡೆಯಬೇಡ!

ಹುಚ್ಚನು ಒಂದೇ ಸವನೆ ಕಣ್ಣು ಕೂಡ ಮಿಟುಕಿಸದೆ ದಿಟ್ಟಿಸಿ ನೋಡುತ್ತಿದ್ದಾನೆ. ಸಂತೋಷನು ನಾಡೂನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು ಆ ಸ್ಥಳಬಿಟ್ಟು ಕದಲಲಿಲ್ಲ.

ಏ, ಕ್ಯಾಪ್ಟನ್ ಸಾಬ್ ಇಧರ ಆವ್.

ಗೇಟಿನ ಹತ್ತಿರದ ಮನುಷ್ಯ ಆ ಹುಚ್ಚನನ್ನು ಕರೆದ. ಹುಚ್ಚನು ಅಬೌಟ್-ಟರ್ನ್ ಮಾಡಿ ಸಲ್ಯೂಟ್ ಬಿಗಿದನು. ಆ ಮೇಲೆ ಏಳ-ದೋ ಎನ್ನುತ್ತ ಆ ಮನುಷ್ಯನ ಹತ್ತಿರ ಬಂದ. ನೆಲದ ಮೇಲಿನ ಒಂದು ಮಣ್ಣಿನ ಹೆಂಟೆಯನ್ನು ಎತ್ತಿ ಕೈಯಲ್ಲಿಡಲು ಹುಚ್ಚನು ಮತ್ತೊಮ್ಮೆ ಸಲ್ಯೂಟ್ ಹೊಡೆದು ಫಾಟನ ಕಡೆಗೆ ಜೊರಟು ಹೋದನು. ಪುನಃ ಇಂಜನಿನ ಸೀಟಿಯ ಸಪ್ಪಳ ಕೇಳಿಸಿತು, ಮಾಲಗಾಡಿಯ ಶಂಟಿಂಗದ ಸಪ್ಪಳ ಕೇಳಿಸಿತು.

ಅಂಜಿಕೆ ಬಂತೇನು, ನಿನಗೆ?

ಒಂದು ಕಡೆಯ ಚಿತೆ ಭಗ್ನಿಂದಿತು. ಕಿಡಿಗಳು ಹಾರುತ್ತಿವೆ. ಬೆಂಕಿ ಗುಲಾಬಿ ಬಣ್ಣದ್ದಾಗಿದೆ. ನಮ್ಮ ದೈವ ಒಳ್ಳೆಯದು. ಇವೊತ್ತು ಮಳೆಬರಲಿಲ್ಲ

ರಾಗತೆಗೆದು ಅಳುವ ಸ್ವರ ಕೇಳಿಬರುತ್ತದೆ. ಮಾಲುಗಾಡಿಯ ಶಂಟಿಂಗ ನಡೆದಿದೆ. ಡಬ್ಬಿಯ ಮೇಲೆ ಡಬ್ಬಿ ಅಪ್ಪಳಿಸಿ ಕರ್ಕಶವಾದ ಸಪ್ಪಳವಾಗುತ್ತಿದೆ. ಕಿವಿ ಗಡಚಿಕ್ಕಿಹೋಗುತ್ತದೆ.

ಶಂಭೂಕಾಕಾನ ಹುಡುಗಿ ಮಾಲಗಾಡಿಯ ಕೆಳಗಿನಿಂದ ರೂಳನ್ನು ದಾಟುವಾಗ ಗಾಡಿಯ ಕೆಳಗೆ ಸಿಕ್ಕಿದ್ದಳು. ನಿನಗೆ ನೆನಪಿದೆಯೆ?

ನಾಡೂ ಸುಮ್ಮನಿದ್ದನು ಸೂತ್ರೂಕಡೆ ಒಮ್ಮೆ ದೃಷ್ಟಿಯನ್ನು ಚೆಲ್ಲಿ ಸಂತೋಷನು ಮಾತ್ತೆ ನುಡಿದ: ಇದೆಲ್ಲ ಮುಗಿದ ಮೇಲೆ ಹೊದಲು ನಿನಗೆ ಬಟ್ಟೆ ತೆಗೆದುಕೊಳ್ಳಬೇಕು. ಆದರೆ ಹೆಣಕಾಯುವ ಈ ಮಗನೆಲ್ಲಿ ಫರಾರಿ ಆದ? ಅವನನ್ನು ಕರೆದುಕೊಂಡು ಬಾ. ಹೋಗು!

ಯಾಕೆ?

ಅವನು ಬಂದರೆ ಬಿದಿರಿನಿಂದ ತಲೆಯೊಡೆಯುವನು.

ನಾಡೂ ಗೋಡೆಗೆ ಅಂಟಿಕೊಂಡನು. ಅವನ ಮೈ ಥರಥರ ಕಂಪಿಸತೊಡಗಿಸು. ಭಯವಾಗತೊಡಗಿದೆ. ಹಾಸ್ಪಿಟಲಿನಲ್ಲಿಯ ಲಿಫ್ಟಿನ ಆ ಕಬ್ಬಿಣದ ಚೌಕೋನದ ತುಂಡಿನಂತೆ ಅಪ್ಪ ನನ್ನ ಮೈಮೇಲೆ ಬರುತ್ತಿದ್ದಾರೆ. ಕೆಳಗೆ ಸಿಕ್ಕು ನಾನು ತುಂಡು ತುಂಡಾಗಿ ಹೋಗುತ್ತೇನೆ. ಜಿಬ್ಬಿ ಮುದ್ದೆಯಾಗಿ ಹೋಗುತ್ತೇನೆ. ಇಷ್ಟು ಹೊತ್ತಿನವರೆಗೆ ಪಶ್ಚಾತ್ತಾಪವಾಗಲಿಲ್ಲ. ಕಸಿವಿಸಿಯಾಗುತ್ತಿದೆ. ಹಸಿವೆಯಾಗಿದೆ. ಚೀಲದಲ್ಲಿ ಪೇರಲಹಣ್ಣು ಇವೆ ಪೇರಲಹಣ್ಣು ಅವ್ವನಿಗೆ ಸೇರುತ್ತವೆ.

ನಾನು ಹೇಳಿದ್ದು ಕೇಳಿಸಲಿಲ್ಲವೇನು? ಹೀಗೇಕೆ ನಿಂತೆ?

ನಾನು ಹೋಗುವುದಿಲ್ಲ.

ನಾನು ಹೇಳಿದ್ದು ನೀನು ಕೇಳುವುದಿಲ್ಲವೆ? ಆಗ ಹೂಕೊಡು ಎಂದು ಕೇಳಿದರೆ ಯಾಕೆ ಕೊಡಲಿಲ್ಲ ನೀನು?

ನನ್ನ ಮರ್ಜಿ. ನನಗೆ ಯಾರೂ ಕೇಳುವ ಕಾರಣವಿಲ್ಲ.

ನಾಡೂ ಸಿಟ್ಟಿನಿಂದ ಚೀರಿದ. ಸಂತೋಷನು ದಿಙ್ಮೂಢನಾಗಿ ಸುಮ್ಮನಾದನು. ಹಿಂಮುಡಿ ಹಾಗೂ ಅಂಗಾಲು ಇನ್ನೂ ಸುಟ್ಟೇ ಇಲ್ಲ. ಉಬ್ಬಿ ಠಸ್ ಠಸ್ ಎನ್ನುತ್ತಿವೆ. ಗಾಳಿ ಬೀಸುತ್ತಿದೆ. ಬೆಂಕಿಯೆಲ್ಲ ತಲೆಯಹತ್ತಿರವೇ ಹೊತ್ತಿಕೊಂಡಿದೆ.

ನಾನು ಹೇಳಿದ ಮಾತು ಕೇಳುವುದಿಲ್ಲವೆ?

ಇಲ್ಲ.

ಕೇಳುವುದಿಲ್ಲವೆ?

ಇಲ್ಲ. ಇಲ್ಲ.

ಚೀಲದಲ್ಲಿ ಕೈಹಾಕಿ ನಾಡೂ ಒಂದು ಪೇರಲಹಣ್ಣನ್ನು ಕೈಯಲ್ಲಿ ತೆಗೆದುಕೊಂಡನು. ಅಪ್ಪನು ಮೈಮೇಲೆ ಬರುತ್ತಿದ್ದಾನೆ, ಬರಲಿ; ನಾನು ಪೇರಲ ಹಣ್ಣನ್ನು ಬೀಸಿ ಒಗೆಯುತ್ತೇನೆ. ಆ ಕಬ್ಬಿಣದ ಚಾಕೋನದಂತೆ ಬರುತ್ತಿದ್ದಾನೆ. ನಾನು ಓಡಿಹೋಗುತ್ತೇನೆ. ಎಲ್ಲಿಯಾವರೂ ಹೇಗಾದರೂ ಓಡಿಹೋಗುತ್ತೇನೆ ಕೈಯಲ್ಲಿ ಜೀವಹಿಡಿದು ಓಡುತ್ತೇನೆ.

ನಾನು ಹೇಳಿದ ಮಾತನ್ನು ಕೇಳುವುದಿಲ್ಲವೆ? ಹೇಳು, ಕೇಳುವುದಿಲ್ಲವೆ?

ಸಂತೋಷನು ನಾಡೂನ ಕೈಯನ್ನು ಹಿಂಡಿ ಹಿಡಿದಿದ್ದನು. ಚಿಟ್ಟನೆ ಚೀರಿ ವಿಘ್ನೆಯು ಓಡಿಬಂದಳು. ಚಿತೆಯ ಮೇಲೆ ರವನನ್ನಿಡುವ ಕೆಲಸ ನಡೆದಿತ್ತು.

ಸಂತೋಷನು ಒಮ್ಮೆಲೆ ಹಿಂದೆ ಸರಿದ. ನಾಡೂ ಅವನ ಕೈಗೆ ಬಲವಾಗಿ ಕಚ್ಚಿದ್ದ. ಅವನ ಮೈಯಲ್ಲೆಲ್ಲ ವಿದ್ಯುತ್ ಸಂಚಾರವಾದಂತಾಯಿತು. ನನ್ನ ಹುಡುಗ. ನನ್ನನ್ನೇ ದ್ವೇಷಿಸತೊಡಗಿದ್ದಾನೆ. ಅಯ್ಯೋ, ದೇವರೇ, ನಾನು ಏನು ಮಾಡಿದ್ದೇನೆ? ಇಷ್ಟು ಹುಡುಗ ನನಗೆ ಶಿಕ್ಷೆವಿಧಿಸಲು ನೋಡುತ್ತಾನೆ. ದೋಷ-ಗುಣಗಳು ಅವನಿಗೇನು ತಿಳಿಯುತ್ತವೆ? ಅವನಿಗೆ ಚೆನ್ನಾಗಿ ಶಿಕ್ಷೆ ಮಾಡಲಿಕ್ಕೆ ಬೇಕು. ಅವನನ್ನು ಹೊಡೆಯಲಿಕ್ಕೆ ಬೇಕು. ಅವನನ್ನು ಕೊಂದು ಹಾಕಬೇಕು. ಸಾಯುವವರೆಗೂ ಹೊಡೆಯಬೇಕು.

ಸಂತೋಷ ನಾಡೂನ ಹಿಂದೆ ಓಡಿದನು. ಉರಿಯುವ ಚಿತೆಯ ಸುತ್ತು ಹಾಕಿ ನಾಡೂ ಒಂದೇ ಓಟಕ್ಕೆ ಓಡಿಹೋದನು. ಸ್ಮಶಾನದ ಗೇಟನ್ನು ದಾಟಿ ಅವನು ಬೀದಿಗೆ ಬಂದನು. ಹಿಂದೆಯೆ ಸಂತೋಷನು ಓಡಿಬರುತ್ತಿದ್ದಾನೆ. ಆ ದಾರಿಯಲ್ಲಿ ಒಬ್ಬನಾದರೂ ಮನುಷ್ಯನಿಲ್ಲ. ಅದು ನೇರವಾಗಿ ಗಂಗಾನದಿಯ ದಂಡೆಗುಂಟ ಹೋಗಿದೆ. ಹಾಗೆಯೇ ಎಷ್ಟು ದೂರ ಹೋಗಿದೆ! ಇದಿರಿನಲ್ಲಿ ಮಾಲುಗಾಡಿಯ ಡಬ್ಬಿಗಳು ಸಾಲಾಗಿ ನಿಂತಿವೆ. ಒಂದು ಕ್ಷಣ ನಾಡೂ ಯೋಚಿಸಿದನು. ಆಮೇಲೆ ಮಾಲುಗಾಡಿಯ ಕೆಳಗಿನಿಂದ ಅವನು ರೂಳನ್ನು ದಾಟಿ ಕತ್ತಲೆಯಲ್ಲಿ ಕಾಣದಂತಾದನು.

ಸಂತೋಷ ಓಡುತ್ತ ಓಡುತ್ತ ಬಂದನು. ನಾಡೂ ಕೆಳಗೆ ಬಾಗಿ ಎರಡು ಡಬ್ಬಿಗಳ ನಡುವಿನ ಸಂದಿನೊಳಗಿಂದ ಹಾಯ್ದು ಆ ಕಡೆಗೆ ಹೋದನು, ಸಂತೋಷ ಹಣಿಕೆ ಹಾಕಿ ಮೆಲ್ಲನೆ ಆಕಡೆಗೆ ಬಂದನು. ಕಗ್ಗತ್ತಲೆ. ಸುಮಾರು ಒಂದು ಮಾರು ಅಂತರದ ಮೇಲೆ ಇನ್ನೊಂದು ಸಾಲು. ಡಬ್ಬಿಯನ್ನು, ಒಂದು ಉದ್ದವಾದ ನಿರ್ಜನ ಓಣಿಯಂತೆ ಕಾಣಿಸುತ್ತಿದೆ. ಸಂತೋಷನು ಎತ್ತರದ ಧ್ವನಿಯಲ್ಲಿ ಕೂಗಿದನು. ಕೆವಿ ಗಡಚಿಕ್ಕಿದುವು. ಎಲ್ಲಿಂದಲೂ ಉತ್ತರವಿಲ್ಲ. ಏನೂ ಇಲ್ಲ. ಸಂತೋಷ ಮತ್ತೆ ಕರೆದ. ನಿಶ್ಶಬ್ದ. ಅದೇ. ಏನೂ ಇಲ್ಲ. ಸಂದಿಯಲ್ಲಿ ಚಿತ್ರ ವಿಚಿತ್ರ ಆಕಾರದ ಕಲ್ಲುಗಳು. ಸಂತೋಷ ಇನ್ನೇನು ಎಡವಿ ಬೀಳುವವನೇ ಇದ್ದ. ಎರಡೂ ಕೈಗಳನ್ನು ಅಡ್ಡ ಜಾಚಿ, ಎರಡು ಗಾಡಿಗಳನ್ನು ಹಿಡಿದು ತಾನೇ ಸಾವರಿಸಿಕೊಂಡ.

ರೇಲ್ವೆ ಹಳಿಗುಂಟ ತಿಕ್ಕುತ್ತ, ಸರಿಯುತ್ತ ಒಂದು ಸಪ್ಪಳ ಹತ್ತಿರ ಹತ್ತಿರ ಬರತೊಡಗಿದೆ. ಕತ್ತಲೆಯಲ್ಲಿ ಕೆಂಡ ಹಾರುತ್ತವೆ. ಇಂಜನ್ ಬರುತ್ತಿದೆ. ಯಾವ ಲೈನಿನ ಮೇಲೆ? ಸಂತೋಷ ನಾಡೂನ ಪೆಸರನ್ನು ಕೂಗಿದನು. ಕೆವಿ ಗಡಚಿಕ್ಕಿದುವು, ಕೂಳಿನ ಖಡಖಡ ಸಪ್ಪಳ ಹೆಚ್ಚತೊಡಗಿದೆ. ಆಕಡೆಗೆ ಯಾರೋ ಕಲ್ಲು ಒಡೆದಂತೆ ಸಪ್ಪಳ ಕೇಳಿಸುತ್ತಿದೆ. ನಾಡೂ ಇನ್ನೂ ಈ ಕಡೆಗೇ ಇದ್ದಾನೊ? ಇಂಜನ್ ಯಾವ ಲಾಯಿನಿನ ಮೇಲೆ ಬರಹತ್ತಿದೆ? ಅಂಜಿ ಅವನು ಮತ್ತೆ ಗಾಡಿಯ ಕೆಳಗಿಂದ ಕ್ರಾಸ್ ಮಾಡುವಾಗ, ಅದೇ ವೇಳೆಯಲ್ಲಿ ತಪ್ಪಿ ಇಂಜನ್ನು ಗಾಡಿಗೆ 'ಧಕ್ಕೆ' ಕೊಟ್ಟರೆ? ಶಂಭೂಕಾಕಾನ ಮಗಳ ತಲೆ ಕತ್ತರಿಸಿ ಹೋಗಿತ್ತು. ದಡವು ವಿಲಿವಿಲಿ ಒದ್ದಾಡಿ ಥರಥರ ಕಂಪಿಸತೊಡಗಿತ್ತು. ಕೆಳಗಿನ ಕಟ್ಟಿಗೆಯ ಸ್ಲಿಪರಿನ ಮೇಲೆ ಎಷ್ಟೋ ದಿವಸ ಆ ಕರಿಯ ಗುರುತು ಹಾಗೇ ಉಳಿದಿತ್ತು. ನಾಡೂನ ತಾಯಿಯ ಬ್ಯಾಂಡೇಜ್ ಕಪ್ಪಾಗಿ ಹೋಗಿತ್ತು. ಈ ಸಂದಿಯಲ್ಲಿ ಕರಾಳ ಕತ್ತಲೆಯಿದೆ. ಏನೂ ಕಾಣಿಸುವುದಿಲ್ಲ,

ಗಾಡಿಯ ಆಕಡೆಗೆ ಖಟ್‌ಖಟ್ ಸಪ್ಪಳವಾಯಿತು. ಯಾರಾದರೂ ಕಲ್ಲು ಒಡೆಯುತ್ತಾರೆಯೇನೋ ಎನಿಸುತ್ತದೆ. ಸಂತೋಷ ಬಾಗಿ ಕುಳಿತು, ಗಾಡಿಯ ಕೆಳಗಿನಿಂದ ನೋಡಿದ. ಗಾಲಿಯನ್ನೇ ಕೈಯಿಟ್ಟ. ಕಲ್ಲುಕಲ್ಲಾಗಿದೆ. ಛಣ್ಣಗೆ. ಇದರ ತೂಕವೆಷ್ಟಿರಬಹುದು? ಇನ್ನು ಮತ್ತೆ ನಾಡೂನನ್ನು ಕರೆದರೆ ಅವನಿಗೆ ಹೆದರಿಕೆ ಬರಬಹುದು. ಮತ್ತೆ ಓಡುವನು. ಅದಕ್ಕಿಂತ ಅವನನ್ನು ಮೆಲ್ಲಗೆ ಹೋಗಿ ಹಿಡಿಯಬೇಕು.

ಬಾಗಿ ಸಂತೋಷನು ಎರಡು ಡಬ್ಬಿಗಳ ಮಧ್ಯದ ಸಂದಿನ ಕಡೆಗೆ ಹೊರಳಿದ. ಇಷ್ಟರಲ್ಲಿ ಆ ಡಬ್ಬಿಯ ಸಾಲಿಗೆ ಒಂದು ಧಕ್ಕೆ ಕೊತಿತು. ಸಂತೋಷನು ಅಡ್ಡವಾಗಿ ಬಿದ್ದನು. ಇಂಜನ್ ಧಕ್ಕೆ ಕೊಟ್ಟಿದೆ. ಡಬ್ಬಿಯ ಸಾಲು ಸ್ವಲ್ಪ ಹಿಂದೆ ಹೋಗಿ ನಿಂತಿತು.

ಮಣ್ಣಿಗೆ ಅಂಟಕೊಂಡು ಸಂತೋಷ ಬಿದ್ದಿದ್ದ. ಅವನ ಒಂದು ಮಗ್ಗಲಿಗಿದ್ದ ಡಬ್ಬಿಯಸಾಲು ಮೌನವಾಗಿ ನಿಂತಿತ್ತು. ಇನ್ನೊಂದು ಬಾಜುವಿನದು ಸರಿಯತೊಡಗಿತ್ತು. ಮಣ್ಣಿಗೆ ಕಿವಿ ಹಚ್ಚಿ ಕೇಳಿದರೆ

ಸಪ್ಪಳ ಕೇಳಿಸುತ್ತಿತ್ತು — ಕಬ್ಬಿಣದ ಮೇಲೆ ಕಬ್ಬಿಣ ತಿಕ್ಕಿದ ಸಪ್ಪಳ ಅಕಡೆಗೆ ನಾಡೂ ಈಗ ಏನು ಮಾಡುತ್ತಿರಬಹುದು? ಅಕಡೆಗೆ ಹೋಗಲು ಸ್ವಲ್ಪ ತಡವಾಗಿದ್ದಿಲ್ಲವಾದರೆ ಏನು ಆಗಬಹುದಿತ್ತು? ರುಂಡ ಬೇರೆಯಾವ ಧಡ ಥರಥರ ನಡುಗುತ್ತಿರುತ್ತದೆ. ನಾನು ಸಾಯುತ್ತಿದ್ದೆ. ರೂಳಿನ ಮೇಲೆ ಸಪ್ಪಳ ಬರುತ್ತಿದೆ. ಮೂಲು ಡಬ್ಬಿಗಳು ಸಾಲುಸಾಲಾಗಿ ಹೊರಟಿವೆ. ಕಾಲು ಜುಮ್ಮೆನ್ನತೊಡಗಿವೆ. ಮಣ್ಣಿಗೆ ಹಸಿಯಾದ ವಾಸನೆಬರುತ್ತಿದೆ, ಹಣೆಯಮೇಲೆಲ್ಲ ಬೆವರು ಸುರಿಯುತ್ತಿದೆ. ನಾನು ಸತ್ತು ಹೋಗುತ್ತಿದ್ದೆ. ಆದರೆ ಉಳಿದೆ. ಹೀಗೆಯೇ ಈ ಮಣ್ಣನ್ನಪ್ಪಿಕೊಂಡಿರಲು ಎಷ್ಟು ತವಕಪಡುತ್ತಿದೆ ಮನಸ್ಸು! ಈ ಮಣ್ಣು ಯಾವಾಗ ತಯಾರಾಯಿತು? ನೊದಲನೆಯ ಮನುಷ್ಯ ಎಷ್ಟು ಯುಗಗಳ ಹಿಂದೆ ಜನ್ಮಿಸಿದ? ಈಗಲೂ ಮಣ್ಣಿದೆ ಮನುಷ್ಯನಿದ್ದಾನೆ. ಈ ಕ್ಷಣಗಳು ಭೂತಕಾಲದಲ್ಲಿ ಲೀನವಾಗಿ ಹೋಗುತ್ತವೆ. ಮಣ್ಣಿನ ಹಾಗೂ ಮನುಷ್ಯನ ಜೀವನ ಈ ಕ್ಷಣಗಳೊಂದಿಗೆ ಒಂದಾಗಿ ಹೋಗುತ್ತಿವೆ. ವಿರಾಡ್ರೂಪ ತಾಳಿದ ಭೂತಕಾಲವು ನನ್ನನ್ನು ಸ್ಪರ್ಶಿಸಿತು. ನಾನು ಕಳೆದುಕೊಂಡು ಹೋಗುತ್ತಿದ್ದೇನೆ. ಇಷ್ಟು ವಿಶಾಲವಾದ ಭೂತಕಾಲದಲ್ಲಿ ನಾನು ನನ್ನನ್ನು ಎಲ್ಲಿಂದು ಹುಡುಕಬೇಕು? ನನ್ನ ಕಾಲಿನ ಮೇಲೆ ನಾನು ಹೇಗೆ ನಿಲ್ಲುವವ?

ಮಳೆ ಬೀಳಲು ಪ್ರಾರಂಭಿಸಿದೆ. ಪಟ ಪಟ ಹನಿ ಬೀಳುತ್ತಿವೆ. ಇಂಜಿನ್ನು ಎಲ್ಲ ಡಬ್ಬಿಗಳನ್ನೂ ಎಳೆದುಕೊಂಡು ಹೋಗಿದೆ. ಸಂತೋಷ ಎದ್ದು ನಿಂತನು. ಲಾಯಿನಿನ ಅಕಡೆಯ ಮಣ್ಣಿನ ಮೇಲೆ ಕತ್ತಲೆ ದಟ್ಟವಾಗಿ ಬಿದ್ದಿದೆ. ಯಾರಾದರೂ ಗಾಡಿಯ ಕೆಳಗೆ ಸಿಕ್ಕರೇನು? ಚಿಟ ಚಿಟ ಚೀರುತ್ತ ಝೋಲಿ ಹೊಡೆಯುತ್ತ ಸಂತೋಷ ಓಡಿ ಹೋದನು. ಅವನನ್ನು ನೋಡಿ ನಾಯಿಯು, ಎಲುಬು ನೆಕ್ಕುವುದನ್ನು ನಿಲ್ಲಿಸಿತು. ಬಾಲ ಅಲ್ಲಾಡಿಸಿದ ಸಪ್ಪಳವಾಯಿತು. ಅದು ಸ್ವಲ್ಪಹೊತ್ತು ದಾರಿ ನೋಡಿತು. ಆಮೇಲೆ ಮತ್ತೆ ಎಲುಬು ನೆಕ್ಕಲು ಪ್ರಾರಂಭಿಸಿತು.

ಮಳೆ ಬೀಳುತ್ತಿದೆ. ನನ್ನ ಮೈಮೇಲೆ ಧೋ ಎಂದು ಮಳೆ ಸುರಿಯುತ್ತಿದೆ. ನಡುಗುತ್ತ ನಡುಗುತ್ತ ಸಂತೋಷನು ಲಾಯಿನಿನ ಗುಂಟ ನಡೆಯತೊಡಗಿದನು. ನಾಡೂನ ತಾಯಿಯ ಚಿತೆ ಈಗ ಬಹುಶಃ ಆರಿಹೋಗಿರಬೇಕು. ನನಗೆನಿಸುತ್ತದೆ, ನಾನೂ ಮೋಡವಾಗಬೇಕು. ಮೋಡವಾಗಿ ಇಡೀ ಆಕಾಶವನ್ನೆಲ್ಲ ವ್ಯಾಪಿಸಿ ನಿಲ್ಲಬೇಕು.

ಸಂತೋಷ ಅಳಲು ಪ್ರಾರಂಭಿಸಿದ. ಆದರೆ ಆ ಅಳು ನೀರವವಾಗಿತ್ತು.

ಈ ಅನುವಾದದಲ್ಲಿ ನನ್ನೊಡನೆ ಸಹಕರಿಸಿದ ಶ್ರೀ. ಅಶೋಕ ಶಹಾಣೆ ಅವರಿಗೆ ನಾನು ಋಣಿಯಾಗಿದ್ದೇನೆ. —ಲೇ.

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀಡಿ ಬಿಟ್ಟು)

ಯುನೈಟೆಡ್ ಕನ್ಸರ್ನ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಗೊಂಬೆಯಾಟದ ವೀರನು

ಲೇ. "ರಂಜನಭಟ್ಟ", ಮದ್ರಾಸು

❋

ರಣವೀರ ಕರ್ಣನೊ ಬಸವಳಿದು ಬಿದ್ದ—
ಭವ್ಯ ಕನಸಿಗ ಭೀಷ್ಮ ಹುಡುಕುತಿಹ ಶರಮಂಚ
ಅಪ್ರತಿಮ: ವಿಗಡ ವಿಕ್ರಮಮೂರ್ತಿ
ಬಿದ್ದಿರುವ ರುಂಡಗಳೇ ಇವನ ಕೀರ್ತಿ.
ಕೈಯನೆಳೆದನು,—ಕಾಲ ಕಡಿದನು
ಮುಕುಟ ಮಣಿಯನೆ ಕಳಿದನು.
ಕುದುರೆ ಪುಷ್ಪಕ ಶಕಟ–ರಥಗಳು
ಇವನು ಇಕ್ಕಿದ ಆಹುತಿ.
ಯಾವ ಯುಗದವ, ಎಂತ ಕಲಿಯುವ
ದಣಿವನರಿಯದ ಯೋಧನು
ಸೋಲನರಿಯನು, ಗೆಲ್ಲ ಬಯಸನು
ರಣವ ಬಯಸಿಹ ರುದ್ರನು !
ಬೇಡ ಮುಕುಟವು, ಇಲ್ಲ ಆಶೆಯು
ಬಯಸನೇನನು ಪ್ರತಿಫಲ !

೨

ಹಗೆಯನರಿಯನು ಕೆಟ್ಟುದೆಣಿಸನು
ಎಲ್ಲವಿವನಿಗೆ ಜೋಡ್ಯವು.
ಬೇಕು ನೇಸರು ಆಡೆ ಚೆಂಡನು
ಚಂದ್ರನಾದರು ಮಣಿಯೆನೆಂಬನು
ಅರಿವೆನೆನ್ನುವ ದಾಹವೀತನು
ಹಿಡಿವೆನೆನ್ನುವ ಛಲವನು—
ಭೀಷ್ಮ ಮಲಗಿಹ—ಕರ್ಣನಳಿದನು
ರುಂಡಮುಂಡಗಳುರುಳಿರೆ,
ಅಸ್ತ್ರಶಸ್ತ್ರಗಳೆಲ್ಲ ಮಣಿದಿವೆ,
ಬಾಲನಾಡಿರೆ "ಭಾರತ"
ಯುದ್ಧವಾಡಲು ದೂರನೇತಕೆ
ಮನೆಯ ಜಗುಲಿಯೆ ಸಾಲದೆ ?
ಹಾಲುಗಲ್ಲದ ಹಸುಳೆಯಾಗಿರೆ
ಗೊಂಬೆಯಾಟದ ವೀರನು !

ಮನುಜ ಸತ್ತ!....?

ಲೇ. ಈಶ್ವರ ಹಿರೇನಂದಿಹಳ್ಳಿ, ಮೊರಬ

❋

ಮನುಜ ಸತ್ತನು ಹುಗಿಯ ಬನ್ನಿರಿ,
ಹೋಳಿಯಾಟವ ಹೂಡಿರಿ.
ಹಣದ ಕುಣಿಯಲಿ ಇಟ್ಟು ಪೂಜಿಸಿ
ನೋಟುರಾಶಿಯ ಒಟ್ಟಿರಿ ! ||೧||

ಬಾಯಿ ತೆರೆದಿದೆ ರೊಕ್ಕ ತುರುಕಿರಿ,
ಕವಿಯ ತೂತನು ತುಂಬಿರಿ.
ಎನೆಯ ಕಣ್ಣೊಳು ನೋಟು ಹೊಲಿಯಿರಿ
ಮೂಗ ಸುಳಿಯಲಿ ಇಳಿಸಿರಿ ! ||೨||

ತೂತು ತೂತೂ ಹೂತು ಹೋಗಲಿ
ಹಣವ ಮೈಯೊಳು ಮೆತ್ತಿರಿ !
ಸತ್ತು ಬದುಕಿದ ದೇಹ ಮುಚ್ಚಲು
ಹೊನ್ನ ಮುದ್ರೆಯ ಕೆತ್ತಿರಿ ! ||೩||

ಹೊಡೆದು ಹಾರಿಯ ಹೊಟ್ಟೆ ಹಗೆಯಲಿ
ಜಡಿದು ತುಂಬಿರಿ ಚಿಲ್ಲರು—
ಒಡೆದು ನೋಡಲು ತಲೆಯ ಡವುಗೆಯ
ದುಡ್ಡೆ ಕಾಣಲಿ ಎಲ್ಲರು ! ||೪||

ನಾಡ ಸಂಸ್ಕೃತಿ ಸಿಡಿದುಹೋಯಿತು,
ಧನದ ಆಶ್ರಯ ಪಡೆಯಿತು.
ದುಡ್ಡು ಸಿಂಹಾಸನವನೇರಿತು
ನ್ಯಾಯದಂಡವ ಪಿಡಿಯಿತು. ||೫||

ಮಸಣಗಟ್ಟಿತು ಬುದ್ಧಿಮತ್ತೆಗೆ
ಟೊಣ್ಣೆ ನಾಡನ್ನಾಳಿತು,
ಮೋಸಗೊಳಿಸುವ ಕುಶಲಬುದ್ಧಿಗೆ
ಪದವಿ ಹಿರಿಮೆಯ ಗಳಿಸಿತು ! ||೬||

ಮನುಜ ಸತ್ತನು, ಧನವು ಕೊಂದಿತು;
ಹೋಳಿಯಾಟವ ನಡೆಸಿರಿ !
ಮನುಜ ತಿನ್ನುವ ಮೃಗವು ಬಂದಿತು
ಪ್ರಳಯ ದಾರಿಯ ಬಿಡಿಸಿರಿ ! ||೭||

ಶ್ರೀ. ವಿ. ಕೃ. ಗೋಕಾಕರ

ಬೆಲ್‌ಜಿಯಮ್ ಪ್ರವಾಸ

ಲೇಖಕರು: ಶ್ರೀ. ಜಿ. ಹ್ಹಿ. ಕುಲಕರ್ಣಿ ಎಂ. ಎ.
ಶ್ರೀ. ಕೆ. ಎಸ್. ಶರ್ಮಾ ಬಿ. ಎಸ್. ಸಿ. } ಧಾರವಾಡ

ಜಗತ್ತಿನ ಕವಿಗಳ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಗಳಾಗಿ ಹೋದ ಕನ್ನಡಿಗರೊಬ್ಬರು, ತಮ್ಮ ಪ್ರತಿಭೆಯ ಪ್ರಭಾವದಿಂದಾಗಿ, ಜಗತ್ತಿನ ಕವಿಗಳ ಬಳಗದ ದೃಷ್ಟಿಮಂಟಪವನ್ನು ತಮ್ಮ ಸುತ್ತಲೂ ಕಟ್ಟಿ ಕೊಂಡರು; ಇದು ನಿಮಗೆ ಹೆಮ್ಮೆಯ ಮಾತಲ್ಲವೆ ?

ದ್ವೈವಾರ್ಷಿಕ ಆಂತರ ರಾಷ್ಟ್ರೀಯ ಕವಿಸಮ್ಮೇಲನವು ಬೆಲ್‌ಜಿಯಮಿನಲ್ಲಿ ಕಳೆದ ಸಪ್ಟೆಂಬರ್ ತಿಂಗಳಲ್ಲಿ ಜರುಗಿತು. ಅದರಲ್ಲಿ ಭಾರತದ ನಾಲ್ಕು ಜನ ಪ್ರಸಿದ್ಧ ಕವಿಗಳು ಭಾಗ ವಹಿಸಿದ್ದರು. ಕನ್ನಡಿಗರಾದ ಶ್ರೀ. ವಿ. ಕೃ. ಗೋಕಾಕರು ಪ್ರತಿನಿಧಿಗಳಲ್ಲಿ ಒಬ್ಬರಾಗಿ, ತಮ್ಮ ಬೆಲ್ಜಿಜಿಯಮ್ ಪ್ರವಾಸದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ವರ್ತಿಸಿದುದು, ಕನ್ನಡಿಗರಿಗೆಲ್ಲ ಆನಂದ ಹಾಗೂ ಅಭಿಮಾನಗಳನ್ನು ತರುವಂತಹ ಸಂಗತಿಯಾಗಿದೆ. ಇವರೊಡನೆ ಪ್ರತಿನಿಧಿಸಿದ ಉಳಿದ ಮೂವರು ಕವಿಗಳೆಂದರೆ ಶ್ರೀ. ಹರಿವಂಶರಾಯ ಬಚ್ಚನ್, ಶ್ರೀ. ಮಿತ್ರ ಶ್ರೀ. ಸಿದ್ದಿಕ್ವಿಯವರು. ೪೨ ದೇಶಗಳಿಂದ ಸೇರಿ ೩೨೦ ಪ್ರತಿನಿಧಿಗಳು ಈ ಸಮ್ಮೇಲನಕ್ಕೆ ಆಗಮಿಸಿದ್ದರು. ಇರಾಣ, ಪಾಕಿಸ್ತಾನ್, ತುರ್ಕಸ್ತಾನ್, ವಿಯಟ್‌ನಾಮ್, ಮತ್ತು ಇತರ ಏಶಿಯಾದ ದೇಶಗಳೂ ಭಾಗವಹಿಸಿದ್ದುವು. ಅಮೇರಿಕೆಯಿಂದ ೪ ಪ್ರತಿನಿಧಿಗಳು, ರಶಿಯಾದಿಂದ ೩, ಇಟಲಿಯಿಂದ ೫, ಪಶ್ಚಿಮ ಜರ್ಮನಿಯಿಂದ ೬, ಹಾಲಂಡದಿಂದ ೯, ಗ್ರೇಟ್‌ಬ್ರಿಟನ್‌ನಿಂದ ೨೦ ಬಲ್ಗೇರಿಯಾದಿಂದ ೪; ಇದಲ್ಲದೆ ಕೆನಡಾ, ಡೆನ್ಮಾರ್ಕ್, ನಾರ್ವೆ, ಫಿನ್‌ಲ್ಯಾಂಡ್, ಗ್ರೀಸ್, ರುಮಾನಿಯಾ, ಝೆಕೊಸ್ಲೋವಾಕಿಯಾ, ಸ್ವಿಟ್ಸರ್‌ಲಂಡ್, ಮೆಕ್ಸಿಕೋ, ಪೋರ್ತುಗಾಲ್, ಬ್ರಾಝಿಲ್, ಮತ್ತು ಅರ್ಜೆಂಟೆನಾ ಮುಂತಾದ ದೇಶಗಳು– ಪ್ರತಿನಿಧಿಸಿದ್ದುವು. ಫ್ರಾನ್ಸ್‌ನಿಂದ ೫೪ ಪ್ರತಿನಿಧಿಗಳು, ಬೆಲ್‌ಜಿಯಮಿನಿಂದ ೧೩೪ ಪ್ರತಿನಿಧಿಗಳು ಆಗಮಿಸಿದ್ದರು.

ಸಪ್ಟೆಂಬರ್ ದಿನಾಂಕ ೨೦ರಂದು ರಾತ್ರಿ ಹನ್ನೊಂದು ಗಂಟೆಗೆ ಮುಂಬಯಿಯಿಂದ ಹೊರಟು, ಬ್ರೂಸೆಲ್ಸಿಗೆ ದಿನಾಂಕ ೩೦ರಂದು ರಾತ್ರಿಯ ಹತ್ತುಗಂಟೆಗೆ ನಮ್ಮ ಕವಿಗಳು ತಲುಪಿದರು. ಅಲ್ಲಿಯ ಪ್ಯಾಲೆಸ್ ಹೊಟೇಲಿನಲ್ಲಿ ಇವರಿಗೆ ತಂಗುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಮರುದಿನ ಮುಂಜಾನೆ ಕೆಲಸಮಯ ಭಾರತದ ರಾಯಭಾರಿ ಕಚೇರಿಯಲ್ಲಿ ಕಳೆದು, ೧೦ ೦ ಗಾಡಿಯಿಂದ ನೋಕೇಲೆ-ಝೋಟಕ್ಕೆ ನಡೆದರು. ಹನ್ನೆರಡು ಗಂಟೆಗೆ ಅಲ್ಲಿ ತಲುಪಿದೊಡನೆಯೇ, ಸ್ವಯಂಸೇವಕರು ಬಂದು ನೇರವಾಗಿ ಸಮ್ಮೇಲನದ ಸಭಾಮಂದಿರಕ್ಕೆ ಕರೆದೊಯ್ದರು. ಇವರು ಹೋದ ಸಮಯದಲ್ಲಿ ಬೆಲಜಿಯಮಿನ ಶಿಕ್ಷಣಸಚಿವರು ಸಮ್ಮೇಲನದ ಉದ್ಘಾಟನೆಯನ್ನು ಮಾಡಿದ್ದರು; ಮತ್ತು ಇವರು ಪ್ರವೇಶಿಸುತ್ತಲೇ ಅಧ್ಯಕ್ಷರು ಇವರೆಲ್ಲರ ಬರವನ್ನು ಸಭೆಗೆ ತಿಳಿಯಪಡಿಸಿದರು. ಟೆಲಿವಿಜನ್ ಮೂಲಕ ಸಮ್ಮೇಲನದ ಚಟುವಟಿಕೆಗಳನ್ನು ಪ್ರಸಾರಗೊಳಿಸುವ ಏರ್ಪಾಡನ್ನು ಮಾಡಲಾಗಿತ್ತು.

ಶ್ರೀ. ಗೋಕಾಕರು, ೧೯೫೬ರಲ್ಲಿ ಜಪಾನದಲ್ಲಿ ನಡೆದ ಪಿ.ಇ.ಎನ್ ಪರಿಷತ್ತಿನಲ್ಲಿ ಭಾಗವಹಿಸಿದಾಗ, ಅಲ್ಲಿ ಪ್ರತಿಯೊಂದು ಭಾಷಣವನ್ನು ಮೂರು ಭಾಷೆಗಳಲ್ಲಿ ಒಮ್ಮೆಲೇ ಕೇಳುವಂತೆ ಅನುವಾದದ ವ್ಯವಸ್ಥೆ ಮಾಡಲಾಗಿತ್ತು. ಆದರೆ ಇಲ್ಲಿ ಹಾಗಿರದೇ, ಕೇವಲ ಫ್ರೆಂಚ್ ಭಾಷೆಯೊಂದೇ ಮಾಧ್ಯಮವಾಗಿರುವುದರಿಂದ, ಶ್ರೀ ಗೋಕಾಕರು ಭಾರತದ ರಾಯಭಾರಿ ಕಚೇರಿಗೆ ಫೋನ್ ಮಾಡಿ, ದ್ವಿಭಾಷಿಯ (interpreter) ವ್ಯವಸ್ಥೆ ಮಾಡಲು ಕೇಳಿಕೊಂಡರು. ಏಕೆಂದರೆ ನಮ್ಮ ಪ್ರತಿನಿಧಿಗಳಿಗೆ ಫ್ರೆಂಚ್‌ಭಾಷೆ ಅಷ್ಟೊಂದು ತಿಳಿಯುತ್ತಿರಲಿಲ್ಲ. ರಾಯಭಾರಿ ಕಚೇರಿಯವರಿಗೆ ದ್ವಿಭಾಷಿಯನ್ನು ಒದಗಿಸುವುದಾಗದಿದ್ದರೂ, ಆ ಬಗೆಗೆ ವೆಚ್ಚ ಕೊಡುವುದಾಗಿ ಒಪ್ಪಿದರು. ಸಮ್ಮೇಲನದ ವ್ಯವಸ್ಥಾಪಕರಿಗೆ ಬಿನ್ನವಿಸಿಕೊಂಡಾಗ, ಅವರು ಒಬ್ಬನನ್ನು ಒದಗಿಸಿದ್ದುದರಿಂದ, ಭಾಗವಹಿಸಲು ಬಹಳ ಸುಲಭವಾಯಿತು. ಸಮ್ಮೇಲನದ ಮುಖ್ಯ ಕಾರ್ಯದರ್ಶಿಗಳು ಒಂದೇ ಮಾಧ್ಯಮವಿದ್ದ ಬಗ್ಗೆ ಕ್ಷಮೆ ಕೇಳಿ, ವಿವಿಧ ಕಾರ್ಯಕ್ರಮಗಳಲ್ಲಿ ಭಾರತೀಯರಿಗೆ ಭಾಗ ವಹಿಸಲು ಅನುಮತಿ ಇತ್ತರು.

ಸಮ್ಮೇಲನದ ನಾಲ್ಕುದಿನಗಳ ಅವಧಿಯಲ್ಲಿ ನಾಲ್ವರೂ ಅತ್ಯಂತ ಅಮೂಲ್ಯವಾದ ಕಾಣಿಕೆಯನ್ನಿತ್ತರಲ್ಲದೇ ಗಣ್ಯ ವ್ಯಕ್ತಿಗಳ ವಿಶೇಷ ಪರಿಚಯವನ್ನು ಮಾಡಿಕೊಂಡರು. ಶ್ರೀ. ಮಿತ್ರ ಅವರು ತಮ್ಮ ಪದ್ಯಗಳನ್ನು ಫ್ರೆಂಚ್ ಭಾಷೆಗೆ ಅನುವಾದಿಸಿದ ಫ್ರೆಂಚ್ ಮಿತ್ರರನ್ನು ಕಂಡು ಕೆಲ ಹೊಸ ಕವನಗಳನ್ನು ಅನುವಾದಕ್ಕೆ ಕೊಟ್ಟರು. ಶ್ರೀ ಮಿತ್ರ ಹಾಗೂ ಸಿದ್ದಿಕ್ವಿಯವರ ಪದ್ಯವಾಚನದ ಧ್ವನಿ ಮುದ್ರಣ ಮಾಡಲಾಯಿತು.

ಶ್ರೀ. ಬಚ್ಚನ್ ಹಾಗೂ ಶ್ರೀ. ಗೋಕಾಕರು ಬಹಳ ಮಹತ್ವದ ಪಾತ್ರವನ್ನು ವಹಿಸಿದ್ದರು. ಕೆಲ ಚರ್ಚೆಗಳಲ್ಲಿ ಭಾಗವಹಿಸಿ, ಭಾರತೀಯ ಸಾಹಿತ್ಯ ಹಾಗೂ ಸಂಸ್ಕೃತಿಗಳ ಕಲ್ಪನೆಯನ್ನು ಸಮ್ಮೇಲನದ ಪ್ರತಿನಿಧಿಗಳಿಗೆ ಮಾಡಿಕೊಟ್ಟರು. ಕಾವ್ಯದ ಬಕ್ಕೆ ಒಂದು ವಿಚಾರ ಸಂಕಿರಣವನ್ನು

ಏರ್ಪಡಿಸಲಾಗಿತ್ತು. ಇಲ್ಲಿ ಒಂದು ಮೋಜಿನ ಮತಭೇದದ ಪ್ರಸಂಗವು ನಡೆಯಿತು. ಒಬ್ಬ ರಶಿಯನ್ ಪ್ರತಿನಿಧಿಯು, ಸೃಷ್ಟಿಯ ಎಂದರೆ ನಕ್ಷತ್ರ ಹಾಗೂ ಮೋಡಗಳ ಬಗ್ಗೆ ಬರೆಯುವ ಕಾವ್ಯದ ಬಗ್ಗೆ ಮಾತಾಡಿದನು. ಈ ವಿಚಾರವನ್ನು ವಿರೋಧಿಸಿ ಇಮ್ಯಾನುಯೆಲ್ ಎಂಬ ಫ್ರೆಂಚ್ ಕವಿಯು ಮಾತನಾಡಿ, ತನ್ನ ಕಾಲ ಹಾಗೂ ತನ್ನ ಭಾವನೆಗಳ ಬಗ್ಗೆ ಸ್ವತಂತ್ರವಾಗಿ ನುಡಿಯಲು ಕವಿಗೆ ಎಲ್ಲ ಸ್ವಾತಂತ್ರ್ಯವಿದೆಯೆಂದೂ ಕವಿಗಳು ತಮ್ಮ ಕಾಲದ ಯೋಗ್ಯ ಪ್ರತಿನಿಧಿಗಳಾದುದರಿಂದ, ವರ್ತಮಾನ ಜಗದ ಬಗ್ಗೆ ಸ್ಪಷ್ಟವಾಗಿ ಬರೆಯಬೇಕೆಂದೂ ಹೇಳಿದರು. ಫ್ರಾನ್ಸ್‌ದೇಶದ ಕೈದಿಗಳಾಗಿರುವ ಅಲ್ಜೀರಿಯಾ ದೇಶದ ಕವಿಗಳ ಬಗ್ಗೆ ಹೇಳುತ್ತ, ಸಮ್ಮೇಳನವು ಅವರಿಗೆ ಸಹಾನುಭೂತಿಯನ್ನು ಘೋಷಿಸಲು ಕೇಳಿಕೊಂಡರು. ಇವರ ಅತ್ಯಂತ ಪ್ರಭಾವಶಾಲಿಯಾದ ಭಾಷಣದಿಂದ ಭಾವಪರವಶರಾದ ಪ್ರತಿನಿಧಿಗಳಲ್ಲಿ ಅನೇಕರು ಎದ್ದು ನಿಂತು ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಪ್ರಕೃತಿ ಹಾಗೂ ಮಾನವ ಇವೆರಡರಲ್ಲಿ ಇರುವ ವಿರೋಧಾಭಾಸವು ಚರ್ಚೆಯ ಕೇಂದ್ರ ವಿಷಯವಾಗಿ ಪರಿಣಮಿಸಿತು. ಇದರಿಂದ ಭಾಗವಹಿಸಿದ ಅನೇಕರಿಗೆ, ಇದರ ಬಗ್ಗೆ ಒಂದಿಲ್ಲ ಒಂದು ಮಾತು ಹೇಳುವುದಿತ್ತು. ಭಾರತದ ಪರವಾಗಿ ಈ ಚರ್ಚೆಯಲ್ಲಿ ಶ್ರೀ. ಬಚ್ಚನರವರು ಭಾಗವಹಿಸುವವರಿದ್ದರು. ಅವರು ಕಾವ್ಯವು ಆನಂದದ ಅಭಿವ್ಯಕ್ತಿಯೆಂದೂ ಅದರ ಶಕ್ತಿಯು ಇಂದು (ಬಾಗಿ)ಒಲೆದು ನಿಂತಿರುವ ಆಧುನಿಕ ನಾಗರಿಕತೆಯ ಗೋಪುರದ ಆಧಾರವಾಗಿದೆ— ' ಎಂದೂ ಭಾಷಣ ಮಾಡಿದರು. ಅಧ್ಯಕ್ಷರು ಶ್ರೀಬಚ್ಚನರ ಭಾಷಣವನ್ನು ಫ್ರೆಂಚ್‌ಭಾಷೆಯಲ್ಲಿ ಸಂಗ್ರಹಿಸಿ ಹೇಳಿದರು

ದಿನಾಂಕ ೫ ಸೆಪ್ಟೆಂಬರ್ ೧೯೫೨ ಸಂಜೆ ಮೆಟರಲಿಂಕ್ ಕವಿಯ ಸನ್ಮಾನಾರ್ಥವಾಗಿ ಒಂದು ಸಭೆಯನ್ನು, ಮಾನ್‌ಸ್ಯುಅರ ಹಾಲ್ಬರು (Monsieur Haulot) ಅತಿ ಉತ್ಸಾಹದಿಂದ ಏರ್ಪಡಿಸಿದ್ದರು. ಮೆಟರಲಿಂಕರವರು ಬರೆದ ಕವಿತೆಗಳನ್ನು ಓದುವುದು ಮತ್ತು ಅವರ ಒಂದೆರಡು ನಾಟಕಗಳನ್ನು ಪ್ರದರ್ಶಿಸುವುದಷ್ಟೇ ನಿಯೋಜಿತ ಕಾರ್ಯಕ್ರಮದಲ್ಲಿತ್ತು. ಯಾವುದೇ ಬಗೆಯ ಭಾಷಣವು ಇರಲಿಲ್ಲ. ನಾಟಕದ ಪ್ರದರ್ಶನವಾದಮೇಲೆ, ಭಾರತದ ಪ್ರತಿನಿಧಿಗಳು ಮೆಟರಲಿಂಕ್‌ರಿಗೆ ತಮ್ಮ ಆದರವನ್ನು ವ್ಯಕ್ತಪಡಿಸಲು ಬಯಸುತ್ತಾರೆ— ಎಂಬ ಸೂಚನೆಯನ್ನು ಮಾನಸ್ಯುಅರ್ ಹಾಲ್ಬರು ಅಧ್ಯಕ್ಷರಿಗೆ ಸೂಚಿಸಿದಾಗ, ಅದನ್ನು ಅನುಮೋದಿಸಿದರು. ಭಾರತದ ಪ್ರತಿನಿಧಿಗಳ ಪರವಾಗಿ ಶ್ರೀ. ವಿ. ಕೃ. ಗೋಕಾಕರು ಮಾತನಾಡಬೇಕೆಂದು ಗೊತ್ತಾಯಿತು. ಮಾನಸ್ಯುಅರ್ ಹಾಲ್ಬರು ಶ್ರೀಗೋಕಾಕರಿಗೆ ತಮ್ಮ ಭಾಷಣ ಬರೆದುಕೊಡಲು ಹೇಳಿದರು. ಇದರಿಂದ ಶಬ್ದಶಃ ಅನುವಾದ ಮಾಡಲು ಅವರಿಗೆ ಅನುಕೂಲವಾಯಿತು. ಇಲ್ಲಿ ಒಂದು ಚಿಕ್ಕ ನಾಟಕವೇ ನಡೆಯಿತೆನ್ನಲು ಅಡ್ಡಿ ಇಲ್ಲ. ಭಾರತದ ನಾಲ್ವರೂ ಪ್ರತಿನಿಧಿಗಳು ವೇದಿಕೆಯ ಮೇಲೆ ಒಬ್ಬರ ಹಿಂದೊಬ್ಬರು ಪ್ರವೇಶಿಸಿ, ಭಾರತೀಯ ಪದ್ಧತಿಯಂತೆ ಕೈಮುಗಿದರು. ಆದಾದ ಮೇಲೆ ಮಾನ್‌ಸ್ಯುಅರ್ ಹಾಲ್ಬರು ಭಾಷಣದ ಲಿಖಿತ ಪ್ರತಿಯೊಡನೆ ಅನುವಾದಕ್ಕೆ ಸಿದ್ಧರಾಗಿ ನಿಂತರು. ಭಾಷಣದ ಅನುವಾದವಿಂತಿದೆ:—

"ಜಗತ್ತಿನಲ್ಲಿಯ ದೊಡ್ಡ ಲೇಖಕರ ಮಾಲೆಯಲ್ಲಿ ಸೇರುವ ಮೆಟರಲಿಂಕ್ ಕವಿಯ ಬಗ್ಗೆ ಭಾರತದ ಲೇಖಕರ ಪರವಾಗಿ ಗೌರವ ಹಾಗೂ ಪೂಜ್ಯಭಾವನೆಯನ್ನು ವ್ಯಕ್ತಪಡಿಸಲು ನನಗೆ ಅತ್ಯಂತ ಸಂತೋಷವಾಗುತ್ತದೆ. ಭಾರತೀಯ ಸಾಹಿತ್ಯದ ಪುನರುಜ್ಜೀವನದ ಕಾಲದಲ್ಲಿ ಮೂಲ ಪ್ರಭಾವವನ್ನು ಬೀರಿದ ಮೆಲಾರ್ಮೆ, ಟಿ. ಎಸ್. ಈಲಿಯಟ್, ಜಿಬ್ರಾನ್ ಮತ್ತು ಯೀಟ್ಸ್ ಮುಂತಾದ ಕವಿಗಳಲ್ಲಿ ಇವರೂ ಒಬ್ಬರಾಗಿದ್ದಾರೆ. ಮೆಟರಲಿಂಕರವರ ಸಾಹಿತ್ಯವು ಕಾವ್ಯ, ನಾಟಕ, ತತ್ತ್ವಜ್ಞಾನ ಮತ್ತು ವಿಜ್ಞಾನ ಹೀಗೆ ನಾಲ್ಕು ವಿಭಾಗಗಳಲ್ಲಿ ಇದೆ ಎಂದು ದ್ವೈವಾರ್ಷಿಕ ವರದಿಯಲ್ಲಿ ಅಚ್ಚಾದ ಬೆಲ್‌ಜಿಯನ್ ಸಾಹಿತ್ಯದ ಬಗ್ಗೆ ಇರುವ ಲೇಖನದಲ್ಲಿ ಹೇಳಿದೆ. ಹೀಗೆ ವಿಂಗಡಿಸುವುದು ಸರಿಯಲ್ಲ. ಇವರು ಬರೆದ ಎಲ್ಲ ವಿಭಾಗಗಳಲ್ಲಿಯೂ ದೃಷ್ಟಾರರ ಸ್ವಯಂಪೂರ್ಣತೆ ಸಾಕ್ಷೀಭೂತವಾಗಿದೆ. ಎಲ್ಲೆಡೆಗೂ ಸಂಪೂರ್ಣ ವ್ಯಕ್ತಿತ್ವವೇ ಮಿಡಿಯುತ್ತದೆ. ಭೃಂಗದ ಜೀವನದಲ್ಲಿ ಕಾಣುವ ಅನಂತ ಕುತೂಹಲ, ಆತ್ಮದ ಉಕ್ತಿ ಹಾಗೂ ವ್ಯಾಪಾರಗಳಿಗೆ ಓಗೊಡುವ ಅತ್ಯಂತ ಸೂಕ್ಷ್ಮ ಕವಿ, ಸ್ನೇಹದ ಬಗ್ಗೆ ಇರುವ ಅದ್ವಿತೀಯ ಜ್ಞಾನ ಹಾಗೂ ಧ್ಯಾನಾಸಕ್ತಿ ಮತ್ತು ಮಾನವನ ಅಂತಿಮೋದ್ದೇಶ, ಇವೆಲ್ಲವುಗಳೂ ಇವರ ಕಾವ್ಯ ಹಾಗೂ ನಾಟಕಗಳಲ್ಲಿ ಕಂಡುಬರುವ ಒಂದೇ ಅಂತಃಸತ್ತ್ವ—ವ್ಯಕ್ತಿತ್ವಗಳ ಬಹುಮುಖಿವಾಗಿವೆ.

'ಕವಿಗಳು ನಿನ್ನೆಯವರೋ, ಇಂದಿನವರೋ, ನಾಳೆಯವರೋ'— ಎಂಬ ಬಗ್ಗೆ ಸಾಕಷ್ಟು ಚರ್ಚೆಯು ನಡೆದಿದೆ. ಆದರೆ ಕವಿಗಳು ತಮ್ಮ ಕಾಲದ ಮಕ್ಕಳು ಎಂಬುದು ನಿಸ್ಸಂದೇಹ; ಆದರೆ ಅವರು ಸದಾ ಕಾಲದ ಶಿಶುಗಳೂ ಆಹುದು. ನಾವು ತಂದೆಯನ್ನು ನುರಿತು ತಾಯಿಯನ್ನಷ್ಟೇ ಗಮನಿಸಬಾರದು. ಆದ್ದರಿಂದ ಕವಿಗಳನ್ನು ಕಾಲಾನುಕ್ರಮವಾಗಿ ವಿಭಜಿಸುವುದರ ಬದಲಾಗಿ ಅವರ ಮೂಲಭೂತ ಸತ್ತ್ವಕ್ಕನುಗುಣವಾಗಿ ವಿಭಜಿಸಿದರೆ ಹೆಚ್ಚು ಸಹಕಾರಿಯಾದೀತು.

ಮೊದಲನೆಯದಾಗಿ ರಾಗದ (Passion) ಸಮ್ರಾಟರಾಗಿ ಶೇಕ್ಸಪಿಯರ್ ಹಾಗೂ ವ್ಹಿಕ್ಟರ್ ಹ್ಯೂಗೋಗಳಿದ್ದಾರೆ. ಮೋಹಜಾಲಕ್ಕೆ ಮರುಳಾಗುವ ಸಾಮಾನ್ಯ ಮಾನವನನ್ನು ರಾಗದ ತಿರುಗಣಿ ಮಡುವಿನೆಡೆ ಕರೆದೊಯ್ಯುತ್ತಾರೆ. ಈ ಉಲ್ಲೋಲ ಕಲ್ಲೋಲದಿಂದಲೇ ಆತ್ಮದ ಪ್ರಶಾಂತ ಮಧ್ಯದೆಡೆಗೆ ಕರೆದು ಶಾಶ್ವತ ಶಾಂತಿಯೆಡೆ ಒಯ್ಯುತ್ತಾರೆ.

ಇನ್ನು ಆತ್ಮದ ಕೊಲಂಬಸರೂ ಇದ್ದಾರೆ. ಇವರು ಮಾನವನ ಅಂತಃಪ್ರಜ್ಞೆಯ ಆಳವಾದ ಹಾಗೂ ಎತ್ತರದ ಪದರುಗಳನ್ನು ಪರಿಶೋಧಿಸುವರು. ಈ ಗುಂಪಿನಲ್ಲಿ ಬ್ಲೇಕ್, ಟಾಗೋರ ಮತ್ತು ಮೆಟರ್‌ಲಿಂಕ್ ಮುಂತಾದವರು ಸೇರುತ್ತಾರೆ. ಶಾಂತಿಯನ್ನು ಪಡೆದು ದೀಪ್ತಿ ಹಾಗೂ ಆನಂದದ ಅನಂತ ವೈವಿಧ್ಯಗಳನ್ನು ಪರಿಶೋಧಿಸುವ ಕುತೂಹಲವುಳ್ಳವರಿಗೆ ಇವರು ತಮ್ಮ ಪ್ರಭಾವವನ್ನು ಬೀರುತ್ತಾರೆ. ಇವರು ಮಾನವನ ಅಂತಃಪ್ರಜ್ಞೆಯ ಸಾಮ್ರಾಜ್ಯದ ಗಡಿಯನ್ನು ವಿಸ್ತರಿಸಿ ಎತ್ತರವನ್ನು ಹೆಚ್ಚಿಸುತ್ತಾರೆ.

ಭಗವದ್ಗೀತೆಯು ಹೇಳುವ ವಿಶ್ವವೆಂದರೆ ಪುರಾತನ ಅಶ್ವತ್ಥವೃಕ್ಷ. ಇದರ ಬೇರುಗಳು ಹವೆಯಲ್ಲಿ ಮೇಲಿನ್ನು ತೊಂಗೆ—ಎಲೆಗಳು ನೆಲದೆಡೆ ಇರುವವು. ನಾವೆಲ್ಲ ಎಲೆಗಳು—ರಾಷ್ಟ್ರಗಳೇ ಟೊಂಗೆಗಳು.

ಈ ಪುರಾತನ ವೃಕ್ಷದ ಬೇರುಗಳು ಐದು. ಸೌಂದರ್ಯ, ಜ್ಞಾನ, ಕಲ್ಯಾಣ, ಪ್ರೀತಿ ಮತ್ತು ಶಕ್ತಿ. ಕೊನೆಯ ಬೇರಾದ ಶಕ್ತಿಯು ರಾಜಕಾರಣಿಗಳಿಂದ ದುರುಪಯೋಗಕ್ಕೆ ಒಳಗಾಗಿದೆ. ಆದರೆ ಕವಿಗಳು ಈಗ ಕೂಡ ಇದನ್ನು ಉಪಯೋಗಿಸುತ್ತಿದ್ದಾರೆ. ಇರವಿನ ಅನಂತ ಶಕ್ತಿ ಎಂಬ ಸ್ವರ್ಗದಿಂದ ಅಂತಃಪ್ರಜ್ಞೆ, ಪರಮಾನಂದ ಎಂಬ ಸತ್ತ್ವವನ್ನು ಕವಿಗಳು ವಿಶ್ವಕ್ಕೆ ನೀಡುತ್ತ, ಪೋಷಿಸುತ್ತ ಬಂದಿದ್ದಾರೆ. ಈ ಎಲ್ಲ ಬೇರುಗಳಿಂದ ಸತ್ತ್ವವನ್ನು ಹೀರಿ, ಅದರಿಂದ ಮಾನವಕುಲವನ್ನು ಹೆಚ್ಚು ಸತ್ತ್ವಶಾಲಿಯಾಗಿ ಮಾಡಿದ್ದರಿಂದ, ಮೆಟರಲಿಂಕನು ಮಾಹಾನ್ ವ್ಯಕ್ತಿಯಾಗಿದ್ದಾನೆ.

ಕೊನೆಯದಾಗಿ ನಾನು ಮೆಟರಲಿಂಕ್ ಕವಿಯ 'Blue Bird' ಎಂಬ ಪದ್ಯದಿಂದ ಪ್ರೇರಿತವಾಗಿ ಕನ್ನಡದಲ್ಲಿ ಬರೆದ 'ರತ್ನಪಕ್ಷಿ' ಎಂಬ ಗೀತನಾಟಕದ ಕೊನೆಯ ಪದ್ಯಭಾಗವನ್ನು ಓದಿ ಮುಗಿಸುತ್ತೇನೆ. ಈ ಹಾಡಿನಿಂದ ನಾಟಕ ಮುಗಿಯುತ್ತದೆ. ಮಾನವತೆಗೆ ಕರೆ ಇಲ್ಲಿದೆ. ನಾನು ಇಲ್ಲಿ ಇಂಗ್ಲೀಷ್ ಅನುವಾದ ಕೊಡುವೆ:

"Scatter worn-out creeds to the winds,
Plung headlong into the flames of suffering
And reap from them the harvest of endless light
You have set your heart on the bird of Paradise.
A dream is on your brows, transfiguring your life.

Why not pursue it for ever and ever and ever?
Attune yourself to the world around you,
Forget the pomp and pride that lie writhing in the dust
Put your trust in the beauty that is to come,
and pursue it for ever and ever and ever!"

ಭಾಷಣವು ಮುಗಿದ ಮೇಲೆ ಶ್ರೀ. ಗೋಕಾಕರು ಮೇಲೆ ಉದ್ಧರಿಸಿದ ಪದ್ಯವಿದ್ದ 'Song of Life' ಎಂಬ ಅವರ ಕವನಸಂಕಲನವನ್ನು ಮಾನ್‌ಸ್ಯು ಅರ್ ಹಾಲ್ಬರಿಗೆ, ಮೆಟರಲಿಂಕನ ಬಗ್ಗೆ ಭಾರತ ಬೆಲ್‌ಜಿಯಮ್‌ಕ್ಕೆ ನೀಡುವ ಕಾಣಿಕೆಯೆಂದು ಕೊಟ್ಟರು. ಈ ಕಾರ್ಯಕ್ರಮದಿಂದ ಪ್ರೇಕ್ಷಕರೆಲ್ಲ ಬಹಳೇ ಆನಂದಾಶ್ಚರ್ಯಗಳಿಂದ ಕೂಡಿದವರಾದರು. ಅಲ್ಲದೆ ಶ್ರೀ. ಗೋಕಾಕರಿಗೆ ಅನೇಕ ಹೊಸ ಲೇಖಕರ ವಿಶೇಷ ಪರಿಚಯ ಉಂಟಾಯಿತು.

ಇನ್ನೊಂದು ಮಹತ್ತ್ವದ ವಿಷಯವೆಂದರೆ: ಒಂದು ವಿಚಾರ ಸಂಕಿರಣದಲ್ಲಿ ಶ್ರೀ. ಗೋಕಾಕರು ಭಾಗವಹಿಸಿದುದು. ೬ನೆಯ ಸಪ್ಟೆಂಬರ್ ದಿನ ಎರಡು ವಿಚಾರ ಸಂಕಿರಣಗಳನ್ನೇರ್ಪಡಿಸಿದ್ದರು. ಒಂದು ಕಾವ್ಯದ ಪರಂಪರೆಯ ಬಗ್ಗೆ ಇದ್ದರೆ, ಇನ್ನೊಂದು ಕಾವ್ಯವನ್ನು ಕಲಿಸುವುದರ ಬಗ್ಗೆ ಇತ್ತು. ಇವರು ಕಲಿಸುವುದರೆಡೆ ಒಲಿದು ೨ನೆಯ ವಿಚಾರದಲ್ಲಿ ಭಾಗವಹಿಸಿದರು. ಶ್ರೀ. ವಿ. ಕೃ. ಗೋಕಾಕರನ್ನು ಕಂಡೊಡನೆಯೇ, ನಿನ್ನೆಯ ಭಾಷಣದ ಗುರುತಿನಿಂದ ಇವರ ಬಗ್ಗೆ ಗೌರವ ಕುತೂಹಲ ಉಂಟಾಗಿದ್ದುವು. ಎಲ್ಲರ ಲಕ್ಷ್ಯ ಭಾರತದೆಡೆ—ಶ್ರೀ. ವಿ. ನಾಯಕರೆಡೆ ಒಲಿದುದಲ್ಲದೆ, ಎಲ್ಲರೂ ಇವರ ಮೇಲೆ ಪ್ರಶ್ನೆಗಳ ಮಳೆಗರೆದುದರಿಂದ, ಚರ್ಚೆಯ ಕೇಂದ್ರವ್ಯಕ್ತಿ ಇವರಾದರು. ಇವರಲ್ಲಿ ಒಬ್ಬರಿಗೆ ಇಂಗ್ಲೀಷ್ ಭಾಷೆ ಚೆನ್ನಾಗಿ ಬರುತ್ತಿದ್ದುದರಿಂದ, ವಿಚಾರ ವಿನಿಮಯಕ್ಕೆ ಬಹಳೇ ಸಹಾಯಕಾರಿಯಾಯಿತು.

ಮೊದಲನೆಯದಾಗಿ ಅವರೆಲ್ಲ ಭಾರತೀಯ ಸಾಹಿತ್ಯ ಹಾಗೂ ಅದರ ಆಧುನಿಕ ರೂಪದ ಬಗ್ಗೆ ತಿಳಿಯಬಯಿಸಿದರು. ಶ್ರೀ. ಗೋಕಾಕರು ಸಂಕ್ಷಿಪ್ತವಾಗಿ ಭಾರತೀಯ ಸಾಹಿತ್ಯದ ಪುನರುಜ್ಜೀವನ—ಪಾಶ್ಚಾತ್ಯ ಪ್ರಭಾವ ಹಾಗೂ ಸಾಹಿತ್ಯದ ನುಧ್ಯಮತರಗತಿಯ ರೂಪಗಳಾದ ಕಾದಂಬರಿ, ಪ್ರಬಂಧ ಮುಂತಾದುವುಗಳ ಬೆಳೆವಣಿಗೆಯ ಬಗ್ಗೆ ಹೇಳಿದರು. ಮುಂದಿನ ಪ್ರಶ್ನೆಗಳ ಉತ್ತರವನ್ನೆ ಪ್ರಶ್ನೋತ್ತರ ರೀತಿಯಲ್ಲೇ ಕೊಟ್ಟರೆ ಹೆಚ್ಚು ಆಕರ್ಷಕವಾದೀತೆಂದೆನಿಸುತ್ತದೆ:

ಪ್ರ:— ಕಾವ್ಯವನ್ನು ಕಲಿಸುವಾಗ ಶ್ರವಣ-ವೀಕ್ಷಣ ಸಾಧನಗಳ (Audio-Visualaids) ಉಪಯೋಗವನ್ನು ಮಾಡುವಿರಾ?

ಉತ್ತರ:— ಇಂತಹದು ಕೆಲವೇ ಕೇಂದ್ರಗಳಲ್ಲಿದೆ— ಆದರೆ ಶಿಕ್ಷಕರು ತಮ್ಮದೇ ಆದ ತಂತ್ರವನ್ನು ಅನುಸರಿಸುವರು.

ಪ್ರಶ್ನೆ:— ನಿಮ್ಮ ಶಾಲೆಗಳಲ್ಲಿ ಶಿಕ್ಷಕನೊಬ್ಬನ ಹತ್ತಿರ ಮಾತ್ರ ಪದ್ಯದ ಪುಸ್ತಕವಿರುವುದೋ ಅಥವಾ, ಎಲ್ಲ ವಿದ್ಯಾರ್ಥಿಗಳ ಹತ್ತಿರವೂ ಒಂದೊಂದು ಪ್ರತಿ ಇರುವುದೋ?

ಉತ್ತರ:— (ಈ ಪ್ರಶ್ನೆ ಭಾರತೀಯರ ಬಡತನವನ್ನುದ್ದೇಶಿಸಿ ಕೇಳಿದಂತಿತ್ತು.) ಪ್ರತಿಯೊಬ್ಬ ವಿದ್ಯಾರ್ಥಿಯ ಹತ್ತಿರವೂ ಒಂದೊಂದು ಪ್ರತಿ ಇರುತ್ತದೆ. ವಿದ್ಯಾರ್ಥಿ ಬಹಳೇ ಬಡವನಾಗಿದ್ದರೆ, ಶಾಲೆಯವರು ಏನಾದರೂ ವ್ಯವಸ್ಥೆ ಮಾಡಿ ಕೊರತೆ ಹಿಂಗುವಂತೆ ಮಾಡುತ್ತಾರೆ.

ಪ್ರಶ್ನೆ:— ಯಾವ ಮಟ್ಟದಲ್ಲಿ ಕವಿತೆಗಳನ್ನು ಭಾರತದಲ್ಲಿ ಕಲಿಸುತ್ತೀರಿ?

ಉತ್ತರ:— ಪ್ರಾಥಮಿಕ ಮಟ್ಟದಲ್ಲಿ ಪ್ರಾದೇಶಿಕ ಭಾಷೆಯ ಕವಿತೆಗಳನ್ನೂ, ಮಾಧ್ಯಮಿಕ ಮಟ್ಟಕ್ಕೆ ಪ್ರಾದೇಶಿಕ ಭಾಷೆ, ಹಿಂದೀ, ಇಂಗ್ಲೀಷ್ ಕವಿತೆಗಳನ್ನೂ, ವಿದ್ಯಾರ್ಥಿಯು ಐಚ್ಛಿಕವಾಗಿ ತೆಗೆದುಕೊಂಡಲ್ಲಿ ಸಂಸ್ಕೃತ ಅಥವಾ ಆಧುನಿಕ ಯುರೋಪಿಯನ್ ಭಾಷೆಗಳ ಕಾವ್ಯವನ್ನೂ ವಿಶ್ವವಿದ್ಯಾಲಯ ಮಟ್ಟದಲ್ಲಿ ಕಲಿಸಲಾಗುವುದು.

ಪ್ರಶ್ನೆ:— ಭಾರತೀಯ ಭಾಷೆಗಳಲ್ಲಿ ಮಕ್ಕಳಿಗಾಗಿ ಬರೆದ ಕಾವ್ಯ ವಿದೆಯೆ?

ಉತ್ತರ:— ಸಾಕಷ್ಟು ದೊರೆಯುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ ಕಾವ್ಯದಲ್ಲಿ ಮಕ್ಕಳದು ಹಿರಿಯರದು ಎಂದ ಇಚ್ಛಾನುಸಾರವಾಗಿ ವಿಭಾಗಗಳನ್ನು ಮಾಡುವುದು ಸರಿಯಲ್ಲ. ಮಕ್ಕಳಿಗೆ ಅವರವರ ಅನುಭವದ ಕಕ್ಷೆಯಲ್ಲಿರುವ ಉತ್ತಮ ಕಾವ್ಯವನ್ನು ಕಲಿಸುವುದೇ ಮುಖ್ಯ ಧ್ಯೇಯ. ಅದು ಅವರಿಗಾಗಿ ಬರೆದಿರಲಿ ಅಥವಾ ಬಿಟ್ಟರೇ

ಪ್ರಶ್ನೆ:—ನಿಮ್ಮ ಶಾಲೆಗಳಲ್ಲಿ ಕಥನಕವನಗಳನ್ನು ಕಲಿಸುವರೇ?

ಉತ್ತರ:— ನಮ್ಮಲ್ಲಿ ಸಾಕಷ್ಟು ಕಥನ ಕವನಗಳಿವೆ. ಈಗ ಕೂಡ ಆಧುನಿಕ ಸಾಹಿತ್ಯಕರು ಬರೆಯುತ್ತಿದ್ದಾರೆ. ಇವನ್ನು ನಮ್ಮ ಶಾಲೆಗಳಲ್ಲಿ ಕಲಿಸುತ್ತೇವೆ. ಆದರೆ ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ, ಕಥನಕವನಗಳನ್ನು ಕಲಿಯುವಾಗ ಮಕ್ಕಳು ಕೇವಲ ಕಥೆಯಿಂದ ಮೋಹಿತರಾಗಿ ಅದರ ಕಾವ್ಯಭಾಗವನ್ನು ಬಿಟ್ಟುಬಿಡುತ್ತಾರೆ. ಇದರಿಂದ ಕಾವ್ಯಕಲಿಸುವುದರ ಬದಲು 'ಫಿಕ್ಶನ್' ಕಲಿಸಿದಂತಾಗುವುದು. ಆದ್ದರಿಂದ ಶಾಲೆಯಲ್ಲಿ ಕಥನಕವನ ಕಲಿಸಬೇಕೇ ಆದಲ್ಲಿ, ಗೇಯವಾಗಿಯೂ ಸ್ವಯಂಪೂರ್ಣ ಕಾವ್ಯಗುಣವುಳ್ಳ ಕವನಗಳನ್ನೇ ಆರಿಸಬೇಕು.

ಪ್ರಶ್ನೆ:— ಸೃಷ್ಟ್ಯಾತ್ಮಕ ಭಾವಾಭಿವ್ಯಕ್ತಿಯ ಕಲೆಯನ್ನು ಕಲಿಸುವ ವಿಧಾನವು ನಿಮ್ಮ ಶಾಲೆಗಳಲ್ಲಿ ಇದೆಯೆ?

ಉತ್ತರ:— ಇದೊಂದು ನಮ್ಮಲ್ಲಿಯ ಕೊರತೆ. ಆದರೂ ಕೂಡ ಆಗಾಗ ಆಸಕ್ತಿಯುಳ್ಳ ವಿದ್ಯಾರ್ಥಿಗಳೊಂದಿಗೆ ಸೂಕ್ಷ್ಮ ಪ್ರಜ್ಞೆಯುಳ್ಳ ಉಪಾಧ್ಯಾಯರು, ಇಂಥ ಕೆಲಸವನ್ನು ಶಾಲೆಯ ಹೊರಗೆ ಮಾಡುತ್ತಾರೆ.

ಪ್ರಶ್ನೆ:— ನಿಮ್ಮ ಶಾಲೆಗಳಲ್ಲಿ ಕವಿತೆಯನ್ನು ಕಲಿಸುವಾಗ ಯಾವ ವಿಧಾನವನ್ನ ಅನುಸರಿಸುತ್ತೀರಿ.

ಉತ್ತರ:—ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ, ಉಪಾಧ್ಯಾಯನು ಕಲಿಸುವ ಕವಿತೆಯಲ್ಲಿಯ ದರ್ಶನದ ಬಗ್ಗೆ ಕೇಂದ್ರೀಕರಿಸಬೇಕು. ತಾಳ, ಶೈಲಿ; ಪ್ರತಿಮೆ, ವಿಚಾರಬಂಧ ಇವೆಲ್ಲ ಮೂಲದರ್ಶನವನ್ನು ಪ್ರತಿಪಾದಿಸಲು ಸಹಕರಿಸುವುದರಿಂದ ಅದರಷ್ಟು ಮುಖ್ಯವಲ್ಲ.

ಪ್ರಶ್ನೆ:— ನೀವು ಕವಿತೆಗಳನ್ನು ವಿದ್ಯಾರ್ಥಿಗಳಿಗೆ ಹೇಗೆ ತಿಳಿಸುತ್ತೀರಿ?

ಉತ್ತರ:—ನನಗೆ ಕವಿತೆಯು ತಟ್ಟಿದರೆ, ವಿದ್ಯಾರ್ಥಿಗಳ ಮನಕ್ಕೂ ತಟ್ಟುವಂತೆ ಮಾಡುವಲ್ಲಿ ಹೇಗೋ ಯಶಸ್ವಿಯಾಗುವೆ. ಕವಿತೆಯನ್ನೋದುವ ರೀತಿಗತಿಯಲ್ಲಿ ನಾಲ್ಕು ವಿಧದ ವಿದ್ಯಾರ್ಥಿಗಳನ್ನು ಕಾಣಬಹುದು. ೧) ನಾನು ಓದಿದೊಡನೆಯೆ ಒಳ್ಳೆಯ ಪ್ರತಿಕ್ರಿಯೆಯನ್ನು ತೋರಿಸಿ ಅದರ ಇಂದ್ರಜಾಲಕ್ಕೆ ತಮ್ಮನ್ನೇ ಒಪ್ಪಿಸುವವರು. ೨) ತಮ್ಮ ಆಸಕ್ತಿ ಕಲಮಟ್ಟಿಗೆ ಕೆರಳಿ ನಿಧಾನವಾಗಿ ಕಾವ್ಯದ ಅಂತರಾಳವನ್ನು ಅನುಭವಿಸುವಂತಹರು. ೩) ಕವನದಿಂದ--ಅದರ ಭಾವ ಪ್ರತಿಪಾದನೆಯಿಂದ ಮನಸೋತರೂ ಕೂಡ ಈ ದಾರಿಯು ಅಸ್ವಾಭಾವಿಕವೂ, ತರ್ಕಬಾಹಿರವೂ ಆಗಿದ್ದು ಅತ್ಯಂತ ಅಪಾಯಕಾರಿ ಎಂದು ಭಾವಿಸುವವರು ಇವರು ಅನಂತರ ಉಪಾಧ್ಯಾಯನಿಂದ ಮತ್ತು ಕವಿತೆಯಿಂದ ದೂರವಿರಲು ಪ್ರಯತ್ನಿಸುವರು. ೪) ಕವಿತೆಯ ಬಗ್ಗೆ ಪೂರ್ಣ ಅನಾಸಕ್ತರಾದವರೂ ಯಾವುದೇ ವಿಧಾನದಿಂದ ಮೆಚ್ಚುವಂತೆ ಮಾಡಲು ಅಸಾಧ್ಯವಾದವರು.

ಪ್ರಶ್ನೆ:— ನಿಮ್ಮ ಶಾಲೆಯಲ್ಲಿ ಕಲಿಸುವ ಒಂದು ಕವಿತೆಯನ್ನು ನೀವು ಉದ್ಧರಿಸಬಲ್ಲಿರಾ?

ಒಂದು ನಿಮಿಷ ವಿಚಾರಿಸಿ ಶ್ರೀ. ಗೋಕಾಕರು ಶ್ರೀ. ಬೇಂದ್ರೆಯವರ 'ನನ್ನಕೆನ್ನರಿ' ಎಂಬ ಕನ್ನಡ ಕವಿತೆಯನ್ನು ಆಂದು ತೋರಿಸಿದರು.

ಈ ಕವಿತೆಯನ್ನು ಶ್ರೀ. ಗೋಕಾಕರು ರಾಗ ತೆಗೆದು ಆಂದಾಗ, ಇದರ ತಾಳ-ಲಯಕ್ಕೆ ಅನೇಕರು ಮನಸೋತರಲ್ಲದೆ, ಹೀಗೆ ದನಿ ತೆಗೆದು ಆಂದ ಕಾರಣ ಕೇಳಿದರು. 'ಆಗ ಉತ್ತರಿಸುತ್ತ " ಕವಿತೆಯು ಮುಕ್ತ ಛಂದ ಅಥವಾ ನವ್ಯ ಜಾತಿಗೆ ಸೇರಿದ್ದು ಇಲ್ಲದಿದ್ದರೆ, ಇವನ್ನು ದನಿ ತೆಗೆದು ಅನ್ನುವದೇ ಪದ್ಧತಿಯಾಗಿದೆ' ಎಂದರು. ಇದನ್ನು ಮೇಲಿಂದ ಮೇಲೆ ಅನ್ನಿಸಿ ಪ್ರತಿನಿಧಿಗಳು ಆನಂದಿಸಿದರು.

ಈ ವಿಚಾರಸಂಕೀರ್ಣದಲ್ಲಿ ಶ್ರೀ. ವಿನಾಯಕರೇ ಕೇಂದ್ರವ್ಯಕ್ತಿಯಾಗಿ ಪರಿಣಮಿಸಿದ್ದರಿಂದ, ಕಾರ್ಯಕಲಾಪಗಳಿಗೆ ಅನುಗುಣವಾಗಿ ವರದಿಯನ್ನು ಹೇಗೆ ಸಿದ್ಧ ಪಡಿಸುವರೆಂಬುದು ಒಂದು ಕುತೂಹಲದ ಸಂಗತಿಯೇ. ಬೇರೆ ಪ್ರತಿನಿಧಿಗಳು ಈ ಚರ್ಚೆಯಲ್ಲಿ ಯಾವುದೇ ವಿಚಾರದ ಕಾಣಿಕೆ ಸಲ್ಲಿಸದೆ, ಪ್ರಶ್ನೆಯನ್ನು ಕೇಳುವುದರಲ್ಲಿಯೇ ಸಂತೋಷ ಗೊಂಡಂತೆ ಕಂಡು ಬರುವಂತಿದೆ. ಶ್ರೀ. ಗೋಕಾಕರಿಗೆ ಅಚ್ಚರಿಯನ್ನುಂಟು ಮಾಡಿದ ಹಾಗೂ ಕನ್ನಡದ ಲೇಖಕರೆಲ್ಲ ಅತ್ಯಂತ ಹೆಮ್ಮೆಪಟ್ಟು ಕೊಳ್ಳಬಹುದಾದ ಒಂದು ಸಂಗತಿಯನ್ನಿಲ್ಲಿ ಬರೆಯಬಹುದು. ಅದೆಂದರೆ, ಎಲ್ಲ ಪ್ರತಿನಿಧಿಗಳು ಕೂಡಿ ಮರುದಿನ ಮುಂಜಾನೆ, ತಮ್ಮ ಅಂಕಿತದಿಂದೊಳಗೊಂಡ ಒಂದೇ ಒಂದು ಗೊತ್ತುವಳಿಯ ಪ್ರತಿಯನ್ನು ಶ್ರೀ. ವಿನಾಯಕರ ಕೈಯಲ್ಲಿತ್ತುದಾಗಿದೆ. ಅದರ ಅನುವಾದವಿಂತಿದೆ:

" ನಾಲ್ಕನೆಯ ಆಂತರರಾಷ್ಟ್ರೀಯ ದ್ವೈವಾರ್ಷಿಕ ಕವಿಸಮ್ಮೇಲನದ ಶಿಕ್ಷಣ ಸಮಿತಿಯು, ಭಾರತದ ಕವಿಗಳಾದ ಹಾಗೂ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಹೈದರಾಬಾದಿನ ಡೈರೆಕ್ಟರರಾದ ಶ್ರೀ. ಗೋಕಾಕರ ಮಹತ್ವಪೂರ್ಣವಾದ ಕಾಣಿಕೆಗಳನ್ನು ಗಮನಕ್ಕೆ ತರುತ್ತದೆ. ಭಾರತದ ಶಿಕ್ಷಣದಲ್ಲಿ ಕಾವ್ಯವು ಎಲ್ಲ ಮಟ್ಟಗಳಲ್ಲಿಯೂ ವಿಶೇಷ ಶಿಕ್ಷಣದ ವಿಷಯವಾಗಿದೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಹೀಗಿರುವುದಿಲ್ಲ. ಈ ಮುಖ್ಯವಾದ ಕ್ಷೇತ್ರವಲ್ಲಿ ಯಾವುದನ್ನೂ ಸಾಧಿಸಿಲ್ಲ. ಕಳೆದ ಸಮ್ಮೇಲನದ ಗೊತ್ತುವಳಿಯಾದ— " ಕವಿತೆಯನ್ನು ಕಲಿಸುವುದಕ್ಕಾಗಿ ಪಾಠಕ್ರಮದ ಒಜ್ಜೆಯನ್ನು ಕಡಿಮೆ ಮಾಡಬೇಕು. " ಎಂಬುದನ್ನು ಅನುಮೋದಿಸಿ ಕಾವ್ಯವನ್ನು ಸಂಗೀತ, ಕಲೆ, ವ್ಯಾಯಾಮ ಇವುಗಳನ್ನು ಕಲಿಸುವಂತೆ ನುರಿತ ಶಿಕ್ಷಕರಿಂದ ಎಲ್ಲ ವಯಸ್ಸಿನ ವಿದ್ಯಾರ್ಥಿಗಳಿಗೂ ಕಲಿಸಬೇಕು. ಕವಿತೆಯು ಯಾಂತ್ರಿಕ ಗಿಳಿ ಪಾಠವಾಗಿ ಅಥವಾ ಶುಷ್ಕ ಪಾಠ, ಪ್ರವಚನವಾಗಿ ಪರಿಣಮಿಸಬಾರದು.

....''

ಇದರ ಕೆಳಗೆ, ಭಾಗವಹಿಸಿದ ಎಲ್ಲ ಪ್ರತಿನಿಧಿಗಳ ಹಸ್ತಾಕ್ಷರವಿದೆ.

ಮೇಲ್ಕಂಡ ಗೊತ್ತುವಳಿಯನ್ನು ಕಂಡರೆ ಕಾವ್ಯವು ಭಾರತದ ಶಾಲೆಗಳಲ್ಲಿ ಎಲ್ಲ ಮಟ್ಟಗಳಲ್ಲಿಯೂ ವಿಶೇಷ ಶಿಕ್ಷಣ ವಿಷಯವೆಂದು ಭಾಸವಾಗುತ್ತದೆ; ಆದರೆ ನಮ್ಮ ದೇಶದಲ್ಲಿ ಇದು ವಸ್ತುಸ್ಥಿತಿಯಾಗಿಲ್ಲ. ಮೇಲಿನ ಪ್ರಶ್ನೋತ್ತರಗಳನ್ನು ನೋಡಿದರೆ ಶ್ರೀ. ವಿನಾಯಕರು ಇಂಥ ಒಂದು ಅಭಿಪ್ರಾಯವನ್ನು ತಳೆಯಲು ಪ್ರಭಾವಿಸಿದ ಹಾಗೆ ಕಂಡು ಬರುವುದಿಲ್ಲ. ಆವರೆಲ್ಲರೂ ಈ ಚರ್ಚೆಯನ್ನು ಕುರಿತು ಆನಂದಿಸಿದ್ದರಿಂದ, ಗೊತ್ತುವಳಿಯ ಪದ ಜೋಡಣೆಯ ಮೇಲೆ-- ಪರಿಣಾಮವನ್ನುಂಟು

ಮಾಡಿರಬೇಕು. ಇದಲ್ಲವೆ, ಕಾವ್ಯವು ನಾಟಕೀಕರಣದಲ್ಲಿ ಹೆಚ್ಚು ಶಾಶ್ವತ-ಸ್ಥಾನ ಪಡೆಯಬೇಕೆಂಬ ನೆಬ್ಬಯಕೆಯೂ ಇದಕ್ಕೆ ಕಾರಣವಾಗಿರಲು ಸಾಕು. ಏನೇ ಇರಲಿ, ಈ ಚರ್ಚೆಯು ಶ್ರೀ. ಗೋಕಾಕರಿಗೆ ಒಂದು ಆನಂದಕರ ಅನುಭವವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಅನೇಕ ವ್ಯಕ್ತಿಗಳ ಅಮೂಲ್ಯ ಪರಿಚಯವು ಅವರಿಗೆ ಆದುದರಲ್ಲಿ ಒಂದೆಗಡನ್ನು ಸೂಚಿಸಬಹುದಾಗಿದೆ: ನೆದರ್‌ಸೊಫಿಯಾ ಡೂಪ್ರೆಎಂಬ ಫ್ರೆಂಚ್ ಕವಯಿತ್ರಿಯು, ಡಾ. ರಾಧಾಕೃಷ್ಣನರ ಬಗ್ಗೆ ಇವರು ಬರೆದ ಒಂದು ಕವನದ ಪ್ರತಿಯನ್ನು ಪಡೆದರು. 'ಜೋಡಿಸಿದ ಕೈಗಳೇ ಯುದ್ಧವನ್ನೆದುರಿಸಲು ಯೋಗ್ಯ ಆಯುಧಗಳು' ಎಂದು ಬರೆದಿದ್ದಾರೆ. ಬೆಲ್‌ಜಿಯನ್ ಕವಿ ಆರ್.ಎ. ಜೋಸ್ಟನ್ಸರು ಶ್ರೀ.ಗೋಕಾಕರ 'ರತ್ನಪಕ್ಷಿ' ಎಂಬ ಕವಿತೆಯ ಇಂಗ್ಲೀಷ್ ಅನುವಾದ ಫ್ಲೆಮಿಶ್ ಭಾಷೆಗೆ ಅನುವಾದಿಸಲು ಪಡೆದರು. ಲಂಡನ್ ಪಿ.ಇ.ಎನ್.ದ ಕಾರ್ಯದರ್ಶಿಯಾದ ಶ್ರೀ. ಪೀಟರ್ ಆರ್‌ಗರ್ಕರು 'ಮೆಟರಲಿಂಕ್' ಬಗ್ಗೆ ಬರೆದ ಭಾಷಣದ ಪ್ರತಿಯನ್ನು ಪಡೆದರು.

ಅನೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಒಂದನ್ನಿಲ್ಲಿ ಉದ್ಧರಿಸ ಬಹುದು. ಒನೆಯ ಸಪ್ಟೆಂಬರ್ ಮಧ್ಯಾಹ್ನ ಟಾಗೋರರ ಕೆಲವು ಪದ್ಯಗಳ ಭಾವನೆಗಳನ್ನು ಸೂಚಿಸುವಂತಹ ಕೆಲ ನೃತ್ಯ ಪ್ರದರ್ಶನ ನಡೆಯಿತು. ಅವು ಸ್ತುತ್ಯ ಪ್ರಯತ್ನಗಳಾಗಿದ್ದುವಂತೆ. ಯುರೋಪದಲ್ಲಿ ಭಾರತೀಯ ನೃತ್ಯ ಹಾಗೂ ಕಾವ್ಯಗಳು, ಅವರ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವಂತೆ ಕಂಡುಬಂದಿತು.

ಮಾನ್‌ಸ್ಯುಅರ್ ಹಾಲ್ಬರು ಏಸಿಯನ್ ಪ್ರತಿನಿಧಿಗಳನ್ನು ಒಂದು ಭೋಜನ ಸಮಾರಂಭಕ್ಕೆ ಕರೆದಿದ್ದರು. ಹಿಂದೆ ಹಿಟ್ಲರನ "Concentration camp" ಗಳಲ್ಲಿ ಕಷ್ಟ ಹಾಗೂ ವೇದನೆಗಳನ್ನು ಅನುಭವಿಸುತ್ತಿದ್ದಾಗ, ಇಂಥ ಕವಿ ಸಮ್ಮೇಲನಗಳಾಗಬೇಕೆಂಬ ಕನಸು ಕಂಡಿದ್ದರಂತೆ. ಇವರು ಬೆಲ್‌ಜಿಯಮ್ಮಿನಲ್ಲಿ ಟೂರಿಸ್ಟ್ ಶಾಪೆಯ ಅಧಿಕಾರಿಗಳಾಗಿದ್ದಾರೆ. ಭಾರತದ ಅಜಂತಾ, ಎಲ್ಲೋರಾ ಗುಹೆಗಳನ್ನು ಸಂದರ್ಶಿಸಿದ್ದಾರೆ. 'ಸತ್ಯವು ಬಹುಮುಖವಾದುದರಿಂದ, ಎಲ್ಲರ ಅಭಿಪ್ರಾಯಗಳನ್ನು ಗೌರವಿಸುವುದು ಅವಶ್ಯವಾಗಿದೆ!' ಎಂಬುದು ಅವರ ದೃಢನಂಬಿಕೆ.

ಪ್ರೊ. ಗೋಕಾಕರು ತಮ್ಮ ಬಗ್ಗೆ ವಿಶೇಷ ಹೇಳಿಕೊಳ್ಳದಿದ್ದರೂ ಅವರ ಪರದೇಶದ ಪ್ರಯಾಣಗಳು ಎಷ್ಟೊಂದು ಯಶಸ್ವಿಯಾಗಿ ಪರಿಣಮಿಸಿದೆ—ಎಂಬುದನ್ನು, ಅವರ ನಿಕಟವರ್ತಿಗಳಿಂದ ಕೇಳಿ ತಿಳಿದುಕೊಳ್ಳಬೇಕು. ಕನ್ನಡ ನಾಡಿನ ಒಬ್ಬ ಅದ್ವಿತೀಯ ಸಾಂಸ್ಕೃತಿಕ ರಾಯಭಾರಿಯಾಗಿ ಅವರು ಕನ್ನಡ ನಾಡು-ನುಡಿಯ ಸೇವೆಯನ್ನು ಮಾಡುತ್ತ ಬಂದಿರುವರಲ್ಲದೆ, ಭಾರತದ ಸಂಸ್ಕೃತಿಯನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸಿ ನಾಡಿನ ಹಾಗೂ ದೇಶದ ಬಗ್ಗೆ ಒಳ್ಳೆಯ ಪರಿಚಯವನ್ನು ಪರದೇಶೀಯರಿಗೆ ಮಾಡಿ ಕೊಡುವುದರಲ್ಲಿ ಸಮರ್ಥರಾಗಿದ್ದಾರೆ.

ಮೇಘದೂತ:

ಶ್ರೀ. ಎ. ವಿ. ಸದರಜೋಶಿ, ಬೆಳಗಾಂವಿ

೧

ನೀ ಕರಿಯನಾದರೂ ಆತ್ಮವಿದೆ ಬಿಳಿಯದು
ಜಲಧರನೆ ಸಖನೆ ಮೋಡವೇ !;
ಪರರ ಬಾಳನು ಜೀವುವಾಗಿಸಲು ನೀನಿಂದು
ಕುರೂಪಿಯಾಗಲು ಬೇಡವೇ ?
ನಿಂತ ನೀರಲ್ಲ ನೀ; ಹರಿವ ನೀರು !
ನಿನ್ನಂತೆ ಎತ್ತರಕೆ ಇಹರದಾರು ?

೨

ಇನಿಯಳಿಂದಗಲಿ ಅತಿ ವಿರಹದಲಿ ಬೆಂಡಾಗಿ
ಸೊರಗಿ ಕೊರಗಿದ ಪ್ರಿಯಿಗೆ ನೀನಾದೆ ಆಧಾರ,
ಕಾಲಿದಾಸನ ಕೃತಿಯ ಕರ್ಣಧಾರ !
ಮೇಘದೂತನೆ ನೀನು ವಾಯುವಿನ ಸಖನಹುದು,
ಅವನಿರವೆ ನೀನೆಂದು ನಡೆದುದಿಲ್ಲ !
ಅವನಿರದೆ ನಾವೆಂದು ತಡೆದುದಿಲ್ಲ !
ನಿನ್ನ ಗೆಳೆಯನ ಗುಣಕೆ ಕನ್ನಡಿಯು ನೀನು !
ಸತ್ಸಂಗ ಭೂಷಣವು ಗೊತ್ತು ಏನು ?

೩

ಮೆಘದೂತವನಿಂತು ವ್ಯಾಖ್ಯಾನಿಸಬಹುದೆ ?
" ದೇವನಿಳೆಗಿಳಿಸಿರುವ ದೂತನಿವ ಮೇಘನು
ಸಂದೇಶ ತಂದಿಹನು ವಿಶ್ವಕೆಲ್ಲ :
'ಉಪಕಾರಿಯಾಗೆಲವೊ ಮಾನವನೆ ನೊಂದರೂ
ಅದುವೆ ಎಂದಿಗು ಇಹುದು ಜೀವಿತದ ಫಲವು !'
ಗಗನವಿಹಾರಿಯೇ ಅನಿಲಚಾರಿಯೇ
ನಿನ್ನಂತೆ ನಾನೊಂದು ಮೋಡವಾಗೆ;
ಉಪಕಾರಿ ಎಂದು ಜನ ಅನದ ಹಾಗೆ.

ಭಾರ್ಗವಿ

(ಪೌರಾಣಿಕ ಜೀವನರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗದ

ದೃಶ್ಯ ಮೂರು

— ಪಾತ್ರಗಳು —

೧ ಅನಸೂಯಾ. ೨ ಶೀಲಾ. ೩ ಆನಂದಿನೀದೇವಿ.

[ಪ್ರಾತಃಕಾಲ. ಅತ್ರಿಮಹರ್ಷಿಗಳ ಆಶ್ರಮ. ಭಾರ್ಗವಿ ಗೃಹತ್ಯಾಗ ಮಾಡಿ ಮೂರು ದಿನಗಳಾಗಿವೆ. ಅನಸೂಯೆ ದುಃಖಾರ್ತಳಾಗಿದ್ದಾಳೆ. ಕೇಶ ಕೆದರಿದೆ. ಮುಖದಲ್ಲಿ ನೋವು, ದೈನ್ಯತೆ ಎದ್ದು ಕಾಣುತ್ತಿದೆ. ರಂಗವಲ್ಲಿಯನ್ನಿಡಲು ಬಂದವಳು ಎರಡು ಎಳೆ ಎಳೆದು ಹಾಗೆಯೇ ಯೋಚಿಸುತ್ತ ನಿಲ್ಲುವಳು. ಕ್ಷಣಬಿಟ್ಟು ಆತಿಯಿಂದ ನಾಲ್ಕು ಹೆಜ್ಜೆ ಹೋಗಿ ಅತ್ತಿತ್ತ ನೋಡುವಳು. ನಿರಾಶೆಯಿಂದ ಹಿಂತಿರುಗುವಳು.]

ಅನ: (ದುಃಖದಿಂದ) ಹಾಯ್, ಈ ಒಡಲಬೇಗೆಯನ್ನು ಹೇಗೆ ಸಹಿಸಲಿ? ಭಾರ್ಗವಿ, ನಿತ್ಯ ನೀನೆಷ್ಟು ಸೊಗಸಾಗಿ ರಂಗವಲ್ಲಿಯಿಡುತ್ತಿದ್ದೆ! ಅದರ ಸೊಗಸಿಗೆ ಮಾರುಹೋಗಿ ಅದನ್ನು ತುಳಿಯದೆ ಎಲ್ಲರೂ ದಾಟಿಬರುತ್ತಿದ್ದರು. ಮಗು, ಇಷ್ಟು ನಿಷ್ಠುರತೆಯಿಂದ ಹೇಗೆ ನಮ್ಮನ್ನು ತೊರೆದು ಹೋದೆ? ಹರಿಣಿಯನ್ನು ಕ್ಷಣವೂ ಅಗಲದಿದ್ದ ನೀನು, ಅವರ ಚಿಂತೆಯನ್ನೇ ದೂರಮಾಡಿ ಹೋಗಿಬಿಟ್ಟಿಯಾ? ಹಾಯ್, ನನಗೆಂತಹ ಹುಚ್ಚು ಹಂಬಲ! ತರಗೆಲೆಯ ಸಪ್ಪಳವಾದರೆ, ನೀ ಬರುವ ಸಪ್ಪಳವೆಂದು ಬಗೆದು ಆಸೆಯಿಂದ ನೋಡುವೆ— ಇರುಳೆಲ್ಲಾ ನಿದ್ದೆಗೆಟ್ಟು – ಕ್ಷಣಕ್ಕೊಮ್ಮೆ— ಬಂದಳೇನೋ ಎಂದು ಧಡಕ್ಕನೆದ್ದು ನೋಡಿ ನಿರಾಶಳಾದೆ. ನನ್ನ ಕಂದ ಬಂದಾಗ ಮುಚ್ಚಿದ ಕದ ಕಂಡರೆ ನೊಂದು ನಿಂತಾಳೆಂದು, ಕದವಿಕ್ಕದೆ ಮೂರು ದಿನದಿಂದ ಕಾದೆ. ಮಗು, ಕುಸುಮಕೋಮಲವಾಗಿದ್ದ ನಿನ್ನ ಮನ ಹೀಗೇಕೆ ವಜ್ರಕಠೋರವಾಯಿತು? (ಕಣ್ಣೀರಿಡುತ್ತಾ) ಭಗವತ್ಸಾಕ್ಷಾತ್ಕಾರ ಪಡೆದ ಮಹಾತ್ಮರಿಲ್ಲವೆ ಇಲ್ಲಿ? ಅನುಭವಿಗಳಾದ ಧರ್ಮಾತ್ಮರಿರಲಿಲ್ಲವೇ? ಎಲ್ಲರನ್ನೂ ತೊರೆದು ಕಾನನ ಹೊಕ್ಕೆಯಾ? ಆಟನೋಟಕ್ಕೆ ಸವಳವಾದ ಅಡವಿ, ಘೋರ ವ್ಯಘ್ರ ಪಕ್ಷಿಗಳು— ಹಾಯ್, ಹೇಗೆ ಎದುರಿಸುವೆ ಮಗುವೆ? ಹೆದರಿ ಹಿಂತಿರಗಬಾರದೆ ನೀನು? ಹೊತ್ತು ಹೋಗದೆ ಹಾಗೇ ನಿಂತುಬಿಟ್ಟಂತಿದೆ. ನೀನೇಕೆ ಇನ್ನೂ ಹಿಂತಿರುಗಲಿಲ್ಲ? (ಭಯದಿಂದ) ಕಾಡಿನಲ್ಲಿ ಏನಾದರೂ ಅಪಾಯವಾಯಿತೇ?— ಛೇ, ಎಂತಹ ಕೆಟ್ಟ ಕೆಟ್ಟ ಯೋಚನೆ! ಕಾರುಣ್ಯಮೂರ್ತಿಯಾದ ಆ ಜಗತ್ಪತಿ ಎಂದಿಗೂ ನಿನ್ನ ಕೈಬಿಡ. ಆದರೆ ನಮಗಿಂತಹ ಸಂಕಟ ಕೊಡಬಹುದೇ? ಜೀವನ್ಮುಕ್ತರಂತಿದ್ದ ನಿನ್ನ ತಂದೆ ಸಹ ಮೂಕವೇದನೆಯಿಂದ ಹೆಣ್ಣಾಗುತ್ತಿದ್ದಾರೆ. (ಸುಯ್ದು, ಚಿಂತಾಕ್ರಾಂತಳಾಗಿ ನಿಲ್ಲುವಳು) ಮಗೂ, ಅಲ್ಲಿ ನೀನು ಹೆಸಿದು ಬಳಲಿದಾಗ ಆದರಿಸುವರಾರು? ಹಾಯ್, ನಿನ್ನ ಕೋಮಲತನು ಎಷ್ಟು ನಲುಗುವುದೋ? (ಹೊರಗಿನಿಂದ 'ಅಮ್ಮಾ' ಎಂಬ ಶಬ್ದ ಕೇಳುವುದು) ಅಂ, 'ಅಮ್ಮಾ'! ಭಾರ್ಗವಿ ಬಂದಳೇ? ಬಂದಳೇ? (ಹರ್ಷದಿಂದ ನಾಲ್ಕು ಹೆಜ್ಜೆ ಧಾವಿಸುವಳು. ಶೀಲಾ ಬರುವುದನ್ನು ಕಂಡು ಆಶಾಭಂಗದಿಂದ ನಿಡುಸುಯ್ಯುವಳು).

ಶೀಲಾ: ಅಮ್ಮಾ, ಹರಿಣಿ ಎಳಗರಿಕೆ ಕೊಟ್ಟರೂ ತಿನ್ನದು. ಏನು ಮಾಡಲಿ?

ಅನ: (ಕಣ್ಣೊರಸಿಕೊಂಡು) ಶೀಲಾ, ಮೂಕಪ್ರಾಣಿಯಾದರೂ ಮಮತೆಯನ್ನು ಮರೆವುದೇ? ನನ್ನೆದೆಯೇ ಬಿರಿದು ಹೋಗುತ್ತಿದೆ. ಅವಳ ಸಖಿಯಾದ ನಿನಗಾದರೂ ಅವಳು ಹೋಗಲಿರುವ ಸುದ್ದಿ ತಿಳಿಯಲಿಲ್ಲವೇ?

ಶೀಲಾ: ಅಮ್ಮಾ, ಅವಳ ಮಾತೇ ನನಗೆ ಒಮ್ಮೊಮ್ಮೆ ಅರ್ಥವಾಗುತ್ತಿರಲಿಲ್ಲ. ಅವಳ ಮನಸ್ಸು ನನಗೆ ಹೇಗೆ ತಿಳಿಯಬೇಕು? ಅಮ್ಮಾ, ನಿಮ್ಮ ಆಶ್ರಮವನ್ನು ಹುಡುಕುತ್ತಾ ಒಬ್ಬಾಕೆ ತುಂಬ ದುಃಖಿಸುತ್ತಾ ಬಂದರು. ಇನ್ನೇನು, ಈಗ ಬರಬಹುದು.

ಅನು: (ಕರುಣೆಯಿಂದ) ಆಗತ್ಯ ಬರಮಾಡು, ನಿಜಕ್ಕೂ ದುಃಖಿಗಳೇ ದುಃಖಿಗಳ ಬಂಧುಗಳು. (ಶೀಲಾ ಹೋಗುವಳು) ಹಾಯ್, ಲೋಕವೇ ದುಃಖಮಯ. ಬೀಸುವ ಗಾಳಿಯೆಲ್ಲ ಅಗಲಿಕೆಯ ನಿಡಿದುಸಿರೇ. ಹರಿವ ನೀರೆಲ್ಲ ಉಕ್ಕಿದ ಕಣ್ಣೀರೆ. ಹೆಣ್ಣೊಡಲಿನಳಲೇ ಉರಿಬಿಸಿಲು,— ಸುಡುವಗ್ನಿ, ಓ, ದೇವಿ, ಬಾಳ್ವೆಯೇ ಹಿರಿಯಜ್ಞ. (ಕೆಳಗೆ ನೋಡಿ) ಈ ರಂಗವಲ್ಲಿಯನ್ನಾದರೂ ಪೂರ್ಣಗೊಳಿಸುವ. (ಎಳೆಗಳನ್ನು ಎಳೆಯುವಳು).

[ಶೀಲಾ ಒರ್ವ ವೃದ್ಧ ಸುಮಂಗಲಿಯೊಡನೆ ಬರುತ್ತಾಳೆ: ವೃದ್ಧ ಸುಮಂಗಲೆ ನಾಡುಸೀರೆ ಉಟ್ಟಿದ್ದಾಳೆ, ಮುಖದಲ್ಲಿ ಸಾತ್ವಿಕ ಕಳೆ.] ಬನ್ನಿ ಬನ್ನಿ. ಕುಳಿತು ಕೊಳ್ಳಿ, ತುಂಬಾದಣಿದಂತೆ ಕಾಣುವಿರಿ. ದೂರದಿಂದ ಬಂದಿರೇನೋ? (ಕೃಷ್ಣಾಜಿನ ಹಾಸುವಳು).

ಆನಂದಿನಿ: ದೂರವ ದಣಿಪಲ್ಲ ತಾಯಿ, ದುಃಖದ ದಣಿವು. ನಿಮ್ಮ ಆಶ್ರಮದಲ್ಲಿ ಎಲ್ಲರೂ ಕ್ಷೇಮವೇ?

ಅನ: (ಮ್ಲಾನವಾಗಿ) ಹೂಂ, ಭಗವಂತನ ದಯದಿಂದ ಇರುವವರೆಲ್ಲರೂ ಕ್ಷೇಮ. ನಿಮ್ಮ ಹೆಸರೇನು ?

ಅನಂದಿನಿ: ಅನಂದಿನಿ ಎಂದು. ಆದರೆ ಹೆಸರಿಗೆ ವಿರೋಧವಾಗಿದೆ ನನ್ನ ಜೀವನ. ವಿಧಾತ ಕಷ್ಟ-ಸಂಕಟವಷ್ಟನ್ನೇ ನನ್ನ ಪಾಲಿಗಿಟ್ಟಿದ್ದಾನೆ.

ಅನ: (ತನ್ನ ಸಂಕಟವನ್ನು ಮರೆತು ಕರುಣೆಯಿಂದ) ಏನು ಮಾಡುವುದು ತಾಯಿ, ತಾಳ್ಮೆಯೊಂದೆ ಬಾಳ್ಮೆ ನಮಗೆ. ಜಗತ್ತಿನಲ್ಲಿ ಜನ್ಮವೆತ್ತುವುದೇ ಕಷ್ಟದ ಕುಲಿಮೆಯಲ್ಲಿ ಬೇಯಲಿಕ್ಕಾಗಿ, ಸುಖ ಸ್ವಪ್ನದಂತೆ ಅಶಾಶ್ವತ. ದುಃಖವೇ ನಿರಂತರ. ಸುಖದ ಸ್ವಪ್ನವನ್ನೊಡೆದು ತನ್ನ ಸಾಮ್ರಾಜ್ಯಸ್ಥಾಪಿಸಲು ದುಃಖ ಸದಾ ಹಾತೊರೆಯುತ್ತದೆ. ಸಂಕಟದ ಅಗ್ನಿಯಲ್ಲೇ ಮನಸ್ಸಿನ ಮಲಿನವನ್ನು ಸುಟ್ಟು ಮಿಸುನಿಯಂತೆ ನಾವು ಪೂತರಾಗಬೇಕು.

ಅನಂದಿನಿ: ಅಹಾ, ಅನಸೂಯಾದೇವಿ, ನಿನ್ನ ಮಾತು ಕೇಳಿ ನನಗೆಷ್ಟೋ ಸಮಾಧಾನವಾಯಿತು. ಆದರೆ ದುಃಖದಲ್ಲೂ ಒಳ್ಳೆಯ ಉದ್ದೇಶವಿದೆಯೆಂದುಕೊಂಡು ಸುಖಕಾಣಬೇಕೆಂಬುದು ವ್ಯಂಗ್ಯವಾಗಿ ಕಾಣವುದಲ್ಲವೇ ?

ಅನ: (ತಾನೂ ಕುಳಿತು) ಅನಂದಿನಿದೇವಿ, ಕಷ್ಟಬಂದಾಗಲೇ ಸುಖದ ಮಹತ್ತು ತಿಳಿಯುವುದು. ಕಹಿಯುಂಡವೇಲೆ ಸಿಹಿ, ಮತ್ತು ಸಿಹಿಯಾಗಿ ಭಾಸವಾಗುವುದಲ್ಲವೇ ?

ಅನಂದಿನಿ: ಸಿಹಿ ಬಿಟ್ಟು ಕಹಿ ಬಯಸುವ ಮೂರ್ಖರು ಯಾರು, ತಾಯಿ ?

ಅನ: ನಿಜ, ಇದೇ ಮಾತನ್ನೇ ನಾನೂ ಮಹರ್ಷಿಗಳಿಗೆ ಹೇಳಿದೆ. ಬೆಲ್ಲ ಸಿಹಿ, ಬೇವು ಕಹಿ ಎಂಬುದೇನೋ ನಿಜ. ರಸಾಸ್ವಾದನೆ ಮಾಡುವಾಗ ಎರಡನ್ನೂ ಸವಿಯಬೇಕು. ಕಹಿಯೂ ಪಡ್ರಸಪಲ್ಲೊಂದಲ್ಲವೆ ? ದುಃಖದಾಳ ಕಂಡವರೇ ಸುಖದ ಮೂಲವನ್ನೂ ಶೋಧಿಸಬಲ್ಲರಂತೆ.

ಅನಂದಿನಿ: ಆದರೆ ರಸಾಸ್ವಾದನೆಗಾಗಿ ಕಹಿಯನ್ನು ಇಚ್ಛಿಸುವವರು ಯಾರು ?

ಅನ: ನಿಜ, ಕಹಿಗಾಗಿ ಇಚ್ಛಿಸದಿದ್ದರೂ ಕಹಿ ಸವಿಯಲು ಹೆದರಬಾರದು. ಕಷ್ಟಕ್ಲೇಶಗಳಿಗಾಗಿ ಯಾರು ಇಚ್ಛಿಸುವರು ? ಆದರೆ ಭಗವಂತ ನಮ್ಮ ಸತ್ತ್ವಪರೀಕ್ಷಿಸಲು ಕಷ್ಟ-ಕ್ಲೇಶಗಳನ್ನು ತಂದೊಡ್ಡಿದಾಗ, ಎದುರಿಸಲು ಹೆದರಬಾರದು. ಜೀವನದ ಬೆನ್ನಟ್ಟಿ ಬಂದ ಸಾವಿನಂತೆ, ಸುಖದ ಬೆನ್ನಟ್ಟಿದೆ ದುಃಖ. ಬಾಳು ಹೂವಿನ ಹಾಸಿಗೆಯಲ್ಲ— ಮುಳ್ಳಿನ ಹಂದರ. ಸುಖದ ಹನಿಜೇನಿಗಾಗಿ ಮುಳ್ಳಿನ ನೋವನ್ನೂ ತಾಳಿಕೊಳ್ಳಬೇಕು. ನಿಜಸುಖವನರಸುವಿರಾದರೆ, ಸುಖ-ದುಃಖದ ದ್ವಂದ್ವದಿಂದ ಮುಕ್ತರಾಗಬೇಕು. ಆಗಲೇ ಶಾಂತಿ, ಆಗಲೇ ತೃಪ್ತಿ.

ಅನಂದಿನಿ: ತಾಯಿ, ನಿಮ್ಮ ಮಾತು ಕೇಳಿ, ನನ್ನ ದುಃಖ ಎಷ್ಟೋ ಕಡಮೆಯಾಯಿತು.

ಅನ: ನಾನೇನೋ ಗುರುಹಿರಿಯರಿಂದ ಕೇಳಿದ ಮಾತನ್ನು ನಿಮ್ಮೆದುರು ಆಡಿದೆ. ನಿಮಗೆ ಸಮಾಧಾನ ಹೇಳುವ ನೆಪದಲ್ಲಿ ನನಗೆ ನಾನೇ ಸಮಾಧಾನ ಹೇಳಿಕೊಂಡಂತಾಯಿತು. ಆದರೆ ಕರುಳಿನ ಬೇಗೆ ಬರಿಯ ಮಾತಿನಿಂದ, ಉಪದೇಶದಿಂದ ಶಮನವಾಗುವುದೇ, ತಾಯಿ ? (ನಿಡುಸುಯ್ದು, ಏನನ್ನೋ ನೆನಪಿಸಿಕೊಂಡವಳಂತೆ ಮೇಲೇಳುವಳು) ಛೆ, ನನಗೆಂತಹ ಮಂಕು ಕವಿದಿದೆ! ದಣಿದು ಬಂದಿರುವ ನಿಮ್ಮನ್ನು ಸುಮ್ಮನೆ ಮಾತಿನಿಂದ ಬಳಲಿಸಿದೆ. ಫಲಾಹಾರ ಕೊಡುವುದನ್ನೂ ಮರೆತೆ.

ಅನಂದಿನಿ: ಬೇಡ ತಾಯಿ, ನಿನ್ನ ಅಮೃತದಂತಹ ಮಾತು ನನ್ನ ದಣಿವನ್ನೆಲ್ಲಾ ಕಳೆಯಿತು. (ಅನಸೂಯಾ ಒಳಕ್ಕೆ ಹೋಗುವಳು. ಶೀಲಾ ಮುಂದಕ್ಕೆ ಬರುವಳು) ಬಾ, ಶೀಲಾ, ನಮ್ಮ ಮಾತಿನಲ್ಲಿ ನಿನ್ನತ್ತ ಗಮನಿಸಲಿಲ್ಲ. ಈಕೆಯ ಮಗಳೇ ಅಲ್ಲವೇ ಗೃಹತ್ಯಾಗ ಮಾಡಿರುವುದು ? ಹುಡುಗಿಯ ಹೆಸರೇನು ?

ಶೀಲಾ: ಭಾರ್ಗವಿಯೆಂದು. ಎಷ್ಟು ಒಳ್ಳೆಯವಳು ಗೊತ್ತೇ ? ಮೂರು ದಿನವಾಯಿತು ಹೋಗಿ. ನಾನೇ ಊಟ-ತಿಂಡಿಗಳನ್ನೂ ಒಲ್ಲದೆ ಅತ್ತು ಬಿಟ್ಟೆ. ನನಗೇ ಇಷ್ಟು ಸಂಕಟವಾಗಿರುವಾಗ, ಅನಸೂಯಾದೇವಿಗೆ ಎಷ್ಟು ಸಂಕಟವಾಗಿರುವುದೋ !

ಅನಂದಿನಿ: (ನಿಡುಸುಯ್ದು) ದುಃಖದಾಳ ಕಂಡಿರುವ ನನಗೆ ತಿಳಿಯದೇ ಆಕೆಯ ಒಡಲಸಂಕಟ ? (ಅನಸೂಯಾ ಒಳಗಿನಿಂದ ಹಾಲು-ಹಣ್ಣುಗಳನ್ನು ತರುವಳು.) ನನಗೆ ಹಸಿವೆಯೇ ಇಲ್ಲ. ಸುಮ್ಮನೇಕೆ ಹೀಗೆ ತೊಂದರೆ ಪಡುವೆ, ತಾಯಿ !

ಅನ: ತೊಂದರೆಯೇನು ಬಂದಿತು ? ಅತಿಥಿಸತ್ಕಾರವೇ ನಮಗಿರುವ ಏಕೈಕ ಆನಂದ. ನಮ್ಮ ಸಂತೋಷಕ್ಕಾಗಿ ಸ್ವೀಕರಿಸಬೇಕು.

ಶೀಲಾ: ಅಮ್ಮಾ, ನಾನಿನ್ನು ಬರಲೇ ?

ಅನ: ಬೇಸರವೇ ಶೀಲಾ ? ಇದೋ, ಹಣ್ಣು ಹಿಡಿ (ಮುಖದಿಂದ) ನೀನೂ ಅವಳೂ ಸದಾ ಅವಳೆ-ಜವಳಿಗಳಂತೆ ಒಂದಾಗಿ ಆಡುತ್ತಿದ್ದಿರಿ. ನಿನಗೀಗ ಬೇಸರಾಗುವುದೂ ಸಹಜವೇ. ಸಮವಯಸ್ಕರ ಸಖ್ಯಸವಿದ ನಿನಗೆ, ಹಿರಿಯರೊಡನಾಟ ಸಪ್ಪೆ ಎನಿಸುವುದರಲ್ಲಿ ಅಚ್ಚರಿಯೇನು ? ಆಡಲು ಹೋಗು, ಮಗಳೇ ! ಹಾಗೆಯೇ ಹುಣಿಯನ್ನೂ ನೋಡಿ ಹೋಗು. (ಶೀಲಾ ಹೋಗುವಳು).

ಅನಂದಿನಿ: ನಿನ್ನಂತೆಯೇ ನಾನೂ ನೊಂದವಳಮ್ಮಾ, ಗಾಯ ಹಳೆಯದಾದರೂ, ಕಾಲ ಮಾಗಿಸಲಾಗಿಲ್ಲ. ಎದೆಗಿಕ್ಕಿದ ಚೂರಿಯಂತೆ ನೆನಪು ಇರಿಯುತ್ತಿದೆ.

ಅನ: ನಿಮ್ಮ ಕುವರಿಯೂ ವನಕ್ಕೆ ಹೋದಳೇ ?

ಆನಂದಿನಿ: ಹೆಣ್ಣು ಹೆರುವ ಪುಣ್ಯ ಪಡೆದು ಬರಲಿಲ್ಲ ನಾನು. ನನಗಿಬ್ಬರೇ ಗಂಡುಮಕ್ಕಳು.

ಅನ: ಮಕ್ಕಳು ಸೌಖ್ಯವೇ?

ಆನಂದಿನಿ: (ಆರ್ದ್ರಳಾಗಿ) ಮಕ್ಕಳಿಂದ ಸುಖಪಡುವ ಯೋಗ ನನ್ನೂ ನಾ ಪಡೆಯಲಿಲ್ಲ. ಹಿರಿಯವ ವಿಶ್ವೇಶ, ಕಿರಿಯವ ಜ್ಞಾನೇಶ. ಜ್ಞಾನೇಶ ಬಹು ಚುರುಕು. ಬಹುಬೇಗ ವಿದ್ಯೆಯಲ್ಲಿ ಪಾಂಡಿತ್ಯ ಪಡೆದ. ವಿವಾಹ ಬೇಡವೆಂದು ಹಟಹಿಡಿದ. ಒಂದು ದಿನ ಯಾರಿಗೂ ತಿಳಿಯದಂತೆ ಎತ್ತಲೋ ಹೋದ. ತಪಸ್ಸಿಗೆ ಹೋಗಿರುವನೆಂದು ಜನರೆಲ್ಲ ಹೇಳಿದರು. ಹಿರಿಯ ಮಗನ ಸುಖ ಸಂಸಾರ ನೋಡಿ, ಹೊಟ್ಟೆಯ ಸಂಕಟವ ಸಹಿಸಿಕೊಂಡಿದ್ದೆ. ವಿಧಿಗೆ ಅದೂ ಸಹಿಸಲಿಲ್ಲ. ಚೊಚ್ಚಿಲ ಮಗುವ ಹಡೆದು ಸೊಸೆಯೂ ತೀರಿಕೊಂಡಳು. ವಿಶ್ವೇಶ ಎಷ್ಟು ಹೇಳಿದರೂ ನಿಲ್ಲದೆ, ವಿಶ್ವೇಶ್ವರದರ್ಶನಕ್ಕಾಗಿ ಕಾಶಿಗೆ ಹೋಗಿ ಬಿಟ್ಟ. ಮೊಮ್ಮಗನಲ್ಲಿ ವಂಶದಕುಡಿಯನ್ನು ಕಂಡು, ನನ್ನ ಸ್ವಾಮಿ ಸಮಾಧಾನವಾಗಿರುವರು. ಆದರೆ ಹಡೆದೊಡಲ ಸಂಕಟವು ಹೇಗೆ ತಣಿಯಬೇಕು, ತಾಯಿ? ಪಡೆದ ಮಕ್ಕಳಿಂದಲೂ ಸುಖ ಪಡುವ ಪುಣ್ಯ ಪಡೆಯದ ದುರ್ಭಾಗ್ಯೆ ನಾನು. ಮತ್ತೆ ಮಕ್ಕಳನ್ನು ಕಾಣುವೆನೇ? ನನ್ನ ದುಃಖ ಹರಿವುದೇ? ನಿಮ್ಮ ಮಗಳೂ ಕಾಣೆಯಾದಳೆಂಬ ಸುದ್ದಿ ಕೇಳಿ, ನೋಡಲು ಬಂದೆ.

ಅನ: ನಿರಾಶೆಬೇಡ, ತಾಯಿ. ಖಂಡಿತ ಅವರನ್ನು ಮತ್ತೆ ನೋಡುವಿರಿ. ಪುಣ್ಯಕ್ಷೇತ್ರ ದರ್ಶನಮಾಡಿ ಮನಶ್ಶಾಂತಿ ಪಡೆದು ನಿಮ್ಮ ಹಿರಿಯ ಮಗ ನಿಮ್ಮೆಡೆಗೇ ಬರುವನು. ನಿಮ್ಮ ಕಿರಿಯ ಮಗ ತಪಸ್ಸಿಗಾಗಿ ಕಾನನ ಹೊಕ್ಕನೇ?

ಆನಂದಿನಿ: ಹೌದು. ಮೊದಲಿನಿಂದಲೂ ವೈರಾಗ್ಯವತ್ತಲೇ ಅವನೊಲವು. ತನ್ನನ್ನು ಸಂಸಾರ ಬಂಧನದಲ್ಲಿರಿಸಲು ಯತ್ನಿಸುವುದು ಬೆಂಕಿಯನ್ನು ಬಟ್ಟೆಯಲಿ ಕಟ್ಟಲೆಳಸುವಂತೆ— ಎನ್ನುತ್ತಿದ್ದ.

ಅನ: (ಕ್ಷಣಕಾಲ ಯೋಚಿಸಿ) ಆನಂದಿನಿದೇವಿ, ನನ್ನ ಮಗಳೂ ಅಂತೆಯೇ ಸತ್ಯಾನ್ವೇಷಿಣಿ, ವಿವಾಹಬಂಧನ ಬೇಡವೆಂದೇ ಅವಳ ಪಟ್ಟು. ಒಂದೆ ಧ್ಯೇಯಕ್ಕಾಗಿ ಅವರಿಬ್ಬರೂ ತಪಿಸುತ್ತಿರುವರು. ಜಗನ್ಮಾತೆಯ ದಯೆಯಿಂದ ಒಬ್ಬರನ್ನೊಬ್ಬರು ಸಂಧಿಸಿ, ಒಂದಾಗಿ ಏಕೆ ಹಿಂತಿರುಗಬಾರದು? ನಮ್ಮ ನೋವು ಮುಂದಿನ ನಲವಿಗೆ ನಾಂದಿಯೇಕಾಗಬಾರದು? ಬೆಂಕಿಯನ್ನು ಬಟ್ಟೆಯಲ್ಲಿ ಕಟ್ಟುವುದು ಕಷ್ಟ; ಆದರೆ ಬೆಂಕಿಯೆಡೆ ಮತ್ತೊಂದು ಬೆಂಕಿ ಸೇರಿದರೆ ಪ್ರಭೆ ಮತ್ತೂ ಉಜ್ವಲವಾಗುವುದಲ್ಲವೇ?

ಆನಂದಿನಿ: ಆಹಾ! ಎಂತಹ ಭವ್ಯಹರಕೆ! ನಮ್ಮಾಸೆ ಹುಸಿಯಾಗದಿರಲಿ. ಮಹಾಸಾಧ್ವಿಯಾದ ನಿನ್ನ ಮಾತು ಸತ್ಯವಾಗಲಿ. ಜಗನ್ಮಾತೆಯೇ ನಿನ್ನಿಂದ ಈ ಮಾತು ನುಡಿಸಿರುವಳು. ಅಮ್ಮಾ, ಈ ಮಾತು ಸಿದ್ಧಿಸಿದ ದಿನ ನಾನೇ ಪುಣ್ಯವತಿ. ಈ ಸತ್ಕಾರ, ಈ ಆತ್ಮೀಯತೆ ನನ್ನನ್ನು ಮುಗ್ಧಗೊಳಿಸುವೆ. ನಿಮ್ಮಂತಹರ ನಂಟುತನ ಬೆಳೆಸುವ ಭಾಗ್ಯವಿದೆಯೇ ನಮಗೆ?

ಅನ: ಜಗನ್ಮಾತೆಯ ಕೃಪೆ ಬಂದರೆ ನೋವು ನಲವಾಗುವುದು, ದುರಂತವಾಗಲಿರುವುದು ಸುಖಾಂತವಾಗುವುದು. ನಿಮ್ಮ ಆಶ್ರಮ ದೂರವೇ?

ಆನಂದಿನಿ: ಸ್ವಲ್ಪ ದೂರವೇ. ಮನಸು ಹತ್ತಿರವಾದನಂತರ ದೂರವನು ದೂರುವರೇನು? ಅಹಾ! ನಮ್ಮ ಸಖ್ಯಕ್ಕೆ ಸಂಬಂಧದ ಬಿಸುಗೆಯೂ ಬಿದ್ದರೆ, ನನ್ನ ಸಮಾನ ಸುಖಿಗಳಾರು?

ಅನ: ಆನಂದಿನಿದೇವಿ. ಎಲ್ಲಾ ಆ ಜಗದಂಬೆಯಾಟ. ನಾವು ನಿಮಿತ್ತ ಮಾತ್ರರು. ಚ್ಯುತಿಯಿಲ್ಲದ ಅವಳ ಸಂಕಲ್ಪದಂತೆ ಸಾಗುವ ಜೀವನ ನಾಟಕವಿದು. ಭಕ್ತಿಯೊಂದೇ ನಮ್ಮ ಶಕ್ತಿ, ಅನನ್ಯ ಶರಣಾಗತಿಯೊಂದೇ ತೆರೆದಿರುವ ಮಾರ್ಗ.

ಆನಂದಿನಿ: ನಮ್ಮ ವಾಂಛಿಕ ಫಲಿಸುವಂತೆ ಜಗದಂಬೆಯನ್ನೇ ಬೇಡೋಣ.

[ಇಬ್ಬರೂ ತಲೆಬಾಗಿ ಪ್ರಾರ್ಥಿಸುವರು. ತೆರೆ ಬೀಳುವುದು.]

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
— ಧಾರವಾಡ —

ಗಡಿಯಾರ, ಚಾಲೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**
ಸುಭಾಸ ರೋಡ್, ಧಾರವಾಡ

★ ಆ ಸಾ ಮ ★

(ಅಜ್ಞಾತವಾಸದ ಕೊನೆಯ ವರ್ಷ)

ಶ್ರೀ. ಪಿ. ವಿ. ಗುಡಿ, ಗೌಹಟ್ಟಿ (ಅಸಾಮ)

ಆಸೇತು ಹಿಮಾಚಲವೆಂದಿರುವ ಅಖಂಡಭಾರತ, ಪ್ರಾಕೃತಿಕ ಕಾರಣಗಳ ಮೂಲಕ ಖಂಡಖಂಡವಾಗಿದೆ. ಪರಾಧೀನತೆಯಲ್ಲಿ ನಾವು ಈ ಕೊರತೆಯನ್ನು ಹೇಗೋ ಸಹಿಸಿದೆವು. ಈಗ ನಾವು ಸ್ವತಂತ್ರರಾಗಿರುವಾಗ, ಈ ಖಂಡಗಳನ್ನು ಒಂದುಗೂಡಿಸಿ ಬೆಸೆಯುವ ಕಾರ್ಯವನ್ನು ಮಾಡಬೇಕಲ್ಲವೆ ?

ನಿಸರ್ಗಕ್ಕೆ ಎಷ್ಟು ವಿರೋಧವಾಗಿ ನಡೆಯುತ್ತಿದ್ದಾನೆ ಮನುಷ್ಯ! ವಸಂತ ಋತುವಿನಲ್ಲಿ ಗಿಡಬಳ್ಳಿಗಳು ಚಿಗಿತು, ಸೃಷ್ಟಿಸೌಂದರ್ಯ ಇಮ್ಮಡಿಸಿ, ಎಲ್ಲೆಡೆಗೂ ಹೊಸ ಹುಮ್ಮಸ ಬೀರುವಂತೆ, ಶರದೃತು ಮುಗಿದು ಚಳಿಗಾಲ ವ್ಯಾರಂಭವಾದೊಡನೆ (ಅಕ್ಟೋಬರ್ ತಿಂಗಳ ಕೊನೆಯಿಂದ) ಮನುಷ್ಯನಲ್ಲಿ ಎಲ್ಲಿಲ್ಲದ ಉತ್ಸಾಹ ತೋರತೊಡಗುತ್ತದೆ; ಮನುಷ್ಯ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ನಾನಾತರದ ಚಟುವಟಿಕೆಗಳು ಕಂಡುಬರುತ್ತವೆ. ನಮ್ಮ ಸರಕಾರವೇ ಮುಂದಾಳಾಗಿ Youth Festival ಪ್ರಾರಂಭಿಸಿದ ನಂತರ All India Radio ದವರು Drama Festival. Music Conference ಪ್ರಾರಂಭ ಮಾಡುತ್ತಾರೆ; ಅದರನಂತರ ನಾನಾತರದ ಪ್ರದರ್ಶನಗಳು, ಸಮ್ಮೇಲನಗಳು ಒಂದರ ನಂತರ ಒಂದು. ಈ ಸಾರೆಯ ಚಳಿಗಾಲದಲ್ಲಿ ಬಂಗಾಲೀ ಸಾಹಿತ್ಯ ಸಮ್ಮೇಲನ ಬೆಂಗಳೂರಲ್ಲಿ, ಅಖಿಲಭಾರತೀಯ ಐತಿಹಾಸಿಕ ಸಮ್ಮೇಲನ ಗೌಹಾಟಿಯಲ್ಲಿ. All India Philosophical Conference ಕಟಕದಲ್ಲಿಯಾದರೆ, A. I. Medical Conference ಇಂದೋರಿನಲ್ಲಿ, A. I. Economic Confernce ಅನ್ನಮಲೈಯದಲ್ಲಿ ನಡೆದುವು. ಈ ಸಾರೆ ಹೆಣ್ಣುಮಕ್ಕಳು ಕೂಡ ಮುಂದುವರೆದು, ಅಖಿಲ ಉತ್ಕಲ ಸ್ತ್ರೀಸಮ್ಮೇಲನವನ್ನು ಓರಿಸಾದಲ್ಲಿ ಕೂಡಿಸಿದರು. ಅಂತೂ ಆಸೇತು ಹಿಮಾಚಲದವರೆಗಷ್ಟೇ ಅಲ್ಲ— ಆ ಸೇತು- NEFA (North Eastern Frontier Agency) ದವರೆಗೆ ಹೆಂಗುಸರ ಸಮ್ಮೇಲನಗಳು ಕೂಡ ನಡೆದುವು. ಈ ಸಮ್ಮೇಲನಗಳಿಷ್ಟೇ ಅಲ್ಲ, ಪಂದ್ಯಾಟಗಳು ಕೂಡ (ಕ್ರಿಕೆಟ್, ಹಾಕಿ ಮುಂ.) ಇದೇ ಹೊತ್ತಿಗೆ. Radio ಇದ್ದವರೆಲ್ಲ ತಮಗೆ ಬೇಕಾಗಲಿ, ಬಿಡಲಿ, Commentary tune ಮಾಡಿದ್ದೇ ! ' ಓಟಗಳೆಷ್ಟಾದುವು ? (Runs). ಉಮ್ರಿಗರ ಬಹಳ disappoint ಮಾಡಿದ; ಕಾಂಟ್ರಾಕ್ಟರ ಸೆಂಚುರಿ ಹೊಡೆದ !' ಎಂದೆಲ್ಲ ಮಾತನಾಡುತ್ತ ಅಡ್ಡಾಡುವುದೊಂದು ಈ ಸೀಝನಿನ ಫ್ಯಾಶನ್.

ಇದನ್ನೆಲ್ಲ ಹೇಳುವುದರ ಉದ್ದೇಶವಿಷ್ಟೇ :-ಇದೆಲ್ಲ ಒಳ್ಳೆ ಮುಂದುವರಿದ ದೊಡ್ಡ ಪಟ್ಟಣಗಳಾದ ದಿಲ್ಲಿ, ಮುಂಬಯಿ, ಕಲಕತ್ತೆಗಳಲ್ಲಿ ಕಂಡುಬರುತ್ತಿತ್ತು; ಆದರೆ ಕಾಂಗ್ರೆಸು ಅಧಿವೇಶನ ಜರುಗಿದಾಗಿನಿಂದ, ಸೃಷ್ಟಿಯ ಮಡಿಲಲ್ಲಿಯೆ ಇದ್ದ ಅಸಾಮದಲ್ಲಿಯೂ ಸುಧಾರಣೆ ಬರತೊಡಗಿದೆ. ಹೊಸದಾಗಿ ಬಂದ ಅಸಾಮದ ಗವ್ಹರ್ನರರಾದ ಜನರಲ್ ನಾಗೇಶರವರು special invitation ಕೊಟ್ಟು, ಅಖಿಲ ಭಾರತ ಐತಿಹಾಸಿಕ ಸಮ್ಮೇಲನ ಇಲ್ಲಿ ಜರಗುವಂತೆ ಮಾಡಿದರು. ದೊಡ್ಡ ದೊಡ್ಡ ಪ್ರಸಿದ್ಧ ಇತಿಹಾಜ್ಞರೂ, ಕೀರ್ತಿವೆತ್ತ ಇತಿಹಾಸ ಸಂಶೋಧಕರೂ ಬಂದು, ಸಮ್ಮೇಲನ ಮೂರುದಿನಸ ತುಂಬ ವಿಜೃಂಭಣೆಯಿಂದ ನಡೆಯಿತು. ' ಅಸಾಮದ ಪ್ರಾಚೀನ ಸಂಸ್ಕೃತಿ, ವೇದಕಾಲದ ಆರ್ಯರ ಸಂಸ್ಕೃತಿಗಿಂತಲೂ ಬಹಳ ಪುರಾತದವಾದದ್ದು; ಇಲ್ಲಿಯ ಇತಿಹಾಸ ಸಂಸ್ಕೃತಿಗಳ ಬಗೆಗೆ ಹೆಚ್ಚಾಗಿ ಸಂಶೋಧನೆ ನಡೆಯಬೇಕು. ಮು. ' ಎಂದು ಎಲ್ಲರೂ ಅಭಿಪ್ರಾಯ ಪಟ್ಟರು. ಆದರೆ ಇದೇ ವೇಳೆಯಲ್ಲಿ ಕಲಕತ್ತೆಯ ಒಂದು ಪತ್ರಿಕೆಯಲ್ಲಿ ಪ್ರಕಟವಾದ ಸಂಗತಿ ಗಮನಾರ್ಹವಾಗಿದೆ— ' ಇಂತಹ ಸಮ್ಮೇಲನಗಳು ಜರುಗುವುದು, ಆಯಾ ವಿಷಯಗಳಲ್ಲಿ ಅಭಿರುಚಿ ಇದ್ದ ಜನರು ಒಂದೆಡೆಯಲ್ಲಿ ಕಲೆತು ಚರ್ಚಿಸಿ ಹೆಚ್ಚು ಸಂಶೋಧನೆ ಮಾಡಲಿಕ್ಕೆ ಸಹಾಯವಾಗುತ್ತದೆ; ಆದರೆ ಸಾಧಾರಣವಾಗಿ ಕಂಡುಬರುವುದೆಂದರೆ, ವಿಷಯ ಕೂಡ ಗೊತ್ತಿಲ್ಲದ ಜನರು ಬೇರೆಬೇರೆ ಸ್ಥಳಗಳನ್ನು ನೋಡುವುದಕ್ಕೋ, ಇಲ್ಲವೆ picnic ಗೆ ಹೋದಂತೆಯೋ ಎಂಬ ತೆರನಾಗಿ ಬರುತ್ತಾರೆ. ಈ ತರದ ವೃತ್ತಿ ನಮ್ಮ ಜನರಲ್ಲಿಂದ ಹೋಗಬೇಕು- ಇತ್ಯಾದಿ. '

ಹೋದಸಾರೆ (ಇದಕ್ಕೂ ಮೊದಲಿನ ಲೇಖನದಲ್ಲಿ) ಮಳೆಗಾಲದ ಬಗ್ಗೆ ಹೇಳುತ್ತಿದ್ದೆನಲ್ಲವೆ ? ಮಳೆಗಾಲ ಪ್ರಾರಂಭವಾಯಿತೆನ್ನುವಷ್ಟರಲ್ಲಿಯೇ ಈಗ ಚಳಿಗಾಲದ ಬಗ್ಗೆ ಬರೆಯುತ್ತಿದ್ದುದನ್ನು ನೋಡಿ ಆಶ್ಚರ್ಯವೆನಿಸಬಹುದು. ಆದರೆ ಒಂದು ವಿಷಯ:— ಯಾರಿಗಾದರೂ ಆನಂದವಾದಲ್ಲಿ ಅದನ್ನು ಉಳಿದವರೊಂದಿಗೆ ಹೇಳಿ ಅವರೊಂದಿಗೆ ಸಂತೋಷಿಸಬೇಕೆಂಬ ಇಚ್ಛೆಯಾಗುವುದು ಸ್ವಾಭಾವಿಕ. ಆದರೆ ದುಃಖದ ಸಂಕಟದ ವೇಳೆಯಲ್ಲಿ, ತಮ್ಮ ದುಃಖವನ್ನು ಮತ್ತೊಬ್ಬರಿಗೆ ಹೇಳಿ ಅವರ ಮನಶ್ಶಾಂತಿಯನ್ನೂ ಕದಡಿಸಬೇಕೆಂದು ಯಾರು ಇಚ್ಛಿಸತ್ತಾರೆ ? ಇಲ್ಲಿಯ ಮಳೆಗಾಲವೆಂದರೆ ಮಳೆಹುಳು, ಕಪ್ಪೆ, ಜಟ್ಟಿ ಪಾತ್ರೆಗಳಿಂದ ಪ್ರಾರಂಭಿಸಿ ಕಾಡಪಶುಗಳವರೆಗೂ— ಅವುಗಳೊಂದಿಗೆ

ಸಹಜೀವನ (co-existence) ಕಲಿಯಬೇಕು. ಅನಾರೋಗ್ಯಕರವಾದ ವಾತಾವರಣ, ನಾನಾತರದ ಹುಳುಹುಪ್ಪಡಿಗಳು, ಇದಲ್ಲದೆ ಮಳೆ ಮಹಾಪೂರ, ಇವೆಲ್ಲಕ್ಕೂ ಹೆಚ್ಚಿನದಾಗಿ ದಿನೋಪಯೋಗಿ ವಸ್ತುಗಳ ಮತ್ತು ಆಹಾರದ ಕೊರತೆ— ಇವೆಲ್ಲವುಗಳನ್ನು ಅನುಭವಿಸಿದನಂತರ, ಮತ್ತೊಬ್ಬರಿಗೆ ಹೇಳಬೇಕೆಂಬ ಇಚ್ಛೆ ಮನಸ್ಸಿನಲ್ಲಿಯೇ ಕಮರಿಹೋಗುತ್ತದೆ. ಆದರೆ ಒಂದೇ ವಿಶೇಷ ಸಂಗತಿಯೆಂದರೆ: ಈ ಮಳೆಗಾಲದಲ್ಲಿ ಪೆಟಿಯಲ್ಲಿ ನೋಡಿದೆಡೆ ಕಾಣುವ ವಸ್ತುವೆಂದರೆ Pine apples- ಅನನಸ ಹಣ್ಣುಗಳು. ನಮ್ಮಲ್ಲಿ ಒಳ್ಳೇ ಆಪರೂಪವಾದ ಈ ಹಣ್ಣುಗಳು ಇಲ್ಲಿ ವಿಪರೀತವಾಗಿ ಸಿಗುತ್ತವೆ. ಒಳ್ಳೇ ದೊಡ್ಡವಿದ್ದು ಬಹಳೆ ಸಿಹಿಯಾಗಿರುತ್ತವೆ. ಸಕ್ಕರೆಗಿಂತಲೂ ಸಿಹಿಯೆಂದರೆ ಅತಿಶಯೋಕ್ತಿಯಾಗಲಾರದು. ಸಕ್ಕರೆ ಸಿಹಿ ಮಾತ್ರ ಇರುತ್ತದೆ; ಆದರೆ ಈ ಹಣ್ಣುಗಳು ಸಿಹಿ ಜೊತೆಗೆ ಅಷ್ಟೇ ರುಚಿಯೂ ಇರುತ್ತವೆ. ನಾನು ಇಲ್ಲಿಗೆ ಬರುವ ಮೊದಲು ದಿಲ್ಲಿಯಲ್ಲಿ, ಆಸಾಮದಿಂದ ಬಂದಿದ್ದ ಒಬ್ಬ ಗೃಹಸ್ಥರನ್ನು ಕಾಣಲಿಕ್ಕೆ ಹೋಗಿದ್ದೆ. ನಾನು ಆಸಾಮಕ್ಕೆ ಹೋಗುತ್ತೇನೆಂದ ಕೂಡಲೆ ಅವರು 'ಅಲ್ಲಿಯ Pine apples ಎಷ್ಟುರುಚಿ, ಎಷ್ಟು ದೊಡ್ಡವು!! ಮುಂಜಾನೆಯೊಂದು ಸಂಜೆಗೊಂದು ತಿಂದರೆ ಊಟದ ಅಗತ್ಯವೇ ಇಲ್ಲ. ಮತ್ತು ನಾಲ್ಕಾಣೆಯಲ್ಲಿ ಮುಗಿದು ಹೋಗುತ್ತದೆ.' ಎಂದು ಹೇಳಿದರು. ನನಗಾಗ ಅವರ ಮಾತು ಒಳ್ಳೆ ವಿಚಿತ್ರವೆನಿಸಿದರೂ, ಇಲ್ಲಿಗೆ ಬಂದಬಳಿಕ ಆದು ಅಕ್ಷರಶಃ ನಿಜವಿದೆಯೆಂಬುದು ತಿಳಿಯಿತು. ಬೇಸಗೆಯಲ್ಲಿ ಅನನಸ ಹಣ್ಣುಗಳಂತೆ ಚಳಿಗಾಲದಲ್ಲಿ ಕಿತ್ತಳೆ ಹಣ್ಣುಗಳು ಬರುತ್ತವೆ. ನಮ್ಮಲ್ಲಿಯ ಬೋರೇ ಕವಳೆ ಹಣ್ಣುಗಳ ಹಾಗೆ ಇಲ್ಲಿ ಕಿತ್ತಳೆ ಅನನಸುಗಳನ್ನು ಗುಂಪೆ ಹಾಕಿಕೊಂಡು, ಅವುಗಳಿಗಿಂತಲೂ ಅಗ್ಗವಾಗಿ ಮಾರುತ್ತಾರೆ. ಪಲಸಿನ ಹಣ್ಣುಗಳು ಕೂಡ ಇಲ್ಲಿ ಹಾಗೆಯೆ.

ಯಾವುದಾದರೂ ಬಹಳೇ ಹೆಚ್ಚಾದರೆ, ಅದರ ಬಗ್ಗೆ ಅನಾದರ ಹುಟ್ಟುತ್ತದೆಂಬ ಮಾತು ಸುಳ್ಳಲ್ಲ. ಈ ಎಲ್ಲ ಹಣ್ಣುಗಳು ಇಷ್ಟು ವಿಪುಲವಾಗಿದ್ದರೂ, ಜನರಿಗೆ ಇವುಗಳ ಕಡೆಗೆ ಅಷ್ಟು ಲಕ್ಷ್ಯವಿಲ್ಲ— ಅಂದರೆ ತಿನ್ನುವುದಿಲ್ಲವೆಂತಲ್ಲ. ಆದರೆ ಸಿಗದ ವಸ್ತುವಿನ ಕೆಡೆಗೆ ಮನಸ್ಸು ಹೆಚ್ಚು ಎಳೆಯುತ್ತದೆ. ಉದಾಹರಣೆಯೆಂದರೆ: ಇಲ್ಲಿ ಕೆಲವು ದಿವಸ ಮೀನುಗಳು ಸಿಗುತ್ತಿರಲಿಲ್ಲ; ಆಗ ಎಲ್ಲ ಕಡೆಗೂ ಅದೇ ಮಾತು ಕೇಳಬರುತ್ತಿತ್ತು— 'ಮೀನುಗಳು ಸಿಕ್ಕುವದಿಲ್ಲ.' ಪ್ರತ್ರಪತ್ರಿಕೆಗಳಲ್ಲಿಯೂ ಅದೇ ವಿಷಯ 'ಈ ವರ್ಷ ಮೀನುಗಳೆಲ್ಲ ಎಲ್ಲಿಗೆ ಹೋದುವು? ಮುಂ. ನನಗೊಳ್ಳೆ ಆಶ್ಚರ್ಯವಾಯಿತು- ಅಕ್ಕಿ ಸಕ್ಕರೆ ಗೋದಿ ಇವುಗಳು ಕೂಡ ಸಿಗುತ್ತಿರಲಿಲ್ಲ. ಆದರೆ ಎಲ್ಲ ಕಡೆಗೆ ಕೇಳ ಬರುತ್ತಿದ್ದದ್ದು ಮೀನುಗಳ ವಿಷಯ ನಷ್ಟೇ. ಇದರಿಂದ ಇಲ್ಲಿಯ ಜನರಿಗೆ ಆಹಾರದಲ್ಲಿ ಮೀನದ ಅಗತ್ಯ ಸೆಷ್ಟಿದೆಯೆಂಬುದು ಕಂಡು ಬರುತ್ತಿದೆ ನಿಜ; ಆದರೆ ಉಳಿದ ಎಷ್ಟೋ ವಿಪಾರೋಪಯೋಗಿ ವಸ್ತುಗಳು ಸಿಗುವಾಗ, ಸಿಗದಿರುವುದೇ ಬೇಕೆಂಬ ಪಟವೇಕೇ ?

ಹೋದ ವರ್ಷ ನವ್ಹಂಬರಿನಲ್ಲಿ ದಿಲ್ಲಿಯೊಳಗೆ ಇದೇ ಮಾದರಿಯ ಸೊಂಸು ಸಂಗತಿ ಜರುಗಿತು. ಒಂದು ಮುಂಜಾನ ಪೇಪರಿನಲ್ಲಿ, ಮೊದಲನೆಯ ಪಾನಿನಲ್ಲಿಯೇ, ದೊಡ್ಡ ಅಕ್ಷರಗಳಿಂದ ಮುದ್ರಿತವಾಗಿತ್ತು: 'ರಾಜಧಾನಿಯಲ್ಲಿ ತತ್ತಿಗಳ (Eggs)ಕೊರತೆ' ಎಂದು. ಆಮೇಲೆ ನಾನು ಹೊರಗೆ ಹೋದಾಗ, ಆಫೀಸಿನಲ್ಲಿ, ಹಾಟೇಲಿನಲ್ಲಿ, ಪೇಟೆಯಲ್ಲಿ ಅದರದೇ ಸುದ್ದಿ. ಎಲ್ಲ ಪೇಪರುಗಳು ತಮ್ಮ ಸ್ವಂತ ಸುದ್ದಿಗಾರರನ್ನು ಕಳುಹಿರಬೇಕು— ಈ ಕೊರತೆಯ ಕಾರಣ ಕಂಡು ಹಿಡಿಯುವುದಕ್ಕೋಸುಗ. ಯಾಕಂದರೆ ಮರುದಿವಸ ಮುಂಜಾನೆಯ ಪೇಪರಿನಲ್ಲಿ ಅದರ ವಿಷಯವೇ ಮುಖ್ಯವಾಗಿತ್ತು. ಮುಖ್ಯ ಕಾರಣವೆಂದರೆ. ಮದ್ರಾಸದಿಂದ ತತ್ತಿಗಳು ಬರುವುದು ನಿಂತಿತ್ತಂತೆ.

ನಾನೊಂದು ಮದ್ರಾಸಿಯ ಹೋಟೆಲಿನಲ್ಲಿ ಕಾಫಿ ಕುಡಿಯುತ್ತ ಕುಳಿತಿದ್ದೆ; ನನ್ನ ಎದುರಿಗಿನ ಟೇಬಲ್ಲಿನ ಮೇಲೆ ಕುಳಿತಿದ್ದ ನಾಲ್ಕು ಜನ ಮದ್ರಾಸಿಗಳು ಇಡ್ಲಿ ತಿನ್ನುತ್ತ, ಅಂದಿನ ಪೇಪರಿನಲ್ಲಿಯ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು, ಈ ತತ್ತಿಗಳ ವಿಷಯ ಬಂದೊಡನೆ ಚರ್ಚೆಗೆ ಕಳೆ ಏರಿತು. ಇಡ್ಲಿದೋಸೆಗಳ ಈ ಜನರಿಗೆ ತತ್ತಿಗಳಲ್ಲಿ ಇಷ್ಟೊಂದು interest ಏಕೆಂಬುದು ನನಗೆ ತಿಳಿಯಲಿಲ್ಲ. ತಿಳಿಯುವುದೇನು ? ಬೇಕಾಗಲಿ, ಬಿಡಲಿ, ಚರ್ಚೆಗೊಂದು ವಿಷಯ ಸಿಕ್ಕರೆ ಸಾಕು. ಈ ಜನರಿಗೆ ಒಬ್ಬ ಹೇಳುತ್ತಿದ್ದ: " ಅಂತೂ ದಿಲ್ಲಿಯ ಜನರಿಗೆ Eggs ಕೂಡ ಮದ್ರಾಸದಿಂದ ಬರಬೇಕು ಇದೇ ತೋರಿಸುತ್ತದೆ. ಇವರಿಗೆಲ್ಲ ಮದ್ರಾಸದ ಅಗತ್ಯವೆಷ್ಟಿನೆಯಂಬುದನ್ನು. ರಾಜಕಾರಣದಲ್ಲಿ, ಉಳಿದೆಲ್ಲ ಆಫೀಸುಗಳಲ್ಲಿ ನಮ್ಮನ್ನು ಬಿಟ್ಟರೆ ಇವರಿಗೆ ಗತಿಯೇ ಇಲ್ಲ. ಆಹಾರದಲ್ಲಿ ಸಹ ನಮ್ಮ ಕಡೆಯಿಂದಲೇ ಬರಬೇಕು ಇವರಿಗೆ ಇವೆಲ್ಲ. ಇಲ್ಲಿಯ ಕೋಳಿಗಳು ತತ್ತಿಗಳನ್ನಿಡುವುದೇ ಇಲ್ಲವೋ ಏನೋ ? " ಇನ್ನೊಬ್ಬ ದನಿ ಗೂಡಿಸಿದ: " ಇಲ್ಲಿಯ ಜನರು ಕೋಳಿಗಳನ್ನು ಇರಗೊಟ್ಟರೆ ತಾನೆ ಅವು ತತ್ತಿಗಳನ್ನಿಡಬೇಕು ? ತತ್ತಿಗಳನ್ನಿಡುವ ಮೊದಲೇ ಅವುಗಳನ್ನು ಮುಗಿಸಿ ಬಿಡುತ್ತಾರೆ: "

ಏನೋ ಹೇಳುವುದಕ್ಕೆ ಹೊರಟು ಏನೋ ಪ್ರಾರಂಭಿಸಿದೆ. ಮಳೆಯ ವಿಷಯ ಹೇಳುತ್ತಿದ್ದನಲ್ಲವೆ ? ಮಳೆಗಾಲದಲ್ಲಿಯ ಇಲ್ಲಿಯ ಜೀವನ ಕಷ್ಟದಾಯಕ. ಹೊರಗಿನ ಬೇರೆ ಪ್ರಾಂತದಿಂದ ಸಾಮಾನುಗಳು ಬರುವಂತಿಲ್ಲ. ಇಲ್ಲಿ ಹುಟ್ಟುವ ಸಾಮಾನುಗಳು ಬೇರೆ ಕಡೆಗೆ ಹೋಗುವಂತಿಲ್ಲ ಅದರಲ್ಲಿಯೂ ಈ ಹಣ್ಣು–ಹಂಪಲಗಳನ್ನು ಹೆಚ್ಚಿಗೆ ದಿನ ಇಡುವಂತಿರುವುದಿಲ್ಲವಾದ್ದರಿಂದ, ಅಷ್ಟು ವಿಪುಲವಾಗಿ ಕಡಮೆ ಬೆಲೆಗೆ ಇಲ್ಲಿಯೇ ಮಾರಿ ಮುಗಿಸಿಬಿಡುತ್ತಾರೆ, ಹೊರಗಿನ ಧಾನ್ಯ, ಸಕ್ಕರೆ ಮುಂತಾದುವುಗಳು ಬರುವುದು. ಬಹಳ ಕಠಿಣವಾದದ್ದರಿಂದ, ವ್ಯಾಪಾರಸ್ಥರು ಅವುಗಳನ್ನು ಬೇಕಾದಷ್ಟು ಹೆಚ್ಚಿನ ಬೆಲೆಗೆ ಮಾರಿ ಲಾಭ ಪಡೆಯುತ್ತಾರೆ.

ಏನೇ ಆಗಲಿ,- ಮೇಲೆ ಹೇಳಿದ್ದೆನಲ್ಲ ಚಳಿಗಾಲದಲ್ಲಿಯ ಸಮ್ಮೇಲನಗಳ ಬಗ್ಗೆ— ಇವುಗಳಿಂದ ಅದೆಷ್ಟು ಲಾಭವಾಗುವುದೋ ಹೇಳಲಾರೆ.

(ಚಿಲಸನೆಯ ಪುಟಕ್ಕೆ ಮುಂದುವರಿದಿದೆ.)

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ **' ಚಿರಕಾಲದ ವಿಕಾಕಿನಿ '** ಕಥೆಯನ್ನು ಕುರಿತು ಏಳು ಜನರಿಂದಲೂ, **' ಮುರಗಿ ಮುಸಲ್ಲಂ '** ಕಥೆಯನ್ನು ಕುರಿತು ನಾಲ್ಕು ಜನರಿಂದಲೂ— ವಿಮರ್ಶೆಗಳು ಬಂದಿವೆ.

' ಚಿರಕಾಲದ ವಿಕಾಕಿನಿ 'ಯ ವಿಮರ್ಶಕರು :

೧ ಶ್ರೀ. ವಿ. ಎನ್. ಸಿಂಪಿ ಬಿ. ಎ. III, ವಿಜಯ ಕಾಲೇಜ್, ವಿಜಾಪುರ. ೨ ಶ್ರೀ. 'ಜೀವಿ' ನ್ಯೂ ಇಂಗ್ಲಿಷ್ ಸ್ಕೂಲ್, ಸದಲಗೆ. ೩ ಶ್ರೀ. ಶಿವಮೂರ್ತಿ, ಮಂಗಳಪುರ (ಬೊಂಬಾಯಿ). ೪ ಕುಮಾರಿ ಸಿ. ಹೆಚ್. ಲಕ್ಷ್ಮಿಪಾಡಿ, ಮುಟ್ಟತ್ತೋಡಿ. ೫ ಶ್ರೀ. ವಿ. ಎ. ಜೋಶಿ ಜ್ಯೂ. ಬಿ. ಎ. ಜನತಾ ಕಾಲೇಜ್, ಧಾರವಾಡ. ೬ ಶ್ರೀಮತಿ ವನಮಾಲಾ ರಾವ್, ಕೆ. ಎಚ್. ಕೆ. ಇನ್‌ಸ್ಟ್ಯೂಟ್ ಆಫ್ ಎಂಜಿನಿಯರಿಂಗ್, ಧಾರವಾಡ. ೭ ಎಂ. ಗೋಪೀನಾಥ ಭಟ್ಟ, ಮದ್ರಾಸ್.

' ಮುರಗಿ ಮುಸಲ್ಲಂ ' ವಿಮರ್ಶಕರು :

೧ ಶ್ರೀ. 'ಕಮಲಾಕರ' ಸದಲಗಾ. ೨ ಶ್ರೀ. ಎಸ್. ಆರ್. ಪಾಡಿ (ವಿಶಾರದ) ಕಲ್ಲಕಟ್ಟ (ದ. ಕ.). ೩ ಶ್ರೀ. ಎಸ್. ಆರ್. ಕುಲಕರ್ಣಿ, ನವಲಗುಂದ. ೪ ಕುಮಾರಿ ಸಿ. ಹೆಚ್. ಲಕ್ಷ್ಮಿ—ಪಾಡಿ, ಮುಟ್ಟತ್ತೋಡಿ (ದ. ಕ.).

* * * * * * * *

ಎಲ್ಲ ವಿಮರ್ಶೆಗಳನ್ನೂ ಜಯಂತಿಯ ಸಂಪಾದಕಸಮಿತಿಯವರು ನೋಡಿ ನಿರ್ಣಯವನ್ನು ಕೊಟ್ಟಿದ್ದಾರೆ. **' ಚಿರಕಾಲದ ವಿಕಾಕಿನಿ '** ಕಥೆಯನ್ನು ಕುರಿತು ಬಂದ ವಿಮರ್ಶೆಗಳೆಲ್ಲವೂ ನಮ್ಮ ತರುಣ ವಿಮರ್ಶಕರ ವಿಮರ್ಶೆಯ ಒಂದು ಒಳ್ಳೆಯ ಮಟ್ಟವನ್ನು ತೋರಿಸುತ್ತಿರುವುದು ಸಂತೋಷದ ವಿಷಯ. ಎಲ್ಲ ಈ ವಿಮರ್ಶೆಗಳಲ್ಲಿ **ಶ್ರೀ. ವಿ. ಎ. ಜೋಶಿ, ಧಾರವಾಡ** ಅವರ ವಿಮರ್ಶೆ ಹೆಚ್ಚು ಗುಣಗಳಿಂದ ಕೂಡಿದುದಾಗಿದೆ. **ಶ್ರೀ. ಶಿವಮೂರ್ತಿ, ಮಂಗಳಪುರ** ಮತ್ತು **ಶ್ರೀ. ಸಿ. ಹೆಚ್. ಲಕ್ಷ್ಮಿ—ಪಾಡಿ** ಅವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವೂ ಒಳ್ಳೆಯ ವಿಮರ್ಶೆಗಳೆ. 'ಜೀವಿ' ಸದಲಗೆ ಅವರು ಪತಿ-ಪತಿಯರ ಸಂಭಾಷಣರೂಪದಿಂದ ವಿಮರ್ಶೆಯನ್ನು ಬರೆಯುವ ಪ್ರಯತ್ನ ಮಾಡಿದ್ದಾರೆ. ವಿಮರ್ಶೆಗಳು ಗಂಭೀರರೀತಿಯಲ್ಲಿ—ವಿಮರ್ಶೆಗಳಾಗಿ ಬರುವುದೇ ಒಳ್ಳೆಯದು.

' ಮುರಗಿ ಮುಸಲ್ಲಂ ' ಕಥೆಯ ವಿಮರ್ಶಕರಲ್ಲಿ, ಶ್ರೀ. ಎಸ್. ಆರ್. ಪಾಡಿ ಅವರ ವಿಮರ್ಶೆ ಉತ್ತಮವಾಗಿದೆ. ಮಿಕ್ಕುವು ಚೆನ್ನಾಗಿವೆ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ **' ನಾಡೂ '** ಎಂಬ ಅನುವಾದಿತ ಕಥೆಯನ್ನು ಇರಿಸಲಾಗಿದೆ. ಕನ್ನಡ ಕಥಾವಾಚಕರಿಗೆ ಈ ಕಥೆ ತುಂಬ ಹೊಸರೀತಿಯದೆನಿಸಬಹುದು. ಬಂಗಾಲೀ ಕಥಾವಾಙ್ಮಯ ಪ್ರಪಂಚದಲ್ಲಿ ಈ ಕಥೆಯು ತುಂಬ ಹೆಸರು ಪಡೆದುದಾಗಿದೆ. ಎಂತಲೇ ಹೆಚ್ಚು ಪುಟಗಳನ್ನು ಆಕ್ರಮಿಸಿದರೂ ಈ ಕಥೆಯನ್ನು, ಒಂದು ನವ್ಯ ಮಾದರಿಯೆಂದು ಜಯಂತಿಯಲ್ಲಿ ಕೊಡಲಾಗಿದೆ. ನಮ್ಮ ನಾಡಿನ ವಾಚಕರೂ ವಿಮರ್ಶಕರೂ ಈ ಮಾದರಿಯನ್ನು ಮೆಚ್ಚುವ-ವೇನೋ ನೋಡಬೇಕು. ಈ ಕಥೆಯನ್ನು ಕುರಿತು ಹೆಚ್ಚು ಜನರ ವಿಮರ್ಶೆಗಳು ಬಂದರೆ, ನಮ್ಮ ಕಥಾವಾಚಕರ ಅಭಿರುಚಿಯ ಮಟ್ಟವನ್ನು ಅರಿತುಕೊಳ್ಳಲು ಅನುಕೂಲವಾಗಬಹುದು.

—ಸಂಪಾದಕರು

ಚಿರಕಾಲದ ಏಕಾಕಿನಿ

[ಅನುವಾದಿತ ಸಣ್ಣಕಥೆಯ ವಿಮರ್ಶೆ]

ಲೇ. ವಿ. ಎ. ಜೋಶಿ, ಜನತಾ ಕಾಲೇಜ್, ಧಾರವಾಡ

ಬಣ್ಣದ ಬದುಕು, ಬಾಳಲು ಬಯಸುವ ಬದುಕಲ್ಲ. ಅದು ಶಾಶ್ವತವಾದುದೂ ಅಲ್ಲ. ಕಟ್ಟಿದ ಬಣ್ಣ ಎಷ್ಟು ದಿನ ನಿಂತೀತು? 'ದೂರದ ಗುಡ್ಡ ಕಣ್ಣಿಗೆ ನುಣ್ಣಗೆ' ಎನ್ನುವಂತೆ, ಬಣ್ಣದ ಬಾಳು ದೂರದಿಂದ ಆಕರ್ಷಕವೆನಿಸಿದರೂ, ನಿಜವಾಗಿಯೂ ಅದರಲ್ಲಾವ ಸ್ವಾರಸ್ಯವೂ ಇರುವುದಿಲ್ಲ. ನಿಜವಾದ ಸುಖವಾಗಲಿ ಸ್ವಾರಸ್ಯವಾಗಲಿ ಇರುವುದು ಸ್ವಾಭಾವಿಕ ಮಾನವೀಯ ಬಾಳಿನಲ್ಲಿ,—ಎಂಬ ಚಿರಂತನ ಸತ್ಯವನ್ನು ಸಾರಿಹೇಳುತ್ತಿದೆ 'ಚಿರಕಾಲದ ಏಕಾಕಿನಿ'.

ಲಸಿತಾ ಋಷಿಕುಮಾರಿ. ಜೀವನವು ಅವಳಿಗೆ ತನ್ನ 'ಪಹಿಲಾ ಪಾಠ' ಪ್ರಾರಂಭಿಸುವುದಕ್ಕಿಂತಲೂ ಮೊದಲೇ, ಕಿನ್ನರ ದಂಪತಿಗಳು ತಮ್ಮದೇ ಆದ ಅಮಾನುಷ ಬಾಳ-ಬೀಜವನ್ನು ಅವಳ ತಲೆಯಲ್ಲಿ ಬಿತ್ತಿದರು. ಅಪರಿಪಕ್ವ ಅನುಭವವು ಅಜ್ಞಾನದ ಗಾಳ-ನೀರನ್ನು ಹಾಕಿ ಅದನ್ನು ಬೆಳೆಸಿತು. 'ಚಿರಕಾಲವೂ ಪ್ರಿಯತಮ-ಪ್ರಿಯತಮೆಯರಾಗಿರುವುದು, ತಂದೆ-ತಾಯಿಗಳು ಎಂದಿಗೂ ಆಗದೇ ಇರುವುದು' ಅಜ್ಞಾ ಮತ್ತು ಮುಗ್ಧ ಲಸಿತಾಳ ಮನಸ್ಸನ್ನು ಸೂರೆಗೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲ. ಆ ತನ್ನ ಕನಸನ್ನೆ ಸುಂದರವಾಗಿ ಹೆಣೆಯುತ್ತ, ನಿಕುಂಜದ ಏಕಾಂತದಲ್ಲಿ ಪ್ರತಿಧ್ವನಿಯೊಡನೆ ಸಂಭಾಷಿಸುತ್ತ, ತನ್ನ ಪ್ರಿಯನ ಬರವನ್ನು ಆಕೆ ಆತುರದಿಂದ ಎದುರನೋಡುತ್ತಿದ್ದಳು. ಅವಳ ಆತುರತೆ, ಉತ್ಸುಕತೆ ಸಹನಾತೀತವಾಗುವಷ್ಟರಲ್ಲಿ, ಕೊನೆಗೊಮ್ಮೆ ಬಂದ,— ಅವಳ ಮನ ಸೆರೆಹಿಡಿದ ರೂಪರಾಶಿ ಮಂದಪಾಲ. 'ವಿವಾಹವಾಗಿ ಪುತ್ರವಂತನಾಗು!' ಎಂಬ ತಂದೆಯ ಮಾತನ್ನು ಮೀರಿ, ವಿವಾಹರಹಿತ ಜೀವನ ನಡೆಸಹೋಗಿ ಕೈ ಸುಟ್ಟುಕೊಂಡಿದ್ದ; ಈಗ ಅನುರಕ್ತೆ ಜರಿತಾಳೊಡನೆ ಪಾಣಿಗ್ರಹಣ ಮಾಡಿಕೊಳ್ಳ ಹೊರಟಿದ್ದ. ಆಕಾಂಕ್ಷಿಣಿಯ ಆಕಾಂಕ್ಷೆ ಅರಿಸಹೊರಟ ಅವನ ಮಾರ್ಗದಲ್ಲಿ ಲಸಿತಾ ಅಡ್ಡಗಾಲು ಹಾಕಿದಳು. 'ಅವಿವಾಹಿತ—ಅಪುತ್ರಿಕ ಜೀವನವು ಜೀವನವಲ್ಲೆಂದು ಈಗ ಅರಿತೆ' ಎಂಬ ಮಂದಪಾಲನ ಮಾತು, ಲಸಿತಾಳಿಗೆ ಬಿದ್ದ—ಕೊಡಲಿಯ ಮೊದಲ ಪೆಟ್ಟಾಗಿತ್ತು. ತನ್ನ ಜೀವನವ ಅರ್ಥವನ್ನು ಕವಿಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದೇ ಲಸಿತಾ ಹೇಳಿದಳು:— 'ಸಪುತ್ರಿಕಜೀವನ ಸುಖಜೀವನವೆಂಬ ಬರಿ ಭ್ರಾಂತಿಯಿಂದ ನೀವು, ನೀರು ಹುಡುಕಲು ಮರುಭೂಮಿಯತ್ತ ಸಾಗಿದಂತಿದೆ.' ಆದರೆ ಲಸಿತಾ ತಾನೇ ನೀರು ಹುಡುಕಲು ಮರುಭೂಮಿಯತ್ತ ಸಾಗಿದ್ದಾಳೆ! ಅವಳಿಗೆ ತನ್ನ ಸೌಂದರ್ಯ ಶಾಶ್ವತವಾಗಿರಿಸಿಕೊಳ್ಳುವುದು ಬೇಕಿತ್ತು. ಅವಳಿಗೆ ತನ್ನೆಲ್ಲ ಪ್ರೀತಿ-ಪ್ರೇಮಗಳನ್ನು ಪ್ರಿಯತಮನೊಬ್ಬನಿಗೇ ಧಾರೆಯೆರೆದು ಕೊಡುವುದು ಬೇಕಿತ್ತು. ಅಂತೆಯೇ ಅವಳಿಗೆ ಸಂತಾನವು ಬೇಡವಾಗಿತ್ತು. ಕಾರಣ 'ವಿನಾಶದಿಂದಲೇ ಸೃಷ್ಟಿ' ಎನ್ನುವ ಸೃಷ್ಟಿಯ ಮೂಲಭೂತ ನಿಯಮವು ಅವಳಿಗೆ ಅನಿಯಮವೆಂದು ತೋರಿತು.

'ಗೃಹಧರ್ಮ'ಕ್ಕಾಗಿ ಕಾತರನಾಗಿದ್ದ ಮಂದಪಾಲನು ಮೆಲ್ಲನೆ ಆ ರಕ್ತಪಿಪಾಸೂ ರಾಣಿಯ ದೃಷ್ಟಿಪಥದಿಂದ ಮರೆಯಾದನು. 'ಲಪಿತಾಳ ಹೃದಯದಲ್ಲಿ ನಿನ್ಮ್ಯ ಹೊರತು ಮತ್ತಾರಿಗೂ ಸ್ಥಾನವಿಲ್ಲ' ಎಂಬ ಲಪಿತಾಳ ಮಾತು, ಮಂದಪಾಲನ ಕೋಮಲ ಕರುಳಿಗೆ ಬರೆ ಕೊಟ್ಟಿತು. 'ಮುಗ್ಧ, ಅಜ್ಞ ಹೆಣ್ಣು' ಎಂದು ಮರುಗಿದನು. ಯಾಕೆಂದರೆ ಅವನ ತಿಳಿವಳಿಕೆಯಂತೆ, ಹೆಣ್ಣೊಂದು ಮಗುವನ್ನು ಬಯಸದಿದ್ದುದು ಇದೇ ಮೊದಲ ಸಲ. ಅವಳೇನೋ ಸುಂದರಿಯಾಗಿದ್ದಳು. ಆದರೆ ಅವಳ ಈ ಇಚ್ಛೆ ಬೀಭತ್ಸವಾಗಿತ್ತು, ಅಮಾನುಷವಾಗಿತ್ತು. ಸಂತಾನವು ಪ್ರಿಯತಮ ಮತ್ತು ಪ್ರಿಯಳನ್ನು ಸುಖದ ಸಂಕೋಲೆಯಿಂದ ಬಂಧಿಸುವ ಏಕಮೇವ ಗ್ರಂಥಿ ಎನ್ನುವುದನ್ನವಳು ಅರಿಯದೆ ಕೆಟ್ಟಳು. ಸುಖ ಹುಡುಕುತ್ತ ದುಃಖದಲ್ಲಿಯೇ ಓಲಾಡಿದಳು. ತನ್ನ ಪ್ರೇಮ ಕೇವಲ ಪ್ರಿಯನಿಗಾಗಿ, ಅವನ ಪ್ರೇಮ ಕೇವಲ ತನಗಾಗಿ, ಈ ಮಧ್ಯೆ ಪರಸ್ಪರ ಸ್ನೇಹದಲ್ಲಿ ಮತ್ತಾರೂ ಭಾಗಿಯಾಗಬಾರದೆಂಬುದೇ ಅವಳ ಅನಿಸಿಕೆ. ಆದರೆ ಸಂತಾನವು ಆ ಪರಸ್ಪರ ಸ್ನೇಹವನ್ನು ಮತ್ತಷ್ಟು ವರ್ಧಿಸುತ್ತದೆ— ಎನ್ನುವುದನ್ನು ಅವಳು ಅರಿಯಳು. ಯಾವುದೇ ಮನುಷ್ಯನ ನೈಜಪ್ರೇಮ ಪ್ರಾರಂಭವಾಗುವುದು, ಅವನ ಹೆಂಡತಿ ಮೊಮ್ಮಕ್ಕಳನ್ನಾಡಿಸುತ್ತ ಅವನೆದುರು ಕುಳಿತಾಗಲಂತೆ!

ಲಸಿತಾ ಮಂದಪಾಲನಿಗೆ— ಪ್ರಥಮ ನೋಟಕ್ಕೆ— ಮಾರು ಹೋದಳು. ಕಣ್ಣುಗಳೆರಡೂ ಒಂದಾಗುವುದಕ್ಕಿಂತ ಮೊದಲು ಹೃದಯಗಳೆರಡೂ ಒಂದಾದಂತಿತ್ತು. ತೂಗುಮಂಚದ ಒಂದಾಸನವನ್ನು ಅವನಿಗಾಗಿಯೇ ಮೀಸಲಾಗಿ ಇಟ್ಟಳು. ಸಪುತ್ರಿಕ ಜೀವನದಲ್ಲಿ ಅರ್ಥವಿಲ್ಲವೆಂದು ತಿಳಿದು, ಒಂದಿಲ್ಲೊಂದು ದಿನ ಮಂದಪಾಲನು ಮರಳಿ ಬಂದು ಆ ಆಸನವನ್ನು ಅಲಂಕರಿಸುವನೆಂದು, ಅವಳು ತನ್ನ ಹೃದಯದಲ್ಲಿ ಆಶಾಕಿರಣವೊಂದನ್ನು ಹೊತ್ತಿಸಿಕೊಂಡೇ ಕುಳಿತಳು— ಶೂನ್ಯ ಆಸನದೊಡನೆ ಉಯ್ಯಾಲೆಯಾಡುತ್ತ, ಛಾಯೆಯೊಡನೆ ನೀರವವಾಗಿ ಸಂಭಾಷಿಸುತ್ತ.

ಲಸಿತಾಳ ವಿರೋಧಿಗುಣದ ಸಾಕಾರ ಮೂರ್ತಿಯೇ ಜರಿತಾ. ಅವಳು ಬಯಸುವುದು ಪ್ರಿಯತಮ ಮಂದಪಾಲನನ್ನಷ್ಟೇ ಅಲ್ಲ; ಜಾಗೃತ ಗೃಹಧರ್ಮವನ್ನು. ಅವಳು ಬಣ್ಣದ ಹೆಣ್ಣಲ್ಲ, ಗುಣದ ಹೆಣ್ಣು. ಅವಳು ಪ್ರಿಯತಮೆಯು ಹೇಗೆಯೋ ಹಾಗೆಯೇ ಮಾತೆಯೂ ಹೌದು. ಜರಿತಾ-ಮಂದಪಾಲರ ಪರಿತೃಪ್ತ ಆನಂದದ ಕುರುಹಾಗಿ ನಾಲ್ಕು ಮುದ್ದು ಮಕ್ಕಳು ಒಂದೊಂದಾಗಿ ಇಳೆಗೆ ಇಳಿದುವು. ಅವರಿಬ್ಬರನ್ನೂ ತೀರ ಸಮೀಪಕ್ಕೆ ತಂದುವು. ಆದರೆ ಜರಿತಾಳ ಸಂತಾನವು

ಅವಳ ಪ್ರೀತಿಯನ್ನು ಲೂಟಿಮಾಡಿತು; ಅವಳಲ್ಲಿ ಯೌವನದ ಕಾವು ಆರಿದಂತೆ, ತಾಯ್ತನದ ವಾತ್ಸಲ್ಯವು ಹೆಚ್ಚಾಯಿತು. ಇದು ತೀರ ಸ್ವಾಭಾವಿಕವೂ ಹೌದು. ಅಂತೇ ಅವಳು ತನ್ನಲ್ಲಿ ಉಳಿದಿದ್ದ ಎಲ್ಲ ಪ್ರೀತಿಯನ್ನು ಮಕ್ಕಳಿಗೆ ಹಂಚಿಕೊಟ್ಟುಬಿಟ್ಟಳು. ಮೊದಲೇ ತನ್ನ ಪಾಲನ್ನು ಪಡೆದಿದ್ದರೂ, ಆಶೆಬುರುಕನಾದ ಮಂದಪಾಲನು ಮತ್ತೆ ತನ್ನ ಪಾಲಿಗಾಗಿ ಅವಳ ಮೇಲೆ ಹರಿಹಾಯ್ದನು— 'ನಿನ್ನದಿಗ ಪ್ರಿಯತಮೆಯ ಹೃದಯವಲ್ಲ, ನಿನ್ನ ಬಳಿಯಲ್ಲಿ ನಾನೊಂದು ಗೌಣ ಛಾಯೆ ಮಾತ್ರ' ಎಂದು. ಮಕ್ಕಳ ಮಧ್ಯದಲ್ಲಿ, ಆ ಮಕ್ಕಳಿಗೇ ಜನ್ಮವಿತ್ತ ಪ್ರಿಯಸನ್ನು ಮರೆತೆನಲ್ಲಾ— ಎಂದು ಜರಿತಾ ಮರುಗಿದಳು. ಅವಳು ಅವನ್ನು ಸರಿಪಡಿಸಹೋದರೂ ಆ ಮಕ್ಕಳ ಗದ್ದಲದಲ್ಲಿ ಮತ್ತೆ ಅದನ್ನು ಮರೆತುಬಿಟ್ಟಳು. ಒಡೆದ ಮುತ್ತು ಒಂದಾಗಲಿಲ್ಲ. ಪ್ರೇಮದಿಂದ ವಂಚಿತನಾದ ಮಂದಪಾಲ ಹೊರಟುಹೋಗಿದ್ದ, ಪ್ರೇಮವನ್ನು ಹುಡುಕುತ್ತ ನಿಕುಂಜದ ತೂಗುಮಂಚದೆಡೆಗೆ. ಜರಿತಾ ಮಕ್ಕಳ ಮಧ್ಯೆ ತನ್ನ ಪ್ರಿಯನನ್ನು ಪೂರ್ಣಮರೆತಿಲ್ಲವಾದರೂ, ಅವನ ಬಗ್ಗೆ ಎಷ್ಟು ಕಾಳಜಿ ತಕ್ಕೊಳ್ಳಬೇಕೋ ಅಷ್ಟನ್ನು ತಕ್ಕೊಳ್ಳಲು ಅಸಮರ್ಥಳಾಗಿದ್ದಾಳೆ. ನಾಲ್ಕು ಮಕ್ಕಳ ತಾಯಿಯೊಬ್ಬಳು ಮೊದಲಗಿತ್ತಿಯಂತೆ ಪ್ರೇಮಾರ್ಪಣೆ ಮಾಡಬೇಕೆಂದು ಮಂದಪಾಲನು ಬಯಸುವುದೂ ಹುಚ್ಚುತನ; ಅದು ದೊರೆಯುವುದು ದೂರದ ಮಾತು. ಮಂದಪಾಲನ ಈ ಪ್ರೇಮದ ಹುಚ್ಚು ಇಳಿದಾಗ, ತನ್ನ ಮಕ್ಕಳಿಗಾಗಿ ಯಾದರೂ ಅವನು ತಂತಾನೆ ಪಾಂಡವವನಕ್ಕೆ ಮರಳುವನೆಂಬ ಒಂದು ದೂರದ ಆಶೆಯೂ ಜರಿತಾಳ ಮನದಲ್ಲಿ ಇತ್ತು. ಅಂತೆಯೇ ಅವಳು ಸಹನೆಯ ಮೂರ್ತಿಯಾಗಿ, ನಾಲ್ಕು ತಬ್ಬಲಿಗಳನ್ನು ಕಟ್ಟಿಕೊಂಡು ಕಾಲನೂಕಿದಳು, ಏನೊಂದೂ ಅನಾಹುತಕ್ಕೆ ಎಡೆಗೊಡದೆ.

ಮಂದಪಾಲನಿಗೆ ಸಪುತ್ರಿಕ ಜೀವನವು ಬೇಡವಾಗಿತ್ತು ಎಂದಲ್ಲ, ಅವನಿಗದು ಬೇಕಿತ್ತು; ಆದರೆ ಅದರೊಡನೆ ಪ್ರೀತಿಯ ಜೀವನಹನಿಯೂ! ಒಂದನ್ನು ಪಡೆದ ಜರಿತಾಳಿಂದ; ಇನ್ನೊಂದನ್ನು ಪಡೆಯಲು ಹೊರಟಲಪಿತಾಳಿಂದ. ಯಾಕೆಂದರೆ ಎರಡನ್ನೂ ಒಬ್ಬಳಿಂದಲೇ ಪಡೆಯಲಾರದವನಾಗಿದ್ದ. ಇದ್ದುದರಲ್ಲಿ ತೃಪ್ತಿಪಡುವ ಜೀವಿಯೂ ಅವನಲ್ಲ. ಪ್ರೇಮದ ಹೂಗಳನ್ನರಸುತ್ತ ಹಾರಾಡುವ ದುಂಬಿ ಅವನು. ಜರಿತಾ ತನ್ನ ಮೊದಲ ಕೂಸಿಗೆ ಜನ್ಮಕೊಟ್ಟಾಗ 'ನನ್ನ ಸ್ವಪ್ನ ಸಫಲಗೊಳಿಸಿದೆ' ಎಂದು ಹಿಗ್ಗುವನಲ್ಲದೆ, ಪಿತೃತ್ವ ಭಾವನೆಯನ್ನು ಅಭಿಮಾನ ಪೂರ್ವಕವಾಗಿ ಹೊರುವನು. ಅದೇ ಪಿತೃತ್ವದಿಂದಲೇ ತಾನು ಜರಿತಾಳ ಪ್ರೇಮದಿಂದ ವಂಚಿತನಾದೆನಲ್ಲ-ಎಂದು ತಿಳಿದ ಅವನಿಗೆ, ಅದೇ ಪಿತೃತ್ವವು ಹೊರಲಾರದ ಭಾರವಾಗಿ ತೋರಿತು. ತನಗಾಗಿ ಹೂಮಂಚದಲ್ಲಿ ಲಪಿತಾ ಕೊರಗುತ್ತಿದ್ದಾಳೆಂದು ಅವನು ಅಲ್ಲಿಗೆ

(ಅಜ್ಞನೆಯ ಪುಟದಿಂದ ಬಂದುದು)

ಆದರೆ ಈ ಸಲದ ಚಳಿಗಾಲ ಅಸಾಮಕ್ಕೆ ಒಳ್ಳೇ ಆಶಾದಾಯಕವಾದ ಭವಿಷ್ಯವನ್ನು ಸೂಚಿಸುತ್ತದೆಂದು ಮಾತ್ರ ನಿಶ್ಚಯವಾಗಿ ಹೇಳಬಲ್ಲೆ. ಮೊದಲನೆಯದಾಗಿ ಇಲ್ಲಿ ಜರುಗಿದ ಅಖಿಲ ಭಾರತೀಯ ಐತಿಹಾಸಿಕ ಸಮ್ಮೇಲನವು. ಅದಕ್ಕಾಗಿ ಬಂದ ಭಾರತದ ಎಲ್ಲ ಕಡೆಯ ಹೆಸರಾಂತ ಇತಿಹಾಸಜ್ಞರೂ, ಇತಿಹಾಸ ಸಂಶೋಧಕರೂ ಅಸಾಮಿನ ಪ್ರಾಚೀನ ಮತ್ತು ಅರ್ವಾಚೀನ ಇತಿಹಾಸ, ಸಂಸ್ಕೃತಿ ಮುಂತಾದುವುಗಳ ಬಗ್ಗೆ ಮಾತನಾಡಿ, ಉಳಿದ ಭಾರತೀಯರ ಲಕ್ಷ್ಯವನ್ನು ಇತ್ತಕಡೆಗೆ ಎಳೆದರು. ಡಾ. ಅಳತೇಕರರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ— 'ವೇದಕಾಲದ ಆರ್ಯರ ಸಂಸ್ಕೃತಿಗಿಂತಲೂ ಮೊದಲಿನದಾದ—ಹರಪ್ಪಾದ ಸಂಸ್ಕೃತಿಯ ಜನರು ಅಸಾಮಿನ ಪೂರ್ವನಿವಾಸಿಗಳೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದರಲ್ಲಿ ಹೆಚ್ಚಿನ ಶೋಧಮಾಡಲಿಕ್ಕೆ ಸರಕಾರದವರು ಇಂತಿಷ್ಟು ಹಣ ವಿನಿಯೋಗಿಸಬೇಕೆಂದು ಸಲಹೆ ಕೊಟ್ಟಿದ್ದಾರೆ. - (ಈ ಸಮ್ಮೇಲನಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಡಾ. ಅಳತೇಕರರವರು ದುರ್ದೈವ ವಶಾತ್ ಸಮ್ಮೇಲನಕ್ಕೆ ಮೊದಲೇ ಸ್ವರ್ಗಸ್ಥರಾದರು. ಅವರು ತಯಾರಿಸಿದ ಅಧ್ಯಕ್ಷಭಾಷಣವನ್ನು ಮಹಾನುಭಾವಾಧ್ಯಾಯ ಪೋದ್ದಾರವರು ಓದಿದರು.)

ಮತ್ತೊಂದು ಮುಖ್ಯ ವಿಷಯವೆಂದರೆ ಜನವರಿ ೧೦ನೆಯ ದಿನಾಂಕ, ಪಂ. ಜವಾಹರಲಾಲ ನೆಹರುರವರು ಬ್ರಹ್ಮಪುತ್ರ ನದಿಯ ಪೂಲು ಕಟ್ಟುವುದಕ್ಕಾಗಿ Foundation stone ಇಟ್ಟದ್ದು. ಜಗತ್ತಿನಲ್ಲಿ ದೊಡ್ಡ ಪೂಲುಗಳಲ್ಲಿ ಒಂದಾದ ಈ ಬ್ರಹ್ಮಪುತ್ರದ ಪೂಲು, ೧೯೬೨ನೆಯ ಇಸವಿಯಲ್ಲಿ, ಮಳೆಗಾಲಕ್ಕೆ ಮೊದಲೇ ಮುಗಿಯತಕ್ಕದ್ದಿದೆ. ಇದು ವರೆಗೆ ಈ ನದಿಗೆ ಪೂಲು ಕಟ್ಟುವುದು ಸಾಧ್ಯವಾಗಿರಲಿಲ್ಲ; ಆದ್ದರಿಂದ ಭಾರತದ ಪ್ರಾಂತವಾದ ಅಸಾಮವು ಭಾರತದಿಂದ ಬೇರೆಯಾಗಿಯೇ ಉಳಿದಿತ್ತು. ಈ ಪೂಲು ತಯಾರಾದ ನಂತರ, ಅಸಾಮದ ಇತಿಹಾಸನೇ ಬದಲಾಗಿ, ಈಗಿನ ಅದರ ಅಜ್ಞಾತವಾಸ ಮುಗಿದಂತಾಗುತ್ತದೆ. ಮಳೆಗಾಲದಲ್ಲಿಯ ಇಲ್ಲಿಯ ಜನರ ಗೋಳು ಕೊನೆಗೊಳ್ಳುತ್ತದೆ. ದಿಲ್ಲಿ, ಕಲಕತ್ತೆ, ಮುಂಬಯಿಗಳಲ್ಲಿ ನಾಗಪುರದ ಕಿತ್ತಳೆ ಹಣ್ಣುಗಳ ಹೆಸರು ಕೇಳಬರುವಂತೆ, ಮುಂಬಯಿ ಮದ್ರಾಸಗಳಲ್ಲಿ ಅಸಾಮದ ಕಿತ್ತಳೆ, ಅನನಸು ಹಣ್ಣುಗಳ ಹೆಸರು ಕೇಳುವ ದಿವಸಗಳು ದೂರವಿಲ್ಲ. ಯಾವುದೋ ಕಾರಣದಿಂದ ಈ ಪ್ರದೇಶ ಪೂರ್ವಕಾಲದಲ್ಲಿ ಪ್ರಾಗ್ಜ್ಯೋತಿಷವೆಂದು ಹೆಸರಾದಂತೆ, ಈಗ ಫಲದ್ರೂಪವಾದ ಭೂಮಿ ಮತ್ತು ಸಮೃದ್ಧವಾದ ಎಣ್ಣೆಯ ಕಣಿಗಳಿಂದ, ಈಗಲೂ ಕೂಡ City of Eastern Lights ಆಗಬಹುದು. ಅಸಾಮ— ಅಸಮ without Parallel ಎಂಬ ಹೆಸರು, ಈ ಪ್ರಾಂತಕ್ಕೆ ಸಾರ್ಥಕವಾಗುವ ದಿವಸಗಳು ಸಮೀಪವಾಗಿವೆಯೆಂಬ ಆಶೆಯನ್ನು ಈ ಚಳಿಗಾಲ ತಂದಿದೆ.

———

ಹೋಗಲಿಲ್ಲ, ಆದರೆ ತನ್ನ ಅಪೂರ್ಣ ಪ್ರೇಮಪಿಪಾಸೆಯನ್ನನಳು ತುಂಬಬಲ್ಲಳೆಂದು. ಲಪಿತಾ ಅವನನ್ನು ಹೃತ್ಪೂರ್ವಕ ಸ್ವಾಗತಿಸಿದಳು. ಅವಳ ಬಹುದಿನದ ಬಯಕೆ ಕೈಗೂಡಿತ್ತು. ಚಿರಕಾಲದ ಪ್ರಿಯತಮ–ಪ್ರಿಯತಮೆಯರನ್ನು ಹೊತ್ತುಕೊಂಡು ಹೂಮಂಚ ತೂಗಿತು. ಲಪಿತಾಳ ತೋಳ್ತೆಕ್ಕೆಯಲ್ಲಿ ಮಂದಪಾಲ ಜಗತ್ತನ್ನೇ ಮರೆತ; ತನಗಾಗಿ ಖಾಂಡವವನದ ಕುಟೀರವೊಂದು ಬಾಯಿಬಿಡುತ್ತ ಕುಳಿತಿದೆ ಎಂಬುದನ್ನು ಮರೆತ. ಆದರೆ ದೈವ ಆ ಕುಟೀರವನ್ನು ಮರೆಯಲಿಲ್ಲ. ಅಗ್ನಿಜ್ವಾಲೆ ಖಾಂಡವವನದತ್ತ ಹರಿದು ಮತ್ತ ಮಂದಪಾಲನ ಕಣ್ಣು ತೆರೆಯಿಸಿತು. ಮಕ್ಕಳ ಪ್ರಾಣರಕ್ಷಣೆಗಾಗಿ ಅವನು ಟೊಂಕಕಟ್ಟಿದನು. ಆದರೆ ಲಪಿತಾ ಅವನನ್ನು ಹೋಗಗೊಡಲಾರಳು. ಯಾಕೆಂದರೆ ಜರಿತಾಳ ಬಗ್ಗೆ ಅವಳಲ್ಲಿ ಸ್ತ್ರೀಸಹಜವಾದ ಅಸೂಯೆ–ಮಾತ್ಸರ್ಯಗಳು ಇವೆ. ಕೊನೆಗೆ 'ನನ್ನ ಪತ್ನಿ ಜರಿತಾಳ ಮತ್ತು ನನ್ನ ನಾಲ್ಕು ಶಿಶುಗಳ ಪ್ರಾಣ ಉಳಿಸು' ಎಂದು ಮಂದಪಾಲನು ಅಗ್ನಿದೇವನಲ್ಲಿ ಬೇಡಿಕೊಂಡಾಗಲಂತೂ ಲಪಿತಾಳ ಎದೆಯೇ ಒಡೆಯಿತು. ಮಂದಪಾಲನ ಹೃದಯದಲ್ಲಿ ಜರಿತಾಳ ಮೂರ್ತಿ ಇನ್ನೂ ಜೀವಂತವಿತ್ತು; ಅದವಳಿಗೆ ಬೇಡವಾಗಿತ್ತು, 'ನಾಲ್ಕು ಶಿಶುಗಳ ತಾಯಿ' ಎಂದು ಮಾತ್ರ ಅವನು ಜರಿತಾಳನ್ನು ನೆನೆಸಿದರೂ ಲಪಿತಾಳಿಗೆ ಎಲ್ಲಿಲ್ಲದ ಸಂದೇಹ, 'ಚಿರಸಂಗಲೀನ ನಲ್ಲನಲ್ಲೆಯರು' ಎಂಬವಳ ಕನಸಿನ ಮನೆ ಕುಸಿದಂತೆಯೇ ಅವಳಿಗೆ ಭಾಸವಾಯಿತು. 'ನನ್ನ ಮನೋರಾಗದ ಕೊನೆಯ ಸ್ಮೃತಿಯೂ ಸಹ ಭಸ್ಮವಾಗಿದೆ' ಎಂದು ನಿಟ್ಟುಸಿರಿಟ್ಟಳು.

ಅವಳ ಮನದಲ್ಲಿ ಈ ತರಪದ್ವಂದ್ವವಾದರೆ ಮಂದಪಾಲನೇನೂ ಸ್ವಸ್ಥನಿಲ್ಲ. ಅವನ ಮನದಲ್ಲಿಯೂ ತುಮುಲ ನಡೆದೇ ಇದೆ. ಎಷ್ಟೆಂದರೂ ಅವನು ಮಕ್ಕಳ ತಂದೆ. ಅವನದು ಪಿತೃಹೃದಯ. ತನ್ನ ಮಕ್ಕಳು ಅಗ್ನಿಯಿಂದ ಸುರಕ್ಷಿತರಾಗಿರುವರೋ ಇಲ್ಲವೋ ಎಂದವನಿಗೆ ವಿಮನಸ್ಕತೆ, ಆ ಮಕ್ಕಳ ತಾಯಿಯ ಬಗ್ಗೆ ಅವನಿಗೆ ಕರುಣೆಯು ತನ್ನ ಹಿಂದಿನ ಪ್ರಿಯತಮೆ ಎಂಬ ದೃಷ್ಟಿಯಿಂದ ಇತ್ತು ಎನ್ನುವುದಕ್ಕಿಂತ, ಅವಳು ತನ್ನ ಮಕ್ಕಳ ತಾಯಿ ಎಂಬ ದೃಷ್ಟಿಯಿಂದ ಇತ್ತು—ಎನ್ನುವುದು ಉಚಿತ. ಮಂದಪಾಲನ ಮಕ್ಕಳ ಮಮತೆಯನ್ನು ತನ್ನ ಪ್ರೇಮಪಾಶದಿಂದ ಕಟ್ಟಿಹಾಕಲು ಅಸಮರ್ಥಳಾಗಿ ರತ್ತಪಿಪಾಸೂ ಲಪಿತಾ ಅಧಿಕಾರವಾಣಿಯಿಂದಲೇ ಅವನನ್ನು ಬೀಳ್ಕೊಟ್ಟಳು—'ನಿಮಗೆ ನಿಮ್ಮ ಮಕ್ಕಳ ಜೀವದ ಮೇಲೆ ಮಮತೆಯಿದ್ದರೆ ಲಪಿತಾಳ ಪ್ರೇಮಕ್ಕೆ ಅಪಮಾನ ಮಾಡದಿರಿ'—ಎಂದು.

ಖಾಂಡವವನದಲ್ಲಿ ತನ್ನವೆನ್ನುವುದೆಲ್ಲ ಸುರಕ್ಷಿತವಿದ್ದುದನ್ನು ಕಂಡು ಮಂದಪಾಲನಿಗೆ ಸಮಾಧಾನ ಆಯಿತು. ಪುತ್ರವತ್ಸಲ ಪಿತ ತನ್ನ ಪುತ್ರರನ್ನು ಮತ್ತೆ ಕೂಡಿದ್ದ. ಜರಿತಾ ಅಲ್ಲೊಂದು ನಿಷ್ಪ್ರಯೋಜಕ ಜಂತುವಾಗಿ ನಿಂತಿದ್ದಳು. ಯಾಕೆಂದರೆ ಅವಳಿಗೆ ಗೊತ್ತಿತ್ತು, ಮಂದಪಾಲ ಬಂದದ್ದು ತನ್ನ ಮಕ್ಕಳಿಗಾಗಿ, ತನಗಾಗಿ ಅಲ್ಲ—ಎಂದು. ಮಂದಪಾಲನು ಮಾತ್ರ ಪೂರ್ಣ ಸೋತುಹೋಗಿದ್ದ; ಜರಿತಾಳ ಕರುಣವಶೆ ನೋಡಿಯಲ್ಲ, ಮಕ್ಕಳ ಬಾಡಿದ ಮುಖನೋಡಿ. ಈಗ ಮಂದಪಾಲನ ಪ್ರೀತಿಯ ಕರೆಯಲ್ಲಿಯೂ ಜರಿತಾಳಿಗೆ ವಿಶ್ವಾಸವಿಲ್ಲ. 'ನಾನು ಹೂಮಂಚದ ಹೆಣ್ಣಲ್ಲ, ನಾನೊಂದು ವಾತ್ಸಲ್ಯ ಕಾತಕ ಕುಟೀರ' ಎಂದು ಆಗ ಜರಿತಾಳು ಆಂದ ಮಾತು—ಒಂದು ಕೊಂಕುನುಡಿಯೂ ಅಲ್ಲ, ಅಹಂಭಾವದ ಮಾತೂ ಅಲ್ಲ. ಅದು ಅಸಹಾಯ ಹೆಣ್ಣೊಂದರ ಕರುಳಿನ ಕರುಣಾಜನಕ ಕೂಗು. ಮಂದಪಾಲನ ಮುಚ್ಚಿದ ಕಣ್ಣು ತೆರೆದುವು. ಅವನಿಗೀಗ ಜರಿತಾ ಕೇವಲ ಸುಂದರಿಯಾಗಲಿಲ್ಲ, ಸಮಸ್ತ ಸೌಂದರ್ಯವೇ ಆದಳು. ಜರಿತಾಳ ವಾಸಂತೀ ಹೂಮಾಲೆ ಮಂದಪಾಲನ ಕೊರಳನ್ನು ಮತ್ತೊಮ್ಮೆ ಅಲಂಕರಿಸಿತು. ತನ್ನ ವೈವಾಹಿಕ ಜೀವನದಲ್ಲಿ ಘಟಿಸಿದ ಹಿಂದಿನ ಆ ವಿಷಗಳಿಗೆಗೆ, ತೂಗುಮಂಚದ ಈ ರುದ್ರ ಸ್ಮರಣೆಗಳಿಂದ ಬಿಡುಗಡೆ ಹೊಂದಿ ದೂರ ಎಲ್ಲಾದರೂ ಹೋಗಬೇಕೆನ್ನುವಷ್ಟರಲ್ಲಿ, ಲಪಿತಾ ಪ್ರತ್ಯಕ್ಷಳಾದಳು. ಲಪಿತಾ ಈಗ ಅಭಿಶಾಪವನ್ನೀಯಲು ಬರಲಿಲ್ಲ; ತನ್ನ ಸೋಲನ್ನು ಒಪ್ಪಿಕೊಳ್ಳಲು ಬಂದಿದ್ದಳು. ಲಪಿತಾ ಸೋತಿದ್ದಳು; ಮಂದಪಾಲನಿಗಾಗಿ ಅಲ್ಲ, ಜರಿತಾಳಿಗಾಗಿಯೂ ಅಲ್ಲ, ಅನಳ ನಾಲ್ಕು ಮುದ್ದು ಮಕ್ಕಳಿಗಾಗಿ, ಅವರನ್ನು ಅವರ ಪಾಲಿಗೆ ಬಿಟ್ಟು ಹೊರಟು ಹೋದಳು.—ತನ್ನ ತೂಗುಮಂಚದೆಡೆಗೆ.

'ಚಿರಕಾಲದ ಏಕಾಕಿನಿ' ಹೆಣ್ಣು–ಗಂಡಿನ ಮನಸ್ಸಿನ ರೀತಿನೀತಿಗಳ ಮೇಲೆ ಚೆನ್ನಾಗಿ ಬೆಳಕನ್ನು ಕೆಡಹುತ್ತದೆ. ಇಲ್ಲಿ ಎರಡು ವಿರೋಧಾಭಾಸ ಗುಣವುಳ್ಳ ಹೆಣ್ಣುಗಳ ಸುತ್ತಲೂ ಹಬ್ಬಿದ ಗಂಡಿನ ಬಾಳೊಂದು ಚಿತ್ರಿತವಾಗಿದೆ. ಅಲ್ಲದೆ, ಅಮಾನುಷ ಬಾಳನ್ನು ಇಚ್ಛಿಸಿ ಅದರಲ್ಲಿಯ ಸುಖವೆಂಬ ಮೃಗಜಲದ ಬೆನ್ನುಹತ್ತಿ ಜೀವ ನಾದ್ಯಂತ ದುಃಖಸಾಗರದಲ್ಲಿ ತೇಲಾಡಿದ ಲಪಿತಾಳ ಜೀವನದ ಕರುಣ ಕಥೆಯೂ ಹೌದು; 'ಚಿರಕಾಲದ ಏಕಾಕಿನಿ' ಲಪಿತಾಳಿಗೆ ಕೇವಲ ಪ್ರಿಯನ ಪ್ರೇಮವು ಬೇಕಿದ್ದರೆ, ಜರಿತಾಳಿಗೆ ಅದರೊಡನೆ ಸಂತಾನವೂ ಬೇಕು. ಒಬ್ಬಳದು ಶುಷ್ಕಪ್ರೇಮಧರ್ಮವಾದರೆ, ಮತ್ತೊಬ್ಬಳದು ಜಾಗೃತ ಗೃಹಧರ್ಮ, ಒಬ್ಬಳ ಪ್ರೀತಿಯ ಅರ್ಥ ತೀರ ಸಂಕುಚಿತವಾದರೆ, ಮತ್ತೊಬ್ಬಳದು ವಿಶಾಲ. ಒಬ್ಬಳಿಗೆ ಸಂತಾನವು ತೀರ ಗೌಣವಾದರೆ ಅದೇ ಮತ್ತೊಬ್ಬಳಿಗೆ ಪ್ರಾಮುಖ್ಯ. ಒಬ್ಬಳು ಚಿರಸಂಗಲೀನ ಹೆಣ್ಣಾದರೆ ಮತ್ತೊಬ್ಬಳು ವಾತ್ಸಲ್ಯಕಾತರ ಕುಟೀರ, ಈ ಎರಡು ಹೆಣ್ಣುಗಳ ಗುಣಧರ್ಮಗಳಲ್ಲಿ ಅಜಗಜಾಂತರ ಇದೆ; ಆದರೆ ಎರಡೂ ಹೆಣ್ಣೇ. ಅಂತೆಯೇ ಹೆಣ್ಣಿಗೆ ಸಹಜವಾದ ಮಾತೃತ್ವ ಇಬ್ಬರಲ್ಲಿಯೂ ಇದೆ. ಜರಿತಾಳಲ್ಲಿ ಅದು ಜಾಗೃತಾವಸ್ಥೆಯಲ್ಲಿದ್ದರೆ, ಲಪಿತಾಳಲ್ಲದು ಸುಪ್ತಾವಸ್ಥೆಯಲ್ಲಿ ಇದೆ. ಅದೂ ಒಮ್ಮೆ ಪರಿಸ್ಥಿತಿಯ ಸೆಳವಿಗೆ ಸಿಕ್ಕು ಜಾಗೃತವಾಗುತ್ತದೆ. ಮತ್ತು ಲಪಿತಾಳನ್ನು ಸೋಲಿಸುತ್ತದೆ.

ಮಂದಪಾಲನೂ ಒಂದು ದೃಷ್ಟಿಯಿಂದ ಸಾಮಾನ್ಯ ಮನುಷ್ಯನೇ. ಅವನಿಗೆ ತನ್ನ ಪ್ರಿಯಳಿಂದ ಸಂತಾನವು ಬೇಕು; ಆದರೆ ತನಗೆ ಸಲ್ಲತಕ್ಕ ಪ್ರೇಮದ ಅಂಶ ಕಡಮೆಯಾಗಿರಬಾರದು. ಜರಿತಾಳಿಂದ ಅತೃಪ್ತವಾದ ಅವನ ಮನಸ್ಸು ಸ್ವಾಭಾವಿಕವಾಗಿ ಲಪಿತಾಳ

ಕಡೆಗೆ ಹರಿಯಿತು. ಯಾವ ಶಿಶುವಿನ ಕ್ರಂದನವೂ ಕೇಳದ ಹೂವಿನ ತೂಗುಮಂಚವು ಅವನಿಗೆ ಕೆಲಕಾಲ ಹಾಯಾಗಿ ತೋರಿದರೂ, ಅವನ ಹೃದಯದಲ್ಲಿಯೇ ಪ್ರತಿಧ್ವನಿಸುತ್ತಿತ್ತು ತನ್ನ ಶಿಶುಗಳ ಕ್ರಂದನ. ಎಷ್ಟೆಂದರೂ ಅವನು ತಂದೆ. ಆ ಪಿತೃಹೃದಯ ಕೇವಲ ವ್ರೇಮದಿಂದ ತೃಪ್ತವಾಗುವುದಾದರೂ ಹೇಗೆ? ಅಂತೆಯೇ ಅವನು ಮರಳಿ ಹೆಜ್ಜೆ ಹಾಕಿದ ಪಾಂಡವವನದತ್ತ. ಗೂಡು ಮರೆತ ಹಕ್ಕಿಯು ಗೂಡನ್ನು ಸೇರಿತು.

'ಚಿರಕಾಲದ ಏಕಾಕಿನಿ'ಯು ಕೇವಲ ಒಂದು ಪೌರಾಣಿಕ ರೂಪಕ ಎನಿಸದೆ, ನಿಜವಾದ ಅರ್ಥದಲ್ಲಿ ಒಂದು 'ಆಧುನಿಕ ಸಣ್ಣ ಕಥೆ' ಎನಿಸುವುದು. ನಮ್ಮ ನಿತ್ಯದ ಬಾಳಿನ ಒಂದು ಜ್ವಲಂತ ಸಮಸ್ಯೆಯ ಜೀವಂತ ಚಿತ್ರವಿದು. ನಿಸರ್ಗದಲ್ಲಿ ಬದಲಾವಣೆಯಾದರೂ ಮನುಷ್ಯನ ಮನದ ಭಾವನೆಗಳಲ್ಲಿ ಎಂದಿಗೂ ಬದಲಾವಣೆಯಾಗದು. ಕಾರಣ ಲಪಿತಾ, ಜರಿತಾ ಮತ್ತು ಮಂದಪಾಲರ ಸಮಸ್ಯೆಗಳು, ಯಾವುದೆ ಪುರಾಣಕಾಲದ ಸಮಸ್ಯೆಗಳಾಗದೆ ನಮ್ಮ ನಿಮ್ಮ ನಿತ್ಯ ಸಮಸ್ಯೆಗಳಾಗಿವೆ.

ಲಪಿತಾಳಂತೆ ಬಣ್ಣದ ಬದುಕಿಗೆ ಮಾರುಹೋಗಿ ಬಾಳನ್ನು ಮಣ್ಣುಗೂಡಿಸಿಕೊಂಡ ನಾರಿಯರೂ ನಮ್ಮಲ್ಲಿದ್ದಾರೆ; ಜರಿತಾಳಂತೆ ಗೃಹಧರ್ಮವನ್ನು ಜಾಗೃತವಾಗಿರಿಸಿ ವಾತ್ಸಲ್ಯಮೂರ್ತಿಯಾಗಿ ಬಾಳಿ ಮಣ್ಣಿನೊಡನೆ ಹೊನ್ನಾಗಿ ಹೋದ ಮಹಿಳಾಮಣಿಗಳೂ ಇಲ್ಲಿದ್ದಾರೆ. ಮಂದಪಾಲನಂತೆ ಬಾಳಿನ ಗದ್ದಲಕ್ಕೆ ಬೇಸತ್ತು, ಅಮಾನುಷ ಬಾಳು ಬಯಸಿ ಕೈ ಸುಟ್ಟುಕೊಂಡು, ಕೊನೆಗೆ ನಮ್ಮ ಮಾನವೀಯ 'ಗದ್ದಲದ ಬಾಳಿ'ನಲ್ಲಿಯೇ ಸುಖವಿದೆ ಎಂಬುದನ್ನರಿತ ಪುರುಷರತ್ನಗಳಿಗೂ ನಮ್ಮಲ್ಲಿ ಕೊರತೆ ಇಲ್ಲ.

ಕತೆಯಲ್ಲಿಯ ಪಾತ್ರಗಳು ಪ್ರತಿಮೆಗಳಲ್ಲಿಯೆ ಹುಟ್ಟಿ ಬೆಳೆದು ಪ್ರತಿಮೆಗಳಲ್ಲಿಯೇ ಕೊನೆಗೊಂಡಿವೆ. ಮಂದಪಾಲ ಸಪುತ್ರಿಕ ಜೀವನ ಬಯಸಿದ. ಆ ಪ್ರಕಾರ ಬಾಳಿದ. ನಡುವೆ ಮಾತ್ರ ಹಾದಿ ತಪ್ಪಿದ್ದ. ಕೊನೆಗೂ ರೈಲು ಹಳಿಯ ಮೇಲೆ ಬಂದಿತು. ಜರಿತಾಳೂ ಸಪುತ್ರಿಕ ಜೀವನ ಇಚ್ಛಿಸಿ ಪಡೆದಳು. ಲಪಿತಾ ಮಾತ್ರ ಚೀರಸಂಗಲೀನ ನಲ್ಲನಲ್ಲೆಯರ ಬಾಳನ್ನು ಬಯಸಿದಳು. ಹೊದಲು ಏಕಾಕಿನಿಯಾಗಿ ಬೆಳೆದವಳು ನಡುವೆ ತನ್ನ ಇಚ್ಛೆ ಪೂರ್ಣಮಾಡಿಕೊಂಡಳಾದರೂ ಕೊನೆಗೆ ಉಳಿದವಳು ಏಕಾಕಿನಿಯಾಗಿಯೇ! ಮಂದಪಾಲನ ಹೊರತು ಅವಳ ಹೃದಯದಲ್ಲಿ ಮತ್ತಾರಿಗೂ ಸ್ಥಾನವಿರಲಿಲ್ಲ. ಕಾರಣ ಮಂದಪಾಲನ ನಿರ್ಗಮನದಿಂದ ಅವಳು ಎಂದೆಂದಿಗೂ ವಿರಹಿಣಿಯಾಗಿಯೇ— ಚಿರಕಾಲದ ಏಕಾಕಿನಿಯಾಗಿಯೇ— ಉಳಿಯಬೇಕಾಯಿತು. ಅವಳ ಬಗ್ಗೆ ನಮ್ಮಲ್ಲಿ ಕನಿಕರ ಹುಟ್ಟದಿರದು.

'ಚಿರಕಾಲದ ಏಕಾಕಿನಿ'ಯ ಶೈಲಿ ಸರಳವಾಗಿದೆ, ಸುಂದರವಾಗಿದೆ. ಸಂಸ್ಕೃತ ಶಬ್ದಮಿಶ್ರಿತ ಕೆಲ ವಾಕ್ಯಗಳು ಸಾಮಾನ್ಯ ಓದುಗನಿಗೆ ಕಠಿಣವೆನಿಸಿದರೂ ಕಥೆಯ ಸನ್ನಿವೇಶಕ್ಕೆ ಅವು ಅವಶ್ಯವಾಗಿವೆ ಮತ್ತು ಕಥೆಗೆ ಕಳೆಯನ್ನು ಕಟ್ಟಿವೆ ಕಥೆಯ ಓಟ ಎಲ್ಲಿಯೂ ಕುಗ್ಗಿಲ್ಲ, ಜೋಗದ ಜಲಪಾತದಂತೆ ಅದು ಧುಮ್ಮಿಕ್ಕುತ್ತಲೇ ಇದೆ. ಕಥೆಯ ಪ್ರಾರಂಭ ಎಷ್ಟು ಆಕರ್ಷಕವಾಗಿದೆಯೋ ಮುಕ್ತಾಯವೂ ಅಷ್ಟೇ ಹೃದಯಸ್ಪರ್ಶಿಯಾಗಿದೆ— 'ಅದೇ ಪುನ್ನಾಗ ತರುವಿನ ಛಾಯೆ ಇತ್ತು. ಅದೇ ವಸಂತ ಸಮೀರ ಬೀಸುತ್ತಿತ್ತು. ಅದೇ ಹೂವಿನ ತೂಗುಮಂಚವಿತ್ತು. ಆದರೆ ಇಂದು ಅದರ ಒಂದು ಆ ಸನವನ್ನು ಬರಿದಾದ ಆದರೆ ಸ್ರೇಮದಾಯಾಸದಿಂದ ಭಾರವಾದ ಒಂದು ಹೃದಯವು ಅಲಂಕರಿಸಿದ್ದರೆ, ಮತ್ತೊಂದಾಸನವು ಎಂದೆಂದಿಗೂ ಬರಿದೋ ಬರಿದು!' ಹಾಂ, ಮಂದಪಾಲನ ಆಗಮನದ ಪೂರ್ವದಲ್ಲಿಯ ಸ್ರೇಮಿ ಲಪಿತಾಳಿಗೂ ಈಗಿನ ಚಿರ ಏಕಾಕಿನಿ ಲಪಿತಾಳಿಗೂ ಒಂದು ಮಹದಂತರವಿತ್ತು. ಈಗ ಲಪಿತಾ ಸತ್ಯವೊಂದನ್ನು ಕಂಡಿದ್ದಳು — ಸ್ರೇಮವು ಪರಿಪೂರ್ಣವಾಗುವುದು ಸಂತಾನದ ಉತ್ಪತ್ತಿಯಲ್ಲಿಯೇ ಎಂದು.

ಅಶ್ಲೀಲ ಕಾಮದ ಕಟ್ಟುಕಥೆಗಳು ನಾಯಿಕೊಡೆಯಂತೆ ಬೆಳೆಯುತ್ತಿರುವ ಈ ಕಾಲದಲ್ಲಿ 'ಜಯಂತಿಯು' ಒಂದು ಸತ್ಯ–ಸುಂದರ–ಸುಶೀಲವಾದ ಪೌರಾಣಿಕ ರೂಪಕಕ್ಕೆ ಜನ್ಮವಿತ್ತದ್ದು ನಮಗೆಲ್ಲ ಅಭಿಮಾನಾಸ್ಪದ ಸಂಗತಿ. ಬಂಗಾಲದ ರತ್ನವೊಂದನ್ನು ಕನ್ನಡಮ್ಮನ ಮುಡಿಗೆ ತೊಡಿಸಲೆಂದು 'ಜಯಂತಿ'ಯ ಉಡಿಯಲ್ಲಿ ತಂದುಹಾಕಿದ ಶ್ರೀಮಾನ್ ಮುದೇನೂರು ಸಂಗಣ್ಣನವರಿಗೆ ಕನ್ನಡಮ್ಮನ ಅಡಿಯಾಳುಗಳಾದ ನಾವು ಚಿರಋಣಿಗಳು.

ಮುರುಗಿ ಮುಸಲ್ಲಂ

[ಸಣ್ಣಕಥೆಯ ವಿಮರ್ಶೆ]

ಶ್ರೀ. ಎಸ್. ಆರ್. ಹಾಡಿ; 'ವಿಶಾರದ' ಕಲ್ಲಕಟ್ಟೆ

ಕೇವಲ ದೊಡ್ಡ ವಿಷಯಗಳನ್ನಷ್ಟೇ ಆರಿಸಿಕೊಂಡು ಬರೆಯುವುದು ಮಾತ್ರ ಸಾಹಿತ್ಯವಲ್ಲ, ಜನರ ದೃಷ್ಟಿಗೆ ಬೀಳದ ಚಿಕ್ಕವಸ್ತುಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ, ಅದರಲ್ಲಿರುವ ಸೌಂದರ್ಯವನ್ನು ಎತ್ತಿ ತೋರಿಸುತ್ತಾನೆ ಸಾಹಿತಿ. ಜನಸಾಮಾನ್ಯರ ದೃಷ್ಟಿಯಲ್ಲಿ ಕಸವಾಗಿದ್ದುದನ್ನೂ ರಸವನ್ನಾಗಿ ಮಾಡಿ ತೋರಿಸಬಲ್ಲ ಅದ್ಭುತ ಶಕ್ತಿ ಸಾಹಿತಿಗಿದೆ. ಪ್ರತಿಭಾವಂತನಾದ ಸಾಹಿತಿಯು ಎಂತಹದೇ ವಿಷಯವನ್ನಾದರೂ ಆರಿಸಿಕೊಂಡು ರಸದೂಟವನ್ನು ತಯಾರಿಸಿ ರಸಿಕರಿಗೆ ಉಣಬಡಿಸಬಲ್ಲ. 'ಇದಕ್ಕೆ ದೃಷ್ಟಾಂತವಾಗಿ ನಮ್ಮ ಕಣ್ಮುಂದೆ ನಿಂತಿದೆ. ಶ್ರೀ. ಅಶ್ವತ್ಥರ ಲೇಖನಿಯು ಚಿತ್ರಿಸಿದ 'ಮುರಗಿ ಮುಸಲ್ಲಂ'

ಜೋಸಯ್ಯನ ಹೆಂಡತಿ ಮೇರಿಯಮ್ಮ ಬಂಜೆ; ಅವನ 'ರಾಣಿ' ಪೆಸರಿನ ಹೇಂಟೆ, ಮೊದಲು ಅಸಂಖ್ಯಾತ ಮೊಟ್ಟೆಗಳನ್ನಿಡುತ್ತಿದ್ದು ಕೊನೆಗೆ ಮೊಟ್ಟೆಯಿಡುವುದನ್ನು ನಿಲ್ಲಿಸಿತು. ಹೇಂಟೆ ಬಂಜೆಯಾಯ್ತೆಂಬ ಕಾರಣದಿಂದ ಮೇರಿಯಮ್ಮನ ಐವತ್ತನಾಲ್ಕನೆಯ ಹುಟ್ಟುಹಬ್ಬದಂದು 'ಮುರುಗಿ ಮುಸಲ್ಲಂ' ಎಂಬ ಹೊಸತಿಂಡಿಗಾಗಿ ಅದರ ಬಲಿ

ಯಾಯಿತು. ಎಂತಹ ವಿಪರ್ಯಾಸ ! ತನ್ನ ಹೆಂಡತಿ ಯಾವಜ್ಜಿವವೂ ಬಂಜೆಯೆಂಬುದನ್ನು ಮರೆತು, ಹೇಂಟೆಯು ಮೊಟ್ಟೆಯಿಡುವುದನ್ನು ನಿಲ್ಲಿಸಿದ ಮಾತ್ರಕ್ಕೇ ಬಂಜೆಯಾಯಿತೆಂದು ತೀರ್ಮಾನಿಸಿ ಅದನ್ನು ಕೊಂದು ಬಿಡುತ್ತಾನೆ. ಇದನ್ನು ಜೋಸಯ್ಯನ ಭ್ರಾಂತಿ ಮೂಲವಾದ ತಿಳಿವಳಿಕೆಯೆನ್ನಲೇ ? ಅಥವಾ ಇದು ಅವನ ಹೃದಯಹೀನತೆ ಯೆನ್ನಬೇಕೆ ?

ಕಥಾ ಸೂತ್ರದಲ್ಲಿ ನಾಲ್ಕೈದು ಪಾತ್ರಗಳು ಪೋಣಿಸಲ್ಪಟ್ಟಿವೆ. ಆದರೆ ಕಥೆಯ ತುಂಬೆಲ್ಲ ಬೆಳಕು ಚೆಲ್ಲುವ ಪಾತ್ರ ಒಂದೇ ಒಂದು— ಜೋಸಯ್ಯ. ಉಳಿದ ಸೇರಿಯಮ್ಮ, ರೋಜ, ಜಾನ್, ಜೋಸಯ್ಯನ ಮಿತ್ರ—ಇವೆಲ್ಲ ಪೋಷಕ ಪಾತ್ರಗಳು.

ಜೋಸಯ್ಯ ಅಡಿಗೆ ಮತ್ತು ಕೋಳಿ ಸಾಕಣೆಯಲ್ಲಿ ಪ್ರವೀಣ. 'ಕರ್ನಲ್ ಕಾರ್ತ ರೈಟ್' ಸಾಹೇಬರಲ್ಲಿ ಹನ್ನೊಂದು ವರ್ಷ ಅಡಿಗೆಯವನಾಗಿದ್ದು, ಇಪ್ಪತ್ತುನಾಲ್ಕು ವರ್ಷ ಬಟ್ಲರ್ ಕೆಲಸಮಾಡಿ, ಸಾಹೇಬರು ಇಂಗ್ಲೆಂಡಿಗೆ ಹೋದಮೇಲೆ ರಿಟೈರ್' ಆದವನು. ಸಾಹೇಬರು ಹೋಗುವಾಗ ಕೊಟ್ಟಿದ್ದ ಐವತ್ತು ಕೋಳಿಗಳನ್ನು ಬಹಳ ಶ್ರದ್ಧೆಯಿಂದ ಸಾಕಿ ಮುನ್ನೂರಕ್ಕೂ ಮೇಲ್ಪಟ್ಟು ಕೋಳಿಗಳನ್ನು ಬೆಳಸಿಕೊಂಡಿದ್ದಾನೆ. 'ರಾಜ' ಹೆಸರಿನ ಹುಂಜ ಚಾಂಪಿಯನ್ ಬಹುಮಾನ ಪಡೆದರೆ, 'ರಾಣಿ' ಹೆಸರಿನ ಹೇಂಟೆ ಇನ್ನೂರು ರೂಪಾಯಿ ಬಹುಮಾನ ಮತ್ತು ಮೊಟ್ಟೆಯಿಡುವುದರಲ್ಲಿ ಮೊದಲನೆಯದೆಂದು ಚಿನ್ನದ ಪದಕ ಪಡೆಯಿತು. ಜೋಸಯ್ಯನ ಕೋಳಿಸಾಕಣೆ ಉತ್ತಮವಾಗಿದೆ ಎಂಬುದಕ್ಕೆ ಇದು ನಿದರ್ಶನ. ಈ ಕೋಳಿಯ ಆಸ್ತಿಯಿಂದ ತಿಂಗಳಿಗೆ ನೂರುನೂರೈವತ್ತು ರೂಪಾಯಿ ಸಂಪಾದಿಸುತ್ತಾನೆ ಆತ. ಬಿಳಿಲೆಗೆಹಾರನ್, ಬ್ಲೂಡ್ ಐಲೆಂಡ್‌ರೆಡ್ ಮೊದಲಾದ ಉತ್ತಮತಳಿಯ ಕೋಳಿಗಳನ್ನು ಸಾಕುವುದರಿಂದ ಎಷ್ಟು ಲಾಭವಿದೆ ಎಂಬುದನ್ನು ಸ್ಪಷ್ಟಪಡಿಸಿ, ಕೋಳಿ ಸಾಕಣೆಯು ಒಂದು ಒಳ್ಳೆಯ ಉದ್ಯೋಗವೆಂಬುದನ್ನು ಲೇಖಕರು ಜೋಸಯ್ಯನ ಪಾತ್ರದ ಮೂಲಕ ತೋರಿಸಿ ಕೊಟ್ಟಿದ್ದಾರೆ.

ಗೌರವ, ಪ್ರತಿಷ್ಠೆಗಳನ್ನು ಪಡೆದು ಮೆರೆಯಬೇಕೆಂಬ ಬಯಕೆ ಜೋಸಯ್ಯನಲ್ಲಿ ಬಲವಾಗಿದೆ. ತನ್ನ ಹೇಂಟೆ ಮೊಟ್ಟೆಯಿಡುವುದರಲ್ಲಿ ಪ್ರಪಂಚದ ರೆಕಾರ್ಡನ್ನು ಮುರಿಯ ಬೇಕೆಂದು ಆತನ ಇಚ್ಛೆ. ಅದಕ್ಕಾಗಿ ಅವನು ಮಾಡಿದ ಸಾಹಸ ಅಷ್ಟಿಷ್ಟಲ್ಲ. ತನ್ನ ಕೋಳಿ ಸಂಪತ್ತನ್ನು ಮಿತ್ರನಿಗೆ ತೋರಿಸಿ ವಿವರಿಸುವಲ್ಲಿ ಅವನ ಸ್ವಾಭಿಮಾನ, ಹೆಮ್ಮೆ, ಕೋಳಿ ಸಾಕಣೆಯಲ್ಲಿ ಅವನಿಗಿರುವ ಆಸಕ್ತಿ ಎದ್ದು ಕಾಣುತ್ತದೆ. ಆಗಾಗ ಮಿತ್ರರನ್ನು ಮನೆಗೆ ಆಮಂತ್ರಿಸಿ ಭೋಜನ ಕೂಟಏರ್ಪಡಿಸುವುದು ಅವನಿಗೊಂದು ಆನಂದದಾಯಕವಾದ ವಿಷಯ. ತನ್ನ ಎರಡನೆಯ ಹೆಂಡತಿಯಾದ ಮೇರಿಯಮ್ಮನನ್ನು ಆತ ಬಹಳ ಪ್ರೀತಿಸುತ್ತಿರುವುದು ಸ್ವಾಭಾವಿಕವಾಗಿದೆ.

ಜೋಸಯ್ಯನು ರಾಣಿ ಹೇಂಟೆಯನ್ನು ಪ್ರೀತಿಯಿಂದ ಸಾಕುತ್ತಿದ್ದುದು ತನ್ನ ಸ್ವಾರ್ಥಕ್ಕಾಗಿ ಮಾತ್ರ. ಅದು ಮೊಟ್ಟೆಯಿಡುವುದನ್ನು ನಿಲ್ಲಿಸಿದ ಕೂಡಲೇ ಡಾಕ್ಟರರ ಬಳಿಗೋಡಿ ಪರೀಕ್ಷೆ ಮಾಡಿಸುವುದು, ಇಂಜಕ್ಷನ್ ಕೊಡಿಸುವುದೆಲ್ಲಾ ಯಾವುದಕ್ಕಾಗಿ ? ತನ್ನ ಹೇಂಟೆಯು ಮೊಟ್ಟೆಯಿಡುವುದರಲ್ಲಿ ಮೊದಲನೆ ಸ್ಥಾನವನ್ನು ಹೊಂದಿ ಬಹುಮಾನ ಪಡೆಯುವುದಕ್ಕಾಗಿ ಹೊರತು ಅದರ ಮೇಲಿನ ದಯೆಯಿಂದಲ್ಲ. ತನ್ನ ಪ್ರಯತ್ನ ನಿಷ್ಫಲವೆಂದು ಮನಗಂಡಾಗ ನಿರ್ದಯನಾಗಿ ಅದನ್ನು ಹಬ್ಬದೂಟಕ್ಕೆ ಬಲಿಗೊಟ್ಟ ಮೊದಲು ಅನೇಕ ಮೊಟ್ಟೆಗಳನ್ನಿಟ್ಟಿದ್ದರೂ, ಎರಡುಬಾರಿ ಬಹುಮಾನ ಪಡೆದಿದ್ದರೂ ಅದನ್ನು ಗಣಿಸದೆ ಈ ರೀತಿ ಬಲಿಗೊಟ್ಟಿನೆಂದು ತಿಳಿದಾಗ, ಜೋಸಯ್ಯನ ಮಿತ್ರನಂತೆ ಓದುಗರೂ ದಂಗು ಬಡಿದು ಹೋಗುತ್ತಾರೆ. ಹೇಂಟೆಗೆ ಜೋಸಯ್ಯನು ಮಹಾಪರಾಧ ಮಾಡಿದ ಅವನ ಈ ಕೃತಘ್ನತೆ ಮತ್ತು ನಿರ್ದಯತೆ— ಇವುಗಳ ಅತ್ಯಂತ ಮಾರ್ಮಿಕ ವಿಡಂಬನೆಯೇ ಈ ಕಥೆಯಲ್ಲಿರುವ ಮುಖ್ಯ ವಿಷಯ.

ಇದರಲ್ಲಿ ಬರುವ ಪಾತ್ರಗಳೆಲ್ಲಾ ಪಾಶ್ಚಾತ್ಯ ಸಭ್ಯತೆಯ ಪ್ರತೀಕಗಳಾಗಿವೆ. ಜೋಸಯ್ಯನ ಮನೆಯಲ್ಲಿ ಅವನ ಮಿತ್ರರಿಗೆ ನಡೆಯುವ ಆದರೋಪಚಾರಗಳನ್ನು ನೋಡಿದರೆ ಸಾಕು— ಅದು ಪಾಶ್ಚಾತ್ಯ ನಡುವಳಿಯ ಪಡಿಯಚ್ಚೆಂದು ಧಾರಾಳವಾಗಿ ಹೇಳಬಹುದು.

ಕಥೆ ಬರೆಯುವುದರಲ್ಲಿ ಅಶ್ವತ್ಥರದು ಪಳಗಿದ ಕೈ ಎನ್ನಬಹುದು. ಅವರ ಪ್ರತಿಯೊಂದು ಕಥೆಯಲ್ಲಿಯೂ ಅವರದೇ ಆದ ವೈಶಿಷ್ಟ್ಯ ಎದ್ದು ಕಾಣುತ್ತದೆ 'ಕಥಾ ನಿರೂಪಣೆ, ಭಾಷೆ' ಶೈಲಿ ಎಲ್ಲದರಲ್ಲಿಯೂ ನವೀನತೆ ಮಾತ್ರವಲ್ಲದೆ ರಸವಿದೆ, ರುಚಿಯಿದೆ. ಪ್ರಸ್ತುತ ಕಥೆಯೂ ಇದಕ್ಕೆ ಹೊರತಾಗಿಲ್ಲ. ವಿಷಯಕ್ಕಿಂತಲೂ ಮುಖ್ಯವಾಗಿ ಈ ಕಥೆಯನ್ನು ಹೇಳಿದ ರೀತಿಯಲ್ಲೇ ಇದರ ಸ್ವಾರಸ್ಯವಿರುವುದನ್ನು ನಾವು ಕಾಣಬಹುದು. ಇದರಲ್ಲಿ ಬರುವ ಜೋಸಯ್ಯ ಮತ್ತು ಅವನ ಮಿತ್ರನ ಸಂಭಾಷಣೆ ಸರಳವೂ ಸುಂದರವೂ ಸ್ವಾಭಾವಿಕವೂ ಆಗಿದ್ದು ಕಥೆಗೆ ಕಳೆಗಟ್ಟಿದೆ. ಶಬ್ದಗಳೂ ವಾಕ್ಯಗಳೂ ಅಶ್ವತ್ಥರ ಆಜ್ಞೆಯಿಂದ ಕುಣಿಯುವಂತೆ ಭಾಸವಾಗುತ್ತದೆ. ತಿಳಿಹಾಸ್ಯದ ಬುಗ್ಗೆಗಳು ಚಿಮ್ಮುತ್ತಿವೆ. ಅಲ್ಲಲ್ಲಿ ಇಂತಹ ಸಾಮಾನ್ಯ ವಿಷಯವೊಂದನ್ನು ಆರಿಸಿಕೊಂಡು ಇಷ್ಟು ಸುಂದರವಾಗಿ ಬರೆಯಲು ಅಶ್ವತ್ಥರಂತಹ ಕೆಲವೇ ಮಂದಿಗೆ ಮಾತ್ರ ಸಾಧ್ಯ.

ಕೋಳಿಯ ಮಾಂಸದಿಂದ ತಯಾರಿಸಿದ ತಿಂಡಿಯ ಕುರಿತು ಬರೆಯುವುದೂ ಒಂದು ಕಥೆಯೇ ?' ಎಂದು ಆಕ್ಷೇಪಿಸುವವರು, ಕಥಾನಿರೂಪಣೆಯ ಸೊಗಸನ್ನು ನೋಡಬೇಕು; ವ್ಯಂಗೋಕ್ತಿಗಳ ತೀಕ್ಷ್ಣತೆಯನ್ನರಿಯಲು ಪ್ರಯತ್ನಿಸಬೇಕು; ಸಂಭಾಷಣೆಯ ಸ್ವಾಭಾವಿಕತೆಯನ್ನು ಮನಗಾಣಬೇಕು; ಲೇಖಕರು ಚಿತ್ರಿಸಿದ ಪಾತ್ರಗಳ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಬೇಕು. ಆಗಲೇನೇ ಈ ಕಥೆಯ ಸ್ವಾರಸ್ಯವನ್ನು ಸವಿಯಲು ಸಾಧ್ಯವಿದೆ.

ಸಣ್ಣಕಥೆಯ ಹೆಸರೆಂಬುದು "ಮುತ್ತೈದೆಯ ಹಣೆಯ ಮೇಲಿದ್ದ ಕುಂಕುಮದಂತೆ" ಎಂದು ಆನಂದರ ಅಭಿಪ್ರಾಯ. ಇವರಿಂದ ಕಥೆ ಹೆಸರು. ಎಷ್ಟು ಪ್ರಾಮುಖ್ಯವಾದುದೆಂದು ನಾವು ಯೋಚಿಸಬಹುದು. ಪ್ರಸ್ತುತ ಕಥೆಗೆ ಲೇಖಕರು 'ಮುರುಗಿ ಮುಸಲ್ಲಂ' ಎಂದು ಹೆಸರು ಕೊಟ್ಟಿರುವುದು ಚೆನ್ನಾಗಿ ಒಪ್ಪುತ್ತದೆ. ಆ ತಿಂಡಿಯನ್ನು ತಯಾರಿಸುವುದಕ್ಕಾಗಿಯೇ ಹೇಂಟೆಯ ಬಲಿಯಾಯಿತು. ಮೇರಿಯ ಇಪ್ಪತ್ತುನಾಲ್ಕ

ನೆಯ ಹುಟ್ಟು ಹಬ್ಬದ ಆ ದಿನದಲ್ಲಿ ಅದು ಎಲ್ಲರ ಆಸೆಯನ್ನೂ ಕೆರಳಿಸಿದ ಹೊಸತಿಂಡಿ ಅದಕ್ಕಾಗಿಯೇ ಬಾಯಲ್ಲಿ ನಿರೂರಿಸಿಕೊಂಡು ಬರುತ್ತಾನೆ ಜೋಸಯ್ಯನ ಗೆಳೆಯ. ಕಥೆಯ ಎಲ್ಲಾ ವಿಷಯಗಳೂ ಅದಕ್ಕೆ ಸಂಬಂಧಿಸಿವೆ. ಅಲ್ಲದೆ ಆ ಹೋಂಟಿಗೂ (ಮುರುಗೀ) ಕಥೆಯಲ್ಲಿ ಪ್ರಧಾನ ಸ್ಥಾನವಿದೆ. ಕತೆಯಲ್ಲಿದ್ದಂತೆಯೇ ತಿಳಿಹಾಸ್ಯ ಮತ್ತು ಮಾರ್ಮಿಕತೆ ಅದರ ಹೆಸರಿನಲ್ಲೂ ಕಂಡು ಬರುತ್ತದೆ. ಆದುದರಿಂದ, ಈ ಶಿರೋನಾಮೆಯನ್ನಿತ್ತುದರಲ್ಲಿ ಔಚಿತ್ಯವಿದೆ.

ಸಣ್ಣಕಥೆಯಿಂದು ಚಿಗುರೊಡೆದು ನಾನಾ ಮುಖವಾಗಿ ಬೆಳೆಯತೊಡಗಿದೆ. ಈಗ ಹೊಸ ಹೊಸ ಮಾದರಿಯ ಕತೆಗಳು ಅನೇಕ್ಷಣೀಯವಷ್ಟೇ ಅಲ್ಲ ಅನಿವಾರ್ಯವೂ ಆಗಿವೆ. ಅಶ್ವತ್ಥರ ಲೇಖನಿಯಿಂದ ಇಂತಹ ನವೀನರೀತಿಯ ನೂರಾರು ಕತೆಗಳು ಹೊರಬೀಳಬೇಕೆಂದು ಬಯಸುತ್ತೇನೆ.

ಪುಸ್ತಕವಿಮರ್ಶೆ

ರಾಯರ ಸೋಲು

(ವಿಮರ್ಶೆ)

ಲೇಖಕರು:— ಬಿ. ಆರ್. ಪಾಡಸ್ಥಿ; ದೃಶ್ಯಸಂಕಲನ, ಪುಟ ೧೦೨ ಬೆಲೆ ೧—೬೨ ನ. ಪೈ.

ಏಕಾಂಕ, ಪ್ರಹಸನ, ನಾಟ್ಯಭಟಗಳನ್ನೊಳಗೊಂಡ ಹೊತ್ತಗೆ ಇದು. ಕನ್ನಡದ ಗಣ್ಯ ಲೇಖಕರೆನಿಸಿದ ಡಾ॥ ಆರ್. ಎಸ್. ಮುಗಳಿಯವರು ಮುನ್ನುಡಿ ಬರೆದಿರುವರು. 'ಯಾವಾಗಲೂ ನಾಟಕದ ಜೀವಾಳ ಮುಖ್ಯ, ತಂತ್ರ ಗೌಣ' ಎಂದು ಅವರು ಹೇಳಿರುವುದು ಒಪ್ಪಕ್ಕ ಮಾತು. ಬಹುಮುಟ್ಟಿಗೆ ಮುನ್ನುಡಿಕಾರರ ಈ ನುಡಿ ಇಲ್ಲಿಯ ಸುಮ—ಸುಮಾರು ಎಲ್ಲ ದೃಶ್ಯಗಳಿಗೆ ಅನ್ವಯಿಸುವುದೆಂದು ಹೇಳಬೇಕು.

ಇಲ್ಲಿಯ 'ಮಹಾದಾನ, ಪಲಾಯನ' ಎಂಬನೆರಡು ರೂಪಕಗಳು ಕೇವಲ ಐತಿಹಾಸಿಕ ಹಿನ್ನೆಲೆ ಮೈಗೂಡಿಸಿಕೊಂಡಿವೆ ಎನಿಸಿದರೆ, ರಾಯರ ಸೋಲು, ಜೀರ್ಣೋದ್ಧಾರ, ಪರ್ಸ್ ಪಾಕಿಸ್ಥಾನ— ಸಮಾಜದ ಇನ್ನಿತರ ಮುಖಗಳು. ಹಬ್ಬದ ಹೋರಾಟ ಪೂಜಾಮಂತ್ರ ತಿರುಗುಪ್ಪು ಸೋಗಿನ ಸುಗ್ಗಿ— ಎಂಬ ಕೊನೆಯವು ಒಂದುಸುರಿನ ಏಕಾಪಾತ್ರಾಭಿನಯ ದೃಶ್ಯಗಳು. ಲೇಖಕರು ಜೀವನವನ್ನು ಒರೆನೋಟದಿಂದ ಒಂದು ಕ್ಷಣ ಕಂಡು ಬೇರೆಡೆಗೆ ಮುಖ ತಿರುಗಿಸಿದಾಗಿನ ಲಕ್ಷಣವಿಲ್ಲಿದೆ.

ಸಾಮಾನ್ಯತಃ ಸಂಭಾಷಣೆಯ ಮಿಂಚೇ ಓದುಗನನ್ನು ನಾಟ್ಯ ಪ್ರಪಂಚದಲ್ಲಿ ಮೈಮರೆಸುವುದಾದರೆ, ಆ ಗುಣ ಮೇಲಿನ ಮಟ್ಟದಲ್ಲಿ ಇಲ್ಲಿಯ ಎಲ್ಲ ಪ್ರಹಸನಗಳಲ್ಲಿ ಸುಸ್ಪಷ್ಟವಾಗಿ ಕಾಣಲಿದೆ. ಅದರೊಡನೆ ನಿರ್ಮಿತವಾಗುವ ಥಳುಕಿನ ವಾತಾವರಣಕ್ಕೂ ಓದುಗನು ಮನಸೋಲುವನು. ಆಗೀಗ ತೂರಿ ಬರುವ ಕೊಂಕು-ವಿನೋದದ ರೀತಿ ನೈಜ ಕಲೋಪಾಸಕರನ್ನು ತಣಿಸುವುದು.

ಸಂಘರ್ಷ (Confliet), ಗತಿಶೀಲತೆ (Action), ನಿಶ್ಚಿತ ಸನ್ನಿವೇಶ, ಏರಿಕೆಯ ಒಂದು ವಿಶಿಷ್ಟ ಮಟ್ಟ (Climax), ಪ್ರೇಕ್ಷಕರನ್ನು ದಿಂಗುಬಡಿಸಿ ಗೊಂಬೆಯಂತೆ ಮಿಟ್ಟಿ ಮಿಸುಕದೆ ಕೂಡಿಸುವ ರಸಕ್ಷಣ (Suspense)— ಇವೆಲ್ಲ ಏಕಾಂಕದ ಸ್ಥೂಲ ಲಕ್ಷಣಗಳೆಂದು ತಾಂತ್ರಿಕನು ಚಾಚೂ ತಪ್ಪದೆ ನಿಷ್ಕುರವಾಗಿ ಉದಾಹರಿಸಿದರೂ, ಇವೆಲ್ಲಕ್ಕೂ ಸಂಬಂಧಿಸಿದ ಒಂದು ಚಮತ್ಕೃತ ಪರಿಣಾಮದ ಉತ್ಕಟತೆಯ ಕಲ್ಪನೆ ಮಾತ್ರ ಲೇಖಕನು ತಂದುಕೊಡಲೇಬೇಕು. ಹಾಗೆ ವಾಡಪ್ಪಿಯವರು ಇಲ್ಲಿ ಓದುಗನ ಮನಸ್ಸನ್ನು ಸೆರೆಹಿಡಿಯುತ್ತಾರೆ.

ಇನ್ನು ಲೇಖಕರೇ ಹೇಳಿದಂತೆ, ನಾಟ್ಯಭಟಗಳನ್ನು ರಂಗಭೂಮಿಗೆ ತಂದು ಪರಿಣಾಮಕಾರಿಯಾಗಿ ಪ್ರದರ್ಶಿಸುವುದು ಒಂದು ಬಗೆಯ ಉನ್ನತಮಟ್ಟದ ಕೌಶಲವೆ ಸರಿ. ಏಕಪಾತ್ರಾಭಿನಯವೆಂದಾಗಂತೂ ಈ ಸಮಸ್ಯೆಗೆ ಇನ್ನಿಷ್ಟು ಸಾಹಿತ್ಯಿಕ ಮಹತ್ತ್ವ ಬರುವುದು. ರಂಗಭೂಮಿಗೆ ತಂದೇ, ಇಲ್ಲಿ ಆ ನಾಟ್ಯಭಟಗಳನ್ನು ಲೇಖಕರು ಕೊಟ್ಟಿರುವರೆಂದ ಮೇಲೆ ಬರೆಣಿಗೆಯ ಪರಿಪೂರ್ಣತೆಯ ಪ್ರಶ್ನೆ ಬಹ್ವಂಶವಲ್ಲಿ ಬಿಟ್ಟು ಹೋಗುವುದು. ಕೇವಲ ಶಬ್ದಚ್ಛಲ ನಾಟ್ಯಭಟವಲ್ಲಿ ಪ್ರಮುಖವಾಯಿತು ಎಂದು ತೀವ್ರತಾಳ್ಮೆಗೆಟ್ಟ ಪ್ರೇಕ್ಷಕನಿಗೆ ನಿಸಿವರೂ ಸಾಮಾನ್ಯ ಪ್ರೇಕ್ಷಕನು ಮಾತ್ರ ಪೂಜಾಮಂತ್ರ- ಸೋಗಿನ ಸುಗ್ಗಿಗಳನ್ನು ನೋಡಿ ಆ ಆ ಸನ್ನಿವೇಶಗಳಲ್ಲಿ ನಿಃಸ್ಸಂಶಯವಾಗಿ ತಾದಾತ್ಮ್ಯ ತಳೆಯುವನು. ಇಂತಹ ಹಲವಾರು ಸನ್ನಿವೇಶ ಅಡಿ ಇಟ್ಟಾಗ ಒಂದು ಕ್ಷಣ ಯೋಚನಾಪರನಾಗುವನು.

ಯಾರು ಹೊಣೆ ? ಗಾಳಿಗುದುರೆ, ಜೀವನರಂಗ, ತಾರಕಂಬಗಳು, ರಾಯರ ಸೋಲನ್ನು ತೋರಿಸಿದ ಶ್ರೀ. ವಾಡಪ್ಪಿಯವರು ನಾರದರ ಸೋಲನ್ನು ಮನಗಾಣಿಸಿಕೊಡುವ ಆಶ್ವಾಸನ ಕೊಟ್ಟಾಗ, ಮುಂದೆಯೂ ತಂತ್ರಬದ್ಧವಾದ ಏಕಾಂಕಗಳನ್ನು ಬರೆಯುವರೆಂಬ ಮನವರಿಕೆ ನಮಗೆ ದೃಢವಾಗಿದೆ. " The flower Suretens the our with-its perfume get its last service is to offrit self to thee " ಎಂಬ ಟಾಗೋರರ ಉಕ್ತಿ ಲೇಖಕರ ಕ್ರಿಯಾಶಕ್ತಿಗೆ ಇನ್ನೂ ಪ್ರೇರಕವಾಗಲಿ ಎಂದು ಹಾರೈಸಿ, ಪ್ರಸ್ತುತ ವಿಮರ್ಶೆ ಮುಗಿಸಬಹುದಲ್ಲವೆ ?

—ಎಸ್ಜಿ

ಸಾದರ ಸ್ವೀಕಾರ

೪೫ ಸಂದೇಶ (ವಾರಪತ್ರಿಕೆಯ ದೀಪಾವಳಿ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಗೋ. ಅ. ದೇಶಪಾಂಡೆಯವರು. ಸಂದೇಶ ಕಾರ್ಯಾಲಯ, ಬೆಳಗಾಂವಿ, ಕ್ರಾ. ೧ಕ ೪೦ ಪುಟಗಳು.

ಬಡತನದ ಹಬ್ಬದ ಲಕ್ಷಣಗಳಿಲ್ಲವುಗಳಿಂದ ಕೂಡಿ, ಈ ವಿಶೇಷ ಸಂಚಿಕೆ ಹೊರಟುದೇ ಇದರದೊಂದು ವೈಶಿಷ್ಟ್ಯ.

೪೬ ಮೈಸೂರು ಶತಕ (ಪದ್ಯಪುಸ್ತಕ) ಬರೆದವರು ಶ್ರೀ. ಬಿ. ಎನ್. ನಾಯಿಕ, ಸಹಾಬಾದ, ಲೇಖಕರೇ ಪ್ರಕಾಶಕರು. ಕ್ರಾ. ೧೫ ದ ೧೬ ಪುಟಗಳು. ಅಮೂಲ್ಯ.

ಇಂದಿನ ಮೈಸೂರು ಸರಕಾರದ ಅಡಳಿತದಲ್ಲಿಯ ಗೊಂದಲಗಳಿಗೆ ಬೇಸತ್ತಿರುವನೇನೋ ಕವಿ ಕಂಡ ಅನ್ಯಾಯ– ಆತಂಕಗಳನ್ನೆಲ್ಲ ಕಂಡಂತೆಯೇ ಬಿಚ್ಚುನುಡಿಗಳಲ್ಲಿ ಹೆಣೆದು ಹೇಳಿದ್ದಾರೆ. ಅಡಳಿತದ ಒಂದೊಂದು ವಿಭಾಗದಲ್ಲಿಯೂ ನಡೆದಿರುವ ಲಂಚಗುಳಿತನ– ಪಕ್ಷಪಾತಗಳನ್ನು ರೊಚ್ಚಿನ ನುಡಿಗಳಲ್ಲಿಯೆ ಚಿತ್ರಿಸಿರುವರು. ಆದರೆ ಭೇರಿ–ದುಂದುಭಿಗಳ ನಿನಾದದಲ್ಲಿ, ಈ ತಂತುಣಿಯ ಧ್ವನಿಯು ಹೇಗೆ ಕೇಳಿಸೀತು ?

೪೭ ಒಸಗೆ (ಮಂಗಳೂರಿನ ಪಂಡಿತ ಸೇಡಿಯಾಪು ಕೃಷ್ಣ ಭಟ್ಟರಿಗೆ ಅವರ ಅಭಿಮಾನಿಗಳು ಅರ್ಪಿಸಿದ ಸಂಭಾವನಾ ಗ್ರಂಥ) ಮೊದಲನೆಯ ಭಾಗದಲ್ಲಿ ಕೃಷ್ಣಭಟ್ಟರ ಪರಿಚಯ ವ್ಯಕ್ತಿತ್ವಗಳನ್ನು ತಿಳಿಹುಮಂತಹ—ಬೇರೆ ಬೇರೆ ಲೇಖಕರ ಲೇಖನಗಳಿವೆ. ಎರಡನೆಯ ಭಾಗವು ಪಂ. ಕೃಷ್ಣಭಟ್ಟರು ಬರೆದ ಸಾಹಿತ್ಯಿಕ ಲೇಖನ ಸಂಕಲನವಾಗಿದೆ. ಪ್ರಕಾಶಕರು ಕರ್ನಾಟಕ ಸಂಘ, ಸೆಂಟ್ ಅಲೋಸಿಯಸ್ ಕಾಲೇಜು, ಮಂಗಳೂರು. ಕ್ರಾ. ಅ. ೨೫೬ ಪುಟಗಳು. ಬೆಲೆ ೩. ೫೦.

೪೮ ರಾಯರ ಸೋಲು (ದೃಶ್ಯಸಂಕಲನ). ಲೇಖಕರು, ಶ್ರೀಮಾನ್ ಬಿ. ಆರ್. ವಾಡಪ್ಪಿ, ಕೆಲ್ಲೆ–ಧಾರವಾಡ. ಲೇಖಕರೇ ಪ್ರಕಾಶಕರು. ಕ್ರಾ. ಅ. ೧೦೨ ಪುಟಗಳು ಬೆಲೆ ೧.೬೨.

೪೯ ಮಧುಸಂಚಯ (ಕವನ ಸಂಕಲನ) ಬರೆದವರು 'ಜೀವಿ' ಪ್ರಕಾಶಕರು ಶ್ರೀ. ಜಿ. ವಿ. ಕುಲಕರ್ಣಿ, ಬಾಲಮಾರುತಿ ಪ್ರಕಾಶನ, ಧಾರವಾಡ. ಕ್ರಾ. ಅ. ೯೬ ಪುಟಗಳು· ಬೆಲೆ. ೧. ೫೦.

೫೦ ಸೆಳೆತದ ತಿಲುಬಿ (ಕಥಾಸಂಕಲನ) ಬರೆದವರು ಶ್ರೀಮಾನ್ ಪಿ. ಮು. ಜೋಶಿಯವರು. ಪ್ರಕಾಶಕರು ಜಯಂತಿ ಪ್ರಕಾಶನ, ಧಾರವಾಡ ಕ್ರಾ. ಅ. ೧೨೬ ಪುಟಗಳು. ಬೆಲೆ ೧.೬೭.

೫೧ ಮಕ್ಕಳ ವಿಜ್ಞಾನ (೧ನೆಯ ಪುಸ್ತಕ) ವಿಜ್ಞಾನವನ್ನು ಕಲಿಸುವ ಶಿಕ್ಷಕರ ಉಪಯೋಗಕ್ಕೆಂದು 'ಶ್ಯಾನಭಾಗ' ಎಂಬವರು ಈ ಪುಸ್ತಕವನ್ನು ಸಿದ್ಧಗೊಳಿಸಿದ್ದಾರೆ. ಪ್ರಕಾಶಕರು ಶ್ರೀ. ಕೋಟೆ ಸುಧಾಕರ ಶಾನ್ಭಾಗ್,ಕನ್ಯಾರ್ ಸಿಂಗ ರೋಡು, ಕುಂದಾಪುರ (ದ. ಕ.). ಡೆ. ಅ. ೪೬ ಪುಟಗಳು. ಬೆಲೆ ೦೦.೬೦.

೫೨ ಮಕ್ಕಳ ವಿಜ್ಞಾನ (೨ನೆಯ ಪುಸ್ತಕ) ಲೇಖಕರು ಪ್ರಕಾಶಕರು ಮೇಲಿನವರೇ ಡೆ. ಅ. ೪೨ ಪುಟಗಳು. ಬೆಲೆ ೦೦. ೬೦.

೫೩ ಚೈತ್ರಾಗಮನ (ಕವನಸಂಕಲನ). ಲೇಖಕರು ಶ್ರೀಮಾನ್ ಎಸ್ ಎಸ್. ಬಸುಪಟ್ಟದ ಎಂ. ಎ., ಬಿ. ಟಿ. ಗುಳೇದ ಗುಡ್ಡ. ಪ್ರಕಾಶಕರು ಶ್ರೀ. ಸಿ. ಎಂ. ಸಕ್ರೋಜಿ, ಸಕ್ರೋಜಿ ಪ್ರಿಂಟಿಂಗ್ ವರ್ಕ್ಸ್, ಬಾಗಲಕೋಟೆ. ಕ್ರಾ. ಅ. ೬೬ ಪುಟಗಳು. ಬೆಲೆ ೧ ರೂಪಾಯಿ.

೫೪ ಪ್ರಕಾಶ (ವಾರಪತ್ರಿಕೆಯ ಪರ್ಯಾಯ ವಿಶೇಷಾಂಕ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಎ. ಜನಾರ್ಧನ ಅಲ್ಸೆ, ರಾಮಕೃಷ್ಣ ಬಿಲ್ಡಿಂಗ್, ಉಡುಪಿ. ಕ್ರಾ, ಫೋ. ೬೦ ಪುಟಗಳು ಬೆಲೆ ೦೦.೫೦

೫೫ ಶ್ರೀರಾಮಾಶ್ವಮೇಧದ ರಸತರಂಗಗಳು (ಕಾವ್ಯ ವಿಮರ್ಶಾತ್ಮಕ ಗ್ರಂಥ). ಲೇಖಕರು ಶ್ರೀಮಾನ್ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಮಂಗಳೂರು. ಪ್ರಕಾಶಕರು ದಿ. ಇಂಡಿಯನ್ ಇಂಡಸ್ಟ್ರಿಯಲ್ ಎಂಡ್ ಏಜನ್ಸೀಸ್, ಮಂಗಳೂರು-೧. ಕ್ರಾ. ಅ. ೧೬+೧೩೪ ಪುಟಗಳು. ಬೆಲೆ ಉತ್ತಮ ಪ್ರತಿಗೆ ೩.೦೦. ಸಾಧಾರಣ ಪ್ರತಿಗೆ ೨.೫೫.

೫೬ ಕಲ್ಯಾಣ (ಹಿಂದೀ ಮಾಸಪತ್ರಿಕೆಯ ದೇವೀಭಾಗವತ ವಿಶೇಷಾಂಕ) ಸಂಪಾದಕರು ಶ್ರೀಮಾನ್ ಹನುಮಾನ್ ಪ್ರಸಾದ ಪೋದ್ದಾರ ಮತ್ತು ಶ್ರೀಮಾನ್ ಚಿಮ್ಮನಲಾಲ್ ಗೋಸ್ವಾಮಿ ಎಂ.ಎ. ಪ್ರಕಾಶಕರು ಶ್ರೀಮಾನ್ ಘನಶ್ಯಾಮದಾಸ ಜಾಲಾನ, ಗೀತಾಪ್ರೆಸ್, ಗೋರಖಪುರ. ಕ್ರಾ.೧ ದ ೭೦೪ ಪುಟಗಳಲ್ಲದೆ ಹಲವಾರು ಚಿತ್ರ ಪುಟಗಳು. ಬೆಲೆ ೭ ೫೦.

ಭಾರತೀಯ ಪುರಾಣ ಸಮೂಹದಲ್ಲಿ ಶ್ರೇಷ್ಠಸ್ಥಾನವನ್ನು ಪಡೆದಿರುವ 'ದೇವೀಭಾಗವತ' ಪುರಾಣವನ್ನು ಸಂಗ್ರಹಿಸಿ ಬರೆದಿರುವರಲ್ಲದೆ ಆ ಪುರಾಣಕ್ಕೆ ಸಂಬಂಧಿಸಿದ ಬೇರೆ ಲೇಖನ ಕವನಗಳೂ ಇವೆ. ಹಿಂದಿನ ಸಂಚಿಕೆಗಳಂತೆ ಇದು ಕೂಡ ಸಂಗ್ರಹಣೀಯವಾಗಿದೆ.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! ಜಾನಪದ ಪ್ರೀತಿಗೀತಗಳು!!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣಿಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವನನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತಳಗs — ಚೆಂದs ಗಂಧs ಹರಡೈತವ್ವಾ!

ಎಂಬ ಆನಂದಾನುಭವನವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಅ. ೯೦ ಪುಟಗಳು ಬೆಲೆ ರೂ. ೧. ೩೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು:

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಸಾದರ ಸ್ವೀಕಾರ

೪೫ ಸಂದೇಶ (ವಾರಪತ್ರಿಕೆಯ ದೀಪಾವಳಿ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಗೋ. ಅ. ದೇಶಪಾಂಡೆಯವರು. ಸಂದೇಶ ಕಾರ್ಯಾಲಯ, ಬೆಳಗಾಂವಿ, ಕ್ರೌ. ಡಿಮಿ ೪೦ ಪುಟಗಳು.

ಬಡತನದ ಹಬ್ಬದ ಲಕ್ಷಣಗಳೆಲ್ಲವುಗಳಿಂದ ಕೂಡಿ, ಈ ವಿಶೇಷ ಸಂಚಿಕೆ ಹೊರಟುದೇ ಇದರದೊಂದು ವೈಶಿಷ್ಟ್ಯ.

೪೬ ಮೈಸೂರು ಶತಕ (ಪದ್ಯಪುಸ್ತಕ) ಬರೆದವರು ಶ್ರೀ. ಬಿ. ಎನ್. ನಾಯಿಕ, ಸಹಾಬಾದ, ಲೇಖಕರೇ ಪ್ರಕಾಶಕರು. ಕ್ರೌ. ಡಿಮಿ ೧೬ ಪುಟಗಳು. ಅಮೂಲ್ಯ.

ಇಂದಿನ ಮೈಸೂರು ಸರಕಾರದ ಆಡಳಿತದಲ್ಲಿಯ ಗೊಂದಲಗಳಿಗೆ ಬೇಸತ್ತಿರುವನೇನೋ ಕವಿ ಕಂಡ ಅನ್ಯಾಯ– ಆತಂಕಗಳನ್ನೆಲ್ಲ ಕಂಡಂತೆಯೇ ಬಿಚ್ಚನುಡಿಗಳಲ್ಲಿ ಹೆಣೆದು ಹೇಳಿದ್ದಾರೆ. ಆಡಳಿತದ ಒಂದೊಂದು ವಿಭಾಗದಲ್ಲಿಯೂ ನಡೆದಿರುವ ಲಂಚಗುಳಿತನ– ಪಕ್ಷಪಾತಗಳನ್ನು ರೊಚ್ಚಿನ ನುಡಿಗಳಲ್ಲಿಯೆ ಚಿತ್ರಿಸಿರುವರು. ಆದರೆ ಭೇರಿ–ದುಂದುಭಿಗಳ ನಿನಾದದಲ್ಲಿ, ಈ ತಂತುಣಿಯ ಧ್ವನಿಯು ಹೇಗೆ ಕೇಳಿಸೀತು?

೪೭ ಒಸಗೆ (ಮಂಗಳೂರಿನ ಪಂಡಿತ ಸೇಡಿಯಾಪು ಕೃಷ್ಣ ಭಟ್ಟರಿಗೆ ಅವರ ಅಭಿಮಾನಿಗಳು ಅರ್ಪಿಸಿದ ಸಂಭಾವನಾ ಗ್ರಂಥ) ಮೊದಲನೆಯ ಭಾಗದಲ್ಲಿ ಕೃಷ್ಣಭಟ್ಟರ ಪರಿಚಯ ವ್ಯಕ್ತಿತ್ವಗಳನ್ನು ತಿಳಿಸುವಂತಹ—ಬೇರೆ ಬೇರೆ ಲೇಖಕರ ಲೇಖನಗಳಿವೆ. ಎರಡನೆಯ ಭಾಗವು ಸಂ. ಕೃಷ್ಣಭಟ್ಟರು ಬರೆದ ಸಾಹಿತ್ಯಿತಿಕ ಲೇಖನ ಸಂಕಲನವಾಗಿದೆ. ಪ್ರಕಾಶಕರು ಕರ್ನಾಟಕ ಸಂಘ, ಸೆಂಟ್ ಅಲೋಸಿಯಸ್ ಕಾಲೇಜು, ಮಂಗಳೂರು. ಕ್ರೌ. ಅ. ೨೫೬ ಪುಟಗಳು. ಬೆಲೆ ೩. ೫೦.

೪೮ ರಾಯರ ಸೋಲು (ದೃಶ್ಯಸಂಕಲನ). ಲೇಖಕರು, ಶ್ರೀಮಾನ್ ಬಿ. ಆರ್. ನಾಡಪ್ಪಿ, ಕೆಲ್ಲೆ–ಧಾರವಾಡ. ಲೇಖಕರೇ ಪ್ರಕಾಶಕರು. ಕ್ರೌ. ಅ. ೧೦೨ ಪುಟಗಳು ಬೆಲೆ ೧.೬೨.

೪೯ ಮಧುಸಂಚಯ (ಕವನ ಸಂಕಲನ) ಬರೆದವರು 'ಜೀವಿ' ಪ್ರಕಾಶಕರು ಶ್ರೀ. ಜಿ. ವಿ. ಕುಲಕರ್ಣಿ, ಬಾಲಮಾರುತಿ ಪ್ರಕಾಶನ, ಧಾರವಾಡ. ಕ್ರೌ. ಅ. ೯೬ ಪುಟಗಳು. ಬೆಲೆ. ೧. ೫೦.

೫೦ ಸೆಳೆತದ ಶಿಲುಬೆ (ಕಥಾಸಂಕಲನ) ಬರೆದವರು ಶ್ರೀಮಾನ್ ವೆಂ. ಮು. ಜೋಶಿಯವರು. ಪ್ರಕಾಶಕರು ಜಯಂತಿ ಪ್ರಕಾಶನ, ಧಾರವಾಡ ಕ್ರೌ. ಅ. ೧೫೬ ಪುಟಗಳು. ಬೆಲೆ ೧.೬೭.

೫೧ ಮಕ್ಕಳ ವಿಜ್ಞಾನ (೧ನೆಯ ಪುಸ್ತಕ) ವಿಜ್ಞಾನವನ್ನು ಕಲಿಸುವ ಶಿಕ್ಷಕರ ಉಪಯೋಗಕ್ಕೆಂದು 'ಶ್ಯಾನಭಾಗ' ಎಂಬವರು ಈ ಪುಸ್ತಕವನ್ನು ಸಿದ್ಧಗೊಳಿಸಿದ್ದಾರೆ. ಪ್ರಕಾಶಕರು ಶ್ರೀ. ಕೋಟ ಸುಧಾಕರ ಶಾನ್ಭಾಗ್, ಕನ್ಸಾರ್ ಸಿಂಗ ರೋಡು, ಕುಂದಾಪುರ (ದ. ಕ.). ಡಿ. ಅ. ೪೬ ಪುಟಗಳು. ಬೆಲೆ ೦೧.೬೦.

೫೨ ಮಕ್ಕಳ ವಿಜ್ಞಾನ (೨ನೆಯ ಪುಸ್ತಕ) ಲೇಖಕರು ಪ್ರಕಾಶಕರು ಮೇಲಿನವರೇ ಡಿ. ಅ. ೪೨ ಪುಟಗಳು. ಬೆಲೆ ೦೦. ೬೦.

೫೩ ಚೈತ್ರಾಗಮನ (ಕವನಸಂಕಲನ). ಲೇಖಕರು ಶ್ರೀಮಾನ್ ಎಸ್. ಎಸ್. ಬಸುಪಟ್ಟದ ಎಂ. ಎ., ಬಿ. ಟಿ. ಗುಳೇದ ಗುಡ್ಡ. ಪ್ರಕಾಶಕರು ಶ್ರೀ. ಸಿ. ಎಂ. ಸಕ್ರೋಜಿ, ಸಕ್ರೋಜಿ ವ್ರಿಂಟಿಂಗ್ ವರ್ಕ್ಸ್, ಬಾಗಲಕೋಟೆ. ಕ್ರೌ. ಅ. ೬೬ ಪುಟಗಳು. ಬೆಲೆ ೧ ರೂಪಾಯಿ.

೫೪ ಪ್ರಕಾಶ (ವಾರಪತ್ರಿಕೆಯ ಪರ್ಯಾಯ ವಿಶೇಷಾಂಕ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಎ. ಜನಾರ್ಧನ ಆಲ್ಸೆ, ರಾಮಕೃಷ್ಣ ಬಿಲ್ಡಿಂಗ್, ಉಡುಪಿ. ಕ್ರೌ, ಫ್ರೋ. ೬೦ ಪುಟಗಳು ಬೆಲೆ ೦೦.೫೦

೫೫ ಶ್ರೀರಾಮಾಶ್ವಮೇಧದ ರಸತರಂಗಗಳು (ಕಾವ್ಯ ವಿಮರ್ಶಾತ್ಮಕ ಗ್ರಂಥ). ಲೇಖಕರು ಶ್ರೀಮಾನ್ ಏರ್ಯ ಲಕ್ಷ್ಮೀ ನಾರಾಯಣ ಆಳ್ವ, ಮಂಗಳೂರು. ಪ್ರಕಾಶಕರು ದಿ. ಇಂಡಿಯನ್ ಇಂಡಸ್ಟ್ರೀಯಲ್ ಎಂಡ್ ಏಜನ್ಸೀಜ್, ಮಂಗಳೂರು-೧. ಕ್ರೌ. ಅ. ೧೬+೧೩೪ ಪುಟಗಳು. ಬೆಲೆ ಉತ್ತಮ ಪ್ರತಿಗೆ ೩.೦೦. ಸಾಧಾರಣ ಪ್ರತಿಗೆ ೨.೫೫.

೫೬ ಕಲ್ಯಾಣ (ಹಿಂದೀ ಮಾಸಪತ್ರಿಕೆಯ ದೇವೀಭಾಗವತ ವಿಶೇಷಾಂಕ) ಸಂಪಾದಕರು ಶ್ರೀಮಾನ್ ಹನುಮಾನ್ ಪ್ರಸಾದ ಪೋದ್ದಾರ ಮತ್ತು ಶ್ರೀಮಾನ್ ಚಿಮ್ಮನಲಾಲ್ ಗೋಸ್ವಾಮಿ ಎಂ.ಎ. ಪ್ರಕಾಶಕರು ಶ್ರೀಮಾನ್ ಘನಶ್ಯಾಮದಾಸ ಜಾಲಾನ, ಗೀತಾಪ್ರೆಸ್, ಗೋರಖಪುರ. ಕ್ರೌ.ಡಿಮಿ ೭೦೪ ಪುಟಗಳಲ್ಲದೆ ಹಲವಾರು ಚಿತ್ರ ಪುಟಗಳು. ಬೆಲೆ ೭ ೫೦.

ಭಾರತೀಯ ಪುರಾಣ ಸಮೂಹದಲ್ಲಿ ಶ್ರೇಷ್ಠಸ್ಥಾನವನ್ನು ಪಡೆದಿರುವ 'ದೇವೀಭಾಗವತ' ಪುರಾಣವನ್ನು ಸಂಗ್ರಹಿಸಿ ಬರೆದಿರುವರಲ್ಲದೆ ಆ ಪುರಾಣಕ್ಕೆ ಸಂಬಂಧಿಸಿದ ಬೇರೆ ಲೇಖನ ಕವನಗಳೂ ಇವೆ. ಹಿಂದಿನ ಸಂಚಿಕೆಗಳಂತೆ ಇದು ಕೂಡ ಸಂಗ್ರಹಣೀಯವಾಗಿದೆ.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! ಜಾನಪದ ಪ್ರೀತಿಗೀತಗಳು!!

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣಿಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು–ಸಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ–ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವನವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತಳಗs—ಚೆಂದs ಗಂಧs ಹರಡೈತವ್ವಾ!

ಎಂಬ ಆನಂದಾನುಭವನವನ್ನು ವ್ಯಕ್ತಪಡಿಸಿದೆ ಇರಲಾರರು.

X X X X

ಕ್ರಾ ಪುಟಗಳು ಬೆಲೆ ರೂ. ೧. ೨೫ ನ. ಪೈ.

[illegible] ಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು:

ಶ್ರೀ. ವಸ್ತ್ರದ ಹುಮಟ್ಟಿ, ಶರತ್ ಪ್ರಕಾಶನ ಮಂದಿರ

ಕಜೇರಿರಸ್ತೆ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
pr the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ಬಹುಮತದ ಯುಗ

ಅಯ್ಯಾ ಬಹುಮತದ ಯುಗ ಬಂದಿದೆ ಕಾಣಯ್ಯಾ! ಬಹುಮತದಿಂದ ಕಾಗೆ-ಕತ್ತೆಗಳು ಗಂಧರ್ವರಾಜನ ಬಿರುದನ್ನು ಹೊಂದುತಿಹದು ತಂದೆ! ಬಹುಮತದಿಂದಲೆ ಕಾಡಗೊಲ್ಲರು ಕವಿರಾಜನ ಪಟ್ಟಕ್ಕೇರುತಿಹರಯ್ಯಾ! ಬಹುಮತದಿಂದಲೆ ವಿಗಡಗಾವಿಲರು ವಿಮರ್ಶಕರಾಗಿ ವಿರಾಜಿಸುತಿಹರಯ್ಯಾ!

ಸಂಗೀತವಲ್ಲದುದನು ಸಂಗೀತವೆಂದು ಬಹುಮತ ನಿರ್ಣಯಿಸಿದರೆ, ಸವಿಗಾರರು ಏಸುದಿನ ಸುಮ್ಮಗಿದ್ದಾರು ತಂದೆ! ಸಾಹಿತ್ಯದ ನೆಲೆಬೆಲೆಯನರಿಯದವನ ಬಡಬಡಿಕೆಯನು ಸಾಹಿತ್ಯವೆಂದು ಕರೆಯಬೇಕೆಂದು ಶಾಸನ ಮಾಡಿದರೆ, ಸಹೃದಯರ ಸಂಘ ಬಂಡಾಯ ಹೂಡದೆ ಬಿಟ್ಟೀತೇನಯ್ಯಾ!

ಂ ಂ ಂ ಂ

ಬೀದಿಬೀದಿಗಳಲಿ ಹುಟ್ಟಿ ಬೆಳೆದ ಬರಡುಕಸಂಗಳು, ತಾನೆ ಸಂಜೀವಿನಿಗಳೆಂದು ಗಳಹುತಿಹವಯ್ಯಾ! ಇಂತಹ ಸಂಜೀವಿನಿಗಳನು ನೆಚ್ಚಿ ಸಮಾಜದ ಬಹುಜನ, ತನಗೊಂದಿದ ಘನರೋಗವ ಕಳೆದುಕೊಂಬೆನೆಂಬುದಯ್ಯಾ! ರೋಗಕ್ಕೆ ತಕ್ಕ ಮದ್ದನೊರೆವ ಪಂಡಿತರ ಮಾತಿಗೆ ಬೆಲೆಯೆ ಇಲ್ಲ ನೋಡು ತಂದೆ!

ಅಯ್ಯಾ, ಕಾಲರಾಯನೇಗಲೂ ಲೋಗರ ಮುನ್ನಡೆಗಾಗಿ ಬಯಸುವುದು ವಿದ್ಯೆ-ವಿಜ್ಞಾನ-ಕಲೆಗಳ ಸತ್ಯಸ್ವರೂಪವನು; ಇದಿಲ್ಲದೆ ಅಭಾಸನೇ ಸತ್ಯಸ್ವರೂಪವೆಂದು ಮೆರೆಯತೊಡಗಿದಾಗ, ಲೋಕ ಹಿಡಿವುದು ಪತನದ ದಾರಿಯನು!

—ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

ಬಿದಿರೆಯಲ್ಲಿ ಸಾಹಿತ್ಯಜಾತ್ರೆ (ಸಂಪಾದಕೀಯ) ..

ಸಂಪಾದಕರು ೨೯೩

ನಾಡನುಡಿ (ಪ್ರಾಸಂಗಿಕ ಟಿಪ್ಪಣಿಗಳು)

'ಕಾಲಭೈರವ' ೨೯೫

ಜಾನಕೀ ಗಂಡ (ಸಣ್ಣ ಕಥೆ)

ಶ್ರೀ. ಎಂ ಜಿ. ವೆಂಕಟೇಶಯ್ಯ ಎಂ. ಎ; ಬಿ. ಟಿ. ಬಳ್ಳಾರಿ ೨೯೭

ಲೋಕ ಸಂಗೀತ ಮತ್ತು ನಾಟ್ಯಸಂಗೀತ (ಆಕಾಶವಾಣಿ ಭಾಷಣ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೩೦೦

ಪಾವನ ಪರಂಪರೆ (ಕವಿತೆ)

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೩೦೨

ಭಾರ್ಗವಿ (ಪೌರಾಣಿಕ ಜೀವನರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೩೦೩

ಭಾಷೆ, ವರ್ಣಮಾಲೆ ಮತ್ತು ಲಿಪಿ (ವಿಶೇಚನಾತ್ಮಕ ಪ್ರಬಂಧ)

ಶ್ರೀ. ಹುಮಾಯೂನ ಕಬೀರ್, ನ್ಯೂದಿಲ್ಲಿ ೩೦೬

ಕಾವ್ಯ ಕನ್ನಿಕೆಗೆ (ಕವಿತೆ)

ಇಂದಿರೇಶ ೩೦೯

ಆರಣ್ಯ (ಅನುವಾದಿತ ಕಥೆ)

ಶ್ರೀ. ಜಿ. ಜೆ. ಪರಿಜಿತ್, ಮೈಸೂರು ೩೧೨

ಝುಂಝುವಾತ (ಗುಜರಾತಿ ಕವಿತೆಯ ಅನುವಾದ)

ಬೆಟಗೇರಿ ಕೃಷ್ಣಶರ್ಮ ೩೨೨

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಶ್ರೀ. ಬಿ. ಆರ್. ನಾಯಕುಲಿ ಬಿ. ಎಸ್ಸಿ. (ಆನರ್ಸ್) ಐನಾಪುರ ೩೨೩

ಪುಸ್ತಕ ವಿಮರ್ಶೆ (ವಿಮರ್ಶೆ)

ಶ್ರೀ. ಬಿ. ಬಿ. ರಾಜಪುರೋಹಿತ ಎಂ. ಎ. ೩೩೬

ಸಾದರ ಸ್ವೀಕಾರ .... ಎದಿಕೆಯ ಹಿನೆಯ ಪುಟ)

ಜಯಂತಿ

ಸಂಪುಟ ೩೩] [ಸಂಚಿಕೆ ೯

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

❖❖

ಸಂಪಾದಕರು :
ಎ. ಚಿಟಗೇರಿ ಕೃಷ್ಣಶರ್ಮ

❖❖

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟನಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೦ ಆಣೆ

❖❖

ಜಾಹೀರಾತು
ಕೊಡಬಯಸುವವರು ವರಗಳಿಗಾಗಿ
ಬರೆದು ಕೇಳಬೇಕು.

❖❖

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಬಿದಿರಿಯಲ್ಲಿ ಸಾಹಿತ್ಯಜಾತ್ರೆ

ಬಸವಕಲ್ಯಾಣದಲ್ಲಿ ಕಳೆದ ವರ್ಷವೇ ನಡೆಯ ಬೇಕಾಗಿದ್ದ ಆಗನೆಯ ಕನ್ನಡ ಸಾಹಿತ್ಯ ಸಮ್ಮೇಳನವು, ಕಳೆದ ಫೇಬ್ರುವರಿ ತಿಂಗಳ ಪೂರ್ವಾರ್ಧದಲ್ಲಿ ಬಿದಿರಿ ನಗರದಲ್ಲಿ, ಆ ಭಾಗದ ಜನತೆಯ ಉತ್ಸಾಹದೆಂದಿಗೆ ನೆರವೇರಿತು. ಬಿದಿರಿಯು ನಮ್ಮ ಜನರಿಂದಲೇ 'ಬೇದರ್' ಎಂಬ ಪರಭಾಷಾ ಪ್ರಭಾವದಿಂದ ಕರೆಯಿಸಿಕೊಳ್ಳುವುದನ್ನು ನೋಡಿದರೆ, ಆ ಭಾಗದಲ್ಲಿ ಕನ್ನಡನುಡಿಯು ಎಂತಹ ಅವಸ್ಥೆಯಲ್ಲಿ ಬದುಕಿರಬಹುದೆಂಬುದನ್ನು ಬೇರೆಯಾಗಿ ಹೇಳುವುದೇ ಬೇಕಾಗಿಲ್ಲ. ಒಂದು ಕಡೆಯಿಂದ, ಭಾಷಾಜಾಗೃತಿಯಿಂದ ಚಟುವಟಿಕೆ ನಡೆಯಿಸಿದ ಮರಾಠಿಗರ ಒತ್ತಾಳಿಕೆ; ಇನ್ನೊಂದು ಕಡೆಯಿಂದ ಭಾಷಾಭಿನಿವೇಶದಲ್ಲಿ ಹೆಸರನ್ನು ಹೊಂದಿದ ಆಂಧ್ರರ ಆಕ್ರಮಣ; ನೈಝಾಮ್ ಆಡಳಿತದ ಭಾಷೆಯಾದ ಉರ್ದುವಿನ ಒತ್ತಾಯ— ಇವೆಲ್ಲವುಗಳನ್ನೂ ಸಹಿಸಿಕೊಂಡು, ಬಿದಿರಿ-ಪ್ರದೇಶದಲ್ಲಿ ಕನ್ನಡಭಾಷೆ, ಇಷ್ಟುವರೆಗೆ ಜೀವಹಿಡಿದುಕೊಂಡು ಬಾಳಿರುವುದೇ ಅಚ್ಚರಿಯ ಸಂಗತಿಯಾಗಿದೆ.

ಸಂಪೂರ್ಣ ಕನ್ನಡ ಜಿಲ್ಲೆಯೆ ಆಗಿದ್ದ ಬಿದಿರಿ ಪ್ರದೇಶವು, ಪರಭಾಷೆಗಳ ಆಕ್ರಮಣದ ಪರಿಣಾಮವಾಗಿಯೇ, ರಾಜ್ಯಪುನರ್ನಿರ್ಮಾಣ ಕಾಲದಲ್ಲಿ, ತನ್ನ ಅರ್ಧಭಾಗವನ್ನು ಕಳೆದುಕೊಂಡಿರುವುದು. ಇಷ್ಟೇ ಅಲ್ಲ, ಈಗ ಉಳಿದ ಭಾಗದಲ್ಲಿಯ ಕೆಲವು ಪ್ರದೇಶ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಪುಂಡ-ಪ್ರಚಂಡರು, ಈಗಲೂ ಬಲ್ಲಿನ ಪ್ರಚಾರ ನಡೆಯಿಸಿದ್ದಾರೆ. ಅಲ್ಲದೆ ಅಲ್ಲಿಯ ಜನಸಾಮಾನ್ಯರಲ್ಲಿ ಕನ್ನಡವು ಸ್ವಾಭಾವಿಕವಾಗಿ ಉಳಿದಿದೆಯಾದರೂ, ಕನ್ನಡವನ್ನು ಉಳುಹಿಕೊಳ್ಳುವ ಅಭಿಮಾನವು ಬೇಕೆಂಬುದು, ಅಲ್ಲಿಯ ಸುಶಿಕ್ಷಿತರಿಗೆ ಕೂಡ ಗೊತ್ತಿಲ್ಲ. ಇಂತಹ ಪ್ರದೇಶದಲ್ಲಿ ಕನ್ನಡ ಸಾಹಿತ್ಯಸಮ್ಮೇಳನವು ಜರುಗಿ, ಜನರಲ್ಲಿ ಮಾತೃಭಾಷೆಯ ಜಾಗೃತಿಯನ್ನು ಹುಟ್ಟಿಸಿದುದು ಅಭಿನಂದನೀಯ ಸಂಗತಿಯೇ ಸರಿ.

ಆದರೆ ಒಂದು ವಿಷಾದದ ಸಂಗತಿಯೆಂದರೆ, ಕನ್ನಡ ಸಾಹಿತ್ಯ-ಪರಿಷತ್ತಿನಿಂದ ಸೇರಿಸಲ್ಪಡುತ್ತಿರುವ ಸಾಹಿತ್ಯ ಸಮ್ಮೇಳನಗಳು, ಆಗನೆಯ ವರ್ಷವನ್ನು ಕಂಡರೂ, ಇಷ್ಟುವರೆಗೂ ತಮ್ಮ ಪ್ರಚಾರದ ಜಾತ್ರೆಯ ಸ್ವರೂಪವನ್ನು ಗಟ್ಟಿಯಾಗಿ ಕಟ್ಟಿಕೊಂಡಿರುವುದು! ಸಾಹಿತ್ಯವು ಒಂದು ಸೌಂದರ್ಯಾಭಿವ್ಯಕ್ತಿ ಎಂದರೆ ಕಲೆ. ಆ ಕಲೆಯ ಅಭ್ಯಾಸ, ಸಂಶೋಧನೆ, ನವನಿರ್ಮಿತಿಗಳು ಆ ಆ ವರ್ಷದಲ್ಲಿ ಏನೇನು ನಡೆಯಿತೆಂಬುದರ ಚರ್ಚೆ-ವಿಮರ್ಶೆ-ಪ್ರದರ್ಶನಗಳಿಗಾಗಿ ಮಾತ್ರ ಸಾಹಿತ್ಯ ಸಮ್ಮೇಳನಗಳು ನಡೆಯಬೇಕು. ಆದರೆ ನಮ್ಮ ಸಾಹಿತ್ಯ ಸಮ್ಮೇಳನಗಳಲ್ಲಿ ಅದಕ್ಕೆ ಇಷ್ಟುವರೆಗೂ ಪ್ರಾಶಸ್ತ್ಯವೇ ದೊರೆಯುವಾಗಿದೆ. ಜನ-ಜಂಗುಳಿ + ರಾಜಕೀಯ ಸಮ್ಮೇಳನ + ಭೂರೀಭೋಜನ ಮೆರವಣಿಗೆ = ಕನ್ನಡ ಸಾಹಿತ್ಯ ಸಮ್ಮೇಳನ ಎಂಬುವಾಗಿ ಲೆಕ್ಕಹಾಕಿ ಹೇಳುವಂತಿದೆ. ನಿಜವಾದ ಸಾಹಿತ್ಯಕರಿಗೆ ಇಂದಿನ ರೀತಿಯು ಮೂಲಕ, ಸಾಹಿತ್ಯ ಸಮ್ಮೇಳನದಲ್ಲಿ ಆಕರ್ಷಣೆಯೇ ಉಳಿದಿಲ್ಲ. ಆಯ್ಕೆಮಾಡಿದ ಅಧ್ಯಕ್ಷರೊಬ್ಬರನ್ನು ಬಿಟ್ಟರೆ, ಸಾಹಿತ್ಯಕರಿಲ್ಲದ ಸಾಹಿತ್ಯ ಸಮ್ಮೇಳನಗಳೇ ಇಂದು ಜರಗುತ್ತಿರುವುವು. ಇನ್ನೂ ಒಂದು ತಪ್ಪಾಸೆಯೆಂದರೆ, ಸಾಹಿತ್ಯಸಮ್ಮೇಳನಗಳಲ್ಲಿ ಸಾಹಿತ್ಯಕರಲ್ಲದ ಯಾವ ಯಾವ ವ್ಯಕ್ತಿಗಳಿಗೋ ಮಹಾಪೂಜೆ ಸಲ್ಲುತ್ತಿದೆ.

ಹಿಂದೆ ಕನ್ನಡಿಗರಲ್ಲದವರ ಕೈಯಲ್ಲಿ ರಾಜಕೀಯ ಆಡಳಿತದ ಸೂತ್ರಗಳಿದ್ದುವು. ಆಗ ಅಂತಹ ಅಧಿಕಾರಿಗಳಿಗೆ ಪೂಜೆ ಸಲ್ಲಿಸಿ, ಕನ್ನಡ ಭಾಷೆ-ಸಾಹಿತ್ಯಗಳಕಡೆಗೆ ಅವರ ಕಟಾಕ್ಷವೀಕ್ಷಣೆ ಹೊರಕಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಇಂದು ನಮ್ಮ ನಾಡಿನ ಆಡಳಿತ ಸೂತ್ರಗಳನ್ನು ಪಡೆದವರು ಎಲ್ಲರೂ ಕನ್ನಡದೇವಿಯ ಸತ್‌ಪುತ್ರರೆ; ಅವರೆಲ್ಲರಿಗೂ ಮಾತೃಭಾಷೆಯ ಅಭಿಮಾನ

ಇದ್ದೇ ಇದ್ದೇ ಇದೆ. ಕನ್ನಡ ಭಾಷೆ-ಸಾಹಿತ್ಯಗಳ ಸಂವರ್ಧನೆ-ಸಂರಕ್ಷಣೆಗಳು ಅವರ ಕರ್ತವ್ಯವೇ ಆಗಿವೆ. ಹೀಗಿರುವಾಗ ಅಧಿಕಾರಿಗಳ ಪೂಜಾಪರಂಪರೆಯನ್ನು ಕ. ಸಾ. ಸಮ್ಮೇಳನಗಳು ಏಕೆ ಮುಂದು ವರೆಸಿಕೊಂಡು ಹೋಗಬೇಕು? ಇದರಿಂದ ಅಧಿಕಾರಿಗಳಿಗೂ ವ್ಯರ್ಥಶ್ರಮ; ಸಮ್ಮೇಳನ ಸಂಚಾಲಕರಿಗೂ ಹಣ-ಕಾಲಗಳ ಅಧಿಕ ವ್ಯಯ. ಇದರ ವಿಚಾರವನ್ನು ಪೂಜೆ ಪಡೆಯುವ ಅಧಿಕಾರಿ ಧುರೀಣರೂ ಮಾಡಬೇಕು; ಕ. ಸಾ. ಪರಿಷತ್ತಿನ ಕಾರ್ಯಕಾರಿಣಿ ಸಮಿತಿಯವರೂ ಮಾಡಬೇಕು. ಕಾರ್ಯಕಾರಿಣಿಯವರು, ನಿಜವಾದ ಸಾಹಿತ್ಯ ಸಮ್ಮೇಳನಗಳನ್ನು ಜರುಗಿಸಬೇಕೆಂದು ಮನಸ್ಸು ಮಾಡಿದರೆ, ಈ ಅಧಿಕಾರಿಗಳ ಪೂಜಾ ಪರಂಪರೆ ನಿಂತು ಹೋದೀತು.

ಸಾಹಿತ್ಯ ಸಮ್ಮೇಳನದಲ್ಲಿ ಪೂಜೆಯ ಭಾಗ ನಡೆಯಬೇಕೆಂದರೆ, ಆ ಪೂಜೆ ಆ ವರ್ಷದ ಶ್ರೇಷ್ಠ ಸಾಹಿತ್ಯಕರಿಗೆ ಸಲ್ಲಬೇಕು. ಸಾಹಿತ್ಯದ ಬೇರೆ ಬೇರೆ ವಿಭಾಗದಲ್ಲಿ ಕಾರ್ಯ ಮಾಡಿದವರಲ್ಲಿ ಯೋಗ್ಯತೆಯನ್ನು ರಿತು ಆಯ್ದು, ಅವರನ್ನು ಸಮ್ಮೇಳನಕ್ಕೆ ಆಹ್ವಾನಿಸಿ ಕರೆಯಿಸಿಕೊಂಡು, ಅವರನ್ನು ಜನರಿಗೆ ಪರಿಚಯ ಮಾಡಿ ಕೊಡಬೇಕು. ಸಮ್ಮೇಳನ ಸದಸ್ಯರಿಗೆ ಅವರ ಜ್ಞಾನದ ಪ್ರತ್ಯಕ್ಷಲಾಭವನ್ನು ಒದಗಿಸಿ ಕೊಡಬೇಕು. ಅವರಿಗೆ ಸಮ್ಮೇಳನದಲ್ಲಿ ಸಾರ್ವಜನಿಕ ಮನ್ನಣೆ ಸಲ್ಲಬೇಕು. ಇದು ಜನರಿಗೆ ಒಳ್ಳೆಯದು; ಸಾಹಿತ್ಯಿಕರ ಮುಂದಿನ ಕಾರ್ಯಕ್ಕೆ ಪ್ರೋತ್ಸಾಹಕಾರಿ. ಜನತೆಯ ಉಪೇಕ್ಷೆ ಸಾಹಿತ್ಯಿಕನ ಉತ್ಸಾಹವನ್ನು ಕುಗ್ಗಿಸುವುದು; ಸಾರ್ವಜನಿಕವಾಗಿ ನಡೆಯುವ ಗುಣಮನ್ನಣೆ, ಅವನಿಗೆ ಹೊಸ ಜೀವವನ್ನು ತುಂಬುವುದು. ಇನ್ನೂ ಒಂದು ವಿಷಯವೆಂದರೆ, ಗುಣದ ಪೂಜೆ ಸಂಸ್ಕೃತಿ- ಸಭ್ಯರುಚಿಗಳ ಲಕ್ಷಣ.

ಬಿದರೆ ಸಾಹಿತ್ಯಸಮ್ಮೇಳನಕ್ಕೆ ಆ ಭಾಗದ ಅನೇಕ ಜನ ಕನ್ನಡ ಅಭಿಮಾನಿಗಳು ಬಂದಿದ್ದರು. ನೋಡಬೇಕೆಂಬ ಕುತೂಹಲದಿಂದ ಜನಸಾಮಾನ್ಯರೂ ಬಂದಿದ್ದರು. ಅಲ್ಲಿ ಮುಖ್ಯ ಸಾಹಿತ್ಯಸಮ್ಮೇಳನವಾಯಿತು. ಗದ್ಯಪದ್ಯ ಗೋಷ್ಠಿ, ಮಹಿಳಾಗೋಷ್ಠಿ, ಪತ್ರಿಕಾಕರ್ತರ ಗೋಷ್ಠಿ— ಇನ್ನು ಏನೇನೋ ನಡೆದುವು. ಇವೆಲ್ಲವುಗಳ ಗೊಂದಲದಲ್ಲಿ ಬಂದ ಜನರಿಗೆ ಸಾಹಿತ್ಯವೆಂದರೆ ಎಲ್ಲಿದೆ?— ಅದರ ಪೂರ್ಣ ಸ್ವರೂಪ ಎಂತಹದು— ಎಂಬುದೇ ಗೊತ್ತಾಗಿರಲಿಕ್ಕಿಲ್ಲ. ಏಕೆಂದರೆ ಹೆಚ್ಚು ಜನ ನುರಿತ ಸಾಹಿತ್ಯಿಕರ ಸಂದರ್ಶನ-ಸಂಭಾಷಣಗಳಲ್ಲ, ಅವರ ಸಾಹಿತ್ಯದ ಪ್ರತ್ಯಕ್ಷ ಪ್ರದರ್ಶನವಿಲ್ಲ. ಇಂತಹ ಸಭೆಗಳಲ್ಲಿ ಧ್ವನಿತೆಗೆದು ಏನನ್ನಾದರೂ ಕೂಗಿದವರೇ ಕವಿಗಳು; ಮನಸ್ಸಿಗೆ ಬಂದುದನ್ನು ಬರೆದು ಓದಿದವರೇ ಗದ್ಯಲೇಖಕರು; ಗಟ್ಟಿಯಾಗಿ ಮಾತನಾಡಿದವರೇ ವಕ್ತಾರರು. ಕಾರ್ಯಕಲಾಪಗಳೇನಾದರೂ ನಡೆದೇ ನಡೆಯುವುವು. ಮೂರುದಿನಗಳಾದ ಮೇಲೆ ಸಮ್ಮೇಳನವು ಯಶಸ್ವಿಯಾಗಿ ನಡೆಯಿತೆಂದು ಪತ್ರಿಕೆಗಳಲ್ಲಿ ಸುದ್ದಿ ಬರುವುವು. ದೂರದ ಜನತೆ ಓದಿ, ನಮ್ಮಲ್ಲಿಯೂ ಸಾಹಿತ್ಯಿಕ ಚಟುವಟಿಕೆ ನಡೆದಿರುವುದೆಂದು ಸಮಾಧಾನ ಪಡುವುದು. ಈ ಬಗೆಯ ಕಣ್ಣಾಮುಚ್ಚಾಲೆ ಇನ್ನೆಷ್ಟು ದಿನ ಹೀಗೆಯೆ ಮುಂದುವರಿಯಬೇಕು?

ಬೀದರಿನಲ್ಲಿ ನೇರಿದ ಸಾಹಿತ್ಯಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದವರು, ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಇರುವ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರು. ಇವರು ಕನ್ನಡಾಭಿಮಾನಿಗಳು; ಕನ್ನಡ ಸಾಹಿತ್ಯವನ್ನು ಅಳವಾಗಿ ಅಭ್ಯಾಸಿಸಿದವರು. ಅನೇಕ ಪ್ರಾಚೀನ ಕನ್ನಡ ಗ್ರಂಥಗಳನ್ನು ಸಂಪಾದನೆ ಮಾಡಿ ಪ್ರಕಟಿಸಿ, ತಮ್ಮ ಪಾಂಡಿತ್ಯವೆಂತಹುದೆಂಬುದನ್ನು ಕನ್ನಡ ಸಾರಸ್ವತ ಪ್ರಪಂಚದಲ್ಲಿ ವೇದ್ಯವಿಸಿದವರು. ಪರಂಪರೆಯನ್ನು ಪ್ರೀತಿಸುವವರಾದರೂ, ಒಳ್ಳೆಯದಾದ ಹೊಸತನ್ನು ಸ್ವಾಗತಿಸುವವರು. ಇವರ ದೀರ್ಘವಾದ ಪ್ರಾರಂಭ ಭಾಷಣ, ಇವರ ಅಭ್ಯಾಸ-ಅಭಿರುಚಿ-ಲೋಕಾನುಭವಗಳನ್ನು ಪ್ರಕಟಗೊಳಿಸುವಂತಹುದಾಗಿದೆ.

ನಿಜವಾದ ಸಾಹಿತ್ಯಿಕ ವರ್ತಮಾನಕಾಲದ ವಾಸ್ತವದ ಪೂಜೆಯನ್ನಷ್ಟೇ ಎಂದೂ ಘೋಷಿಸಲಾರ. ಭೂತದ ಸತ್ತ್ವಸಾಧನೆ, ಭವಿಷ್ಯದ ಕಲ್ಯಾಣಸಾಧನೆ ಇವುಗಳನ್ನೂ ಅವನು ಆದರ್ಶವಾಗಿಟ್ಟುಕೊಂಡಿರುವನು. ಎಂತಲೇ ಅವನು ಹೇಳುವ ತ್ರಿಕಾಲವಿವೇಕದ ಮಾತುಗಳು, ವರ್ತಮಾನದ ರಾಜಕೀಯಕ್ಕೆ ಒಪ್ಪಿಗೆಯಾಗಲಿಕ್ಕಿಲ್ಲ. ಎಂತಲೇ ಅವರು ಹೇಳಿದ ಸಾಹಿತ್ಯಿಕ ಮತಸಹಿಷ್ಣುತೆಯ ಬೋಧೆ, ಶಿವಯೋಗ ಮಂದಿರದ ಒಂದು ಸಭೆಯಲ್ಲಿ ಖಂಡನೆಗೆ ಗುರಿಯಾಯಿತಂತೆ.

ಕನ್ನಡಿಗರು ಒಬ್ಬೊಬ್ಬರೂ ಒಂದೊಂದು ಮತಕ್ಕೆ ಅಂಟಿಕೊಂಡವರಾಗಿಯೇ ಇರುವರು. ಕನ್ನಡ ಸಾಹಿತ್ಯದ ಬಹುಭಾಗ ಬೇರೆ ಬೇರೆ ಮತಗಳ ಮಹಾತ್ಮ್ಯ- ಪ್ರಚಾರಗಳಿಗಾಗಿಯೇ ನಿರ್ಮಾಣವಾದುದಿರುವುದು. ಕನ್ನಡ ಭಾಷೆಯಲ್ಲಿ ಬರೆದಿರುವ ಜ್ಞಾನ-ಸೌಂದರ್ಯಾತ್ಮಕ ಕೃತಿಗಳೆಲ್ಲ ಕನ್ನಡ ಸಾಹಿತ್ಯ ಸಾಗರದಲ್ಲಿ ಸೇರುವುವು. ಇಂದಿನ ಸಾಹಿತ್ಯಿಕರು ಅದನ್ನೆಲ್ಲ ಸಾಹಿತ್ಯಿಕ ಸಹನೆ-ಸಹಾನುಭೂತಿಗಳಿಂದ ಕಂಡು ಅಭ್ಯಾಸ ಮಾಡಬೇಕು. ನನ್ನ ಮತಕ್ಕೆ ವಿರೋಧಿಯಾದುದು ಸಾಹಿತ್ಯವಲ್ಲ— ಎಂದು ಎನ್ನತೊಡಗಿದರೆ, ಕನ್ನಡ ಪ್ರಾಚೀನ ಸಾಹಿತ್ಯ ರಾಶಿಯಲ್ಲಿ ಸ್ವಲ್ಪವೂ ಉಳಿಯಲಿಕ್ಕಿಲ್ಲ. ಮತದ ಅಭಿಮಾನ ವಿರಲಿ, ಅದರೊಂದಿಗೆ ಸ್ವಭಾಷೆಯ ಸಾಹಿತ್ಯದ ಬಗೆಗೆ ಅಭಿಮಾನವೂ ಇರಲಿ. ತನ್ನ ಮೂಗು ಮಾತ್ರ ನೇರವೆಂದು ಪ್ರತಿಯೊಬ್ಬನೂ ಹೊರಟು ಬಿಟ್ಟರೆ, ಸಾಹಿತ್ಯದ ಉನ್ನತಿಗದು ಕ್ಷೇಮಕಾರಿಯೆನಿಸದು.

ಬಿದರೆಯ ಸಾಹಿತ್ಯಸಮ್ಮೇಳನ ನಮ್ಮ ಸಾಹಿತ್ಯ ಸಮ್ಮೇಳನಗಳ ಹಳಿಯ ನೀತಿ ಕೊನೆಗೊಳ್ಳಲೆಂದು ನಮ್ಮ ಆಶೆ. ಸಮ್ಮೇಳನ ಸಂಚಾಲಕರು, ನೆರೆಯ ಭಾಷಾ ಪ್ರದೇಶಗಳಲ್ಲಿ ಜರಗುವ ಸಮ್ಮೇಳನಗಳ ಪ್ರಯೋಜನಕಾರಕ ನವರೀತಿ-ನೀತಿಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ಮುಂದಿನ ಸಮ್ಮೇಳನ ಪ್ರಚಾರದ ಜಾತ್ರೆಯಾಗದೆ, ವಿಚಾರ ಚರ್ಚೆಗಳ ಸಮ್ಮೇಳನವಾಗಲೆಂದು ನಮ್ಮ ಹಾರೈಕೆ.

ಜಯಂತಿಗೆ ಸಹಾಯ

ಸದಲಿಗೆಯ ಶ್ರೀ ಮಾನ್ ಜಿ. ವಿ. ಜೋಶಿಯವರು ಸಹಾಯಧನವೆಂದು ಈಗ ೫೦ ರೂ. ಗಳನ್ನು ಕಳುಹಿಡುವರಲ್ಲದೆ ಮತ್ತೆ ಸಹಾಯಧನವನ್ನೂ ಚಂದಾದಾರರನ್ನೂ ಹುಡಿಸಿಕೊಡುವೆನೆಂದು ಬರೆದು ತಿಳುಹಿಸಿದ್ದಾರೆ.

ಪುಣೆಯಲ್ಲಿರುವ ಜಯಂತಿಯ ಅಭಿಮಾನಿಗಳೊಬ್ಬರಿಂದ, ಆ ನಗರದ ಕನ್ನಡಿಗರಲ್ಲಿ ಜಯಂತಿಗಾಗಿ ಸಹಾಯಧನ ಸಂಗ್ರಹಿಸುತ್ತಿರುವ ಕಾಗದ ಬಂದಿದೆ. ಇಬ್ಬರಿಗೂ ಅಭಿನಂದನೆಗಳು.

ನಾಡನಡೆ

ಸತ್ಯಾಗ್ರಹದ ಹೆಸರಿನಲ್ಲಿ ಕಾಸನದ್ರೋಹ

ಮಹಾರಾಷ್ಟ್ರೀಯರಲ್ಲಿ ಮಹಾತ್ಮರ ತತ್ತ್ವಾನುಯಾಯಿಗಳು ಬೆರಳೆಣಿಕೆಯಲ್ಲಿದ್ದರೂ, 'ಸತ್ಯಾಗ್ರಹ' ಎಂಬ ಮಹಾತ್ಮರ ಪವಿತ್ರ ಶಬ್ದವನ್ನು ಮಾತ್ರ ಬಹುಜನ ಮಹಾರಾಷ್ಟ್ರೀಯರು ಉಚ್ಚರಿಸುತ್ತಿರುವುದು. ಅದರೆ ಇವರ ಸತ್ಯಾಗ್ರಹ ಮಹಾತ್ಮರು ವಿವರಿಸುವ ಅರ್ಥದಿಂದ ಕೂಡಿದುದಲ್ಲ. ಅನ್ಯಾಯದ ಆಕ್ರಮಣ ಬುದ್ಧಿಯಿಂದ ಇನ್ನೊಬ್ಬರ ಸೊತ್ತನ್ನು ತಮ್ಮದನ್ನಾಗಿಸಿಕೊಳ್ಳಲು ನಡೆಸುವ ಕಿಡಿಗೇಡಿತನದ ಚಟುವಟಿಕೆಗಳೆಲ್ಲ ಇವರ 'ಸತ್ಯಾಗ್ರಹ' ಶಬ್ದಾರ್ಥದ ವ್ಯಾಪ್ತಿಯಲ್ಲಿ ಬರುವುದು. ಇವರ ಕಿಡಿಗೇಡಿತನಗಳಿಗೆ ಸರಕಾರದ ಸಂರಕ್ಷಣ ಶಾಖೆಯು ತಡೆಯೊಡ್ಡಿದರೆ, ಅದು ಅಕ್ಷಮ್ಯವಾದ ಅನ್ಯಾಯ— ಪೌರ್ಜನ್ಯದ ಪರಮಾವಧಿ— ಎಂದು ಮರಾಠೀ ಪತ್ರಿಕೆಗಳೆಲ್ಲ ಕೂಗಿ ಕೇಸರಿಟ್ಟು, ಸರಕಾರದ ಅಧಿಕಾರಿಗಳಿಗೆ ಸಹಸ್ರ ಸಹಸ್ರ ಶಾಪಗಳನ್ನು ಕೊಡುತ್ತಿರುವರು.

ವಾಸ್ತವ ವಿಷಯ ಗೊತ್ತಿಲ್ಲದವರು ಈ ಪತ್ರಿಕೆಗಳಲ್ಲಿ ಬರುತ್ತಿರುವ ಅಸತ್ಯ-ಅತಿರಂಜಿತ ಲೇಖನಗಳನ್ನು ಓದಿದರೆ, ಅವರು ಕನ್ನಡಿಗರನ್ನೂ ಕನ್ನಡಿಗರ ಸರಕಾರವನ್ನೂ ತಪ್ಪು ರೀತಿಯಿಂದ ಭಾವಿಸುವುದು ಸಹಜವಾಗಿದೆ. ಸರಕಾರದ ಅಧಿಕಾರಿಗಳನ್ನು ಕಲ್ಲಿದೆಯ ರಾಕ್ಷಸರ ಗುಂಪಿಗೆ ಸೇರಿಸುವುದೂ ಸಹಜವಾಗಿದೆ.

ಕಳ್ಳರ ತಿರುಗುಬೊಬ್ಬೆಯು ಸಮಾಚಾರ. ಹೃದಯವಿಹೀನರಾಗಿ ಕನ್ನಡಿಗರ ವಿರೋಧವಾಗಿಯೂ ಕನ್ನಡಿಗರ ಸರಕಾರದ ವಿರೋಧವಾಗಿಯೂ ಸಂ. ಮು. ಸ. ಮರಾಠಿಗರು ತಾನೇ ಬೇಕುಬೇಕಾದಂತಹ ಅನ್ಯಾಯದ— ವಿದ್ರೋಹದ— ಹಿಂಸೆಯ ಕಾರ್ಯಗಳನ್ನು ನಡೆಸುವರು; ಮರಾಠೀ ಪತ್ರಿಕೆಗಳಲ್ಲಿ ಅವರ ಸುದ್ದಿಯೇ ಇರುವುದಿಲ್ಲ. ಮರಾಠಿಗರಿಗೆ ಕನ್ನಡಿಗರೂ ಕನ್ನಡ ಸರಕಾರೀ ಅಧಿಕಾರಿಗಳೂ ಕಾರಣ ವಿಲ್ಲದೆ ಸೀಡೆಕೊಡುತ್ತಾರೆಂದು, ರಂಗುರಂಗಾದ ತುಚ್ಛಭಾಷೆಯಲ್ಲಿ ಬರೆದ ವಿಕೃತ ವೃತ್ತಗಳೂ ಲೇಖನಗಳೂ, ಅವರ ಪತ್ರಿಕೆಗಳಲ್ಲಿ ದಿನದಿನವೂ ಎಣಿಕೆಯಿಲ್ಲದಷ್ಟು ಪ್ರಕಟವಾಗುತ್ತವೆ.

ಮರಾಠೀ ಪತ್ರಿಕೆಗಳು ಮಾಡುತ್ತಿರುವ ಇಂದಿನ ಪ್ರಚಾರ ಪದ್ಧತಿಯನ್ನು ನೋಡಿದರೆ, ಮರಾಠಿಗರಲ್ಲಿ ಇನ್ನು ಏಳು ತಲೆಯ ವರೆಗೂ ಕನ್ನಡಿಗರ ವಿಷಯಕವಾದ ದ್ವೇಷ-ವೈರಗಳು ಉಳಿಯ ಬಹುದೆಂದು ಎನಿಸುವಂತಿದೆ. ಇನ್ನೊಬ್ಬರೊಂದಿಗೆ 'ಬದುಕು ಬದುಕಿಸು' ಎಂಬ ಸಹಾನುಭೂತಿಯ ಭಾವನೆಯಿಂದ ಕೂಡಿ ಬಾಳುವುದು ಮರಾಠಿಗರಿಗೆ ಗೊತ್ತೇ ಇಲ್ಲವೆಂದು ತೋರುವುದು.

ಸರಕಾರೀ ಅಧಿಕಾರಿಗಳು ಕರ್ತವ್ಯಮಾಡಬೇಕಲ್ಲವೆ ?

ಕನ್ನಡ ಸರಕಾರಕ್ಕೆ ತೊಂದರೆಯನ್ನು ಕೊಡುತ್ತಿರುವಂತೆ, ಬೆಳಗಾಂವಿ ಜಿಲ್ಲೆಯ ಮರಾಠಿಗರನ್ನು — ಸಂಯುಕ್ತ ಮಹಾರಾಷ್ಟ್ರ ನಾದೀ ಮುಂದಾಳುಗಳು— ಯಾವಾಗಲೂ ಪ್ರಚೋದಿಸುತ್ತಿರುವರು. ಮೊದ-ಮೊದಲು ಈ ಮರಾಠಿಗರು ಬರೀ ಕಾಡುತನದ ಗೊಂದಲ ಗಳನ್ನು ನಡೆಸಿದರು. ಆಗ ಬೆಳಗಾಂವಿ ಜಿಲ್ಲೆಯ ಸರಕಾರೀ ಅಧಿಕಾರಿಗಳೆಲ್ಲರೂ ಮರಾಠೀ ಭಾಷೆಯವರಾಗಿ ಇದ್ದುದರಿಂದ, ಚಳವಳಿ ನಡೆಸುವ ಪುಂಡರನ್ನು ಪರ್ಯಾಲೋಚಿಸಿ, ಪರ್ಯಾಯವಾಗಿ ಅವರ ಪುಂಡತನಕ್ಕೆ ಸಹಕಾರವನ್ನು ಕೊಟ್ಟಂತೆಯೆ ಮಾಡಿದರು.

ಈಗ ಮೊದಲಿನ ಅಧಿಕಾರಿಗಳಿಲ್ಲ. ಅವರ ಸ್ಥಾನಗಳಿಗೆ ಬೇರೆಯವರು ಬಂದಿದ್ದಾರೆ. ಈ ಹೊಸಬರು ಪಕ್ಷಪಾತಭಾವವನ್ನು ತೋರಿಸದೆ, ಸರಕಾರದ ಕಾಯಿದೆಗಳನ್ನು ಸಮರ್ಥರೀತಿಯಿಂದ ಪ್ರಯೋಗದಲ್ಲಿ ತಂದು, ಸಮಾಜದಲ್ಲಿ ಶಾಂತಿಯನ್ನು ಸಂರಕ್ಷಿಸ ಬೇಕೆಂಬ ಕರ್ತವ್ಯಬುದ್ಧಿಯವರಾಗಿದ್ದಾರೆ. ಮೊದಲಿನ ಅಧಿಕಾರಿಗಳಂತೆ ಇವರಿಂದ ತಮ್ಮ ಕಿಡಿಗೇಡಿತನಕ್ಕೆ ಪ್ರೋತ್ಸಾಹ ಸಿಕ್ಕುವುದರ ಬದಲು ತಡೆಯೊದಗುತ್ತಿರುವುದು, ಈ ಮರಾಠೀ ಚಳವಳಿಗಾರರಿಗೆ ದೊಡ್ಡ ತೊಂದರೆಯಾಗಿದೆ. ಆದುರಿಂದಲೇ ಇವರು ಅಧಿಕಾರಿಗಳ ಕರ್ತವ್ಯಬುದ್ಧಿಯನ್ನು ರಾಕ್ಷಸವೃತ್ತಿಯೆಂದು ಬಣ್ಣ ಹಚ್ಚಿ ಹಚ್ಚಿ ಹೇಳುತ್ತಿರುತ್ತಾರೆ.

ಬೆಳಗಾಂವಿಯ ಪೋಲೀಸ್ ಸುಪರಿಂಟೆಂಡೆಂಟರಾದ ಶ್ರೀ. ಲುಯಿಸ್ ಅವರು ಮರಾಠಿಗರಿಗೆ ಮಾಡಿದ ದ್ರೋಹವೇನು? ಅದೇ, ಅವರು ತಮ್ಮ ಕರ್ತವ್ಯನಿರತ ಮಾಡಿದ ಕಾಯಿದೆಯ ಚಲಾವಣೆ. ಇವರ ಈ ಕಾಯಿದೆ ಚಲಾವಣೆ ಮರಾಠಿಗರ ಪುಂಡತನವನ್ನು ಮಣ್ಣು ಮುಕ್ಕಿಸಿತು. ಆದಕ್ಕಾಗಿ ಶ್ರೀ. ಲುಯಿಸ್ ಅವರು ಮರಾಠಿಗರ ಕ್ರೋಧಾಗ್ನಿಗೆ ಪಾತ್ರರಾಗಬೇಕಾಯಿತು.

ಶ್ರೀ. ಲುಯಿಸ್ ಅವರ ನಿಷ್ಠೆಯ ಸೇವೆಗಾಗಿ, ಕೇಂದ್ರ ಸರಕಾರ ಅವರಿಗೆ ಪ್ರಶಸ್ತಿಯನ್ನಿತ್ತು ಮನ್ನಣೆಮಾಡಿತು. ಮರಾಠಿಗರ ಕೋಪ ಉರಿದೆದ್ದಿತು. ಕೇಂದ್ರ ಸರಕಾರಕ್ಕೆ ಬುದ್ಧಿಯಿದೆಯೆ?— ಎಂದು ಪ್ರಶ್ನಿಸುವಂತಹ ಗೊತ್ತುವಳಿಯನ್ನು ಬೆಳಗಾಂವಿಯ ನಗರಸಭೆ ಬಹು ಮತದಿಂದ ಎತ್ತಿ ಹಿಡಿಯಿತು. ಈ ಪ್ರಶಸ್ತಿ-ಮನ್ನಣೆಗಳನ್ನು ನಿಷೇಧಿಸುವ ಸಭೆಗಳೂ ಅಲ್ಲಲ್ಲಿ ನಡೆದುವು.

ಕಾಯಿದೆಗನುಸಾರವಾಗಿ, ಬೆಳಗಾಂವಿಯ ಪೋಲಿಸ್ ಅಧಿಕಾರಿಗಳು, ಸಾರ್ವಜನಿಕ ಶಾಂತತೆಯನ್ನು ಕಾಯಲು ಕರ್ತವ್ಯಮಾಡಿದರೆ ಅದು ಅನ್ಯಾಯವೇ ?

ಮರಾಠಿಗರ ಕಾಯದೇ ಭಂಗ

ಎಳ್ಳಾರು – ಹಂಚಿನಾಳಗಳಲ್ಲಿರುವ ಮರಾಠಿಗರಿಗೆ ತಾವು ಮೈಸೂರು ರಾಜ್ಯದ ಪ್ರಜೆಗಳಾಗಿರುವುದು ಬೇಡವಾಗಿದ್ದರೆ, ಅನು-ಕೂಲತೆ ಮಾಡಿಕೊಂಡು ತಮಗೆ ಬೇಕಾದಲ್ಲಿ ಹೋಗಿ ಬಹುದು. ಇನ್ನು ತಾವಿರುವ ಊರುಗಳನ್ನು ಮಹಾರಾಷ್ಟ್ರಕ್ಕೆ ಸೇರಿಸ

ಬೇಕೆಂದರೆ, ನ್ಯಾಯವಾದ ದಾರಿಯಲ್ಲಿ ಪ್ರಯತ್ನ ನಡೆಸಬಹುದು. ಅದರೆ ಬೇಡಿಕೆಯು ಸರಿಯಾದುದೆಂದು ಶಾಸನಾನುಸಾರ ಒಪ್ಪಿಗೆಯಾಗಿ, ಆ ಊರುಗಳು ಮತ್ತೊಂದು ರಾಜ್ಯದಲ್ಲಿ ಸೇರ್ಪಡೆಯಾಗುವವರೆಗೂ, ಎಳ್ಳೂರು-ಹಂಚಿನಾಳಗಳ ಮರಾಠಿಗರು ಮೈಸೂರಿನ ಪ್ರಜೆಗಳೇ ಆಗಿರುವರು. ಎಲ್ಲಿಯ ವರೆಗೆ ಅವರು ಮೈಸೂರು ಸರಕಾರದ ಪ್ರಜೆಗಳಾಗಿರುವರೋ, ಅಲ್ಲಿಯವರೆಗೆ ಅವರು ಮೈಸೂರು ಆಡಳಿತದ ಶಾಸನಗಳಿಗೆ ವಿಧೇಯರಾಗಿ ನಡೆದುಕೊಳ್ಳಲೇಬೇಕು. ಹೀಗೆ ನಡೆದುಕೊಳ್ಳುವುದು ನಾಗರಿಕತನವೆನಿಸುವುದು. ಈ ನೀತಿಯನ್ನು ಬಿಟ್ಟು ಕಾಯಿದೆಭಂಗದ ಕಿಡಿಗೇಡಿತನವನ್ನು ನಡೆಸತೊಡಗಿದರೆ, ಅದು ಆಡಳಿತದ ದೃಷ್ಟಿಯಲ್ಲಿ ಅನ್ಯಾಯವಲ್ಲದೆ ಇನ್ನೇನು ?

ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಚವ್ಹಾಣ ಅವರೂ ಪ್ರಾಂತೀಯ ಮರಭಿಮಾನದಿಂದ ಪ್ರೇರಿತರಾಗಿ, ಎಳ್ಳೂರಿನ ಪ್ರಕರಣವನ್ನು ಕುರಿತು, ವಿವೇಕಕ್ಕೆ ದೂರವಾದ ಮಾತುಗಳನ್ನು ಆಡಿದುದು ವಿಷಾದದ ಸಂಗತಿಯಾಗಿದೆ. ಆಡಳಿತದ ಹೊಣೆಗಾರಿಕೆಯನ್ನು ಹೆದಿನಾರಾಣೆಯಷ್ಟು ಅರಿತವರು. ಈ ಬಗೆಯಾಗಿ ಒಂದು ಬಂಧುಸರಕಾರದ ಶಾಸನಕ್ರಮದ ಮೇಲೆ ಆರೋಪವನ್ನು ಹೊರಿಸಿ ಮಾತನಾಡಬಾರದಾಗಿತ್ತು. ಸ್ವಲ್ಪ ತಮ್ಮ ಆಡಳಿತದ ಸಿಂಹಾವಲೋಕನವನ್ನು ಮಾನ್ಯ ಚವ್ಹಾಣ ಅವರು ಮಾಡಿಕೊಂಡಿದ್ದರೆ, ಬಿಕ್ಕಟ್ಟಿನ ಸಮಯ ಬಂದಾಗ ಕಾಯಿದೆಯನ್ನು ಸಂರಕ್ಷಿಸುವ ಕರ್ತವ್ಯಬುದ್ಧಿಯಿಂದಲೇ ತಾವೂ ಏನೇನು ಮಾಡಿರುವೆವೆಂಬುದು ಅವರಿಗೆ ಗೊತ್ತಾಗದೆ ಹೋಗುತ್ತಿರಲಿಲ್ಲ. ಆದರೆ ಅವರ ವೀರಮರಾಠಾ ಬುದ್ಧಿ, ಭೂತಕಾಲದ ಕಡೆಗೆ ಅವರನ್ನು ನೋಡಗೊಟ್ಟೀ ಇಲ್ಲ; ಪಾಪ ನೋಡಗೊಟ್ಟಿದ್ದರೆ, ಮೈಸೂರು ಸರಕಾರದ ಶಾಸನ ಸಂರಕ್ಷಣೆಯ ಕರ್ತವ್ಯವನ್ನು ಹೊತ್ತ ಅಧಿಕಾರಿಗಳನ್ನು ಹೀಗೆ ನಿಷ್ಠುರವಚನಗಳಿಂದ ಆಕ್ಷೇಪಿಸಲು ಹಿಂದೆ ಮುಂದೆ ನೋಡಬಹುದಾಗಿತ್ತು !

ಇದು ನೋಡಿ, ಕಾಂಗ್ರೆಸ್‌ಸಂಸ್ಥೆಯ ಅಸಹ್ಯವೃತ್ತಿ !

ಮೈಸೂರು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವುದು ಕಾಂಗ್ರೆಸ್ಸಿಗರ ರಾಜ್ಯವೆಂಬುದು, ಮಹಾರಾಷ್ಟ್ರ ಕಾಂಗ್ರೆಸ್ಸಿಗೆ ಗೊತ್ತಿಲ್ಲವೆ? ಎಲ್ಲ ಕಾಂಗ್ರೆಸ್ ಸರಕಾರಗಳೂ ಒಂದೆ ಒಂದು ಕಾಂಗ್ರೆಸ್ ಮಹಾಸಂಸ್ಥೆಯ ನಿರ್ಮಿತಿಗಳಲ್ಲವೇ ? ಪ್ರಾಂತೀಯ ಕಾಂಗ್ರೇಸ್ ಸಂಸ್ಥೆಗಳು ಆ ಮಹಾಸಂಸ್ಥೆಯ ದೇಹದ ಅಂಗಾಂಗಗಳಲ್ಲವೇ ? ಎಲ್ಲ ಅಂಗಾಂಗಗಳೂ ದೇಹದ ವಿಚಾರಸಂಸ್ಥಾ ವಿಭಾಗದಂತೆ ವರ್ತಿಸುತ್ತಿರಬೇಕು. ಒಂದಕ್ಕೊಂದು ಬುದ್ಧಿ ಹೇಳಿ ಗುದ್ದಾಟ ಹೂಡಿದರೆ, ದೇಹದ ಯಾವ ಕಾರ್ಯವೂ ಸುಸಂಘಟಿತವಾಗಿ ನಡೆಯಲಾರದು.

ಮುಂಬಯಿರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಚವ್ಹಾಣ ಅವರು, ಅಧಿಕಾರ ಪ್ರಾಪ್ತಿಗಾಗಿ ಕಾಂಗ್ರೆಸಿಗರಾಗಿದ್ದರೂ, ಇವರು ಮೊದಲಿನಿಂದಲೂ ಮರಾಠಿಯ ಅಭಿನಿವೇಶದ ಮೂಲಕ, ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಧುರೀಣರಿಗೆ ಆಂತರಿಕ ಪ್ರಚೋದಕರಾಗಿರುವರು. ಅವರ ಪ್ರಚೋದನೆಯು ಬೆಂಬಲವಿಲ್ಲದೆ ಹೋಗಿದ್ದರೆ, ಮುಂಬಯಿ ರಾಜ್ಯದ ನಾಗರಿಕರಾದ ಸಂ. ಮ. ಸ. ಧುರೀಣರು ಕರ್ನಾಟಕ ಪ್ರದೇಶವೆಲ್ಲಿ ಹೊಕ್ಕು ಪುಂಡತನವನ್ನು ನಡೆಯಿಸಲಿಕ್ಕೆ ಸಾಧ್ಯವೇ ಇರಲಿಲ್ಲ. ಈಗ ಮೈಸೂರು ಸರಕಾರವು ತನ್ನ ಮೊವಲಿನ ಮೃದು ಧೋರಣೆಯನ್ನು ಬಿಟ್ಟು ಕಟ್ಟುನಿಟ್ಟಾಗಿ ವರ್ತಿಸ ತೊಡಗಿದುದರಿಂದ, ಮಾನ್ಯ ಚವ್ಹಾಣರ ಮರ್ಮಕ್ಕೆ ಏಟುಬಿದ್ದಂತಾಗಿದೆ. ಆದುದರಿಂದಲೇ ತಾವು ಕಾಂಗ್ರೆಸ್ ಪಕ್ಷೀಯರೆಂಬ ಹೊಣೆಗಾರಿಕೆಯನ್ನು ಮರೆತು ಬಿಚ್ಚುನುಡಿಗಳಲ್ಲಿ ಮೈಸೂರ ಸರಕಾರವನ್ನು ಟೀಕಿಸಿ ನುಡಿದಿದ್ದಾರೆ.

ಅದರಂತೆಯೆ ಮಹಾರಾಷ್ಟ್ರ ಪ್ರಾಂತೀಯ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ. ಪಾಟೀಲರು, ಕರ್ತವ್ಯಾಕರ್ತವ್ಯಗಳ ವಿವೇಕವಿಲ್ಲದೆ, ಬೆಳಗಾಂವಿಯ ಅಧಿಕಾರಿಗಳ ನೀತಿಯ ವಿಷಯಕವಾಗಿ ಉದ್ರೇಕಜನಕವಾದ ಘೋಷಣೆಯನ್ನು ಪ್ರಕಟಿಸಿದ್ದಾರೆ. ಹೀಗೆ ಮಾಡುವುದಕ್ಕೆ ದೊದಲು ಅವರು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯೊಂದಿಗೂ ರಾಜ್ಯ ಸರಕಾರದೊಂದಿಗೂ ವಿಚಾರವಿನಿಮಯ ಮಾಡಿ ವಾಸ್ತವ ಸಂಗತಿಯನ್ನು ತಿಳಿದುಕೊಳ್ಳಬೇಕಾಗಿತ್ತು. ಅನ್ಯಾಯದ ಮೂಲವೆಲ್ಲಿದೆಯೆಂಬುದನ್ನು ಕಂಡು ಹಿಡಿಯಬಹುದಾಗಿತ್ತು.

ಸಾರ್ವಜನಿಕ ಶಾಂತತಾಭಂಗವನ್ನುಂಟು ಮಾಡುವುದು ದೋಷವಲ್ಲ. ಅವರ ಗೊಂದಲವನ್ನು ನಿಯಂತ್ರಿಸಲು ಪೋಲೀಸರು ಒಬ್ಬಿಬ್ಬರು ಮರಾಠಿಗರಿಗೆ ಲಾಠಿಯಿಂದ ಹೊಡೆದುದು ದೋಷವೇ ? ಇಂತಹ ಸಂದರ್ಭ ಮಹಾರಾಷ್ಟ್ರದಲ್ಲಿ ಒದಗಿದ್ದರೆ, ಅಲ್ಲಿಯ ಪೋಲೀಸರು ಏನು ಮಾಡಬಹುದಾಗಿತ್ತು ? ಇದರ ವಿವೇಚನೆ ಪ್ರಾಂತೀಯ ಕಾಂಗ್ರೇಸ್ ಸಮಿತಿಯ ಅಧ್ಯಕ್ಷ ಸ್ಥಾನದಲ್ಲಿ ಇರುವ ಶ್ರೀ. ಪಾಟೀಲರಂತಹರಿಗೂ ಇರಬಾರದೇ ? ಮರಾಠೀ ಮಾತನಾಡುವ ಪುಂಡರು ಹಾಕುವ ಗೊಂದಲ, ಕಾಯಿದೆ ಭಂಗ ಇವರ ದೃಷ್ಟಿಯಲ್ಲಿ ಅಪರಾಧಗಳೆನಿಸವೇನು ? ಕೇಂದ್ರ ಸಂಸ್ಥೆಯ ಧುರೀಣರನ್ನು ಕೇಳಿಯಾದರೂ ಇವರು ತಮ್ಮ ಕರ್ತವ್ಯವನ್ನು ಅರಿತು ಕೊಳ್ಳಬೇಕು.

ಜಾನಕೀ ಗಂಡ

(ಸಣ್ಣಕತೆ)

ಶ್ರೀ. ಎಂ. ಜಿ. ವೆಂಕಟೇಶಯ್ಯ ಎಂ. ಎ., ಬಿ. ಟಿ. ಬಳ್ಳಾರಿ.

ಇಂದಿನ ನಮ್ಮ ದೇಶದಲ್ಲಿಯ ತಲೆಕೆಳಗಾದ ಆರ್ಥಿಕ ಪರಿಸ್ಥಿತಿ, ಲಕ್ಷ್ಮಣರಾಯನಂತಹ ವಿಪರೀತ ಮತಿಗಳನ್ನೂ ಹುಟ್ಟಿಸುತ್ತಲಿದೆ. ಇದರಿಂದ ನಮ್ಮ ಹೆಣ್ಣುಮಕ್ಕಳ ಜೀವನಸಮಸ್ಯೆ ಇನ್ನಿಷ್ಟು ಕೊಡಕನದಾಗಬಹುದು. ಧನವು ಜೀವಿಸಿದ್ದ ವಿಧವೆಯರೂ ಸಮಾಜದಲ್ಲಿ ಹುಟ್ಟಿಕೊಳ್ಳಬಹುದು.

❋

"ನಾಳೆ ಮದುವೆ, ನಿನಗೆ ಗೊತ್ತಾದಂತಿಲ್ಲ!"

"ಯಾರಿಗೆ, ಅಂದರೆ?"

"ನಮ್ಮ ಜಾನಕಿಗೆ.... ಯಾಕೆ ಹಾಗೆ ನೋಡುತೀ!"

"ಯಾಕೂ ಇಲ್ಲ. ಅಲ್ಲ ರಾಮಸ್ವಾಮಿಗೆ ಕೊಡತಾರೆ ಎಂತ, ಅವರ ತಾಯಿ ಹೋದ ವಾರ ನನ್ನೊಡನೆ ಹೇಳಿದಳಲ್ಲಾ ಅಂದರೆ!"

"ನಿಜ. ಹಾಗೇ ಇತ್ತು, ಆದರೆ...."

ಎಂದ ಗಂಡ. ಅವನಿಗೂ ಈ ಮದುವೆ ಇದ್ದಕ್ಕಿದ್ದ ಹಾಗೆ ಗೊತ್ತಾದಂತೆ ಭಾಸವಾಗಿತ್ತು.

"ಆದರೆ....ಏನು?" ಎಂದಳು ಹೆಂಡತಿ ನರಸಮ್ಮ.

"ನೋಡು. ಆ ವರನಿಗಿಂತ ಈ ವರನೇ ಶ್ರೀಮಂತ ಎಂತ ಅವರಿಗೆ ಹೋರಿಬಿಟ್ಟಿತು. ಅಲ್ಲದೆ ನಾಲ್ಕು ದಿನದೊಳಗಾಗಿ ಎಲ್ಲಾ ಮುಗಿಸಿ ಅವರು ಕಲ್ಕತ್ತೆಗೆ ಪ್ರಯಾಣ ಮಾಡಬೇಕು. ಅದಕ್ಕೆ ಇಲ್ಲಿ ಮದುವೆ ಮಾಡೋದಕ್ಕಿಂತ ಬನಶಂಕರಿಯ ಗುಡಿಯಲ್ಲಿ ಎಲ್ಲಾ ಮಾಡೋದಕ್ಕೆ ಏರ್ಪಾಡಾಗಿ ಬಿಟ್ಟಿದೆ."

"ಹೀಗುಂಟೆ! ಬನಶಂಕರಿಗುಡಿಯೆ?"

"ಯಾಕಾಗಬಾರದು? ವರನಿಗೆ ಕಲ್ಕತ್ತೆಯಲ್ಲಿ ದೊಡ್ಡ ಕೆಲಸವಂತೆ. ಕಾಲೇಜಿನಲ್ಲಿ ಆತ Professor ಅಂತೆ. ಬಹುಗಟ್ಟಿಗ— ಎಂತ ರಾಮರಾಯರೇ ಹೇಳಿದರು.

"ಅದರಲ್ಲೇನು ವಿಶೇಷ! ರಾಮರಾಯರು ಅಳಿಯನ ವಿಚಾರವಾಗಿ ಸರ್ಟಿಫಿಕೇಟು ಕೊಡೋದೊಂದು ಹೆಚ್ಚೆ! ಎಲ್ಲೋದೂರಬಾರ— ರಾಮಸ್ವಾಮೀಗೆ ಕೊಡಬೇಕಾಗಿತ್ತು."

"ನಿಂದೆಲ್ಲಾ ಹೀಗೆ! ಆ ವರನಿಗೆ ಹಣದ ಮೇಲೆ ಆಶೆಯಿಲ್ಲ. ವರದಕ್ಷಿಣೆ ಬೇಡ ಅಂದನಂತೆ."

"ಅಂದಿರಬಹುದು. ಮೂವತ್ತೈದು ವರ್ಷದ ವರನಿಗೆ ವರದಕ್ಷಿಣೆ ಬೇರೆ ಏನು! ನಿದಾನನಾಗಿ ಎಲ್ಲಾ ವಿಚಾರ ಮಾಡಿ ಮಾಡಬೇಕೆಂದರೆ!"

"ಏನು ಕುಂಟೆ, ಕುರುಡೆ! ನೋಡೋಕೆ ಚೆನ್ನಾಗಿಯೆ ಇದ್ದಾನೆ" ಲಕ್ಷ್ಮಣರಾಯ ಚೆನ್ನಾಗಿಯೆ ಇದ್ದ. ಅಗಲವಾದ ಮುಖ; ಕಾಂತಿಯುಕ್ತವಾದ ಕಣ್ಣುಗಳು, ಮಾತಿನಲ್ಲಿ ಒಂದು ವಿಧವಾದ ಸಾಧುರ್ಯ; ಇನ್ನೆಲ್ಲವೂ ಜಾನಕಿಯನ್ನು ಮುಗ್ಧಗೊಳಿಸಿದ್ದುವು.

ಜಾನಕಿಯು ನೋಡುವುದಕ್ಕೆ ಸಾಮಾನ್ಯವಾದ ಒಂದು ಹುಡುಗಿ. ಶ್ಯಾಮರಾಯರು ಧನವಂತರಲ್ಲದಿದ್ದರೂ ಐದುಸಾವಿರ ರೂಪಾಯಿಗಳನ್ನು ಅವಳ ಮದುವೆಗಾಗಿ ತೆಗೆದಿಟ್ಟಿದ್ದರು. ಇದು ಆ ಪೇಟೆಯಲ್ಲಿ ಎಲ್ಲರಿಗೂ ತಿಳಿದ ವಿಚಾರವಾಗಿಯೆ ಇತ್ತು. ರಾಮಸ್ವಾಮಿಗೆ ಇದು ತಿಳಿದಿದ್ದರೂ ಅವನು ಜಾನಕಿಯನ್ನು ಮದುವೆ ಮಾಡಿಕೊಳ್ಳಲು ಒಪ್ಪಲಿಲ್ಲ.

ರಾಮಸ್ವಾಮಿಗೆ ಮದರಾಸಿನ ಬಳಿ ಒಂದು ಹಳ್ಳಿಯಲ್ಲಿ ಯಾವುದೊ ಒಂದು ಸರಕಾರಿ ಕೆಲಸವೆಂದು ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ಕೆಲವರಾದರೋ ಈ ಮದುವೆಯನ್ನು ತಪ್ಪಿಸಿಕೊಳ್ಳಲು ಅವನು ಊರು ಬಿಟ್ಟನೆಂದು ಆಡಿಕೊಳ್ಳುತ್ತಿದ್ದರು.

"ನಿದಾನವಾಗಿ ವಿಚಾರ ಮಾಡುತ್ತ ಬಂದರೆ, ಈಗಿನ ಕಾಲದಲ್ಲಿ ಮದುವೆಯಾಗುವುದೇ ಕಷ್ಟ! ಈ ಕಾಲ. ಇದು ಏರೋಪ್ಲೇನ್ ಕಾಲ. ಒಂಟೆತ್ತಿನ ಗಾಡಿ ಕಾಲವಲ್ಲ!" ಎಂದರು ಜಗನ್ನಾಥರಾಯರು

"ಅಲ್ಲ, ಅವನು ಜಾನಕಿಗೆ ಗುರುತಾವದ್ದು ಹೇಗೆ?" ಎಂದು ಕೇಳಿದಳು ನರಸಮ್ಮ.

"ಅದೇ ಹೇಳೋದು, ದೈವಘಟನೆ ಎಂತ! ಕಾಲೇಜಿನಿಂದ ಜಾನಕಿ ಬರುತ್ತಿದ್ದರೆ, ಆತನೇ ಉಡುಪಿ ಹೋಟಲಿಗೆ ದಾರಿ ಕೇಳಿದನಂತೆ. ಸಾವಿರಾರು ಜನ ಓಡಾಡುತ್ತಿದ್ದಾಗ ಅವನು ಜಾನಕಿಯನ್ನೇ ಕೇಳಬೇಕೆ! ಅದೇ ಕೆಲಸವಾಗುವ ಲಕ್ಷಣ ಎಂದೆ! ಜಾನಕಿ ನಿನಗೆ ತಿಳಿದ ಹಾಗೆ ಧೈರ್ಯವಂತ ಹುಡುಗಿ. ದಾರಿ ಹೇಳಿದಳು. ಅವಳ ಮಾತಿನಿಂದ ಅವಳು ಓದುತ್ತಿದ್ದಾಳೆಂದು ತಿಳಿದು ತಾನೇ ತನ್ನ ಕೆಲಸ ಹೇಳಿಕೊಂಡನಂತೆ. ಅದನ್ನು ಕೇಳಿ ಜಾನಕಿ ಪಕ್ಕದಲ್ಲಿ ಹೋಗುತ್ತಿದ್ದ ಸುಬ್ಬೂನ ಕರೆದು ಆತನಿಗೆ ದಾರಿ ತೋರಿಸಬೇಕೆಂದು ಕೇಳಿಕೊಂಡಳಂತೆ. ಅಲ್ಲಿಂದ ಮುಂದೆ

ಸುಬ್ಬಾ ಆ ವರನನ್ನ ಮನೆಗೇ ಕರೆದುಕೊಂಡು ಬಂದು ತಂದೆಗೆ ಭೆಟ್ಟಿ ಮಾಡಿಸಿದನಂತೆ."

"ಕಾಲ ಒದಗಿ ಬಂತು."

"ಅದೇ ನಾನು ಹೇಳೋದು. ವಿಚಾರವೆಲ್ಲಾ ತಿಳಿದರೆ ಆಗ ನಮ್ಮ ತಲೆಗೆ ಚೆನ್ನಾಗಿ ಹತ್ತುತ್ತೆ—ನಮ್ಮ ಕೈಯಲ್ಲಿ ಏನೂ ಇಲ್ಲ; ಎಲ್ಲಾ ಕಾಲಮಹಿಮೆ. ಕಾಲ ಬಂದರೆ ಆಗಿಹೋಗುತ್ತೆ."

"ಹಾಗೆ ಅಂತ, ಮಾಡೋ ಕೆಲಸ ಬಿಟ್ಟು ಕೂತುಕೋಬೇಕೆ?"

"ಅದಲ್ಲ ಈಗಿನ ಮಾತು! ನಾಳೆ ಮದುವೆಗೆ ಅವರಿಗೆ ಏನು ಕೊಡಬೇಕು—ಎಂತ ಯೋಚನೆ ಮಾಡುತ್ತಿದ್ದೇನೆ."

"ಒಂದು ಬೆಳ್ಳಿಯ ಬಟ್ಟಲು ಕೊಟ್ಟುಬಿಡಿ! ಈಗ ಹತ್ತು ರೂಪಾಯಿಗೆ ಸಾಮಾನ್ಯನಾದದ್ದು ಬರಬಹುದು."

"ಅದಕ್ಕೆಂತಲೂ...."

"ಹೇಳಿ, ನೋಡೋಣ."

"ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೆಟ್ ಕೊಡಬಹುದು."

"ಆ ಕಾಗದನೆ?"

"ಏನು ಹಾಗಂದರೆ.... ನಾವು ಕೊಡೋ ಹತ್ತು ರೂಪಾಯಿಗೆ ಅವರಿಗೆ ಹದಿನಾರುವರೆ ರೂಪಾಯಿ ಮುಂದಕ್ಕೆ ಬರುತ್ತೆ."

"ಅವೇನೋ ಆ ವಿಚಾರ ನನಗೆ ತಿಳಿಯೊಲ್ಲ.... ಹಾಗೇ ಮಾಡಿ."

ಮದುವೆ ಬಹು ವಿಜೃಂಭಣೆಯಿಂದ ಜರುಗಿತು. ಮದುವೆಗೆ ಬಂದಿದ್ದವರೆಲ್ಲರೂ ಶ್ಯಾಮರಾಯರ ಅದೃಷ್ಟವನ್ನು ಹೊಗಳಿದರ. ಒಳ್ಳೇ ವರ ಸಿಗುವುದು ದೊಡ್ಡ ಅದೃಷ್ಟವೆಂದರು. ಶ್ಯಾಮರಾಯರಾದರೋ 'ಎಲ್ಲಾ ನಮ್ಮ ಜಾನಕಿ ಅದೃಷ್ಟ. ಸುಬ್ಬಾ ವಿಶ್ವಾಸ' ಎಂದು ಹೇಳಿಬಿಟ್ಟರು.. ರಾಮಸ್ವಾಮಿ ಮದುವೆಗೆ ಬರಲಿಲ್ಲ; ಹತ್ತುರೂಪಾಯಿ ತಾನಿದ್ದ ಸ್ಥಳದಿಂದಲೇ ಟೆಲ್ಗಾಲು ಮೂಲಕ ಕಳಿಸಿಕೊಟ್ಟ.

ಬನಶಂಕರಿಯಿಂದ ಮದುವೆ ಮುಗಿಸಿಕೊಂಡು ತಮ್ಮ ಮನೆಗೆ ಶ್ಯಾಮರಾಯರು ಬಂದುಬಿಟ್ಟರು. ಮಾರನೆಯ ದಿನ ಬೆಳಗ್ಗೆ ಅವರು ತಮ್ಮ ಚಿಕ್ಕ ಮನೆಯಲ್ಲಿಯೇ 'ಪೇಪರ್' ನೋಡುತ್ತಾ ಕುಳಿತಿದ್ದರು. ಇನ್ನೂ ಬೆಳಗಿನ 'ಕಾಫಿ' ಅಲ್ಲಿಗೆ ಬಂದಿರಲಿಲ್ಲ. ಎದುರಿಗಿದ್ದ ಕಿಟಕಿಯ ಪಕ್ಕದಲ್ಲಿ ಲಕ್ಷ್ಮಣರಾಯ—ಜಾನಕಿ ಮಾತನಾಡುತ್ತಿದ್ದುದು ಅವರ ಕಿವಿಗೆ ಬಿತ್ತು.

"ಇನ್ಯಾಕೆ ಈ ಓದು?"

"ಈ ವರ್ಷ ಮುಗಿಸಿದರೆ ನನ್ನ B A. ಮುಗಿಯುತ್ತೆ."

"ಮುಗಿಸಿ ಮಾಡುವುದೇನಿದೆ! ನಾನು ಮೊದಲೇ ಹೇಳಲಿಲ್ಲವೆ? ಮದುವೆಯಾದ ಕೂಡಲೆ ನೀನು ನನ್ನೊಡನೆ ಬಂದು ಬಿಡಬೇಕು ಎಂತ!"

"ಹೌದು ಅದರ ಜೊತೆಗೆ, ಅಲ್ಲಿ ಸಂಸಾರಕ್ಕೆ ಮನೆ ಸಿಕ್ಕುವುದೂ ಕಷ್ಟ ಎಂದರಲ್ಲ!"

"ಇರಲಿ, ಅಲ್ಲಿ ಈಗ ೨೦೦೦ ರೂಪಾಯಿ ಕೊಟ್ಟರೆ, ಆಮೇಲೆ ಬಾಡಿಗೆಗೆ ಮನೆಸಿಗುತ್ತೆ. ನನ್ನ ಸ್ನೇಹಿತ ಹಾಗೇ ಮಾಡಿದ್ದಾನೆ."

"ಅಂದರೆ ಎರಡು ಸಾವಿರ ಈಗ ನೀವೂ ಕೊಡುತ್ತೀರಾ?"

"ಇದ್ದರೆ ಕೊಟ್ಟುಬಿಡೋದೇ!"

ಶ್ಯಾಮರಾಯರ ಬಳಿಗೆ ಕಾಫಿ ಬಂದಿತ್ತು. ಅವರು ಅದನ್ನು ಕುಡಿಯುತ್ತ ಮನಸ್ಸಿನಲ್ಲಿ ಅಂದುಕೊಂಡರು. "ಎಶಡು ಸಾವಿರ ವರದಕ್ಷಿಣೆ ಕೊಡುವುದಕ್ಕೆ ಸಿದ್ಧವಾಗಿದ್ದೆ. ಈಗ ಅದರಿಂದ ಜಾನಕೀಗೆ ಮನೆಸಿಗುವ ಹಾಗಿದ್ದರೆ ಏತಕ್ಕೆ ಕೊಡಬಾರದು?"

ಮದುವೆಯಾದ ನಾಲ್ಕನೆಯ ದಿನವೆ ಪ್ರಯಾಣಕ್ಕೆ ಎಲ್ಲವನ್ನೂ ಸಿದ್ಧಗೊಳಿಸಿದ್ದಾಯಿತು. ಜಾನಕಿಯತಾಯಿ ಅತ್ತದ್ದೂ ಆಯಿತು. "ಕಣ್ಣಲ್ಲಿ ಹಾಗೆ ನೀರು ಹಾಕಿಕೋ ಬಾರದು" ಎನ್ನುತ್ತ ರಾಯರು ಕಣ್ಣು ಒರಸಿಕೊಂಡದ್ದೂ ಆಯಿತು.

"ಬರತೇನೆ ಮಾವನವರೆ" ಎಂದ ಲಕ್ಷ್ಮಣರಾಯ.

ಮಾವನವರು ಜೇಬಿನಿಂದ ಎರಡು ಸಾವಿರ ರೂಪಾಯಿಗಳ ನೋಟುಗಳನ್ನು ಈಚೆಗೆ ತೆಗೆದು "ಇದನ್ನು ತೆಗೆದುಕೊಳ್ಳಿ. ಕೆಲಸಕ್ಕೆ ಬರುತ್ತೆ" ಎಂದರು. ಮೊದಲು ಲಕ್ಷ್ಮಣರಾಯ ತೆಗೆದುಕೊಳ್ಳಲಿಲ್ಲ. ಬಲವಂತ ಮಾಡಿದ ಮೇಲೆ ಅದನ್ನು ತೆಗೆದುಕೊಂಡು "ಜಾನಕಿ, ನಿನ್ನ ಒಡವೆ ಪೆಟ್ಟಿಗೆ ಎಲ್ಲಿದೆ?" ಎಂದ. ಜಾನಕಿಯು ತನ್ನ ಸಣ್ಣ ಪೆಟ್ಟಿಗೆಯನ್ನು ತೆಗೆದುಕೊಟ್ಟಳು. ಅದರಲ್ಲಿ ಆ ಹಣವನ್ನು ಹಾಕಿ, ತನ್ನ ಕೈಚೀಲದಲ್ಲಿಟ್ಟು ಕೊಂಡ.

ರೈಲಿನಲ್ಲಿ ಕುಳಿತುಕೊಂಡರು. ರೈಲು ಕದಲುವ ವರೆಗೂ ಸುಬ್ಬಾ ಇದ್ದ. ಅವನೆದುರಿಗೆ ಗಂಡ ಹೆಂಡಿರ ಸಲ್ಲಾಪವು ನಡೆಯಲಾರದೆ ಅದು ಮೌನದಿಂದ ಒಳಗೇ ಅಡಗಿತ್ತು. ಇನ್ನೇನು ಗಾಡಿ ಹೊರಡುತ್ತೆ ಎನ್ನುವ ಹೊತ್ತಿಗೆ ಇಬ್ಬರು ಪೂರ್ವ ಸುವಾಸಿನಿಯರೂ, ಒಬ್ಬ ದಾಸಯ್ಯನೂ ಆ ಪೆಟ್ಟಿಗೆಯೊಳಕ್ಕೆ ಬಂದರು.

ಅವರ ಮುಂದೆ ಗಂಡ-ಹೆಂಡಿರು ಸರಸಸಲ್ಲಾಪಗಳನ್ನಾಡಲು ಮನಬಾರದೆ, ಒಬ್ಬರನ್ನೊಬ್ಬರು ನೋಡುತ್ತ, ಆಗಾಗ ನಗುತ್ತ ಕುಳಿತರು. ಗಾಡಿಯು ಮದ್ರಾಸಿನ ಕಡೆಗೆ ಹೊರಟಿತು.

ಲಕ್ಷ್ಮಣರಾಯನ ಒಂದು ಕಣ್ಣು ಅಲ್ಲಿ ಕುಳಿತಿದ್ದ ಪೂರ್ವ ಸುವಾಸಿನಿಯರ ಮೇಲೂ ಮತ್ತೊಂದು ಕಣ್ಣು ಜಾನಕಿಯ ಮೇಲೂ ಇತ್ತು. ಜಾನಕಿಯು ಕಣ್ಣು ಮುಚ್ಚಿಕೊಂಡಿದ್ದರೂ ಅವಳು ನಿದ್ದೆ ಮಾಡುತ್ತಿರಲಿಲ್ಲ. ಈ ವಿಚಾರವು ಲಕ್ಷ್ಮಣರಾಯನಿಗೆ ಚೆನ್ನಾಗಿ ಗೊತ್ತಿತ್ತು. ಪೂರ್ವ-ಸುವಾಸಿನಿಯಾದರೋ ಕಣ್ಣು ಬಿಟ್ಟುಕೊಂಡೇ ಇದ್ದರು. ದಾಸಯ್ಯ ಬೆಂಚಿನ ಕೆಳಗಡೆ ಮಲಗಿ ಗೊರಕೆಹೊಡೆಯುತ್ತಿದ್ದ.

ಜಾನಕಿಯು ಕಣ್ಣುಮುಚ್ಚಿಕೊಂಡೇ ಲಕ್ಷ್ಮಣರಾಯನ 'ಸಂಚಾರೀ ಭಾವಾದಿಗಳನ್ನು' ನೋಡುತ್ತಿದ್ದಳು. ತನ್ನ ಗಂಡ ತನ್ನನ್ನು ಎಷ್ಟು ಪ್ರೇಮಿಸುತ್ತಿದ್ದ ಎಂಬುದು ಅವಳಿಗೆ ಗೋಚರವಾಗಿ, ಅದರಿಂದ ಅವಳ ಮನಸ್ಸಿಗೆ ಒಂದು ವಿಧವಾದ ಆನಂದವು ಉಂಟಾಗುತ್ತಿತ್ತು.

ಹಾಗೂ ಹೀಗೂ ರೈಲು ಮದ್ರಾಸನ್ನು ಮುಟ್ಟಿತು. ಇನ್ನೂ ಸೂರ್ಯೋದಯವಾಗಿರಲಿಲ್ಲ. ಅವರು ರೇಲ್ವೆ ಸ್ಟೇಷನ್ನಿನಿಂದ ಈಚೆಗೆ ಬಂದ ಕೂಡಲೆ, ಯಾವನೋ ಒಬ್ಬನು ಬಂದು ಕಾರ್ಡನ್ನು ಕೊಟ್ಟ. ಅದರಲ್ಲಿ 'ಮಿಂಟ್ ಸ್ಟ್ರೀಟ್'ನಲ್ಲಿದ್ದ ಹೋಟೆಲಿನ ವಿಳಾಸವಿತ್ತು. ಅಲ್ಲಿಗೆ ಒಂದು ಜಟಕಾಗಾಡಿ ಮಾಡಿಕೊಂಡು ಗಂಡ-ಹೆಂಡಿರಿಬ್ಬರೂ ಹೊರಟರು.

ಬೆಳಗ್ಗೆಯೆಲ್ಲಾ ಅಲ್ಲಿದ್ದು, ರಾತ್ರಿ ಕಲಕತ್ತೆಗೆ ಹೋಗುವ ಗಾಡಿಯಲ್ಲಿ ಪುನಃ ಪ್ರಯಾಣ ಮಾಡಬೇಕೆಂದು ಗಂಡನು ಹೆಂಡತಿಗೆ ತಿಳಿಸಿದ್ದ.

ಗಾಡಿಯು ಹೋಟಲಿನ ಬಳಿಗೆ ಬಂದಿತು. ಹೋಟೆಲಿನ ಒಳಗಿನಿಂದ ಬಂದ ಒಬ್ಬ ಜವಾನನಿಗೆ ತನ್ನ ಹೆಂಡತಿಯನ್ನೂ ಸಾಮಾನನ್ನೂ ಮೇಲಿದ್ದ ಚಿಕ್ಕ ಮನೆಗೆ ತೆಗೆದುಕೊಂಡು ಹೋಗಬೇಕೆಂದು ಹೇಳಿ, "ಇಲ್ಲಿಯೆ, ನನ್ನ ಸ್ನೇಹಿತ ಇದ್ದಾನೆ. ಅವನಿಗೆ ಹೇಳಿದರೆ ರಾತ್ರಿ ಗಾಡಿಗೆ ಏರ್ಪಾಟು ಮಾಡುತ್ತಾನೆ. ನಾನು ಹೋಗಿ ಹದಿನೈದು ನಿಮಿಷದಲ್ಲಿ ಬಂದುಬಿಡತೇನೆ" ಎಂದು ಲಕ್ಷ್ಮಣರಾಯನು ಅಲ್ಲಿಂದ ಹೊರಟ.

ಮೇಲಕ್ಕೆ ಹೋದದ್ದಾಯಿತು. ಸ್ನಾನವೂ ಆಯಿತು. ಜವಾನ ತಂದ ಕಾಫಿ ಕುಡಿದದ್ದೂ ಆಯಿತು.

"ಊಟಕ್ಕೆ ಇಲ್ಲಿಗೇ ಕಳಿಸಿಕೊಡಲೆ ?" ಎಂದ ಜವಾನ."

"ಅವರು ಬರಲಿ. ಆಮೇಲೆ ಹೇಳಿಕಳಿಸುತ್ತೇನೆ" ಎಂದಳು ಜಾನಕಿ.

"ಹತ್ತುವರೆ ಗಂಟೆಯಾಯಿತು. ಹೋದ ಗಂಡ ಬರಲಿಲ್ಲ. ಒಬ್ಬರಿಗೂ ತನ್ನ ಒಡನೆ ಸೆಟ್ಟಿಗೆ ಅನಲು ನೋಡಿಕೊಂಡಿರಲಿಲ್ಲ. ಸಾಮಾನಿನಲ್ಲಿ ಹುಡುಕಿದಳು. ಅದು ಅಲ್ಲಿರಲಿಲ್ಲ. ಗಂಡನ ಕೈಚೀಲವನ್ನೂ ಹುಡುಕಿದಳು. ಅದೂ ಅಲ್ಲಿರಲಿಲ್ಲ. ಜವಾನನನ್ನು ಕರೆದು ಕೇಳಿದಳು.

"ಮೇಲಕ್ಕೆ ತರಲಿಲ್ಲ. ಅದು ಜವಾನರ ಕೈಲೇಯಿತ್ತು. ಅವರೇ ತೆಗೆದುಕೊಂಡು ಹೋದರು" ಎಂದ ಆ ಆಳು.

ಹಟಾತ್ತಾಗಿ ಜಾನಕಿಗೆ ಹೊಳೆಯಿತು, ಇದರಲ್ಲಿ ಏನೋ ಮೋಸವಿರಬೇಕೆಂದು.

ಅಲ್ಲಿಂದ ಕೆಳಗಿಳಿದು ಬಂದು ಟೆಲಿಗ್ರಾಫ್ ಆಫೀಸಿನ ಕಡೆಗೆ ಹೊರಟಳು ತನ್ನ ತಂದೆಗೆ ವಿಚಾರವನ್ನು ತಿಳಿಸಲು ಟೆಲಿಗ್ರಾಂ ಕೊಟ್ಟು, ಹಿಂದಕ್ಕೆ ಬಂದು ತನ್ನ ಚಿಕ್ಕಮನೆಗೆ ಹೋದಳು

ಪ್ರಯಾಣಕ್ಕೆ ಮುಂಚಿತವಾಗಿ ತಾಯಿ ಕೊಟ್ಟಿದ್ದ ಐದು ರೂಪಾಯಿ ನೋಟು ಇದಕ್ಕಾಗಿ ಉಪಯೋಗವಾಗುತ್ತದೆಂಬುದು ಅವಳ ಕನಸಿನಲ್ಲಿ ಕೂಡ ಇರಲಿಲ್ಲ.

ಮಧ್ಯಾಹ್ನ ಮೂರೂವರೆ ಗಂಟೆಯ ಸಮಯಕ್ಕೆ ರಾಮಸ್ವಾಮಿ ಅಲ್ಲಿಗೆ ಅವಳನ್ನು ಹುಡುಕಿಕೊಂಡ ಬಂದ.

"ಎಲ್ಲಿಂದ ಬಂದೆ ರಾಮೂ ?" ಎಂದಳು.

"ನಿಧಾನವಾಗಿ ವಿಚಾರ ಹೇಳ್ತೇನೆ. ಈಗ ಸಧ್ಯಕ್ಕೆ ನನ್ನ ಸಂಗಡ ಬಾ."

"ಅವರು...."

"ಪೋಲಿಸಿಗೆ ವಿಚಾರ ತಿಳಿಸಿದೆ" ಎಂದ ರಾಮಸ್ವಾಮಿ.

ರಾಮಸ್ವಾಮಿಯು ಮನೆಗೆ ಹೋದಮೇಲೆ ಅವನ ತಾಯಿ ಶ್ಯಾಮರಾಯರಿಂದ ಬಂದ ತಂತಿಯ ವಿಚಾರವನ್ನು ತಿಳಿಸಿದಳು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಲೋಕಸಂಗೀತ ಮತ್ತು ನಾಟ್ಯಸಂಗೀತ

(ಆಕಾಶವಾಣಿ ಭಾಷಣ)

ಡಾ. ಬಿಟಗೇರಿ ಕೃಷ್ಣಶರ್ಮ, ಧಾರವಾಡ

ಒಂದೆ ಸ್ವರೂಪದ ಮನುಷ್ಯರೇ 'ಹಳ್ಳಿಗರು' 'ಪಟ್ಟಣಿಗರು' ಎನಿಸಿಕೊಳ್ಳುವಂತೆ, ಇಪ್ಪತ್ತೆರಡು ಶ್ರುತಿಗಳಿಂದ ರೂಪುಗೊಂಡ ಮೂಲಸಂಗೀತವೇ 'ನಾಗರಿಕ' 'ಜಾನಪದ' ಎಂದು ಕರೆಯಿಸಿಕೊಳ್ಳುತ್ತದೆ. ಯಾವುದೇ ಕಲೆಯ ಮೂಲ, ಸುಸಂಸ್ಕೃತರ ಜೀವನದೊಂದಿಗೆ ಸೂಕ್ಷ್ಮ ವಿಶ್ಲೇಷಣೆಯನ್ನು ಪಡೆದರೆ, ಅದು ನಾಗರಿಕವೆನಿಸುವುದು. ವಿಶ್ಲೇಷಣೆಯ ಅರಿವು ಇಲ್ಲದೆ ಮೂಲಕಲೆ ಜನಸಾಮಾನ್ಯರಲ್ಲಿ ಬೆಳೆದರೆ, ಅದು 'ಜಾನಪದ' ಎನಿಸಿಕೊಳ್ಳುವುದು.

'ನಾಟ್ಯ ಸಂಗೀತ' ಎಂಬ ಮಾತಿನ ಅರ್ಥ ಎಲ್ಲರಿಗೂ ಅಗುವುದು; ಆದರೆ 'ಲೋಕಸಂಗೀತ' ಎಂಬ ಮಾತಿನ ಅರ್ಥ ಅನೇಕರಿಗೆ ಆಗಲಿಕ್ಕಿಲ್ಲ. 'ಲೋಕ' ಎಂಬ ಪದಕ್ಕೆ ಎರಡು ಅರ್ಥಗಳಿರುವುವು. ಮೊದಲನೆಯ ಅರ್ಥ 'ಜಗತ್ತು' ಎಂದು; ಇನ್ನೊಂದು ಅರ್ಥ 'ಜನಸಮೂಹ' ಎಂದು. ನಮ್ಮ ಜನಸಮೂಹದಲ್ಲಿ ಹುಟ್ಟಿಬೆಳೆದು ರೂಢವಾಗಿರುವ ಸಂಗೀತವೇ ಲೋಕಸಂಗೀತ. ನಮ್ಮ ನಾಡಿನ ಲೋಕಸಂಗೀತವನ್ನು ಕುರಿತು ಕೆಲವು ವಿಷಯಗಳನ್ನು ನೋದಲು ಹೇಳುತ್ತೇನೆ.

ಗೀತವೆಂದರೆ ಹಾಡು. ಸಾಮಾನ್ಯ ಗೀತ 'ಸಂಗೀತ'ವಾಗಿ ರೂಪುಗೊಂಡುದು ವಾದನ-ನರ್ತನಗಳ ಸಾಹಚರ್ಯದ ಮೂಲಕ, ನರ್ತನ ವಿಲ್ಲದೆ ಹೋದರೂ ಸಂಗೀತಕ್ಕೆ ನಾದ-ಲಯ ಪೋಷಾಕವಾದ ವಾದ್ಯ ವಾದನಗಳ ಅಗತ್ಯವು ಇದ್ದೇ ಇರುವುದು. ನಾಗರಿಕ ಸಂಗೀತದ ನಾದ-ಲಯ ಪೋಷಕವಾದ್ಯಗಳು, ಕಲಾವಿದರ ಸೂಕ್ಷ್ಮ ಪರಿಜ್ಞಾನವನ್ನನುಸರಿಸಿ ವಿಕಾಸಗೊಂಡಿವೆ; ಆದರೆ ಲೋಕಸಂಗೀತದ ನಾದ-ಲಯ ಪೋಷಕವಾದ್ಯಗಳೂ ಅವುಗಳ ವಾದನಕ್ರಮವೂ ಇಂದಿನವರೆಗೂ ಸ್ಥೂಲ ರೂಪದಲ್ಲಿರುವುವು.

ಲೋಕ ಸಂಗೀತದಲ್ಲಿ ನಾದಪೋಷಣೆಗಾಗಿ ತಂಬೂರಿವಾದ್ಯ ಹೊಂದಿಕೆಯಾಗದು; ಎಂತಲೇ ಹಿಂದಿನ ಕಾಲದಲ್ಲಿ ನಮ್ಮ ಲೋಕ ಸಂಗೀತಕಾರರು ಏಕಶ್ರುತಿಯನ್ನು ಹೊರಹೊಮ್ಮಿಸುವ ಶ್ರುತಿವಾದ್ಯ, ಪುಂಗಿ, ಏಕತಾರಿಗಳನ್ನು ಬಳಸುತ್ತಿದ್ದರು. ಈಗ ಹಾರ್ಮೋನಿಯಮಿನಂತಹ ಸ್ಥೂಲಸ್ವರವಾದ್ಯದ ನೆರವು ಅವರಿಗೆ ದೊರೆತಿದೆ. ಎಲ್ಲ ಬಗೆಯ ಸಂಗೀತ ಮೇಳಗಳಲ್ಲಿಯೂ ಇದೇ ನಾದವಾದ್ಯವನ್ನು ಈಗ ಉಪಯೋಗಿಸುವರು; ಆದರೆ ಇವರ ವಾದನ ವಿಧಾನ, ನಾಗರಿಕ ಸಂಗೀತದ ವಾದನ ವಿಧಾನಕ್ಕಿಂತ ಬೇರೆ ರೀತಿಯಾಗಿರುವುದು.

ನಮ್ಮ ನಾಡಿಗರ ಜೀವನವು ಗೀತಗಳಿಂದ ತುಂಬಿರುವುದಾದರೂ, ಅದು ಸಂಗೀತವಾಗಿ ಪರಿಣಮಿಸುವುದು—ಭಜನೆಯ ಮಂಡಲಿ, ಬಯಲಾಟ ಇವುಗಳಲ್ಲಿ. ಏಕೆಂದರೆ ಇವೆರಡರಲ್ಲಿಯೂ ಗೀತಗಳು ನಾದ-ಲಯ ವಾದ್ಯ ವಾದನದಿಂದ ಕೂಡಿರುವುವು. ಅನೇಕ ಸಲ ನರ್ತನವೂ ಇವುಗಳಲ್ಲಿ ಬೆರೆತುಕೊಳ್ಳುವುದು.

ನಮ್ಮ ನಾಡಿನ ಜನರೆಲ್ಲರೂ ಆಸ್ತಿಕರು; ತಂತಮ್ಮ ಉಪಾಸ್ಯ ದೇವತೆಗಳಲ್ಲಿ ತುಂಬ ಭಕ್ತಿಯುಳ್ಳವರು. ದೇವರುಗಳನ್ನು ಒಲಿಸಿಕೊಳ್ಳಲು ಸಂಗೀತವು ಒಂದು ಮಹಾಸಾಧನವೆಂದು ನಂಬಿದವರು. ಎಂತಲೇ ನಮ್ಮ ಜನಸಾಮಾನ್ಯರಲ್ಲಿ ಭಜನೆಯ ಮಂಡಲಿಗಳು ಎಲ್ಲ ಕಡೆಗೂ ಇರುವುದನ್ನು ನಾವು ನೋಡುವೆವು. ಹರಿದಾಸರ-ಶಿವಶರಣರ-ಕೀರ್ತನೆಗಳಲ್ಲದೆ, ಬೇರೆ ಜಾನಪದ ಭಕ್ತಿಗೀತ ತತ್ತ್ವಪದಗಳನ್ನೂ, ಈ ಭಜನೆಯ ಜನರು ತಮ್ಮದೇ ಆದ ಒಂದು ವಿಶಿಷ್ಟ ಧಾಟಿಗಳಲ್ಲಿ ಹಾಡುವರು. ಲಯಪೋಷಣೆಗಾಗಿ ಕಂಚಿನ ತಾಳಗಳಿರುವುವು, ದನುಡಿ ಎಂಬ ಚರ್ಮವಾದ್ಯವಿರುವುದು. ನಾದಕ್ಕಾಗಿ ಏಕತಾರಿ ಅಥವಾ ಶ್ರುತಿಪೆಟ್ಟಿಗೆಗಳಿರುವುವು. ಈ ಭಜನೆಯ ಜನರು ಮಧ್ಯಲಯದಲ್ಲಿ ಹಾಡನ್ನು ಪ್ರಾರಂಭಿಸಿ, ಮುಗಿಸುವಾಗ ದ್ರುತಲಯದಲ್ಲಿ ಮುಗಿಸುವರು. ಹೆಚ್ಚಿನ ಹಾಡುಗಳು ೮ ಮಾತ್ರೆಯ ಗತಿಯ ಹಾಡುಗಳೂ ಆಗಾಗ ಕೆಲವು ೬ ಮಾತ್ರೆಯ ಗತಿಯ ಹಾಡುಗಳೂ ಆಗಾಗ ಕೆಲವು ಬೀಳುವುವು. ಸಾಂಪ್ರದಾಯಿಕವಾಗಿ ಹಾಡುವ ಭಜನೆಯ ಪದಗಳನ್ನು ಕೇಳಿದರೆ, ಎಲ್ಲವನ್ನೂ ಒಂದೇ ರಾಗದ ಧಾಟಿಯಲ್ಲಿ ಹೇಳಿದಂತೆನಿಸುವುದು.

" ಸಾರಿ ಹೋಗುವ ಬನ್ನಿರೊ ಶಿವಶರಣರೆಲ್ಲರು ಕೂಡ್ಯಿರೊ ||
ಸಾರಸ್ಯೆರಿಯು ಮಾಡಿದ ಸೋಜನು ಪೂರ
ಕಣ್ಣಿಟ್ಟು ನೋಡಿರೊ || ಪಲ್ಲವಿ ||
ಮಾಡಾ ಗ್ವಾಡಿಯ ಹಿಡಿದಿತ್ತು-ಅಲ್ಲೆ-ಆಡಾ ಆಸಿಯ ನುಂಗಿತ್ತು|
ನೋಡ ನೋಡತಕ ಕೋಡಗ ಕೋತಿ ನಾಡನೆಲ್ಲ
ಈಡ್ಯಾಡಿಶ್ತು || ೧ || "

ಇದೊಂದು ಒಗಟಿದಂತಹ ತತ್ತ್ವದ ಪದ.

" ಗುರುವಿನ ಮರತಿಯೊ-ಮರುಳೇ-ನಿನಗಕ ಅರವು ಖೂನ ಇಲ್ಲಾ "||

ಇವೇ ಮೊದಲಾದ ಗುರುಮಹಿಮೆಯ ಹಾಡುಗಳೂ ಇರುವುವು.

" ಶರಣು ಶ್ರೀಗುರುಹರ ಮರಣರಹಿತಕರ
ಕರುಣಾಕರ ದೇವನೆ " ||

ಎಂಬಂತಹ ದೇವರ ಸ್ತೋತ್ರ ಪದ್ಯಗಳೂ ಇರುವುವು.

ಭಜನೆಯ ಮಂಡಲಿಯಲ್ಲಿ ಒಬ್ಬನೆ ಹಾಡಲಿ, ಗುಂಪುಗೂಡಿ ಹಾಡಲಿ, ಆದು ಆಧಾರಶ್ರುತಿಯೊಂದಿಗೆ ಸಮರಸವಾಗಿದ್ದು, ಬಹು ಜನರಿಗೆ ಕೇಳಲು ಇಂಪಾಗಿರುವುದು. ತಾಳ-ಲಯಗಳ ವಿಚಾರದಲ್ಲಿ ಮಂತೂ ಈ ಜನರು ತುಂಬ ಗಟ್ಟಿಗರು. ಎಲ್ಲಮ್ಮನ ಭಕ್ತರಾದ ಜೋಗಪ್ಪ-ಜೋಗತಿಯರ ಮೇಳವನ್ನೂ ಒಂದು ಲೋಕ ಸಂಗೀತದ ಮೇಳವೆಂದೇ ಹೇಳಬಹುದು. ಇವರ ತಂತುಣಿಯ ನಾದ, ಚೌಡಿಕೆಯ ಲಯಬದ್ಧ ಮಿಡಿತ, ದ್ರುತಗತಿಯ ಹಾಡುಗಳು, ಜೋಗತಿಯರ ಕುಣಿತ-ಇವು ಎಂತಹರ ಮನವನ್ನೂ ಸೆರೆಹಿಡಿಯಬಲ್ಲವು; ತಲೆದೂಗಿಸಬಲ್ಲವು. ಇವರಂತೆಯೆ ಗೊಂದಲಿಗರ ಮೇಳಸಂಗೀತ. ಇವರಿಗೆ ಲಯಸಾಧನೆಗೆ ಚೌಡಿಕೆಯಿರುವುದಿಲ್ಲ, ಸಮ್ಮೇಳ ವಾದ್ಯವಿರುವುದು. ಇವರ ಸಂಗೀತವೂ ಭಾವೋತ್ತೇಜಕವಾಗಿರುವುದು. ಕೆನ್ನರಿವಾದನ ದಮಡಿಯ ತಾಳ ಗತಿಯೊಂದಿಗೆ ಹಾಡುವ ಕೆನ್ನರಿಜೋಗಿಗಳ ಕಥಾಮಯ ಸಂಗೀತವೂ ನಮ್ಮ ನಾಡಿಗರಿಗೆ ಮೆಚ್ಚಿಗೆಯದಾಗಿದ್ದಿತು.

ಇನ್ನು ನಮ್ಮ ನಾಡಿನ ಬಯಲಾಟಗಳ ಸಂಗೀತವು ವೈವಿಧ್ಯ ಪೂರ್ಣವಾಗಿರುವುದು. ಯಕ್ಷಗಾನ, ಮೂಡಲಪಾಯದ ಆಟಗಳಲ್ಲಿಯ ಸಂಗೀತ, ರಾಗದ ದೃಷ್ಟಿಯಿಂದ ಸ್ಥೂಲವೆನಿಸಿದರೂ, ತಾಳ ಲಯಗಳ ವೈವಿಧ್ಯದಿಂದ ಕೂಡಿರುವುದು. ಈ ಆಟಗಳಲ್ಲಿಯ ಪ್ರತಿಯೊಂದು ಪಾತ್ರವೂ ಗೀತ-ವಾದನಗಳೊಂದಿಗೆ ನರ್ತಿಸುವುದರಿಂದ, ಇಲ್ಲಿಯ ಸಂಗೀತವು ಸರ್ವಾಂಗಪೂರ್ಣವಾದುದೆಂದು ಹೇಳಬಹುದು.

'ಶ್ರೀಕೃಷ್ಣ ಪಾರಿಜಾತ' ಎಂಬ ಬಯಲಾಟದಲ್ಲಿಯ ಸಂಗೀತ ಪಾಗರಿಕತೆಯ ಕಡೆಗೆ ಹೆಚ್ಚು ಒಲೆದಿರುವುದೆಂದು ಹೇಳಬಹುದು. ಈ ಆಟದ ಗೀತಗಳಲ್ಲಿ ರಾಗಶುದ್ಧಿಯನ್ನೂ ಸಾಂಪ್ರದಾಯಿಕ ಪ್ರಬಂಧ ಸಂಗೀತ ಪದ್ಧತಿಯ ಲಯಶುದ್ಧಿಯನ್ನೂ ನಾವು ಗುರುತಿಸಬಹುದು. ಪಾರಿಜಾತದಲ್ಲಿಯ ಪ್ರತಿಯೊಂದು ಗೀತವೂ ವಿಲಂಬಿತ ಗತಿಯಲ್ಲಿ ಪ್ರಾರಂಭವಾಗಿ, ಮಧ್ಯಲಯದಲ್ಲಿ ತಿರುಗಾಡಿ, ದ್ರುತಲಯದಲ್ಲಿ ಮುಕ್ತಾಯಗೊಳ್ಳುವುದು. ಪೊದಲನೆಯ ಮಂಗಲಾಚರಣ ಗೀತವಾಗಿರುವ 'ನೋಡಿರೋ ಬಲಭೀಮನ ದಯವಿದು.' ಎಂಬುದು ಎಷ್ಟೊಂದು ವಿಲಂಬಿತಲಯದಲ್ಲಿರುವುದೆಂದರೆ, ಆ ಲಯವನ್ನು ಕಾಯ್ದುಕೊಂಡು ಹೋಗುವುದಕ್ಕೆ ತಾಳಧಾರಿಗಳಿಗೆ ಸಾಕುಸಾಕಾಗಿ ಹೋಗುತ್ತದೆ. ಹಿಂದೆ ಆಗಿಹೋದ ಕೌಜುಲಗಿ ನಿಂಗಪ್ಪ ಬಡಕುಂದ್ರಿಯ ಬಸಪ್ಪ ಮೊದಲಾದ ಪಾರಿಜಾತನಟರು, ಈ ವಿಲಂಬಿತಲಯದ ತೂಕ ಕಾಯುವುದರಲ್ಲಿ ಪರಿಣತರಾದವರು ಇವರ ಸಂಗೀತ, ಪಂಡಿತ-ಪಾಮರರಿಬ್ಬರನ್ನೂ ಮೆಚ್ಚಿಸುವಂತಹದು. ಈ ಆಟದಲ್ಲಿ ಹಿತಮಿತವಾದ ನರ್ತನವೂ ಇದ್ದುದರಿಂದ, ಪಾರಿಜಾತದ ಸಂಗೀತ, ಸಂಗೀತದ ಪೂರ್ಣಸ್ವರೂಪವನ್ನು ಪಡೆದುದೆಂದು ಹೇಳಬಹುದು.

ಇವುಗಳನ್ನುಳಿದ ಬಯಲಾಟಗಳಲ್ಲಿಯ ಸಂಗೀತ, ಗಂಭೀರಸ್ವರೂಪವನ್ನು ಬಿಟ್ಟು ಲಾಲಿತ್ಯದ ಕಡೆಗೆ ತಿರುಗಿದೆ. ಎಂತಲೇ ಉತ್ತರದೇಶದ ದ್ರುತಗತಿಯ ಜಾನಪದ ಗೀತಗಳ ಧಾಟಿಗಳನ್ನು ಇದು ಹೆಚ್ಚಾಗಿ ಪುರಸ್ಕರಿಸಿದೆ. ಡಪ್ಪಿನ ಗತಿಯೊಂದಿಗೇ ಆಗಲಿ, ತಬಲಾ ಗತಿಯೊಂದಿಗೇ ಆಗಲಿ, ಈ ಧಾಟಿಗಳು ಕುಣಿಕುಣಿಯುತ್ತ ನೇಗದಿಂದ ಸಾಗುವುವು: "ಬಾ ಚದುರ ಕರಿಯತೀನ ನಾನಾ
ಮಂದಿರಕೆ ನಡಿನಿ ॥ ಪಲ್ಲವಿ ॥"
"ಜಾಣೆ ನಿನ್ನಾ ವಾಣಿ ಮನಕೆ-
ಪೂರ್ಣ ಆನಂದಾಯಿತೇನ"

ಮೊದಲಾದ ಗೀತಗಳನ್ನು ಉದಾಹರಣೆಗಾಗಿ ಹೇಳಬಹುದು.

ಇನ್ನು ನಾಟ್ಯಸಂಗೀತದ ವಿಚಾರ :— ನಾಟಕದಲ್ಲಿ ಹಾಡುವ ಹಾಡುಗಳು ನಾಟ್ಯಗೀತಗಳು. ಇವು ಹಾರ್ಮೋನಿಯಂ, ಪಿಟೀಲು ಮೊದಲಾದ ನಾದ ವಾದ್ಯ ಗಳೊಂದಿಗೂ ಮೃದಂಗ, ತಬಲಾ ಮೊದಲಾದ ಚರ್ಮವಾದ್ಯಗಳೊಂದಿಗೂ ಹಾಡಲ್ಪಡುವುದರಿಂದ, ಸಂಗೀತ ಜಾತಿಗೆ ಸೇರಿಕೊಂಡಿವೆ.

ಉತ್ತರ ಕರ್ನಾಟಕದಲ್ಲಿ ಮೊದಮೊದಲು ರಂಗಭೂಮಿಗೆ ಬಂದ ಆಧುನಿಕ ನಾಟಕಗಳಲ್ಲಿ, ಕರ್ನಾಟಕ ಸಂಗೀತ ಪದ್ಧತಿಯ ಹಾಡುಗಳನ್ನೇ ಬಳಸಲಾಗುತ್ತಿತ್ತು. ನಮ್ಮ ನಾಡಿನ ಅನೇಕ ಜನ ಹಿರಿಯರು, ತಾವು ಹಿಂದೆ ನೋಡಿದ 'ಹರಿಶ್ಚಂದ್ರ ನಾಟಕ' 'ಕೀಚಕವಧನಾಟಕ' ಮೊದಲಾದುವುಗಳಲ್ಲಿಯ ಗೀತಗಳನ್ನು ನೆನಪಿನಲ್ಲಿಟ್ಟು ಇದು ವರೆಗೂ ಗುಣುಗುಣಿಸುತ್ತಿರುವುದುಂಟು:

"ಚಾರುಗಾತ್ರಳಾ-ಧಾರುಣಿಯೊಳು.
ಮಾರಿಕೊಳ್ಳುವೆನಾ ॥ ಪ ॥
ವಾರಕಣಾಸಿಯಾ- ಧೀರರಿರೆ ನೀವು
ಕೊಂಡೂಕೊಳ್ಳುವುದೀಗ ॥ಅ ಪ॥"

ಎಂಬ ಹರಿಶ್ಚಂದ್ರನ-ಬಿಲಹರಿರಾಗದ ಗೀತವನ್ನೂ

"ಅಮರವಂದ್ಯನೇ-ವಿಮಲ ತೇಜೋಮಯ— ಯ ॥ ಪ ॥
ಸಮರಗೊಳಗತೀ-ಶ್ರಮವ ಪೊಂದಿರುವೆ ॥ ಅ ಪ ॥"

ಎಂಬ ಕೀಚಕವಧದಲ್ಲಿಯ ಬೇಗಡೆ ರಾಗದ ಗೀತವನ್ನೂ ಕೇಳಿದರೆ, ಹಿಂದಿನ ನಾಟ್ಯ ಸಂಗೀತವು ಶುದ್ಧ ಕರ್ನಾಟಕ ಪದ್ಧತಿಯದೇ ಆಗಿದ್ದಿತೆಂಬುದು ಸ್ಪಷ್ಟವಾಗಿ ತಿಳಿಯುವುದು. ತರುವಾಯದಲ್ಲಿ ಬಂದ ಸಿರಹಟ್ಟಿ ನಾಟಕ ಮಂಡಲಿ, ಕೊಣ್ಣೂರು ನಾಟಕ ಮಂಡಲಿ, ಕೊಪ್ಪಳ ಸಂಗೀತ ನಾಟಕ ಮಂಡಲಿ; ಇವು ಕೂಡ ತಮ್ಮ ನಾಟಕಗಳಲ್ಲಿ ಮೊದಮೊದಲು ಹೆಚ್ಚಾಗಿ ಕರ್ನಾಟಕ ಸಂಗೀತವನ್ನೇ ಅಳವಡಿಸಿಕೊಂಡಿದ್ದುವು. 'ಪದ್ಮಾವತಿ ಪರಿಣಯ' 'ಭೋಜಪ್ರಬಂಧ' 'ಶ್ರೀಕೃಷ್ಣಲೀಲೆ' 'ಭಕ್ತ ಪ್ರಲ್ಹಾದ' ಈ ನಾಟಕಗಳಲ್ಲಿಯ ಗೀತಗಳು ಹೆಚ್ಚಾಗಿ ಕರ್ನಾಟಕ ಸಂಗೀತ ಪದ್ಧತಿಯನ್ನೇ ಆಗಿದ್ದುವು; ಆದರೆ ಬರುಬರುತ್ತ ಮರಾಠೀ ನಾಟಕಗಳ ಪ್ರಭಾವ ನಮ್ಮ ಉತ್ತರಕರ್ನಾಟಕದಲ್ಲಿ ಹೆಚ್ಚಾಗಿ ಬಿದ್ದಿತು. ಆ ವೇಳೆಗೆ ನಮ್ಮ ನಾಟ್ಯಸಂಗೀತವು ತನ್ನ ಸ್ವತಂತ್ರ ಮಾರ್ಗವನ್ನು ಬಿಟ್ಟು, ಮಹಾರಾಷ್ಟ್ರ ನಾಟ್ಯಸಂಗೀತದ ಅನುಕರಣದ ದಾರಿಯನ್ನು ಹಿಡಿಯಿತು. ಆದುದರಿಂದ, ನಮ್ಮ ನಾಟಕಗಳಲ್ಲಿ ಹಿಂದುಸ್ತಾನೀ ರಾಗ-ಗತಿ ಪದ್ಧತಿಗಳ ಗೀತಗಳು ತುಂಬಿಹೋದುವು.

"ಇವನೇ ಗಿರಿಜಾರಮಣನೇ— ಇವನೇ ಫಾಲಾಕ್ಷ ಶಿವನೇ ॥"

ಎಂಬ ಮಹಾನಂದಾ ನಾಟಕದಲ್ಲಿಯ ಹಾಡನ್ನೂ,

"ಛೀ ಮದಾಂಧ ನಾರೀ-ರಾಮನ ಅಹಿತವ ಬಯಸುವೆಯಾ ?
ಫೂ ಮದಾಂಧನಾರಿ ।"

ಎಂಬ 'ಪಾದುಕಾ ಪಟ್ಟಾಭಿಷೇಕ' ನಾಟಕದಲ್ಲಿಯ ಹಾಡನ್ನೂ ಇಲ್ಲಿ ಉದಾಹರಿಸಬಹುದು.

ವರ್ತಮಾನ ಕಾಲದ ನಾಟ್ಯಸಂಗೀತವಂತೂ ಸಿನೇಮಾ ಸಂಗೀತದ ದಾರಿಯಲ್ಲಿ ಹೊರಟಿದೆ. ಇದೀಗ ನಮ್ಮ ನಾಡಿನ ಲೋಕಸಂಗೀತ ನಾಟ್ಯಸಂಗೀತಗಳ ಸಂಕ್ಷಿಪ್ತ ಪರಿಚಯ. ಸಾಗರದ ನೀರನ್ನು ಕೊಡದಲ್ಲಿ ಹಿಡಿಯಲು ಮಾಡಿದ ಪ್ರಯತ್ನ.

ಪಾವನ ಪರಂಪರೆ

ಶ್ರೀ. ಎಚ್. ಜಿ. ಉಪಾಧ್ಯಾಯ ಎಂ. ಎ. ಹೈದರಾಬಾದ್

*

ದಕ್ಷಿಣದ ಗಂಗೆ-ಗೋದಾವರಿಯು ತಾಯ ಸಿರಿಮುಡಿಗೆ
ಹರಸಿ ಹರಕೆಯನಿಟ್ಟು ಹೊನ್ನೀರನೆರೆದಿರಲು,
ಉತ್ತುಂಗ ವೀಚಿಗಳ ಮಿಂಚುನೆಳಗಿನ ತುಂಗೆ
ತಾಯಿ ಸುಮಂಗಲೆಯ ಸಿರಿಗೊರಳ ಹಾರವಾಗಿರಲು,
ಕಾದಿರುವ ಕಾವೇರಿ ತಾಯು ಅಡಿದಾವರೆಯ
ಶ್ರೀಗಂಧ ಪರಿಮಳದಿ ಆದರದಿ ತೊಳೆದಿರಲು
ಮೂರ್ಧಾಭಿಷಿಕ್ತೆ ಮಂಗಲಾಭರಣ ವಸ್ತ್ರಭೂಷಿತೆಯಾಗಿ
ಚೆಲುವಾಂತು ಮೂಡಿದಳು ಕನ್ನಡದ ಭುವನೇಶ್ವರಿಯು.
ವಿತ್ತರದ ಜನಪದವ ಪ್ರಖ್ಯಾತ ಕುಲಸುತರ
ತುಂಬುನಲುಮೆಯಲಿ ನೋಡಿದಳು ಕನ್ನಡದ ಮಾಹೇಶ್ವರಿಯು.
ಎಂಥ ನಲುಮೆಯ ನೋಟ ! ಏನು ಒಲುಮೆಯ ಹಾಸ !
ಹೊಳೆದಿರಲು ಜೀವನದ ಮಹೋನ್ನತಾದರ್ಶ.
ತಾಯ ಆದೇಶಕ್ಕೆ ಭಕುತಿಯಲಿ ತಲೆಬಾಗಿ
ಬೆಳ್ಗೊಡೆಯ ಭೂಪತಿಯೆ ಸಹೃದಯ ಕವಿಯಾಗಿ ಬಂದ-
ಕವಿಗಳಿಗೆ ರಾಜಮಾರ್ಗವನು ತೋರುವೆನೆಂದ.
ಕುರಿತೋದದೆಯು ಕಾವ್ಯಪರಿಣತರಾಗಿ
ಬಾಳಿದೆಂದು ಜನಸರ್ವ ಹರಸಿ ಬಂದ.
ದೊರೆಯ ಕಾಲ್ಯಕೆ ವರವಾಯ್ತು ಫಲಸಿದ್ಧಿಯಲಿ
ಮೂಡಿರಲು ಕನ್ನಡದ ಕವಿವರರ ಪಾವನಪರಂಪರೆಯ ಛಂದ
ಕಾಲ ಖುರಪುಟಘಾಳಿಘೂಸರಕು ಮಾಸದಿಹ ಅನುಪಮಬಂಧ.
ಪಾವನಪರಂಪರೆಗೆ ಪ್ರಥಮ ಸಾಕ್ಷಿಕನಾಗಿ
ಕೈದುಗಳ ಬಿಸುಟುತ್ತ ತಾಳೆಗರಿಗಳ ಕೊಂಡು
ಪಡಿವಳನೆ ಪಸರಿಪ ಕನ್ನಡಕ್ಕಾದಿ ಕವಿಯಾದ.
ಪೂರ್ವ ಸುಕೃತದ ಬಲದಿ ಮಹಾಮಾತ್ಯನು ಕೂಡ
ಲೋಕತಂತ್ರದ ಬರಡು ಮಂತಣವ ಬದಿಗಿರಿಸಿ
ಅನುಭವದ ಮಂಟಪಕೆ ಜ್ಞಾನದೀಪವ ಮುಡಿಸಿ
ಭಕ್ತಿಸಿದ್ಧಿಯನು ತೋರಿ ಲೋಕಪಾಲಕನಾದ.

ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರೆಂಬ
ಒಸಗೆ ನುಡಿಯಲಿ ಸದ್‌ಗತಿಯ ಭರವಸೆಕೊಟ್ಟು
ಇಹಪ ಬಾಳಿಗೆ ಪರದ ಮುಕುಟವನಿಟ್ಟ.
ಮನೆಮಾರುಗಳ ತೊರೆದು ಕರದಿ ಕಪ್ಪರವಿಡಿದು
ಕಾಡಾಡಿ ಸರ್ವಜ್ಞ ನಾಡಿಗರ ವಿದ್ಯೆ-ಸರ್ವತನಾದ.
ವೀರನಾರಾಯಣನ ಲಿಪಿಕಾರ ಹಲಗೆ ಬಳಪವ ಹಿಡಿಯದಲೆ
ವಿದ್ಯಾಪರಿಣತರ ಪ್ರಿಯನಾಗಿ ಕಾವ್ಯಕ್ಕೆ ಗುರುವಾದ.
ಗರಡಿಮನೆ ಶಿಕ್ಷಕನು ಕನ್ನಡದಿ ಕತ್ತುರಿಯ
ಕಂಪರಸಿ ಕಬ್ಬಿಗರ ಬಲ್ಲಹನಾದ.
ಆಂಗ್ಲಭಾಷಾಚಾರ್ಯ ಕನ್ನಡದ ಕಂಠದಲಿ
ಆಂಗ್ಲಗೀತಗಳೊರೆದು 'ಶ್ರೀ'ಕಂಠನಾದ.
ನಾಡಾಡಿಯಾದರೂ ಬಾನಾಡಿಯೊಲು ಹಾಡಿ
ನಾದಮೋದದ ಬೇಂದ್ರೆ ಸರಸಕವಿಯಾದ.
ಕನ್ನಡ ಸರಸ್ವತಿಯ ಅನನ್ಯಚಿಂತನೆಗೈದು
ರಸಯೋಗದಲಿನಿಂದು ಋಷಿಯ ದರ್ಶನಗೊಂಡು
ಉಪಕುಲಪತಿಯು ಹೊಸಯುಗದ ಮಹಾಕವಿಯಾದ.
ಬಾಳಪೇಗುಲದಲ್ಲಿ ಕನ್ನಡದ ಆದರ್ಶ
ಮೂರ್ತಿಸುತ ನವತಿಪ್ಪ ಕವಿವಿನಾಯಕನಾದ.
ಕನ್ನಡದ ಸಂಸ್ಕೃತಿಯ ಕತೆಯ ಬಿತ್ತರಿಸುತಿಹ
ಕನ್ನಡದ ದೇಗುಲದಿ ಕವಿ ಶ್ರೀನಿವಾಸ.
ಇಂತಿಹುದು ಕನ್ನಡದ ಸತ್ ಕಾವ್ಯಪರಂಪರೆಯ
ಕಮನೀಯ ಬಂಧ—
ಇಂದಿಗೂ ನೂಸದಿದೆ ಹೊಗರುಬ್ಬು ಅದರ
ಅನುಪಮ ಅಂದಚೆಂದ*

---

*ಬಿದರಿ ನಗರದಲ್ಲಿ ನಡೆದ ಸಾಲ್ಕತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಓದಿದುದು.

ಭಾರ್ಗವಿ

(ಪೌರಾಣಿಕ ಜೀವನ ರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

ದೃಶ್ಯ ನಾಲ್ಕು

[ಅರಣ್ಯದ ಒಂದು ಭಾಗ....ಹತ್ತಿರದಲ್ಲೇ ನದಿ ಹರಿಯುತ್ತಿದೆ. ನದಿಯ ಇಕ್ಕೆಲದಲ್ಲಿಯೂ ಮನೋಹರ ಪುಷ್ಪಸಮೂಹಗಳು, ಕಿವಿಗಿಂಪಾಗಿ ಹಕ್ಕಿಗಳು ಹಾಡುತ್ತಿವೆ. ಆಗ ತಾನೆ ಅರುಣೋದಯವಾಗಹತ್ತಿದೆ. ಪದ್ಮಾಸನಸ್ಥಳಾಗಿ ಭಾರ್ಗವಿ ಕುಳಿತಿದ್ದಾಳೆ. ಭಾರ್ಗವಿ ಗೃಹತ್ಯಾಗ ಮಾಡಿ ಬಂದು ಅರುವರ್ಷಗಳಾಗಿವೆ. ವಸ್ತ್ರಮಲಿನವಾಗಿ, ಕೇಶವೆಲ್ಲಾ ಕೆದರಿದೆ. ಭಾರ್ಗವಿಯ ಮುಖದ ತೇಜಸ್ಸು ಮತ್ತೂ ಅಧಿಕವಾಗಿದೆ. ನೋಡಲಿನ ದುಗುಡ, ಕಳವಳಗಳ ಛಾಯೆಯೂ ಇಲ್ಲ. ಯಾವುದೋ ದಿವ್ಯಾನಂದವನ್ನು ಸವಿಯುತ್ತಿರುವವಳಂತೆ ಪ್ರಶಾಂತ, ಸಂತೃಪ್ತಮುಖ ಮುದ್ರೆ.]

ಭಾರ್ಗವಿ:— [ಕಣ್ಮುಚ್ಚಿ, ಆನಂದದಲ್ಲಿ ಮಿಂದವಳಂತೆ ಸ್ಮಿತ ಮುಖಳಾಗಿ ಕಣ್ತೆರೆವಳು.] ಅದೊ ಅದೊ, ಪೂರ್ವದ ದಿಗಂತದಿ! ಕತ್ತಲೆಯ ತಲೆಮೆಟ್ಟಿ ಮೇಲೇರುತಿಹ ಭಾನು. ಎನ್ನ ಹೃದಯದ ಅಂಧಕಾರವೂ ಹರಿದಿಹುದು! ಎನ್ನಾತ್ಮಜ್ಯೋತಿಯ ಕಾಂತಿಹರಡಿಹುದು. (ಎದ್ದು ನಿಲ್ಲುವಳು) ಓ; ಜನನಿ. ಇಂದು ನೀ ತೋರಿದ ಆ ದಿವ್ಯ ದರ್ಶನವೇನು? ಸುಮಭರಿತ ಲತಾಮಂಟಪದ ಮಧ್ಯದಲ್ಲಿ ಜ್ಞಾನ ಭಾಸ್ಕರನಂತೆ ಹೊಳೆವ ತೇಜಸ್ವಿಯಂ ತೋರ್ದೆ. ' ನಿನ್ನ ಹೃತ್ಕಮಲ ವನು ಅರಳಿಸುವ ರವಿಯಿವನು. ಲೋಕ ಸಂಗ್ರಹಕಾಗಿ ಇವನ ವರಿಸು. ಲೋಕ ಕಲ್ಯಾಣಕ್ಕೆ ನೆರವಾಗಲಿರುವುದು. ನಿಮ್ಮ ಕಲ್ಯಾಣ.' ಎಂದು ಆಣತಿಯಿತ್ತೆ, ಓ, ಅಚ್ಯುತೆ, ಇದೆ ನಿನ್ನ ಸತ್ಯಸಂಕಲ್ಪನೆ? [ಅತ್ತಿತ್ತ ಚರಿಸುವಳು] ಜಗದೊಗಟೆ ಕಗ್ಗಂಟೆ ನಿನ್ನ ಕೃಪೆಖಡ್ಗದಿಂ ಇಂದು ಬಿಡಿಸಿಹೆನಮ್ಮ. ಮೆಟ್ಟಲೆಲ್ಲವನೇರಿ ಮಾಳಿಗೆಯ ಮೇಲೇರಿ ಎಲ್ಲ ದರು ಶನವನ್ನು ನಿನ್ನ ದಯದಿಂ ಪಡೆದೆ. ತಿಳಿವು ತಿರುಳಿನ ತೆರದಿ ಬಹುಸುಲಭ, ಬಹುಸ್ಪಷ್ಟ! ತಿಳಿವಿಗೊಯ್ಯುವ ಮಾರ್ಗ ಬಹುಕಷ್ಟ, ಬಹು ತೊಡಕು ಹಾಯ್, ಎನಿತು ವೇದನೆಯಿಂದ ಹಣ್ಣಾಯಿತೆನ್ನ ಮನ! ಸತ್ಯದ ಸ್ಪೆಷಣೆಯಲಿ ಕಳೆದ ಕಾಲದ ಪರವೆಯೂ ಮರೆತಿಹುದು. ಓ, ಅಂಬೆ! ಸಂಶಯದ ಸುಳಿಗಾಳಿ, ನಂಬಿಕೆಯ ನೌಕೆಯನ್ನು ಮುತ್ತಿ ಮುಳುಗಿಸ ಬರಲು, ದಡ ತೋರಿ ದಿಕ್ಕಾಗಿ, ನಡುನೀರಲಿ ಕೈಬಿಡದೆ, ಕಡೆಹಾಯ್ಸಿ ಕರುಣದಿಂ ಕಾಪಿಟ್ಟೆ.

ಹೃದಯ ಮಥನದಿ ಮೊದಲು ಹುಟ್ಟುವುದೆ ಸಂಶಯದ ಹಾಲಾ ಹಲವು..ನನ್ನ ಅಸ್ತಿತ್ವಕ್ಕೆ ಚ್ಯುತಿ ಬಂದಿತಾವಾಗ. ನಿನ್ನೀಶ್ವರತ್ವದಲಿಟ್ಟ ಸ್ಥಿರನಂಬಿಕೆಯ ಬಲದಿ ಗರಳದಾನೇಗವನು ಸಹಿಸಿಕೊಂಡೆನು, ಮಾತೆ. 'ನೀನುಂಟೂ ಇಲ್ಲವೋ, ಎಲ್ಲವೂ ಬರಿಭ್ರಮೆಯೊ' ಎಂಬ ಭಾವನೆ ಕವಿದು ಎನ್ನೆದೆಯನಿಬ್ಬಾಗವಾಗಿ ಸೀಳುತಲಿರಲು, ಯಾತನೆಯ ಬೇಗೆಯಲಿ ಬೆಂದಿತೆನ್ನ ಮನ. ಪಕ್ವವಾಗಿದ್ದಲ್ಲಿ ಆ ಕಠೋರ ಸತ್ತ್ವವನು ನಂಬಲಿಕು ಸಿದ್ಧವಾಗಿತ್ತೆನ್ನ ಮನ. ಸತ್ಯದಾ ಮೇಲಿದ್ದ ಎನ್ನ ಉತ್ಕಟ ಪ್ರೇಮದಿಂ ಸಂಶಯದ ಮಬ್ಬಿನಲಿ ದಾರಿಕಾಣದೆ ನಾ ತೊಳಲುತಿರೆ, ನಿನ್ನ ಕರುಣೆಯ ಕಿರಣ ಬೆಳಕಾಗಿ, ಸತ್ಯಕೊಯ್ಯುವ ಪಥವ ತೋರಿತೌ ಜನನಿ. ದೇಹಭಾನವ ಮರೆತು, ನಿನ್ನೊಳೊಂದಪ್ಪ ಹಂಬಲವೆ ನಾನಾದೆ ಜಗದಾಣ್ಮೆ! ಆ ವಿರಹವೇದನೆಯ ತೀಕ್ಷ್ಣತೆಯೋ ಬೇಗೆಯೋ ಎನ್ನೆಳಲ ತೀಕ್ಷ್ಣತೆಯಿಂ ಹಿಮಗಿರಿಯ ಹಿಮನದಿಗಳ್ ಕರಗಿ ಕುದಿದುವಲಾ ! ಎನ್ನೆದೆಯ ಬೇಗೆಯಿಂ ಹಿಮಕರನು ನಡುಹಗಲ ಜೈತ್ರ ರವಿಯಂದದಲಿ ಜಗವ ದಹಿಸಿದನು. ನಿನ್ನ ಕೃಪೆಯಿಂದೆನ್ನ ಅಜ್ಞಾನ ತಿಮಿರವು ಸರಿದು ಜ್ಞಾನಜ್ಯೋತಿ ಬೆಳಗಿಹುದೀಗ. ರವಿಯು ಮೇಲೇರಿ ನಡುನೆತ್ತಿಯಲಿ ಬಂದಾಗ, ಛಾಯೆ ವ್ಯಕ್ತಿಯ ಒಳಗೆ ಐಕ್ಯವಾಗುವ ತೆರದಿ— ಜ್ಞಾನಭಾಸ್ಕರನುದಯವಾದನಂತರದಿ, ಎಲ್ಲವೂ ಸುಸ್ಪಷ್ಟ, ಸರಳ ನಿಶ್ಚಳವಾಗಿ, ಸಂಶಯದ ಕರಿಛಾಯೆ ಸತ್ಯದೊಡಲಿನಲಿ ಐಕ್ಯವಾಗಿಹುದು. (ಸುತ್ತಲೂ ನೋಡುತ್ತ ಮುಂದೆ ಮುಂದೆ ಸಾಗುವಳು.)

ಸೃಷ್ಟಿ ಸೌಂದರ್ಯವನು ದೃಷ್ಟಿಸುವುದೇ ಜೊರತು ಸೃಷ್ಟಿಯಾ ಗಾನವನು ಕೇಳಬಲ್ಲುದೆ ಚಕ್ಷು? ಅಂತೆಯೇ ಬುದ್ಧಿಯೂ ತನ್ನ ಸರಹದ್ದಿ ನಲಿ ಸೆರೆಯಾಗಿ ನಿಲ್ಲುವುದಲ್ಲವೆ, ಅರಿಯಬಲ್ಲುದೆಪರಮಾತ್ಮನಂ? ಬುದ್ಧಿಗಡ ಮೀರಿಹ ಹೃದಯವಿಕಸನೆಯಿಂದ, ಅರಿಯಬಹುದಾತ್ಮನಂ, ಪರ ಮಾತ್ಮನಂ.

ಸಾಗರದಿಂ ಸಿಡಿದೊಂದು ಬಿಡಿಹನಿಯು ನಾನಹುದು. ಸಾಗರದ ಸಿರಿಕಾಂತಿ ಗಾಂಭೀರ್ಯವನು ನೆನೆದು ನಲಿದು ಉಲಿಯುತಲಿಹೆನು. (ಮುಂದೆ ಅಡವಿ ದಟ್ಟವಾಗಲು ಯೋಚಿಸುತ್ತ ನಿಲ್ಲುವಳು.)

ಈಗೇನು ಮಾಡಲಿ? ನಾ ಕಂಡ ಆ ತೇಜಸ್ವಿ ಎಲ್ಲಿರುವನೋ ಏನೋ! ಓ ತಾಯೆ, ಗೊತ್ತುಗುರಿಯಿಲ್ಲದಡವಿಯಲಿ ನಾನೆಲ್ಲಿ ಅರಸಲಿ? ಊರ ದಾರಿಯು ಕೂಡ ನನಗೆ ಮರೆತಿಹುದು. ಓ, ಅಲ್ಲಿ ಕಾಣುತ್ತಿರುವ ಸಣ್ಣ ಗುಡ್ಡದ ನೋಟ ಎನಿತು ರಮ್ಯ! ಮಂಡೆಯಲಿ ಮಂಜಿನ ಮುಕುಟ ಧರಿಸಿಹುದು. ಹಸಿರು ಉಡುಗೆಯನುಟ್ಟು, ಕುಸಮಧಾಭರಣ ಗಳ ಧರಿಸಿ ನಲಿಯುತಲಿಹುದು. ಅದನೇರಿ ಸುತ್ತಲಿನ ಸೊಬಗನೀಕ್ಷಿ ಸುವೆ.

[ಅರಣ್ಯದ ಇನ್ನೊಂದು ಭಾಗ. ಮರಗಳಿಗೆ ಸುತ್ತುಕೊಂಡಿರುವ ಸುಮಭರಿತ ಲತೆಗಳು. ಒಂದು ಮರದಡಿ ಲತಾಮಂಟಪವಿದೆ. ಅದರಡಿಯಲ್ಲಿ ಮಹಾತೇಜಸ್ವಿಯೊಬ್ಬನು ಧ್ಯಾನಸ್ಥನಾಗಿದ್ದಾನೆ. ಪ್ರಶಾಂತ ಮುಖಮುದ್ರೆ. ಭಾರ್ಗವಿ ಅತ್ತಣಿಂದ ಪ್ರವೇಶಿಸುವಳು.]

ರವಿಯ ಕಾಣುವ ಮೊದಲೆ ಅವನ ಬರುವಿಕೆಯನರಿತಂತೆ ವಿಹಗಗಳು ಸ್ವಾಗತವನುಲಿವ ತೆರದಲಿ, ನನ್ನೆದೆಯಿಂ ಚಿಮ್ಮುತಿವೆ ಆನಂದನಿರ್ಝರಿ! ಅಹಾ, ಎನಿತು ಮನೋಹರ ಈ ತಾಣ! ಖಗವೃಗಗಳೂ ಕೂಡ ತನ್ನ ವೈರವನುರೆತು ಅನುಜರಂತಾಡುತಿವೆ. ತನ್ನೆದೆಯ ಗೂಡಿನಿಂ ಸ್ವಾರ್ಥ ದ್ವೇಷವನಟ್ಟಿ ಶಾಂತಿ ಪ್ರೇಮದ ಜ್ಯೋತಿ ಬೀರುತಿಹ ದಿವ್ಯಾತ್ಮ ಸನಿಹದಲೆ ಉಂಟೆಂದು ಸಾರುತಿವೆ ಈ ಕುರುಹು.

[ಮುಂದೆ ಮುಂದೆ ಬಂದು ಆ ತಪಸ್ವಿಯಂ ಕಂಡು ಬೆಚ್ಚುವಳು. ಅವನು ಅಚಲನಾಗಿ ಕುಳಿತಿರುವ. ಭಾರ್ಗವಿ ಪ್ರದಕ್ಷಿಣೆಮಾಡಿ ಕೈಮುಗಿವಳು. ಅವನೆಚ್ಚರಗೊಳ್ಳುವುದಿಲ್ಲ.]

ಭಾ:— (ವ್ಯಾಕುಲದಿಂದ) ಶಿವನ ತಪಸ್ಸನ್ನು ಕೆಡಿಸಲು ಬಂದ ಉಮೆಯ ತೆರದಲಿ ನಾನಿಲ್ಲಿ ನಿಲ್ಲಬೇಕೇ? ನಾಧ್ಯವಿಲ್ಲ. ನಿನ್ನ ಅಣತಿಯಂತೆ ಇಲ್ಲಿಯವರೆಗೈತಂದೆ. ಇನ್ನು ಮುಂದಿನದೆಲ್ಲ ನಿನಗೆ ಸೇರಿದುದು. ನಾನಿಲ್ಲಿಯೇ ಕುಳಿತು ನಿನ್ನ ಧ್ಯಾನಿಸುವೆ.

(ಇನ್ನೊಂದು ಮರದಡಿ ಕುಳಿತು, ತಾನೂ ಧ್ಯಾನಸ್ಥಳಾಗುವಳು.)

(ದೀರ್ಘಶ್ವಾಸವೆಳೆದು ಶಾಂತನಾಗಿ ಕಣ್ಬಿಡುವನವ.)

ಜ್ಞಾನೇಶ:—(ಗಂಭೀರವಾಗಿ) ಹೇ ಈಶ, ಪರಮೇಶ, ಸರ್ವೇಶ—ನಿನ್ನಲೀಲೆಯಿದೇನಿದೇನು! ಇಂದೆನ್ನ ಬಾಳಬಾನಿನಲಿ ಬಾಲೇಂದು ಮೂಡುವುದೆಂದು ನೀಂ ತೋರ್ದೆಯೈ, ದೇವಾ. ಉನ್ನತಾದರ್ಶದಿಂದ ಉಜ್ವಲ ತಪಸ್ಸನು ಗೈದ ಕನ್ಯೆಯೊರ್ವಳ ದರ್ಶನವು ಇಂದು ಲಭ್ಯವೆಂದು ತಿಳುಹಿರುವೆ. ಸಂಸಾರಕೋಟಲೆಯ ಕಾಲ್ತೊಡಕು ಬೇಡವೆಂದು ಕಾನನಕೆ ಬಂದರೂ, ಬೆಂಬಿಡದಲಾ ವಿಧಿಯು! (ನಿಂತು ಸುತ್ತಲೂ ನೋಡುವನು.)

ನಿನ್ನ ಸಂಕಲ್ಪಕ್ಕೆ ತಡೆಯುಂಟೆ, ಚ್ಯುತಿಯುಂಟೆ?

ನಮ್ಮಲ್ಪ ಬುದ್ಧಿಯಿಂ ತಿಳಿಯಬಲ್ಲೆನೆ ನಿನ್ನ ಲೀಲೆಯ ಆದಿ ಅಂತ್ಯ ಫಲಗಳನು? ನಿನ್ನದೇ ಈ ಕೊಳಲು, ಬಾಳಗಾನ ನುಡಿಸಿ ಗಾಯಕನು ನೀನೇ. (ಮುಂದೆ ನಡೆದು ಭಾರ್ಗವಿಯನ್ನು ಕಂಡು ಚಕಿತನಾಗುವನು.)

ಓ, ಎಂತಹ ತೇಜಸ್ವಿನಿ! ಪ್ರತ್ಯಕ್ಷ ಪಾರ್ವತಿಯೆ ಪೆಚ್ಚೆತ್ತು ಬಂದಂತೆ ಕಾಣುತಿದೆ ಮುಖಭಾವ. (ಪುನಃ ತಾನು ಕುಳಿತೆಡೆಗೆ ಬರುವ) ಈ ಭದ್ರೆಯ ಏಕಾಗ್ರತೆಗೆ ನಾನೇಕೆ ಭಂಗತರಲಿ? ಬಹುಶಃ, ನಾನು ಧ್ಯಾನಸ್ಥನಾಗಿರುವುದನ್ನು ಕಂಡು ಭಗ್ನಪಡಿಸಲು ಮನಬಾರದೆ ತಾನೂ ಧ್ಯಾನಸ್ಥಳಾಗಿರಬೇಕು. ಹಗಲು ರಾತ್ರಿಗಳಂತೆ ಹೀಗೆಯೇ ಕಣ್ಣಾಮುಚ್ಚಾಲೆಯಾಡುತ್ತ ನಾವು ಅನಂತಕಾಲದವರೆಗೆ ಇಲ್ಲಿರುವುದೋ! (ಸ್ಮಿತಮುಖನಾಗಿ) ಕಾಣದ ಕೈ ಇಲ್ಲಿಯವರೆಗೂ ಕರೆತಂದಿರುವಾಗ ನನಗೇಕೆ ಚಿಂತೆ? (ಧ್ಯಾನಾಸಕ್ತನಾಗಿ ಕೂರುವನು.)

(ಕ್ಷಣದನಂತರ ಕೋಗಿಲೆಯ ಧ್ವನಿಕೇಳಿ ಇಬ್ಬರೂ ಒಮ್ಮಗೇ ಕಣ್ತೆರೆದು ಮೇಲೇಳುವರು; ಒಬ್ಬರ ಮುಖವನ್ನೊಬ್ಬರು ನೋಡುವರು. ಭಾರ್ಗವಿ ಮಾತನಾಡಲು ಯತ್ನಿಸಿ ವಿಫಲಳಾಗುವಳು.)

ಜ್ಞಾ:— (ಗಂಭೀರವಾಗಿ) ಭದ್ರೆ, ನೀನು ಯಾರು? ಈ ಅರಣ್ಯಕ್ಕೆ ಹೇಗೆ ಬಂದೆ?

ಭಾ:—(ಚಕಿತಳಾಗಿ) ನಾನು....ನಾನು....ಯಾರು? ನನ್ನಲ್ಲಿಯೇ ನಾನು ಲೀನವಾಗಿ ನಾನು ನಾನೇ ಅಗಿರುವೆ! ಜಗದಾಣ್ಮನನ್ನು ಅರಸುತ್ತ ಅರಣ್ಯಕ್ಕೆ ಬಂದೆ.

ಜ್ಞಾ:—ಭದ್ರೆ, ನಿನ್ನ ಪ್ರತಿಭೆಗನುಗುಣವಾಗಿದೆ ನಿನ್ನ ಉತ್ತರ. ವ್ಯವಹಾರದಂತೆ ಕೇಳುತ್ತಿರುವೆ—ನೀನು ಯಾರ ಪುತ್ರಿ? (ತಡವರಿಸುತ್ತಾ) ಯಾ....ರ....ಪ....ತ್ನಿ?

ಭಾ:— (ನಾಚಿ) ನಾನು ಅತ್ರಿ-ಅನಸೂಯೆಯರ ಪುತ್ರಿ, ಭಾರ್ಗವಿ!

ಜ್ಞಾ:— (ಸ್ಮಿತಭಾವದಿಂದ) ಈಗ ತಾನೆ ನಾನೊಂದು ದಿವ್ಯ ದರ್ಶನ ಕಂಡೆ. ದೈವಸಂಕಲ್ಪವನು ತಿಳಿದೆ. ನೀನಿನ್ನೂ ಅವಿವಾಹಿತೆಯೆಂಬುದನೂ ಅರಿತೆ. ನನ್ನ ಪ್ರಶ್ನೆಯಿಂದ ನಿನ್ನ ಮನಸಿಗೆ ನೋವಾಗಿದ್ದರೆ ಕ್ಷಮಿಸು. ಅತ್ರಿಮಹರ್ಷಿಗಳು ನನಗೆ ಅಪರಿಚಿತರೇನಲ್ಲ. ಭಾರ್ಗವಿ, ನೀ ಕಾಡಿಗೆ ಬಂದು ಎಷ್ಟು ಕಾಲವಾಯಿತು?

ಭಾ:— ನನಗೆ ತಿಳಿಯದು. ಹಗಲು-ರಾತ್ರಿಗಳತ್ತಲೂ ನನ್ನ ಗಮನವಿರಲಿಲ್ಲ.

ಜ್ಞಾ:— ನಾನು ಸೂರ್ಯಪಥನನು ಗುರುತಿಸಿ, ಅಯನಗಳ ಲೆಕ್ಕವಿಟ್ಟಿರುವೆ. ನಾ ಬಂದು ಒಂಬತ್ತು ವರ್ಷ ಸಂದುವು.

ಭಾ:— ನನಗೆ ಕಾಲದ ಲೆಕ್ಕವಿಡುವ ಅಪೇಕ್ಷೆಯೇ ಇರಲಿಲ್ಲ. ಸತ್ಯಾನ್ವೇಷಣೆಯ ಉತ್ಕಟ ಹಂಬಲಿಕೆಯಲಿ ದೇಹದಿರುವನೇ ಮರೆತಿದ್ದೆ. (ಕೋಗಿಲೆಯ ಕೂಗನ್ನು ಕೇಳಿ ತಲೆ ಎತ್ತಿ ಮರ ನೋಡುವಳು. ಅನಂತರ ಲಜ್ಜೆಯಿಂದ ಅವನಿಗೆ ನಮಸ್ಕಾರ ಮಾಡುವಳು.)

ಜ್ಞಾ:— (ಬೆಚ್ಚಿ ಹಿಂದಕ್ಕೆ ಸರಿದು) ಓ, ಭಾರ್ಗವಿ, ನನಗೇಕೆ ನಮಿಸಿದೆ? (ತಾನೂ ಅವಳಿಗೆ ನಮಸ್ಕರಿಸುವ.)

ಭಾ:— ಇದೇನು ವಿಪರೀತ? ನನಗೇಕೆ ನಮಿಸುವಿರಿ? ನಾನು ಕಿರಿಯಳು.

ಜ್ಞಾ:— ಕಿರಿಯಳಾದೊಡೆ ಏನು? ನೀ ದಿವ್ಯಜ್ಯೋತಿಯ ಅಂಶ. ನಿನ್ನಲಿಹ ಭಗವದಂಶಕೆ ನಾನು ನಮಿಸುವೆ. ಶಿವನೆಂತು ಶಿವ ಪೂಜ್ಯನೋ, ಅಂತೆಯೇ ಶಿವೆಗೆ ಶಿವೆಯೂ ಪೂಜ್ಯೆ.

ಭಾ:— (ಹರ್ಷದಿಂದ) ನಿಮ್ಮ ಸಹತ್ತಿಗೆ ತಕ್ಕಂತಿವೆ ಈ ಮಾತುಗಳು.

ಜ್ಞಾ:— ಭಾರ್ಗವಿ, ಭಗವದಾದೇಶವನು ನೀನೂ ತಿಳಿದಿರುವೆ. ಭಾರ್ಗವಿ, ಅವನ ಸಂಕಲ್ಪಕ್ಕೆ ತಲೆಬಾಗಿ ನಡೆಯುವುದೆ ನಮಗೆ ಶ್ರೇಯಸ್ಸು. ನಮ್ಮ ಬಾಳ್ಗಳು ಗಂಗೆ-ಯಮುನೆಯರಂತೆ ಸಂಗಮಿಸಿ

ಹರಿಯಲಿ, ಸಚ್ಚಿದಾನಂದದ ಕಡಲಲಿ ಒಂದಾಗಲೆಳಸಿ ಸಾಗಲಿ. ಹಂನೆಡೆ ಯೊಳೆಲ್ಲ ಒಲವಿನೆಮ್ಮಿತ ಸಿಂಪಡಿಸಿ ಹರಸಿ ಹರಿಯಲಿ. ಭಾರ್ಗವಿ, ನಿನಗೆ ಒಪ್ಪಿಗೆಯೇ?

ಭಾ:— (ತಲೆಬಾಗಿ) ನಿಮ್ಮ ತಪ್ಪಸ್ಸಿಗೆ ವಿಘ್ನವಾಗಿ ಬಂದ ಕಾಮಿನಿಯೆಂಬ ಅಪವಾದಕ್ಕೆ ನಾನು ಗುರಿಯಾಗುವುದಿಲ್ಲವೆ ?

ಜ್ಞಾ:— (ಮೆಚ್ಚಿಗೆಯಿಂದ) ಭಾರ್ಗವಿ, ಕೆಚ್ಚಿದೆಯ ಕನ್ನಡಿತಿ ಅಚ್ಚ ಅಭಿಮಾನಿನಿ ನೀಂ! ಬಾಳಗುರಿ ತಲುಪುವ ಮೊದಲೆ ಪಥಭ್ರಸ್ಟ ರಾಗುವವರಿಗೆ ಆ ಮಾತು. ಆದರೆ ನಾವೊಮ್ಮೆ ಗುರಿ ತಲುಪಿದವರಲ್ಲವೇ ? ನನ್ನ ತಪಸ್ಸಿನ ಫಲವೇ ಇಂದು ಮೈತುಂಬಿ ಆರಾಧ್ಯದೇವಿಯಾಗಿ ನನ್ನೆದುರು ಬಂದಂತಾಯ್ತು. ಸಹಧರ್ಮಚಾರಿಣಿಯಾಗಿ, ಬಾಳಪಥ ನನು ನನ್ನೊಡನೆ ಸವೆಸುವಿಯಾದರೆ ನಾನು ಧನ್ಯ.

ಭಾ:— ಭಗವದಿಚ್ಛೆಗೆ ನಾನು ಎದುರಾಡಲಾರೆ. ಆದರೆ ಏಕೋ ಒಮ್ಮೆಗೆ ಅಮ್ಮನ ನೆನಪಾಗುತಿದೆ. (ಕಣ್ಣೀರು ತುಂಬಿಕೊಂಡು) ಅಮ್ಮ ನನಗಾಗಿ ಎಷ್ಟು ಹಂಬಲಿಸುತ್ತಿರುವಳೋ. ನಾನು ಕಣ್ಮರೆಯಾದೆನೆಂದು ಎಷ್ಟು ಹಲುಬುವಳೋ. ಅವಳನ್ನು ಮೊದಲು ಹೋಗಿ ಸಂತೈಸಬೇಕು.

ಜ್ಞಾ:— (ಜ್ಞಾಪಿಸಿಕೊಂಡವನಂತೆ) ನಿಜ, ನಿಜ. ನಾನು ಸಹ ಎಲ್ಲರನ್ನೂ ತೊರೆದು ಬಂದಿದ್ದೆ. ನನ್ನ ಅಮ್ಮನು ನನಗಾಗಿಯೂ ಹಂಬಲಿಸುತಿರಬಹುದು.

ಭಾ:— ನನಗೆ ಊರ ದಾರಿಯೇ ಮರೆತಿದೆ. ಏನು ಮಾಡಲಿ ?

ಜ್ಞಾ:—ನನಗೆ ಮಾರ್ಗ ತಿಳಿದಿದೆ ಭಾರ್ಗವಿ. ನಿನ್ನನ್ನು ಆಶ್ರಮ ತಲುಪಿಸಿ, ಅನಂತರ ನಾನು ನಮ್ಮಾಶ್ರಮಕ್ಕೆ ಹೋಗುವೆ. ನಡೆ, ಹೊರಡುವ. ಇಷ್ಟು ಕಾಲವಿದ್ದ ಈ ಜಾಗಬಿಡಲು ಏಕೋ ವೇದನೆಯಾಗುವುದು.

ಭಾ:— ನಿನುಗೆ ಏಕಾಂತ ಬೇಕಾದಾಗ ಇಲ್ಲಿಗೆ ಬರಬಹುದಲ್ಲಾ? (ನುಂದೆ ಹೋಗುನಳು. ಮುಳ್ಳೊಂದು ಕಾಲಿಗೆ ನಾಟಿದಂತಾಗಿ,'ಹಾ' ಎನು ಕೂರುವಳು)

ಜ್ಞಾ:— (ಆತುರದಿಂದ ಮುಳ್ಳು ತೆಗೆದು, ಕೈಹಿಡಿದು ಮೇಲೆಬ್ಬಿಸುವ) ಮುಳ್ಳಿಗಿಷ್ಟು ಬೆದರುವಾಕೆ ಕಾಡಿನಲ್ಲಿ ಹೇಗಿದ್ದೆ ?

ಭಾ:— (ನಾಚಿ) ಆಗ ನಾನು 'ಭಾರ್ಗವಿ'ಯಾಗಿರಲಿಲ್ಲ— ಕಿನಂತನ ಅಂಶವಾಗಿದ್ದೆ. ದೇಹದ ಪರವೆಯೇ ಇಲ್ಲದಿರುವಾಗ, ಕಲ್ಲು ಮುಳ್ಳುಗಳ ನೆನಪಿರುವುದೇ ?

(ಮರದ ಮೇಲಿಂದ ಕೋಗಿಲೆ ಕೂಗುವುದು. ಗಿಳಿವಿಂಡು ದಾರುವುದು.)

ಜ್ಞಾ:— ನಡೆ ಭಾರ್ಗವಿ, ಕಲ್ಲುಮುಳ್ಳಿಲ್ಲದ ದಾರಿಯಲ್ಲಿ ನಿನ್ನ ಡೆಸುನೆ. ನನ್ನ ಧರ್ಮಮಾರ್ಗದರ್ಶಿ ನೀನಾಗಿರು. ಒಪ್ಪಿಗೆಯೇ ?

(ಇಬ್ಬರೂ ಮಂದಸ್ಮಿತರಾಗಿ ನಿಲ್ಲುವರು. ತೆರೆ ಬೀಳುವುದು.)

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ
ಮತ್ತು
ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀಸು ಬಟ್ಟೆ)

ಯುನೈಟೆಡ್ ಕಸ್ಪರ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಭಾಷೆ, ವರ್ಣಮಾಲೆ ಮತ್ತು ಲಿಪಿ

[ವಿನೋದನಾತ್ಮಕ ಪ್ರಬಂಧ]

ಡಾ. ಹುಮಾಯೂನ್ ಕಬೀರ್, ನ್ಯೂದಿಲ್ಲಿ

ಯಾವುದೇ ಭಾಷೆ ಮೊತ್ತಮೊದಲು ಹುಟ್ಟಿ ಬೆಳೆಯುತ್ತಿರುವಾಗ, ಕೇವಲ ಧ್ವನಿವಿಕಾರವಾಗಿ ಇದ್ದಿತು. ನಾಗರಿಕತೆಯು ಬೆಳೆಯುತ್ತ ಹೋದಂತೆ ವರ್ಣಮಾಲೆಯ ಕಲ್ಪನೆ ಮೂಡಿತು; ಲಿಪಿಯು ಹುಟ್ಟಿತು. ವರ್ಣಮಾಲೆ-ಲಿಪಿಗಳ ಕಲ್ಪನೆಯೇ ಇಲ್ಲದ ಅನೇಕ ಮೂಲಭಾಷೆಗಳು ಇದುವರೆಗೂ ಬಳಕೆಯಲ್ಲಿವೆ.

ಸಾರ್ವಜನಿಕ ಮನೋರಂಗವಲ್ಲಿ ಭಾಷೆ, ವರ್ಣಮಾಲೆ ಮತ್ತು ಲಿಪಿಗಳ ಪರಸ್ಪರ ಸಂಬಂಧವನ್ನು ಕುರಿತು ಸಾಕಷ್ಟು ಗೊಂದಲವಿರುವುದು ಕಂಡುಬರುತ್ತಿದೆ. ಒಂದು ವಿಶಿಷ್ಟ ಭಾಷೆಯನ್ನು ತತ್ ವಿಶಿಷ್ಟ ವರ್ಣಮಾಲೆಯಿಂದ ಮಾತ್ರ ಬರೆಯಲು ಸಾಧ್ಯ–ಎಂಬ ವಾದವನ್ನೂ ಕೆಲವೊಮ್ಮೆ ಮುಂದೂಡಲಾಗುತ್ತಿದೆ. ಇನ್ನು ಕೆಲವು ಪ್ರಸಂಗಗಳಲ್ಲಿ ಈ ವಾದವನ್ನು ಮತ್ತಷ್ಟು ಮುಂದೂಡಿ, ವರ್ಣಮಾಲೆ ಮಾತ್ರವೇ ಅಲ್ಲ, ಲಿಪಿಯೂ ಭಾಷೆಯ ಒಂದು ಸಮಗ್ರ ಭಾಗವೆಂದೂ ಹೇಳಲಾಗುತ್ತಿದೆ. ಭಾಷೆಗೆ ಸಂಬಂಧಪಟ್ಟ ವಿಷಯಗಳು ಯಾವತ್ತೂ ಭಾವಪ್ರಧಾನವಾಗಿರುವುದರಿಂದ, ವರ್ಣಮಾಲೆ ಮತ್ತು ಲಿಪಿಯ ಬಗೆಗೆ ನಡೆಯುವ ಸಮಾಲೋಚನೆಗಳಲ್ಲಿ ಸ್ವಲ್ಪಮಟ್ಟಿನ ಭಾವನಾತ್ಮಕ ಉದ್ರೇಕ ಮೂಡುವುದು ಸಹಜ.

ಈ ವಿಷಯವನ್ನು ಸಾವಕಾಶವಾಗಿ ಪರ್ಯಾಲೋಚನೆ ಮಾಡಿದಾಗ ಭಾಷೆ, ವರ್ಣಮಾಲೆ ಮತ್ತು ಲಿಪಿ ಇವು ಸಂಪೂರ್ಣವಾಗಿ ಒಂದರಿಂದೊಂದು ವಿಭಿನ್ನವಾದುವು; ಅವುಗಳ ಪರಸ್ಪರ ಸಂಬಂಧ ಸಹಜವಾದುದಲ್ಲವೆಂಬುದು ವ್ಯಕ್ತಪಡುತ್ತದೆ. ವರ್ಣಮಾಲೆಯನ್ನಾಗಲೀ, ಲಿಪಿಯನ್ನಾಗಲೀ ಪಡೆದಿರದ ಅನೇಕ ಭಾಷೆಗಳು ಇಂದು ವಿಶ್ವದಲ್ಲಿ ಪ್ರಚಲಿತವಾಗಿವೆ. ಭಾರತದಲ್ಲಿಯೇ ಅನೇಕ ಗುಡ್ಡಗಾಡಿನ ಜನರು, ತಮ್ಮದೇ ಆದ ಭಾಷೆಯನ್ನು ಬಳಸುತ್ತಿರುವರು. ಅದೂ ಅಲ್ಲದೆ, ಅವು ಬಹುತೇಕವಾಗಿ ಬೆಳೆದು ಒಂದ ಭಾಷೆಗಳಾಗಿರುವುವು. ಕಾವ್ಯಭಾವವನ್ನೂ ರಸಭಾವವನ್ನೂ ಅಭಿವ್ಯಕ್ತಗೊಳಿಸಬಲ್ಲ ಸಾಮರ್ಥ್ಯವೂ ಈ ಭಾಷೆಗಳಿಗಿದೆ. ಹೀಗಿದ್ದೂ, ಅವುಗಳಿಗೆ ವರ್ಣಮಾಲೆಯೂ ಇಲ್ಲ, ಲಿಪಿಯೂ ಇಲ್ಲ.

ಬಹುವಾಗಿ ವೃದ್ಧಿಸಿರುವ ಭಾಷೆಗೆ ಸಾಮಾನ್ಯವಾಗಿ ಒಂದು ವರ್ಣಮಾಲೆ, ಒಂದು ಲಿಪಿ ಇರುವುದು ಎಂಬ ವಿಷಯವನ್ನು ಯಾರೂ ಒಪ್ಪಿಕೊಳ್ಳಬಹುದು. ಇದಕ್ಕೆ ಕಾರಣ: ಬಹುವಾಗಿ ವೃದ್ಧಿಸಿರುವ ಭಾಷೆಗೆ ಅಷ್ಟೇ ವೃದ್ಧಿಗೊಂಡ ನಾಗರಿಕತೆಯು ಹಿನ್ನೆಲೆಯಿರುವುದು. ಇಂತಹ ಬೆಳೆವಣಿಗೆಯಲ್ಲಿ ಸಹಜವಾಗಿ ಏರ್ಪಡುವ ಜ್ಞಾನಸಂಗ್ರಹವನ್ನು ಭಾವನೆಗಳನ್ನು ಮಾನವನ ನೆನಪೊಂದೇ ನಿರ್ವಹಿಸಲು ಸಾಧ್ಯವಿಲ್ಲ ಹೀಗಿದ್ದೂ ಒಂದು ಜನಾಂಗದ ಸಾಂಸ್ಕೃತಿಕ ಪರಂಪರೆಯನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಮುಂಬರಿಸಲು, ಮಾನವನು ಲಿಖಿತ ಶಬ್ದಗಳಿಗಿಂತ ತನ್ನ ನೆನಪನ್ನೇ ಅವಲಂಬಿಸಿದ್ದಾನೆ. ವಾಸ್ತವವಾಗಿ ಮುದ್ರಣಯಂತ್ರ ಮತ್ತು ಕಾಗದದ ಅವಿಷ್ಕಾರದೊಂದಿಗೆ, ಲಿಖಿತ ಗ್ರಂಥಗಳು, ಮಾನವನ ವೈಜ್ಞಾನಿಕ ಜ್ಞಾನ ಹಾಗೂ ಭಾವನಾಪ್ರದ ಅನುಭವಗಳಿಗೆ ಪ್ರಾಮುಖ್ಯ ಪ್ರಾಶಸ್ತ್ಯವೂ ಭಂಡಾರವೂ ಆದುವು.

ಭಾಷೆಯ ಪಾತ್ರ

ಭಾಷೆಯಿಂದಲೇ ನಾವು ನಮ್ಮ ವಿಚಾರಮಥನನನ್ನು ಆರಂಭಿಸೋಣ. ಒಂದು ದೃಷ್ಟಿಯಿಂದ ಅದು ಮಾನವನ ಅತ್ಯಂತ ನಿಕಟವಾದ ಸಂಪತ್ತಾಗಿರುವುದು. ಅವನ ವ್ಯಕ್ತಿತ್ವದೊಂದಿಗೆ ಅದು ಸಂಸರ್ಗವನ್ನು ಹೊಂದಿರುವುದು. ಭಾಷೆಯ ಕ್ಷೇತ್ರದಲ್ಲಿ ಯಾವುದೇ ಅತಿಕ್ರಮಣ ನಡೆದರೂ, ವ್ಯಕ್ತಿತ್ವದ ಮೇಲೆ ಅತಿ ಕ್ರಮಣ ಸಂಭವಿಸಿದಂತೆ. ಭಾಷೆಯನ್ನು ಸಾಮಾನ್ಯಜ್ಞಾನಕ್ಕೆ ನಿಲುಕುವ ಮಾತುಗಳಲ್ಲಿ ವಿವರಿಸಲು ಪ್ರಯತ್ನಿಸಿದ ದಾರ್ಶನಿಕರೂ ಇರುವರು. ಅವರಲ್ಲಿ ಕೆಲವರು, ಭಾಷೆಯು ಒಂದು ಕೃತಕನಿರ್ಮಾಣ; ಕಲ್ಪನಾಪೂರ್ಣ ಮನೋವೃತ್ತಿಗಳಿಗನುಸಾರವಾಗಿ ಅದನ್ನು ಮಾರ್ಪಡಿಸಿಕೊಳ್ಳಬಹುದು—ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಕೃತಕ ಭಾಷೆಗಳನ್ನು ನಿರ್ಮಿಸಲು ಪ್ರಯತ್ನಗಳೂ ನಡೆದಿವೆ: ಆದರೆ ಇಂತಹ ಪ್ರಯತ್ನಗಳು ಎಂದಿಗೂ ಯಶಸ್ವಿಯಾಗವೆಂಬುವನ್ನು ಮಾನವನ ಅನುಭವವು ತೋರಿಸಿಕೊಟ್ಟಿದೆ.

ಮಾನವನ ಭಾವನೆಗಳನ್ನನುಸರಿಸಿ ಭಾಷೆಯು ಬೆಳೆವಣಿಗೆಯಾಗಿದೆ ಎನ್ನುವ ದಾರ್ಶನಿಕರ ವಿಚಾರಕ್ಕೆ ಸದೃಢವಾದ ಬುನಾದಿಯಿದೆ ಎಂದು ಪರಿಗ್ರಹಿಸಬಹುದು. ತಾಯಿ ಮತ್ತು ಮಗುವಿ

ನಡುವೆ ಆಗುವ ಭಾವನಾತ್ಮಕ ಅನುಭವಗಳ ವಿನಿಮಯದಲ್ಲಿ ಭಾಷೆಯ ಉಗಮವನ್ನು ಕಾಣಬಹುದು. ಇಂತಹ ಸಂಬಂಧ ಎಂದಿಗೂ ಕೇವಲ ಬುದ್ಧಿಗ್ರಾಹ್ಯವಾಗಿರುವುದಿಲ್ಲ. ತಾಯಿ ಮಗುವನ್ನು ಮುದ್ದಿಸುವಾಗ ಅವರಿಬ್ಬರ ನಡುವೆ ಬೌದ್ಧಿಕ ಅರಿವು ಮಾತ್ರವೇ ಇರುವುದಿಲ್ಲ; ಅಲ್ಲಿ ಭಾವನಾತ್ಮಕವಾದ ಏಕೀಭಾವವೂ ಇದ್ದು ಅವರ ಪರಸ್ಪರ ಸಂಬಂಧದಲ್ಲಿ ವಿಶಿಷ್ಟ ಪಾವಿತ್ರ್ಯತೆಯನ್ನು ತರುತ್ತದೆ ಎನ್ನುವುದು ಅಲ್ಲಿ ಮುಖ್ಯವಾದ ಅಂಶ. ತಾಯಿ ಮಗುವನ್ನು ಬೈದಾಗಲೂ ಅಥವಾ ಶಿಕ್ಷಿಸಿದಾಗಲೂ ಈ ಭಾವನಾಪ್ರಧಾನ ಅಂಶವು ಇರುವುದು. ಅದರಂತೆಯೇ, ಮಗುವು, ತನ್ನ ಹಸಿವು ಅಥವಾ ಮತ್ತಾವುದೇ ಕಿರಿ ಕಿರಿಯನ್ನು ವ್ಯಕ್ತಪಡಿಸಲೋಸುಗ ಮಾಡುವ ಧ್ವನಿಯು ಕೇವಲ ಬೌದ್ಧಿಕ ಅಭಿವ್ಯಕ್ತಿಯಾಗಿರುವುದಿಲ್ಲ; ಅದು ಭಾವನಾಮಯ ಉಚ್ಚಾರಣೆಯೂ ಆಗಿರುವುದು; ಆ ಕಿರಿ ಕಿರಿಯನ್ನು ಬಗೆಹರಿಸಬೇಕೆಂಬ ಒತ್ತಾಸೆಯೂ ಆ ಧ್ವನಿಯಲ್ಲಿರುವುದು. ಮಗು ತನ್ನ ಭಾಷೆಯನ್ನು ಪ್ರಥಮತಃ ಕಲಿಯುವುದು ಈ ರೀತಿ. ಮನುಷ್ಯನ ಅತ್ಯಂತ ನಿಕಟವಾದ ಅಭಿವ್ಯಕ್ತಿರೂಪಕ್ಕೆ ಮಾತೃಭಾಷೆಯೆಂದು ಹೆಸರಿಟ್ಟಿರುವುದು ಸಮಂಜಸವಾಗಿದೆ.

ಕಲ್ಪನೆ ಮತ್ತು ಭಾಷೆ

ಮಾನವನ ಭಾಷೆಗಳಿಗೂ ಪ್ರಾಣಿಗಳ ಧ್ವನಿಗಳಿಗೂ ಅವುಗಳ ಸಂಕೀರ್ಣತೆಯಲ್ಲಿ, ಕುಶಲತೆಯಲ್ಲಿ ಭಿನ್ನತೆಯಿರುವುದು. ಕಲ್ಪನೆಯು ಭಾಷೆಯ ಬೆಳೆವಣಿಗೆಯಲ್ಲಿ ಮಹತ್ವರವಾದ ಪಾತ್ರವನ್ನು ನಿರ್ವಹಿಸುವುದು ಇಲ್ಲಿಯೇ. ಹಲವು ವಿಶಿಷ್ಟ ಅನುಭವಗಳ ಸಾರ್ವತ್ರೀಕರಣವನ್ನು ಕಲ್ಪನೆಯು ಅಗತ್ಯವಾಗಿ ಅಧರಿಸುವುದು. ಇಂತಹ ಸಾರ್ವತ್ರೀಕರಣದಲ್ಲಿ ಸಂಶ್ಲೇಷಣೆ ಹಾಗೂ ವಿಶ್ಲೇಷಣೆಗಳೆರಡೂ ಸಂಭವ. ಪರಿಸ್ಥಿತಿಯ ಮೂಲಾಂಶಗಳನ್ನು ವಿಶ್ಲೇಷಿಸಿ, ಒಳತಿರುಳನ್ನು ತೆಗೆದುಕೊಂಡು, ಇತರಪರಿಸ್ಥಿತಿಗಳಲ್ಲಿಯ ಅಂತಹುದೇ ಮೂಲಾಂಶಗಳೊಡನೆ ಅವುಗಳ ಸಂಬಂಧ ಕಲ್ಪಿಸುವುದೇ ಮಾನವಶಕ್ತಿ. ಇದೇ ಅತನನ್ನು, ಇತರ ಜೀವರಾಶಿಗಳಿಂದ ಮೇಲಕ್ಕೆತ್ತಿರುವ ಶಕ್ತಿಯ ಅಂಶವಾಗಿರುವುದು. ಭಾಷೆಯು ಮಾನವನ ಈ ಶ್ರೇಷ್ಠತೆಯ ಸಂಕೇತ. ಭಾಷೆಯ ಬೆಳೆವಣಿಗೆಯ ಸ್ಥಿತಿಯು, ವಿಶಿಷ್ಟ ವ್ಯಕ್ತಿ, ಅಥವಾ ಸಮುದಾಯವು ಮುಟ್ಟಿರುವ ನಾಗರಿಕತೆಯ ಘಟ್ಟವನ್ನು ಗುರುತಿಸುವುದು.

ಈ ರೀತಿ, ಭಾಷೆಯು, ಮಾನವನ ನಿಕಟವಾದ ಭಾವನೆಯನ್ನು ಅರಿಸಿಸಿ; ವಿಶ್ವದ ಕಲ್ಪನಾವಿಷಯಕ ಗ್ರಹಣಶಕ್ತಿಯಿಂದ ಸಮೃದ್ಧಗೊಂಡಿದೆ. ಅಂತೆಯೇ, ಭಾಷೆಯು ಭಾವನೆ ಹಾಗೂ ಚಿಂತನೆಗಳಿಗೆ ಒಂದು ಬಗೆಯ ಬೆಸುಗೆಯನ್ನು ಕಲ್ಪಿಸಿ, ದಾಟಿ ಮುಂದೆಹೋಗಿದೆ. ಅದನ್ನು ಒಟ್ಟಿನಲ್ಲಿ ಅಲೌಕಿಕ ಪರಿಪೂರ್ಣತೆ ಎಂದು ಕರೆದರೆ ತಪ್ಪಾಗುವುದಿಲ್ಲ. ಆದ್ದರಿಂದ ಭಾಷೆಯು ಮನುಷ್ಯನ ನಿಕಟ ಅಲೌಕಿಕ ಸಂಪತ್ತು ಆಗಿದೆ; ಮಾನವನು ತನ್ನ ಅಲೌಕಿಕ ಭಾವನೆಯನ್ನು ಅಭಿವ್ಯಕ್ತಪಡಿಸುವ ಹಾಗೂ ವಿಸ್ತರಗೊಳಿಸುವ ಸಾಧನವೂ ಭಾಷೆಯೇ ಆಗಿದೆ.

ಭಾಷೆಯ ಉಗಮ ಹಾಗೂ ಲಕ್ಷಣದ ಬಗೆಗೆ ಈ ವ್ಯಾಖ್ಯೆಯನ್ನು ನಾವು ಅಂಗೀಕರಿಸಿದರೆ, ಭಾಷೆಯು ವ್ಯಕ್ತಿಯ ಮೇಲೆ, ಒಡಮೂಡಿಸಿರುವ ರೂಢಮೂಲವಾದ ಪ್ರಭಾವವನ್ನು, ಅತಿಕ್ರಮಿಸಲಾಗದಿರುವುದರಲ್ಲಿ ಆಶ್ಚರ್ಯವಿಲ್ಲ. ವಾಸ್ತವವಾಗಿ, ಮನುಷ್ಯನು ತನ್ನ ಎಲ್ಲಾ ಸಾಮಗ್ರಿಗಳನ್ನು ಮಾನಸಿಕ ಅಭಿಪ್ರಾಯಗಳನ್ನು ಪರವರ್ತಿಸಿಯೂ ಸಹ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡಿರಬಲ್ಲ. ಬಲ್ಲಿದ ಬಡವನಾದರೆ, ಆವನು ತನ್ನತನವನ್ನು ಕಳೆದುಕೊಳ್ಳುವುದಿಲ್ಲ. ಅವನು ತನ್ನ ವ್ಯಕ್ತಿತ್ವದಮೇಲೆ ಲೇಶಮಾತ್ರವೂ ಪರಿಣಾಮವಾಗದಂತೆ ತನ್ನ ಉಡುಪುಗಳನ್ನೂ ವಾಸಸ್ಥಳಗಳನ್ನೂ ಬದಲಾಯಿಸಿಕೊಳಬಲ್ಲ. ತನ್ನ ಆಚಾರ-ವಿಚಾರಗಳನ್ನು ನಂಬಿಕೆಗಳನ್ನು ಪರಿವರ್ತಿಸಿಕೊಂಡು ಮೊದಲಿನ ಮನುಷ್ಯನಾಗಿಯೇ ಉಳಿದುಕೊಳ್ಳಬಲ್ಲ; ತನ್ನ ದೇಶವನ್ನೇ ಬದಲಾಯಿಸಬಲ್ಲ—ಏಕೆಂದರೆ ಇಂದಿಗೂ ಜನರು ವಿಶ್ವದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ವಲಸೆಹೋಗಬಹುದು, ಹೋಗುತ್ತಾರೆ. ಅವನು ತನ್ನ ಮತವನ್ನು ಬದಲಾಯಿಸಬಲ್ಲ. ಏಕೆಂದರೆ, ಮತಾಂತರ ವ್ಯಕ್ತಿಶಃ ಅಥವಾ ಸಾಮೂಹಿಕವಾಗಿ ನಡೆಯುತ್ತದೆ. ಆದರೆ ಆವನು ತನ್ನ ಭಾಷೆಯನ್ನು ಬದಲಾಯಿಸಿ, ಆನಂತರವೂ ಅದೇ ವ್ಯಕ್ತಿಯಾಗಿ ಉಳಿದುಕೊಳ್ಳಲಾರ. ವಾಸ್ತವವಾಗಿ, ಅವನು ಇನ್ನೊಂದು ಭಾಷೆಯನ್ನು—ಕಲಿಯಬಹುದಾದರೂ ತನ್ನ ಭಾಷೆಯನ್ನು ಬದಲಾಯಿಸಿಕೊಳ್ಳಲೇ ಆಶ. ತನ್ನ ಮಾತೃಭಾಷೆಯಲ್ಲಿನ ಸಂಸರ್ಗ ಹಾಗೂ ಭಾವನಾತ್ಮಕ ಶಕ್ತಿಯನ್ನು ಆತ, ತಾನು ಆನಂತರ ಕಲಿತ ಭಾಷೆಯಲ್ಲಿ ತಂದುಕೊಳ್ಳಲಾರ.

ಯುರೋಪಿನ ಇತಿಹಾಸವನ್ನು ಸ್ಥೂಲವಾಗಿ ನಾವು ಸಮೀಕ್ಷಿಸಿದರೆ; ಅಲ್ಲಿನ ರಾಜ್ಯಗಳ ಗಡಿರೇಖೆಗಳು ಪದೇ ಪದೇ ಬದಲಾಯಿಸಿವೆ. ರಾಜಕೀಯ ರಾಷ್ಟ್ರೀಯತೆಯು ಬಹುನೇಳೆ ಅಸ್ತಿರ ಘಟ್ಟದಲ್ಲಿ ದ್ದುವು ಕಾಲಾನುವರ್ತಿಯಾಗಿ ಆಚಾರವಿಚಾರಗಳು, ಮತಗಳು ಬದಲಾವಣೆಯಾಗಿವೆ. ಆದರೆ ಯುರೋಪಿನ ಭಾಷಾಗಡಿ ರೇಖೆಗಳು ಯುಗಯುಗಗಳಿಂದಲ್ಲದಿದ್ದರೂ ಶತ-ಶತಮಾನಗಳಿಂದಲೂ ಬದಲಾವಣೆಗೊಂಡಿಲ್ಲವೆಂಬುದು ವ್ಯಕ್ತಪಡುತ್ತದೆ. ವಾಸ್ತವವಾಗಿ, ಭಾಷೆಯನ್ನು ದಮನಮಾಡಲು ನಡೆದ ಭೀಕರ ಪ್ರಯತ್ನಗಳು ವಿಫಲಗೊಂಡಿವೆ. ರಾಜಕೀಯ ಬಲಾತ್ಕಾರ ಅಥವಾ ಆರ್ಥಿಕ ಅಸಹಾಯತೆಯು ಭಾಷೆಯನ್ನು ದಮನಗೊಳಿಸುವಂತಿದ್ದರೆ, ಪೋಲೆಂಡಿನ ಪೋಲಿಷ್ ಭಾಷೆಯು ಈಗ್ಗೆ ಹಲವಾರು ಶತಮಾನಗಳ ಹಿಂದೆಯೇ ವಿಶ್ವದಿಂದ ಕಣ್ಮರೆಯಾಗಿ ಹೋಗುತ್ತಿತ್ತು. ಎಲ್ಲಾ ಬಗೆಯ, ಊಹಾತೀತವಾದ, ಬಲಾತ್ಕಾರವನ್ನು ತಡೆದುಕೊಂಡು, ಭಾಷೆಯು ಅಳಿಯದೆ ಉಳಿದಿರುವುದಕ್ಕೆ ಮತ್ತೊಂದು ಉದಾಹರಣೆಯೆಂದರೆ "ಹೆಬ್ರೂ."

ವರ್ಣಮಾಲೆ

ಆದ್ದರಿಂದ ಭಾಷೆಯು ವ್ಯಕ್ತಿಯ ಸ್ವಭಾವಕ್ಕೆ ಅಂಟಿಕೊಂಡ ನಿಕಟವಾದ ಅಂಶ. ಆದರೆ, ವರ್ಣಮಾಲೆ ಹಾಗಲ್ಲ. ವಾಸ್ತವವಾಗಿ,

ಪ್ರಪಂಚದಲ್ಲಿ ಲಕ್ಷಾಂತರ ಜನರು, ಭಾಷೆಗೆ ಸಂಬಂಧಿಸಿದಂತೆ ವರ್ಣಮಾಲೆಯೂ ಬಂದಿರುವುದೆಂಬ ಅಂಶವನ್ನೇ ತಿಳಿದಿರದೆ, ಭಾಷೆಯನ್ನು ಅತ್ಯಂತ ಚಾತುರ್ಯದಿಂದ ಉಪಯೋಗಿಸುತ್ತಿರುವರು. ವಿಶ್ವದ ಮಹಾನ್ ಕವಿಗಳಲ್ಲಿ ಹಲವರು ಅನಕ್ಷರಸ್ಥರಾಗಿದ್ದರು. ಅವರಿಗೆ, ವರ್ಣಮಾಲೆಯೊಂದಿದೆಯೆಂಬುದಾಗಲಿ, ತಮ್ಮ ಕವಿತ್ವವು ಅದನ್ನು ಒಳಗೊಂಡಿದೆಯೆಂಬುದಾಗಲಿ, ತಿಳಿದೇ ಇರಲಿಲ್ಲ. ವರ್ಣಮಾಲೆಯನ್ನು ನಾವು ನಿರ್ದಿಷ್ಟವಾಗಿ ನಿರೂಪಿಸಲು ಪ್ರಯತ್ನಿಸಿದರೆ, ಅದನ್ನು ಈ ರೀತಿ ಮಾಡಬಹುದು. ವರ್ಣಮಾಲೆಯು ವಿಶಿಷ್ಟ ಭಾಷೆಯಲ್ಲಿ ಬಳಸುವ ವಿವಿಧಧ್ವನಿಗಳ ವಿಶ್ಲೇಷಣೆ; ಅದನ್ನು ಕೆಲವು ತತ್ತ್ವಾನುಸಾರ ಜೋಡಿಸಲಾಗಿದೆ. ಈ ತತ್ತ್ವಗಳು, ವರ್ಣಮಾಲೆಯಿಂದ ವರ್ಣಮಾಲೆಗೆ ಬದಲಾಗುತ್ತವೆ. ವೈಜ್ಞಾನಿಕ ದೃಷ್ಟಿಯಿಂದ ಕೆಲವು, ಉಳಿದುವಕ್ಕಿಂತ ಮೇಲ್ಮಟ್ಟದವು ಎನ್ನಿಸುತ್ತವೆ. ಆದಾಗ್ಯೂ ವರ್ಣಮಾಲೆಯು ಬಹುತೇಕವಾಗಿ ಚಿನ್ಮಾತ್ರಗೋಚರ ವಸ್ತುವಾಗಿಯೇ ಉಳಿದುಕೊಳ್ಳುವುದು ಸಾಮಾನ್ಯ ಜನರಿಗೆ ಇವರಲ್ಲಿ ಆಸಕ್ತಿಯಿಲ್ಲ; ಸಾಮಾನ್ಯವಾಗಿ ಅವರಿಗೆ ವರ್ಣಮಾಲೆಯ ಇರುವಿಕೆಯ ಅರಿವೂ ಇಲ್ಲದಿರಬಹುದು.

ಭಾಷೆಯನ್ನವಲಂಬಿಸಿ ವರ್ಣಮಾಲೆಯಿದ್ದರೂ, ವರ್ಣಮಾಲೆಯು ಭಾಷೆಗೆ ಸ್ವಾಭಾವಿಕವಾಗಿ ಸೇರಿದ ಅಂಶವಾಗಿರುವುದಿಲ್ಲ. ಒಂದೇ ಭಾಷೆಯನ್ನು ಬೇರೆ ಬೇರೆ ವರ್ಣಮಾಲೆಗಳ ಸಹಾಯದಿಂದ ಬರೆಯಬಹುದು. ಗ್ರೀಕ್ ವರ್ಣಮಾಲೆಯು, ಅರಾಬಿಕ್ ಅಥವಾ ಸಂಸ್ಕೃತದ ವರ್ಣಮಾಲೆಗಳಿಗಿಂತ ವಿಭಿನ್ನವಾಗಿರುವುದು. ಆದರೆ ಒಂದೇ ವಾಕ್ಯವನ್ನು, ಈ ಮೂರು ವರ್ಣಮಾಲೆಗಳಲ್ಲಿ ಯಾವುದನ್ನಾದರೂ ಉಪಯೋಗಿಸಿ ಬರೆಯಬಹುದು. ಜರ್ಮನ್ ಭಾಷೆಯ ಗಂಧಗಾಳಿ ಇಲ್ಲದಿದ್ದ ಭಾರತದ ರಾಜಕೀಯ ಮುಖಂಡರೊಬ್ಬರು ತಾವು ಗುಜರಾತಿ ಲಿಪಿಯಲ್ಲಿ ಸಿದ್ಧಪಡಿಸಿಟ್ಟುಕೊಂಡಿದ್ದ ಭಾಷಣವನ್ನು ಆಧಾರವಾಗಿಟ್ಟುಕೊಂಡು ಜರ್ಮನ್ ಭಾಷೆಯಲ್ಲಿ ಭಾಷಣಮಾಡಿದ ಕತೆಯೊಂದಿದೆ. ಸಂಸ್ಕೃತದಲ್ಲಿ ವರ್ಣಮಾಲೆ ಭಾಷಾಧ್ವನಿ ತತ್ತ್ವಗಳಿಗನುಗುಣವಾಗಿ ಸಂಯೋಜಿಸಲಾಗಿದೆ. ತತ್ಫಲವಾಗಿ ಅದು ಮೇಲು ಮಟ್ಟದ್ದೆನಿಸಿದೆ. ಇತರ ತತ್ತ್ವಗಳಿಗನುಸಾರವಾಗಿ ಸಂಯೋಜಿಸಿದ್ದರೂ ಪರಿಣಾಮಕಾರಿಯಾದ ಬೇರೆ ವರ್ಣಮಾಲೆಗಳೂ ಇವೆ. ಸಂಸ್ಕೃತ ವರ್ಣಮಾಲೆಯು, ಮಾನವನ, ಮಾತನಾಡುವ ಅಂಗಗಳ ವಿವಿಧ ಭಾಗಗಳು ಉತ್ಪತ್ತಿಮಾಡುವ ಧ್ವನಿಗಳ ವಿವಿಧ ವರ್ಗಗಳನ್ನು ಒಂದೆಡೆ ಸಂಯೋಜಿಸುವುದು. ತತ್ಪರಿಣಾಮವಾಗಿ, ಈ ವರ್ಣಮಾಲೆಯು ಭಾಷಾಧ್ವನಿ ಶಾಸ್ತ್ರಜ್ಞರಿಗೆ ತುಂಬಾ ಹಿಡಿಸುವುದು.

ಸಂಸ್ಕೃತ ವರ್ಣಮಾಲೆಯು ಇತರ ವರ್ಣಮಾಲೆಗಳಿಗಿಂತ ಧ್ವನಿಗಳನ್ನು ಹೆಚ್ಚು ಕರಾರುವಾಕ್ಕಾಗಿ ನಿರೂಪಿಸಲು ಅನುಕೂಲವಾಗಿದೆ ಎಂಬ ವಿಶಿಷ್ಟಾಂಶ ಕೆಲಮಟ್ಟಿಗೆ ನಿಜವಾದರೂ, ಸಂಪೂರ್ಣವಾಗಿ ಅಲ್ಲ. ಮಾನವನ ಶರೀರವು ಮಾಡುವ ಅನೇಕ ಧ್ವನಿಗಳನ್ನು ಸಂಸ್ಕೃತದ ವರ್ಣಮಾಲೆಯೇಕೆ ಯಾವ ವರ್ಣಮಾಲೆಯೂ ಅಭಿವ್ಯಕ್ತಪಡಿಸಲಾರದು. 'MAN' ಎಂಬ ಪದದಲ್ಲಿ 'A' ಗೆ ಅನುಗುಣವಾದ ಶಬ್ದವು ಸಂಸ್ಕೃತ ವರ್ಣಮಾಲೆಯಲ್ಲಿಲ್ಲ. ತಮಿಳು ಶಬ್ದಗಳ ಕೊನೆಯಲ್ಲಿ ಬರುವ ಲಘು ಅ ಕ್ಕೆ ಸಮಾನವಾದ ವರ್ಣವು ಸಂಸ್ಕೃತ ವರ್ಣಮಾಲೆಯಲ್ಲಿಲ್ಲ ಎಂಬುದು ಭಾರತೀಯ ಶಬ್ದಶಾಸ್ತ್ರಜ್ಞರಿಗೆ ತಿಳಿದ ವಿಷಯ. ವಾಸ್ತವವಾಗಿ, ಒಂದೇ ಶಬ್ದವನ್ನು ವಿವಿಧ ಜನರು ಉಚ್ಚರಿಸಿದಾಗ, ಕೊಂಚ ಮಟ್ಟಿನ ವೈವಿಧ್ಯತೆ ಇರುತ್ತದೆ. ಈ ವೈವಿಧ್ಯತೆಯು ಅನಂತವಾಗಿರುವದು. ಆದ್ದರಿಂದ ಯಾವ ವರ್ಣಮಾಲೆಯೂ ಮಾನವಶರೀರವು ಹೊರಡಿಸುವಂತಹ ಅನಂತ ಬಗೆಯ ಶಬ್ದಗಳನ್ನು ಅಭಿವ್ಯಕ್ತಪಡಿಸಲಾರದು.

ವರ್ಣಮಾಲೆಯು ಭಾಷೆಯೊಂದಿಗೆ, ಮೇಲೆ, ಸೂಚಿಸಿದಂತೆ, ಒಂದು ರೀತಿಯ ಸಂಬಂಧವನ್ನು ಹೊಂದಿದೆಯಾದರೂ, ಅವುಗಳ ಪರಸ್ಪರ ಸಂಬಂಧವು ನಾವು ಹಲವು ವೇಳೆ ಆಲೋಚಿಸುವಂತೆ, ಅಷ್ಟು ನಿಕಟವಾದುದಲ್ಲ. ಲಿಪಿಯು ಸಂಪೂರ್ಣವಾಗಿ ವಿಭಿನ್ನವಾದ ವಿಷಯ. ಅದು ಯಾವುದೇ ಭಾಷೆ, ಅಥವಾ ವರ್ಣಮಾಲೆಯೊಂದಿಗೆ ಸಂಬಂಧವನ್ನು ಹೊಂದಿರುವುದಿಲ್ಲ. ವರ್ಣಮಾಲೆಯು, ವಿಶಿಷ್ಟ ಭಾಷೆಯಲ್ಲಿ ಉಪಯೋಗಿಸುವ ಧ್ವನಿಗಳ ಸಂಯೋಜನೆಯಾದರೆ, ಲಿಪಿಯು ಆವರ್ಣಮಾಲೆಯಲ್ಲಿನ ವಿಶಿಷ್ಟ ವರ್ಣಗಳಿಗೆ ಸಂಬಂಧಪಡುವ ದೃಗ್ಗೋಚರ ಸಂಕೇತ ಮಾತ್ರ. ಆನೇ ಶಬ್ದವನ್ನು, ಬೇರೆಬೇರೆಯ ದೃಗ್ಗೋಚರ ಸಂಕೇತಗಳಿಂದ ಪ್ರತಿಪಾದಿಸಬಹುದು, ಪ್ರತಿಪಾದಿಸಲಾಗುತ್ತಿದೆ. ಹಲವು ಯುರೋಪಿಯನ್ ಭಾಷೆಗಳಲ್ಲಿ ಉಪಯೋಗಿಸಲಾಗುತ್ತಿರುವ ರೋಮನ್ ಲಿಪಿಯಲ್ಲಿ, ದೊಡ್ಡಕ್ಷರ ಮತ್ತು ಸಣ್ಣಕ್ಷರಗಳನ್ನು ಪ್ರತಿನಿಧಿಸುವ ದೃಗ್ಗೋಚರ ಗುರುತುಗಳು, ಬೇರೆ ಬೇರೆ ವರ್ಣಗಳಿಗೆ ಅಥವಾ ಧ್ವನಿಗಳಿಗೆ ಸಂಬಂಧ ಪಡುತ್ತವೆ. ಎಂದು ಯಾರೂ ಯಾವಾಗಲೂ ಸೂಚಿಸುವುದಿಲ್ಲ. ದೊಡ್ಡಕ್ಷರ ಅಥವಾ ಸಣ್ಣಕ್ಷರಕ್ಕೆ ವಿಶಿಷ್ಟವಾದ ಯಾವ ಗುಣವೂ ಅಂಟಿಕೊಂಡಿರುವುದಿಲ್ಲ.

ವರ್ಣಮಾಲೆ ಮತ್ತು ಲಿಪಿ

ಭಾರತದಲ್ಲಿ ಇತರ ದೇಶಗಳಿಗಿಂತ, ವರ್ಣಮಾಲೆ ಮತ್ತು ಲಿಪಿಗಳ ಪರಸ್ಪರ ಸಂಬಂಧದ ಬಗೆಗೆ ಬಹುಗೊಂದಲವೇರ್ಪಟ್ಟಿರುವುದು ಆಶ್ಚರ್ಯಕರ ಸಂಗತಿ. ಸಂಸ್ಕೃತ ವರ್ಣಮಾಲೆಯು ನೂರಾರು ವರ್ಷಗಳಲ್ಲಿ ಅಭಿವೃದ್ಧಿಗೊಂಡಿತು. ಸುಮಾರು ೨,೦೦೦ ವರ್ಷಗಳ ಹಿಂದೆ ಅದು ಕರಾರುವಾಕ್ಕಾಯಿತು. ಆದರೆ ಲಿಪಿಯ ಬಗೆಗೆ ಈ ಮಾತು ಸಲ್ಲದು. ಒಂದು ಕಾಲವಲ್ಲಿ, ಈ ವರ್ಣಮಾಲೆಯನ್ನು ಬ್ರಾಹ್ಮಿ ಲಿಪಿಯಲ್ಲಿ ಬರೆಯಲಾಗುತ್ತಿತ್ತು. ಆನಂತರದಲ್ಲಿ, ಖರೋಷ್ಠಿ ಲಿಪಿಯು ಬಳಕೆಗೆ ಬಂದಿತು. ಸುಮಾರು ಸಾವಿರ ವರ್ಷಗಳವರೆಗೆ, ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳೆರಡೂ ಬಳಕೆಯಲ್ಲಿದ್ದುವು. ಸಂಸ್ಕೃತ ವರ್ಣಮಾಲೆಯಲ್ಲಿ ದೃಗ್ಗೋಚರ ಸಂಕೇತವನ್ನು ನೀಡುವ ಸಲುವಾಗಿ ಉಪಯೋಗಿಸಿದ ಇತರ ಲಿಪಿಗಳೂ ಇವೆ. ಅಂತೆಯೇ: ಅಶೋಕಲಿಪಿಯಿದೆ, ಗುಪ್ತಲಿಪಿಯಿದೆ ಶಾರದಾಲಿಪಿಯಿದೆ, ಸರಸ್ವತೀ ಲಿಪಿಯಿದೆ ಮತ್ತು ಪಲ್ಲವ ಲಿಪಿಯಿದೆ, ಆದೆಲ್ಲವೂ ಒಂದೇ ವರ್ಣಮಾಲೆಯನ್ನು ಅಂಗೀಕರಿಸುತ್ತವೆ. ಆದರೆ ಅವುಗಳ ದೃಗ್ಗೋಚರ ಅಳವಡನೆ ಪ್ರತಿಯೊಂದು ಪ್ರಸಂಗದಲ್ಲಿಯೂ ಬೇರೆ ಬೇರೆಯಾಗಿರುವುದು.

ಇಂದಿಗೂ ಸಹ ಉತ್ತರಭಾರತದ ಎಲ್ಲಾ ಭಾಷೆಗಳೂ ಸಂಸ್ಕೃತ ವರ್ಣಮಾಲೆಯನ್ನೇ ಬಳಸುತ್ತಿವೆ. ಆದರೆ ಅವುಗಳ ಲಿಪಿಮಾತ್ರ ಬೇರೆಬೇರೆ. ಒಂದೇ ವರ್ಣಮಾಲೆಯು ದೇವನಾಗರಿಕ ಲಿಪಿಯಲ್ಲೊಂದುತರಹ, ಮೈಥಿಲೀ ಲಿಪಿಯಲ್ಲೊಂದು ತರಹ, ಬಂಗಾಳಿ, ಅಸ್ಸಾಮಿ ಮತ್ತು ಓರಿಯಾ ಲಿಪಿಗಳಲ್ಲಿ ಒಂದೊಂದುತರಹ ಅಭಿವ್ಯಕ್ತಿಯನ್ನು ಸೂಚಿಸುತ್ತದೆ. ವರ್ಣಮಾಲೆಯ ಬಗೆಗೆ ನೋಡುವುದಾದರೆ, ಅಸ್ಸಾಮಿ, ಬಂಗಾಳಿ, ಹಿಂದಿ ಮತ್ತು ಓರಿಯಾಗಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಆದರೆ, ಈ ಭಾಷೆಗಳ ಲಿಪಿಗಳಲ್ಲಿ ಮಾತ್ರ ಗಮನಾರ್ಹವಾದ ವಿಭಿನ್ನತೆ ಕಂಡುಬರುವುದು. ಈ ಲಿಪಿಗಳಲ್ಲಿ ಯಾವುದೇ ಒಂದು ಲಿಪಿಯು ಎಲ್ಲಾ ಲಿಪಿಗಳಿಗೂ ಸಾಮಾನ್ಯವಾದ ವರ್ಣಮಾಲೆಯೊಂದಿಗೆ ವಿಶೇಷ ಬಗೆಯ ಸಂಬಂಧವನ್ನು ಪಡೆದಿದೆಯೆಂದು ಹೇಳುವುದು ಅಸಮಂಜಸವೆನಿಸುವುದು.

ಆದ್ದರಿಂದ, ಲಿಪಿ ಹಾಗೂ ವರ್ಣಮಾಲೆ ಇವು ಬೇರೆಬೇರೆಯೆನ್ನುವುದಾದರೆ, ಲಿಪಿಯ ಬಗೆಗೆ ಭಾರತದಲ್ಲಿ—ಅನೇಕ ವೇಳೆ ಹೊರದೇಶಗಳಲ್ಲಿ—ಇಷ್ಟು ಉದ್ರೇಕವೇರ್ಪಟ್ಟಿರುವುದು ಆ ಕಾರಣನಾಗಿದೆ. ಯಾವ ಪ್ರಸಂಗದಲ್ಲೇ ಆಗಲಿ, ಲಿಪಿಯು ಒಂದು ಕೃತಕ ಸಂಕೇತ. ಮಗುವು ಅದನ್ನು ಸತತ ಶ್ರಮದಿಂದ, ಶಿಕ್ಷಣದಿಂದ ಗ್ರಹಿಸುತ್ತದೆ. ಮಗುವು ತನ್ನ ಭಾಷೆಯನ್ನು ತಾಯಿಯ ಎದೆಹಾಲಿನೊಂದಿಗೆ ಕಲಿಯಬಹುದು. ಅದು ವರ್ಣಮಾಲೆಯನ್ನು ಕಲಿಯುವುದು. ಶಾಲೆಯ ಶಿಸ್ತಿನಲ್ಲಿಯೇ; ಲಿಪಿಯನ್ನು ಮಗು ಇನ್ನಷ್ಟು ಶ್ರಮದಿಂದ ಕಲಿಯುತ್ತದೆ. ಅದಕ್ಕೆ ವಾಸ್ತವವಾಗಿ ದೀರ್ಘ ಕಾಲವನ್ನು ತೆಗೆದುಕೊಳ್ಳುತ್ತದೆ. ಈ ರೀತಿ ಲಿಪಿಯನ್ನು ಅದು ಮುಂದೆ ಎಷ್ಟೇ ಫಲದಾಯಕವಾಗಿರಲಿ ಕಲಿಯುವುದು ಸುಲಭವೂ ಅಲ್ಲ, ಸಂತೋಷಕರ ವಿಷಯವೂ ಅಲ್ಲ. ಆದ್ದರಿಂದ ಭಾಷೆಯು ವ್ಯಕ್ತಿತ್ವಕ್ಕೆ ಸಹಜವಾಗಿರುವ ಅಂಶ ವಿಶೇಷವೆಂದು ನಾವು ತೀರ್ಮಾನಿಸಬಹುದು. ವರ್ಣಮಾಲೆಯು ಭಾಷೆಯೊಂದಿಗೆ ಕೊಂಚಮಟ್ಟಿನ ಸಂಬಂಧವನ್ನು ಪಡೆದಿರುವುದಾದರೂ, ಕೆಲವು ವರ್ಣಮಾಲೆಗಳು ಹೆಚ್ಚು ನಿಶ್ಚಯವಾಗಿ ವಿವಿಧ ಧ್ವನಿಗಳನ್ನು ಅಭಿವ್ಯಕ್ತಪಡಿಸುವುವು. ಅವು ಇತರ ಧ್ವನಿಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿರುವುವು. ಲಿಪಿಗಳು ಅನುಭವದಿಂದ ಆದ ಸಂಯೋಜನೆ. ಯಾವುದೇ ವರ್ಣಮಾಲೆಯನ್ನು ಯಾವುದೇ ಲಿಪಿಯಿಂದ ಬರೆಯಬಹುದು. ತತ್ಪರಿಣಾಮವಾಗಿ, ಯಾವುದೇ ಭಾಷೆಯನ್ನು ಯಾವುದೇ ಲಿಪಿಯಲ್ಲಿ ಬರೆಯಬಹುದು. ಆದರೆ, ಆ ವರ್ಣಮಾಲೆಯಲ್ಲಿ ಅಗತ್ಯವಾದ ಧ್ವನಿಗಳಿರಬೇಕು. ಆ ಧ್ವನಿಗಳಿರದಿದ್ದರೆ, ಅವುಗಳನ್ನು ಪ್ರತಿನಿಧಿಸಲು ವ್ಯಗ್ರೋಚಿತ ಸಂಕೇತಗಳನ್ನು ಆವಿಷ್ಕರಿಸಬಹುದು, ಬಳಸಬಹುದು. ಸರಳವಾದ, ಸ್ಪುಟವಾದ ಹಾಗೂ ಸುಲಭವಾದ ಮಾನವೀಯ ಮತ್ತು ಯಾಂತ್ರಿಕ ಬಳಕೆಗೆ ಅಳವಡುವ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು, ಅವುಗಳನ್ನು ಆಧಾರವಾಗಿಟ್ಟುಕೊಂಡು ಲಿಪಿಯನ್ನು ಆರಿಸಿಕೊಳ್ಳಬಹುದು.

ಕಾವ್ಯ ಕನ್ನಿಕೆಗೆ

ಶ್ರೀ. ನಗರ ಕೃಷ್ಣಾಚಾರ್ಯ ಎಂ. ಎ., ಬಿ. ಟಿ. ಗುಲಬುರ್ಗಾ

ಕಾಲೇಜಿನಲಿ ನಾನು ಕಾವ್ಯಕನ್ನಿಕೆಯೊಡನೆ
ಸಲುಗೆ ಬೆಳೆಸುವ ನೆಪದಿ ಕೆಳೆಯನಾದೆ.
ಎನಿತೊ ಕಾಲದ ನಾನು ಅವಳ ನೇಹದಲಿದ್ದು
ಕಾದುನೋಡಿದೆ ಅವಳ ಪ್ರೇಮಕಾಗಿ.

ಕಾಲೇಜು ಬಿಟ್ಟೊಡನೆ ಮನೆಯುವ್ವಕೂ ಅವಳ
ಬೆನ್ನ ಹಿಂದೆಯೆ ಬಂದ ದಿನಗಳಿಪ್ಪೊ!
ತಪ್ಪಿಯಾದರು ತಿರುಗಿ ನೋಡಿ ಒಮ್ಮೆಯು ತನ್ನ
ಪ್ರೇಮದೃಷ್ಟಿಯ ಸೂಸಿ ನಲಿಯಲಿಲ್ಲ.

'ನಾನು ನೋಡಲು ಚೆಂದ, ಪ್ರತಿಭೆಯೆನ್ನಯ ತೊತ್ತು,
ಶಿಕ್ಷಣದ ಸೆಟ್ಟಲುಗಳೇರುತಲಿ ಹೊರಟಿಹೆನು.
ಹೃಹಯದರ್ಪಣದಂತೆ, ಮನವು ಹಸುಗೂಸಿನೊಲ್
ಅರಿಗೂ ಮನವಿತ್ತು ನೋಹಿಸಿಲ್ಲ.

ವಿಧವಿಧದಲಂಕಾರವಿಟ್ಟು ನೋಡುವೆ ನಿನಗೆ,
ಚೆಂದದುಡುಗೊರೆಯಿತ್ತು ಹರುಷವಡೆವೆ!
ಒಮ್ಮೆಯಾದರು ಒಲಿದು ಬಾರೆನ್ನ ಮನೆಗೆಂದು
ಹೃದಯವನೆ ತೆರೆದಿಟ್ಟು ಬೇಡಿಕೊಂಡೆ.

ತುಂಟನಗೆ ನಗುತೊಮ್ಮೆ ಕಣ್ಣ ಸನ್ನೆಯ ಮಾಡಿ,
ಕೊರಳ ಕುಣಿಸುತ ಪ್ರೋದಳೆನ್ನ ಮುಂದೆ.
ನನಗಂದು ಸಗ್ಗ ಸುಖ ಧರೆಗಿಳಿದು ಬಂದಂತೆ
ಭಾಸವಾಯಿತು. ನಿಜವೊ, ಭ್ರಮೆಯೊ, ಏನೋ

ಅಂದಿನಾ ದಿನದಿಂದ ಇಂದಿಗೂ ಮುದದಿಂದ
ರಸಸಮಿಷಗಳಿಗಾಗಿ ಕಾದು ಕುಳಿತಿಹೆನು.
ಒಮ್ಮೆಯಾದರು ಮಿಲನ ಸೌಖ್ಯವಿತ್ತರೆ ಸಾಕು
ಒಲಿಸಿಕೊಳುವೆನು ಕೊನೆಯ ವರೆಗು ಬಿಡದೆ.

ಅದರೇಂ, ಸ್ವಚ್ಛಂದ ಛಂದದಲಿ ಕುಣಿವವರ
ಪ್ರೇಮಪಾಶಕೆ ಸಿಲುಕಿ ಜಾರಿ ಹೋಗಿಹಳು.
ಬಂಧನದೊಳಿಟ್ಟಾಳಬೇಕೆಂಬುವನ ಸ್ನೇಹ–
ಕೇಕೆ ಸುಳಿವಳು ಮುಗುದೆ ಮುತ್ತುಕೊಡಲು!

—ಇಂದಿರೇಶ

ಅರಣ್ಯ

[ಅನುವಾದಿತ ಕಥೆ*]

ಶ್ರೀ ಜಿ. ಜೆ. 'ಹರಿಜಿತ್' ಮಹಾರಾಜಾ ಕಾಲೇಜು, ಮೈಸೂರು.

ಇದೊಂದು ನವ್ಯತಂತ್ರದಲ್ಲಿ ಬರೆದ ಹೃದಯಾಕರ್ಷಕವಾದ ಸಣ್ಣಕಥೆ. ಇಂದಿನ ನಾಗರಿಕ ಜೀವನ, ವನ್ಯಪಶುಗಳ ಜೀವನಕ್ಕಿಂತ ಯಾವ ಮಟ್ಟದಲ್ಲಿಯೂ ಎತ್ತರವಾದುದಲ್ಲವೆಂಬ ದರ್ಶನದ ರೂಪಕವಿದು. ಪಾಪ, ಹೈನಿ ಅನ್ನಾನನ್ನು ಕೊಂದವರಾರು? ಮನುಷ್ಯನೋ, ಪಶುವೊ?

ಗಾಳಿಯಲ್ಲಿಯ ನರಮಾಂಸದ ವಾಸನೆಯನ್ನು ಗುರುತಿಸಿ ವ್ಯಾಘ್ರರಾಜನ ಬಾಯಲ್ಲಿ ನೀರೊರಿತು. ಎದ್ದು ನಿಂತು ಕಿವಿಗಳನ್ನು ನಿಮಿರಿಸಿದ. ಅವನು ನಿಂತುದನ್ನು ನೋಡಿ ಅಳಿಲುಗಳು ಹಾರಿ ಮರದ ಕೊಂಬೆಗಳನ್ನೇರಿದುವು. ಮೈನಾ ಮತ್ತು ಕೆಂಬೂತಗಳು ಮರದ ಟೊಂಗೆಗಳ ಮೇಲೆ ಕುಳಿತುಕೊಂಡು, ತತ್ತರಿಸುವ ದನಿಯಲ್ಲಿ ವ್ಯಾಘ್ರರಾಜನ ಜಯಘೋಷ ಮಾಡತೊಡಗಿದುವು. ವ್ಯಾಘ್ರರಾಜನು ಬಾಲವನ್ನು ಬಡಿದು 'ಮುಚ್ಚಿ ಬಾಯಿ' ಎಂದು ಸಂಜ್ಞೆ ಮಾಡಿದ.

ಎಲ್ಲರೂ ಸುಮ್ಮನಾದರು.

ಮೂಗನ್ನು ಅಗಲಿಸಿ-ಅಗಲಿಸಿ ವ್ಯಾಘ್ರರಾಜನು ಗಾಳಿಯನ್ನು ವಿಶ್ಲೇಷಿಸಿದ. ಗಾಳಿಯಲ್ಲಿ ನಿಶ್ಚಯವಾಗಿಯೂ ನರಮಾಂಸದ ಉತ್ತೇಜಕ ವಾಸನೆಯಿತ್ತು.

ವ್ಯಾಘ್ರರಾಜನು ಮೇಲೆ ನೋಡಿದ.

ಹುಣಿಸೆಮರದ ಮೇಲೆ ಇದೀಗ ತಾನೆ ಮುದಿಗೂಬೆ ಬಂದು ಕುಳಿತಿತ್ತು. "ವ್ಯಾಘ್ರರಾಜನ ನೋಟದ ಮರ್ಮವನ್ನರಿತು ಯಾರ್ಯಾ ಹೋಗುತ್ತಿದ್ದಾರೆಂಬುದು ನನಗೆ ಗೊತ್ತಿದೆ" ಎಂದಿತು.

"ಯಾರು?" ಎಂದಿತು ಮೈನಾ.

"ಮರ ಕಡಿಯುವ ಅನ್ನಾ ವಾಪಸು ಹೋಗುತ್ತಿದ್ದಾನೆ."

ವ್ಯಾಘ್ರರಾಜನು ಒಂದು ಸಾರಿ ನಾಲಗೆಯಿಂದ ಮೂಗನ್ನು ಒರೆಸಿಕೊಂಡು ಮುನ್ನಡೆದ. ಹೆಸರನ್ನು ಕೇಳಿ ಅವನಿಗೆ ಸಂತೋಷವಾಯಿತು. ಅನ್ನಾ ಯುವಕ.

ವಿಶಾಲವಾದ ಶಾಲವೃಕ್ಷದ ಮೇಲೆ ಇದುವರೆಗೂ ಸುಮ್ಮನೆ ಕುಳಿತಿದ್ದ ಕೋಗಿಲೆ "ಆ ಬಡಪಾಯಿಯನ್ನೇಕೆ ಕೊಲ್ಲಲೆಳಸುವೆ ವ್ಯಾಘ್ರರಾಜ? ಅನ್ನಾಲಚ್ಚಿ ಎಂಬ ಹುಡುಗಿಯನ್ನು ಪ್ರೀತಿಸುತ್ತಾನೆ" ಎಂದಿತು.

ಕೋಗಿಲೆಯ ಮಾತನ್ನು ಕೇಳಿ ಕೆಂಬೂತ ಮತ್ತು ಮೈನಾ ಭಯಭೀತವಾದುವು— ಈ ಕಲಾವಿದರಿಗೆ ತಲೆಯಿದೆಯೊ ಇಲ್ಲವೊ? ಇವರಿಗೆ ರಾಜಭೀತಿ ಕೂಡ ಇರುವುದಿಲ್ಲ!

ವ್ಯಾಘ್ರರಾಜನ ಹಳದಿ ಕಣ್ಣುಗಳು ಕೆಂಪಾದುವು. ಹಲ್ಲು ಕಡಿದು, ಕತ್ತು ಕೊಂಕಿಸಿ "ಏಯ್ ಕರಿಮಾರಿಯೆ! ಕಾಡಿನಲ್ಲಿ ಇರೋದು ಒಂದೇ ಕಾನೂನು— ಬೇಟೆಯಾಡುವುದು ಅಥವಾ ಬೇಟೆಯಾಗುವುದು. ಯಾರು ಯಾರನ್ನು ಪ್ರೀತಿಸುತ್ತಾರೆ – ಅಂತ ನಾನು ಯೋಚನೆಮಾಡಿದ್ದಿದ್ದರೆ, ಪಶ್ಚಿಮ ಘಟ್ಟದ ತಾಂಬಾಳದ ಈ ವನಕ್ಕೆ ರಾಜನಾಗುತ್ತಿದ್ದೆನೆ? ಅದೂ ಅಲ್ಲದೆ, ಅವನು ನನ್ನ ಕಾಡಿನ ಒಂದು ಹುಲಿ ಮತ್ತು ಎಷ್ಟೋ ಹಾವುಗಳನ್ನು ಕೊಂದಿದ್ದಾನೆ" ಎಂದನು.

ಮಿಂಚಿನಿಂದ ಸುಟ್ಟ ಅರಳಿಮರದ ಮೇಲೆ ಕುಳಿತ ಕೋತಿಯ ಮಗ ಕಪೂ, ಕೋಗಿಲೆಯ ಮುಖವನ್ನು ನೋಡಿ ಚಪ್ಪಾಳೆ ತಟ್ಟುತ್ತಾ ಕಿಲಕಿಲನೆ ನಕ್ಕಿತು. ಈ ಪೋರನು ವ್ಯಾಘ್ರರಾಜನ ಆಸ್ಥಾನದ ವಿದೂಷಕನಾಗಿದ್ದ.

ಗರ್ವಿತ ಕೋಗಿಲೆ ಕಣ್ಣನ್ನು ಬಳುಕಿಸಿ "ಏಕೆ ನಗುತ್ತೀಯೊ?" ಎಂದಿತು.

ಕಪೂ ಮೈಯನ್ನು ಕೆರೆದುಕೊಳ್ಳುತ್ತಾ ನಗುತ್ತಾ "ರಾಜನ ಕಾನೂನನ್ನು ಮರೆತು ಬಿಟ್ಟೆಯೊ? ನಗದೆ ಇನ್ನೇನು ಮಾಡಲಿ?" ಎಂದ.

ಕೋಗಿಲೆ "ನೀನೆಂದಾದರೂ ಬಾಂದೊರೆಯಲ್ಲಿ ಮುಳುಗು ಹಾಕಿರುವೆಯಾ? ಎಂದಾದರೂ ನಿನ್ನ ಈ ಉರಿಗಣ್ಣುಗಳ ಮೇಲೆ ವಸಂತ ಋತುವಿನ ಕೃಷ್ಣಚೂಡ ಪುಷ್ಪದ ವರ್ಣದ ನೆರಳು ಬಿದ್ದಿದೆಯೆ? ಹಾಗೇನಾದರೂ ಆಗಿದ್ದರೆ, ಪ್ರೀತಿ ಎಂದರೇನೆಂಬುದನ್ನು ನೀನರಿತುಕೊಳ್ಳುತಿದ್ದೆ, ನನ್ನ ಮಾತಿಗೆ ನಗುತ್ತಿರಲಿಲ್ಲ" ಎಂದಿತು.

* ಹಿಂದಿ ಚಲನಚಿತ್ರರಂಗದ ಸುಪ್ರಸಿದ್ಧ ಕಟ್ಟಕಥಾಕಾರರಾದ ಶ್ರೀ ನವೇಂದು ಘೋಷ್ ಅವರ ಬಂಗಾಳಿ ಕಥೆಯ ಕನ್ನಡ ಅನುವಾದ.

ವ್ಯಾಘ್ರರಾಜನು ಹೆಗುರಾಗಿ ಹುಂಕರಿಸಿ "ಏನೇನೋ ಜೊಗಳ ಬೇಡ. ನಾವು ಭೂಮಿಯ ಮೇಲಿನ ಪ್ರಾಣಿಗಳು. ಭೂಮಿಯನ್ನು ಬಿಟ್ಟು ಬಾನಿನೊಡನೇನಿದೆ ನನಗೆ ಕೆಲಸ ?" ಎಂದನು.

ಕೋಗಿಲೆ ಮೊಗದಿರುಹಿಕೊಂಡಿತು.

ವ್ಯಾಘ್ರರಾಜನು 'ಕಪೂ' ಎಂದು ಕೂಗಿದ.

" ಜೀಯಾ !"

" ಸ್ವಲ್ಪ ದಾರಿ ತೋರಿಸು, ನರಮಾಂಸದ ವಾಸನೆ ಬರುತ್ತಾ ಇದೆ. ಸಹಿಸಿಕೊಂಡಿರುವುದಕ್ಕಾಗುವುದಿಲ್ಲ. "

" ಅಪ್ಪಣೆ. "

ಕೊಂಬೆಯಿಂದ ಕೊಂಬೆಗೆ, ಮರದಿಂದ ಮರಕ್ಕೆ ಹಾರುತ್ತಾ ಕಪೂ ಮುಂದೆ ನಡೆದ. ಕೆಳಗೆ ವ್ಯಾಘ್ರರಾಜನು, ಸದ್ದು ಮಾಡದೆ ಮೆಲ್ಲಗೆ ಹೆಜ್ಜೆಯಿಡುತ್ತಾ ಮುನ್ನಡೆಯುತ್ತಿದ್ದ. ಅವರೂ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದ ತರಗೆಲೆಗಳು ಚರಚರ ಎನ್ನುತ್ತಿದ್ದುವು.

ಹೋಗ-ಹೋಗುತ್ತಿದ್ದಂತೆಯೇ ಕಪೂ "ಅದೊ ನೋಡಿ ಮಹಾ ಪ್ರಭು. ಅನ್ನಾ ಹೋಗುತ್ತಿದ್ದಾನೆ. ಈ ದಿಣ್ಣೆಯನ್ನು ದಾಟಿ ನೇರವಾಗಿ ಹೋಗಿಬಿಡಿ' ಎಂದನು.

ಆವರೆ ಆದೇ ಸಮಯಕ್ಕೆ ವ್ಯಾಘ್ರರಾಜನ ವಾಸನೆಯನ್ನು ಕಂಡುಕೊಂಡು ನರಿ ಕೂಗಿಕೊಂಡಿತು. ಕಾಡಿನಲ್ಲಿ ಅತ್ತಿತ್ತ ಗಾಬರಿಯಿಂದ ಓಡುವ ಪ್ರಾಣಿಗಳ ಕಾಲುಸಪ್ಪಳ ಕೇಳಿಸಿತು.

ವ್ಯಾಘ್ರರಾಜನು "ಕಳ್ಳಮುಂಡೆಯದು ನರಿ !" ಎಂದು ಆರ್ಭಟಿಸಿದ.

ಕಪೂ "ಅನ್ನಾ ಓಡಿಹೋಗುತ್ತಿದ್ದಾನೆ ಪ್ರಭು, ನಿಮ್ಮ ವಾಸನೆಯನ್ನು ಅವನು ಕಂಡುಕೊಂಡು ಬಿಟ್ಟ" ಎಂದನು.

ವ್ಯಾಘ್ರರಾಜನು ಹಾರಿ ದಿಣ್ಣೆಯನ್ನೇರಿ ಓಡತೊಡಗಿದನು.

ಕಪೂ ಮರ ನುತ್ತು ಟೊಂಗೆಗಳ ಮೇಲೆ ಹಾರುತ್ತ-ನೆಗೆಯುತ್ತಾ ಓಡ ತೊಡಗಿದ. ಆವರೆ ಆ ಯುವಕನೆಲ್ಲಿದ್ದ ? ಅವನು ಬಹಳ ದೂರ ಓಡಿಹೋಗಿದ್ದ.

" ಕಪೂ! "

" ಆ ಹುಡುಗ ಹಳ್ಳಿಯ ಎಲ್ಲೆಯನ್ನು ಮುಟ್ಟಿಬಿಟ್ಟ ಪ್ರಭು ! ಈಗ ಅವನ ಆಶೆಯನ್ನು ಬಿಟ್ಟು ಬಿಡಿ. "

ವ್ಯಾಘ್ರರಾಜನು ಕ್ರುದ್ಧನಾಗಿ ಹೂಂಕರಿಸಿದ. ಮರಗಳಮೇಲಿನ ಗೂಡಿಗೆ ಹಿಂದಿರುಗುತ್ತಿದ್ದ ಹಕ್ಕಿಗಳು ಅವನ ಹೂಂಕಾರನನ್ನು ಕೇಳಿ ಆರ್ತಸ್ವರದಲ್ಲಿ ಚೀತ್ಕರಿಸಿದವು.

ವ್ಯಾಘ್ರರಾಜನು ಕಪೂನನ್ನು ನೋಡಿ " ಕಳ್ಳ ಮಗನೇ, ನಿನ್ನ ಕೈಲಿ ಸರಿಯಾಗಿ ದಾರಿ ತೋರಿಸಲಿಕ್ಕೂ ಆಗಲಿಲ್ಲ" ಎಂದನು.

ಕಪೂ ಒಂದು ಕೊಂಬೆಯ ಮೇಲೆ ಕುಳಿತುಕೊಂಡು " ಇದರಲ್ಲಿ ನನ್ನದೇನು ತಪ್ಪಿದೆ ?" ಎಂದ.

" ಎಲ್ಲಾ ನಿನ್ನದೇ ತಪ್ಪು. ಬಾ, ಕೆಳಗೆ ಬಾ, ನಿನಗೆ ಇದರ ಫಲದ ರುಚಿ ಕಾಣಿಸುತ್ತದೆ.

ಕಪೂ ತಕ್ಷಣವೇ ಇನ್ನೂ ಎತ್ತರದ ಕೊಂಬೆಯಮೇಲೆ ಹೋಗಿ ಕುಳಿತು " ಹೋಗಲಿ ಬಿಡಿ, ಮಹಾಪ್ರಭು ! ನಿಮ್ಮ ಕೈಯಿಂದ ನನ್ನ ನ್ನೇನೂ ಮಾಡೋಕೆ ಆಗೋಲ್ಲ" ಎಂದು 'ಹ್ಹಿ....ಹ್ಹಿ....ಹ್ಹಿ'....ಎಂದು ನಗತೊಡಗಿದ.

ವ್ಯಾಘ್ರರಾಜನು ಇನ್ನಷ್ಟು ದಟ್ಟವಾದ ಕಾಡಿನ ಕಡೆಗೆ ಹೋಗುತ್ತಾ "ಹ್ಞೂ, ನಗು-ನಗು ! ಆದರೆ ಒಂದಲ್ಲ ಒಂದು ದಿನ ನಿನ್ನ ಮೂಳೆ ಮುರಿಯದಿದ್ದರೆ ಕೇಳು " ಎಂದನು.

ಕಪೂ " ನಾನು ಸತ್ತಮೇಲೆ ಹಾಗೆ ಮಾಡುವಿರಂತೆ ಪ್ರಭು ! ಆದರೆ ಈಗ ಹೋಗುತ್ತಾ ಇರುವುದೆಲ್ಲಿಗೆ ? " ಎನ್ನುತ್ತಾ ಮುಂದಿನ ಮರದ ಮೇಲೆ ಹಾರಿ ಹೋದ.

ವ್ಯಾಘ್ರರಾಜನು ಹಲ್ಲು ಕಡಿದು " ದಿನವಹಿ ಆಗುವುದು ನಿನಗೆ ಗೊತ್ತಿಲ್ಲವೆ ಮಗನೆ ? ನನ್ನ ಜೊತೆಗೆ ಸದ್ದು ಮಾಡದೆ ಬಂದುನೋಡು" ಎಂದ.

ಶಾಲವನ ನಿಬಿಡವಾಗಿದ್ದೆಡೆ ಮತ್ತು ಸಂಜೆಗತ್ತಲಿನಿಂದ ಇನ್ನೂ ದಟ್ಟಣಾಗಿದ್ದೆಡೆಯ ಒಂದು ಗುಹೆಯಲ್ಲಿ ವ್ಯಾಘ್ರರಾಜನು ನುಗ್ಗಿದ. ಅತ್ತಿತ್ತ ಕಣ್ಣೋಟ ಹರಿಸಿ " ಸುಂದರಿ, ನಾನು ಬಂದುಬಿಟ್ಟೆ " ಎಂದ.

ಗುಹೆಯ ಕತ್ತಲನ್ನು ಸೀಳುವಂತಹ ದನಿ ಕೇಳಬಂದಿತು. ಎವೆಯಿಕ್ಕುವಷ್ಟರಲ್ಲಿ ವಿದ್ಯುದ್ವೇಗದಲ್ಲಿ ವ್ಯಾಘ್ರಿಣಿಯೊಬ್ಬಳು ಹೊರಬಂದು, ವ್ಯಾಘ್ರರಾಜನಿಗೆ ಒರಗಿ ನಿಂತುಕೊಂಡು ಮೃದುಗರ್ಜನೆಯ ಸ್ವರದಲ್ಲಿ ಅಭ್ಯರ್ಥನೆ ಮಾಡಿ, ಅವನ ದೇಹವನ್ನು ನೆಕ್ಕ ತೊಡಗಿದಳು. ಪರಮಾನಂದದಿಂದ ಪುಳಕಿತಳಾಗಿ ವ್ಯಾಘ್ರರಾಜನು, ಮುಂದಿನ ಬಲಗಾಲಿನಿಂದ ಅವಳ ಮೈದಡವಿ ಪುರುಷಪ್ರೇಮವನ್ನು ಪ್ರದರ್ಶಿಸಿದನು.

' ಹುಮ್ ' ಎನ್ನುತ್ತಾ ಗುಹೆಯೊಳಗಿನಿಂದ ಒಬ್ಬ ಕುಂಟ ಮುದಿವ್ಯಾಘ್ರನೂ ಅಲ್ಲಿ ಬಂದುನಿಂತ. ಸುಂದರಿಯ ತಂದೆ ಅವನು. ಒಂದಾನೊಂದು ಕಾಲದಲ್ಲಿ ಅವನು ಇದೇ ತಾಂಪಾಳಕ್ಕೆ ರಾಜನಾಗಿದ್ದ. ಒಮ್ಮೆ ಮನುಷ್ಯರು ಅವನನ್ನು ಆಕ್ರಮಿಸಿ ಕುಂಟನನ್ನಾಗಿ ಮಾಡಿ ಬಿಟ್ಟಿದ್ದರು. ಅಂದಿನಿಂದ ಅವನು ರಾಜ್ಯಾಸನದಿಂದ ಚ್ಯುತನಾದನು. ವ್ಯಾಘ್ರರಾಜನನ್ನು ನೋಡಿ, ತನ್ನ ಮಗಳ ನಿರ್ಲಜ್ಜತೆಗಾಗಿ ಅವನ ಮನಸ್ಸಿನಲ್ಲಿ ಜುಗುಪ್ಸೆಯುಂಟಾಯಿತು. ಹೂಂಕರಿಸಿದ: 'ಹೆಮ್....!'

ಪೂರುತ್ತರದಲ್ಲಿ ಹೂಂಕರಿಸಿ ಶಾಲವನದ ಕತ್ತಲನ್ನು ನಡುಗಿಸುತ್ತಾ ವ್ಯಾಘ್ರರಾಜನು " ಹಾಗೇಕೆ ವಟಗುಟ್ಟುತ್ತೀಯೆ ಮಾವ ! ಒಳಗೆ ಕುಳಿತುಕೊ. ನಿಮ್ಮ ಕಾಲ ಆಗಿಹೋಯಿತು. ಈಗ ಅರಣ್ಯದಲ್ಲಿ 'ನಾಚಿಕೆ' ಎಂಬ ಹೆಸರೇ ಇಲ್ಲದಂತಾಗಿದೆ " ಎಂದ.

ಕುಂಟುತ್ತಾ-ಕುಂಟುತ್ತಾ ಮುದಿವ್ಯಾಘ್ರ ಒಳಗೆ ಹೋಗಿ ಅಡಗಿಕೊಂಡ.

ಮರದ ಟೊಂಗೆಯ ಮೇಲೆ ತೂಗುಯ್ಯಾಲೆಯಾಡುತ್ತಾ ಕಪೂ 'ಹ್ಹಿ....ಹ್ಹಿ....ಹ್ಹಿ' ಎಂದು ನಗತೊಡಗಿದ.

ವ್ಯಾಘ್ರರಾಜನು ಗದರಿಸಿ "ಮುಚ್ಚುಬಾಯಿ. ಸಭಾಸದರನ್ನೆಲ್ಲಾ ಕೂಡಲೇ ಬರಮಾಡು" ಎಂದನು.

ಕಪೂ ಕೊಂಬೆಯಿಂದ ಕೊಂಬೆಗೆ ಹಾರುತ್ತಾ "ಬರಬೇಕು! ಎಲ್ಲರೂ ದಯಮಾಡಿಸಬೇಕು! ಒಡ್ಡೋಲಗ ಆರಂಭವಾಗಲಿದೇ.... ....!....!...." ಎಂದು ಘೋಷಿಸಿದ.

ವ್ಯಾಘ್ರರಾಜ ಮತ್ತು ಸುಂದರಿ ವ್ಯಾಘ್ರಿಣಿ ಪರಸ್ಪರರು ಹತ್ತಿರದಲ್ಲಿ ಕುಳಿತುಕೊಂಡರು. ಕ್ಷೀರರಾಜ ನಾಗರಹಾವು, ಹೆಡೆಯನ್ನಗಲಿಸಿ ಸ್ವಲ್ಪದೂರದಲ್ಲಿ ಕುಳಿತುಕೊಂಡಿತು. ಒಂದು ಹೆಬ್ಬಾವು ಶಾಲವೃಕ್ಷದ ಸೊಟ್ಟರೆಸಿಯಿಂದ ಕೆಳಗಿಳಿದು ಬಂದಿತು. ಕೋಗಿಲೆ, ಮೈನಾ, ಬಾವಲಿಗಳೂ ಬಂದುವು. ಎಲ್ಲರೂ ಬಂದಮೇಲೆ ವ್ಯಾಘ್ರರಾಜನ ಪ್ರಿಯವಿಶ್ವಾಸಮುದಿ ಕಾಕ ಬಂದನು. ಬರುತ್ತಲೇ "ಕಾ-ಕಾ!" ಎಂದ.

"ಬಾ" ಎಂದ ವ್ಯಾಘ್ರರಾಜ.

ಓಲಗ ಆರಂಭವಾಯಿತು. ಮೈನಾ ಸಂವತ್ಸರವನ್ನು ಹಾಡಿನಳು. "ಮಹಾರಾಜರಿಗೆ ಜಯವಾಗಲಿ! ಅರಣ್ಯದ ಸೌಂದರ್ಯವೆಲ್ಲಾ ಮಹಾರಾಜರ ಶರೀರದ ಬಣ್ಣ ಬಣ್ಣದ ಕೂದಲಲ್ಲಿ ಮೂಡಿದೆ. ಅರಣ್ಯದ ಹಿಂಸೆಯೆಲ್ಲಾ ಮಹಾರಾಜರ ಕೆಂಗಣ್ಣುಗಳಲ್ಲಿ, ಕಠೋರ ಸ್ವಾಯು ಪ್ರಸಾರದಲ್ಲಿ ಮತ್ತು ಉಗುರುಗಳ ವಕ್ರತೀಕ್ಷ್ಣತೆಯಲ್ಲಿದೆ. ಮಹಾರಾಜರ ಸುಂದರಿ ವ್ಯಾಘ್ರಿಣಿಯ ದೇಹದಲ್ಲಿ ವಸಂತದ ಸೌಂಭವಿದೆ. ಉಸಿರಿನಲ್ಲಿ ಉತ್ಕೃಷ್ಟ ವನಪತ್ರಗಳ ಬಾಷ್ಪವಿದೆ, ಆಕೆಯ ಕಣ್ಣುಗಳ ರೆಪ್ಪೆಗಳಲ್ಲಿ ನಿರ್ಲಜ್ಜ ಪ್ರೇಮವಿದೆ. ಆಕೆಯ ಸ್ವಾಯುಗಳಲ್ಲಿ ಅರಣ್ಯದ ಜಟಿಲರೂಪದ ಕುಟಿಲತೆಯಿದೆ.'

ಒಂದು ನವಿಲು ವ್ಯಾಘ್ರರಾಜನ ಜಯಧ್ವನಿ ಮಾಡುವುದೇನೊ ಎಂಬಂತೆ 'ಕೇ-ಕೇ' ಎಂದು ಸದ್ದು ಮಾಡಿದಾಗ, ಕ್ಷೀರರಾಜ ನಾಗರಹಾವು ಹೆಡೆಯನ್ನು ಮುದುಡಿಕೊಂಡು ಹುತ್ತದೊಳಕ್ಕೆ ಹೊರಟು ಹೋಯಿತು.

ಎಲ್ಲರೂ ಒಕ್ಕೊರಲಿನಲ್ಲಿ ಘೋಷಿಸಿದರು. "ಮಹಾರಾಜರಿಗೆ ಜಯವಾಗಲಿ"

"ಕೇ—ಕಾ—ಆ—ಆ!"

"ಕಾ—ಕಾ!"

"ಹ್ಹಿ. ಹ್ಹಿ-ಹ್ಹಿ-ಹ್ಹಿ!"

"ಚಿಕ್-ಚಿಕ್-ಚಿಕ್!"

"ಹಿಸ್-ಸ್-ಸ್!"

ಕತ್ತಲು ದಟ್ಟವಾಯಿತು.

ಮಿಂಚು ಹುಳುಗಳು ಕತ್ತಲಲ್ಲಿ ಮಿಂಚಿ, ಮರೆಯಾಗ ತೊಡಗಿದುವು. ಕೋಗಿಲೆಯು ಪಂಚಮಸ್ವರದಲ್ಲಿ ಹಾಡಿತು. "ಕು-ಹೂ! ಕುಹೂ!"

ವ್ಯಾಘ್ರರಾಜನು ರಾಜನ ಗೌರವದಲ್ಲಿ ಕೆಲವು ಕ್ಷಣ ಕಣ್ಣು ಮುಚ್ಚಿಕೊಂಡು ಬಳಿಕ "ಕಾಕಾ" ಎಂದ.

ಕಾಕಾ ನೆಲದ ಮೇಲಿಳಿದು "ಏನು?" ಎಂದನು.

"ಯಾವುದಾದರೂ ಹೊಸ ಸುದ್ದಿಯಿದ್ದರೆ ತಿಳಿಸು."

ಕಾಕಾ ನಕ್ಕು, "ಇಂದು ಬೆಳಗ್ಗೆ ಕಟ್ಟಿಗೆ ಕಡೆಯುವ ಅನ್ನಾ ನನ್ನು ನೋಡಿದೆ" ಎಂದ.

ವ್ಯಾಘ್ರರಾಜನು ನಾಲಗೆಯಿಂದ ಮೂಗನ್ನು ಒರೆಸಿಕೊಂಡು "ನಾನು ಇಂದು ಅವನನ್ನು ಹಿಂಬಾಲಿಸಿದ್ದೆ, ಆದರೆ ತಪ್ಪಿಹೋಯಿತು" ಎಂದನು.

"ಒಳ್ಳೆಯ ಹುಡುಗ, ಹೃಷ್ಟಪುಷ್ಟನಾದ ಯುವಕ" ಎಂದನು.

"ನೀನು ಅವನನ್ನು ನೋಡಿದ್ದೀಯಾ?" ವ್ಯಾಘ್ರಿಣಿ ಕೇಳಿದಳು.

"ಹ್ಞೂ. ಅನ್ನಾ ಲಚ್ಚಿಯನ್ನು ಮುದ್ದಿಡುತ್ತಿದ್ದ, ಲಚ್ಚಿ ಅಳುತ್ತಿದ್ದಳು."

"ಏಕೆ-ಏಕೆ?" ವ್ಯಾಘ್ರರಾಜನು ಉತ್ಸುಕನಾಗಿ ಕೇಳಿದ.

ಕೋಗಿಲೆ ಕವಿಯನ್ನು ನಿಮಿರಿಸಿತು. ಹಕ್ಕಿಗಳು ರೆಕ್ಕೆಗಳನ್ನು ಫಡಫಡಿಸಿ ಕುಳಿತುಕೊಂಡುವು. ಕಪೂ 'ಹು....ಹು....' ಎಂದು ನಕ್ಕ.

"ಏ ಕಪಿ! ಬಾಯ್ಮುಚ್ಚು" ಎಂದು ಗದರಿಸಿದ ವ್ಯಾಘ್ರರಾಜ.

ಕಾಕಾ "ಹಾಗಾದರೆ ಮೊದಲಿನಿಂದ ಹೇಳುತ್ತೇನೆ" ಎಂದನು. ಕಾಕಾ.

"ಹೇಳು, ಹೇಳು!" ಎಂದಳು ವ್ಯಾಘ್ರಿಣಿ.

ಕಾಕಾ ಹೇಳಲಾರಂಭಿಸಿದ: "ನನಗೆ ಅಡ್ಡಾಡುವುದೆಂದರೆ ಎಷ್ಟು ಇಷ್ಟ ಎಂಬುದು ನಿಮ್ಮೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ತಾಂಬಾಳವ ಈ ಘೋರಾರಣ್ಯದ ಮೂಲೆ-ಮೂಲೆಯಲ್ಲಿ, ಅರಣ್ಯದ ಹೊರಗೆ ಹಳ್ಳಿಗಾಡಿನಲ್ಲಿ, ಆಕಾಶದಲ್ಲಿ, ಸಂಸಾರಶ್ವರ ಮನೆಯಂಗಳದಲ್ಲಿ, ಇಡೀ ಭೂಮಂಡಲದಲ್ಲಿ, ಎಲ್ಲಿ ಏನಾಗುತ್ತಿದೆ ಎಂಬುದನ್ನು ನೋಡುವುದೇ ನನ್ನ ಮೆಚ್ಚಿನ ಕೆಲಸ. ಈ ಅರಣ್ಯದಲ್ಲಿ ಎಷ್ಟು ಪ್ರಾಣಿಗಳಿವೆ, ಯಾರು ಏನು ಮಾಡುತ್ತಾರೆ, ಎಲ್ಲಿರುತ್ತಾರೆ, ಎಂಬುದೆಲ್ಲಾ ನನಗೆ ಚೆನ್ನಾಗಿ ಗೊತ್ತು. ಹೀಗೆಯೇ ತಾಂಬಾಳದಲ್ಲಿರುವ ಮನುಷ್ಯರ ಸಮಾಚಾರಗಳನ್ನೂ ಅರಿತುಕೊಳ್ಳುತ್ತೇನೆ. ಅನ್ನಾ ನನ್ನು ಬಹಳ ದಿನದಿಂದ ಬಲ್ಲೆ.

.....ಅನ್ನಾನಿಗೆ ಈಗ ಇಪ್ಪತ್ತೆರಡು ವರ್ಷ. ಮನೆಯಲ್ಲಿ ತಾಯಿ ಮತ್ತು ಹದಿನಾಲ್ಕು ವರ್ಷದ ತಮ್ಮ— ವಿಟ್ಠಲ ಇದ್ದಾರೆ. ಬಹಳ ಮುಗ್ಗಟ್ಟಿನಿಂದ ದಿನ ಕಳೆಯುತ್ತಾರೆ. ಚಿರಾಯಿಯ ಪೇಟೆಯಲ್ಲಿ ಕಟ್ಟಿಗೆ ಮಾರುತ್ತಾರೆ. ಮಳೆಗಾಲದಲ್ಲಿ ಕಾಡೆಲ್ಲಾ ತೇವವಾಗಿ ನಡೆಯುವುದಕ್ಕಾಗದಾದರಿಂದ, ಆಗ ಅವರ ಜೀವನ ಬಹಳ ಕಷ್ಟಕ್ಕೆ ಸಿಲುಕಿಕೊಳ್ಳುತ್ತದೆ. ಇನ್ನಾವ ಕೆಲಸವೂ ಸಿಗದಿದ್ದರೆ ಬಡಪಾಯಿಗಳು ಭಿಕ್ಷೆ ಬೇಡುತ್ತಾರೆ.

.....ಅನ್ನಾನ ವಸಂತಮತು ಬಹಳ ಹಾಯಾಗಿ ಕಳೆಯುತ್ತದೆ. ಈಗ ಅವನು ಕಟ್ಟೆಗೆ ಮಾರುವುದಲ್ಲದೆ, ಜೇನುತುಪ್ಪವನ್ನೂ ಮಾರುತ್ತಾನೆ. ಕಾಡು ಮತ್ತು ಜೌನಿಯಾ ಪರ್ವತದಲ್ಲಿ ವಸಂತ ಕಾಲದಲ್ಲಿ ಹೂದೋಟಗಳಿಂದ ತಂದು ಜೇನುಸೋಣಗಳು ಕೂಡಿಡುವ ಗೂಡುಗಳು ತಾಂಬಾಳದ ಅನೇಕ ಕಳ್ಳರಿಗೆ ಆಹ್ವಾನವೀಯುತ್ತವೆ. ಅನ್ನಾ ಈ ಕಳ್ಳರಲ್ಲಿ ದೊಡ್ಡ ಉಸ್ತಾದು.

.....ಹೋದ ವರ್ಷದ ಮಾತು, ಮಹಾರಾಜ! ಚೈತ್ರಮಾಸ. ಜೇನುಗೂಡುಗಳು ಮಧುವಿನ ಭಾರದಿಂದ ಬಾಗಿದ್ದುವು. ಕಾಡು ಹೂಗಳ ಪರಿಮಳದಿಂದ ಬೆದೆಗೊಂಡ ಅರಣ್ಯವು ಚೈತ್ರಮಾಸದ ಉರಿಬಿಸಿಲಲ್ಲಿ ತೂಕಡಿಸುತ್ತಿತ್ತು. ಉರಿಬೇಸಗೆಯ ಬೇಗೆಯಿಂದ ಬೆಂದ ಬೆಟ್ಟಗಳ ನಿರ್ಝರಿಗಳು, ಅಲ್ಲಲ್ಲಿ ಕಲಕಲನಿನಾದದೊಡನೆ ಹರಿಯುತ್ತಿದ್ದುವು. ಅರಣ್ಯದ ನೆರಳಲ್ಲಿ ಬೆಟ್ಟಗಳು ಕಣ್ಣಾಮುಚ್ಚಿಯಾಟವಾಡುತ್ತಿದ್ದುವು. ಜಿಂಕೆಗಳು ನೀರನ್ನು ಹುಡುಕುತ್ತ ಅರಣ್ಯಕ್ಕೆ ಬಂದು ಸಮತಳ ಭೂಮಿಯನ್ನು ಅವಾಕ್ಕಾಗಿ ನೋಡುತ್ತಿದ್ದುವು. ಅಗಿನ ಮಾತು.

ಜೌನಿಯಾ ಪರ್ವತದ ಉತ್ತರ ಭಾಗವನ್ನು ನೀವು ನೋಡಿಲ್ಲ. ಪರ್ವತವು ಬಾಯ್ದೆರೆದು ಆ ಕಡೆ ಬಾಗಿದೆಯೇನೋ ಎಂಬಂತೆ ಕಾಣಿಸುತ್ತದೆ. ಆ ಮೊಗದ ಕೆಳಗೂ ಚಿಕ್ಕ ಚಿಕ್ಕ ಲತಾ-ಗುಲ್ಮ ಮತ್ತು ಅಶ್ವತ್ಥವೃಕ್ಷಗಳು ಜಟಿಲವಾಗಿ ವ್ಯಾಪಿಸಿವೆ. ಅದರ ಕೆಳಗೆ ಮೂರು ಪಟ್ಟುವಾದ ಶಾಲವೃಕ್ಷಗಳ ಬಳಿಕವೇ ಭೂಮಿ ಆರಂಭವಾಗುತ್ತದೆ. ಈ ಜಟಿಲಪ್ರಸಾರದಲ್ಲಿ ಎರಡು ದೊಡ್ಡ ದೊಡ್ಡ ಜೇನುಗೂಡುಗಳಿದ್ದುವು. ಮಧುವನ್ನು ಆಹರಿಸುವವರು ಎಷ್ಟೋ ದಿನಗಳಿಂದ ಸುತ್ತಾಡುತ್ತಿದ್ದುದರಿಂದ, ಅನ್ನಾನಿಗೆ ಅವಕಾಶವೇ ಸಿಗುತ್ತಿರಲಿಲ್ಲ. ಒಂದು ದಿನ ಒಬ್ಬನೇ ಒಂದು ಹಗ್ಗ, ಪಂಜು, ಒಂದು ಚಿಕ್ಕ ಬಕೀಟು ಮತ್ತು ಭರ್ಜಿಯನ್ನು ಹಿಡಿದುಕೊಂಡು ಅಡ್ಡಾಡುತ್ತಿದ್ದಾಗ, ಯಾರ ಕಣ್ಣಿಗೂ ಇದುವರೆಗೂ ಬೀಳದೇ ಇದ್ದ ಜೇನುಗೂಡುಗಳು ಕಾಣಿಸಿದುವು. ಅತ್ಯಂತ ದುಸ್ಸಾಹಸದಿಂದ ಅವನು ಹುಚ್ಚನಾದನು.

....ಪರ್ವತದಿಂದ ಬಾಗಿದ ಮುಖದ ಮೇಲೆ ಒಂದು ಗೂಟವನ್ನು ಹೂಳಿ, ಅದಕ್ಕೆ ಹಗ್ಗ ಕಟ್ಟಿ ಕೆಳಗಿಳಿದ. ಜೇನುಗೂಡುಗಳಲ್ಲಿ ಪಂಜಿನ ಹೊಗೆ ತಾಕುತ್ತಲೇ ಜೇನುಹುಳುಗಳ ಆರ್ತಗುಂಜನದಿಂದ ಅಕ್ಕಪಕ್ಕದ ಸ್ಥಳವೆಲ್ಲಾ ಧ್ವನಿತವಾಯಿತು. ತೂಕಡಿಸುತ್ತಿದ್ದ ಮಧ್ಯಾಹ್ನ ಬೆಚ್ಚಿ ಬಿದ್ದಿತು.

....ಮಧು ಸಿಹಿಯಾಗಿದ್ದರೆ, ಜೇನುಹುಳುಗಳ ಕಡಿತವೂ ಅನ್ನಾನಿಗೆ ಸಿಹಿಯಾಗಿರುತ್ತದೆ. ಆದರೆ ಒಂದು ದುರ್ಘಟನೆ ಜರುಗಿತು. ಗೂಟದ ಒಳಭಾಗವನ್ನು ಕೀಟಗಳು ತಿಂದು ಬಿಟ್ಟಿದ್ದುವು. ಇದ್ದಕ್ಕಿದ್ದಂತೆ ಚರಮರ ಎನ್ನುತ್ತಾ ಹಗ್ಗ ಅರಿವಾರು ಕೆಳಗೆ ಬಂದಿತು. ಕಟ್ಟನೆ ಅನ್ನಾ ಒಂದು ಅಶ್ವತ್ಥವೃಕ್ಷದ ಕೊಂಬೆಯನ್ನು ಹಿಡಿದುಕೊಂಡ. ಕೆಳಗೆ ಕಂದಕವಿತ್ತು. ಬಿದ್ದರೆ ಪುಡಿಪುಡಿಯಾವ ಮೂಳೆಯೂ ಉಗುವುದಿಲ್ಲ. ಮೈಯೆಲ್ಲಾ ಜೇನತು ಹೋಯಿತು. ಸುತ್ತಲೂ ನೋಡಿದ. ಬಳಿಕ. "ಯಾರಾದರೂ ಬನ್ನಿ, ಉಳಿಸಿ" ಎಂದು ಕೂಗತೊಡಗಿದ. ಇದನ್ನೆಲ್ಲಾ ನೋಡಿ ನಾನೂ "ಕಾ-ಕಾ-ಕಾ" ಎಂದು ಕೂಗತೊಡಗಿದೆ.

ತಾಂತಿಯಾ ರೈತನ ಸೋದರ ಸೊಸೆ ಲಚ್ಚಿ, ಆಗ ಪರ್ವತದ ಬಾಯಿಯ ಕೆಳಗೆ ಹೋಗುತ್ತಿದ್ದಳು. ಜೇನುಹುಳುಗಳು ಹಾರುತ್ತಿರುವುದನ್ನು ನೋಡಿ ಬೆಚ್ಚಿದಾಗ, ಅನ್ನಾನ ಚೀತ್ಕಾರ ಕಿವಿಗೆ ಕೇಳಿಸಿತು. ಬಳಿಕ ಅನ್ನಾನೂ ಕಾಣಿಸಿದ.

ಲಚ್ಚಿ "ಬಂದೆ" ಎಂದು ಗಟ್ಟಿಯಾಗಿ ಕೂಗಿದಳು.

ಬಳಿಕ ಮೇಲಕ್ಕೆ ಓಡಿದಳು. ಗೂಟವಿನ್ನೂ ಮುರಿದಿರಲಿಲ್ಲ. ಅರ್ಧಭಾಗ ಪರಿಯಾಗಿಯೇ ಇತ್ತು. ಹಗ್ಗದ ಗಂಟನ್ನು ಅವಳು ಗೂಟದ ಬೇರೆ ಭಾಗಕ್ಕೆ ಕಟ್ಟಿದಳು. ಅನ್ನಾ ಅವಳು ಹೇಳಿದಂತೆ ಹಗ್ಗವನ್ನು ಪಡಿಲುಬಿಟ್ಟ. ಹಗ್ಗವನ್ನು ಬಿಗಿಯಾಗಿ ಕಟ್ಟಿದ ಮೇಲೆ ಅನ್ನಾ ಮೇಲಕ್ಕೆ ಬಂದ. ಅಷ್ಟು ಹೊತ್ತಿಗೆ ಅವನು ಬೆವರಿನಿಂದ ಸ್ನಾನಮಾಡಿ ಬಿಟ್ಟಿದ್ದ. ಲಚ್ಚಿಯೂ ಭಯದಿಂದ ಬೆವತಿದ್ದಳು. ನೆಲದ ಮೇಲೆ ಕುಳಿತುಕೊಂಡು ಇಬ್ಬರೂ ಪರಸ್ಪರ ನೋಡಿದರು.

"ನೀನು ತಾಂತಿಯಾನ ತಂಗಿಯ ಮಗಳಲ್ಲವೆ?" ಎಂದ ಅನ್ನಾ.

"ಹ್ಞೂ!"

ಇಬ್ಬರೂ ಇನ್ನೊಮ್ಮೆ ಪರಸ್ಪರರ ಮುಖಗಳನ್ನು ನೋಡಿದರು. ಇಬ್ಬರೂ ಪರಸ್ಪರರ ಮುಖಗಳನ್ನು ನೋಡಿದ್ದರೂ ಅದು ದೂರದ ಪರಿಚಯವಾಗಿತ್ತು. ಹತ್ತಿರ ಬಂದು ಹಠಾತ್ತಾಗಿ ನಾಲ್ಕು ಕಣ್ಣುಗಳನ್ನು ಕೂಡಿಸಿ ಪರಿಚಯ ಬೆಳೆಸುವುದೇ ಬೇರೆಯ ವಿಷಯ. ಮಹಾರಾಜ! ನೀನು ನಿನ್ನ ವ್ಯಾಘ್ರಿಣಿಯನ್ನು ಗುರುತಿಸುವೆಯಲ್ಲಾ, ಹಾಗೆ.

....ಅನ್ನಾ ಅವಳನ್ನು ನೋಡಿದ. ಕರಿಯ ಮತ್ತು ನುಣುಪಾದ ಕಲ್ಲಿನಂತೆ ಕಂಗೊಳಿಸುವ ಹದಿನೇಳು ವರ್ಷದ ಯುವತಿ. ಹರಿದ ನೀರೆ ಮತ್ತು ರವಿಕೆಯಿಂದ ಅರೆಹೊದ್ದ ಯೌವನದ ಮೇಲೆ ಜೌನಿಯಾ ಪರ್ವತದ ಮೇಲೆ ವ್ಯಾಪಿಸಿರುವ ವಸಂತವ ನೆಳಲಿಳಿದು ಬಂದಂತೆನಿಸುತ್ತಿತ್ತು. ಲಚ್ಚಿ ಅನ್ನಾನನ್ನು ನೋಡಿದಳು. ತಾಂಬಾಳದ ಒಂದು ಶಾಲವೃಕ್ಷದಂತೆ, ಕಡಿದಾದ ಕಲ್ಲಿನಿಂದ ಕಡೆದ ಪುರುಷನಂತೆ ಮತ್ತು ಅವನ ಕಣ್ಣುಗಳಲ್ಲಿ ಜೌನಿಯಾ ಪರ್ವತದಲ್ಲಿ ಬಿಡುವ ಕೃಷ್ಣಚೂಡ ಪುಷ್ಪಗಳ ಕೆಂಪುಕಾಂತಿ.... ಇವರಿಬ್ಬರ ಈ ಸ್ಥಿತಿಯನ್ನು ನೋಡಿ ಬೆದೆಗೊಂಡು ನನ್ನ ಕಣ್ಣುಗಳು ಮುಚ್ಚಿಕೊಂಡುವು ಮಹಾರಾಜಾ!

....ಅದಾದ ಬಳಿಕ ಆ ಹುಡುಗ-ಹುಡುಗಿ ಇಬ್ಬರೂ ಒಬ್ಬರನ್ನೊಬ್ಬರು ಭೇಟಿ ಮಾಡತೊಡಗಿದರು. ಜೌನಿಯಾ ಪರ್ವತದ ಬಾಗಿದ ಮೊಗದ ಕೆಳಭಾಗದಲ್ಲಿ ಮಧುವನ್ನು ಹುಡುಕುತ್ತಾ-ಹುಡುಕುತ್ತಾ ಅನ್ನಾ ತನ್ನ ಬಾಳ-ಮಧುವನ್ನು ಹುಡುಕಿದ್ದ. ತಾಂತಿಯಾ ಮಾನನ ಕಾಟದಿಂದ ಕತ್ತಲು ಕವಿದಿದ್ದ ಲಚ್ಚಿಯ ಬಾಳನಲ್ಲಿಯೂ ಬೆಳಕಿನ ಕಿರಣಗಳು ಪಾವಾಸಲವ ಅಗ್ನಿಯಂತೆ ವ್ಯಾಪಿಸತೊಡಗಿದುವು.

ನ್ನಾ ಮರ ಕಡಿಯುವಾಗ ಲಚ್ಚಿ ಒಣಕೊಂಬೆ ಮತ್ತು ತರಗೆಲೆಗಳನ್ನು ಸಂಗ್ರಹಿಸುವಳು.

ಚಿರಾಓಯದ ಪೇಟೆಯಲ್ಲಿ ಅನ್ನಾ-ಲಚ್ಚಿ ಭೇಟಿಯಾಗುತ್ತಿದ್ದರು. ಲಚ್ಚಿಯ ಕಟ್ಟಿಗೆಯನ್ನು ಮಾರಿ, ಅನ್ನಾ ತನ್ನ ಕಟ್ಟಿಗೆಯನ್ನು ಮಾರುತ್ತಿದ್ದನು.

ಆಗಾಗ ಲಚ್ಚಿ ಕಾಡುಹಣ್ಣುಗಳನ್ನು ಹುಡುಕುವಳು. ಅನ್ನಾ ಅದನ್ನು ನೋಡಿದರೆ ರಾತ್ರಿಗಟ್ಟಲೆ ಕೆತ್ತುಹಾಕುತ್ತಿದ್ದ.

ಒಂದು ದಿನ ಅನ್ನಾ ಪೇಟೆಯಿಂದ ಬಣ್ಣದ ಬಳೆಗಳನ್ನು ತಂದು ಪ್ರಾಣಿಕೆಯಾಗಿತ್ತು.

ಲಚ್ಚಿ "ಹ್ಞು ಹ್ಞೂ!" ಎಂದಳು.

"ಏಕೆ?"

"ಇದನ್ನೇಕೆ ಕೊಡುತ್ತಿದ್ದೀಯೇ?"

"ನೀನು ನನ್ನ ಪ್ರಾಣ ಉಳಿಸಿದ್ದೀಯೆ. ಅದಕ್ಕೋಸ್ಕರ ಏನಾದರೂ ಕೊಡಬೇಕೆನಿಸಿತು. ತಗೋ!"

ಲಚ್ಚಿ ಬಳೆಗಳನ್ನು ತೆಗೆದುಕೊಂಡಳು. ಆದರೆ ಎರಡು ದಿನಗಳ ಬಳಿಕ ಭೇಟಿಯಾದಾಗ ಲಚ್ಚಿ ಆ ಬಳೆಗಳನ್ನು ತೊಟ್ಟುಕೊಂಡಿರದೇ ಇದ್ದುದನ್ನು ಅನ್ನಾ ಗಮನಿಸಿದ.

"ತೊಟ್ಟುಕೊಳ್ಳಲಿಲ್ಲೆ?"

"ಅತ್ತೆ ಮಾವ ಸಿಟ್ಟಾಗುತ್ತಾರೆ."

ಅನ್ನಾ ಮುನಿಸಿದ.

ಲಚ್ಚಿ "ಸಿಟ್ಟಾಗಬೇಡ. ಇಲ್ಲೇ ಇವೆ ನೋಡು, ತೊಟ್ಟುಕೊಳ್ಳುತ್ತೇನೆ" ಎಂದು ಹೇಳಿ ನಡುವಿನಿಂದ ಬಳೆಗಳನ್ನು ತೆಗೆದುಕೊಂಡು ತೊಟ್ಟುಕೊಂಡಳು. ಬಳಿಕ ನಕ್ಕು "ಈಗ ಸಂತೋಷವಾಯಿತೆ?" ಎಂದಳು.

ಅನ್ನಾ ಲಚ್ಚಿಯ ಹತ್ತಿರ ಬಂದ. ಲಚ್ಚಿ ಅವನ ಕಡೆ ನೋಡಿದಳು, ಆದರೆ ಸರಿಯಲಿಲ್ಲ.

"ಲಚ್ಚಿ!"

"ಹ್ಞಾ?"

ಅನ್ನಾ ಇನ್ನಷ್ಟು ಹತ್ತಿರ ಬಂದ. ಲಚ್ಚಿ ಸರಿಯಲಿಲ್ಲ. ಅನ್ನಾನ ಕಣ್ಣುಗಳಲ್ಲಿ ಕಣ್ಣಿಟ್ಟು "ಮಾವನಿಗೆ ಕೇಳು" ಎಂದಳು.

ಅನ್ನಾ "ಕೇಳುತ್ತೇನೆ" ಎಂದ.

ಆದರೆ ತಾಂತಿಯಾ ಕಡುಲೋಭಿಯಾಗಿದ್ದ. ಅನ್ನಾನ ಬೇಡಿಕೆಯನ್ನು ಕೇಳಿ "ನಲವತ್ತು ರೂಪಾಯಿ ತಗೊಂಡು ಬಾ. ಇಲ್ದೆ ಇದ್ರೆ ಇಲ್ಲ" ಎಂದ.

"ನಲವತ್ತು ರೂಪಾಯಿ, ಏನು ತಮಾಷೇನೆ!" ಎಂದು ಉಗುಳು ನುಂಗುತ್ತಾ ಅನ್ನಾ ಹೊರಟು ಹೋದ. ಮರೆಯಲ್ಲಿ ನಿಂತಿದ್ದ ಲಚ್ಚಿ ಅಳತೊಡಗಿದಳು. ಏನು ಹೇಳಲಿ ಮಹಾರಾಜ! ಅವಳು ಅಳುವುದನ್ನು ನೋಡಿ ನನಗಂತೂ ನಿಮ್ಮಂತೆ ಹಾರಿ ಶಾಂತಿಯಾನ ಗೋಣು ಮರಿಯಲೆ ಎನಿಸಿತ್ತು.

ನಲವತ್ತು ರೂಪಾಯಿಯನ್ನು ಕೂಡಿಡುವ ಪ್ರಯತ್ನದಲ್ಲಿ ಬೇಸಗೆ ಕಳೆದು ಹೋಯಿತು. ಮಳೆಗಾಲ ಬಂದಿತು. ತಾಂಖೂಂದ ಅರಣ್ಯದಲ್ಲೆಲ್ಲಾ ಹಚ್ಚಹಸಿರು ವ್ಯಾಪಿಸಿತು. ಜೌಸಿಯಾ ಪರ್ವತಕಾಯದ ಮೇಲೆಲ್ಲಾ ಹಸಿರು ಕಂಗೊಳಿಸತೊಡಗಿತು. ಬಳಿಕ ಶರತ್ ಮತ್ತು ಹೇಮಂತ ಋತುಗಳು ಬಂದುವು.

ಅಂದು ಅನ್ನಾ ಕೊಡಲಿ ಹಿಡಿದುಕೊಂಡು ಯೋಚನಾಗ್ರಸ್ತನಾಗಿ ಅಡ್ಡಾಡುತ್ತಿದ್ದ. ಅನಿರೀಕ್ಷಿತವಾಗಿ ಒಂದು ಮರದ ನೆರಳಲ್ಲಿ ಲಚ್ಚಿ ಕುಳಿತುಕೊಂಡಿದ್ದುದು ಕಾಣಿಸಿತು. ಕಾಡಿನ ಹಣ್ಣುಗಳನ್ನು ಸಂಗ್ರಹಿಸಿ ಪಣಿವಾರಿಸಿಕೊಳ್ಳುತ್ತಿದ್ದಳು.

"ನಲವತ್ತು ರೂಪಾಯಿಗಳನ್ನು ಹೊಡಿಸಿದಲ್ಲದೆ ನಿನ್ನನ್ನು ಪಡೆಯಲಾರೆ ಲಚ್ಚಿ" ಎಂದ, ಅನ್ನಾ.

ಲಚ್ಚಿ ಸುಮ್ಮನಿದ್ದಳು.

ಅನ್ನಾ ಪುನಃ "ಇನ್ನಾರಾದರೂ ಬಂದು ನಲವತ್ತು ರೂಪಾಯಿ ಕೊಟ್ಟು ನಿನ್ನನ್ನು ತಗೊಂಡು ಹೋದರೆ?" ಎಂದ.

"ಇಲ್ಲ!" ಎಂದಳು ಲಚ್ಚಿ.

"ಆದರೆ ಹೀಗೆ ಎಷ್ಟು ದಿನ?"

ಲಚ್ಚಿ ಅನ್ನಾನ ಕಡೆ ನೋಡಿದಳು. ಅನ್ನಾ ಸುಮ್ಮನಾದ.... ಮಹಾರಾಜಾ, ಅನಂತರ ಅದೇ ಮರದ ನೀಲ ನೆಳಲಲ್ಲಿ ಅವರು ಚಿರತೆಗಳಂತೆ ಒಬ್ಬರ ಮೇಲೊಬ್ಬರು ಹಾರಿ ಬಿದ್ದರು. ಹಕ್ಕಿಗಳ ಇಂಚರದಿಂದ ಮಾತ್ರ ಶಬ್ದಾಯಮಾನವಾದ ಆ ಮಧ್ಯಾಹ್ನದ ನಿರ್ಜನ ನೆರಳಿನಲ್ಲಿ ನಲವತ್ತು ರೂಪಾಯಿಗಳ ಪರತ್ತನ್ನು ವಿರೋಧಿಸಿ ಇಬ್ಬರೂ ಪರಸ್ಪರರ ಬಾಹುಗಳಲ್ಲಿ ಬಂಧಿತರಾದರು.

ಅಂದಿನಿಂದ ಅವರು ಹಾಗೆಯೇ ಆಗಾಗ್ಗೆ ಭೇಟಿಯಾಗುತ್ತಿದ್ದರು. ನಾನು ಅದನ್ನು ನೋಡಿ ಹಾರಿ ಹೋಗುತ್ತಿದ್ದೆ. ನನ್ನ ಕರ್ಕಶ ಸ್ವರದಿಂದ ಅವರನ್ನು ವಿರಕ್ತಗೊಳಿಸುವ ಇಚ್ಛೆಯುಂಟಾಗುತ್ತಿರಲಿಲ್ಲ.

ಚಳಿಗಾಲದ ಬಳಿಕ ಒಂದು ದಿನ ಅವರು ಚಿಂತಿತರಾಗಿದ್ದುದು ಕಾಣಿಸಿತು. ಆದರೆ ಅವರೇಕೆ ಚಿಂತಿತರಾಗಿದ್ದಾರೆಂಬುದು ತಿಳಿಯಲಿಲ್ಲ....ಸ್ವಲ್ಪ ಹೊತ್ತಾದಬಳಿಕ ಅನ್ನಾ ಲಚ್ಚಿಯನ್ನು ಕಲಸಕ್ಕೆ ಹೋಗುವಂತೆ ಹೇಳಿ, ತಾಂತಿಯಾನ ಮನೆಗೆ ಹೋಗಿ ಪುನಃ ಲಚ್ಚಿಯನ್ನು ಮದುವೆಯಾಗುವ ಬಯಕೆಯನ್ನು ತಿಳಿಸಿದ. ತಾಂತಿಯೂ ತನ್ನ ಪರತ್ತನ್ನು ಬಲವಾಗಿ ಹಿಡಿದುಕೊಂಡಿದ್ದ—"ನಲವತ್ತು ರೂಪಾಯಿ ತಗೊಂಡು ಬಾ!'

ಅಂದಿನಿಂದ ಅನ್ನಾ ಇನ್ನೂ ಹೆಚ್ಚಾಗಿ ಓಡಾಟ ನಡೆಸಿದ. ಹೆಚ್ಚಾಗಿ ಕಟ್ಟಿಗೆ ಕಡಿಯತೊಡಗಿದ....ಈ ಸಾರಿ ಅವನೇ ಎಲ್ಲರಿಗಿಂತ ಹೆಚ್ಚು ಸುಧುವನ್ನು ಸಂಗ್ರಹಿಸಿದ್ದಾನೆ. ಅವನು ಇದನ್ನೆಲ್ಲಾ ನಲವತ್ತು

ರೂಪಾಯಿಗಳನ್ನು ಕೂಡಿಡುವುದಕ್ಕೋಸ್ಕರ ಮಾಡುತ್ತಿದ್ದಾನೆಂಬುದನ್ನು ನಾನು ಚೆನ್ನಾಗಿ ಬಲ್ಲೆ.

ನಾನೆಂದುಕೊಂಡಿದ್ದುದು ಸರಿ ಎಂದು ಇಂದು ತಿಳಿಯಿತು. ಇಂದು ಅವರನ್ನು ಜೌನಿಯಾ ಪರ್ವತದ ಬಳ್ಳಿ ನಿರ್ಝರಿಯ ಬಳಿ ನೋಡಿದಾಗ, ಅವರ ಮಾತುಕತೆಯನ್ನೂ ಕೇಳಿಸಿಕೊಂಡೆ. ಲಚ್ಚಿ ಅತ್ತು "ಈಗ ಖಂಡಿತವಾಗಲೂ ಸಿಕ್ಕಿಕೊಂಡು ಬಿಡುವೆ....ಇದನ್ನು ಮರೆ ಮಾಡಲು ಯಾವ ಉಪಾಯವೂ ಇಲ್ಲ" ಎಂದಳು.

ಅನ್ನಾ ಅವಳನ್ನು ಪ್ರೇಮದಿಂದ ಮುದ್ದಿಟ್ಟ. "ನೀನು ಯೋಚನೆ ಮಾಡಬೇಡ. ಇಪ್ಪತ್ತೈದು ರೂಪಾಯಿಗಳನ್ನು ಕೂಡಿಸಿದ್ದೇನೆ. ಉಳಿದುವನ್ನು ಈ ತಿಂಗಳೊಳಗೆ ಕೂಡಿಸುತ್ತೇನೆ" ಎಂದ.

ಲಚ್ಚಿ ಕಣ್ಣೀರನ್ನು ಒರೆಸಿಕೊಂಡು "ಕೂಡಿಸುವುದಕ್ಕಾಗದಿದ್ದರೆ ನೀವ ನನ್ನ ಪ್ರಾಣ ತೆಗೆದುಹಾಕ್ತಾನೆ" ಎಂದಳು.

ಅನ್ನಾ "ಯಾರು ನಿನ್ನ ಮೇಲೆ ಕೈ ಎತ್ತುವರು ಲಚ್ಚಿ? ನೀನು ನನ್ನ ಹೆಂಡ! ನಾನಿನ್ನೂ ಸತ್ತಿಲ್ಲ!" ಎಂದ.

"ಆದರೆ ಮಯ್ಯಾದೆ?"

"ಹ್ಞೂ, ಮಯ್ಯಾದೆಗೋಸ್ಕರವೇ ಹದಿನೈದು ರೂಪಾಯಿ ತೀರಿಸಲು ಯತ್ನಿಸುತ್ತಿದ್ದೇನೆ. ನಾನು ಜೋಡಿಸುತ್ತೇನೆ ಲಚ್ಚಿ!"

ಇಷ್ಟೇ ಮಹಾರಾಜಾ ಕೇಳಿರುವುದು. ಆ ಮೇಲೆ ಲಚ್ಚಿ ಮನೆಗೆ ತೊರಟು ಹೋದಳು. ಅನ್ನಾ ಕಾಡಿನ ಕಡೆ ಹೊರಟುಹೋದ...."

"ಕಾಕಾ!" ಎಂದ ಕಾಕಾ.

"ಹ್ಹಿ ಹ್ಹಿ ಹ್ಹಿ, ಫ್ಹ ಹ್ಹ ಹ್ಹ ಹ್ಹ!" ಎಂದು ನಕ್ಕ ಕಪೂ. ಹಳ ಚೆನ್ನಾಗಿ ಸಮಾನುಭೂತಿಯಿಂದ ಕಥೆ ಹೇಳಿದ ಕಾಕಾ. ಅಲ್ಲಣ್ಣ, ಮನುಷ್ಯರಿಗೋಸ್ಕರ ನಾವು ಚಿಂತಿಸತೊಡಗಿದರೆ, ಇನ್ನೇನು ಆದ ಹಾಗೇನೆ!" ಎಂದ.

ವ್ಯಾಘ್ರೇಶ್ವರಾಜನು ಬಾಲ ಅಲ್ಲಾಡಿಸಿ "ನೀನು ಹೇಳಿದ್ದು ಸರಿ ಕಪೂ. ನಮ್ಮ ಈ ಅರಣ್ಯದಲ್ಲಿ ಭಾವಾವೇಶಕ್ಕೆ ಎಡೆಯಿಲ್ಲ. ಅನ್ನಾ ನಮ್ಮೆಲ್ಲರ ಶತ್ರು!" ಎಂದ

ಹಠಾತ್ತಾಗಿ ಬಹುದೂರದಲ್ಲಿ ನರಿಗಳ ಪ್ರಹರಘೋಷಣೆ ಕೇಳಿಸಿತು.

ವ್ಯಾಘ್ರೇಶ್ವರಾಜನು ನಿಂತುಕೊಂಡು ಘೋಷಿಸಿದ— "ರಾತ್ರಿಯಾಗಿದೆ. ಈಗ ನೀವು ನಿಮ್ಮ-ನಿಮ್ಮ ಬೇಟೆಗೆ ಹೋಗಿ."

ಕಪೂ "ನೀವುಗಳು ಹೋಗಿ, ಮಹಾರಾಜಾ! ಸಾಯಿರಿ, ಶಪಥವಾ ಸಾಯಿಸಿರಿ! ನನ್ನದಂತೂ ಇದ್ದೇ ಇದೆ ನಿರಾಮಿಷ" ಎಂದ.

ಕೋಗಿಲೆ, ಮೈನಾ ಮತ್ತು ಕೆಂಬೂತಗಳು ಹಾರಿಹೋದುವು.

ಕಾಕಾ "ಕಾ-ಕಾ, ನಿನ್ನ ಬೇಟೆ ಸಫಲವಾಗಲಿ, ಮಹಾರಾಜಾ!" ಎಂದ.

ವ್ಯಾಘ್ರೇಶ್ವರಾಜ ವ್ಯಾಘ್ರಿಣಿಗೆ "ನಡೆ, ಇಂದು ಜಿಂಕೆಯ ಬೇಟೆಯಾಡೋಣ. ಅನಂತರ ರಕ್ತಸಿಕ್ತ ಮಾಂಸವನ್ನು ತಿಂದು ಹಬ್ಬ ವಾಚರಿಸೋಣ" ಎಂದ.

"ನಡೆ ಮಹಾರಾಜ!" ಎಂದಳು ವ್ಯಾಘ್ರಿಣಿ.

ಇರುಳು ದಟ್ಟವಾಗತೊಗಿತು. ಎಲೆಗಳಿಂದ ಹೊದಿಸಲ್ಪಟ್ಟ ಅರಣ್ಯದ ನೆಲೆದಿಗಳಲ್ಲಿ ಕತ್ತಲು ನಿಬಿಡವಾಯಿತು. ನಟ್ಟಿರುಳಿನಲ್ಲಿ ಜೌನಿಯಾ ಪರ್ವತದಾಚೆಯಿಂದ ಚಂದ್ರನ ಚೂರೊಂದು ಮೇಲೇರಿತು. ಶಾಲವೃಕ್ಷದೆಲೆಗಳ ಜಾಳಿಗೆಯಿಂದ ತೂರಿಕೊಂಡು ಬರುವ ಚಂದ್ರಪ್ರಭೆ, ತರಗೆಲೆಗಳಿಂದ ಹೊದಿಸಲ್ಪಟ್ಟ ಭೂಮಿಯ ಮೇಲೆ ವ್ಯಾಪಿಸಿತು. ಅಭ್ರಕದ ಚೂರಿನಂತೆ ಆ ಬೆಳುದಿಂಗಳಿಂದಲೂ ಕತ್ತಲನ್ನು ದೂರಮಾಡಲಾಗಲಿಲ್ಲ. ಆದರೂ ಅದು ಒಂದು ಬಗೆಯ ವಿಚಿತ್ರ ಮಹಿಮೆಯನ್ನಿತ್ತಿತು. ಶಾಲಪತ್ರಗಳ ಕೆಳಗೆ ಹೊನ್ನೆಹುಳುಗಳು ಕ್ಷಣಗಳನ್ನೆಣಿಸತೊಡಗಿದುವು. ಇದ್ದಕ್ಕಿದ್ದಂತೆ ಮೂಡಣಗಾಳಿಯಿಂದ ಶಾಲವನದಲ್ಲಿ ಮರ್ಮರ ಧ್ವನಿ ಪ್ರತಿಧ್ವನಿಸಿತು. ಹಣ್ಣೆಲೆಗಳು ಕಡಕಡ ಉದುರತೊಡುಗಿದುವು. ಒಂದು ಬಗೆಯ ವಿಚಿತ್ರ ಮತ್ತು ರಹಸ್ಯಮಯ ಸಂಗೀತಧ್ವನಿ ಎಚ್ಚೆತ್ತಂತೆನಿಸಿತ್ತು. ರಕ್ತ ಪಿಪಾಸಿ ಕಾಡುಪ್ರಾಣಿಗಳ ಕಣ್ಣುಗಳು ಅಲ್ಲಲ್ಲಿ ಪ್ರದೀಪ್ತ ಕೆಂಡಗಳಂತೆ ಉರಿಯತೊಡಗಿದುವು. ಹಸಿದ ವ್ಯಾಘ್ರ ಮತ್ತು ಕ್ರೂರ ಪ್ರಾಣಿಗಳ ಭೀಷಣ ಚೀತ್ಕಾರದೊಂದಿಗೆ ನರಿಗಳು ಕೂಗಿಕೊಳ್ಳತೊಡಗಿದುವು— 'ಝೆನ್....ಝಿರ್!' ಜೀರುಂಡೆಗಳ ಝೇಂಕಾರದಿಂದ ಶಬ್ದಾಯಮಾನವಾದ ತಾಂಬೂಲದ ಅರಣ್ಯದಿಂದ ಮೂಳೆಗಳ ಕಡಕಡ ಶಬ್ದ ಕೇಳಿಸಿತು!

ಮಾರನೆಯ ದಿನ ಮಧ್ಯಾಹ್ನ ವ್ಯಾಘ್ರೇಶ್ವರಾಜ ನುಲಗಿಕೊಂಡು ತೂಕಡಿಸುತ್ತಿದ್ದ.

ವಸಂತ-ವಾಯುವಿನ ಅಲೆಗಳಲ್ಲಿ ಶಾಲವನವೆಲ್ಲಾ ಹಾಡುತ್ತಿತ್ತು. ಕೋಗಿಲೆ ಮತ್ತು ಕೃಷ್ಣಸಾರಿಕೆ ಇನಿದಾದ ಸ್ವರನೈಯುತ್ತಿದ್ದುವು. ಪಾರಿವಾಳದ ಉದಾಸಸ್ವರಗಳ ಮೇಲೆ ಕೋಗಿಲೆಯ ಎತ್ತರಿಸಿದ ರಾಗಾಲಾಪನೆ ಕೇಳಿಸುತ್ತಿತ್ತು. ತನ್ನ ರಾಜ್ಯದ ಸೌಂದರ್ಯದಿಂದ ಮುಗ್ಧನಾಗಿ ವ್ಯಾಘ್ರೇಶ್ವರಾಜನು 'ನರಮಾಂಸದ ರುಚಿಯೆ ಮರೆತು ಹೋದಂತಾಗಿದೆಯೆಲ್ಲಾ' ಎಂದು ಯೋಚಿಸುತ್ತಿದ್ದ. ವ್ಯಾಘ್ರಿಣಿ ನೋಣಗಳಿಂದ ನೊಂದು ಅವನ ಬಳಿಗೆ ಬಂದು, ಅವನ ಶರೀರಕ್ಕೆ ಒರಗಿಕೊಂಡು ನಿಂತುಕೊಂಡಳು.

ಅದೇ ಸಮಯಕ್ಕೆ ಸರಿಯಾಗಿ ಕಾಕಾ ಬಂದು "ಕಾ-ಕಾ, ಮಹಾರಾಜಾ," ಎಂದನು.

"ಏನು ಸಮಾಚಾರ?"

ಕಾಕಾ "ಬಹಳ ಭಯಂಕರ ಸಮಾಚಾರ. ಬೇಟೆಗಾರ ಮನುಷ್ಯರ ಒಂದು ತಂಡ ಬರುತ್ತಿದೆ!" ಎಂದ.

ವ್ಯಾಘ್ರೇಶ್ವರಾಜ ನಿದ್ಯುದ್ವೇಗದಲ್ಲಿ ಎದ್ದು ಕುಳಿತ: "ಎಲ್ಲಿ? ಎಲ್ಲಿದ್ದಾರೆ ಅವರು?"

"ಅರಣ್ಯಶಾಖೆಯ ಬಂಗಲೆಯಲ್ಲಿ ಇಳಿದುಕೊಂಡಿದ್ದಾರೆ. ಇಲ್ಲಿಯ ..ನ್ನಾರರು! ಈ ಅರಣ್ಯದ ಒಡೆಯ ವಿನಾಯಕ ನಾಂದ್ರೇಕರ್...."

ವ್ಯಾಘ್ರರಾಜ ಗರ್ಜಿಸಿದ—"ಎಚ್ಚರಿಕೆ. ಕಾಕಾ! ಈ ಅರಣ್ಯದ ಒಡೆಯ ನಾನು!"

ಕಾಕಾ "ಅದನ್ನು ನಾವು ಬಲ್ಲೆವು. ಆದರೆ ಮನುಷ್ಯರು ನಾಂದ್ರೇಕರರನ್ನೇ ಒಡೆಯನೆಂದು ಹೇಳುತ್ತಾರೆ" ಎಂದ.

"ಹ್ಞೂ, ನೋಡಿಕೊಳ್ಳುತ್ತೇನೆ, ಮುಂದೆ?"

ಜವಿೂನ್ದಾರರೊಂದಿಗೆ ಬಹಳ ಜನ ಬಂದಿದ್ದಾರೆ. ಬಹಳ ಬಂದೂಕುಗಳಿವೆ. ನಾಲ್ಕು ಸೋಟರುಗಾಡಿಗಳಲ್ಲಿ ಬಂದಿದ್ದಾರೆ ಅವರೆಲ್ಲಾ."

ವಾಘ್ರರಾಜ "ಕಾಡಿನಲ್ಲೆಲ್ಲಾ ಈ ಸುದ್ದಿಯೆನ್ನುರುಹು. ಕಪೂ ನೊಂದಿಗೆ ನೀನು ಆ ಜನರ ಮೇಲೆ ಕಣ್ಣಿಟ್ಟಿರು. ಆ ವೇಳೆಗೆ ನಾನು ಅರಣ್ಯವನ್ನು ನೋಡುತ್ತೇನೆ" ಎಂದ.

"ಕಾಕಾ!"

ಕಾಕಾ ಹಾಂದ. ಅರಣ್ಯದ ಒಂದು ಸಂಸ್ಥಾನದಿಂದ ಇನ್ನೊಂದು ಸಂಸ್ಥಾನದ ವರೆಗೆ ಅವನು ಈ ಸಂಕಟಸುದ್ದಿಯನ್ನು ಅರುಹಿದ—"ಕಾ-ಕಾ! ಅರಣ್ಯ ಅಪಾಯದಲ್ಲಿದೆ!"

ಕಪೂ ಒಂದು ಹುಣಸೆಮರದ ಕೊಂಬೆಯ ಮೇಲೆ ಕುಳಿತು ಕೊಂಡು ಹುಣಸೆಕಾಯಿಯನ್ನು ತಿನ್ನುತ್ತಾ-ಉಗುಳುತ್ತಿದ್ದ. ಕಾಕಾ ನನ್ನುನೋಡಿ ನಕ್ಕು "ಸ್ವಲ್ಪ ಉಪ್ಪಿನಕಾಯಿ ತಿನ್ನುತ್ತಿದ್ದೇನೆ, ನಿನಗೂ ಬೇಕೇ ಕಾಕಾ?" ಎಂದ.

ಕಾಕಾ "ಮಹಾರಾಯಾ, ಉಪ್ಪಿನಕಾಯಿ-ಗಿಪ್ಪಿನಕಾಯಿಯನ್ನೆಲ್ಲಾ ನಿಲುವಿನಲ್ಲಿಡು, ಇಲ್ಲಿ ಅಪತ್ತೇ ಅವರಿಸಿದೆ" ಎಂದ ಕಾಕಾ.

ಸುದ್ದಿಯನ್ನರಿತು ಕೊಂಬೆಯಿಂದ ಕೊಂಬೆಗೆ ಹಾರುತ್ತಾ ಕಪೂ ಕಾಕಾನ ಜೊತೆಗೆ ಹೊರಟ. ನಿದ್ದೆಗಣ್ಣಿನ ಮಧ್ಯಾಹ್ನ ಇನ್ನಷ್ಟು ತೂಕಡಿಸತೊಡಗಿತು. ಅರಣ್ಯದ ಪ್ರಾಣಿಗಳೆಲ್ಲಾ ತಮ್ಮ ತಮ್ಮ ಗುಹೆ ಮತ್ತು ಬಿಲಗಳಿಗೆ ನುಗ್ಗಿ ತಮ್ಮ ಹಲ್ಲು ಮತ್ತು ಉಗುರುಗಳನ್ನು ಮಸೆಯತೊಡಗಿದುವು. ವಸಂತವಾಯುವಿನಲ್ಲಿ ಹಾಡುತ್ತಿದ್ದ ಶಾಲವನವು. ಯಾವುದೊ ಬಳಿಸಾರಿದ ಕ್ರೂರ ಘಟನೆಯ ಸಂಭಾವ್ಯತೆಯಿಂದ ಆತಂಕಿತವಾಗಿ ನೀಗವಾಗಿ ಉಸಿರಾಡತೊಡಗಿತು.

ಕಾಕಾ ಮತ್ತು ಕಪೂ ಜವಿೂನ್ದಾರನ ಬಂಗಲೆಯ ಅಂಚಿನಲ್ಲಿದ್ದ ಮಾವಿನ ಹೆಮ್ಮರದ ಮೇಲೆ ಕುಳಿತುಕೊಂಡುವು.

ಬಂಗಲೆಯ ಉದ್ಯಾನವನದಲ್ಲಿ ಇಬ್ಬರು ಸ್ತ್ರೀಪುರುಷರು ಕುಳಿತಿದ್ದರು. ದೊಡ್ಡ ಮೇಜಿನ ಮೇಲೆ ಟೀ ಮತ್ತು ಕೇಕ್ ಇಟ್ಟಿದ್ದಾರೆ. ಇನ್ನೊಂದು ಮೇಜಿನ ಮೇಲೆ ವಿಂಚುವ ಬಂದೂಕು ಮತ್ತು ಗುಂಡುಗಳ ಪೆಟ್ಟಿಗೆಯನ್ನಿಡಲಾಗಿದೆ. ಬೈರಾ ಮತ್ತು ಸೇವಕರು ಹತ್ತಿರದಲ್ಲಿಯೇ ನಿಂತಿದ್ದಾರೆ.

ಕಾಕಾ ಕಪೂನ ಕಡೆ ನೋಡಿ ಮೇಲುದನಿಯಲ್ಲಿ "ಬಂದೂಕು!" ಎಂದ.

ಕಪೂ ಕಣ್ಣು ಮುಚ್ಚಿಕೊಂಡು ನೈಯನ್ನು ಕೆರೆದುಕೊಂಡಿತು.

ಸ್ವಲ್ಪ ಹೊತ್ತಿನಲ್ಲಿ ಇವರು ಯಾರು-ಯಾರು ಎಂಬುದನ್ನರಿತರು. ಜವಿೂನ್ದಾರ ವಿನಾಯಕ ನಾಂದ್ರೇಕರನ ವಯಸ್ಸು ಸುಮಾರು ಮೂವತ್ತಿರಬೇಕು. ಸುಂದರನಾಗಿದ್ದು ಬುದ್ಧಿವಂತನಾಗಿದ್ದನು. ಜನರ ಮಾತಿನಿಂದ ಅವನು ಹೆಸರಾಂತ ಗುರಿತಪ್ಪದ ಶಿಕಾರಿ ಎಂದು ತಿಳಿಯಿತು. ಸುಮಾರು ನಲವತ್ತು ವರ್ಷ ವಯಸ್ಸಿನ ಮಿಸ್ಟರ್ ಸಾಟಕರ್, ದೊಡ್ಡ ಉದ್ಯಮಿ. ಆತನ ಹೆಂಡತಿ ನಂದಿನಿಯ ವಯಸ್ಸು ಸುಮಾರು ಇಪ್ಪತ್ತೈದು ವರ್ಷ. ಅಪೂರ್ವಸುಂದರಿ. ಒಬ್ಬ ಪರಂಗಿಯವ ಮತ್ತು ಆತನ ಮೇಮ್ ಕೂಡ ಈ ತಂಡದಲ್ಲಿದ್ದಾರೆ. ಅವರು ಯಾವುದೊ ವಿದೇಶಿ ಸಂಸ್ಥೆಯ ಕಡೆಯಿಂದ ಈ ದೇಶಕ್ಕೆ ಬಂದಿದ್ದಾರೆ. ಮಿಸ್ಟರ್ ಮತ್ತು ಮಿಸೆಸ್ ರಾಬರ್ಟ್ಸ್. ಅರನೆಯವ ಮಿಸ್ಟರ್ ಖನ್ನಾ, ಸರ್ಕಾರಿ ಆಫೀಸರು. ರಾಬರ್ಟ್ಸ್ ಮತ್ತು ಖನ್ನಾ ಇಬ್ಬರೂ ಉತ್ತಮ ಬೇಟೆಗಾರರು.

ಕಪೂ "ಈ ದಪ್ಪನೆ ಮನುಷ್ಯನ ಹೆಂಡತಿ ನೋಡುವುದಕ್ಕೆ ಬಹಳ ಚೆನ್ನಾಗಿ ಕಾಣಿಸುತ್ತಾಳೆ, ಅಲ್ವೆ ಕಾಕಾ?" ಎಂದು ಪಿಸುಗುಟ್ಟಿದ.

ಕಾಕಾ ದುರುಗುಟ್ಟಿಕೊಂಡು ನೋಡಿ "ಮನುಷ್ಯರನ್ನೇಕೆ ನೋಡುತ್ತೀಯೊ? ಎಂದ.

ಕಪೂ 'ಹ್ಹಿ....ಹ್ಹಿ....ಹ್ಹಿ' ಎಂದು ನಕ್ಕ.

ನಂದಿನಿ "ಲುಕ್, ಎ ಮಂಕಿ!" ಎಂದಳು.

ಕಪೂ "ನನ್ನನ್ನೇಕೆ ತೋರಿಸುತ್ತಿದ್ದಾಳೆ ಕಾಕಾ? ನನ್ನನ್ನೇನೂ ಬೈಯುತ್ತಾ ಇಲ್ಲಾ ತಾನೆ?" ಎಂದ.

ಕಾಕಾ "ನಿನ್ನನ್ನು ಮಂಕಿ ಅನ್ನುತ್ತಿದ್ದಾರೆ, ಅಂದರೆ ಕೋತಿ ಅಂತ" ಎಂದ,

ಇದ್ದಕ್ಕಿದ್ದಂತೆ ರಾಬರ್ಟ್ಸ್ ಒಂದು ಬಂದೂಕನ್ನು ಎತ್ತಿ ಅದರ ಕಡೆ ಗುಂಡು ಹಾರಿಸಿದ.

ಒಂದೇ ಕ್ಷಣದಲ್ಲಿ ಈ ಘಟನೆ ಜರುಗಿತು. ಗುಂಡು ತುಂಬಿದ ಬಂದೂಕನ್ನು ನೋಡಿದ ತಕ್ಷಣವೇ ಕಾಕಾ ಹಾರಿಹೋದ. ಕಪೂ ಕೂಡ ಇನ್ನೊಂದು ಕೊಂಬೆಗೆ ಹಾರಿದ. ಮಾವಿನ ಮರದ ಎಲೆಗಳು ಹರಿದುಹೋದುವು. ಅಕ್ಕಪಕ್ಕದ ಹಕ್ಕಿಗಳ ಬಂಡಗಳೆಲ್ಲಾ ಚೀತ್ಕರಿಸತೊಡಗಿದುವು. ಹಾರಾಡುತ್ತಿದ್ದ ಹಮ್ಮಿಗಳು ಇನ್ನಷ್ಟು ಮೇಲಕ್ಕೆ ಹಾರಿದುವು. ಬೇಟಗಾರರೆಲ್ಲಾ ಗಹಗಹಿಸಿ ನಕ್ಕರು

ಎಲೆಗಳಿಂದ ಮರೆಯಾಗಿದ್ದ ಒಂದು ಕೊಂಬೆಯ ಮೇಲೆ ಹಾರಿ ಕಪೂ "ನಾನು ಸ್ವಲ್ಪ ಕಾಡಿನಲ್ಲಿ ಹೋಗಿ ಅಡಗಿಕೊಳ್ಳುತ್ತೇನೆ ಕಾಕಾ. ಈ ಬಂಡರು ಮಹಾ ಕೊಲೆಪಾತಕರು" ಎಂದು ಪಿಸುಗುಟ್ಟಿದ.

" ಕಾ-ಕಾ ?"

ಕಪ್ಪೂ ಮಾಯವಾದ.

ತಾಂಬೂಳದ ಹಳ್ಳಿಯ ಜನರ ತಂಡವೊಂದು ಕಾಂಪೌಂಡಿನ ಹೊರಗೆ ಬಂದುನಿಂತುಕೊಂಡು ಜಮೀನ್ದಾರನಿಗೆ ಸಲಾಮು ಮಾಡಿದುದನ್ನು ಕಾಕಾ ನೋಡಿದ. ಆ ತಂಡದಲ್ಲಿ ಅನ್ನಾನೂ ಇದ್ದ. ಎಲ್ಲರೂ ಸೇರಿ ಸುಮಾರು ಏಳು - ಎಂಟು ಜನರಿದ್ದರು. ಅವರು ಹಳ್ಳಿಯ ಸಾಹಸಿಗಳು.

ಸಾಂದ್ರೀಕರನು ಅವರೊಡನೆ ಮಾತುಕತೆ ನಡೆಸಿದ. ಧ್ಯಾನ ವಿತ್ತು ಕೇಳಿದ ಮೇಲೆ ಜಮೀನ್ದಾರನು ಅವರನ್ನು ಮರುದಿನ ರಾತ್ರಿಗೆ ಬೀಟಿಂಗ್‌ಗೋಸ್ಕರ, ಇಪ್ಪತ್ತು ಮನುಷ್ಯರನ್ನು ಸಿದ್ಧಪಡಿಸಲು ಹೇಳುತ್ತಿರುವನೆಂದು ಕಾಕಾನಿಗೆ ಗೊತ್ತಾಯಿತು. ಹತ್ತು-ಹತ್ತು ಜನರ ಒಂದೊಂದು ತಂಡವಾಗುವುದು. ತಂಡದ ನಾಯಕರಿಗೆ ಮತ್ತು ಆಟ್ಟದ ಮೇಲೆ ಕುಳಿತ ಗುರಿಗಾರರ ಸಹಾಯಕ್ಕೋಸ್ಕರ ಇರುವವರಿಗೆ ಇಪ್ಪತ್ತು-ಇಪ್ಪತ್ತು ರೂಪಾಯಿ ಸಿಗುವುದು.

ಅನ್ನಾ ಆಟ್ಟದ ಮೇಲಿರುವನೆಂದು ನಿಶ್ಚಿತವಾಯಿತು.

ಅನ್ನಾನ ಮುಖ ಮಿಂಚತೊಡಗಿದುದನ್ನು ಕಾಕಾ ಗಮನಿಸಿದ. ತುಟಿಗಳ ಮೂಲೆಯಲ್ಲಿ ಮೆಲುನಗೆಯಾಡತೊಡಗಿತು. ಕಣ್ಣುಗಳಲ್ಲಿ ಕನಸೊಂದು ಸ್ಪಷ್ಟವಾಗಿ ಮೂಡಿತು.

ಮಾತುಕತೆ ಮುಗಿದ ಮೇಲೆ ಅವರು ಹೊರಟು ಹೋದರು. ಕಾಕಾ ಏನನ್ನೂ ಯೋಚಿಸದೆ ಅನ್ನಾನನ್ನು ಹಿಂಬಾಲಿಸಿದ.

ಅನ್ನಾ ತಂಡದಿಂದ ಮೂರವಾಗಿ ಹಳ್ಳಿಯ ದೊಡ್ಡ ಬಾವಿಯ ದಡದಲ್ಲಿ ನಿಂತುಕೊಂಡ. ಸ್ವಲ್ಪ ಹೊತ್ತಿನಲ್ಲಿಯೇ ಲಚ್ಚಿಯೂ ಅಲ್ಲಿಗೆ ಬಂದಳು. ಅನ್ನಾನನ್ನು ಅವಳು ನೋಡಿದ್ದಳು. ಬೇಗಬೇಗನೆ ಅನ್ನಾ ಹತ್ತಿರಬಂದು ನಕ್ಕು "ಈಗಾವ ಭಯವೂ ಇಲ್ಲ, ಲಚ್ಚಿ, ಶ್ರೀರಾಮನು ನಮ್ಮ ಕಡೆ ಈಗ ಕಣ್ಣಿರಿದಿದ್ದಾನೆ" ಎಂದ.

"ಏನಾಯಿತು ?"

"ಜಮೀನ್ದಾರನು ತನ್ನ ಸಂಗಾತಿಗಳೊಂದಿಗೆ ಬೇಟೆಯಾಡಲು ಬಂದಿದ್ದಾನೆ. ನಾನು ಅವನ ಬಳಿ ಇರುತ್ತೇನೆ. ಇಪ್ಪತ್ತು ರೂಪಾಯಿ ಕೂಲಿ ಸಿಗುವುದು."

"ನಿಜವಾಗಿಯೂ ?" ಲಚ್ಚಿಗೆ ನಂಬಿಕೆಯೇ ಉಂಟಾದಂತಾಗಲಿಲ್ಲ.

"ಹೌದು ಕಣೆ !"

"ನನ್ನಾಣೆಗೂ ?"

"ಹೌದು ಕಣೆ, ಹುಚ್ಚಿ !"

"ಹೇ ರಾಮ !"— ಲಚ್ಚಿಯ ಕಣ್ಣುಗಳಲ್ಲಿ ನೀರು ತುಂಬಿ ಬಂತು.

"ಈಗ ಹೋಗಲೆ ?"

"ಆದರೆ ನಾಳೆ ಯಾವಾಗ ಸಿಗೋದು ?"

"ನಾಳೆ ಹಗಲೆಲ್ಲಾ ಅವರ ಅಟ್ಟಕಟ್ಟುವುದರಲ್ಲಿಯೇ ಆಗುತ್ತೆ. ಅಮೇಲೆ ಸಾಯಂಕಾಲ ಅಲ್ಲಿಗೆ ಹೋಗಿ ಅಟ್ಟದ ಮೇಲೆ ಕುಳಿತುಕೊಳ್ಳಬೇಕು"

"ಹ್ಞೂಂ ಸರಿ. ಆ ಸುಟ್ಟ ತಾಳೆಮರದ ಬಳಿಗೊಂದು ಸಾರಿ ಬರಬೇಕು. ಸಂಜೆಯಾದ ಮೇಲೆ, ಜೌನಿಯಾ ಪರ್ವತದಾಚೆ ಸೂರ್ಯನು ಇಳಿದ ನಂತರ."

"ಹ್ಞೂಂ."

ಅವರಿಬ್ಬರ ನಗೆಮೊಗಗಳು ಕಾಕಾನಿಗೆ ಬಹಳ ಜೆನ್ನೆನಿಸಿದುವು. ಅರಣ್ಯದ ಹಿಂಸಾಪೂರ್ಣ ವಾತಾವರಣದಲ್ಲಿರುತ್ತಾನೆ. ವ್ಯಾಘ್ರರಾಜನ ಸ್ನೇಹಿತ, ಆದರೂ ಎಂಥಾ ಆನಂದ ಉಂಟಾಗುತ್ತದೆ ! ಕೋಗಿಲೆಯ ಮಾತೇ ಸರಿ !

ಕಾಕಾ ಮುಮುಕನಾಗಿದ್ದಾನೆ. ಅಗಸದಲ್ಲಿ ಎತ್ತರದಲ್ಲಿ ಹಾರಬಲ್ಲಷ್ಟು ಬಲವೂ ಈಗ ಇಲ್ಲ. ಆದರೂ ಅಗಸದ ಅಲ್ಪಸ್ವಲ್ಪ ರುಚಿಯನ್ನು ಸವಿದಿದ್ದಾನೆ. ಆಗಾಗ ಅವರ ಕರ್ಕಶ ಧ್ವನಿಯ ಮಧ್ಯೆಯೂ ಒಂದು ಮಧುರ ರಾಗಾಲಾಪನೆ ಮಾರ್ದನಿಗೈಯುತ್ತದೆ.

ನೆಲ್ಲನೆಲ್ಲಗೆ ಸಾಯಂಕಾಲವಾಯಿತು. ಇರುಳು ಬಂದಿತು. ಶಾಲವನದ ನೆಲೆ ನಕ್ಷತ್ರಗಳು ಮಿನುಗುಟ್ಟತೊಡಗಿದುವು. ಬಾವಲಿಗಳು ಹಾರಿ ಹೋದುವು. ಹಗಲು ಹಾರುವ ಹಕ್ಕಿಗಳು ತಮ್ಮತಮ್ಮ ಅರಣ್ಯನಿವಾಸಗಳಿಗೆ ಹಿಂದಿರುಗಿದುವು.

ಕಾಕಾ ಹಿಂದಿರುಗಿ ಬಂದು ವಾಘ್ರರಾಜನ ಸಭೆಯಲ್ಲಿಳಿದ.

"ಕಾಕಾ !"

"ಏನು ಸಮಾಚಾರ ? ಏನು ಸಮಾಚಾರ ?"

ವ್ಯಾಘ್ರರಾಜ ಮತ್ತು ಉಳಿದವರೆಲ್ಲರೂ ಅವನ ಕಡೆ ನೋಡಿದರು. ಕತ್ತಲಲ್ಲಿ ಎಲ್ಲರ ಕಣ್ಣುಗಳೂ ಹೊಳೆಯತೊಡಗಿದುವು.

ಕಾಕಾ ಎಲ್ಲವನ್ನೂ ವರದಿ ಮಾಡಿದ :

"ಕಿಚ್-ಕಿಚ್-ಕಿಚ್ !" ಕಪ್ಪೂ ಕೊಂಬೆ-ಎಲೆಗಳ ಮೇಲೆ ಉಯ್ಯಾಲೆಯಾಡುತ್ತಾ ಬಂದ.

"ಹಿ-ಹಿ-ಹಿ-ಹಿ-ಹಿ-ಹಿ"

"ಏನಾಯಿತೊ ಕಪ್ಪೂ?" ಎಂದ ವ್ಯಾಘ್ರರಾಜ.

ಕಪ್ಪೂ "ಕಳ್ಳ ನನ್ನ ಮಕ್ಕಳಿಗೆ ಒಳ್ಳೆ ಪಾಠಕಲಿಸಿ ಬಂದೆ !" ಎಂದ ಕಪ್ಪೂ.

"ಅಂದರೆ ?"

"ಆಗ ಗುಂಡು ಹಾರಿಸಲಿಲ್ಲವೆ ಆದಕ್ಕೋಸ್ಕರ ಓಡಿ ಬಂದಿದ್ದೆ. ಕತ್ತಲಾದ ಮೇಲೆ ಹೋಗಿ ನೋಡಿದರೆ, ಹೆಂಗುಸರು-ಗಂಡಸರು

ಎಲ್ಲಾ ಆನಂದದಿಂದ ಶರಾಬು ಕುಡಿಯುತ್ತಿದ್ದಾರೆ. ಎಂತಹುದೋ ಹಾಡು ಹೇಳುತ್ತಿದ್ದಾರೆ, ಹೊ-ಹುಲೋಡ್-ಹಿ-ಹಿ-ಹಿ!"

"ಆ ಮೇಲೆ?"

"ಇನ್ನೊಂದು ಸ್ವಾರಸ್ಯವಾದ ಸಂಗತಿ. ಜಮಿನ್ದಾರನ ಕಣ್ಣು ಪಾಟಕರನ ಹೆಂಡತಿಯ ಮೇಲಿದೆ."

"ಕಾ-ಕಾ! ಅವಳು?"

"ನೀಚಳು! ಕೆಟ್ಟ ಹೆಣ್ಣು! ಒಮ್ಮೆ ಜಮಿನ್ದಾರನ ಕಡೆಗೆ ಓರೆಗಣ್ಣಿನಿಂದ ನೋಡಿದಳು. ಆಹಾ! ಇದಕ್ಕೇ ಏನು ಸಭ್ಯತೆ ಅನ್ನುವುದು! ಸಮಯ ಸಿಕ್ಕಿಲ್ಲಾಂತ ಕಾಣಿಸುತ್ತೆ. ಅದಕ್ಕೇ ಈ ಉಪಾಯವನ್ನು ಯೋಜಿಸಿದ್ದಾರೆ."

"ಆದರೆ ನೀನೇನು ಮಾಡಿದೆ?"

"ಇನ್ನೇನು ಮಾಡುವುದು? ಬಹಳ ಗಲಾಟೆಯಾಗತೊಡಗಿದಾಗ, ಎರಡು ಮಣ್ಣಿನ ಹೆಂಟೆಗಳನ್ನೆಸೆದೆ."

"ಯಾರಿಗಾದರೂ ತಗುಲಿತೆ?"

"ಅದೆಲ್ಲಾ ನೋಡೋಕೆ ನಾನಿದ್ದರೆ ತಾನೆ? ಗುಂಡುಹಾರಿಸಿ ಬಿಟ್ಟಾರೆಂದು, ನಾನು ಹೆಂಟೆಯನ್ನೆಸೆಯುತ್ತಲೇ ಓಡಿ ಬಂದೆ—" ನಗುತ್ತಾ ನಗುತ್ತಾ ಕಪೂ ಮಾತು ನಿಲ್ಲಿಸಿದ. ಎಲ್ಲರೂ ಉತ್ತೇಜಿತರಾಗಿ ಚಿಂತಿಸತೊಡಗಿದರು. ಹೆಚ್ಚು ನಕ್ಕಿದುದರಿಂದ ಬೈಗಳು ಕೇಳಲಿಲ್ಲ.

ವ್ಯಾಘ್ರರಾಜ "ನಾಳೆ ಬೇಟೆಯಿದೆ. ಎಚ್ಚರಿಕೆ! ನೀವೆಲ್ಲರೂ ಸಿದ್ಧರಾಗಿರಿ. ನಮ್ಮ ಕಾಡಿನ ವಾನರರಕ್ಷಣೆಯನ್ನು ನಾವು ಮಾಡಲೇಬೇಕು" ಎಂದ.

ಬೇಗನೆ ಸಭೆಯನ್ನು ವಿಸರ್ಜಿಸಲಾಯಿತು. ಅಂದು ಪುನಃ ಸೇರಲಿಲ್ಲ. ಮಿಂಚುಹುಳುಗಳು ಅಂದಿನಿರುಳು ಅಂಜುತ್ತಾ-ಅಂಜುತ್ತಾ ಮಿಂಚತೊಡಗಿದುವು. ಜೀರುಂಡೆಗಳು ಕಾಣೆಗಳಿಗೆ ಹೋಗ ಕೊಡಗಿದುವು. ಅರಣ್ಯದ ಸೈನಿಕರು ಮಾತ್ರ ಭಯಂಕರ ಧ್ವನಿಯಲ್ಲಿ ಗರ್ಜಿಸತೊಡಗಿದರು. ಪರಸ್ಪರರನ್ನು ಎಚ್ಚರಿಸುತ್ತಾ ಬೇಟೆಗಾರರನ್ನು ಬೆದರಿಸತೊಡಗಿದರು. ಆ ರಾತ್ರಿ ಶಾಲವನದ ಮೇಲೆದ್ದು ಬಂದ ಚಂದ್ರನ ಚೂರು ಭಯದಿಂದ ಬೆಳುಪೇರಿದಂತಿತ್ತು. ಅರಣ್ಯದ ಪತ್ರಾವರಣವನ್ನು ಸೀಳಿಕೊಂಡು, ಅಭ್ರಕದ ಚೂರಿನಂತೆ ಮಿರಿದ ಎಲೆಗಳ ಮೇಲೆ ಬೆಳಕನ್ನು ಬೀರಬಲ್ಲವನಾಗಲಿಲ್ಲ.

ಮಾರನೆಯ ದಿನ ಮಧ್ಯಾಹ್ನ ಕಪೂ ಮತ್ತು ಕಾಕಾ ಅಡ್ಡಾಡಿ, ಎಲ್ಲೆಲ್ಲಿ ಆಟ್ಟಗಳನ್ನು ಕಟ್ಟುತ್ತಿದ್ದಾರೆಂಬುದನ್ನು ನೋಡತೊಡಗಿದರು. ಅರಣ್ಯದ ದಕ್ಷಿಣದ ಕಡೆಗೆ ದಟ್ಟವಾದ ಮೂಲೆಯಲ್ಲಿ ಇನ್ನೂರು ಗಜ ದೂರದಲ್ಲಿ, ಅರ್ಧವೃತ್ತಾಕಾರ ರೂಪದಲ್ಲಿ ಮರಗಳ ಕೊಂಬೆಗಳ ಮೇಲೆ ಮೂರು ಆಟ್ಟಗಳನ್ನು ಕಟ್ಟಲಾಯಿತು. ಮೊದಲನೆಯದರಲ್ಲಿ ಜಮಿನ್ದಾರ ಸಾಂಸ್ಕೇಕರ್ ಮತ್ತು ನಂದಿನಿ ಇರುವರು; ಅವರ ಸಹಾಯಕ್ಕೆ ಅನ್ನಾ ಇರುತ್ತಾನೆ. ಎರಡನೆಯದರಲ್ಲಿ ಖನ್ನಾ, ಪಾಟಕರ್ ಮತ್ತು ಒಬ್ಬ ಹೆಳ್ಳಿಯವ ಇದ್ದರು. ಪಾಟಕರ ಶಿಕಾರಿಯಲ್ಲ, ನಂದಿನಿಗೆ ಬಂದೂಕು ಹಾರಿಸಲು ಬರುವುದಿಲ್ಲ. ಅದುದರಿಂದ ಅವರು ಒಬ್ಬೊಬ್ಬ ಶಿಕಾರಿಯೊಂದಿಗಿರಬೇಕಾಗಿ ಬಂತು. ಬೇಟೆಗಾರನಲ್ಲದಿದ್ದರೂ ಬೇಟೆಯನ್ನು ನೋಡುವುದರಲ್ಲಿ ಬಹಳ ಸ್ವಾರಸ್ಯವಿರುತ್ತದೆ ಎಂಬುದನ್ನು, ತಾಂಖಾಳಕ್ಕೆ ಬಂದಮೇಲೆ ಪಾಟಕರ ಅರಿತುಕೊಂಡ. ಅದರೂ ಅತ್ಯರಕ್ಷಣೆಗೋಸ್ಕರ ಪ್ರತಿಯೊಬ್ಬರ ಕೈಯಲ್ಲಿಯೂ ಬಂದೂಕು ಇರಲೇಬೇಕು.

ಸುದ್ದಿಯನ್ನು ಸಂಗ್ರಹಿಸಿ ವ್ಯಾಘ್ರರಾಜನಿಗೆ ತಿಳಿಸಲು ಹೊರಟುಹೋದ. ಕಾಕಾ ಒಂದು ಕೊಂಬೆಯ ಮೇಲೆ ಕುಳಿತುಕೊಂಡು ಸ್ಥಿತಿ-ಗತಿಯನ್ನೆಲ್ಲಾ ನೋಡತೊಡಗಿದ. ಅನ್ನಾ ಅಲ್ಲಿ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದ.

ಸಂಜೆಯಾದಾಗ ಅನ್ನಾ ಬಂಗಲೆಗೆ ಹೊರಟುಹೋದ.

ಜೌನಿಯಾ ಪರ್ವತದಾಚೆ ಸೂರ್ಯನು ಇಳಿದಿದ್ದ. ಕಾಕಾನಿಗೆ, ಲಚ್ಚಿ ಆ ಪುಟ್ಟ ತಾಳೆಮರದ ಬಳಿ ಬರುವಳಲ್ಲವೆ ಎಂದು ಜ್ಞಾಪಕ ಬಂತು. ಆದರೆ ಎಲ್ಲಿ? ಅನ್ನಾ ಇಲ್ಲಿ ಒಂದರ ಹಿಂದೊಂದು ಕೆಲಸವನ್ನು ಮಾಡುತ್ತಲೇ ಇದ್ದಾನೆ.

ಕಾಕಾನಿಗೆ ಒಮ್ಮೆ ಲಚ್ಚಿಯ ಬಳಿಗೆ ಹೋಗಿ ಅಲ್ಲಿ ಅವಳೊಬ್ಬಳೇ ಏನು ಮಾಡುತ್ತಿದ್ದಾಳೋ ನೋಡಬೇಕೆನಿಸಿತು.

"ಕಾ-ಕಾ!" ಎನ್ನುತ್ತಾ ಅಲ್ಲಿಂದ ಹಾರಿಹೋದ.

ಪುಟ್ಟ ತಾಳೆಮರದ ಮೇಲೆ ಕುಳಿತುಕೊಂಡು ಕೆಳಗೆ ಬಾಗಿ ನೋಡಿದ. ಮರಕ್ಕೆ ಒರಗಿಕೊಂಡು ಲಚ್ಚಿ ಕುಳಿತಿದ್ದಳು. ಏನನ್ನೋ ಯೋಚಿಸುತ್ತಿದ್ದಳು. ಏನನ್ನು? ಈ ವಿಚಿತ್ರ ಹಿಂಸ್ರಭೂಮಿಯಲ್ಲಿ ಸಂಚಾರಮಾಡಲು ಅವಳೊಳಗಿನಿಂದ ಹೊರಬರಬಯಸುವ ಅವಳ ಪ್ರೇಮದ ಸಸಿಯ ಹೃದಯಸ್ಪಂದನವನ್ನೇನೂ ಕೇಳುತ್ತಿಲ್ಲತಾನೆ!

ಕೋಗಿಲೆ ಬಂದು ಮರದ ಮೇಲೆ ಕುಳಿತುಕೊಂಡು "ಕುಹೂ ಕುಹೂ!" ಎಂದಿತು.

ಲಚ್ಚಿ ಬೆಚ್ಚಿದವಳಂತಾಗಿ ಬಳಿಕ ನಕ್ಕು "ಕುಹೂ, ಕು-ಹೂ!" ಎಂದಳು.

ಎಷ್ಟೋ ಕ್ಷಣಗಳುರುಳಿದವು. ಹಗಲಿನ ಬೆಳಕು ಮ್ಲಾನವಾಯಿತು. ಲಚ್ಚಿ ಎರಡು ಹೆಜ್ಜೆ ಮುಂದೆ ಬಂದು ಪುನಃ ನಿಂತಳು. ಏನನ್ನೋ ಯೋಚಿಸಿ ಕುಳಿತುಕೊಂಡಳು. ಬಳಿಕ ತಲೆ ಜಲ್ಲಾಡಿಸಿ, ಎದ್ದು ಮೆಲ್ಲಮೆಲ್ಲಗೆ ಹೊರಟುಹೋದಳು.

ಕೋಗಿಲೆ ಕಾಕಾನನ್ನು ನೋಡಿ "ಬಹಳ ಒಳ್ಳೆಯ ಹುಡುಗಿ, ತಾಂಖಾಳ ಗ್ರಾಮದ ಸಾಕ್ಷಾತ್ ಲಕ್ಷ್ಮಿಯಿದ್ದಂತೆ" ಎಂದಿತು.

ಕಾಕಾ ತಲೆಯಲ್ಲಾಡಿಸಿದ, ಆದರೆ ಮಾತನಾಡಲಿಲ್ಲ. ತನ್ನ ಕರ್ಕಶ ಧ್ವನಿಯಿಂದ ಅವಳ ಪ್ರಶಂಸೆಯೂ ಕೆಡುಕೆನಿಸಿದರೆ?

ಈಗ ಹಾರೋಣ, ಈಗ ಹಾರೋಣ—ಎಂದು ಕಾಕಾ ಯೋಚಿಸುತ್ತಿದ್ದಂತೆಯೇ ಅನ್ನಾ ಓಡೋಡಿ ಬರುತ್ತಿದ್ದುದು ಕಾಣಿಸಿತು.

"ಲಚ್ಚಿ! ಲಚ್ಚಿ!"—ಮರದ ಕೆಳಗೆ ಬಂದು ಅವನು ಬಹಳ ಸಾರಿ ಕೂಗಿದ. ಬಳಿಕ ತುಟಿಗಳಲ್ಲಿಯೇ "ಬಹುಶಃ ಹೊರಟು ಹೋಗಿರಬೇಕು" ಎಂದ.

ಕಾಕಾ "ಕಾ-ಕಾ!" ಎಂದ.

ಅನ್ನಾನಿಗೆ ತಿಳಿಯಲಿಲ್ಲ. ಬಡಬಡಿಸುತ್ತಾ "ಹೋಗಲಿಬಿಡು, ಭೆಟ್ಟಿ ಮಾಡಿಯಾದರೂ ಏನು ಮಾಡಬೇಕು? ಕಾಸು, ಕೂಲಿ ಸಿಕ್ಕಮೇಲೆ ಮಾತಾಡುವುದಕ್ಕೆ ಬೇಕಾದಷ್ಟು ಸಮಯವಿರುತ್ತೆ" ಎಂದ.

ಯಾವ ರೀತಿ ಬಂದಿದ್ದನೊ ಹಾಗೆಯೇ ಓಡುತ್ತಾ-ಓಡುತ್ತಾ ಹೊರಟುಹೋದ.

ಗೋಧೂಳಿಯ ವಿಚಿತ್ರ ಬೆಳಕಿನಲ್ಲಿ ಆ ಸುಟ್ಟ ಮರದ ಮೇಲೆ ಕತ್ತಲುಹರಡುವವರೆಗೆ ಯಾವುದೋ ಅರಿಯದ ನಶೆಯಲ್ಲಿ ಆತ್ಮವಿಸ್ಮೃತನಾಗಿ ಕುಳಿತಿದ್ದ ಕಾಕಾ.

ಬಳಿಕ ರಾತ್ರಿ ಬಂತು. ಬೇಟೆಯ ರಾತ್ರಿ.

ವ್ಯಾಸ್ಪೆರಾಜನು ಆಜ್ಞೆ ಮಾಡಿದ—"ಎಲ್ಲರೂ ತಮ್ಮ ತಮ್ಮ ಬೀಡಾರದಲ್ಲಿ ಹೋಗಿ ಇರಿ. ಅಡ್ಡಾಡುವುದು, ಸದ್ದು ಮಾಡುವುದು ಎಲ್ಲಾ ಬಂದ್."

ಅಂದು ವಾತಾವರಣದಲ್ಲಿ ಬಹಳ ಧಗೆಯಿತ್ತು. ಸಂಜೆಯ ಬಳಿಕ ಶಾಲವನದ ಒಂದು ಎಲೆಯೂ ಅಲುಗಾಡಲಿಲ್ಲ. ತಾಂಬೂಳದ ಅರಣ್ಯದಲ್ಲಿ ಸ್ತಬ್ಧತೆಯಾವರಿಸಿತ್ತು.

ಕಾಕಾನಿಗೆ ಅಟ್ಟಗಳ ಮೇಲೆ ಅಡ್ಡಾಡಿಕೊಂಡು ಬರಲು ಅಣತಿಯನ್ನೀಯಲಾಯಿತು ಶಿಪೂವನ್ನು ವ್ಯಾಘ್ರರಾಜನ ಪ್ರಹರಿಯನ್ನಾಗಿ ನಿಯಮಿಸಲಾಯಿತು.

ಜಮಿನ್ದಾರನೊಂದಿಗೆ ಅನ್ನಾ ಕುಳಿತಿದ್ದ ಮರದಮೇಲೆ ಹೋಗಿ ಕಾಕಾ ಕುಳಿತುಕೊಂಡ ಮರದ ಕೊಂಬೆಯ ಮೇಲೆ ಸದ್ದಿಲ್ಲದೆ ಕುಳಿತುಕೊಂಡ. ಸಾಂದ್ರೇಕರನು ನಂದಿನಿಗೆ ಇಂಗ್ಲೀಷಿನಲ್ಲಿ ಹೇಳುತ್ತಿದ್ದುದು ಕೇಳಿಸಿತು: "ನಿನಗೋಸ್ಕರವೇ ಈ ಎಲ್ಲಾ ಅವಾಂತರ."

"ಅಂದರೆ?" ನಂದಿನಿ ನಕ್ಕು ಕೇಳಿದಳು.

"ನೀನೇ ಅದನ್ನು ಅರಿತುಕೋ!"

"ನಾನಂತೂ ಅತಿಮೂರ್ಖಳು."

"ನಿನ್ನನ್ನು ಮೂರ್ಖಳೆಂದುಕೊಳ್ಳುವಷ್ಟು ಮೂರ್ಖನಲ್ಲ ನಾನು, ನಂದಿನಿ! ನಿಜ ಹೇಳುತ್ತೇನೆ—ನಿನ್ನ ಕಂಗಳಲ್ಲಿಯ ಆಹ್ವಾನವನ್ನು ಓದಿಯೇ ನಾನು ಈ ಮೃಗಯಾವಿಹಾರವನ್ನು ಆಯೋಜಿಸಿದೆ."

"ಅಂದರೆ ನೀವು ನನ್ನನ್ನು ಬೇಟೆಯಾಡಬೇಕೆಂದಿದ್ದೀರಿ?" ನಂದಿನಿ ನಿರ್ಲಜ್ಜನಗೆಯನ್ನು ಬೀರಿದಳು.

"ಹಾಗೆಯೇ ಇದ್ದರೆ?"

"ಮೊದಲು ಹುಲಿಯನ್ನು ಬೇಟೆ ಆಡಿ, ಬಳಿಕ ಯೋಚಿಸಿ ನೋಡುತ್ತೇನೆ."

ಕಾಕಾ ಥಡಥಡಿಸಿ ಕುಳಿತುಕೊಂಡ. ಬಗೆಬಗೆಯ ಬೇಟೆಗಳಾಗುತ್ತವೆ ಈ ಅರಣ್ಯದಲ್ಲಿ. ಸರಿ, ಸರಿ.

ಸಮಯ ಉರುಳುತ್ತಿದೆ. ರಾತ್ರಿ ಹೆಚ್ಚುತ್ತಿದೆ.

ನಂದಿನಿ "ಬೇಟೆಂಗ್ ಯಾವಾಗ ಶುರುವಾಗುತ್ತೆ?" ಎಂದಳು.

ರೇಡಿಯಂ ಇದ್ದ ಕೈಗಡಿಯಾರವನ್ನು ನೋಡಿಕೊಂಡು ಸಾಂದ್ರೇಕರ್ "ಇನ್ನೂ ಒಂದು ಘಂಟೆಯಿದೆ" ಎಂದ.

"ಈ ಹಳ್ಳಿಯವನನ ಎದುರಿಗೆ ಮಾತನಾಡುವುದಕ್ಕೇ ಆಗುವುದಿಲ್ಲ."

"ಆದರೆ ಕಾಡಿನಲ್ಲಿರುವ ವಸ್ತುಗಳನ್ನೆಲ್ಲಾ 'ಚಾನ್ಸ್'ನ ಮೇಲೆಯೇ ಬಿಟ್ಟಿರುವುದಕ್ಕಾಗುವುದಿಲ್ಲ, ನಂದಿನಿ! ಇಲ್ಲಿ ಸದಾ ಎಚ್ಚರವಾಗಿರದಿದ್ದರೆ ತೊಂದರೆಗೆ ಗುರಿಯಾಗಬೇಕಾಗುತ್ತೆ."

"ಹ್ಞೂ, ಬಹಳ ಜಾಯಮಾರಿಕೆಯಾಗಿದೆ."

"ನೀರು ಕುಡಿಯುವೆಯಾ?"

"ಹ್ಞೂಹ್ಞೂ!"

"ಸ್ವಲ್ಪ ವಿಸ್ಕಿ?"

"ಹ್ಞುಹ್ಞೂ!"

"ಸ್ವಲ್ಪ ಕುಡಿ!"

"ಆದರೆ ನನಗೆ ಬಹಳ ಭಯವಾಗುತ್ತೆ."

"ಇನ್ನಷ್ಟು ಹತ್ತಿರ ಬಾ!"

ಅನ್ನಾನಿಗೆ ಮದ್ಯದ ವಾಸನೆ ಬಂದಿತು. ಮಧುರೋಷ್ಣವಾಗಿತ್ತು. ಜಮಿನ್ದಾರರ ಮತ್ತು ಈ ಹೆಂಗುಸಿನ ಹಾವ-ಭಾವವನ್ನು ಅವನು ಚೆನ್ನಾಗಿ ಗೃಹಿಸಿದ್ದ. ಇದರಿಂದ ತನಗೇನು? ಈ ಅರಣ್ಯದ ಮಡಿಲಲ್ಲಿ ಅವನು ಅನೇಕ ನಾಯಿ, ಕುರಿ ಮತ್ತು ಇತರ ಪಶುಗಳು ಹೀಗೆ ಮಾಡುವುದನ್ನು ನೋಡಿದ್ದಾನೆ. ಅದೇ ಜಂತುಪ್ರಾಣಿಗಳಲ್ಲಿಂದ ಎರಡು, ಸಭ್ಯ ಮನುಷ್ಯರ ಉಡುಪನ್ನು ತೊಟ್ಟು ಈ ಅಟ್ಟದ ಮೇಲೂ ಬಂದು ಕುಳಿತಿವೆ.

"ಆ ಖಾಟಕರನ ಸಲುವಾಗಿ, ನಿನ್ನೊಂದಿಗೆ ಒಂದೆರಡು ಮಾತಾದಲೂ ಆಗುವುದಿಲ್ಲ."

"ಅಂತೆಯೇ ಈ ಬೇಟೆ ...."

"ನೀನು ನಡುಗುತ್ತಿರುವೆಯೇಕೆ?"

"ಭಯವೆನಿಸುತ್ತದೆ."

"ಭಯ?"

"ಹ್ಞೂ, ಭಯದಂತಹ ಭಾವ."

"ನಿಕೊ, ಗೊತ್ತಿಲ್ಲ!"

ಹೂಳಿ-ಹೂಳಿ-ಹೂಳಿ—ನರಿ ಕೂಗಿಕೊಂಡಿತು.

ತರಗೆಲೆಗಳ ಮೇಲೆ ಏನೋ ಹರಿದುಹೋಯಿತು—ಹಾವು!

ಎಲ್ಲಿಯೋ ದೂರದಿಂದ ಜಿಂಕೆಯ ದನಿ ಬಂದಿತು. ಜೀರುಂಡೆಯ

ಝೇಂಕಾರದೊಂದಿಗೆ ವಿಸ್ಮಯದಿಂದ ಉತ್ತೇಜಿತವಾದ ಸ್ನಾಯು-ಮುಂಡಲದಲ್ಲಿ ಒಮ್ಮೆ ಅಲೆಯಾಡಿತು. ಮಿಂಚುಹುಳುಗಳು ಮಿಂಚುತ್ತಿದ್ದುವು. ಹ್ಯಾಟಿನಿಂದ ಮುಚ್ಚಿಕೊಂಡು ನಾಂದ್ರೇಕರನು ಒಂದು ಸಿಗರೇಟನ್ನು ಹೊತ್ತಿಸಿದ. ನಶೆಯೇರುತ್ತಿತ್ತು.

ಇದ್ದಕ್ಕಿದ್ದಂತೆ ದೂರದಲ್ಲಿ ಬೀಟಿಂಗ್ ಆರಂಭವಾಯಿತು. ಹತ್ತು-ಹತ್ತು ಜನರ ಮೂರು ತಂಡಗಳು ಅರಣ್ಯದೊಳಗಿನಿಂದ ಅರ್ಧವೃತ್ತಾಕಾರ ರೂಪದಲ್ಲಿ ಇವರ ಕಡೆ ಬರುವುವು. ಪ್ರತಿ ತಂಡದ ಬಳಿ ಭರ್ಜಿಯಲ್ಲದೆ ಒಂದೊಂದು ಬಂದೂಕೂ ಇವೆ.

ಒಬ್ಬರು ಡೋಲು ಬಾರಿಸುತ್ತಿದ್ದಾರೆ, ಇನ್ನೊಬ್ಬರು ದಬ್ಬಿ, ಮತ್ತೊಬ್ಬರು ಮುರಿದ ಬಿದಿರು.

ಎಲ್ಲರೂ ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದಾರೆ:

ಹೋಯಿ-ಹೋಯಿ ! ಹೋಯಿ-ಹೊಯಿ ! ಹಾ ರೇ ರೇ ರೇ !

ದನಿಯನ್ನು ಕೇಳಿ ಕಾಕಾ ನಡುಗಿದ.

"ಬೀಟಿಂಗ್ ಆಗುತ್ತಿದೆ" ಎಂದ ನಾಂದ್ರೇಕರ್.

"ಎಷ್ಟು ಹೊತ್ತಿಗೆ ಬರುತ್ತೆ ಹೂಲಿ ?"

"ಇನ್ನೂ ಟೈಮಿದೆ."

"ನನಗಂತೂ ಬಹಳ ಹೆದರಿಕೆಯಾಗುತ್ತೆ."

"ಹತ್ತಿರ ಬಾ, ಏನೂ ಹೆದರಬೇಡ ನಂದಿನಿ! ನಾನು ಎಷ್ಟೋ ಹುಲಿಗಳನ್ನು ಕೊಂಮಹಾಕಿದ್ದೇನೆ."

'ಕಿಚ್ ಕಿಚ್ ಕಿಚ್ ! ಕಿಚ್ ಕಿಚ್ !' ಕಪೂ ವ್ಯಾಳ್ಪ್ರರಾಜನ ಮೇಲಿನ ಕೊಂಬೆಯ ಮೇಲೆ ಹೋಗಿ ಕುಳಿತ. "ಕೇಳಿದೆಯಾ ವ್ಯಾಳ್ಪರಾಜ?" ಎಂದ.

ವ್ಯಾಳ್ಪ್ರಿಣಿಯನ್ನು ಬಳಿಗೆಳೆದುಕೊಂಡು ಕತ್ತು ತಿರುಗಿಸಿ ವ್ಯಾಳ್ಪ್ರರಾಜನು ಗಂಭೀರ ಸ್ವರದಲ್ಲಿ "ಕೇಳಿದೆ" ಎಂದ.

"ಭರ್ಜಿ, ಬಂದೂಕಿನೊಂದಿಗೆ ಪಂಜನ್ನು ಹೊತ್ತಿಸಿಕೊಂಡು ದಬ್ಬ-ಡೋಲನ್ನು ಬಾರಿಸುತ್ತಾ ಬರುತ್ತಿದ್ದಾರವರು."

"ಬರಲಿ ಬಿಡು!"

"ಅದರೆ ಧ್ವನಿ ಇನ್ನೂ ಏರುತ್ತಿದೆ ಮಹಾರಾಜಾ."

ವ್ಯಾಳ್ಪ್ರರಾಜ ಉದ್ವೇಗಗೊಂಡ. ಹೌದು, ದನಿಯೇನೊ ಏರುತ್ತಲೇ ಇದೆ.

ತಾಂಬಾಳದ ಜಮಿನ್ದಾರನು ಅರಣ್ಯದ ಒಡೆಯನಾಗಲು ಬರುತ್ತಿದ್ದಾನೆ.

ಟನ್-ಟನ್-ಟನ್ ಕ್ರಾಂಗ್!....

ಡುಗ್-ಡುಗ್-ಡುಗ್!....

ಫಟ್-ಫಟ್-ಫಟ್!....

ಹೋಯಿ-ಹೋಯಿ, ಹೋಯಿ-ಹೋಯಿ !....

ಜಿಂಕೆಗಳ ಗುಂಪು ಓಡಿಹೊಗುತ್ತಿದೆ. ಹಕ್ಕಿಗಳು ಚೀರತೊಡಗಿದುವು. ನರಿಗಳು ಓಡೋಡಿ ಹೋಗುತ್ತವೆ. ಕಾಡು ಹಂದಿಗಳು ಸಿಕ್ಕಿನ ಕಡೆ ಓಡಿಹೋಗುತ್ತವೆ.

ಪರಾತ್ಪನೆ ದೂರದಲ್ಲಿ ಓಡಿ ಬರುತ್ತಿರುವ ಬೆಳಕು ಕಾಣಿಸಿತು-ಪಂಜು ! ಬೀಟರುಗಳು ಬರುತ್ತಿದ್ದಾರೆ.

"ಓಡಿ ಮಹಾರಾಜ!" ಎಂದ ಕಪೂ.

ವ್ಯಾಳ್ಪ್ರರಾಜನ ಕಣ್ಣುಗಳು ಮಿಂಚಿದುವು. " ಓಡಬೇಕೆ? ನಾನು"

"ಮೂರ್ಖತನ ಬೇಡ ಮಹಾರಾಜ. ಸಮಯ ಸಿಕ್ಕಾಗ ಅವರ ಗೋಣು ಮುರಿಯುವುದಕ್ಕೋಸ್ಕರ ಈಗ ನೀನು ಓಡಲೇಬೇಕು."

ಹಾಯಿ-ಹೋಯಿ-ಹಾಯಿ, ಹಾಯಿ-ಹೋಯಿ-ಹಾಯಿ!....

ವ್ಯಾಳ್ಪ್ರರಾಜನು ದೂರದಲ್ಲಿ ಉರಿಯುತ್ತಿದ್ದ ಬೆಳಕನ್ನು ನೋಡಿ ವ್ಯಾಳ್ಪ್ರಿಣಿಗೆ "ನಡೆ ಸುಂದರಿ, ಹೋಗೋಣ; ಕಪೂನ ಮಾತೇ ಸರಿ! ಕಪೂ ನೀನು ಮುಂದೆ ಮುಂದೆ ನಡೆ" ಎಂದ.

ಕಪೂ ಕೈ ಜೊಡಿಸಿ "ಇಲ್ಲ, ಮಹಾರಾಜ, ಈ ಸಾರಿ ನೀನೇ ಹೋಗಿ. ನನಗಂತೂ ಬಂದೂಕನ್ನು ನೋಡುತ್ತಲೇ ಭಯವುಂಟಾಗುತ್ತೆ."

ಕಪೂನ ಮಾತು ಕೇಳಿ, ಹಲ್ಲು ಕಡಿದು, ರಕ್ತದ ಗುಟುಕನ್ನು ಕುಡಿದು ಇಬ್ಬರೂ ಓಡಿದರು. ಹೆಚ್ಚು ಸಮಯವಿರಲಿಲ್ಲ.

ಟನ್ ಟನ್ ಕ್ರಾಂಗ್ ! ಟನ್ ಟನ್ ಕ್ರಾಂಗ್ ! ಟನ್ ಟನ್ ಟನ್ ಕ್ರಾಂಗ್ !

ಡುಗ್ ಡುಗ್ ಡುಗ್ ! ಡುಗ್ ಡುಗ್ ಡುಗ್ ! ....

ಗದ್ದಲ ಮುಂದುವರಿಯುತ್ತಿತ್ತು— ಶಾಲವನಗಳಿಗೆ ಡಿಕ್ಕಿ ಹೊಡೆದು ಒಂದು ಬಗೆಯ ವಿಚಿತ್ರವೃತ್ತದಲ್ಲಿ ಬಂಧಿತವಾಗಿ !

ಕಾಕಾನ ನೆತ್ತರು ಹೆಪ್ಪುಗಟ್ಟಿದಂತಾಯಿತು. ಕಿವಿ ನಿಮಿರಿಸಿ ಜಮಿನ್ದಾರ ಮತ್ತು ನಂದಿನಿಯ ಮಾತುಕತೆಯನ್ನು ಕೇಳತೊಡಗಿದ.

"ಇವನು ಹಿಂದೇನೇ ಕುಳಿತಿದ್ದಾನೆ, ವಿನಾಯಕ್ !"

"ಏನು ಮಾಡಲಿ ?"

"ಇವನನ್ನು ಓಡಿಸು."

"ಅಯ್ಯಪ್ಪಾ.... ...."

"ಸ್ವಲ್ಪ ಹೊತ್ತಿಗಾದರೂ ಕಳುಹಿಸು. ರಾಬರ್ಟ್ಸನ ಫ್ಲಾಸ್ಕಿನಿಂದ ಟೀ ತೆಗೆದುಕೊಂಡು ಬರುವಂತೆ ಹೇಳು."

"ಅದರೆ ಟೀ ಇದೆಯಲ್ಲ !"

"ನೀನಂತೂ ಮೂರ್ಖ ! ಆ ಟೀಯನ್ನು ಚೆಲ್ಲಿಬಿಡಬಾರದೆ ?'

ನಾಂದ್ರೇಕರ್ ನಕ್ಕ. "ನಿಜವಾಗಲೂ ನೀನೊಂದು ರತ್ನ' ಎಂದು ಹೇಳಿ ತನ್ನ ಫ್ಲಾಸ್ಕಿನ ಟೀಯನ್ನು ಚೆಲ್ಲಿ, ಚಿನ್ನಾನನ್ನು ಕರೆದ: "ಏನೊ, ನಿನ್ನ ಹೆಸರು ? ಹ್ಞಾ ಚಿನ್ನಾ !"

"ಸ್ವಾಮಿ

"ಈ ಫ್ಲಾಸ್ಕನ್ನು ಸಾಹೇಬರ ಹತ್ತಿರ ತೆಗೆದುಕೊಂಡು ಹೋಗಿ ಒಂದು ಫ್ಲಾಸ್ಕ್ ಟೀಯನ್ನು ಹಾಕಿಸಿಕೊಂಡು ಬಾ."

"ಹ್ಞಾ, ಈಗಲೆ? ಕಾಡು ಹೊಡೆಯುವವರಾಗಲೇ ಹತ್ತಿರ ಬಂದಿದ್ದಾರೆ."

"ಅವರಿನ್ನೂ ಸಾಕಷ್ಟು ದೂರವಿದ್ದಾರೆ. ಹೋಗು, ಬೇಗನೆ ಹೋಗು."

"ಸ್ವಾಮಿ!"—ಈ ಬಗೆಯ ಅಜ್ಞಾನದ ಮಾತನ್ನು ಕೇಳಿ ಅನ್ನಾನಿಗೆ ಆಶ್ಚರ್ಯವಾಯಿತು.

"ಹೋಗುತ್ತಿ,ಯೊ ಇಲ್ಲೊ ಸುವ್ವರ್!" ಎಂದ ನಾಂದ್ರೇಕರ್ ಹಲ್ಲು ಕಡಿಯುತ್ತಾ. ತಕ್ಷಣವೇ ತಾನು ಹೋಗದಿದ್ದರೆ ಜಮಿನ್ದಾರನು ತನ್ನ ಮೇಲೆ ಗುಂಡು ಹಾರಿಸುವನೆನಿಸಿತು.

"ಹೋಗ್ತೀನಿ ಸ್ವಾಮಿ."

ಬಲಗೈಯಲ್ಲಿ ಒಂದು ಭರ್ಚಿ ಮತ್ತು ಎಡಗೈಯಲ್ಲಿ ಟಾರ್ಚನ್ನು ಹಿಡಿದುಕೊಂಡು ಅನ್ನಾ ಅಟ್ಟದಿಂದ ಇಳಿದ.

ಅನ್ನಾ ಇಳಿಯುತ್ತಲೇ ನಾಂದ್ರೇಕರನು ನಂದಿನಿಯನ್ನು ತನ್ನ ಕಡೆಗೆ ಎಳೆದುಕೊಂಡು ಎದೆಗೆ ಅಪ್ಪಿಕೊಂಡು ನಗುತ್ತಾ "ಹುಲಿ ಬಂದಿದೆ ನಂದಿನಿ!" ಎಂದ.

ಮುದಿಕಾಕಾ ಕ್ರುದ್ಧನಾಗಿ "ಕಾಕಾ, ಮೂರ್ಖಾ!" ಎಂದು ರೆಕ್ಕೆಗಳನ್ನು ಅಗಲಿಸಿ, ಅನ್ನಾನನ್ನು ಹಿಂಬಾಲಿಸಿದ.

ಟನ್-ಟನ್-ಕ್ರ್ರಾಂಕ್! ಟನ್-ಟನ್-ಕ್ರ್ರಾಂಕ್!....

ಹಾಯಿ-ಹೋಯಿ, ಹಾಯಿ-ಹೋಯಿ-ಯೀ-ಯೀ-ಯೀ!....

ಪಂಜಿನ ಬೆಳಕು ದೂರದಲ್ಲಿ ಕಾಣಿಸತೊಡಗಿತು.

ಅರಣ್ಯದಲ್ಲಿ ಕೋಲಾಹಲವೆದ್ದಿದೆ. ಪ್ರಾಣಿಗಳು ಓಡಿಹೋಗುತ್ತಿವೆ. ಕಚಪಿಚ ದನಿ ಕೇಳಿಬರುತ್ತಿದೆ. ನವಿಲು-ನರಿಗಳು ಕೂಗಿಕೊಳ್ಳುತ್ತಿವೆ.

ಈ ಸಾರಿ ಹುಲಿಯ ಆರ್ಭಟ ಕೇಳಿಸಿತು—ಕ್ರುದ್ಧ ಮತ್ತು ಭಯಂಕರವಾದ ಆರ್ಭಟ.

ಹೋಗ-ಹೋಗುತ್ತಿದ್ದಂತೆ ಅನ್ನಾ ಬೆಚ್ಚಿ ನಿಂತುಬಿಟ್ಟ. ಗಾಳಿಯಲ್ಲಿ ಹುಲಿಯ ವಾಸನೆಯಿತ್ತು. ವೇಗವಾಗಿ ಓಡಿದ.

"ಕಾ-ಕಾ!" ಎಂದ ಕಾಕಾ.

ಆದರೆ ಅನ್ನಾನಿಗೆ ತಿಳಿಯಲಿಲ್ಲ. ಅವನು ಓಡಿದ, ಓಡಿದ, ಓಡಿಯೇ ಓಡಿದ. ಹತಾತ್ತಾಗಿ ಬಲಗಡೆಯಿಂದ ಕತ್ತಲನ್ನು ಸೀಳಿಕೊಂಡು ಮೂತಿನೆತ್ತ ಹಿಂಸೆಯಂತೆ ವ್ಯಾಘ್ರರಾಜ ಅವನ ಕತ್ತಿನ ಮೇಲೆ ಹಾರಿದ. ಟಾರ್ಚು ಕೈಯಿಂದ ಜಾರಿತು, ಭರ್ಚಿ ಕೆಳಗೆ ಬಿದ್ದಿತು ಒಂದು ತೀಕ್ಷ್ಣ, ವಿಷಣ್ಣ ಆರ್ತನಾದ ಕೇಳಿಸಿತು. ಬಳಿಕ, ವ್ಯಾಘ್ರರಾಜನ ಕಾಡನ್ನು ನಡುಗಿಸುವ ಗರ್ಜನೆಯನ್ನು ಕೇಳಿ ಶಾಲವೃಕ್ಷಗಳೂ ತತ್ತರಿಸಿದುವು.

"ಕಾ ಕಾ! ಮಹಾರಾಜಾ, ಅನ್ನಾನನ್ನು ಬಿಟ್ಟು ಬಿಡಿ! ಬಿಟ್ಟು ಬಿಡಿ!"

ಆದರೆ ವ್ಯಾಘ್ರರಾಜ ಆಗ ಏನನ್ನೂ ಕೇಳಲಿಲ್ಲ. ತನ್ನ ಪಂಜದ ಹೊಡೆತದಿಂದ ಅನ್ನಾನನ್ನು ಮೂರ್ಛಿತಗೊಳಿಸಿ ಎಳೆಯುತ್ತಾ ಎಳೆಯುತ್ತಾ ಅಟ್ಟಗಳ ಮಧ್ಯದಿಂದ ಓಡಿಹೋದ.

ವ್ಯಾಘ್ರಿಣಿ ಅನತಿದೂರದಲ್ಲಿಯೇ ನಿಂತಿದ್ದಳು. ವ್ಯಾಘ್ರರಾಜನ ಜೊತೆಯಾಗಲು ಅವಳೂ ಓಡಿದಳು. ಅವಳ ಹಿಂದೆ ಇನ್ನೊಂದು ಹುಲಿ ಇತ್ತು, ತಕ್ಷಣವೇ ರಾಬರ್ಟ್ಸ್‌ನ ರೈಫಲಿನಿಂದ ಗುಂಡು ಹಾರಿಸಿದ ನಾಂದ್ರೇಕರನೂ ಆಗ ಗುಂಡು ಹಾರಿಸಿದ. ಇನ್ನೊಂದು ಹುಲಿಯನ್ನು ಕೊಲ್ಲಲಾಯಿತು. ಅರಣ್ಯವೆಲ್ಲಾ ಕಂಪಿಸಿತು.

ಆದರೆ ಅರಣ್ಯದಲ್ಲಿ ಪಾಶ್ಚಾತ್ತಾಪ ಮಾಡಲಾಗುವುದಿಲ್ಲ. ಅಂತೆಯೇ ವ್ಯಾಘ್ರರಾಜನು ಹಿಂತಿರುಗಿ ನೋಡಲಿಲ್ಲ. ವ್ಯಾಘ್ರಿಣಿಯೊಡನೆ ಅನ್ನಾನನ್ನು ಎಳೆದುಕೊಂಡು ಮುನ್ನಡೆದ. ನೂರು ಕಡೆಯಿಂದ ಬೀಟರುಗಳು ಬರುತ್ತಿದ್ದುದರಿಂದ, ಒಮ್ಮೆ ಅವರು ಬೆಚ್ಚಿ ನಿಂತು ಬಳಿಕ ತಂಡಗಳ ಮಧ್ಯೆ ಕಾಡುಹುಲ್ಲಿನಿಂದ ಮುಚ್ಚಲ್ಪಟ್ಟ ಒಂದು ಕೊಳ್ಳದಲ್ಲಿ ಅನ್ನಾನನ್ನು ಎಳೆಯುತ್ತಾ ಇಳಿದುವು.

ಮುದಿಕಾಕಾ ಹಿಂದಿರುಗಿದ. ಈಗ ಆ ಜನರು ಸತ್ತ ಹುಲಿಯ ಬಳಿ ಬೆಂಕಿಯನ್ನು ಹೊತ್ತಿಸುತ್ತಿದ್ದರು. ಬೀಟರುಗಳೂ ಬಂದರು. ರಾಬರ್ಟ್ಸ್‌ನ ಗುಂಡಿನಿಂದಲೇ ಹುಲಿ ಸತ್ತಿತು. ಮುದಿ ಕಾಕಾ ದುಃಖದ ನಗೆಯನ್ನು ಬೀರಿದ. ನಾಂದ್ರೇಕರ್ ಹೆತರಾಂತ ಬೇಟೆಗಾರ. ಅವನು ಹುಲಿಯನ್ನು ಕೊಲ್ಲದಿದ್ದರೂ ಇನ್ನಾವುದನ್ನೊ ಬಹು ಜೆನ್ನಾಗಿ ಬೇಟೆಯಾಡಿದ್ದ, ಅವನ ಗುರಿ ಎಂದೂ ತಪ್ಪುವುದಿಲ್ಲ.

ನಾಂದ್ರೇಕರ್ "ತಮ್ಮ, ಅಟ್ಟದ ಆಳನ್ನು ಹುಲಿ ಹೊತ್ತುಕೊಂಡು ಹೋಯಿತು" ಎಂದ.

ಪಾಟೆಕರ "ಒಮ್ಮೆ ಹುಡುಕುವುದು ಬೇಡವೇ, ವಿನಾಯಕ?" ಎಂದ.

ನಾಂದ್ರೇಕರ್ "ಬೇಕಾದರೆ ಜನರು ಹುಡುಕಬಹುದು, ಆದರೆ ಎಲ್ಲಾ ವ್ಯರ್ಥ" ಎಂದು ಹೇಳಿ, ಒಬ್ಬ ಬೀಟರನ ಕಡೆ ನೋಡಿ "ಅವನಿಗೆ ಯಾರು ಯಾರು ಇದ್ದಾರೆಯೊ?" ಎಂದ.

"ಅವನ ಮುದಿ ತಾಯಿ ಮತ್ತು ಒಬ್ಬ ತಮ್ಮನಿದ್ದಾನೆ."

"ಹೆಂಡತಿ-ಗಿಂಡತಿ?"

"ಇಲ್ಲ ಸ್ವಾಮಿ."

ಕಾಕಾ ಕೂಗಿಕೊಂಡ "ಕಾ-ಕಾ! ಹ್ಞಾ-ಹ್ಞಾ!"

ನಾಂದ್ರೇಕರ್ "ಆ ಮುದುಕಿಗೆ ಐವತ್ತು ರೂಪಾಯಿಗಳನ್ನು

(—ಕತೆಯ ಪುಟಕ್ಕೆ ಮುಂದುವರಿದಿದೆ)

ಝುಂಝೂವಾತ

(ಗುಜರಾತಿ ಕವಿತೆಯ ಕನುವಾದ)

'ಮುರಿಯಿರಗಳೆಯ, ಮುರಿಯಿರಗಳೆಯ
ತೆರೆಯಿರೈ ಬಾಗಿಲು-ಕಿಟಕಿಗಳ,
ಸೃಷ್ಟಿತಾಂಡವದೊಡನೆ ಹಿಡಿಯಿರಿ
ತಾಳವನು ನೀವ್' ಎಂದು—
ನೊರೆಯುತಿದೆಯಿದೊ, ಕರೆಯುತಿದೆಯಿದೊ
ಕುಣಿಕುಣಿಯುತಿಹ ಸಿಂಧು !

ಅಗಸದ ಮೇಲ್ವಾಸ ಭೇದಿಸಿ
ಸುರಿಯುತಿದೆ ಸಂಗೀತ ಕಡಲೊಲು,
ಶಿಶಿರದಾ ನೇಲುವನೆಳೆಯುತ
ಕುಣಿಯುತಿದೆ ಬಲ್ಗಾಳಿ ಧರೆಯೊಳು;
ಬನದ ಕಂಪೊಡಲಿಂದೆ ಬರುತಿವೆ
ಮನಸೆಳೆವ ಗೀತಂಗಳು—
'ಸೃಷ್ಟಿತಾಂಡವದೊಡನೆ ನೆರವನು
ಕೋಡಿರಿ ನೀವುಗಳ್' ಎಂದು
ಕರೆಯುತಿರುವುದು ಮೊರೆಯುತಿರುವುದು
ಕುಣಿ-ಕುಣಿಯುತಿಹ ಸಿಂಧು !

ಹಿಗ್ಗಿದೆದೆಯಲಿ ಹರಡಿ ಹೀಲಿಯ
ಕುಣಿವುದಿದೊ ಇದೊ ಕೇಕೆ—
ಪಾರಿವಂಗಳು ಕೂಗುತಿಹುವಿದೊ
ಹೆಣೆದು ರೆಕ್ಕೆಗೆ ರೆಕ್ಕೆ !
ಹುಣಿಸೆತೊಂಗಲು ಹಿಡಿದು ಚಾಮರ
ಹವೆಯೊಡನೆ ಹುಡುಗಾಟ ನಡೆಸಿವೆ—
'ಸೃಷ್ಟಿತಾಂಡವದೊಡನೆ ಹಿಡಿಯಿರಿ
ತಾಳವನು ನೀವ್' ಎಂದು—
ಕರೆಯುತಿಹುದಿದೊ ನೊರೆಯುತಿಹುದಿದೊ
ಕುಣಿಕುಣಿಯುತಿಹ ಸಿಂಧು !

ಸಿರಸಲದ ತರಗೆಲೆಯ ರವದಲಿ
ಪವನ ಬಾಜಿಸುತಿರುವ ಖಂಜರಿ;
ಹೊಗೊನೆಯ ಹಲ್ಲುಗಳ ಹೊಳೆಯಿಸಿ
ನಗುವಳದೊ ಅದೊ ಆಮ್ರಸುಂದರಿ.
ತಾಲವನದೆಲೆ ಹಾಡುತಿರುವುದ
ಕೇಳಿರೆನಿತಹ ಗೀತಮಾಧುರಿ !
'ಸೃಷ್ಟಿತಾಂಡವದೊಡನೆ ಹಿಡಿಯಿರಿ
ತಾಳವನು ನೀವ್' ಎಂದು
ಕರೆವುದಿದೊ ಇದೊ, ನೊರೆವುದಿದೊ ಇದೊ
ಕುಣಿ-ಕುಣಿಯುತಿಹ ಸಿಂಧು !

ಶುಷ್ಕ ಕ್ಷೀಣ ವಿದೀರ್ಣ ಜೀರ್ಣಗ.
ಳೆಲ್ಲ ಬಿದ್ದಿವೆ ನೆಲದಲಿ—
ವಿಶ್ವಸಂಗೀತದಲಿ ಬಿರುಸರ-
ನೆದ್ದು ಕೊರೆವುವು ಕವಿಯಲಿ.
ಅದರೊಡನೆ ಹಿಡಿಯದಿರಿ ತಾಳವ,
ಹೊಸವಿಭವ ಹೊಸಸುಜನಗಣದಲಿ
ಅದು ಕಣಿನವಹುದು !
'ಸೃಷ್ಟಿತಾಂಡವದೊಡನೆಹಿಡಿಯಿರಿ
ತಾಳವನು ನೀವ್' ಎಂದು—
ಕರೆಯುತಿಹುದಿದೊ, ನೊರೆಯುತಿಹುದಿದೊ
ಕುಣಿ-ಕುಣಿಯುತಿಹ ಸಿಂಧು !

ನಿ-ಸರ್ಗರಾಜನು ಕುಣಿವ ಕೆಡಹುತೆ
ತರಗೆಲೆಯ ರಾಶಿ—
ಪೃಥಿವಿ ಕುಣಿವಳು ಮಣ್ಣ ತರಗಳ
ಕೆಳಗೆ ಕೆಳಗಿಳಿಸಿ
ಗಗನ ಕುಣಿವುದು ಬಿಗಿದ ಕಂತದಿ
ಕಂಬನಿಯ ಸುರಿಸಿ—
ಕುಣಿವುನೆಲ್ಲವು ಆದರೇನಿದು
ಕುಣಿಯಲೊಲ್ಲನು ಮಾನವ—
ಪ್ರಿಯವು ಅವನಿಗೆ ತನಗೆ ತಾನೇ
ಮಾಡಿಕೊಂಬುದು ಮೋಸವ.
'ಸೃಷ್ಟಿತಾಂಡವದೊಡನೆ ಹಿಡಿಯಿರಿ
ತಾಳವನು ನೀವ್' ಎಂದು—
ಕರೆಯುತಿಹುದಿದೊ, ನೊರೆಯುತಿದಿಹುದೊ
ಕುಣಿ-ಕುಣಿಯುತಿಹ ಸಿಂಧು !
ನೊರೆಯುತಿಹುದಿದೊ ಈಗ ಸಿಂಧುವು
'ಮುರಿದೊಗೆಯಿರೈ ತಡೆಯಗಗಳೆಯನು
ತೆರೆಯಿರೈ ಬಾಗಿಲು-ಕಿಟಕಿಯನು'
ತೊರೆದು ಶುಷ್ಕತೆಯನ್ನು ವನತರು
ವಿಹಗ-ವೃಗ-ಪಶುನೆಲ್ಲ ಕುಣಿವುವು.
ಆದರೂ ಮಾನವನು ದಡಬಡ
ಮುಚ್ಚುತಿಹ ಬಾಗಿಲು-ಕಿಟಕಿಗಳ
ವ್ಯರ್ಥ್ಯ ನರ್ತಿಸುತಿಹುದ ಕಾಣುತೆ
ಬೆದರಿಬಿದ್ದಿಹನೋ—
ಹಳೆಯ ಕಾಲದ ನಡೆಯ ಹಜ್ಜೆಯ
ಜಾಡ ಬಿಡದಿಹನೋ |
'ಸೃಷ್ಟಿತಾಂಡದೊಡನೆ ಬಾಜಿಸಿ
ತಾಳವನು ನೀವ್' ಎಂದು
ಕರೆಯುತಿದೆ ಇದೊ, ನೊರೆಯುತಿದೆ ಇದೊ
ಕುಣಿ-ಕುಣಿಯುತಿಹ ಸಿಂಧು !

—ಬೆಟಗೇರಿ ಕೃಷ್ಣಶರ್ಮಾ

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ **'ನಾಡೂ'** ಕಥೆಯ ವಿಮರ್ಶಾಲೇಖನಗಳು ಐದು ಜನರಿಂದ ಮಾತ್ರ ಬಂದಿವೆ. ಪ್ರತಿಸಲಕ್ಕಿಂತಲೂ ಕಡಮೆ ಜನರು ಈ ಸಲದ ಮೇಲಾಟದಲ್ಲಿ ಭಾಗವಹಿಸಿದುದು ಸಮಾಧಾನ ಪಡಬೇಕಾದ ಸಂಗತಿಯೇನೂ ಅಲ್ಲ. ಆದೇಕೋ, ಈ ಸಲ ಬಹಳ ಜನರು ವಿಮರ್ಶೆ ಬರೆಯಲು ಹಿಂಜರಿದಂತೆ ಕಾಣುತ್ತದೆ. ನಿಜವಾಗಿ ನೋಡಿದರೆ ಇದಕ್ಕಾಗಿ ಯಾರೂ ಹೆದರಬೇಕಾಗಿಲ್ಲ. ಎನಿಸಿದ ಅಭಿಪ್ರಾಯಗಳನ್ನು, ಸಾಹಿತ್ಯಿಕ ಸೌಂದರ್ಯದ ಪ್ರಮಾಣಗಳೊಂದಿಗೆ ವಿವರಿಸಿ ಹೇಳುವುದಕ್ಕೆ ಸಂಕೋಚ ಪಡಬೇಕೆ ? ಪಕ್ವಾನ್ನಗಳ ಸಿದ್ಧತೆ ಒಂದು ರಸಸಿದ್ಧಿಯಾಗಿರುವಂತೆ, ಒಳ್ಳೆಯ ಸಾಹಿತ್ಯಕೃತಿಗಳೂ ರಸಸಿದ್ಧಿಯಾಗಿರುವುವು. ಪಕ್ವಾನ್ನದ ರುಚಿ-ಅರುಚಿಗಳನ್ನು ನಾವು ಸಂಕೋಚವಿಲ್ಲದೆ ಹೇಳುತ್ತೇವೆ; ಕುಂದುಕೊರತೆಗಳ ಚರ್ಚೆಯನ್ನು ನಿರ್ಭೀತಿಯಿಂದ ಮಾಡುತ್ತೇವೆ. ಹಾಗೆಯೆ ಈ ಸಾಹಿತ್ಯಕೃತಿಗಳನ್ನು ಕುರಿತೂ ನಾವು ಗುಣ-ದೋಷಗಳನ್ನು, ರುಚಿ-ಅರುಚಿಗಳನ್ನು ಬಾಯಿಬಿಟ್ಟು ಹೇಳಬೇಕು—ಚರ್ಚಿಸಬೇಕು.

ವಿಮರ್ಶಕರ ಪರಿಚಯ :

೧ ಶ್ರೀ. ವ್ಹಿ. ಗೋಪೀನಾಥ, ನ್ಯೂ ಇಂಗ್ಲಿಷ್ ಸ್ಕೂಲ್, ಸದಲಗಾ. ೨ ಶ್ರೀ. ಎಸ್. ಆರ್. ಕುಲಕರ್ಣಿ, ನವಲಗುಂದ. ೩ ಶ್ರೀ. ಬಿ. ಆರ್. ಮಾಹುಲಿ ಬಿ. ಎಸ್ಸಿ. (ಆನರ್ಸ್), ಏನಾಪುರ. ೪ ಶ್ರೀ. ವಿ. ಎ. ಜೋಶಿ ಜ್ಯೂ. ಬಿ.ಎ. ಜನತಾ ಕಾಲೇಜ್, ಧಾರವಾಡ ೫ ಶ್ರೀಮತಿ "ವಸಂತಲಕ್ಷ್ಮಿ" ಮದ್ರಾಸ್;

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯವರು ಪರೀಕ್ಷಿಸಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ.

ಈ ಸಲದ ಎಲ್ಲ ವಿಮರ್ಶೆಗಳೂ ನಿಜವಾದ ವಿಮರ್ಶೆಗಳಾಗಿ ಇರುವುದು ಸಂತೋಷದ ಸಂಗತಿ. ಎಲ್ಲ ವಿಮರ್ಶಕರಿಗೂ ನವ್ಯಸಾಹಿತ್ಯದ ಬಗೆಗೆ ಒಳ್ಳೆಯ ತಿಳಿವಳಿಕೆಯಿದೆ. ಇನ್ನು ತಾರತಮ್ಯದಿಂದ ಹೇಳಬೇಕೆಂದರೆ ಶ್ರೀ. ಬಿ. ಆರ್. ಮಾಹುಲಿ ಮತ್ತು ಶ್ರೀಮತಿ "ವಸಂತಲಕ್ಷ್ಮಿ" ಇವರ ನಿಮರ್ಶೆಗಳು ನೇರಿನ ಕ್ರಮಾಂಕದಲ್ಲಿ ನಿಲ್ಲುತ್ತವೆ; ಶ್ರೀ. ವಿ. ಎ. ಜೋಶಿಯವರ ವಿಮರ್ಶೆಯೂ ಉತ್ತಮವಾಗಿದೆ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ "ಅರಣ್ಯ" ಎಂಬ ನವ್ಯತಂತ್ರದ ಅನುವಾದಿತ ಕಥೆಯನ್ನು ತೆಗೆದುಕೊಳ್ಳಬೇಕು. ಕನ್ನಡಕ್ಕೆ ಇದಾದರೂ ಹೊಸ ಮಾದರಿಯ ಕಥೆ. ಹೆಚ್ಚು ಜನ ವಿಮರ್ಶಕರು ಈ ಕಥೆಯ ಗುಣದೋಷಗಳನ್ನು ಚರ್ಚಿಸಲು ಮುಂದೆ ಬರಬೇಕು.

—ಸಂಪಾದಕರು

(—ತಿರುಗಣೆಯ ಪುಟದಿಂದ ಬಂದುದು)

ಕೊಡೋದು. ಇದರಲ್ಲಿ ನಮ್ಮದೇನು ತಪ್ಪಿದೆ? ಇದಂತೂ accident, we can't help" ಎಂದನು.

ನಂದಿನಿ ಮಧುರವಾಗಿ ನಕ್ಕು "ರೈಟ್ ನಿ. ನಾಂಪ್ರೇಕರ್. ಆದರೆ ಜವತ್ತಲ್ಲ. ನೂರಕ್ಕಿಂತ ಕಡಿಮೆ ಕೊಡುವುದು ನಿಮಗೆ ಉಚಿತವಲ್ಲ" ಎಂದಳು.

"ಸರಿ, ಹಾಗೆಯೇ ಆಗಲಿ ಮಿಸೆಸ್ ಪಾಟಕರ್. ನಿಮ್ಮ ಆಜ್ಞೆ ಶಿರೋಧಾರ್ಯ."

ನಂದಿನಿ ಅರ್ಥಪೂರ್ಣ ದೃಷ್ಟಿಯಿಂದ ನಕ್ಕಳು. ಕಾಕಾ ಅವನ್ನು ನೋಡಿ ಅರ್ಥ ಮಾಡಿಕೊಂಡ.

ಮಧ್ಯರಾತ್ರಿ.

ವ್ಯಾಘ್ರರಾಜ ಮಾಂಸ ತಿನ್ನುತ್ತಾ-ತಿನ್ನುತ್ತಾ ವ್ಯಾಘ್ರಿಣಿಗೆ "ಇವನ ರಕ್ತ ಬಹಳ ಸಿಹಿಯಾಗಿದೆ" ಎಂದ.

"ಏನಂತಹ ವಿಶೇಷ ?"

"ಇವನು ಪ್ರೇಮಿಸಿದ್ದನಲ್ಲನೆ, ಅದಕ್ಕೆ ! ಅರಳಿದಾಗ ಹೂ ಸುಗಂಧಿತವಾಗುವಂತೆ, ಮಾಗಿದಾಗ ಹಣ್ಣು ಸಿಹಿಯಾಗುವಂತೆ, ಮನುಷ್ಯನೂ ಪ್ರೇಮಿಸಿದಾಗ ಮಧುರವಾಗಿ ಸುರಭಿತನಾಗುವನು. ತಿನ್ನು ತಿನ್ನು !"

"ಕಾ ಕಾ !" ಮುದಿಕಾಕಾ ಬಂದು ಹತ್ತಿರ ಕುಳಿತು ಎಲ್ಲವನ್ನೂ ತಿಳಿಸಿದ.

ವ್ಯಾಘ್ರರಾಜ "ನೂರು ರೂಪಾಯಿಗಿಂತ ಹೆಚ್ಚು ಕೊಡುವ ರೇನು ? ಈ ಅರಣ್ಯದಲ್ಲಿ ನುನುಷ್ಯನಿಗೆ ಬೇರೆಯಾಗಿ ಬೆಲೆಯಿರುವುದಿಲ್ಲ" ಎಂದ.

"ಆದರೆ ಅನ್ನಾನನ್ನು ಏಕೆ ಕೊಂದೆ ವ್ಯಾಘ್ರರಾಜ ? ಸಾಪ, ಲಚ್ಚಿಯೇನು ಮಾಡಬೇಕು ? ಅವಳ ಹೊಟ್ಟೆಯಲ್ಲಿ...."

ನೆತ್ತರಿನಿಂದ ತುಂಬಿದ ಬಾಯಿಯಿಂದ ವ್ಯಾಘ್ರರಾಜ ನಕ್ಕ. "ಅರಣ್ಯದಲ್ಲಿ ಯಾರೂ ಯಾರ ಚಿಂತೆಯನ್ನು ಮಾಡುವುದಿಲ್ಲ. ಸಮಯ ಸಿಕ್ಕಾಗ ನಾನೊಂದು ದಿನ ಅವರೆಲ್ಲರನ್ನೂ ತಿಂದುಹಾಕುತ್ತೇನೆ. ನೋಡು ಕಾಕಾ, ಅರಣ್ಯದ ಕಾನೂನು ನೇರವಾದುದು ಮತ್ತು ಸ್ಪಷ್ಟವಾದುದು: ಸಾಯಿ ಇಲ್ಲವೆ ಸಾಯಿಸು !"

ಇದೇ ನೇಳೆಗೆ ಆಕಾಶದಲ್ಲಿ ಒಂದು ಚೂರು ಚಂದ್ರನೇರಿ ಬಂದ. ಶಾಲವನದ ಶಿಶಿರ-ಸಿಕ್ತ ತರಗೆಲೆಗಳ ಮೇಲೆ ಅಭ್ರಕದ ಚೂರಿನಂತೆ ಚಂದ್ರಪ್ರಭೆ ಬೆಳಗತೊಡಗಿತು. ಇರುಳು ಇನ್ನಷ್ಟು ಗಂಭೀರವಾಯಿತು. ತಾಂಬೂಳದ ಕಗ್ಗತ್ತಲಿನ ಅರಣ್ಯದಲ್ಲಿ ಪುನಃ ಮೂಳೆಗಳ ಕಡಕಡ ದನಿ ಕೇಳಿಸಿತು. ●

"ನಾಡೂ"

[ಕಥೆಯ ವಿಮರ್ಶೆ]

ಶ್ರೀ. ಬಿ. ಆರ್. ಮಾಹುಲಿ, ಬಿ.ಎಸ್ಸಿ., (ಆನರ್ಸ್) ಏನಾಪೂರ.

ಶ್ರೀ ರಾಘವೇಂದ್ರ ಖಾಸನೀಸರು ಅನುವಾದಿಸಿದ 'ನಾಡೂ' ಎಂಬ ಕತೆ, ಕನ್ನಡಕ್ಕೆ ಬಂದ ಪ್ರಥಮ ನವಕಥೆಯಾಗಿದೆ. ನವಕಥೆಯ ಹೆಸರಿನಲ್ಲಿ ಕನ್ನಡದಲ್ಲಿ ಇಷ್ಟರಲ್ಲಿ ಹಲವಾರು ಕತೆಗಳು ಬಂದು ಹೋಗಿದ್ದರೂ, ತಾಂತ್ರಿಕವಾಗಿ ಅವು ಆ ಮಟ್ಟವನ್ನೇರಲಿಲ್ಲ. ಯಾಕೆಂದರೆ ನವಕಥೆಯ ಜೀವಾಳವಾದ ಪ್ರತಿಮಾನಿಷ್ಠತೆ ಹಾಗೂ ಪ್ರಜ್ಞಾವಾಹದ ದಾರಿಹಿಡಿದು ಸಾಗಿದ ಶಾಪ್ತಬದ್ಧ ಮನೋವಿಶ್ಲೇಷಣೆ, ಆ ಕತೆಗಳಲ್ಲಿ ಮೂಡಿ ಬರಲಿಲ್ಲ. ನವಕಾವ್ಯದ ತಂತ್ರವೇ ನವಕಥೆಯ ತಂತ್ರವೆಂಬುದನ್ನು ನಾವು ಗಮನಿಸಿದಾಗ ಮಾತ್ರ ಈ ಕತೆಯ ಬೆಲೆಯನ್ನು ನಾವು ಕಟ್ಟಲು ಸಮರ್ಥರಾಗುತ್ತೇವೆ. ಸದಸದ್ವಿಚಾರಗಳ ಘರ್ಷಣೆ ವ್ಯಕ್ತ ಹಾಗೂ ಅವ್ಯಕ್ತ ಭಾವನೆಗಳ ಕ್ಲಿಷ್ಟತೆ, ಭೂತ, ವರ್ತಮಾನ, ಭವಿಷ್ಯತ್ ಕಾಲಗಳ ಏಕತೆಯ ಅರಿವು, ಇವೆಲ್ಲ ನವಕಾವ್ಯದ ವೈಶಿಷ್ಟ್ಯಗಳಾಗಿದ್ದಂತೆ, ನವಕಥೆಯ ವೈಶಿಷ್ಟ್ಯಗಳೂ ಆಗಿವೆ. ಇಂಥ ವೈಶಿಷ್ಟ್ಯಗಳನ್ನೆಲ್ಲ ಒಳಗೊಂಡ ಈ ಕತೆ "ನಾಡೂ"–ಕನ್ನಡಕ್ಕೆ ಬಂದ ಮೊಟ್ಟ ಮೊದಲ ನವಕಥೆಯಾಗಿದೆ. ಆ ನವ್ಯತೆಯನ್ನು ಎತ್ತಿತೋರಿಸುವುದೇ ಈ ವಿಮರ್ಶೆಯ ಉದ್ದೇಶವಾಗಿದ್ದರೂ, ಅದನ್ನು ಪರಿಪೂರ್ಣರಾಗಿ ವಿವರಿಸುತ್ತ ಹೋದರೆ ಈ ಲೇಖನ ಮೂಲಕತೆಯ ಸುದೀರ್ಘತೆಯನ್ನು ಮೀರುವಷ್ಟು ವಿಸ್ತಾರವಾಗಬಹುದು. ಆಂತೆಯೇ ಇಲ್ಲಿ ಮೂಡಲಿರುವುದು ಆ ನವ್ಯತೆಯ ಕೆಲವಂಶ ಮಾತ್ರ.

ಇಲ್ಲಿ ಕಥಾವಸ್ತು ತೀರ ಸ್ವಲ್ಪವಿದೆ. ಹೆಂಡತಿಯನ್ನು ಕಳೆದುಕೊಂಡ ಸಂತೋಷ, ತಾಯಿಯನ್ನು ಕಳೆದುಕೊಂಡ ನಾಡೂ ಇವರಿಬ್ಬರೇ ಈ ಕತೆಯ ಕೇಂದ್ರ ವ್ಯಕ್ತಿಗಳಾದರೂ, ಸತ್ತು ಬದುಕಿರುವ ನಾಡೂನ ತಾಯಿಯ ವ್ಯಕ್ತಿತ್ವ ಕತೆಯುದ್ದಕ್ಕೂ ನಿಡಿಯುತ್ತದೆ. ನಾಡೂನ ಪಾತ್ರವನ್ನು ಕೋವಲವಾಗಿ ಚಿತ್ರಿಸಿದರೆ, ಸಂತೋಷನ ಪಾತ್ರವನ್ನು ಮರಂಕವಮಯವಾಗಿ ವರ್ಣಿಸಿದರೆ, ತಾಯಿಯ ಪಾತ್ರವನ್ನು ಕತೆಗಾರರು ಅದ್ಭುತವಾಗಿ ನಿರ್ಮಿಸಿದ್ದಾರೆ. ನಾಡು ತನ್ನ ದೀನ ಮುಖದಿಂದ ತನ್ನ ಆಂಗಿಯ ತುದಿಯಿಂದ ತನ್ನ ಎಡಗಣ್ಣನ್ನು ಒರೆಸುತ್ತ ಕೈಯಲ್ಲಿಯ ಪೇರಲ ಹಣ್ಣನ್ನು ತನ್ನ ಬಾಲಕ್ರೋಧದಿಂದ ತಂದೆಯ ಕಡೆಗೆ ಬೀಸುತ್ತ ನಮ್ಮ ಮನಸ್ಸನ್ನು ಕರಗಿಸಿದರೆ, ಸಂತೋಷ ತನ್ನ ಹತಭಾಗ್ಯ ಅಸಹಾಯಕತೆಯಿಂದ ನನ್ನ ಕರುಣೆಯನ್ನು ಸೆರೆ ಹಿಡಿಯುತ್ತಾನೆ. ನಾಡೂನ ತಾಯಿಯ ಮರಣ ರುಚಿಮಯವಾಗಿದೆ ನಿಜ; ಆದರೆ ಅವಕ್ಕೆ ಪೂರಕವಾಗಿ ಬಂದ ನಾಡೂ- ಸಂತೋಷರ ರುದ್ರ-ಕರುಣಾಮಯ ಮನೋವ್ಯಾಪಾರ, ಆ ಅಪಸವ್ಯಕ್ಕಿಂತಲೂ ಹೆಚ್ಚು ತೀಕ್ಷ್ಣವಾಗಿದೆ. ಅಂತೆಯೇ ಹೆಚ್ಚು ದುರಂತಮಯವಾಗಿದೆ.

ಐರಿಶ್ ನಾಟಕಕಾರನಾದ 'Synge' ನ "Riders to the sea" ಎಂಬ ನಾಟಕದಲ್ಲಿ ಇಂಥ ದುರಂತ ತೀವ್ರತೆ (Tragic Intensity) ನೇರವಾಗಿ ರಂಗಮಂಚದ ಮೇಲೆ ಬರದಿದ್ದರೂ, ಸಂಭಾಷಣೆಯು ಸುತ್ತಲೆಲ್ಲ ಧ್ವನಿಸುವಂತೆ ಇಲ್ಲಿ ಆ ದುರಂತತೀವ್ರತೆ ಪಾತ್ರಗಳಲ್ಲಿ, ಸನ್ನಿವೇಶಗಳಲ್ಲಿ ಹಾಗೂ ಪ್ರತಿಮೆಗಳಲ್ಲಿ ಹರಿದಾಡಿದೆ. ಅಳುತ್ತನಿಂತ ನಾಡೂನನ್ನು ನೋಡಿ ಪುನಃ ತನ್ನ ಪಾಡಿಗೆ ತಾನು ಹೊರಟು ಹೋಗುವ ಮುದುಕಿ, ಸಂತೋಷನಿಗೆ ಹಣವಿದೆಯೇನು ಎಂದು ಕೇಳಿ, ಅವನಿಗೆ ಧೈರ್ಯಕೊಡಲು ಯತ್ನಿಸಿದ ಪುಸ್ತಕ ಮಾರುವವ, ಮೂಗಿನ ಮೇಲೆ ಆಕ್ಸಿಜನ್‌ದ ನಳಕೆಯಿರುವ ನಗುಮುಖದ ಕೆಂವು ಹುಡುಗಿ—ಇವರೆಲ್ಲ ಆ ದುಃಖದ ಪ್ರತೀಕವಾಗಿ ನಿಲ್ಲುತ್ತಾರೆ. ನಾಡೂ ತನ್ನ ತಾಯಿಗೆ ಹೆರಳು ಹಾಕುವಾಗ ಹಾಗೂ ಕೊನೆಗೆ ತನ್ನ ಹೃದಯದಲ್ಲಿ ಕುದಿಯುತ್ತಿದ್ದ ನೋವನ್ನು ಹೊರಗೆಡಹುವ ಯೋಗ್ಯ ದಾರಿ ದೊರಕದೆ, ತಂದೆಯ ವಿರುದ್ಧ ಬಂಡು ಹೂಡಿ ಆ ನೋವಿನಿಂದ ಓಡಿಹೋಗುವ ದೃಶ್ಯವಂತೂ ಎಂಥವನ ಕರುಳನ್ನೂ ಇರಿಯುತ್ತದೆ!

ಕತೆಯ ಬೆಂಬತ್ತಿ ಹೊರಟ ಪಾತ್ರಗಳೂ ಇಲ್ಲಿಲ್ಲ; ಪಾತ್ರಗಳನ್ನು ಅರಸುತ್ತ ಹೊರಟ ಕತೆಯೂ ಇಲ್ಲಿಲ್ಲ; ಇಲ್ಲಿ ಎಲ್ಲವೂ-ಉಮರಖಯಾಮ್ ಹೇಳುವಂತೆ–ಮ್ಯಾಜಿಕಲ್ಯಾಂಟರಿನ್ ಸುತ್ತಲೂ ಭ್ರಮಿಸುವ ಚಿತ್ರ. ಗೊಂಬೆಗಳಂತೆ ಒಂದು ಅವ್ಯಕ್ತಶಕ್ತಿಯ ಸುತ್ತಲು-ಅದೇ ವಿಧಿಯಲ್ಲವೇ?–ಭ್ರಮಿಸುತ್ತಿವೆ. ಎಲ್ಲ ಪಾತ್ರಗಳೂ–ಚದುರಂಗದಾಟದಲ್ಲಿಯ ನಿಸ್ಸತ್ತ್ವ ಕಟ್ಟಿಗೆಯ ತುಣುಕುಗಳಂತೆ, ವಿಧಿಯ ಕೈಯಲ್ಲಿ ಅತ್ತಿಂದಿತ್ತ ಸುತ್ತಾಡಿ, ವಿಧಿ ಇಚ್ಛಿಸಿದಾಗ ಆಟದಿಂದ ಮರೆಯಾಗುತ್ತವೆ. ವಿಧಿಯ ಸಂಕೇತದಂತೆ ಸಾಯಲೇ ಬೇಕಾದ ನಾಡೂನ ತಾಯಿಯನ್ನು ಯಾವ ಆಪರೇಶನ್ನೂ ಬದುಕಿಸಲಾರದು; ಗ್ಲುಕೋಜ್ ಸಲಾಯಿನ್ ಕೂಡ ಅಲ್ಲಿ ಸಂಜೀವಿನಿಯಾಗಲಾರದು. ಹಾಗೆಯೇ ಶಂಭೂಕಾಕಾನ ಮಗಳಂತೆ, ನಾಯಿಯ ಮರಿಯಂತೆ, ನಾಡೂ ಕತ್ತಲೆಯಲ್ಲಿ ಮಾಲುಗಾಡಿಯ ಕೆಳಗೆ ಜಜ್ಜಿ ಹೋಗುತ್ತಾನೆ, ಆದರೇನು? yeats ಕವಿಯು ಹೇಳುವ ಅಶ್ವಾರೋಹಿ (Horseman, pass by) ಮಗ್ಗಲಿಗೆ ಸರಿದು ಲೈಸಿನಗುಂಟ ಮುಂದುವರಿಯಲೇಬೇಕು. ಅವನ ಗುರಿಯೆ ಬೇರೆ. ನೋಡವಾದರೂ ಸರಿಯೇ ಅವನು ಆಕಾಶವನ್ನೆಲ್ಲ ವ್ಯಾಪಿಸಿ ಇರಲೇಬೇಕು! ಬೆನ್ನುಹಿಂದೆ ಒಂದಲ್ಲ, ಎರಡು ಹೆಣಗಳನ್ನು ಕಟ್ಟಿಕೊಂಡರೂ ಸರಿಯೇ, ಅವನು ಬದುಕಲೇ ಬೇಕು.

ಈ ಕತೆಯ ನಿಜವಾದ ವೈಶಿಷ್ಟ್ಯವೆಂದರೆ ಅದರ ತಂತ್ರ. ಅದರಲ್ಲೂ ತೀರ ಮನನೀಯವಾದ ಮಹತ್ವವಿರುವ ಅಂಶವೆಂದರೆ ಕತೆಗಾರರು ಬಳಸಿದ ಸಿನೇಮಾ ತಂತ್ರ (film technique) ಸತ್ಯಜಿತ್ ರಾಯ್, ಬರಿನ್ ಸಹಾ, ತಪನ್ ಸಿಂಹರಂತಹ ಮಹಾನ್ ಚಲಚ್ಚಿತ್ರ ನಿರ್ದೇಶಕರು ಬಂಗಾಲೀ ಚಿತ್ರಪ್ರಪಂಚದಲ್ಲಿ ಪ್ರಾರಂಭಿಸಿದ ನವವಾಸ್ತವತೆಯ (Neo-Realism) ಪಂಥವನ್ನು, ಶ್ರೀ ನೋತಿನಂದಿಯವರು ಈ ಕತೆಯಲ್ಲಿ ಬಹಳ ಯಶಸ್ವಿಯಾಗಿ ಬಳಸಿತೋರಿಸಿದ್ದಾರೆ. ಚಲನಚಿತ್ರದಲ್ಲಿ ಬೇರೆ ಬೇರೆ 'ಶಾಟ್'ಗಳನ್ನು (Shots) ಹವಣಿಸಿತು ಜೋಡಿ

ಸುವ ಸಂಕಲನಕಾರ (Editor)ನಂತೆ ಮೋತಿನಂದಿ ಸತ್ತ್ವಯುತವಾದ ಪ್ರತಿಮೆಗಳನ್ನು ಕಲೆಹಾಕಿ, ಅವುಗಳನ್ನು ಶಕ್ತಿಯುತವಾಗಿ ಸಂಕಲನ ಮಾಡಿದ್ದಾರೆ. ಅಂತೆಯೇ ಕತೆಯೋದುತ್ತ ಹೋದಂತೆ ನಮಗೆ ಚಲನ ಚಿತ್ರ ನೋಡಿದ ಭಾಸವಾಗುತ್ತದೆ. ಬೇರೆಬೇರೆ ದೃಶ್ಯಗಳು, ಬೇರೆಬೇರೆ ಕೋನಗಳಿಂದ ಚಿತ್ರಿಸಲ್ಪಟ್ಟ ಒಂದೇ ಚಿತ್ರ, ಬರೀ "ಮುಖಚಿತ್ರ" (close ups) ಎಲ್ಲವನ್ನು ಕತೆಯಲ್ಲಿ ಓಟಕ್ಕೆ ತಕ್ಕಂತೆ ಉಪಯೋಗಿಸಿಕೊಂಡಿದ್ದನ್ನು ನಾವು ನೋಡಬಹುದು. ಈ ಎಲ್ಲ ಬೇರೆಬೇರೆ ಚಿತ್ರಗಳನ್ನು ಕೂಡಿಸಿ ಅರ್ಥ ಪೂರ್ಣಮಾಡುವ ದಾರವೆಂದರೆ ನುನೋ ವಿಶ್ಲೇಷಣೆ. ಕತೆಗಾರ ಕೈಯಲ್ಲಿ ಕ್ಯಾಮರಾ ತೆಗೆದುಕೊಂಡು, ಪಾತ್ರಗಳನ್ನು ನೆರಳಿನಂತೆ ಹಿಂಬಾಲಿಸಿ, ಅವುಗಳನ್ನು ಚಿತ್ರಿಸಿದಂತೆ ಭಾಸವಾಗುತ್ತದೆ. ಸಿನೇಮಾದಲ್ಲಿ ಹೆಚ್ಚಾಗಿ ಉಪಯೋಗಿಸುವ close up ಛಾಯಾಚಿತ್ರವನ್ನು ಮೋತಿನಂದಿಯವರು ಬಹಳ ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡ ಕೆಲವು ಉದಾಹರಣೆಗಳನ್ನು ನಾವು ಕೊಡಬಹುದು. ಮೊದಲನೆಯದೆಂದರೆ, ನಾಡೂ ತೀರ ಕನ್ನ ತಾಯಿಯ ಹತ್ತಿರ ಬಂದು, ಅವಳ ಮುಖವನ್ನು ನೋಡುವ ದೃಶ್ಯ. ಎರಡನೆಯದೆಂದರೆ ಕೆಳಗಿನದು: "ಸಂತೋಷನು ಓರೆನೋಟದಿಂದ ನಾಡೂನನ್ನು ನೋಡಿದ; ಹುಡುಗನ ಕಣ್ಣು ಲಕಲಕಿಸುತ್ತವೆ. ಹೊರಗೆ ಕಾಣುವುದೆಲ್ಲ ಅವನ ಕಣ್ಣುಗುಡ್ಡೆಗಳಲ್ಲಿ ಗಿರ್–ಗಿರ್ ಸುತ್ತಿ ಮಾಯವಾಗತೊಡಗಿದೆ" ಮುಂತಾಗಿ ಈ ತಂತ್ರನೇ ಕತೆಯನ್ನು ಜೀವಂತವಾಗಿಸುವುದಕ್ಕೆ ಬಹು ಮಟ್ಟಿಗೆ ಕಾರಣನೆಂದು ನನ್ನ ಅಭಿಪ್ರಾಯ.

ಇಲಿಯಟ್ಸ್‌ನ (Eliot) ನವಕಾವ್ಯದಂತೆ ಪ್ರತಿಮಾನಿಷ್ಠವಾದ ಈ ಕತೆಯಲ್ಲಿ ಸಂಕಲಿತವಾದ ಪ್ರತಿಮೆಗಳು ಒಂದರಲ್ಲೊಂದು ಬೆರೆತು ನಿಂತು, ಒಂದು ನಿರ್ದಿಷ್ಟವಾದ ಆಕಾರವನ್ನು (Pattern) ತಾಳಿವೆ. ಚರ್ಚಿನ ಕಿಟಕಿಗಳಿಗಿರುವ 'Mosaic' ಕಾಜಿನ ಸುಂದರ ಆಕೃತಿಗಳ ನೆನಪಾಗುತ್ತದೆ. ಅರ್ಥವಿಲ್ಲದ ಬೇರೆ ಬೇರೆ ಬಣ್ಣದ ಕಾಜಿನ ಚೂರುಗಳು 'Mosaic'ನಲ್ಲಿ ಒಂದು ಅರ್ಥಪೂರ್ಣ ಆಕಾರವನ್ನು ತಾಳುವಂತೆ ಇಲ್ಲಿಯೂ ಕೂಡ ಬೇರೆ ಬೇರೆ ಪ್ರತಿಮೆಗಳು ಕೂಡಿ ಒಂದು ನಿಶ್ಚಿತ ಭಾವವನ್ನು ವ್ಯಕ್ತಪಡಿಸಿವೆ. ಕೆಂಪು ಕಾಜು ಹತ್ತಾರು ಸಲ ಆಕೃತಿಯಲ್ಲಿ ಬರಬಹುದು. ಆದರೆ ಅದರಿಂದ ರೂಪ ಕೆಡುವುದಿಲ್ಲ. ಹಾಗೆಯೇ ಕತೆಯಲ್ಲಿ ಕೆಲ ಪ್ರತಿಮೆಗಳು ಪುನಃ ಪುನಃ ಮರಳಿ ಬಂದರೂ ಕತೆಯ ಸೊಗಸು ಕೆಟ್ಟಿಲ್ಲ. ಕತೆಯಲ್ಲಿ ಪುನಃ ಪುನಃ ಬರುವ ಲಿಫ್ಟು ಸಾವಿನ ಸಂಕೇತವಾಗಿ ಇಳಿದು, ಏರುತ್ತದೆ. ಸೀಟು ಹೊಡೆಯುವ ಎಂಜಿನ್ನು, ಗಾಡಿಯ ಕೆಳಕ್ಕೆ ಸಿಕ್ಕ ಶಂಭೂಕಾಕಾನ ನುಗಳು, ರೈಲಿನ ಕೆಳಗೆ ಸಿಕ್ಕು ಸುಚ್ಚುನುರಿಯಾದ ನಾಯಿಯ ಮರಿ, ಇವರೆಲ್ಲ ಕೊನೆಗೆ ಬರಲಿರುವ ನಾಡೂನ ಮರಣದ ದುರಂತಕ್ಕೆ ನಾಂದಿಯಾಗಿ ಬರುತ್ತಾರೆ.

ಇಲ್ಲಿ ವ್ಯಕ್ತವಾದ ಮನೋವಿಶ್ಲೇಷಣೆಯ ರೀತಿಯಂತೂ ನಿಜಕ್ಕೂ ಅನುಕರಣೀಯವಾಗಿದೆ. ನೋಡಿದ ವಸ್ತು ನಾವು ಹಿಂದೆ ನೋಡಿದ ವಸ್ತುವಿನ ನೆನಪು ತರುವಂತೆ, ನಾವು ಅನುಭವಿಸಿದ ವಾಸನೆ ಹಿಂದೆ ಅನುಭವಿಸಿದ ವಾಸನೆಯ ನೆನಪನ್ನು ಕೆರಳಿಸುವುದು. ಹಾಸ್ಪಿಟಲ್ಲಿನಲ್ಲಿಯ ಔಷಧದ ವಾಸನೆ, ನಾಡೂನಿಗೆ ಅತ್ಯಾ ಹಡೆದ ದಿನದ ಔಷಧದ ವಾಸನೆಯನ್ನು ನೆನಪಿಗೆ ತರುತ್ತದೆ. ಮಾಂಸ ಸುಟ್ಟ ವಾಸನೆ ಸ್ಮಶಾನದಲ್ಲಿ ಸುತ್ತುತ್ತದೆ. ನೀಲಗಿರಿಯ ಎಣ್ಣೆಯ ವಾಸನೆ ಸ್ಮಶಾನದಲ್ಲಿ ಹರಡಿದೆ.

ಮನೋವಿಶ್ಲೇಷಣೆಯಲ್ಲಿಯ ಇನ್ನೊಂದು ಅಂಶವೆಂದರೆ ಬಣ್ಣ. ಕೆಂಪುಬಣ್ಣದ ರಗ್ಗು ಕಾಟನ ಮೇಲೆ ಹಾಸಿದ್ದಾರೆ. ನಗುಮುಖದ ಕೆಂಪು ಹುಡುಗಿಯ ಮೂಗಿನ ಮೇಲೆ ಆಕ್ಸಿಜನ್ ನಳಿಕೆಯಿದೆ. ಲೇಸುಳ್ಳ ಕಪ್ಪುಬಣ್ಣದ ಬೂಟನ್ನು ತರಲು ತಾಯಿ ಹೇಳಿದ್ದಳು. ವಾಸನೆ ವಾಸನೆಯನ್ನು ನೆನಪಿಗೆ ತರುವಂತೆ, ಬಣ್ಣ ಬಣ್ಣವನ್ನು ನೆನಪಿಗೆ ತರುತ್ತದೆ. "ಕಣ್ಣುಗಳು ಅಕ್ಷರಶಃ ಕಾಗೆಯಂತೆ ಕಾಣುತ್ತಿದ್ದುವು. ಅವನ ಕಣ್ಣೊಳಗಿಂದ ಈಗ ಕಾಗೆಯು ಮರಿ ಬಂದರೆ?" ಇತ್ಯಾದಿ, ಇತ್ಯಾದಿ. ಸ್ಪರ್ಶವೂ ಇಲ್ಲಿ ಬಂದಿದೆ. "ಗಾಲಿಯ ಮೇಲೆ ಕೈಯಿಟ್ಟ, ತಣ್ಣಗೆ. ಇದರ ತೂಕ ಎಷ್ಟಿರಬಹುದು?"

ಆದರೂ ಇವೆಲ್ಲಕ್ಕೂ ಕಳಸವಿಟ್ಟಂತೆ ಶ್ರೀ. ಖಾಸನೀಸರ ಧ್ವನಿಪೂರ್ಣವಾದ ಭಾಷೆ. ಮೂಲ ಕತೆಯಲ್ಲಿ ಈ ಧ್ವನಿ ಹೇಗೆ ವ್ಯಕ್ತವಾಗಿದೆಯೋ ಹೇಳಲಿಕ್ಕಾಗದು. ಆದರೆ ಅನುವಾದದಲ್ಲಿ ಮಾತ್ರ ಶ್ರೀ. ಖಾಸನೀಸರು ಕಾವ್ಯಮಯವಾಗಿ ಭಾಷೆಯನ್ನು ಉಪಯೋಗಿಸಿದ್ದಾರೆ. ಧ್ವನಿಸೂಚಕ ಭಾಷೆಗಾಗಿ ಹುಡುಕಿದರೆ, ಪ್ರತಿಪುಟವೂ ಧ್ವನಿ ಮಾಡೀತು. ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಬಹುದು:—ಲಿಫ್ಟಿನ ಬಾಗಿಲು ತೆಗೆಯುವ ಮುಂದೆ ಛಿನ್‌ನ್ ಎಂದು ಸಪ್ಪಳವಾಯಿತು. ವ್ಹರಾಂಡದಿಂದ 'ಸಸ್‌ಸಸ್' ಎಂದು ಸಪ್ಪಳ ಬರುತ್ತಿತ್ತು. 'ಭರ್‌ರ್' ಎಂದು ಟೇಬಲಿನ ಮೇಲಿನ ಕಾಗದಗಳು ಹಾರಿದವು. ಡಾಕ್ಟರರ—'ಖಟ್‌ಖಟ್' ಎಂದು ಬೂಟಿನ ಸಪ್ಪಳವಾಯಿತು. ಬಟನ್ ಒತ್ತಿದ ಮೇಲೆ 'ಗುಂಯಿ' ಎಂದು ಸಪ್ಪಳವಾಯಿತು. ಹೆರಳು ಹಾಕುವ ಮುಂದೆ 'ಖರ್' ಎಂದು ಸಪ್ಪಳವಾಯಿತು. ಹಿಮ್ಮಡಿ ಹಾಗೂ ಅಂಗಾಲು ಇನ್ನು ಸುಟ್ಟೇ ಇಲ್ಲ. ಉಬ್ಬಿ 'ಠಸ್‌ಠಸ್' ಎನ್ನುತ್ತಿನೆ. ಕತೆಯ ತುಂಬ ಹಲವಾರು ಕಡೆ ಇಂತಹ ಧ್ವನಿಸೂಚಕತೆ ನಮ್ಮನ್ನು ಮೋಹಿಸುತ್ತದೆ. ಕತೆಯಲ್ಲೆಲ್ಲ ಗೋಳಗುಮ್ಮಟದಲ್ಲಿಯಂತೆ—ಒಂದು ಧ್ವನಿ ಏಳಾಗಿ, ಸಂತೋಷನ ಭಯಾನಕ ವಿಕಾಕೃತನವನ್ನು ಹೃದಯಸ್ಪರ್ಶಿಯಾಗಿ ಮಾಡುತ್ತವೆ. ಈ ಯಶಸ್ಸು ಅನುವಾದಕರದೋ, ಲೇಖಕರದೋ!

ಹೀಗೆ ಈ ಕತೆ ಎಲ್ಲ ದೃಷ್ಟಿಯಿಂದಲೂ ಒಂದು ಪರಿಪೂರ್ಣವಾದ ಭಾವನಾಮಯ ಕತೆಯಾಗಿದೆ. ತೀರ ಪರಿಚಿತವಾದ ಪರಿಸರದಲ್ಲಿ ಕತೆಹುಟ್ಟಿ ಬೆಳೆದರೂ, ಒಂದು ಭವ್ಯವಾದ ಜೀವನದರ್ಶನವನ್ನು ಕತೆಗಾರರು ನಮಗಿಲ್ಲಿ ಮಾಡಿಸುತ್ತಾರೆ. ಶ್ರೀ. ಮೋತಿನಂದಿ ಜೀವನದಲ್ಲಿ ಶ್ರದ್ಧೆಯನ್ನು ಕಳೆದುಕೊಂಡು ಕೈಸೋತು ಹೋಗಿದ್ದಾರೆ. ಈ ಬಾಳಿನಲ್ಲಿ ನೆನಪೆಂದರೆ ಸಾವು. ಪ್ರತಿವ್ಯಕ್ತಿಯೂ ಕಾಲಾತೀತವಾಗಿ ಹೆಗಲ ಮೇಲೆ ಶಿಲುಬೆ ಹೊತ್ತು ಸಾಗಿದ್ದಾನೆ. ಇಲ್ಲಿ ಜೀವನವಿರುವುದಾದರೂ ಕೂಡ ಸಾವಿನ ಅಸ್ತಿತ್ವವನ್ನು ನಮಗೆ ತಿಳಿಸಲೆಂದು. ಅಂತೆಯೇ ಪುನಃ ಪುನಃ ಸಾವಿನ ಪ್ರತಿಮೆಗಳು ಕತೆಗಾರರನ್ನು ಭೂತದಂತೆ ಬೆನ್ನಟ್ಟಿವೆ. ಅನಾದಿಕಾಲದಿಂದಲೂ ಮಣ್ಣಿದೆ. ಮನುಷ್ಯನಿದ್ದಾನೆ.

(೩೨೬ನೆಯ ಪುಟಕ್ಕೆ ಮುಂದುವರಿದಿದೆ—)

'ಮಧುಸಂಚಯ'

(ವಿಮರ್ಶೆ)

ಶ್ರೀ. ಬಿ. ಬಿ. ರಾಜಪುರೋಹಿತ ಎಂ ಎ. ಧಾರವಾಡ

'ಜೀವಿ'ಯವರದು ಸಮೃದ್ಧಜೀವ. ಅದಕ್ಕೆ ದರ್ಶನ ಲಾಲಸೆಯೊಡನೆ ಅಭಿವ್ಯಕ್ತಿಯ ಹಿಡಿತವಿದೆ, ವ್ಯಕ್ತಿಗಳ ಅಂತಃಸತ್ತ್ವದ ಕುಸುರನ್ನು ಕಾಣುವುದರ ಜೊತೆಗೆ ಮಹತಿಯನ್ನೂ ಕಾಣುವ ವೈಶಾಲ್ಯವಿದೆ, ಮಗುವಿನಂತೆ ಜೀವನವನ್ನು ನೋಡುವುದರ ಜೊತೆಗೆ ಪಾರಮಾರ್ಥಿಕ ಸತ್ಯವನ್ನು ಕಂಡು, ಮಹೋನ್ನತಿ ಕಂಡಲ್ಲಿ ಕೈಜೋಡಿಸುವ ಔದಾರ್ಯವಿದೆ, ಪ್ರಕೃತಿಯ ಲಾಸ್ಯ-ನೈವಿಧ್ಯಕ್ಕೆ ಶರಣೆನ್ನುವುದರ ಜೊತೆಗೆ ಪ್ರಣಯದ ಪುಷ್ಪನೌಕೆಯಲ್ಲಿ ತೇಲಿ ಹೃದಯದ ಗೀತವನ್ನು ನುಡಿಯುವ ಹದವಿದೆ. ಜೀವನದ ರಸ-ವಿಷ ನಿಮಿಷಗಳಿಗೆ ಅನುಸ್ಪಂದಿಸಿ ಹದಗೊಂಡ ಜೀವನದ ಪಾಡು ಹಾಡಾಗದೆ ಉಳಿಯಲಾರದು.

'ವಿಷನುಂಗಿ ಜಗಕಮೃತ ಹಂಚಿಕೊಡುನೆ!
ನೈತುಂಬ ನಡೆಬಾಣ ರಸ ಹರಿಸುನೆ!
ನಾನು ಅತ್ತರು ಜಗವ ನಗಿಸುತಿರುನೆ!
ಆಸೆ-ಬೂದಿಯ ಮೇಲೆ, 'ಹೂ' ಬೆಳೆಸುನೆ!'

ಎಂಬ ಹಟದೊಂದಿಗೆ, ಆರಳುವುದೊಂದೇ ನನ್ನಯ ಧರ್ಮ ತೆರಳುವುದೊಂದೇ ನಿಮ್ಮಯ ಕರ್ಮ ಎಂಬ ಸೂತ್ರನಂತೆ ಗುಣದ ಗಣನೆ ನಿಮಗಿಲ್ಲವಲ್ಲ ಎಂಬ ವ್ಯಥೆ ಅಲ್ಲಲ್ಲಿ ಮಿಡಿಯುತ್ತದೆ. ಆದರೆ 'ಮಧುಸಂಚಯವ ಕೊಂಡು ಸಮಧರ್ಮಿ ಇದನುಂಡು, ಬಾಯಿ ಚಪ್ಪರಿಸಿದನೊ, 'ಧನ್ಯ' ಎಂದೆ' ಎಂದು ಸಮಧರ್ಮಿಯಾದವನು ಉಂಡುಕೊಂಡಾನು ಎಂಬ ನಿರ್ಲಿಪ್ತಭಾವದ ತೃಪ್ತಿ ಕವಿಗಿದೆ. ತಾನಾಗಿ ಮೆಚ್ಚಿ ಹಿಡಿದ 'ಮಧುಸಂಚಯ'ದ ಈ ಬಟ್ಟಲಿಯಲ್ಲಿ ಮುಳ್ಳು ಬಂದರೆ, ಅದಕ್ಕೆ ಎರಡಾಡುವುದರಿಂದ ಪ್ರಯೋಜನವಿಲ್ಲವೆಂದೂ ಗೊತ್ತಿದೆ. ಅಂತೆಯೇ 'ಸ್ವೀಕಾರದ ಮಂತ್ರ ಹಿಡಿದು ಸಾಗಿದೆ ಜೀವಿಯ ಜೀವನಪಟ್ಟದ.

ಆ ಜೀವನಪಟ್ಟದ— ಭ್ರಮರ—ಅರು ವಿಭಾಗಗಳಲ್ಲಿ ಜೀವನದ ಸಂಗ್ರಹಕ್ಕೆ ತೊಡಗಿದೆ. ನವಸೃಷ್ಟಿಗೆ ಇದೇ ಈಗ ಕಣ್ಣೆರೆಯುತ್ತಿರುವ ಕೆಂಗರಿಯ ಮರಿದುಂಬಿ ಅಲ್ಲಲ್ಲಿ ತಡವರಿಸಿದರೆ, ಒಂದೇ ಹೂವಿನ ಮೇಲೆ ಬಹಳ ಹೊತ್ತು ಕುಳಿತಿದ್ದರೆ, ಅದು ಅಂತಃಕರಣ ಪೂರ್ವಕವಾದ ದೃಷ್ಟಿಗೆ ಪಾತ್ರವಾಗಬೇಕೇ ಹೊರತು ಅರಸಿಕನ ನೀರಸ ವಿಮರ್ಶೆಗಲ್ಲ.

ಜೀವಿಯವರದು ಅಭೀಪ್ಸೆಯ ಜೀವ. 'ಒಣಗಿದ ಮರಗೈ ಬಾನೆಡೆ ತೆರೆದಿರಿ ಕರುಣೆಯು ಸುರಿಯುವುದೇ? ತೃಷೆತೀರದ ಜೀವನವೇ ಮರುಗಲು ಹೊನಗೆ ಮೂಡುವುದೇ?' ಇಲ್ಲ. ಅದಕ್ಕಾಗಿ ಶ್ರದ್ಧೆಯ ಮಡಿಲಲ್ಲಿ ಬೇರನ್ನೂ ಆಳವಾಗಿ ಬಿಡಬೇಕು. ಆಗ ಮೇಲಿನಿಂದ ವೃಷ್ಟಿಯ ಅನುಮತಿ ದೊರೆಯುವುದುಂಟು. ಒಮ್ಮೊಮ್ಮೆ ನಿರಾಶೆಯಾಗುವುದೂ ಉಂಟು. ಏಕೆಂದರೆ 'ದುಃಖವ ಕೊಡುವದು ದೇವರ ಲೀಲೆ' ಅದಕ್ಕೆ ಓಡಿಹೋಗಿ ಫಲವಿಲ್ಲ. "ಕರ್ಮದಲ್ಲಿಯೇ ದಿವ್ಯ ಸ್ವೀಕಾರಮಂತ್ರ ಪಠಿಸಬೇಕು." ಆಗ ನಿಜವಾದ ಉನ್ಮೀಲನ ಪ್ರಾರಂಭವಾಗುತ್ತದೆ. ಅಂಥ ದರ್ಶನವನ್ನು ಕವಿ ಕಂಡುಕೊಂಡಿದ್ದಾನೆ.

ಜೀವಿಯವರದು ಮಹೋನ್ನತಿ ಕಂಡಲ್ಲಿ ತಲೆಬಾಗುವ ಜೀವ. ಶ್ರೀ ಬೇಂದ್ರೆ, ಶ್ರೀ ಗೋಕಾಕ, ಗುರುದೇವ ರಾನಡೆ, ಲೋಕಮಾನ್ಯ ಟಿಳಕ, ಗಾಂಧೀಜಿ ಅವರಲ್ಲಿ ಅಂತಃಸ್ಸತ್ತ್ವದ ನಿಜವಾದ ಮಹತಿಯನ್ನರಿತು ಅದಕ್ಕೆ ಅನುಸ್ಪಂದಿಸಿದ ವಿಧಾನ ಹೃದಯವನ್ನು ಹಿಡಿಯುತ್ತದೆ. ವಿಶ್ವಕೇಂದ್ರದಲ್ಲಿ ನೆಲೆಸಿನಿಂತ ಆತ್ಮಗಳು ಮಂತ್ರವಾಣಿಯಾಗಿ ಪಥವ ತೋರುತ್ತ ಶಕ್ತಿ ನೀಡಲಿ—ಎಂಬ ಬೇಡಿಕೆ ಸಾಮಾನ್ಯಸತ್ತ್ವದ ಜೀವದ ಮಾತಲ್ಲ

ಜೀವಿಯವರ ಮುಗ್ಧ ಮಗುವಿನ ವಿಚಾರಪ್ರಣಾಲಿಯು ಮನವನ್ನು ತುಂಬುತ್ತಿದೆ. ಮಗುವಿಗೆ ಸುತ್ತಲಿನ ವ್ಯಕ್ತಿಗಳೇ ಒಂದು 'ರೂಢ'ವಾಗಿ ಕಾಣುತ್ತದೆ. 'ಸತ್ಯವ ನುಡಿ' ಎಂದು ಹೇಳುವ ಹಿರಿಯರು ತಾವೇಕೆ ಬದನೆಕಾಯಿ ತಿನ್ನುತ್ತಾರೆ?—ಎಂದು ಹಿರಿಯರಂತೆ ವಿಚಾರಿಸುವ ಮಗುವನ್ನು ನೋಡಿ ಮನ ನಾಚಿಕೊಳ್ಳುತ್ತದೆ.

ಗೇಯಗೀತೆಗಳೂ ಭಾವಗೀತೆಗಳಂತೆ ಒಂದು ವೈಶಿಷ್ಟ್ಯವನ್ನೂ ಪಡೆದಿವೆ. 'ಶ್ರೀ ರಾಘವೇಂದ್ರ' 'ಗುರುಮಹಿಮೆ' 'ಸರಸ್ವತಿ' 'ಮಹದೇವ' 'ಪಂಚಭೂತ'ಗಳಲ್ಲಿ ದರ್ಶನದ ದೃಷ್ಟಿಯಿಂದ ನೋಡುವುದಕ್ಕಿಂತ ನಾದನಿರ್ಭರತೆಯ ದೃಷ್ಟಿಯಿಂದ ನೋಡಿದಾಗ ಮತ್ತೆ ಮತ್ತೆ ಅಂದುಕೊಳ್ಳಬೇಕೆನ್ನಿಸುತ್ತದೆ.

ಟಾಗೋರರಿಗೆ 'ನೀರು ಹರಿಯುತ್ತಿದೆ' ಎಂದಾಗ, ಅದ್ಭುತವೆನ್ನಿಸಿತಂತೆ. ಸೃಷ್ಟಿಯ ರಮ್ಯತೆಯು ಚಮತ್ಕಾರದ ಮುಖಾಂತರ ತೆರೆಯುವಂತೆ, 'ಪವಾಡ' 'ಬೂರಾಲ ಮರ' 'ಕಾಳ್ಪೊರಿಗೆ' ಇವುಗಳಲ್ಲಿ ಸೃಷ್ಟಿಯ ಮೌನಗೀತಕ್ಕೆ ಶ್ರುತಿಕೊಡುವ ರೀತಿಯನ್ನು ಕಾಣಬಹುದು.

ಪ್ರಣಯಗೀತಗಳಲ್ಲಿ ಜೀವಿಯ ಹೃದಯವೇ ಸೂರೆಗೊಂಡಿದೆ. 'ಮಧುಬಂಧ'ವು ಬರಿ ನಕ್ಕು ನಲಿವ ಸಂಚಾರಿ ಅವಧಿಯೆಂದಾಗಲಿ, ' ಎದೆಸೂಗಿ, ತಲೆಬಾಗಿ, ಬಾಳ ಬೆಳಕಾದಂದು ಕುಡಿಬಿಟ್ಟ ಹಣತೆಗಳ ಸಾಲು ಚೆಂದ' ವಾದರೆ ಬಾಳಿಗೆ, ಅನುಭವಿಸಿದ ಅರ್ಥ ಬಂದೀತು. ಪ್ರಿಯೆಯಿಲ್ಲವಾಗ ಪ್ರಿಯತಮನ ಸ್ಥಿತಿಯನ್ನು ಅನುಭವಿಸಿದವರೇ ಬಲ್ಲರು.

'ಭಾವನೆಯ ಆಳದಲಿ ಬೇರೂರಿ ನಿಂತಿರುವೆ
ಬುದ್ಧಿಯಲಿ ಬೆಳೆದಿರುವೆ ಮರೆಯಲೆಂತು ?

ಮನದಲ್ಲಿ ಮೂಡಿರುವೆ ಪ್ರಾಣದಲಿ ಮಿಡಿಯುತಿಹೆ
ನೀನಿಲ್ಲ ಎದೆ ಬಡಿತ ತಡೆಯಲೆಂತು ?'

ವಿರಹಿ ಯಕ್ಷನಿಗಂದು ಮೇಘದೂತನು ಇದ್ದ,
ನನಗಿಂದು ಸಿಕ್ಕಿಹನು ಪತ್ರದೂತ

ದಿನವೆಲ್ಲ ಕಾಯುವೆನು ಅಂಚೆಮನೆ ಹಾಳಾಗ
ನನಗೆ ಬರುವುದು ಬರಿಯ ಪತ್ರಭೂತ

ತಡೆಯಲಾರದೆ ಒಮ್ಮೆ ತಂತಿಯನು ಮಾವನಿಗೆ
ಕಳಿಸಬೇಕೆಂದಿದ್ದೆ ಅಜರೇನು ?'

ಕುಸುಮಕೋಮಲೆ ನೀನು ಬಾಡಿ ಮುದುಡಲು ಬಹುದು
ಎಂದು ವಿಹ್ವಲಗೊಂಡೆ ಮಾಡಲೇನು ?

ಈ ಮೂರು ಪದ್ಯಗಳಲ್ಲಿಯ ಭಾವನೆಯ ತೂಕ, ತೂಕಕ್ಕೆ ತಕ್ಕ ಅಭಿವ್ಯಕ್ತಿ, ಅನುಭವವನ್ನು ಹುಟ್ಟಿಸುವ ಶಕ್ತಿಯನ್ನು ಹೃದಯ ತೆರೆದವ ಮೆಚ್ಚಲೇಬೇಕು. ' ಜೈತ್ರೋದಯ " ದಲ್ಲಿಯ ಒಕ್ಕಣಿಕೆಗಿದ್ದ ನೇರತೆ- ಭಾವಗಳು ಹೊಂದಿಕೊಂಡಿರುವುದು ಆ ಭಾವ ಉಚಿತ ಪದಗುಂಫನದಲ್ಲಿ ಮೂಡಿಕೊಳ್ಳುವುದು ಓದುಗನ ಒಳಜೀವಕ್ಕೆ ತಾಕುತ್ತವೆ. 'ಅಭಿಸಾರಿಕೆ' 'ನಿನ್ನ ನೆನಹು' ಗಳಲ್ಲಿಯ ಪ್ರತೀಕ್ಷೆಯ ಎರಡು ಪರಿಗಳು, ಸಾಮಾನ್ಯವಾಗಿ ಕಾಣಿಸಿಗುವುದು ಮುಸ್ಪರವೇ. 'ಕುರುಡುಪ್ರೀತಿ' 'ತಪ್ಪಿದ್ದರೇನು' ಗಳಲ್ಲಿಯ ಮೆಲುನಗೆಯ ಕೊಂಕಿಲ್ಲದ ಹಾಸ್ಯ ಮನಂಬುಗುವ ಕಾವ್ಯತ್ವವನ್ನು ಹೊಂದಿವೆ. 'ಬೊಗಸೆಗಂಗಳು' ದಲ್ಲಿಯ ಯೌವನವ ಮದ ಮನಕೆಗುಂಗನ್ನು ಹಿಡಿಸುವಂತಹದು. 'ನನ್ನ ಮರೆತು ಬಿಡು' 'ಹೆಣ್ಣಿನೂಲುನೆ,' 'ಮಧುಗಂಗೆ'ಗಳು ಕವನಸಂಕಲನದ ಗುಡಿಗೆ ಗೋಪುರವನ್ನಿಡುತ್ತವೆ.

' ಕೆಸರಿನಲ್ಲಿ ಕಾಲಿಟ್ಟು ಬೆಳೆದಿಹೆನು
ಕಪ್ಪಚೀವಿನಾನು,
ಮುಖವನೋಡಿ ಮರುಳಾಗ ಬೇಡೆನುವೆ
ಬಾಳಲಾರೆ ನೀನು '

ಎಂದು "ತನ್ನೆಡೆಗೆ ತೂರಿಬಂದ ಭ್ರಮರಕ್ಕೆ ಬುದ್ಧಿ ಹೇಳುವ" ವಿಧಾನದಲ್ಲಿ ವ್ಯಕ್ತವಾಗುವ ಹೃದಯಪಾವಿತ್ರ್ಯ,

ಕಣ್ಣ ಕೆರೆಗಳಿಗೆ ಕೋಡಿಯೊಡೆದಿಹುದು
ತೋಡಿಕೊಳ್ಳಲೇನು ?
ಜೀವ ಬೆರೆತ ಆ ತಂತಿ ಹರಿದಿಹುದು
ಹಾಡಿಕೊಳ್ಳಲೇನು?

ಎಂಬಲ್ಲಿಯ ದುಃಖ ಸಂವೇದನೆ,

ಐದು ಇಂದ್ರಿಯಗಳನು ವಿಂಗಡಂತಃಕರಣ
ಇರೆ ಸಾಕು ಬಾಳಾಯ್ತು ಪರಿಪೂರಣ
ನಡೆದದ್ದೆ ಜನುಮಗಳ ಪರಿಭ್ರಮಣವು
ಶಾಶ್ವತವೆ ಬಾಳೊಂದು ಸಂಕ್ರಮಣವು.

ಎಂಬಲ್ಲಿ ಜೀವಕ್ಕೆರುವ ಉನ್ನತ ಆದರ್ಶ ಕವಿಜೀವನವನ್ನು ಎತ್ತರಿತ್ತದೆ. ಅಂತೆಯೆ ಮನತೆರೆದ ಓದುಗರನ್ನೂ ಎತರಿಸುತ್ತದೆ.

ಕವನಸಂಕಲನದ ಶೈಲಿ, ಭಾಷೆ, ಛಂದಸ್ಸುಗಳ ವಿಷಯಕ್ಕೆ ಪ್ರಶ್ನಿಸುವದು. ಅರಸಿಕತನಕ್ಕೆ ದಾರಿ ಮಾಡಿ ಕೊಡುತ್ತದೆ. ಶ್ರೀ.ವಿ.ಕೃ ಗೋಕಾಕರು ಮುನ್ನುಡಿಯಲ್ಲಿ ಹೇಳಿದಂತೆ, ಬೆಳೆಯಲಿರುವ ಕವಿಯಲ್ಲಿ 'ಒಂದೆರಡು ಪಕಳೆವಾತು ಉದಿರಾಡಬಹುದು.' ಆದರೆ 'ತುಂಬೀತು ಸ್ವಾಂತರಂಗ' ಆದುದರಿಂದ ಮೂಲಭಾವವನ್ನು ಅರ್ಥಮಾಡಿಕೊಂಡಾಗ ಅಗಬಹುದಾದ ರಸಾಸ್ವಾದ, ಭಾಷೆ-ಛಂದಸ್ಸುಗಳ ಶಸ್ತ್ರಕ್ರಿಯೆ ನಡೆಸಿದರೆ ಖಂಡಿತ ಆಗುವಂತಿಲ್ಲ. ❋

—೩೨ನೆಯ ಪುಟದಿಂದ ಬಂದುದು

ವಿರಾಡ್ರೂಪ ತಾಳಿದ ಭೂತಕಾಲದಲ್ಲಿ ವ್ಯಕ್ತಿಗೆಲ್ಲಿಯ ಬೆಲೆ? ಪ್ರತಿ ಕ್ಷಣವೂ ನಿಮಿಷಾರ್ಧದಲ್ಲಿ ಭೂತವಾಗಿ ಹೋಗುವಂತೆ, ವ್ಯಕ್ತಿಯು ಮಣ್ಣಲ್ಲಿ ಬೆರೆತುಹೋಗುತ್ತಿದ್ದಾನೆ. ಈ ನೋವಿನಿಂದ, ಈ ಭಯಾನಕ ಏಕಾಕಿತನದಿಂದ ಮುಕ್ತವಾಗುವ ಪಾರಿಯೆಂದರೆ, ಅದೊಂದೇ— ಜೀವನದಿಂದ ಪರಾಙ್ಮುಖವಾಗುವುದು. ಹೌದು. ಅದೇ— ನನಗೆನಿಸುತ್ತದೆ. ನಾನು ಮೋಡವಾಗಬೇಕು, ಮೋಡವಾಗಿ ಇಡೀ ಆಕಾಶವನ್ನೆಲ್ಲ ವ್ಯಾಪಿಸಿನಿಲ್ಲಬೇಕು. '

ಇಷ್ಟು ಸುಂದರವಾದ, ಕಣ್ಣೀರುಮಿಡಿಸುವ, ಕರುಣಾಜನಕ ಕತೆಯನ್ನು ನಾನು ಓದುತ್ತಿರುವುದು ಈ ಕೆಲ ವರ್ಷಗಳಲ್ಲಿ ಇದೇ ಮೊದಲನೆಯದು. ಯಾವ ಭಾಷೆಗೂ ಗೌರವ ತರುವ ಒಂದು ಮಹತ್ ಕೃತಿ ಇದಾಗಿದೆ. 'ಜಯಂತಿ' ಇಂಥ ಕತೆಯನ್ನು ಪ್ರಕಟಿಸಿ—ಸಣ್ಣ ಕತೆಯ ಸಾಹಿತ್ಯದಲ್ಲಿ 'ನವವಾಸ್ತವತೆಹು' ಹೊಸಪಂಥವನ್ನು ನಾಡಿನ ಕತೆಗಾರರಿಗೆ ಹಾಕಿಕೊಟ್ಟಿದೆ ಶ್ರೀ. ಪಾಸನೀಸರೂ ಈ ಕಾರ್ಯಕ್ಕೆ ಬಹುಮಟ್ಟಿಗೆ ಕಾರಣರಾಗಿದ್ದಾರೆ. ಕೃತಕತೆಯ ಬೆಡಗಿಲ್ಲದ ಈ ನವವಾಸ್ತವವಾದ, ನಮ್ಮ ನಾಡಿನ ಸಾಹಿತ್ಯಕ್ಕೆ ಎಷ್ಟು ಆರೋಗ್ಯದಾಯಕವೋ ಎಂಬುದನ್ನು ಜನ ನಿರ್ಣಯಿಸಬೇಕು, ಕತೆಗಾರರು ಸ್ವೀಕರಿಸಬೇಕು !! ❋

ರಜಿಸ್ಟ್ರೇಶನ್ ಆಫ್ ನ್ಯೂಜ್‌ಪೇಪರ್ (ಸೆಂಟ್ರಲ್) ರೂಲ್ಸ್ ೧೯೫೬ ರ ೞನೆಯ ನಿಯಮಕ್ಕೆ ಸಂಬಂಧಿಸಿದ ಪ್ರಕಾಶ, "ಜಯಂತಿ" ಮಾಸಪತ್ರಿಕೆಯ ಒಡೆತನ ಮತ್ತು ಇತರ ಸಂಗತಿಗಳನ್ನು ಕುರಿತ ವಿವರಣೆ :

೧	ಪತ್ರಿಕೆಯ ಪ್ರಕಾಶನ ಸ್ಥಳ	"ಜಯಂತಿ" ಕಾರ್ಯಾಲಯ, ವಿಜಯರೋಡು, ಧಾರವಾಡ.
೨	ಪತ್ರಿಕೆಯ ಕಾಲನಿಯತಿ	ಮಾಸಪತ್ರಿಕೆ
೩	ಮುದ್ರಕರ ಹೆಸರು	ಬಸವರಾಜ ಹೊರಡಿ, ಧಾರವಾಡ
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	ಲಲಿತ ಮುದ್ರಣಾಲಯ, ಧಾರವಾಡ.
೪	ಪ್ರಕಾಶಕರ ಹೆಸರು	ಕೃಷ್ಣಶರ್ಮ ಬೆಟಗೇರಿ
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	"ಜಯಂತಿ" ಕಾರ್ಯಾಲಯ, ವಿಜಯರೋಡ್, ಧಾರವಾಡ.
೫	ಸಂಪಾದಕರ ಹೆಸರು	ಕೃಷ್ಣಶರ್ಮ ಬೆಟಗೇರಿ
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	"ಜಯಂತಿ" ಕಾರ್ಯಾಲಯ, ವಿಜಯರೋಡ್, ಧಾರವಾಡ.
೬	ಪತ್ರಿಕೆಯ ಒಡೆಯರು	ಕೃಷ್ಣಶರ್ಮ ಬೆಟಗೇರಿ

"ಜಯಂತಿ" ಪತ್ರಿಕೆಯ ಒಡೆಯ, ಪ್ರಕಾಶಕ, ಸಂಪಾದಕನಾದ ನಾನು, ಮೇಲಿನ ವಿವರಗಳ ಸತ್ಯತೆಯ ವಿಷಯದಲ್ಲಿ ನಂಬುಗೆಯನ್ನು ಇವರ ಮೂಲಕ ಸಾರಿ ಹೇಳುತ್ತೇನೆ.

ಕೃಷ್ಣಶರ್ಮ ಬೆಟಗೇರಿ

ಸಾದರ ಸ್ವೀಕಾರ

೫೭ ಪ್ರಣತ (ವಾರಪತ್ರಿಕೆಯ ಶ್ರೀಕೃಷ್ಣ ಪರ್ಯಾಯೋತ್ಸವ ವಿಶೇಷಾಂಕ) ಸಂಪಾದಕರು ಶ್ರೀ. ಗಳಾದ ಎ. ಜನಾರ್ದನ ಆಲ್ಸೆ, ಬನ್ನಂಜೆ ರಾಮಾಚಾರ್ಯ, ಪಿ. ಶೀನಸೆಟ್ಟಿ ಅವರು. ಪ್ರಕಾಶಕರು ಶ್ರೀ. ಎ. ಜೆ. ಆಲ್ಸೆ, ರಾಮಕೃಷ್ಣ ಬಿಲ್ಡಿಂಗ್, ಉಡುಪಿ. ಕ್ರೌ. ಫೋ. ೬೦ ಪುಟಗಳು. ಬೆಲೆ ೦೦–೫೦.

ಉಡುಪಿಯ ಪರ್ಯಾಯೋತ್ಸವಕ್ಕೆ ಸಂಬಂಧಿಸಿದ ಒಂದೆರಡು ಲೇಖನಗಳಲ್ಲದೆ, ಬೇರೆ ವಿವಿಧ ವಿಷಯಕವಾದ ಲೇಖನಗಳೂ ಕಥೆ-ಕವನಗಳೂ ಇದರಲ್ಲಿ ಪ್ರಕಟವಾಗಿವೆ. ಬ್ರಹ್ಮಸೂತ್ರ ಭಾಷ್ಯವನ್ನು ಕುರಿತು ಬರೆದ ಪರಿಚಯಾತ್ಮಕ ಲೇಖನವು ಲೇಖಕರ ನೈದುಷ್ಯ ನಿದರ್ಶಕವಾಗಿದ್ದು, ವಾಚಕರಿಗೆ ಪ್ರಯೋಜನಕಾರಿಯೆನಿಸುವಂತಿದೆ. ಸಾಹಿತ್ಯ ಪರಿಚಯ-ವಿಮರ್ಶೆಗಳನ್ನು ಒಳಗೊಂಡ ಲೇಖನಗಳೂ ಚೆನ್ನಾಗಿವೆ ಸ್ವತಂತ್ರ ಕಥೆಗಳ ಮಟ್ಟ ಮಾತ್ರ ಅಷ್ಟು ಎತ್ತರದ್ದಾಗಿ ಕಾಣವುದಿಲ್ಲ. ಅಚ್ಚುಕಟ್ಟಾದ ಮುದ್ರಣದಿಂದ ಕೂಡಿದ ಸಂಚಿಕೆಯಿದು ವಾಚನೀಯವಾಗಿದೆ.

೫೮ ಶ್ರೀರಾಮಾಶ್ವಮೇಧದ ರಸತರಂಗಗಳು (ವಿಮರ್ಶಾತ್ಮಕ ಗ್ರಂಥ). ಬರೆದವರು ಶ್ರೀಮಾನ್ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಬಂಟ್ವಾಳ. ಪ್ರಕಾಶಕರು ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಅಂಡ್ ಏಜನ್ಸೀಜ್, ಮಂಗಳೂರು ೧. ಕ್ರೌ. ಅ. ೧೬ + ೧೩೪ ಪುಟಗಳು. ಬೆಲೆ ಉತ್ತಮ ಪ್ರತಿಗೆ ೩. ೦೦; ಸಾಮಾನ್ಯ ಪ್ರತಿಗೆ ೨. ೫೫.

೫೯ ಶಕುಂತಲಾ (ನಾಟಕ) ಮೂಲ ಕಾಲಿದಾಸನ ಸಂಸ್ಕೃತ ಕಥಾನಕವನ್ನು ತೆಗೆದುಕೊಂಡು, ಇಂದಿನ ರಂಗಭೂಮಿಗೆ ಒಗ್ಗುವಂತೆ ಸ್ವಾತಂತ್ರ್ಯವಹಿಸಿ, ಶ್ರೀಮಾನ್ ಜಿ. ಎಸ್. ಶಾಸ್ತ್ರಿ (ನಾಜಗಾರ) ಅವರು ಬರೆದಿದ್ದಾರೆ. ಪ್ರಕಾಶಕರು ಶ್ರೀಮಾನ್ ಗ. ಶ. ಸರ್ವಕರ್ಣೇಶ್ವರ, ಸಾಧನ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ ಜಿಲ್ಲಾ. ಕ್ರೌ. ಅ. ೮೦ ಪುಟಗಳು. ಬೆಲೆ ೧. ೫೦.

೬೦ ಕಾಗೆಗೆ ಹೇಳಿದ ಕಥೆ (ಏಳು ಸಣ್ಣ ಕಥೆಗಳ ಸಂಕಲನ). ಬರೆದವರು ಶ್ರೀಮಾನ್ ಶ್ರೀನಿವಾಸ ಹಾವನೂರ. ಪ್ರಕಾಶಕರು: ಪರಾಗ ಪ್ರಕಾಶನ, ವಿಜಯ ರೋಡ್, ಧಾರವಾಡ. ಡೆ. ಗ್ರೌ ದ ೧೩೦ ಪುಟಗಳು. ಬೆಲೆ ೨ ೨೫.

೬೧ ಮಹಿಳೆಯರು (ಗಾಂಧೀಗ್ರಂಥಮಾಲೆ ೧). ಅನುವಾದಕರು ಶ್ರೀಮಾನ್ ಜಿ. ಡಿ. ದೇಸಾಯಿ ಬಿ.ಎ. ಧಾರವಾಡ. ಪ್ರಕಾಶಕರು ಶ್ರೀಮಾನ್ ರಾ. ಶ್ರೀ. ಹುಕ್ಕೇರಿಕರ, ಅಧ್ಯಕ್ಷ ಸ್ಥಾನಿಕ ಸಂಪಾದಕ ಮಂಡಲಿ, 'ವಿದ್ಯಾಗಿರಿ' ಧಾರವಾಡ. ಫೂ ಕ್ರೌ. ಅ. ೮೨ ಪುಟಗಳು. ಬೆಲೆ ೦೦. ೭೫.

೬೨ ಒಳ್ಳೆಯ ಜೀವನ (ಗಾಂಧೀ ಗ್ರಂಥಮಾಲೆ ೨). ಅನುವಾದಕರು ಶ್ರೀಮಾನ್ ಶಂಕರ ಪಾಟೀಲ, ಹುಬ್ಬಳ್ಳಿ. ಪ್ರಕಾಶಕರು ಮೇಲಿನವರೆ. ಫೂ. ಕ್ರಾ. ಅ. ೮೦ ಪುಟಗಳು. ಬೆಲೆ ೦೦. ೭೫.

೬೩ ಅಸ್ಪೃಶ್ಯತೆ (ಗಾಂಧೀಗ್ರಂಥಮಾಲೆ ೩). ಅನುವಾದಕರು ಪ್ರೊ. ಜಿ. ಡಿ. ನಾಡಕರ್ಣಿ, ಧಾರವಾಡ. ಪ್ರಕಾಶಕರು ಮೇಲಿನವರೆ. ಫೂ. ಕ್ರಾ. ಅ. ೮೮ ಪುಟಗಳು. ಬೆಲೆ ೦೦. ೭೫.

ಕ್ರಮಾಂಕ ೬೧ ರಿಂದ ೬೩ ರ ವರೆಗಿನ ಪುಸ್ತಕಗಳು ಮಹಾತ್ಮಾ ಗಾಂಧಿಯವರ ವಿಚಾರಪ್ರಚಾರಕ್ಕಾಗಿ ಹೊರಟುವುಗಳು. ಆ ಆ ವಿಷಯಗಳನ್ನು ಕುರಿತು ಮಹಾತ್ಮಾಜಿಯವರು ಬೇರೆ ಬೇರೆ ಕಡೆಗೆ ಬರೆದುದನ್ನು ಒಂದೆಡೆಯಲ್ಲಿ ಸಂಕಲಿಸಿ, ಒಳ್ಳೆಯ ರೀತಿಯಿಂದ ಅನುವಾದ ಮಾಡಲಾಗಿದೆ. ಮುದ್ರಣ ಬಂಧನಗಳೂ ಚೆಚ್ಚುಕಟ್ಟಾಗಿವೆ.

ಇಂದಿನ ಕಾಲದಲ್ಲಿ ಮಹಾತ್ಮರ ವಿಚಾರಗಳು ನಾಡಿನ ಪ್ರತಿಯೊಬ್ಬನೆ ಮನಸ್ಸು–ಹೃದಯಗಳಲ್ಲಿಯೂ ಹೊಕ್ಕು ನಿಲ್ಲಬೇಕಾಗಿದೆ. ಇಲ್ಲವಾದರೆ ನಾಡು ಮಾನವರೂಪದ ಪ್ರಾಣಿಗಳಿಂದ ತುಂಬಿದ್ದಾಗಿ ಅಸಂತುಷ್ಟಿ, ಅಸಮಾಧಾನಗಳ ನೆಲೆವೀಡಾಗುವ ಸಂಭವವಿದೆ. ವರ್ತಮಾನ ಅಂತಹ ಭವಿಷ್ಯಸೂಚನೆಗಳಿಂದ ತುಂಬಿಕೊಂಡಿದೆ.

ಹಿರಣ್ಯಕಶಿಪುವಿನ ಮನೋಧರ್ಮ ಹೆಚ್ಚಾಗಿರುವ ಈ ಕಾಲದಲ್ಲಿ, ಮಹಾತ್ಮರ ಈ ವಿಧಾಯಕ ವಿಚಾರಗಳನ್ನು ಮನಸ್ಸಿಗೆ ಅಂಟಿಸಿಕೊಳ್ಳುವವರು ಎಷ್ಟು ಜನರು ಹೊರಡಬಹುದೋ: ಈ ನಿರಾಶೆಗೆ ಅವಕಾಶವಿದೆಯಾದರೂ ಊದಬೇಕಾದ ಸಂದೇಶಶಂಖವನ್ನು ಊದಲೆಬೇಕು ಈ ಗಾಂಧೀಗ್ರಂಥಮಾಲೆ ಆ ಕಾರ್ಯಕ್ಕಾಗಿ ಮುಂದೆ ಬಂದುದು ಸಂತೋಷದ ಸಂಗತಿ.

ಶಾಂತಿ-ಸಮಾಧಾನಗಳಿಂದ ಬದುಕಬೇಕೆಂದು ಮನವಾರೆ ಬಯಸುವ ನಾಡಿನ ಜನತೆ, ಸುಲಿದ ಬಾಳೆಯ ಹಣ್ಣಾಗಿ ಕೈಗೆ ದೊರೆಯಲಿರುವ ಈ ಗಾಂಧೀ ಸಾಹಿತ್ಯವನ್ನು ಕೊಂಡು, ಓದಿ, ಬುದ್ಧಿ-ಮನಸ್ಸುಗಳನ್ನು ಸಂಸ್ಕರಿಸಿಕೊಳ್ಳಬೇಕು.

೬೪ ವನಿತಾವಿದ್ಯಾ ಸಂಸ್ಥೆಗಳು (ವೀರಮಾತಾ ಮಾಸ ಪತ್ರಿಕೆಯ ವಾರ್ಷಿಕ ಸಂಚಿಕೆ) ಸಂಪಾದಕರು ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ., ಎಲ್ ಎಲ್. ಬಿ. ಧಾರವಾಡ. ಪ್ರಕಾಶಕರು ಶ್ರೀಮಾನ್ ಲ ರಾ. ಪುರಾಣಿಕ, ವನಿತಾಸೇವಾ ಸಮಾಜ, ಧಾರವಾಡ. ಕ್ರೌ. ೧ ದ ೮೪ ಪುಟಗಳು.

ಧಾರವಾಡದ ವನಿತಾಸೇವಾ ಸಮಾಜವು ನಡೆಸಿರುವ ವಿವಿಧ ಶಿಕ್ಷಣ ಸಂಸ್ಥೆಗಳ ಪರಿಚಯಗಳೂ ವಿದ್ಯಾರ್ಥಿನಿ-ಅಧ್ಯಾಪಿಕೆಯರ ಲೇಖನಗಳೂ ಪ್ರಕಟವಾಗಿವೆ ವನಿತಾಸೇವಾ ಸಮಾಜವು ನಡೆಸಿರುವ ಶಿಕ್ಷಣ ಪ್ರಸಾರ, ಸಮಾಜ ಸೇವೆಯ ಕಾರ್ಯಗಳು ಪ್ರಶಂಸನೀಯವಾಗಿವೆ

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! **ಜಾನಪದ ಪ್ರೀತಿಗೀತಗಳು!!**

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣೆಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕದ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ನಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳಿದೈತವ್ವಾ —
ಮುಂದ ಹಿಂದ ಮ್ಯಾಲ ತಳಗs — ಚೆಂದs ಗಂಧs ಹರಡೈತವ್ವಾ!

ಎಂಬ ಆನಂದಾನುಭವವನ್ನು ವ್ಯಕ್ತಪಡಿಸದೆ ಇರಲಾರರು.

X X X X

ಕ್ರಾ. ಅ. ೮೦ ಪುಟಗಳು **ಬೆಲೆ ರೂ. ೧. ೨೫ ನ. ಪೈ.**

ಬೇಕಾದವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು:

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ: ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ಬೆಳುಪು-ಕಪ್ಪುಗಳ ಕಲಹ

ಕಲಹ ತಲೆದೋರಿದೆ ನೋಡಾ ಬೆಳುಪು ಕಪ್ಪು ಬಣ್ಣಗಳಲಿಂದು! ಬೆಳುಪೆಂಬುದು : 'ನಾನು ಮೇಲು, ನೀನು ಕೀಳು!' ಕಪ್ಪು ಎಂಬುದು : 'ನನ್ನದೆಂದು ಬಣ್ಣ, ನಿನ್ನದೊಂದು ಬಣ್ಣ. ನನಗೂ ಬಲವಿದೆ, ಬುದ್ಧಿಯಿದೆ! ಮನಸ್ಸು ಮಾಡಿದರೆ ನಿನ್ನ ಬಣ್ಣವನೆ ಬದಲಿಸಿ ಬಿಡಬಲ್ಲೆ!' ನಡೆದಿದೆ ಕಲಹ; ನಡೆದಿದೆ ಕಾಳೆಗ! ಲೋಕವೆಲ್ಲವೂ ಕಾತರ-ಕಳವಳಗಳಲ್ಲಿದೆ, ಈ ಕಲಹವ ನೋಡುತ್ತ!

* * * *

ಬಸಿಲು-ಚಳಿಗಳು ನಿರ್ಮಿಸುತಿಹವು ಮಾನವನ ಕಪ್ಪು ಬೆಳ್ಪು ಹೊರ ಬಣ್ಣಗಳನು. ಈ ಹೊರಗಿನ ವಿಕೃತಿ, ಮಾನವನ ಮನಸ್ಸು, ಬುದ್ಧಿ, ಹೃದಯ ಗಳ ಬಣ್ಣವಲ್ಲಿ ಭೇದವತೋರಿಸಬಲ್ಲದೇನಣ್ಣಾ! 'ಅಶಕ್ಯ! ಅಶಕ್ಯ!' ಎಂದು ಇಂದಿನ ಪಕ್ಕಬಲಿತ ವಿಜ್ಞಾನವ ವಿಹಗರಾಜನೇ ಉದ್ಘೋಷಿಸುತಿರುವಾಗ, 'ಕಪ್ಪು ದಾಸ, ಬಿಳಿಯ ಧನಿ!' ಎಂದು ಕವನ ಹೂಡುವವರನ್ನು ಬುದ್ಧಿ ಯುಳ್ಳವರೆಂದು ಭಾವಿಸಬಹುದೇನಯ್ಯಾ!

* * * *

ಮಾನವನು ಅರಿವ ಮರೆತು ಕುರಿಯಂತೆ ಏಸುದಿನವಿದ್ದಾನು ತಂದೆ! ಅರಿವ ಮನಸ್ಸು, ತಿಳಿವ ಬುದ್ಧಿ, ಅನುಭವಿಸುವ ಹೃದಯ ಆತನಲ್ಲಿಹವು ಕಾಣಯ್ಯಾ! ನಿದ್ದೆಗುಳ್ಳಿವ್ವಿ ಮನಸ್ಸು-ಬುದ್ಧಿ-ಹೃದಯಗಳು ಎಚ್ಚತ್ತಾಗ, ಮಿಂಚಿನಗತಿಯಲ್ಲಿ ಆತ ತನ್ನ ಕುರಿತನವ ತೊರೆಯಬಲ್ಲ; ಮಾನವತೆಯು ತುಂಬಿಕೊಂಡು ಮೆರೆಯಬಲ್ಲ! ಇದನು ನಮ್ಮ ಕಾಲರಾಯ ಚೆನ್ನಾಗಿ ಬಲ್ಲ!

—ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ...

ನೀನುಯ ಜಗಳಕ್ಕೆ ಸದ್ಯೋವಿರಾಮ (ಸಂಪಾದಕೀಯ)
ಸಂಪಾದಕರು ೩೦೯

ನಾಡಪದೆ (ಪ್ರಾಸಂಗಿಕ ಟಪ್ಪಣಿಗಳು)
'ಕಾಲಭೈರವ' ೩೩೧

ಬಿದರು (ಒಂದು ರೇಡಿಯೋ ಪ್ರಹಸನ)
ಶ್ರೀ, ಪಿ. ಬಿ. ದೇಶಪಾಂಡೆ ಮುಂಬಯಿ ೩೩೩

ಟೀಪುಸುಲ್ತಾನ ವಸ್ತುಸಂಗ್ರಹಾಲಯ (ಪರಿಚಯಾತ್ಮಕ ಲೇಖನ)
ಭಾರತ ಸರಕಾರದ ಪ್ರಕಾಶನ ಶಾಖೆ ೩೪೦

ಮಾಹಿಸದಿಯ ನುಡಿಲು (ಕವನ)
ಶ್ರೀ ಸುಂದರ ನಾಡಕರ್ಣಿ ವಲ್ಲಭವಿದ್ಯಾನಗರ. ೩೪೩

ಗೋಪಣ್ಣನ ಪ್ರಶ್ನೆ (ನವ್ಯಕಥೆ)
ಶ್ರೀ ಆರ್. ಪಿ. ಕುಲಕರ್ಣಿ,ಎಂ. ಏ. ಬೆಳಗಾವಿ ೩೪೩

ಬಿಹು (ಅಸಾಮಿಗಳ ಜನಜೀವನ)
ಶ್ರೀ ಪ್ರ. ಜಿಂ. ಗುಜಿ, ಗೌಹಟ್ಟಿ ೩೪೬

ನಾಳ-ನರಕ (ಕವನ)
ಶ್ರೀ ಎಂ. ಗಂಗಾಧರ ಭಟ್ಟ, ನೀರ್ಚಾಲು ೩೪೮

ಭಾರ್ಗವಿ (ಪೌರಾಣಿಕ ಜೀವನರೂಪಕ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ, ... ೩೪೯

ಶ್ರೀ. ಕಣವಿಯವರ ಕವಿತಾವಿತಾನ
ಶ್ರೀ ಎನ್. ಭೀಮಭಟ್ಟ ಕನ್ಯಾನ ೩೫೩

ನೂಳಪ್ಪ ನೀನು ತಿಂದ ಕತೆ (ಸಣ್ಣ ಕತೆ)
"ರಂಜನ" ಭಟ್ಟ, ಮದ್ರಾಸ ೩೫೫

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ (ಪರಿಣ್ಯ)
ಶ್ರೀಮತಿ ವಸಂತಲಕ್ಷ್ಮಿ, ಮದ್ರಾಸ ೩೬೨

ಬಿಡಿಲಿನ ಭೇರಿ (ಕವನ)
ಶ್ರೀ ಆನಂದಕಂದ ೩೬೪

ಜೀವನರಂಗ (ಕವನ)
ಶ್ರೀ ವೀರಣ್ಣ ಎನ್. ಕರಬಂಟನಾಳ, ಕಥಣಿ ೩೬೪

ಸಾದರ ಸ್ವೀಕಾರ ....(ಕವರ್ ಒಳೆಯ ಪುಟದಲ್ಲಿ)

ಜಯಂತಿ

ಸಂಪುಟ ೩೨] [ಸಂಚಿಕೆ ೧೦

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪ ಡೆ ಯ ಬ ಹು ದಾ ದ
ಮಾಸಪತ್ರಿಕೆ

ಸಂಪಾದಕರು :
ಡಿ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ಪತ್ರಗಳಿಗಾಗಿ
ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಸೀಮೆಯ ಜಗಳಕ್ಕೆ ಸದ್ಯೋವಿರಾಮ

ಮುಂಬಯಿ-ಮೈಸೂರ ಗಡಿಯ ಸಮಸ್ಯೆಯು, ಮುಂಬಯಿಯ ಮುಖ್ಯಮಂತ್ರಿ ಮಾನ್ಯ ಚವ್ಹಾಣರ ಚಟುವಟಿಕೆಗಳ ಮೂಲಕ, ವಾತಾವರಣದಲ್ಲಿ ಒಂದು ಬಗೆಯ ಕಾವನ್ನು ಹುಟ್ಟಿಸಿದ್ದಿತು. ಕೇಂದ್ರಸರಕಾರವು ಈ ವಿಷಯದಲ್ಲಿ ಇದುವರೆಗೂ ತಳೆದಿದ್ದ ದೀರ್ಘಸೂತ್ರವೃತ್ತಿಯು ಕನ್ನಡಿಗರನ್ನು ಸಾಕಷ್ಟು ಭೀತಿ-ಸಂದೇಹಗಳಲ್ಲಿ ಮುಳುಗಿಸಿದ್ದಿತು.

ಈ ಗತಿಯ ಜಗಳಾಟದಲ್ಲಿ, ಮರಾಠಿಗರೆಲ್ಲರೂ ಏಕಮುಖವಾಗಿ ನಡೆಸಿದ ಆಕ್ರಮಣಬುದ್ಧಿಯ ದುಷ್ಪಚಟುವಟಿಕೆಗಳೂ, ಕನ್ನಡಿಗರಲ್ಲಿ ಕಾಣುತ್ತಿದ್ದ ಔದಾಸೀನ್ಯ-ಕ್ರಿಯಾರಾಹಿತ್ಯಗಳೂ ಕನ್ನಡ ಜನಸಾಮಾನ್ಯರಲ್ಲಿ ತೀವ್ರನಿರಾಶೆಯನ್ನೇ ಹುಟ್ಟಿಸಿದ್ದುವೆಂದು ಹೇಳಬಹುದು. ನಿತ್ಯನಿತ್ಯ ಮರಾಠೀ ಪತ್ರಿಕೆಗಳನ್ನು ಓದುವ ಕನ್ನಡಿಗರಂತೂ, ಆ ಪತ್ರಿಕೆಗಳಲ್ಲಿ ಬರುತ್ತಿದ್ದ ದುಡುಕಿನ ಬರೆಹಗಳನ್ನು ಓದಿ, ಬೆಳಗಾಂವಿ-ನಿಪ್ಪಾಣಿ-ಕಾರವಾರ ಪ್ರದೇಶಗಳು ಮಹಾರಾಷ್ಟ್ರಕ್ಕೆ ಹೋಗುವುದು ಖಂಡಿತವೆಂದೇ ಮಾತನಾಡತೊಡಗಿದ್ದರು.

ಮಾನ್ಯ ಚವ್ಹಾಣರು ಮಹಾರಾಷ್ಟ್ರದಲ್ಲಿ ಪ್ರಭಾವಶಾಲಿಗಳಾದ ಮುಂದಾಳುಗಳೇನೋ ಆಗಿರಬಹುದು; ಅಲ್ಲದೆ ಅವರು ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳೂ ಆಗಿರಬಹುದು. ಅಂತಹರೂ ಆಕ್ರಮಣವೃತ್ತಿಯ ಅನ್ಯಾಯದ ಬೇಡಿಕೆಗಳನ್ನು ಪುರಸ್ಕರಿಸಬೇಕೆ ? ಮಾನ್ಯ ಚವ್ಹಾಣ ಅವರಿಗೆ ಸ್ವಲ್ಪಾವರೂ ರಾಜಕೀಯ ವಿವೇಕಬುದ್ಧಿಯಿದ್ದರೆ, ಅವರು ಈ ಅಧಿಕವರ್ತನದಿಂದ ದೂರ ಉಳಿಯಬಹುದಾಗಿತ್ತು.

ತಮ್ಮದಲ್ಲದ ಪ್ರದೇಶವನ್ನು ಕಿತ್ತುಕೊಳ್ಳುವ ದುರ್ಬುದ್ಧಿಯಿಂದ, ವಿರೋಧವಾತಾವರಣದಲ್ಲಿಯೂ ಮರಾಠಿಗರು ಇಷ್ಟೊಂದು ಗೊಂದಲಹಾಕುತ್ತಿದ್ದಾರೆ; ಹೀಗಿರುವಾಗ, ತಮ್ಮ ಕೈಯಲ್ಲಿರುವ, ತಮ್ಮದೇ ಆದ ಪ್ರದೇಶವನ್ನು, ಕೇಂದ್ರಸರಕಾರ ದಾಕ್ಷಿಣ್ಯಬುದ್ಧಿಯಿಂದ—ಮರಾಠಿಗರಿಗೆ—ಕೊಡಬೇಕೆಂದು ನಿರ್ಣಯಿಸಿದ್ದರೆ, ಕನ್ನಡಿಗರು ಸುಮ್ಮನೆ ಕುಳಿತುಕೊಳ್ಳುತ್ತಿದ್ದರೆ ? ಚಳವಳಿ-ಕಿಡಿಗೇಡಿತನಗಳನ್ನು ನಡೆಸಲಿಕ್ಕೆ ಮರಾಠಿಗರಷ್ಟೇ ಬರುವುದೆಂದು ಮಾನ್ಯ ಚವ್ಹಾಣರು ಭಾವಿಸಿದ್ದರೆ ಅದು ಸಂಪೂರ್ಣವಾಗಿ ತಪ್ಪು. ಕನ್ನಡಿಗರಿಗೆ ಚಳವಳಿ ಮಾಡಬೇಕಾದಂತಹ ಸಂದರ್ಭವೇ ಬಂದಿಲ್ಲವಾದುದರಿಂದ ಅವರು ಸುಮ್ಮಗಿದ್ದುಬಿಟ್ಟಿದ್ದಾರಷ್ಟೆ ! ಮರಾಠಿಗರ ಹೊಣೆಗೆಟ್ಟ ಪುಂಡಾಟವನ್ನು ನೋಡಲಿಕ್ಕೆ, ಶಾಸನಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತ ರಾಜ್ಯಸರಕಾರವು ಇದ್ದೇ ಇದೆ. ಏಂದಮೇಲೆ ಕನ್ನಡಿಗರಿಗೆ ಚಳವಳಿಯ ಅಗತ್ಯವೇನಿದೆ ?

ಕೇಂದ್ರಸರಕಾರದ ಗೃಹಮಂತ್ರಿ ಮಾನ್ಯ ಗೋವಿಂದವಲ್ಲಭಪಂತರು ನಿಜವಾಗಿಯೂ ರಾಜಕಾರ್ಯ ನಿರಾರದರು; ದೂರದೃಷ್ಟಿಯವರು. ಅವರು ಮುಂಬಯಿ ಮುಖ್ಯಮಂತ್ರಿ ಮಾನ್ಯ ಚವ್ಹಾಣರ ಅತಾರ್ಕಿಕ ಮಾತುಗಳನ್ನೂ ಮೈಸೂರ ಮುಖ್ಯಮಂತ್ರಿ ಮಾನ್ಯ ಜತ್ತಿಯವರ ತರ್ಕಶುದ್ಧ ಸಮಂಜಸವಾದವನ್ನೂ ಕೇಳಿಕೊಂಡಮೇಲೆ, ಸಾಧಕ-ಭಾಧಕ ದೃಷ್ಟಿಯಿಂದ ಎಲ್ಲ ವಿಷಯವನ್ನೂ ತೂಗಿನೋಡಿ, ತ್ರಿಕಾಲವಿವೇಕಿಗಳಾಗಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ. ಪಂ. ಪಂತರವರ ಅಭಿಪ್ರಾಯ ಮೊವಲೇ ಗೊತ್ತಾಗಿದ್ದಿತೇನೋ, ಚವ್ಹಾಣಮಂತ್ರಿಗಳು ಅವರ ನಿರ್ಣಯ ಘೋಷಣೆಗಿಂತ ಮೊದಲೇ ನಿರಾಶಾಗಿ, ದಿಲ್ಲಿಯನ್ನು ಬಿಟ್ಟು ಹೊರಟಿದ್ದರು. ಪಂ. ಪಂತರ ನಿರ್ಣಯವೆಂದರೆ, ಮರಾಠಿಗರ ಹಟವಾದವನ್ನು ಎತ್ತಿಹಿಡಿದು ಹೊರಟಿದ್ದ ಚವ್ಹಾಣಮಂತ್ರಿಗಳ ಕೆನ್ನೆಗೆ ಬಿದ್ದ ಒಂದು ಏಟೆಂದು ಯಾರೂ ಹೇಳಬಹುದು. ಆ ಏಟು ತಿಂದ ವ್ಯಥೆಯಲ್ಲಿಯೇ ಅವರು ರಾಜಧಾನಿಯನ್ನು ಬಿಟ್ಟುರಬೇಕು.

ಇದರಿಂದ ಚಳವಳಿಗಾರ ಮರಾಠಿಗರು ಸಾಧಿಸಿದ್ದೇನು? ಅನೇಕ ಕಾಲಗಳಿಂದ ಪ್ರೀತಿ-ಸೌಹಾರ್ದಗಳಿಂದ ಕೂಡಿ ಬಾಳುತ್ತಿದ್ದ ಕನ್ನಡಿಗ-ಮರಾಠಿಗರಲ್ಲಿ, ಎಂದೂ ಇಲ್ಲದ ದ್ವೇಷ-ಮತ್ಸರಗಳನ್ನು ಹೆಚ್ಚಿಸಿದರು. ಅಜ್ಞ ಮರಾಠಿಗರಲ್ಲಿ ಅಲ್ಲದ ಸಲ್ಲದ ಭೀತಿ-ಸಂದೇಹಗಳನ್ನು ಹುಟ್ಟಿಸಿ, ಚಳವಳಿಗಾಗಿ ಆ ಬಡಜನರಿಂದ ಹಣವನ್ನು ಕಿತ್ತುಕೊಂಡರು. ಅವರಿಗೆ ಸಮಾಧಾನ ಜೀವನ ಸಿಗದಂತೆ ದುಷ್ಪ್ರಚಾರವನ್ನು ನಡೆಸಿದರು. ಸರಕಾರದ ಶಾಸನದ ದಾರಿಯಲ್ಲಿ ತಡೆಯನ್ನೊಡ್ಡಲು ಹಚ್ಚಿ, ತಮ್ಮ ಜನರಿಗೆ ತಾನೇ ತೊಂದರೆಯನ್ನು ಕೊಟ್ಟರು. ಕೊನೆಗೆ ತಮ್ಮ ದೇಶನಾಯಕನಿಗೆ ಕೇಂದ್ರ ಸರಕಾರದಿಂದ ಅವಮಾನದ ಆಘಾತಬೀಳುವಂತೆ ಮಾಡಿದರು. ಇದು ಇಂದು ಮರಾಠಿಗರ ಅನ್ಯಾಯದ— ಅಕ್ಷಮಣಬುದ್ಧಿಯ— ಚಳವಳಿಗೆ ದೊರೆತ ಫಲ. ಅದು ಸಾಧಿಸಿದ ಸಿದ್ಧಿ.

ಕೇಂದ್ರಸರಕಾರವಲ್ಲಿಯ ಕೆಲವೊಂದು ವ್ಯಕ್ತಿಗಳ ದಾಕ್ಷಿಣ್ಯ ವೃತ್ತಿ, ವಿಕೃತ ರಾಜಕೀಯ ಕಲ್ಪನೆ ಇವು ಕಾರ್ಯಮಾಡದೆ ಹೋಗಿದ್ದರೆ, ಕೇಂದ್ರಸರಕಾರ ಈಗ ಎರಡು ವರುಷಗಳಿಗೆ ಮೊದಲೇ ಇಂದಿನಂತೆ ತನ್ನ ಸ್ಪಷ್ಟ ಅಭಿಪ್ರಾಯವನ್ನು ಸಾರಬಹುದಾಗಿತ್ತು. ಆಗಲೇ ಅಷ್ಟು ಮಾಡಿಬಿಟ್ಟಿದ್ದರೆ, ಮರಾಠೀ ಪತ್ರಿಕಾಕಾರರು ಕನ್ನಡಿಗರನ್ನೂ ಮೈಸೂರುಸರಕಾರವನ್ನೂ ಬಾಯಿಗೆ ಬಂದಂತೆ ಬೈಯದಿರಬಹುದಾಗಿತ್ತು. ಕನ್ನಡಿಗರನ್ನು ಬೈಯುವುದಕ್ಕಾಗಿ ಮರಾಠಿ ಪತ್ರಿಕೆಗಳು ಹಾಳುಮಾಡಿಕೊಂಡ ಕಾಗದ-ಮಸಿಗಳು, ಅಷ್ಟಿಷ್ಟೆಂದು ಲೆಕ್ಕಮಾಡಿ ಹೇಳಲು ಬರುವಂತಿಲ್ಲ. ಆಚಾರ್ಯ ಅತ್ರೆಯವರಂತಹ ಸಂಪಾದಕರು, ಕನ್ನಡಿಗರನ್ನು ಬೈಯಲು ಅನೇಕ ಹೊಸ ಬೈಗುಳನ್ನು ಸೃಷ್ಟಿಸಿ ಮರಾಠಿ ಸಾಹಿತ್ಯದ ಬೆಳೆವಣಿಗೆಗೆ ಕಾರಣರಾದರು.

ಪಾಟಸಕರರ ಸೂತ್ರವು ಮರಾಠೀ ಚಳವಳಿಗಾರರ ಪಲ್ಲವಿಯಾಗಿತ್ತು. ಆ ನಿಯಮಗಳಂತೆಯೆ ಮುಂಬಯಿ-ಮೈಸೂರು ಗಡಿಗಳ ನಿರ್ಣಯವಾಗಲೇಬೇಕೆಂದು ಅವರ ಹಟವಿದ್ದಿತು. ಮಾನ್ಯ ಚವ್ಹಾಣರೂ ಪಾಟಸಕರರ ಸೂತ್ರದ ಪುರಸ್ಕರ್ತೃಗಳಾಗಿದ್ದರು. ಎಂತಲೇ ಅವರು ೮-೯ ಲಕ್ಷ ಜನರು ವಾಸಿಸುವ ಪ್ರದೇಶ ತನಗೆ ಸಲ್ಲಬೇಕೆಂದು ಹೇಳಿದರು. ಆದರೆ ಪಂ. ಪಂತರು ತಮ್ಮ ತರ್ಕಶುದ್ಧ ವಾದದಿಂದ ಪಾಟಸಕರರ ಸೂತ್ರವನ್ನು ಉಣಿಸೆಂದು ಊದಿ ಗಾಳಿಗೆ ಪ್ರಹಾರಿಸಿಬಿಟ್ಟಿದ್ದಾರೆ. ಪಾಟಸಕರರ ಸೂತ್ರದಲ್ಲಿ ಪಾಟಸಕರರ ವೈಯಕ್ತಿಕ ವೈತಿಷ್ಟ್ಯವೇನೂ ಇಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟಿರುವರು. ಇನ್ನು ಚವ್ಹಾಣರಿಗೆ ಗಡಿಯ ಬದಲಾವಣೆಯನ್ನೇನಾದರೂ ಸಾಧಿಸಿಕೊಳ್ಳಬೇಕಾಗಿದ್ದರೆ, ಅವರು ಮಾನ್ಯ ಜತ್ತಿಯವರೊಂದಿಗೆ ಸ್ನೇಹ ಬೆಳೆಸಿ ಮಾತನಾಡಬೇಕಾಗುವುದು. ಬೆಳಗಾಂವಿ-ನಿಪ್ಪಾಣಿ-ಕಾರವಾರಗಳನ್ನು ಸಬೇಕೆಂಬ ಕನಸನ್ನು ಕಾಣುತ್ತಿದ್ದ ಮರಾಠಿಗರಿಗೆ, ಮಾನ್ಯ ಜತ್ತಿಯವರು ಅವುಗಳನ್ನು ಕೊಡಲು ಒಪ್ಪುವರೆ? ತೆಗೆದುಕೊಂಡೇ ತೀರುವೆವೆಂದು ಮರಾಠಿಗರು ಇನ್ನೂ ತಮ್ಮ ಹಟವನ್ನು ಮುಂದುವರಿಸಿದರೆ, ಎಂದೂ ಕೊಡಲಾರೆವೆಂಬ ತಮ್ಮ ಹಟವನ್ನು ಮುಂದುವರಿಸಲು ಕನ್ನಡಿಗರೂ ಗಟ್ಟಿಗರಿದ್ದಾರೆ. ಹಿಂಸಾತ್ಮಕ ಚಳವಳಿಯನ್ನು ನಡೆಯಿಸುವ ಹಕ್ಕು-ಶಕ್ತಿಗಳು ತಮಗಷ್ಟೇ ಇವೆಯೆಂದು ಮರಾಠಿಗರು ಭಾವಿಸಿದ್ದರೆ, ಅದು ಅವರ ಶುದ್ಧ ಭ್ರಮೆ.

ಚಳವಳಿಗಾರ ಮರಾಠಿಗರು ಬರೀ ತೆಗೆದುಕೊಳ್ಳುವ ಮಾತುಗಳನ್ನಷ್ಟೇ ಆಡುತ್ತಲಿದ್ದಾರೆ; ಕನ್ನಡಿಗರಿಗೆ ಕೊಡಬೇಕಾದ ಪ್ರದೇಶ ತಮ್ಮ ಕಡೆಗಿದೆಯೆಂಬುದರ ಸುದ್ದಿಯನ್ನೇ ಎತ್ತುತ್ತಿಲ್ಲ. ಮಾನ್ಯ ಚವ್ಹಾಣರು ಮಾತ್ರ ಈ ಕೊಡುವ ಪ್ರದೇಶದ ಮಾತನ್ನಾಡಿದರೂ ಇಕ್ಕೇರಿಯಂತೆ ತೆಗೆದುಕೊಳ್ಳಬೇಕಾದ ಪ್ರದೇಶವಿದೆಯೆಂದು ಹೇಳಿದ್ದಾರೆ. ಸೊಲ್ಲಾಪುರ ನಗರ ಸಹಿತ ದಕ್ಷಿಣಸೊಲ್ಲಾಪುರ ತಾಲೂಕು, ಜತ್ತಿ, ಅಕ್ಕಲಕೋಟ ತಾಲೂಕುಗಳು, ಸಾತಾರಾ ಜಿಲ್ಲೆಯಲ್ಲಿಯ ತಾಸಗಾಂವ ತಾಲ್ಲೂಕು, ಕೊಲ್ಲಾಪುರ ಜಿಲ್ಲೆಯಲ್ಲಿಯ ಹತ್ತಿಕಣಗಲಿ ತಾಲ್ಲೂಕು ಇವೆಲ್ಲ ಕೂಡಿದರೆ, ಹತ್ತು ಲಕ್ಷ ಜನಸಂಖ್ಯೆಗಿಂತ ಹೆಚ್ಚಿನ ಪ್ರದೇಶ, ಮಹಾದಾಸ್ಯದಿಂದ ಕರ್ನಾಟಕಕ್ಕೆ ಬರಬೇಕಾಗುವುದು. ಈ ಪ್ರದೇಶಗಳಲ್ಲಿರುವ ಕನ್ನಡ ಜನರೂ ವಿಸುಕಾಡುತ್ತಲಿದ್ದಾರೆ; ಶಾಸನಬದ್ಧವಾದ ಚಟುವಟಿಕೆಗಳನ್ನು ನಡೆಯಿಸಿದ್ದಾರೆ. ಉಗ್ರಚಳವಳಿಯ ಅಗತ್ಯವೆನಿಸಿದಾಗ, ಅದಕ್ಕೂ ಅವರು ಸಿದ್ಧರಾಗಿ ನಿಲ್ಲಬಹುದು. ಆದರೆ ಪಂಡಿತ ಪಂತರ ಘೋಷಣೆ ಇಂತಹ ಉಗ್ರಚಳವಳಿಗಳಿಗೆ ವಿರಾಮಚಿಹ್ನೆಯನ್ನು ಎಳೆದುಬಿಟ್ಟಿದೆ. ಬೆಳಗಾಂವಿಯ ಭೂತಗಳು ಇನ್ನೆಂತಹ ಚೇಷ್ಟೆಯನ್ನು ನಡೆಸುವುವೋ ನೋಡಬೇಕು.

ಜಯಂತಿಗೆ ಸಹಾಯ

ಬೆಳಗಾಂವಿಯ ಮಹನೀಯರೊಬ್ಬರು, ತಾವು ಅಜ್ಞಾತರಾಗಿಯೆ ಉಳಿಯಲು ಬಯಸಿ, ತಮ್ಮ ಚಂದಾಹಣ ಸಹಿತ ೧೦ ರೂ. ಗಳನ್ನು ಕಳುಹಿಸಿದ್ದಾರೆ. ಚಿಂಚೋಳಿಯ ಸರಕಾರಿ ಹೈಸ್ಕೂಲಿನ ಹೆಡ್-ಮಾಸ್ಟರ್ ಶ್ರೀ ಜೆ. ಶೇಷಗಿರಿರಾವ ಅವರು, ೫ರೂ. ಸಹಾಯಧನವನ್ನು ಕಳುಹಿ ಜಯಂತಿಗೆ ಶುಭವನ್ನು ಕೋರಿದ್ದಾರೆ. ಜಯಂತಿ ಚಿರಕಾಲ ಬದುಕಿ ಕನ್ನಡಕ್ಕಾಗಿ ದುಡಿಯುತ್ತಿರಬೇಕೆಂದು ಅಪೇಕ್ಷೆಯಿದ್ದವರೆಲ್ಲರೂ, ಸ್ವಪರ-ಹಸ್ತಗಳಿಂದ ಜಯಂತಿಗೆ ಸಹಾಯಮಾಡುತ್ತಿರಬೇಕು.

— ಸಂಪಾದಕ

ನಾಡನಡೆ

ಗಲಗಲಿ ಶ್ರೀನಿವಾಸರ ಗಣಿತತಂತ್ರಗಳು

ಶ್ರೀ. ಎಸ್.ವಿ. ಗಲಗಲಿಯವರು ಜಯಂತಿಯ ವಾಚಕಲೋಕಕ್ಕೆ ಅಪರಿಚಿತರೇನೂ ಅಲ್ಲ. ಇವರು ಇತ್ತೀಚೆಗೆ ಅಂಕಗಣಿತ ಶಾಸ್ತ್ರದಲ್ಲಿ ಹೆಚ್ಚಿನ ಪರಿಶ್ರಮವನ್ನು ನಡೆಯಿಸಿ, ವರ್ಗಾಂತರ, ಘನಾಂತರಗಳನ್ನು ಕಂಡುಹಿಡಿಯುವ ಸುಲಭ ರೀತಿಯನ್ನೂ ಅಂಕಿಗಳ ಇಷ್ಟಘಾತ ಗಳನ್ನು ತೆಗೆಯುವ ಪದ್ಧತಿಯನ್ನೂ ಹುಡುಕಿತೆಗೆದಿರುವರು. ಇವರು ಹುಡುಕಿ ಹಿಡಿದ ವಿಷಯಗಳು ಅಂಕಗಣಿತ ಪ್ರಪಂಚಕ್ಕೆ ತೀರ ಹೊಸವೆಂದು ಗಣಿತ ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವರು. ಇವರು ತಾವು ಸಂಶೋಧಿಸಿದ ಗಣಿತತಂತ್ರಗಳನ್ನು ದೇಶ-ವಿದೇಶದ ಗಣಿತ ನಿಯತಕಾಲಿಕಗಳಿಗೆ ಕಳುಹಬೇಕೆಂದು ಸಂಕಲ್ಪಿಸಿದ್ದಾರೆ. ಈ ಗಣಿತ ತಂತ್ರಗಳು ಹೊಸವೇ ಎಂದು ಸಿದ್ಧವಾದರೆ, ಕನ್ನಡಿಗನೊಬ್ಬನ ಸಂಶೋಧಕ ಬುದ್ಧಿಗಾಗಿ ನಾವೆಲ್ಲರೂ ಹೆಮ್ಮೆಪಡುವಂತಿದೆ. ಶ್ರೀ. ಶ್ರೀನಿವಾಸ ಗಲಗಲಿಯವರ ಗಣಿತಸಂಶೋಧನೆಯ ಕಾರ್ಯಕ್ಕೆ ಗೆಲವು ದೊರೆಯಲೆಂದು ನಮ್ಮ ಹಾರೈಕೆ.

ಮೈಸೂರು ಸರಕಾರದವರು ಹಂಚಿದ ಸಾಹಿತ್ಯಿಕ ಬಹುಮಾನ

೧೯೫೯ನೆಯ ಇಸ್ವಿಯಲ್ಲಿ ಪ್ರಕಟವಾದ ಗ್ರಂಥಗಳನ್ನು ತರಿಸಿಕೊಂಡು, ಪರೀಕ್ಷಕ ಸಮಿತಿಯ ಮನಸ್ಸಿಗೆ ಮೆಚ್ಚಿಕೆಯಾದ ೨೭ ಗ್ರಂಥಗಳಿಗೆ ಈಸಲ ಬಹುಮಾನ ದೊರೆತಿದೆ. ಸಾಹಿತ್ಯಿಕರಿಗೆ ಬಹುಮಾನ ಕೊಡಬೇಕೆಂಬ ಅಪೇಕ್ಷೆಯಿಂದ ೨೫೦೦೦ ರೂಪಾಯಿಗಳನ್ನು ವೆಚ್ಚ ಮಾಡಲು ಸಿದ್ಧವಾದ ಮೈಸೂರು ಸರಕಾರದ ಉದ್ದೇಶವನ್ನು ನಾವು ಪ್ರಶಂಸಿಸಲೇ ಬೇಕು. ಆದರೆ ಈ ಸಲ ಬಹುಮಾನ ಹಂಚಿದ ಪದ್ಧತಿಯನ್ನು ನೋಡಿದರೆ, ಅದು ಬಹುಮಾನವೆನಿಸದೆ, ಪ್ರೋತ್ಸಾಹಧನ ಎನಿಸುವಂತಿದೆ. ಬಹುಮಾನ ಪಡೆದ ಸಾಹಿತ್ಯಿಕನಿಗೆ ತನಗೊಂದು ಸ್ಥಾನ-ಮಾನ ದೊರೆಯಿತೆಂಬ ಆನಂದವಾಗುವಂತಿಲ್ಲ; ಕೆಲವೊಂದು ಹಣದೊರೆಯಿತೆಂಬ ಸಮಾಧಾನವಾಗಬಹುದಿಷ್ಟೇ! ನಿಕ್ಕರಾಜ್ಯಗಳಲ್ಲಿ ಹಂಚುವ ಸಾಹಿತ್ಯಿಕ ಬಹುಮಾನಗಳ ಹಣದ ಪ್ರಮಾಣವನ್ನು ನೋಡಿದರೆ, ನಮ್ಮ ಸರಕಾರ ಕೊಡುವ ಬಹುಮಾನದ ಪ್ರಮಾಣ ಅತ್ಯಲ್ಪ. ಇದರ ಬಗೆಗೆ ನಮ್ಮ ಸರಕಾರ ಹೆಚ್ಚು ಆಳವಾಗಿ ವಿಚಾರ ನಡೆಯಿಸುವ ಅಗತ್ಯವಿದೆಯೆಂದು ನಮಗೆ ಎನಿಸುವುದು.

ಇನ್ನು ಈ ಸಲ ಬಹುಮಾನ ಪಡೆದ ೨೭ ಗ್ರಂಥಗಳೇ ಈ ವರ್ಷದ ಸಾಹಿತ್ಯನಿರ್ಮಿತಿಯಲ್ಲಿ ಸರ್ವಶ್ರೇಷ್ಠ ಗ್ರಂಥಗಳೆಂದು ಹೇಳುವಂತಿಲ್ಲ. ಇಷ್ಟೇ ಅಲ್ಲ, ಕೆಲವು ಗ್ರಂಥಗಳನ್ನು ನೋಡಿ 'ಇವೂ ಬಹುಮಾನಪಡೆದಿವೆ?' ಎಂದು ಅನೇಕ ಸಹೃದಯರ ಮನಸ್ಸಿನೆದುರು ಪ್ರಶ್ನೆ ಎದ್ದು ನಿಲ್ಲದಿರದು. ಹೆಸರಿಗೆ ೧೦ ಜನರದೊಂದು ಪರೀಕ್ಷಕ ಸಮಿತಿಯನ್ನು ಸರಕಾರ ನಿರ್ಮಿಸಿರಬಹುದು. ಆದರೆ ಆ ಪರೀಕ್ಷಕರಿಗೆ ಅಭಿಪ್ರಾಯ ಸ್ವಾತಂತ್ರ್ಯ ಎಷ್ಟರ ಮಟ್ಟಿಗಿರುವುದೋ ಹೇಳಲು ಬರುವಂತಿಲ್ಲ. ಅವರ ಪ್ರಾಮಾಣಿಕ ಪರೀಕ್ಷಾಪದ್ಧತಿಯು ಸರಕಾರದ ಘೋರಣೆಯ ಒಂದು ಕಟ್ಟಿನಲ್ಲಿ ನಡೆಯುತ್ತಿರುವಂತೆ ತೋರುತ್ತದೆ. ಇಲ್ಲವಾದರೆ, ೩೯ೆಯ ತರಗತಿಗಳಲ್ಲಿಯೂ ನಿಲ್ಲಲು ಅಸಮರ್ಥವಾದ ಕೆಲವು ಪುಸ್ತಕಗಳು ಶ್ರೇಷ್ಠತೆಯ ಬಹುಮಾನವನ್ನು ಪಡೆಯುತ್ತಿರಲಿಲ್ಲ. ವ್ಯಕ್ತಿ ದಾಕ್ಷಿಣ್ಯ' ಜಾತೀಯದೃಷ್ಟಿ, ಪ್ರಾದೇಶಿಕ ಪ್ರೀತಿ ಇವು ಈ ಸಲದ ಬಹುಮಾನ ವಿತರಣೆಯಲ್ಲಿ ಕೈಚಳಕ ನಡೆಸಿದಂತಿವೆ.

ಈ ಬಹುಮಾನವಿತರಣೆಯ ವಿಷಯದಲ್ಲಿ ನಡೆದಿರುವ ಅನ್ಯಾಯ-ಅಚಾತುರ್ಯಗಳಿಗಾಗಿ, ಸರಕಾರ ತನ್ನ ಪರೀಕ್ಷಕ ಸಮಿತಿಯ ಕಡೆಗೆ ಬೆರಳು ತೋರಿಸಿ ತಾನು ಸಾರಾಗಬಹುದು; ಆದರೆ ಇನ್ನು ಮುಂದೆಯೂ ಇದೇ ರೀತಿಯಲ್ಲಿ ಬಹುಮಾನ ವಿತರಣೆಯು ಆಭಾಸ ನಡೆಯುತ್ತ ಹೋದರೆ, ಸರಕಾರ ನಿಯಮಿಸುವ ಪರೀಕ್ಷಕ ಮಂಡಲ ಪದ್ಧತಿಯೇ ತಪ್ಪು ತಳಹದಿಯದೆಂದು ಹೇಳಬೇಕಾಗುತ್ತದೆ.

ಪಾಕಿಸ್ತಾನಕ್ಕೆ ಬರುವ ಮಲತೋಗ

ಪಾಕಿಸ್ತಾನ್ ಸರಕಾರಕ್ಕೆ ಆಗಾಗ ಭಾರತವಿರೋಧದ ಸುಲರೋಗ ಬರುತ್ತಿರುತ್ತದೆ. ಮಿಕ್ಕ ಕಾಲದಲ್ಲಿ ಭಾರತದ ವಿಷಯದಲ್ಲಿ ಸ್ನೇಹ-ಸೌಹಾರ್ದದ ಮಾತುಗಳನ್ನು ಆಡುತ್ತಿರುವುದಾದರೂ ಈ ರೋಗ ಬಂದಾಗ, ಭಾರತಕ್ಕೆ ವಿರೋಧವೆನಿಸುವಂತಹ ಎಂತಹ ಅವಿವೇಕದ ದುಡುಕನ್ನೂ ಮಾಡಲು ಅದು ಹಿಂಜರಿಯದು. ಭಾರತ-ಪಾಕಿಸ್ತಾನ್ ಅರ್ಥ ಮಂತ್ರಿಗಳು, ಎರಡೂ ರಾಷ್ಟ್ರಗಳ ಆರ್ಥಿಕ ಸಮಸ್ಯೆಗಳ ಬಗೆಗೆ ಮೊನ್ನೆ-ಮೊನ್ನೆಯೆ ಸ್ನೇಹ-ಸಹಾನುಭೂತಿಗಳಿಂದ ಮಾತನಾಡಿಕೊಂಡಿದ್ದಾರೆ. ಮಾತುಗಳು ಇನ್ನೂ ಮುಗಿದಿಲ್ಲವಾದರೂ, ಇಬ್ಬರೂ

ಮಂತ್ರಿಗಳು, ಆಶಾವಾದ-ಸೌಹಾರ್ದದ ಮಾತುಗಳನ್ನು ಆಡಿದ್ದಾರೆ. ಇದರ ಬಗೆಗೆ ಸಮಾಧಾನಪಡಬೇಕೆಂದಿರುವಾಗಲೇ, ಪಾಕಿಸ್ತಾನ ಸರಕಾರ ಭಾರತದ ವಿಷಯದಲ್ಲಿ ಆಕ್ರಮಣಬುದ್ಧಿಯನ್ನು ಇರಿಸಿಕೊಂಡಿರುವುದರ ಗುರುತಾಗಿ ತೆಗೆದ ಅಪಪ್ರಚಾರದ ಅಂಚೆಯ ಟಿಕೇಟುಗಳನ್ನು ನೋಡಿದಾಗ, ಯಾವ ಭಾರತೀಯನಿಗೂ ಸಂತಾಪವೆನಿಸದೆ ಇರದು. ಆ ಅಂಚೆಯ ಟಿಕೇಟಿನಲ್ಲಿ ಪಾಕಿಸ್ತಾನ್ ಸರಕಾರ, ಪಾಕಿಸ್ತಾನ್ ರಾಷ್ಟ್ರದ ನಕ್ಷೆಯನ್ನು ಪ್ರಕಟಿಸಿದ್ದು, ಅದರಲ್ಲಿ ಭಾರತದ ಕೆಲವು ಪ್ರದೇಶವನ್ನು ತನ್ನ ಗಡಿಯಲ್ಲಿ ಸೇರಿಸಿಕೊಳ್ಳಲಾಗಿದೆ. ಹೀಗೇಕೆ ?— ಎಂದು ಭಾರತ ಸರಕಾರ ಕೇಳಿದರೆ, ಇದುವರೆಗೂ ಪಾಕಿಸ್ತಾನ್ ಸರಕಾರದಿಂದ ಉತ್ತರವಿಲ್ಲ.

ಇಂತಹ ಅವಿವೇಕಗಳು ಪಾಕಿಸ್ತಾನದ ಸರ್ವಾಧಿಕಾರಿ ಆಯೂಬ್ ಖಾನರ ಮೆದುಳಿನಿಂದಲೇ ಹೊರಡುವವೋ ಅಥವಾ ಬೇರೆಯವರ ಅಧಿಕಪ್ರಸಂಗವೋ ತಿಳಿಯುವಂತಿಲ್ಲ. ಆಯೂಬ್ ಖಾನರ ಮೆದುಳಿನ ಸಂತಾನವೇ ಎನ್ನಬೇಕೆಂದರೆ, ಇತ್ತೀಚೆಗೆ ಅವರು ಭಾರತದ ವಿಷಯದಲ್ಲಿ ಆಡುತ್ತಿರುವ ಮಾತುಗಳು, ಹೆಚ್ಚು ವಿವೇಕದ ಕಡೆಗೆ ಒಲಿದಿರುವುವು. ಇನ್ನು ಬೇರೆಯವರ ಅಧಿಕಪ್ರಸಂಗತನವೆನ್ನಬೇಕೇ, ಸರ್ವಾಧಿಕಾರಿಗಳಾದ ಆಯೂಬ್ ಖಾನರಿಗೆ ಅರಿಕೆಯಿಲ್ಲದೆ ಅಲ್ಲಿ ಒಂದು ಕಡ್ಡಿಯೂ ಅಲುಗಾಡದು.

ಈ ಬಗೆಯ ಅಪಪ್ರಚಾರದಿಂದ ಭಾರತಕ್ಕೆ ಯಾವ ಹಾನಿಯೂ ಉಂಟಾಗದು. ಏಕೆಂದರೆ, ತನ್ನದಾದ ಪ್ರದೇಶವನ್ನು ತನ್ನ ಕಡೆಗೇ ಇರಿಸಿಕೊಳ್ಳಲು ಅದು ಸಾಕಷ್ಟು ಸಮರ್ಥವಾಗಿದೆ. ಇದರಿಂದ ಪಾಕಿಸ್ತಾನಕ್ಕೆ ಮಾತ್ರ ತುಂಬ ಹಾನಿಯುದೆ. ಅದು ಭಾರತದ ಸ್ನೇಹ-ಸಹಾನುಭೂತಿಗಳಿಂದ ದೂರನಾಗುವುದಲ್ಲದೆ, ಜಗತ್ತಿನಲ್ಲಿ ತನ್ನ ಕಿಡಿಗೇಡಿತನದ ಪ್ರಚಾರವನ್ನು ತಾನೇ ಮಾಡಿಕೊಂಡಂತಾಗುವುದು.

ರಾಜಾಜಿಯವರ ವಕ್ರ ರಾಜಕೀಯ

ರಾಜಾಜಿಯವರು ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದುದರಿಂದ, ಸದ್ಯದ ರಾಜಕೀಯಕ್ಕೆ ಬೇಸತ್ತ ಅನೇಕ ಜನರು ಅವರನ್ನು ಆಶೆಯ ದೃಷ್ಟಿಗಳಿಂದ ನೋಡುತ್ತಲಿದ್ದಾರೆ. ಅವರ ಇದುವರೆಗಿನ ಚಾರಿತ್ರ್ಯ ಹಾಗೆ ಆಶೆಯನ್ನು ಹುಟ್ಟಿಸುವಂತಹದೇ ಆಗಿದೆ. ಆದರೆ ಅವರು ಇದೀಗ ನಡೆಸಿರುವ ಚಟುವಟಿಕೆಗಳನ್ನು ನೋಡಿದರೆ, ಅವರಲ್ಲಿ ತತ್ತ್ವನಿಷ್ಠೆಗಿಂದ ವ್ಯಕ್ತಿದ್ವೇಷವೇ ಹೆಚ್ಚಾದ್ದುದು ವ್ಯಕ್ತವಾಗುತ್ತಲಿದೆ. ಕಾಂಗ್ರೆಸ್ ಪಕ್ಷದೊಂದಿಗೆ ಹೋರಾಡಲು ರಾಜಾಜಿಯವರಿಗೆ ತಮ್ಮ ಬಲವನ್ನು ಬೆಳಿಸಿಕೊಳ್ಳಬೇಕಾಗಿದೆ; ಆದುದರಿಂದ ಭಾರತದಲ್ಲಿಯ ಪ್ರತಿಗಾಮಿ ಶಕ್ತಿಗಳನ್ನೆಲ್ಲ ಪುರಸ್ಕರಿಸಿ ತಮ್ಮ ಕಡೆಗೆ ಮಾಡಿಕೊಳ್ಳುತ್ತಿದ್ದಾರೆ. ಕಾಗೆ, ಗೂಗೆ, ಹಾವು, ಚೇಳುಗಳನ್ನು ಕೇವಲ ವರ್ತಮಾನ ಲಾಭದ ದೃಷ್ಟಿಯಿಂದ ತಮ್ಮ ಪಕ್ಷಕ್ಕೆ ಸೇರಿಸಿಕೊಂಡರೆ, ಅವು ಯಾವಾಗ ತಮಗೆ ಕೆಡುಕನ್ನು ಮಾಬಹುದೆಂಬುದರ ವಿವೇಕವನ್ನು ರಾಜಾಜಿ ಮರೆತಿರುವಂತೆ ತೋರುತ್ತಲಿದೆ.

ರಾಜಾಜಿಯವರು ಇಂದು ಹೇಳುತ್ತಿರುವ ಕೆಲವು ಮಾತುಗಳು, ಸಂಕುಚಿತ ದೃಷ್ಟಿಯ ಸ್ವಾರ್ಥಿಗಳಿಗೆ ಸವಿಯಾಗಿ ಕಾಣುತ್ತಿರಬಹುದು; ಆದರೆ ಪ್ರಜಾಪ್ರಭುತ್ವದ ಮಾತಾವರಣದಲ್ಲಿ ಉಸಿರಾಡಿಸುತ್ತಿರುವ ಬಹುಸಂಖ್ಯಾಕ ಭಾರತೀಯರಿಗೆ, ರಾಜಾಜಿಯವರ ರಾಜಕೀಯ ಪ್ರಚಾರ ಸರಿಯೆಂದು ತೋರದು.

ಹಿರಿಯರಾದ ರಾಜಾಜಿಯವರಲ್ಲಿ, ಇಂದಿನ ಕಾಂಗ್ರೆಸ್ ಪಕ್ಷದ ಪ್ರಮುಖ ದುರೀಣರ ಬಗೆಗೆ ಸ್ವಲ್ಪವೂ ಸಹಾನುಭೂತಿಯಿದ್ದಂತಿಲ್ಲ. ಅಂತರಾಷ್ಟ್ರೀಯ ವ್ಯವಹಾರದ ಮೂಲಕ ಅನಿವಾರ್ಯವಾಗಿ ಒದಗಿದ ರಾಜಕೀಯ ಸಮಸ್ಯೆಗಳನ್ನು ತಮ್ಮ ಪಕ್ಷಪ್ರಚಾರಕ್ಕಾಗಿ ದುರುಪಯೋಗಪಡಿಸಿಕೊಳ್ಳಲಿಕ್ಕಾ ಅವರು ಹಿಂದೆ ಮುಂದೆ ನೋಡುತ್ತಿಲ್ಲ.

ರಾಜಾಜಿಯವರು ಮಹಾತ್ಮಾ ಗಾಂಧಿಯವರ ಸಂಸ್ಕೃತಿ ಛತ್ರದಡಿಯಲ್ಲಿಯೆ ಬೆಳೆದವರೆಂಬ ಪ್ರತೀತಿಯಿದೆ. ಆದರೆ ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿರುವ—ಕೆಲವೊಂದು ಪ್ರಮುಖ ವಿಷಯಕವಾದ ದ್ವೇಷ-ಮತ್ಸರಗಳನ್ನು ನೋಡಿದರೆ, ಮಹಾತ್ಮರ ಸ್ವಭಾವ ಸಂಸ್ಕೃತಿಗಳ ಪರಿಣಾಮ ರಾಜಾಜಿಯವರ ಮೇಲೆ ಏನೂ ಆಗಿಲ್ಲವೆಂದು ತೋರುವುದು.

ಕಾಂಗ್ರೆಸಿನಲ್ಲಿಂದು ಕೊಳೆಯು ತುಂಬಿಕೊಂಡಿರಬಹುದು. ರಾಜಾಜಿಯವರು ಅದರ ಒಳಗೇ ಇದ್ದು, ತಾವು ಬೆಳಿಸಿದ ಸಎತ್ರ ಸಂಸ್ಥೆಯಲ್ಲಿಯ ಕೊಳೆಯನ್ನು ತೆಗೆದುಹಾಕುವ ಕೆಲಸ ಕೈಕೊಂಡರೆ, ಅದು ಅವರ ಹಿರಿಯತನಕ್ಕೆ ಭೂಷಣವೆನಿಸೀತು.

"ಬೆದರು"

(ಒಂದು ರೇಡಿಯೋ ಪ್ರಹಸನ)

ಲೇಖಕರು: ಪಿ. ಬಿ. ದೇಶಪಾಂಡೆ, ಬಿ. ಎಸ್‌ಸಿ. ಮುಂಬಯಿ

ಪಾತ್ರಗಳು:

೧. ಅವ್ವ. ೨. ಸುನೀತಾ (ಮಗಳು). ೩. ಪಾಟೀಲ ಪಾಂಡಪ್ಪ (ಹೆಡ್‌ಕ್ಲಾರ್ಕ್.) ೪. ಕೆ. ರಾಜಾರಾಮ್ (ಮ್ಯಾನೇಜರ್).

ಅವ್ವ—ಏನಿದು? ಸವ್ವಾಏಳು ಆಗಿ ಹೋತು. ಈ ಹುಡಿಗಿ ಇಷ್ಟು ಯಾಕ ತಡಾ ಮಾಡಲಿಕ್ಕೆ ಹತ್ತೀದೋ ಏನೋ! ಆಫೀಸು ಏಮೂವರೀಗೇ ಬಿತ್ತಽವ; ಬಿಟ್ಟ ಕೂಡಲೇ ಲಗೂನ ಮನೀಗೆ ಬಾರವ್ವಾ ಅಂತ ಎಷ್ಟ ಸಲ ಹೇಳೀನಿ? ಈಕಿ ಮನೀಗೆ ಬರೋ ತನಕಾ ನನಗ ಜೀವದಾಗ ಜೀವ ಇರೂದಿಲ್ಲ.....ದೇವರಽ, ಈಕಿ ಕೆಲಸಾ ಬಿಟ್ಟುಕೊಟ್ಟು, ಎಂದ ಮದಿವಿ ಆಗಿ, ಹ್ಯಾಂಗ ಸುಖದಿಂದ ಇದ್ದಾಳು ಅಂತೀನಿ....?

ಸುನೀತಾ—(ಬಾಗಿಲು ಬಡಿದು) ಅವ್ವಾ....ಏ....ಅವ್ವಾ..... ಬಾಗಲಾ ತಗೀ.

ಅವ್ವ—ಹೆಂಗಽ ಮುಂದಕ ನೂಡೇನಿ, ನುಗಸು..... ಬಂದ್ಯಾವ್ವಾ....?ಎಷ್ಟೊತ್ತು ಆದು ಮನೀಗೆ ಬರೋದು, ಸುನೀತಾ? ಏಳೂವರಿ ಆಗಲಿಕ್ಕೆ ಬಂತು.

ಸುನೀತಾ—(ಉಸ್ಸೆಂದು) ಏನ ಹೇಳ್ಲಿ ಅವ್ವಾ....ನಮ್ಮ ನಶೀಬಾನಽ ಕೆಟ್ಟ ಆದ....ಅದಕ್ಕ ಯಾರು ಏನು ಮಾಡ್ಯಾರು?

ಅವ್ವ—(ಗಾಬರಿಯಿಂದ) ಯಾಕಽ ಸುನೀತಾ? ಅಂಥಾದೇ ನಾತು? ಕಣ್ಣು ಯಾಕ ಕೆಂಪಗಾಗ್ಯಾವ? ಇಷ್ಟ ಯಾಕ ತೀಕ ಲಿಕ್ಕೆ ಹತ್ತೀದಿ? ಏನಾರಽ ಆತು ಹೇಳು....?

ಸುನೀತಾ—ಅಂಥಾದ್ದೇನೂ ಆಗಿಲ್ಲ; ನೀ ಏನಕೆನಾರ ವಿಚಾರ ಮಾಡಬ್ಯಾಡಾ....ಸ್ವಲ್ಪ ಚಹಾ ಏನಾರ ಅದಽ ಏನು?

ಅವ್ವ—ಅಯ್ಯಽ ಬಿಸೀಗಿಟ್ಟು ಬಂದೀನಿ, ತಡಿ....ಇಕಾ ಪಿಡಿ....

ಸುನೀತಾ—[ಚಹಕುಡಿಯುತ್ತ] ಇವತ್ತ ಆಫೀಸಿನ್ಯಾಗ ಆತೀ ಕೆಲಸ ಇತ್ತು. ಅಂವಾ ಹೆಡ್‌ಕ್ಲಾರ್ಕ್ ಒಂದೇ ಸವನೇ ಕೆಲಸಾ ತಂದು ಒಟ್ಟಲಿಕ್ಕೆ ಹತ್ತಿದ್ದಾ....ಆರೂವರಿ ಆಗಿತ್ತು....ಇನ್ನೂ ಟಾಯಿಪ್ ಮಾಡ್ತಿದ್ದೆ.....

[ಟಾಯಿಪಿಂಗ್ ಸಪ್ಪಳ]

'ಕಟ್, ಕಟ್, ಕಟ್, ಕಟ್, ಕಟ್, ಕಟ್, ಕಟ್, ಕಟ್, ಕಟ್....'

ಪಾಂಡಪ್ಪ—[ಕಾಲ್ ಬೆಲ್ ಬಾರಿಸಿ] ಢಣ್....ಏ ಫಕೀರಾ? ಈ ಕಾಗದಾ ಆ ಟಾಯಿಪಿಸ್ಟ್ ಕಡೆ ಕೊಡು....

ಸುನೀತಾ—[ಉಸಿರೆಳೆದು] ಹುಶ್....ಹೂಂ....[ಮತ್ತೆ ಟಾಯಿ ಪಿಂಗ್ ಸಪ್ಪಳ ಕಟ್, ಕಟ್, ಕಟ್, ಕಟ್]

ಪಾಂಡಪ್ಪ—ಅಂ....ಸುನೀತಾ....ಅಲ್ಲ....ಮಿಸ್ ಸುನೀತಾ.... ಅ.....

ಸುನೀತಾ—[ಅಸಹನೆಯಿಂದ] ಮಿಸ್ಟರ್ ಪಾಟೀಲ, ನಿಮಗ ನಾ ಸಾವಿರ ಸಾರೆ ಆದ್ರೂ ಹೇಳಿರಬೇಕು....ನನ್ನ ಮೊದಲನೇ ಹೆಸರ ನಿಂದ ನೀವು ಕರಿಯಬಾರದು ಅಂತ....ಮತ್ತ....

ಪಾಂಡಪ್ಪ—I am sorry, ಮಿಸ್ ನಾಡಿಗೇರ....ನಾ ಏನ್ ಹೇಳ್ಬೆಕೂಂತಿದ್ದೆ ಅಂದ್ರ.....ಇಲ್ಲಿ ನೋಡ್ರಿ....ಇದೊಂದು ಸ್ಟೇಟ್ ಮೆಂಟು....ಹೋದ ತಿಂಗಳು ಖರೀದಿ ಮಾಡಿದ ಸಾಮಾನಿನ ವಿವರ.... ಇದೊಂದು ಅರ್ಜಂಟ್ ಆದ....ಇದನ್ನಷ್ಟು ಟಾಯಿಪ್ ಮಾಡಿಬಿಡ್ರಿ .....

ಸುನೀತಾ—ಮಿಸ್ಟರ್ ಪಾಟೀಲ....ಈಗ ಆರೂವರೀ ಆಗಲಿಕ್ಕೆ ಬಂತು, ಗೊತ್ತದಽ ಏನು ನಿಮಗ?....ಐದೂವರಿಗೆ ಆಫೀಸು ಬಂದು ಆಗೋದು....ಅಂಥಾದ್ದು....

ಪಾಂಡಪ್ಪ—ಇದು ಆಗದೀ ಅರ್ಜಂಟ್ ಆದ....ಇಂಜನೀಯರ ಸಾಹೆಬ್ರು, ಇವತ್ತ ಇದು ತಯಾರಾಗಬೇಕು ಅಂತಿದ್ರು....ಅದಕ್ಕ.....

ಸುನೀತಾ—ನನ್ನ ಕಡಿಂದ ಸಾಧ್ಯ ಇಲ್ಲಾ....ಇವತ್ತ ನನಗ ಸ್ವಲ್ಪೂ ವಿಶ್ರಾಂತಿ ಸಿಕ್ಕಿಲ್ಲ....ಅದಲ್ಲದೇ ನನಗ ಒಂದೇ ಸವನೆ ತಲೆ ನೋಯಿಸಲಿಕ್ಕೆ ಹತ್ತೀದ....ಇನ್ನ ಹೆಚ್ಚಿಗೆ ವ್ಯಾಳ್ಯಾ ನನಗ ಕೂಡಲಿಕ್ಕೆ ಸಾಧ್ಯ ಇಲ್ಲ. ಏನ್ ಕೆಲಸ ಇದ್ರೂ, ಅದು ನಾಳೆಗೇ.....

ಪಾಂಡಪ್ಪ—ಕೆಲಸದ ವಿಷಯಕ್ಕ ನೀವು ಹೀಗ ಮಾಡಿದ್ರ ಹ್ಯಾಂಗ....? ಸರಕಾರೀ ಕೆಲಸ, ಅದರೊಳಗ ಅರ್ಜೆಂಟು! ಅದಕ್ಕ ನಾ ಏನ್ ಹೇಳ್ಬೆಕೂಂತಿದ್ದೆ ಅಂದ್ರ....

ಸುನೀತಾ—ನಾಸೂ ಮನುಷ್ಯಳು ಅನ್ನೋದನ್ನ ನೀವು ಮರತ್ಹಾಂಗ ಕಾಣಸ್ತದ....ಇವತ್ತ ಆಫೀಸಿಗೆ ಬಾರದೇ ಇದ್ರೇನೇ ಒಳ್ಳೆ ದಿತ್ತು ಅಂತ ಅನಸ್ತದ....

ಪಾಂಡಪ್ಪ—ಬಿಡ್ರಿ ಹಾಂಗಾದ್ರ....ನೀವು ಮಾಡಲಿಲ್ಲಾಂದ್ರ ನಾನೇ ಕೂತು ಟಾಯಿಪ್ ಮಾಡಬೇಕಾಗ್ತಽದ....

ಸುನೀತಾ—ನೀವು ಬೇಕಾದ್ದು ಮಾಡಿಕೊಳ್ರಿ....ನಾನಂತೂ ಹೊರಟಿ.....

ಪಾಂಡಪ್ಪ—ಎಲಾ, ಹೋಗೇಬಿಟ್ರೇನು....? ನಾ ಏನ್ ಹೇಳ್ಬೇಕೂಂತಿದ್ದೆ ಅಂದ್ರ....

[ಹೊರಗೆ ಹೋಗುವ ಸಪ್ಪುಳ]

ಸುನೀತಾ—ಇಷ್ಟಾದ ಮ್ಯೂಲೆ, ಅವ್ವಾ, ಸ್ಟೇಶನ್‌ರೋಡ್ ಮ್ಯಾಲಿಂದ ಮನೀಕಡೆ ಬರ್ತಿದ್ದೆ....ಅಷ್ಟರೊಳಗs ಏನಾತು ಅಂದಿ....

ಪಾಟೀಲ ಪಾಂಡಪ್ಪ—[ಕೆಮ್ಮುವ ಸಪ್ಪಳ-ಎರಡು ಸಲ]....ಅ ಸುನೀತಾ....ಅಲ್ಲ ಮಿಸ್ ಸುನೀತಾ....ಅಲ್ಲಲ್ಲ, ಮಿಸ್ ನಾಡಿಗೇರ್..

ಸುನೀತಾ—ಯಾರು ? ಪಾಟೀಲ ಪಾಂಡಪ್ಪನವರೇನು ? ಯಾಕs ? ನೀವೂ ಎದ್ದು ಹೊರಟು ಬಿಟ್ರೇನು ? ಮತ್ತ ಅರ್ಜಂಟ್ ಕೆಲಸಾ ಅಂತಿದ್ರೆಲ್ಲಾ....?

ಪಾಟೀಲ—ಅತು ಮತ್ತs....ನಾಳೆ ಬಂದ ಕೂಡಲೇ ಆ ಕೆಲಸಾ ಮುಗಿಸಿ ಬಿಟ್ರಾತು....ಅಂತ, ನಾನೂ ಎದ್ದೇ ಬಿಟ್ಟೆ....ಅಂದ್ರ ನಿಮಗ ಏನ್ ಹೇಳ್ಬೇಕೂಂತಿದ್ದೆ ಅಂದ್ರs....ನನಗ ಮಿಸ್ಟರ್ ಪಾಟೀಲ ಅಂತ ಕರದ್ರs ಛೆಲೋ ಅನಸ್ತದ....ಪಾಂಡಪ್ಪನವರ, ಅಂತ ನೀವಂದ್ರ ಯಾರ್ನೂ ಮುದಕರ್ನ ಕರದ್ಹಂಗ ಆಗ್ತದ....ಅದಕ್ಕ.

ಸುನೀತಾ—ನೀವು ಆಫೀಸಿನ್ಯಾಗ ಹೆಡ್ ಕ್ಲಾರ್ಕು....ಅದಕ್ಕ ಅಲ್ಲೆ ಅಷ್ಟೇ ನೀವು ಮಿಸ್ಟರ್ ಪಾಟೀಲ, ಹೊರಗ ಎಲ್ಲಾರೂ 'ಪಾಂಡಪ್ಪನವರ' ಅಂತಾರ ನಿಮಗ....

ಪಾಟೀಲ—ಅದೂ ಖರೇನs ಅನ್ರಿ....ಅಂದ್ರ ನಿಮಗೇನು ಹೇಳ್ಬೇಕೂs....

ಸುನೀತಾ—ಬರೇ ಹಾಂಗ ಏನ್ ಹೇಳ್ಬೇಕೂ, ಏನ್ ಹೇಳ್ಬೇಕೂಂತ ಅನಕೋತ ಕೂಡಬ್ಯಾಡ್ರಿ....ಅದೇನು ಹೇಳೋದದ ಹೇಳಿಬಿಡ್ರಿ....

ಪಾಟೀಲ—ಅದನ್ನೇ ಹೇಳ್ತೇನಿ....ಅಂದ್ರ ಆಫೀಸಿನ್ಯಾಗ ಹೇಳ್ಬೇಕೂಂತ ಮಾಡಿದ್ದೆ....ಅದ್ರ ನೀವು ಲಗೂ ಎದ್ದು ಬಿಟ್ರ....

ಸುನೀತಾ—ಓಹೋ !! ಅದಕ್ಕೆ ಆರ್ಜಂಟ್ ಕೆಲಸಾ ಅಂತ, ಮುಂದ ಮಾಡಲಿಕ್ಕೆ ಹತ್ತಿದ್ರೇನು....?

ಪಾಟೀಲ—ಛೇ....ಛೇ....ಛೇ ಹಾಂಗೇನಿಲ್ಲಾ-ಆದ್ರ, ಈಗ ಹಾದಿಯ ಹತ್ತರ ಹೀಂಗ ಹೇಳ್ಬೇಕಾತಲ್ಲಾಂತ ಅಷ್ಟs....ನಮ್ಮ ಕುಟುಂಬ....ಅ....ನಿಮಗ ಗೊತ್ತದಲ್ಲಾ...

ಸುನೀತಾ—ಹೌದ್ರೀ....ಅಂದ್ಹಾಂಗ ಈಗ ಹ್ಯಾಂಗದ ಅವರಿಗೆ....?

ಪಾಟೀಲ—ಹ್ಯಾಂ....ಗೇ... ನು ? ಎಂದ ಆಕಿ ಫಟಿವ್ರಭಾ ಹಾಸ್ಪಿಟಲ್ ಸೇರ್ಯಾಳ, ಅಂದಿನಿಂದ ನನಗ ಆಕೀ ಆಶಾನೇ ಇಲ್ಲ. ಮೊನ್ನೆ ಡಾಕ್ಟರು ಅಂದ್ರು....ಇನ್ನೇನು ಬಾಳ ಅಂದ್ರ ಎರಡು ಮೂರು ತಿಂಗಳು ಮಾತ್ರ ಆಕಿ ಉಳಿಯೋದು ಅಂತಾರ....

ಸುನೀತಾ—ಚ್ಚು .... ಚ್ಚು .... ಚ್ಚು .... ಪಾಪ.... ಅವರಿಗೆ ಭಾಳಷ್ಟು ಆಯುಷ್ಯ ಹಾಕಿ, ಅವರ್ನ ಗಟ್ಟಿಮುಟ್ಟಾಗಿ ಇಡಬಾರದs ದೇವರು....?

ಪಾಟೀಲ—ಇನ್ನೇನು ಆಯುಷ್ಯ ಹಾಕ್ತಾನ ದೇವರು ? ಹ್ಯಾಂಗೂ ಹೊಂಟೀ ನಿಂತಾಳ....ಕಳ್ಳ ಹೊಕ್ಕ ಮನೀಗೆ ಎಣ್ಣೆ ದಂಡ ದಂಡ ಅಂತ....ಯಾಕ ಔಷಧಕ್ಕ ದುಡ್ಡು ಹಾಳ್ಮಾಡಬೇಕೂಂತ, ನಾನೂ ದೇವರ ಮ್ಯಾಲೆ ಭಾರಾ ಹಾಕಿ ಕೂತಬಿಟ್ಟೇನಿ....

ಸುನೀತಾ—ಅಂದ್ರ....? ಏನ್ ನೀವು ಅವರಿಗೆ ಈಗ ಔಷಧಾನೂ ಬಂದಮಾಡಿದ್ರೇನು....?

ಪಾಟೀಲ—ಹೂ....ಎಲ್ಲಿ ಖರ್ಚು ಪೂರೈಸಲಿ....? ಈಗ ನಾಲ್ಕೈದು ತಿಂಗಳು ಉಪಚಾರ ಮಾಡಿದ್ದs ಹೊರಲಾರದಷ್ಟು ಆಗೇದ.

ಸುನೀತಾ—ಏನ್ರೀ, ಪಾಪ, ನಿಮಗ ಇಷ್ಟು ಹ್ಯಾಂಗ ತಿಳಿಯೂದಿಲ್ಲಾಂತೇನಿ? ಎಂಟು ವರ್ಷದಾಗ, ಐದು ಮಕ್ಕಳನ್ನ ಹಡೆದು ಅದರೊಳಗ ಮತ್ತ ಮೂರು ಮಕ್ಕಳನ್ನ ಕಳಕೊಂಡಾರ....ನಿಮಗ ಗಂಡಸರಿಗೆ ಏನೂ ಅನಸೂದಿಲ್ಲಾ....ಉಳಿದ ಎರಡು ಗಂಡುಮಕ್ಕಳ ಮೂರೀ ನೋಡಿಕೊಂಡು ಹ್ಯಾಂಗಾರ ಬದುಕೋಣು ಅಂತಾರ ಅವರು ಪಾಪ!....ಅವರಿಗೆ ಯಾವುದಕ್ಕೂ ಕಡಿಮೆ ಮಾಡಬ್ಯಾಡ್ರಿ. ಅವರೆಲ್ಲಾ ನೆಟ್ಟಗ ಆಗಿ ಬರತಾರ....ಈಗೇನು ಬೇಕಾದಷ್ಟು ಒಳ್ಳೇ ಖಾತ್ರೀ ಔಷಧ ಬಂದಾವಂತ....

ಪಾಟೀಲ—ಛೇ, ಛೆ, ನಿಮಗೇನು ಹುಚ್ಚು ಹತ್ತ್ಯೈ? ಡಾಕ್ಟರು ಹೇಳ್ಯಾರ....ಆಕಿ ಉಳ್ಯೋದು ಸಾಧ್ಯನೇ ಇಲ್ಲಾಂತ. ನನಗೂ ಖಾತ್ರೀ ಆಗೇದ....ಅದಕ್ಕ ಮುಂದಿನ ಗತಿ ಏನು ಅಂತ ನಿಚಾರ ನಡಿಸೇನಿ....

ಸುನೀತಾ—ಗತಿ ಅಂದ್ರ ? ಏನು ಈಗಿನಿಂದಾನೇ ಇನ್ನೊಂದು ಮದಿವೀ ವಿಚಾರ ಸುರುವು ಮಾಡಿರೇನು ಮತ್ತs ?

ಪಾಟೀಲ—(ನಿದಾನವಾಗಿ) ನೋಡ್ರಿ, ಮಕ್ಕಳು ಸಣ್ಣವು ಅವ....ಯಾರಾದ್ರೂ ನೋಡಿಕೊಳ್ಳಕ್ಕೆ ಬೇಕಲ್ಲಾ....ಮತ್ತ ಆಕೀ ದಂತೂ ಆಶಾ ಬಿಟ್ಟಾಂಗ ಆಗೇದ....ಅದಕ್ಕ....

ಸುನೀತಾ—ಮಿಸ್ಟರ್ ಪಾಟೀಲ....ನನ್ನ ಮಾರೀ ಏನ್ ಮಿಕಿ ಮಿಕಿ ನೋಡ್ತೀರಿ....?

ಪಾಟೀಲ—ಅಂದ್ರ....ಅಲ್ಲ....ನಿಮ್ಮ ಕಡೆ ನಂದೊಂದು ವಿನಂತಿ ಅವ....ನಮ್ಮ ಪರಿಸ್ಥಿತಿ ಎಲ್ಲಾ ನಿಮಗ ಗೊತ್ತದ....ಮತ್ತ ನಿಮ್ಮ ತಾಯಿ ನೀವು ಇಬ್ಬರು ಇದ್ದೀರಿ....ನಿಮಗೂ ಯಾರೂ ಇಲ್ಲ....ನಿಮ್ಮದೂ ಯಾವಾಗಾದರೂ ಒಮ್ಮೆ ಲಗ್ನ ಆಗಬೇಕಾಗ್ತsದ....ಅದಕ್ಕ ನೀವs ಮನಸ್ಸು ಮಾಡಿದ್ರ, ನನ್ನ ಸಂಸಾರ ಎತ್ತಿ ಹಿಡಿದಾಂಗ ಆಗ್ತದ....

ಸುನೀತಾ—[ಒಮ್ಮೆಲೆ ಕೆರಳಿ ಅಸಹ್ಯದಿಂದ] Shut up.... ಮಿಸ್ಟರ್ ಪಾಟೀಲ....ನಿಮ್ಮ ತಲೀ ಏನಾದರೂ ಸಮಾ ಅದನೋ

ಇಲ್ಲೋ....? ನೀವು ಏನ್ ಮಾತಾಡ್ತೀರಿ, ಅನ್ನೋದರೆ ಗೊತ್ತು ಅದ ಏನ ನಿಮಗ? ನಾನು ನನ್ನ ತಾಯಿ ಇಬ್ಬರೇ, ನಮಗ ಯಾರೂ ಗಂಡಸರು ದಿಕ್ಕು ಇಲ್ಲಾ ಅಂತ ಅಂದಾಕ್ಷಣಕ್ಕ, ಏನೆ ಬೇಕಾದ್ದು ಮಾತಾಡಬಹುದೇನ್ ನೀವು? ನನ್ನ ದುಪ್ಪಟ್ಟು ವಯಸ್ಸಾಗೇದ ನಿಮಗ....! ನಿಮ್ಮ ಹೆಂಡತಿ ಇನ್ನೂ ಜೀವದಿಂದ ಇದ್ದಾಗಲೇ, ಅವರು ಸತ್ತು ಹೋಗ್ತಾರಂತ ಖಾತ್ರಿ ಮಾಡಿಕೊಂಡು, ಮನಸ್ಸಿನೊಳಗೇ ಅವರ್ನ ದಹನ ಮಾಡಿ, ಈಗಾಗಲೇ ಎರಡನೇ ಮದಿವೀ ವಿಚಾರ ನಡಿಸೀರಿ! ನಾಚಿಕೆ ಬರೂದಿಲ್ಲಕ್ಕ ನಿಮಗ....? ಖರೇವಂದ್ರೂ ಹೆಂಡತಿನ್ನ ಕಳಕೊಂಡವ್ರು, ಮೈಲಿಗಿ ಕಳಿಯೋದ್ರೊಳಗಕ್ಕ ಮತ್ತೊಂದು ಮದಿವೀ ವಿಚಾರ ಮಾಡ್ತಾರಂತ ಕೇಳಿದ್ದೆ ಆದೇ ಕೀಳತನ, ಅಮಾನುಷ ಅಂದು ಕೊಂಡಿದ್ದೆ....ಆದ್ರೆ ನೀವು ಅಂಥವರನ್ನೂ ಮೀರಿ ನಿಂತೀರಿ. ಇಷ್ಟು ನೀಚತನ ನಿಮಲ್ಲಿ ತುಂಬೇದ ಅನ್ನೋದು ನನಗ ಗೊತ್ತಿದ್ದಿಲ್ಲ ಬಿಡ್ರಿ ನಂದೇ ಮದಿವಿ ಆಗಿದ್ರ ನೀವು ಹೀಗೆ ಮಾತಾಡತಿದ್ರೇನು....?

ಪಾಟೇಲ—ಅಲ್ಲ, ನಿಮ್ಮ ಮದಿವಿ ಆಗಿದ್ರ ಈ ಮಾತೇ ಬರತಿದ್ದಿಲ್ಲಾ. ಅದಕ್ಕಷ್ಟ ಅಷ್ಟರೊಳಗಷ್ಟ....ನೀವೇನಾರ ದೊಡ್ಡ ಮನಸ್ಸು....

ಸುನೀತಾ—ಮಿಸ್ಟರ್ ಪಾಟೇಲ....? ನಿಮ್ಮಲ್ಲಿ ಮನುಷ್ಯತ್ವ ಎಷ್ಟೂ ಇಲ್ಲ. ನಿಮ್ಮ ಸಂಗತೀಲೆ ಮಾತಾಡಲಿಕ್ಕೆ ನನಗೆ ಹೇಸಿಗೆ ಅನಿಸ್ತಷ್ಟದ....ಇನ್ನೊಮ್ಮೆ ಇಂಥಾ ವಿಷಯ ನನ್ನ ಮುಂದ ಎತ್ತಿದರ ಅದರ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ನಿಮಗೆ ಹೇಳಕ್ಕೇನಿ....

ಪಾಟೇಲ—ಅಲ್ಲ, ನಿಂದರ್ರಿ ಸ್ವಲ್ಪ....ನಿಮಗ ನಾವೇನ್ ಹೇಳ್ಬೇಕೂಂತಿದ್ದೆ ಅಂದ್ರ.....

* * * *

ಸುನೀತಾ—ಅವ ಹೀಂಗ ಅನಕೋತ ಅಲ್ಲೇ ನಿಂತಿದ್ದ. ನಾ ಅಲ್ಲಿಂದ ಧುಡು ಧುಡು ಲಗೂನೇ ಬಂದುಬಿಟ್ಟೆ....ಅವನ ಮ್ಯಾಲೆ ಭಾಳ ಸಿಟ್ಟು ಬಂತವ್ವಾ....

ಅವ್ವ—ನೀ ನಾಳಿನಿಂದ ಕಲಸಕ್ಕಷ್ಟ ಹೋಗಬ್ಯಾಡವ್ವಾ....! ನಮ್ಮಿಬ್ಬರದೂ ಹ್ಯಾಂಗೋ ಸಾಗ್ತದ....

ಸುನೀತಾ—ಛೇ ಅವ್ವಾ, ನಾ ಕೆಲಸಾ ಬಿಟ್ಟು ಮತ್ತ ಮುಂದೀ ಮನ್ಯಾಗ ನಿನ್ನ ಕೆಲಸಕ್ಕ ಹಚ್ಚಬೇಕು?....ಇಷ್ಟು ವರ್ಷ ದುಡಿದದ್ದು ಸಾಕು....ವಯಸ್ಸಾಗೇದ ನಿಂದೂ....ಏನ್ ಬಿಡು....ಆ ಹುಚ್ಚ ಪಾಟೇಲಗ ಹೆದರಿ ಕೆಲಸಾ ಬಿಡಲೇನು? ನೀ ಏನು ಕಾಳಜೀ ಮಾಡಬ್ಯಾಡಾ

ಅವ್ವ—ನೋಡು ಸುನೀತಾ....! ನಮ್ಮಷ್ಟಕ್ಕ ನಾವು ಮರ್ಯಾದಿಯಿಂದ ಜೀವನಾ ಸಾಗಿಸೇವಿ, ಈ ಜನಾ ಏನಾರೆ ಕಿಡಿಗೇಡಿತನ ಮಾಡತಾರಲ್ಲಾ ಅಂತೇನಿ....? ಅಲ್ಲೆ ಧಾರವಾಡದಾಗ ಇದ್ದಾಗ, ಆ ಪುಂಡ ಒಬ್ಬಾವ ಗಂಟು ಬಿದ್ದಿದ್ದಾ; ಈಗ ಇಲ್ಲಿ ಈ ಪಾಟೇಲ ಪಾಂಡಪ್ಪನ ಉರದಾಟ ಸುರುವಾತಷ್ಟ?

ಸುನೀತಾ—ಧಾರವಾಡದಾಗಿನ ಆ ಕೆವಪ್ಪವ ಕೃಷ್ಣರಾಯನ ಮುಂದ, ಈ ಪಾಂಡಪ್ಪ ಏನೂ ಅಲ್ಲ ಬಿಡು....ಅವ್ವಾ ಅವ, ಮದಿವೀ ಮಾಡಿಕೊಳ್ಳದೇನೇ ಪುರಾಣದಾಗಿನ ಕೃಷ್ಣನ್ನ ಮೀರಿಸಬೇಕೂಂತ ಹೊಂಚು ಹಾಕಿದಾಂವಾ ಅವ....

ಅವ್ವ—ಅಲ್ಲೀ ಇಂಜಿನೀಯರ್ ಸಾಹೇಬ್ರು ಭಾಳ ಒಳ್ಳೆಯವರವಾ. ಅವರೇ ಅವನ ಸಂಬಂಧಿ ನಿನಗಷ್ಟ ಮೊದಲಷ್ಟ ಎಚ್ಚರಿಕೆ ಕೊಟ್ರು, ನೀ ಕೇಳದ ಕೂಡಲೆ ಇಲ್ಲಿ ಬೆಳಗಾಂವಿಗೆ ವರ್ಗ ಮಾಡಿದ್ರು. ಎಷ್ಟು ಉಪಕಾರ ಮಾಡಿದ್ರು, ಮಹಾಯ್ರು, ತಂಪೊತ್ತಿನಾಗ ಅವರ್ನ ನೆನಸಬೇಕು, ನೋಡು! ಇಲ್ಲಾಂದ್ರೆ ಖರೇವಂದ್ರೂ, ಅವಾ ಕೃಷ್ಣರಾಯ, ಸವಿ ಸವಿ ಮಾತಾಡಿಕೋತ ಫಸಾಸಿ ಬಿಡತಿದ್ದನವಾ ನಿನ್ನ.... !!

ಸುನೀತಾ—ಅಲ್ಲ ಅವ್ವಾ, ಏನು ಮೋಜು ನೋಡು ಅಂತೀನಿ.... ಅಲ್ಲಿ ಧಾರವಾಡದಾಗಷ್ಟ ಆತು, ಇಲ್ಲಿ ಬೆಳಗಾಂವಿ ಆಫೀಸಿನ್ಯಾಗಷ್ಟ ಆತು, ಜೋಡೀ ಕೆಲಸ ಮಾಡುವಂಥಾ ಮದಿವಿ ಅದ ಹೆಂಗಸರ ಉಸಾಬರೀ ಯಾರೂ ತಗಿಯೂದಿಲ್ಲ. ನಾವು ಮದಿವಿ ಅಗದೆ ಇದ್ದವ್ರು ಅಂದ್ರ ಏನ್ ತಿಳಿದಾರೋ ಏನೋ ಈ ಜನ ಮರ್ಯಾದೆ ಬಿಟ್ಟು ನಡೀಲಿಕ್ಕೈ....?

ಅವ್ವ—ಅದಕ್ಕಷ್ಟ ಸುನೀತಾ, ನಿಂದೊಂದು ಮದಿವಿ ಆಗಿಬಿಟ್ರ ಈ ಕೆಲಸದ ಧಾವತಿ ತಪ್ಪತಷ್ಟದ ನೋಡು, ನನ್ನದೊಬ್ಬಾಕೀದು ಯಾಕ ಚಿಂತಿ, ಹ್ಯಾಂಗಾರ ಆದೀತು,

ಸುನೀತಾ—ಅದೇನಿಲ್ಲ ಅವ್ವಾ, ನಿನಗ ಆಧಾರ ಇಲ್ಲದ್ಹಾಂಗ ಮಾಡಿ, ನಾ ಲಗ್ನ ಆಗೋದು ಸಾಧ್ಯ ಇಲ್ಲ. ಆ ಮದವೀ ವಿಚಾರ ಯಾಕ ಈಗ? ಮೊದಲ ಆಫೀಸಿನ್ಯಾಗ ಈ ಗಂಡಸರ ಕಾಟ ತಪ್ಪಿಸಲಿಕ್ಕೆ ಏನಾರೇ ಒಂದು ಹಂಚಿಕೆ ಮಾಡಲಿಕ್ಕೇ ಬೇಕು....

ಅವ್ವ—ಕೆಲಸಾ ಬಿಡೋದೊಂದೇ ಹಂಚಿಕೆ ಅದಕ್ಕ....ಏಳೇಳು, ಹಿಂದಾಗಡೆ ವಿಚಾರ ಮಾಡೀಯಂತ....ಯಾವಾಗ ಮುಂಜಾನೆ ಊಟಾ ಮಾಡೀದಿ....ಏಳು ಊಟಕ್ಕೇಳು.....

† † † † †

[ಎಂಟು ದಿನಗಳ ತರುವಾಯ]

ಸುನೀತಾ—ಅವ್ವಾ, ಮುಂಬಯಿದ್ದು ಒಂದು ಸಾಬಾಣ ಕಂಪನಿಯವರದು ಬೆಂಗಳೂರಾಗ ನೂರಾಟದ್ದು ಒಂದು ಆಫೀಸು ಅದ ಅಂತ....ಅವರು, ಟಾಯ್ಲೆಟಿಸ್ಟ್ ಕ್ಲಾರ್ಕ್ ಒಂದು ಜಾಗಾ ಅದ ಅಂತ ಜಾಹೀರಾತು ಕೊಟ್ಟದ್ರು....ಹದಿನೈದು ದಿವಸದ ಹಿಂದ ಅರ್ಜಿ ಹಾಕಿದ್ದೆ, ಕೆಲಸದ ಸಲುವಾಗಿ. ಭೆಟ್ಟಿಗೆ ಕರದಾರ....ನಾಡದು ಬೆಂಗಳೂರಿಗೆ ಹೊರಡಬೇಕು. ಪಗಾರನೂ ಹೆಚ್ಚು ಅದ, ಮತ್ತ ಕಂಪನೀನೂ ಛೆಲೋಅದ ಅಂತ....

ಅವ್ವ—ಎಲ್ಲೀ ಬೆಂಗಳೂರು, ಎಲ್ಲೀ ಬೆಳಗಾಂವಿ, ಏನ್ ಮಾಡ್ತಿ ಬಿಡು ಮಹಾರಾಯ್ತಿ—ನಮ್ಮ ಗುರುತಿನವರು, ಋಣಾನುಬಂಧದವರು ಯಾರೂ ಇಲ್ಲ....ದೊಡ್ಡ ಊರು ಹ್ಯಾಂಗೋ ಏನೋ !!

ಸುನೀತಾ—ಅದಕ್ಕೇ ಹೋಗಿ ನೋಡೋಣ ಅಂತೇನಿ....ಇಲ್ಲೀ ಅನುಭವ, ವಾತಾವರಣ ಯಾಕೋ ಭಾಳ ವಿಪರೀತ ಆಗಿ, ಬ್ಯಾಸರಿಟ್ಟಷ್ಟದ. ನಾನು ನಾಡದು ಬೆಂಗಳೂರಿಗೆ ಹೋಗಿ, ಅಲ್ಲೆ ಕೆಲಸ ಹತ್ತಿ ಆಫೀಸು ಛೆಲೋ ಅನಿಸಿದ್ರ, ಇಲ್ಲೀ ಕೆಲಸಕ್ಕ ರಾಜೀನಾಮೆ ಕೊಟ್ಟು ಬಿಡ್ತೇನಿ. ಮತ್ತ ಒಂದು ಸಣ್ಣ ಮನಿ ನೋಡಿ, ನಿನಗ ಪತ್ರಾ ಬರೀತೇನಿ. ಸಾಮಾನೆಲ್ಲಾ ತೊಗೊಂಡು ಗಾಡಿ ಹತ್ತಿ ಬಿಡು.

ಅವ್ವ—ಅಂದ್ರ ನೀ ಎಲ್ಲಾ ತರಾಯಿಸಿ ಬಿಟ್ಟೀ ಅನ್ನು....

ಸುನೀತಾ—ಇಲ್ಲಿಯ ಆಫೀಸಿನ್ಯಾಗೂ ಬೇಕಂತ್ಲೇ ತ್ರಾಸು ಮಾಡಲಿಕ್ಕೆ ಹತ್ತಾ ್ಯನ ಅವ ಹೆಡ್‌ಕ್ಲಾರ್ಕ್. ನನಗೂ ಸಾಕಾಗೇದವಾ....

ಅವ್ವ—ಆತೂ ನಮಗೂ ಬೆಂಗಳೂರ ನೆಲದ್ದೇ ಋಣ ಇದ್ರ ಯಾರು ತಪ್ಪಿಸಲಿಕ್ಕೆ ಆಗ್ತದ....ನೀ ಮಾತ್ರ ಭಾಳ ಜ್ವಾಕೆವಾ....ಅರಿಯದ ಊರು....ಕೆಲಸ ಹತ್ತಿದ ಕೂಡ್ಲೆ ಬರಿ, ಲಗೂನೇ ನಾನೂ ಬಂಡ್ಡ ಬಿಡ್ತೇನಿ.

* * * *

[ಗಾಡಿ ನಿಲ್ಲುವ ಸಪ್ಪಳ—ಬೆಂಗಳೂರ್ ಬೆಂಗಳೂರ್].

ಸುನೀತಾ—ಅವ್ವಾ....ಅವ್ವಾ....ಇಲ್ಲಿದ್ದೇನಿ.....ಹೂಂ..... ಸಾಮಾನು ಇಷ್ಟೇ ಹೌದಲ್ಲೊ....?

ಅವ್ವ—ಹೂಂ, ಇಷ್ಟೇ. ಸುನೀತಾ....!

ಸುನೀತಾ—ಏನಽ ಅವ್ವಾ?

ಅವ್ವ—ಏನಽ ಅಂತ ನನ್ನಽ ಕೇಳ್ತಿಯಾ? ನನಗ ಹೇಳ್ದಽ ಕೇಳ್ದಽ ಲಗ್ನಾ ಮಾಡಿಕೊಂಡು ಬಿಟ್ಟೀಯೇನು?

ಸುನೀತಾ—ಇಲ್ಲಾ....

ಅವ್ವ—ಏನಿಲ್ಲಾ ನಿನ್ನ ತಲಿ? ಕೊರಳಾಗೇನದು? ಮಂಗಳ ಸೂತ್ರಾ ಕಾಣಸ್ತದಲ್ಲಾ....?

ಸುನೀತಾ—ಓಹೋ, ಇದಽ? ನಕಲೀ ಮಂಗಳಸೂತ್ರ ಏಳು. ಇದರ ಸಂಬಂಧಿ ಮನ್ಯಾಗ ಹೇಳ್ತೇನಿ, ನಡೀ. ಸ್ಟೇಶನ್ ಮ್ಯಾಲೆ ಬ್ಯಾಡಾ....ಹೊರಗ ಝುಟಿಕಾ ಗೊತ್ತೇ ಮಾಡಿಟ್ಟೀನಿ.... ನಡೀ....

* * * * *

ಅವ್ವ—ಹೂಂ, ಏನಡ್ಡೀ ಇಲ್ಲಾ....ಮನೀ ಸಣ್ಣದಾದರೂ ಎಲ್ಲಾ ರೀತಿಯಿಂದ ಅನುಕೂಲ ಆದ ಬಿಡು. ಸಾಮಾನು ಎಲ್ಲಾ ಹಚ್ಚಿದ್ದಾಂಗ ಆಗೇದ, ಕೆಲಸಾನೂ ಆತು....ಈಗ ನನಗ ಹೇಳು, ನಿನ್ನ ಕೊರಳಾಗಿನ ಕರಿಮಣಿ ಕಥೀ!

ಸುನೀತಾ—ಇಲ್ಲ ಮಹಾರಾಯಳ, ಅಂಥಾದ್ದೇನೂ ಹೇಳಿ ಕೊಳ್ಳುವಂಥಾ ಕಥಿಯಿಲ್ಲಾ....ಇರೂವಾಕಿ ನೀ ಒಬ್ಬಾಕಿ ಅವ್ವ ನನಗ, ನಿನ್ನ ಬಿಟ್ಟು ನಾ ಲಗ್ನಾ ಹ್ಯಾಂಗ ಮಾಡಿಕೊಂಡೇನು.... ಹೇಳು....? ಬೆಳಗಾವಿಯಿಂದ ನಾ ಹೊರಡೋಕಿಂತ ಮದ್ಲಽ ನನಗ ಹೀಂಗ ವಿಚಾರ ಬಂತು. ಆಫೀಸಿನ್ಯಾಗ ಅಗಲಿ, ಹೊರಗಽ ಅಗಲೀ, ಮದಿವಿ ಆದ ಹೆಂಗಸರ ಉಸಾಬರಿ ಮಂದಿ ಮಾಡೂದಿಲ್ಲಾ ಅಂತ, ಖಾತ್ರೀ ಆಗಿತ್ತಽ. ಅದಕ್ಕಂತೇ ಒಂದು ತಾಳೀ ಕಟ್ಟಿಕೊಂಡೆ. ಬೆಂಗಳೂರಿಗೆ ಹೋದರ, ಸಾಧಾರಣ ಈ ಗಂಡಸರ ಹದ್ದಿನ ಕಣ್ಣಿನ ತ್ರಾಸ ಆದರೂ ತಪ್ಪತಽದ, ಅಂತ ತಿಳದು, ಬೆಳಗಾಂವ್ಯಾಗಽ ಈ ಕರಿಮಣಿ ತಾಳೀ ಕೊಂಡೆ; ಗಾಡಿಯೊಳಗ ಕಟ್ಟಗೊಂಡು ಬಿಟ್ಟೆ, ನಿನಗ ಹೇಳ್ತೀನಿ ಅವ್ವಾ, ಬೆಂಗಳೂರಿನ್ಯಾಗ ಗಾಡಿಯಿಂದ ಇಳದಾಗಿನಿಂದ ಇಳಕೊಂಡ ಹೋಟಲದಾಗ, ಆಫೀಸಿನ್ಯಾಗ, ಈ ಕರಿಮಣಿಯಿಂದ ಮರ್ಯಾದಿ ಹೆಚ್ಚು ಸಿಗಲಿಕ್ಕೆ ಹತ್ತೇದ....ಯಾರದೂ ಯಾವ ಉಸಾ ಬರೀನೂ ಇಲ್ಲ.

ಅವ್ವ—ನೋಡಿದ್ಯಾ, ಸುನೀತಾ....ಬರೇ ತಾಳೀ ಕಟಗೊಂಡ್ರೇನೇ ಇಷ್ಟು ಮರ್ಯಾದೆ? ಇನ್ನ ತಾಳೀ ಕಟ್ಟಿದ ಯಜಮಾನ್ರು ಇದ್ರಂತೂ ಅದೆಂಥಾ ಸಂರಕ್ಷಣ ಇರ್ತಽದ ನೋಡು (ಅಳುದನಿಯಿಂದ) ದೇವರಂತೂ ನನ್ನದು ಹೀಂಗ ಅವಸ್ಥಿ ಮಾಡಿಬಿಟ್ಟಾ....ನನ್ನ ಆಧಾರ ತಪ್ಪಿತು....ಅಂತಽನಿನಗ ದುಡಿಯೋ ಪ್ರಸಂಗ ಬಂತು....(ಸುಧಾರಿಸಿ) ಖರೇವಂದ್ರೂ ತಾಳೀ ಕಟ್ಟಾವನ್ನ ದೇವರು ನಿನಗ ಎಂದ ಕೂಡಿಸಿ ಕೊಡ್ತಾನೋ ಅಂತ, ನನಗ ಚಿಂತಿ ಹತ್ತಿ ಬಿಟ್ಟದವಾ!....ಅದಿರ್ಲಿ....ಇಲ್ಲಿ ಆಫೀಸು. ಜನಾ, ಹ್ಯಾಂಗ?

ಸುನೀತಾ—ಅದನ್ನ ಹೇಳ್ತೀನಿ ಕೇಳು....ಈ ಕರಿಮಣಿಯಿಂದ, ಎಲ್ಲಾರ್ನೂ ಸ್ವಲ್ಪ ಬೆದರಿಸಿ ದೂರ ಇಟ್ಟಾಂಗ ಆಗೇದೇನೋ ಖರೇ.... ಆದರ ನೌಕರೀ ಸಿಗಬೇಕಾದ್ರ ಈ ಕರಿಮಣಿ ಅಡ್ಡ ಬಂದ್ಹಾಂಗ ಆಗಿತ್ತು....ಇಂಟರವ್ಯೂಕ್ಕ ಆಫೀಸಿಗೆ ಹೋದೆ....

§ ೬ ೬ ೬ §

K. ರಾಜಾರಾವ್ — (Call bell-ಢಣ್ ಢಣ್.... ....) ಸಂಜಪ್ಪಾ, ಆ....N. S. ಸುನೀತಾ ಇವರನ್ನು ಒಳಕ್ಕೆ ಕಳಿಸು....

ಸುನೀತಾ—Good Morning, Sir!

ರಾಜಾರಾವ್— Good Morning to you. You are ....ಆ....N. S. ಸುನೀತಾ?

ಸುನೀತಾ—Yes, Sir.

ರಾಜಾರಾವ್—ಕೂತುಕೊಳ್ಳಿ, ನಿಮಗೆ ಕನ್ನಡಾ ಬರುತ್ತೆಯೆ?

ಸುನಿತಾ—ಛೆಲೋ ಬರ್ತಽದ. ನನ್ನ ಮಾತೃಭಾಷಾ ಕನ್ನಡ. S. S. C. ಯೊಳಗ ನೂರಕ್ಕ ೬೦ ಮಾರ್ಕ್ಸ್ ಬಿದ್ದಾವ ನನಗ.

ರಾಜಾರಾವ್—Oh, good....ನೀವು ನಿಮ್ಮ ಅಪ್ಲಿಕೇಷನ್‌ನಲ್ಲಿ, ನಿಮ್ಮ ಹೆಸರಿನ್ದಿಂದೆ, ಮಿಸ್ಸೋ ಮಿಸ್ಸೆಸ್ಸೊ ಕಾಣ್ಸಿಲ್ವಲ್ಲಾ.... ಆ....ನೋಡಿದ್ರೆ....ಮಿಸ್ಸೆಸ್ಸು ಅಂತ ಕಾಣತ್ತೆ....

ಸುನೀತಾ—ಅಂ, ಹೌದು ಸರ್....ಮಿಸ್ಸೆಸ್....

ರಾಜಾರಾವ್—ಇಲ್ಲಿ ನಿಮ್ಮ ಹಸ್ಬೆಂಡ್ ಹೆಸರು ಬೇಕಾಗುತ್ತೆ ಅದಕ್ಕೆ....

ಸುನಿತಾ—ಅಂ....ಅಂದ್ರ....ಅದನ್ನ....ಹ್ಯಾಂಗ....

ರಾಜಾರಾವ್—ಅದ್ಸರಿ....ನಿಮಗೆ ಹೇಳೋಕೆ ಸಂಕೋಚ Naturalಉ....ಆದರೆ ನಮ್ಮ ರಿಕಾರ್ಡ್‌ಗೆ ಬೇಕಾಗತ್ತೆ....ಕ್ಷಮಿಸಿ....

ಸುನೀತಾ—(ಸ್ವಲ್ಪನಾಚಿ) ಹೆಳ್ಳಿಕ್ಕೇ ಬೇಕೇನು? N. ಶ್ರೀನಿವಾಸರಾವ್.

ರಾವ್— ಶ್ರೀನಿವಾಸರಾವ್.... Good ಚೆನ್ನಾಗಿದೆ ಹೆಸರು....ನಿಮ್ಮ sss ಮಾರ್ಕ್ಸ್ list ನೋಡಿದ್ರೆ .... ಫರ್ಸ್ಟ್‌ಕ್ಲಾಸ್ ಪ್ಯಾಸ್ ಮಾಡಿದ್ದೀರಿ....ಮುಂದೆ ಎಜ್ಯುಕೇಶನ್ ಯಾಕೆ ಕಂಟಿನ್ಯೂ ಮಾಡಲಿಲ್ಲಾ ನೀವು ?

ಸುನೀತಾ—ಅಂದ್ರ, ಮನಿಯಿಂದ ನಮ್ಮ ಪರಿಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ನನ್ನ ತಾಯಿ ಒಬ್ಬರು, ನನ್ನ ಮ್ಯಾಲೇ ಅವಲಂಬಿಸಿ ಇದ್ದಾರ....

ರಾಜಾರಾವ್—ಓಹೋ ಹಾಗೋ ! ಅಂದ್ರೆ ನಿಮ್ಮ ಹಸ್ಬಂಡು Mr. ಶ್ರೀನಿವಾಸರಾವ್ ಸಂಪಾದಿಸೋದಿಲ್ವೇ ?

ಸುನೀತಾ—ಇಲ್ಲಾ....ಅಂದ್ರ....ಅ.....ಅವರು.... ಕಲಕತ್ತೆ ಯೊಳಗ M. Sc. ಗೆ ರಿಸರ್ಚ್ ಮಾಡ್ತಾರ.

ರಾಜಾರಾವ್—ಸರಿ, ಸರಿ .... ಬೇರೆ ಎಲ್ಲಿಯಾದರೂ ನೀವು ಕೆಲಸ ಮಾಡಿದ್ದೀರಾ ?

ಸುನೀತಾ—ಧಾರವಾಡದಾಗ ಮತ್ತು ಬೆಳಗಾವ್ಯಾಗ P.W.D. ಆಫೀಸಿನ್ಯಾಗ ಟಾಯಪಿಸ್ಟ್ ಕ್ಲಾರ್ಕ್ ಅಂತ ಎರಡೂವರಿ ವರ್ಷ ಮಾಡೇನಿ....

ರಾಜಾರಾವ್— ನೀವು ನಿಮ್ಮ ಮದರ ಟಂಗು ಕನ್ನಡಾ ಅಂತಾ ಹೇಳಿದ್ರಿ....ಆದ್ರೆ ಈ ಧಾರವಾಡ ಬೆಳಗಾಂವಿಯ ಕನ್ನಡ, ಇಲ್ಲಿ ಜನಕ್ಕೆ ಅರ್ಥವಾಗೋದು ಕೊಂಚ ಡಿಫಿಕಲ್ಟು ,... ....

ಸುನೀತಾ— ಅದೇನೂ ಅಷ್ಟು ಡಿಫಿಕಲ್ಟು ಅಲ್ರಿ.. . ? ಕೆಲವು ದಿನ ಸ್ವಲ್ಪ practice ಮಾಡಿಬಿಟ್ರ, ಒಂದೆರಡು ವೀಕ್ಸ್ ಟೈಮು ನಲ್ಲೇ, ನಿಮ್ಮ ಬೆಂಗಳೂರ ಕನ್ನಡದಾಗ ನಾನೇ expert ಆಗಿ ಬಿಡ್ತೇನಿ ಅಂತ ನನಗ confidence ಅವ ....

ರಾಜೇರಾವ್—Good ! Good ! you are very sharp.... ಇಷ್ಟರಲ್ಲೇ ಇಲ್ಲಿಯ ಕನ್ನಡ ಪಿಕ್‌ಅಪ್ ಮಾಡಿಬಿಟ್ರಲ್ಲಾ ..... !! ಆದ್ರೆ ಇನ್ನೊಂದು ವಿಷ್ಯ.....ನಮ್ಮ ಕಂಪನಿಯಲ್ಲಿ Married girls ಕೆಂತಲೂ, unmarried girls ಈ ಕೆಲಸಕ್ಕೆ ಅನುಕೂಲ ಅಂತ ಪಾಲಿಸಿ ಮಾಡಿಕೊಂಡಿದ್ದಾರೆ.... ಅದಕ್ಕೊಸುಗ....

ಸುನೀತಾ--- ಸರಿ, ಹಾಂಗಾದ್ರ ನಾ ಇನ್ನು ಹೊರಡಲೇನು ?

ರಾಜಾರಾವ್— ಕೊಂಚ ತಾಳಿ..... ನಿಮ್ಮ smartness ಮತ್ತು office experience ಪರವಾಯಿಲ್ಲ, ನಿಮಗಾಗಿ special recommendation ಮಾಡ್ತೇನೆ.....ಅಲ್ಲದೇ ನಿಮ್ಮ circmastances ಬೇರೆ ತರಹವಾಗಿನೆ— ನೀವು ನಾಳೆಯಿಂದಾನೇ ಕೆಲಸಕ್ಕೆ ಸೇರಬಹುದೋ....?

ಸುನೀತಾ— ಹೆs, ಪರವಾಯಿಲ್ಲ.

ರಾಜಾರಾವ್—Good, ಸೇಲ್ಸ್ ಡಿಪಾರ್ಟ್‌ಮೆಂಟಿನ ಕೆಲಸಕ್ಕೆ ರಿಪೋರ್ಟ್ ಮಾಡಿಬಿಡಿ....

ಸುನೀತಾ— yes sir.... Thank you, sir !

* * * *

ರಾಜಾರಾವ್— ಬನ್ನಿ, ಒಳಗೆ ಬನ್ನಿ, Mrs ಸುನೀತಾ..... ಯಾಕೆ ? ಸರಿ,.....

ನಿಮ್ಮ ಅನುಮಾನ ಸರಿಯೆ ? ಬ್ರಹ್ಮಚಾರಿಯ ಮನೆ, ಮನೆಯಲ್ಲಿ ನಾನೊಬ್ಬನೇ ?

ಸುನೀತಾ— (ಅನುಮಾನಿಸುತ್ತ) ಇಲ್ಲ, ಹಾಗೇನಿಲ್ಲ....

ರಾಜಾರಾವ್— ಅಂತೂ ಕೊನೆಗೊಮ್ಮೆ, ನಮ್ಮ ಮನೆವರೆಗೂ ಬಂದಿರಲ್ಲಾ....? ತುಂಬ ಸಂತೋಷ....ಇದಿಷ್ಟೇ ನೋಡಿ, ನನ್ನ ಮನೆ.... ಕೂತುಕೊಳ್ಳಿ....

ಸುನೀತಾ— ನಿಮಗೊಬ್ಬರಿಗೇ ಅಂದ್ರೆ, ಈ ಮನೆ ದೊಡ್ಡ ದಾಯಿತು....ಚೆನ್ನಾಗಿದೆ....ಆದ್ರೂ....ಬ್ರಹ್ಮಚಾರಿಯ ಮನೆ ಹಾಗಿಲ್ಲ.... ಶಾನೇ ಚೊಕ್ಕಟವಾಗಿದೆಯಲ್ಲಾ ?

ರಾಜಾರಾವ್—ಥ್ಯಾಂಕ್ಸ್.... ನಮ್ಮ ಮನೆಯಲ್ಲಿ ಚಾಕರರು ಯಾರೂ ಇಲ್ಲ..... ನಾನೇ ಸರ್ವೆಂಟು.....ನಾನೇ ಬಾಸ್ಸು..... ಅದಕ್ಕೆ ಹೀಗಿದೆ..... ಆಫೀಸಿನಿಂದ ನೇರವಾಗಿ ಇಲ್ಲಿಗೇನೇ ಬಂದಿರಾ.... ?

ಸುನೀತಾ—ಹೌದು....ನಿಮ್ಮ ಫೋನ್ ಬಂದ ಮೇಲೆ, ಕೊಂಚ ವಿಚಾರಮಾಡಿದೆ.... ಕಳೆದ ಒಂದು ವರ್ಷಕಾಲನೆಲ್ಲ, ನಿಮ್ಮಿಂದ ತುಂಬಾ ಉಪಕಾರವಾಗಿದೆ..... ನನ್ನ ಕೆಲಸಕ್ಕೆ ಅರಿಸಿ, ಕೆಲಸ ಕಲಿಸಿಕೊಟ್ಟು, ನಮ್ಮ ಸಲುವಾಗಿ ಮನೆ ಕೂಡ ನೀವೇ ಹುಡುಕಿ, ಈ ಊರಲ್ಲಿ ನನ್ನ ಜೀವನ ಸುಗಮವಾಗಿ ಸಾಗುವ ಹಾಗೆ ಅನೇಕ ರೀತಿಯಲ್ಲಿ ನೀವು ತುಂಬಾ ಸಹಾಯ ಮಾಡಿದ್ದೀರಿ. ಹಲವು ಸಲ ನೀವು ಕರೆದಾಗ ನಾನು ಬಂದಿರಲೇ ಇಲ್ಲ.... ಅದಕ್ಕೆಂದೇ ಇವತ್ತು ಬಂಡೆ.

ರಾಜಾರಾವ್—ನಾನೇನು ಮಹಾ ನಿಮಗೆ ಸಹಾಯಮಾಡಿದ್ದು? ಅದಿರಲಿ.....ನಮ್ಮ ತಂದೆಯವರು ಇವತ್ತು ಮಂಡ್ಯದಿಂದ ಬಂದಿದ್ದರಲ್ಲಾ—ಅವರ ಜೊತೆಗೆ Bus stationಗೆ ಆಫೀಸಿನಿಂದ ಬೇಗ ಹೋಗಬೇಕಾಯಿತು. ಹಾಗೇ ಮನೆಗೆ ಬಂದು ನಿಮಗೆ ಫೋನ್ ಮಾಡಿದೆ..... ....

ಸುನೀತಾ— ನಿಮ್ಮ ತಂದೆಯವರು ತುಂಬ ಒಳ್ಳೆಯವರು.... ಆಫೀಸಿನಲ್ಲಿ ಬಂದಾಗ ಆತ್ಮೀಯತೆಯಿಂದ ಮಾತಾಡಿದರು.....

ರಾಜಾರಾವ್— ಕಾಫಿ ತರಲಾ.... ?

ಸುನೀತಾ— ಬೇಡ, ಬೇಡ.... ನಿಮ್ಮ ಕೈಯಲ್ಲಿ ಕಾಫಿ ಮಾಡಿಸಿ ನಾನು ಕುಡಿಯಬೇಕೆ ?

ರಾಜಾರಾವ್—ರೆಡಿ ಇದೆ.... ನೀವು ಬರೋಕಿಂತಲೂ ಮೊದಲೇ ಫಿಲ್ಟರ್ ಹಾಕಿಟ್ಟಿದ್ದೇನೆ.... ತೆಗೊಳ್ಳಿ.... ತೆಗೊಳ್ಳಿ....

ಸುನೀತಾ— ಅಯ್ಯೋ ನಿಮಗೆ ಸುಮ್ಮನೆ ತೊಂದರೆ....

(ಕಾಫಿ ಕುಡಿಯುವ ಕಪ್ಪು-ಬಸಿಯ ಸಪ್ಪಳ)

ರಾಜಾರಾವ್—ಮಿಸ್ಸೆಸ್ ಸುನೀತಾ, ನೀವು ಕ್ಷಮಿಸಬೇಕು.... ನಿಮಗೆ ಕೆಲವು ಖಾಸಗೀ (personal) ಪ್ರಶ್ನೆ ಕೇಳಬಹುದೇ ?

ಸುನೀತಾ— ಕೇಳಿ..... ಪರವಾಯಿಲ್ಲಾ.... ಆದರೆ.... ನಾನು ಕೊಡುವ ಜವಾಬಿನ ಮೇಲೆ ನೀವು ವಿಶ್ವಾಸ ಇಡ್ತೀರೋ, ಇಲ್ಲೋ ಅಂತು ನನಗೆ ಶಂಕೆ....

ರಾಜಾರಾವ್—ನೀವು ಏನು ಹೇಳಿದ್ರೂ, ಅದರ ಮೇಲೆ ನನ್ನದು ಪೂರ್ಣ ವಿಶ್ವಾಸವಿದೆ.... ಮಿಸೆಸ್ ಸುನೀತಾ.... ನೀವು ಇವತ್ತು ಕನ್ನಡಿಯಲ್ಲಿ ಮುಖ ನೋಡಿಕೊಂಡಿದ್ದೀರಾ.... ?

ಸುನೀತಾ— (ತನ್ನಷ್ಟಕ್ಕೆ).... ಇವರಿಗೆ ನನ್ನ ತಾಳೀ ಮೇಲೇ ಕಣ್ಣು ಅಂತ ಕಾಣತ್ತೆ.... (ಪ್ರಕಾಶ)— ಅಂ.... ಹೌದು.... ಬೆಳಗ್ಗೆ ಆಫೀಸಿಗೆ ಹೊರಡುವಾಗ ನೋಡಿಕೊಂಡಿದ್ದೆ.... ಯಾಕೆ.... ?

ರಾಜಾರಾವ್— ನಿಮಗೆ ಏನೂ ವ್ಯತ್ಯಾಸ ಕಾಣಲಿಲ್ಲವೇ ?

ಸುನೀತಾ—ಓ, ನೀವು ನನ್ನ ಕೊರಳಲ್ಲಿ ತಾಳಿಯ ಬಗ್ಗೆ ಕೇಳ್ತಿರಾ? ....ಓ.... ಅದೇs.... ಇವತ್ತು ಎಣ್ಣೆನೀರು ಹಾಕ್ಕೊಂಡಿದ್ದೆ ಕಣ್ರೀ ? ಅದಕ್ಕೋಸುಗ ತಾಳಿ ಮನೆಯಲ್ಲಿ ಉಳಿದ್ಹೋಗಿದೆ.

ರಾಜಾರಾವ್— ಅಯ್ಯೋ, ಸುಳ್ಳು ಸ್ವಲ್ಪ ನಂಬುವ ಹಾಗೆ ಹೇಳಿ, Mrs. ಸುನೀತಾ ? ನಿಮ್ಮ ಕೂದಲು, ಮುಖ ಇವುಗಳ ಮೇಲೆ ಎಣ್ಣೆ ನೀರು ಲಕ್ಷಣ ಬೇಡವೇ ?

ಸುನೀತಾ— (ತನ್ನಷ್ಟಕ್ಕೆ) ಅಯ್ಯೋ ಏನಿದು.....? ನನ್ನ ಯಾಕೋ ಬಹಳ ಸೂಕ್ಷ್ಮವಾಗಿ ಇವರು ನೋಡುವ ಹಾಗೆ ಕಾಣ್ತದೆ. ನನ್ನ ಗುಟ್ಟು ಏನಾದರೂ ಗೊತ್ತಾಗಿದೆಯೋ ಏನೋ ? (ಪ್ರಕಾಶವಾಗಿ) ಇಲ್ಲಾರೀ.... ಅಂದ್ರೆ....ಇವತ್ತು ಆಫೀಸ್ ಶಾಸ್ತ್ರಕ್ಕೇಂತ ಕೊಂಚಾನೇ ಹಾಕ್ಕೊಂಡಿದ್ದು.... ಅದಕ್ಕೇ ಹಾಗೆ ಕಂಡಿರಬೇಕು....

ರಾಜಾರಾವ್— ಓ.... ಹಾಗೋ....ಸರಿ.... ಬಿಡಿ.... ನೋಡಿ ಮಿಸೆಸ್! ಸುನೀತಾ.... ನೀವು ಹಿಂದಕ್ಕೆ ಹೇಳ್ತಾ ಇದ್ರಿ.... ಕಲಕತ್ತೆಯಲ್ಲಿ ನಿಮ್ಮ ಯಜಮಾನ್ರು M. Sc. ಗಾಗಿ ರಿಸರ್ಚ್ ಮಾಡ್ತಾ ಇದಾರೆ.... ಆಮೇಲೆ ಅವರಿಗೆ ಕೆಲಸವೂ ಆಗಿದೆ..... ಆದರೆ ಒಂದು ಕಾಸೂ ನಿಮಗೆ ಕಳಿಸೋಲ್ಲಾ ಅಂತ.... ಅಲ್ಲದೆ ಅವರಿಗೂ ನಿಮಗೂ ಏನೂ ಸರಿಹೋಗಲ್ಲಾ ಅಂತಾ ಹೇಳ್ತೀರಿ..... ನೀವು, ನಿಮ್ಮ ಯಜಮಾನ್ರು ಸುಖವಾಗಿ ಒಟ್ಟಿಗೆ ಇರಬೇಕು ಅಂತಾ, ನನ್ನ ಸಿನ್ಸಿಯರ್ ಆಶೆಯಿದೆ. ಕಲಕತ್ತೆಯಲ್ಲಿ ನನ್ನ ಕಂಪನೀನೇ ದೊಡ್ಡ ಆಫೀಸಿದೆ.... ಅಲ್ಲಿಯ ಮ್ಯಾನೇಜರ ನನಗೆ ಪರಮಮಿತ್ರರು.... ನಾನು ಅವರಿಗೆ ಬಿನ್ನವಿಸಿಕೊಂಡರೆ, ನಿಮ್ಮ ಮನೆಯವರನ್ನು ಕಂಡು, ತಿಳಿಹೇಳಿ ನೋಡ್ತಾರೆ. ಅವರು ಗಣ್ಯವ್ಯಕ್ತಿಗಳು ಅಲ್ಲಿ.... ಅವೂ ಅಲ್ಲದೇ ಮುಂದಿನ ತಿಂಗಳು ಸೇಲ್ಸ್ ಕಾನ್‌ಫರನ್ಸ್ ಗೋಸುಗ ನಾನು ಹೋದಾಗ ಕೂಡ ಪ್ರಯತ್ನಿಸಬಹುದು..... ನೀವು ನಿಮ್ಮ ಯಜಮಾನರ ವಿಳಾಸ ಕೊಟ್ರೆ, ನಿಮ್ಮ ಅಭ್ಯಂತರವಿಲ್ಲದೆ ಇದ್ರೆ, ನಾನು ಕಾಗದ ಬರೆಯಬೇಕೆಂದುಕೊಂಡಿದ್ದೇನೆ.....

ಸುನೀತಾ— ಮಿ. ರಾಜಾರಾವ್, ನಾನು ಸುಖವಾಗಿರಬೇಕು ಅಂತ, ನೀವು ಎಷ್ಟೆಲ್ಲಾ ವಿಚಾರ ಮಾಡಿದ್ದು ಕೇಳಿ, ನನಗೆ ತುಂಬಾ ಸಂತೋಷ. ಆದರೆ ನಾನು ಅಭಾಗಿನಿ..... ನನ್ನ ಅವರು ಮದುವೆಯಾದದ್ದು ಬಲವಂತದಿಂದ ಅಂತೆ.... ನಾನು ಅವರಿಗೆ ತಕ್ಕವಳಲ್ಲವಂತೆ .... ನನಗಿಂತಲೂ ಎಷ್ಟೋ ಪಾಲು ಲಕ್ಷಣವಾಗಿರುವ ಹುಡುಗಿಯರು ಬೇಕಷ್ಟು ಸಿಕ್ಕಬಹುದು, ಹಾಗೆ ಅಂತ ಹೇಳ್ತಾರೆ....

ರಾಜಾರಾವ್— ಏನ್ರೀ ? ನಿಮ್ಮಲ್ಲಿ ಏನು ಕಡಿಮೆಯಂತೆ? ನೋಡುವವರ ದೃಷ್ಟಿಯಲ್ಲೇ ದೋಷವಿರಬೇಕು....

ಸುನೀತಾ— (ನಿರಾಶೆಯಿಂದ) ನಾನೇನೂ ಲಕ್ಷಣವಾಗಿಲ್ಲ.... ನಾನು ಕುರೂಪಿ ಹಾಗಾದ್ರೆ.... ಹೇಗೂ ಸಂಪಾದಿಸ್ತಾ ಇದೇನಿ..... ಹೀಗೇ ಕಾಲ ಕಳೆದುಹೋಗುತ್ತೆ....

ರಾಜಾರಾವ್— ಅಯ್ಯೋ, ಹಾಗೆನ್ನಬೇಡಿ.... ದೇವರು ಕಣ್ಣು ಬಿಡಬಹುದು..... ನಿಮ್ಮಷ್ಟು ಸ್ಫುರದ್ರೂಪಿ ಇನ್ನಾರಂತೆ.... ?

ಸುನೀತಾ— ಅದಲ್ಲದೇ ಇನ್ನೂ ಕೇಳ್ರಿ.... ನನಗಿರುವವಳು ಸವ್ಯ ನನ್ನ ತಾಯಿ ಒಬ್ಬರು ಮಾತ್ರ.... ಅವರೂ ನಮ್ಮ ಜೊತೆಗೇನೇ ಇರಬೇಕು ಅಂತ ಬೇಡಿಕೊಂಡೆ.... ಅದಕ್ಕಂತೂ ಅವರು ತೀರ ವಿರೋಧಿಸಿದರು.... ಆಯುಷ್ಯವೆಲ್ಲ ನಿನ್ನ ತಾಯಿನ್ನ ಸಾಕ್ತೇನಿ ಅಂತ ನಾನು ಮದುವೆಯಲ್ಲಿ ಹರಕೆ ಹೊರಲಿಲ್ಲ.... ಅಂದ್ರು.... ನನ್ನ ತಾಯಿ ಅಂದ್ರೆ ಅವರಿಗೆ ಅತ್ತೆ ಅಲ್ವೆ ? ಇಂಥ ನಮ್ಮ ಯಜಮಾನ್ರ ಜೊತೆಗೆ ನನಗೆ ಸಂಸಾರವೇ ಬೇಡ—ಅಂದುಕೊಂಡಿದ್ದೇನೆ.

ರಾಜಾರಾವ್— ನಿಜ, ನಿಜ, ನಿಮ್ಮ ಪರಿಸ್ಥಿತಿ, ನಿಮ್ಮ ಮನಸ್ಸು ಅವರಿಗೆ ಏನೂ ಲೆಕ್ಕಕ್ಕೇ ಇಲ್ಲಾಂತ ಕಾಣತ್ತೆ. ಎನೋ ಮನುಷ್ಯನ ಸ್ವಭಾವ.... ಮುಂದೆ ಬದಲಾಯಿಸಬಹುದು.... ಇದೇ ರೀತಿ ಉಳಿದರೆ ಮಾತ್ರ, ಯಾರಿಗೂ ಸುಖವಿಲ್ಲ....

ಸುನೀತಾ— ಇಂಥ ಗಂಡ ಏತಕ್ಕೊಸುಗರೀ ಮಿ. ರಾಜಾರಾವ್ .... ? ಹೇಳಿ ನೀವೇ ! ಕೇವಲ ತಾಳಿಗೋಸುಗವೇ.....? ಮನಸ್ಸಿಗೆ ತುಂಬಾ ಜುಗುಪ್ಸೆಯಾಗಿ ಹೋಗಿ ಏನೆಲ್ಲಾ ವಿಚಾರ ಬರ್ತಾ ಇವೆ. ಇನ್ನೊಂದು ವರ್ಷ ಕಳೆದ ಮೇಲೆ ಡೈವೋರ್ಸ್ ಕೂಡ ತೆಗೊಂಡುಬಿಟ್ಟು ರಾಯಿತೇನೋ ಅಂತ.....

ರಾಜಾರಾವ್— ಅಂ, ಅಂತೂ, ಅಷ್ಟು ದೀರ್ಘಕ್ಕೂ ಆಲೋಚಿಸಿದ್ದೀರಾ ? ತುಂಬಾ ಸಾಹಸೀ ವಿಚಾರ ಕಣ್ರೀ..... ? ನಿಜಕ್ಕೂ ಡೈವೋರ್ಸ್ ತೆಗೆದುಕೊಳ್ತೀರಾ ?

ಸುನೀತಾ— (ನಿರ್ಧಾರದಿಂದ) ಯಾಕೆ ? ನಿಮಗೆ ಅನುಮಾನವೇ ? ಇಂದಿಲ್ಲ ನಾಳೆಯಾದರೂ ಅವರ ಮನಸ್ಸು ಬದಲಾಯಿಸೀತು ಅನ್ನೋ ಆಶೆಯೇ ಇಲ್ಲದಾಗ, ನನಗೆ ಇನ್ನು ದೇರೆ ಮಾರ್ಗ ಏನು ಹೇಳಿ....?

ರಾಜಾರಾವ್— ಅದೂ ಸರಿಯೇ ! ಒಪ್ಪಿದೆ.... ಆದ್ರೂ ನೀವು ಈ ತರಹ ದುಡೀತಾನೇ ಒಂಟಿಯಾಗಿ ಬಾಳಿ ಏನು ಸಾರ್ಥಕ.... ? ಈ ವಯಸ್ಸು, ಈ ಉತ್ಸಾಹ, ನೀವು ಬೇಕೆಂದಾಗ ಮುಂದೆ ಸಿಕ್ಕಬಹುದೇ? ಅಲ್ಲದೆ, ನಿಮ್ಮನ್ನು ಮನಸಾರೆ ಒಪ್ಪಿ ನಿಮ್ಮ ತಾಯಿಯವರ ಬಗ್ಗೆ ಹಾಕಿದ, ಆ ಚಿಕ್ಕಕಂಠಾರಿಗೂ ಕೂಡ ಒಪ್ಪಿ, ಮದ್ವೆಮಾಡಿಕೊಳ್ಳುವವರು ಖಂಡಿತ ಸಿಕ್ಕಬಹುದು. ಡ್ವೆವೋರ್ಸ್ ನಂತರವಾದರೂ ನೀವು ಮತ್ತೆ ಮದ್ವೆಮಾಡಿಕೊಂಡು ಸುಖವಾಗಿರಬೇಕೂಂತ ನನ್ನ ಇಚ್ಛೆ.....
.....

ಸುನೀತಾ— ಅಂಥವರು ಯಾರಾದರೂ ಸಿಕ್ಕಬಹುದು ಅಂತ ನನಗೆ ಅನಿಸೋದಿಲ್ಲಾರೀ.... ಒಂದು ಸಲ ಕೈಸುಟ್ಟುಕೊಂಡಿದೇನಿ.... ಮಸಲ ಯಾರಾದರೂ ಒಬ್ಬರು ಸಿಕ್ಕಬಹುದು ಅನ್ನಿ..... ಅವರನ್ನು ಎಷ್ಟರಮಟ್ಟಿಗೆ ನಂಬಬೇಕೋ ಅದೂ ಕಷ್ಟನ್ರೀ.... ಅಲ್ಲವೇ ?

ರಾಜಾರಾವ್— (ಅನುಮಾನಿಸುತ್ತ) ನೀವು ದಯವಿಟ್ಟು ವಿಪರೀತ ಭಾವಿಸಬೇಡಿ... ಅಂಥ ಸಂದರ್ಭವೇ ಬಂದಲ್ಲಿ, ನನ್ನಲ್ಲಿ ನಿಮಗೆ ವಿಶ್ವಾಸವಿದ್ದರೆ, ಇನ್ನು ಒಂದು ವರ್ಷ ನಿಮಗಾಗಿ ಕಾಯ್ತು.....ನಾನೇ ಸಿದ್ಧವಾಗಿರ್ತೀನಿ.....

ಸುನೀತಾ— (ಆಶ್ಚರ್ಯದಿಂದ) ಏಂ.... ಮಿ. ರಾಜಾರಾವ್.... ನಿಜವಾಗಿಯೂ.... !!!

ರಾಜಾರಾವ್—ಮಿಸೆಸ್ ಸುನೀತಾ....ಖಂಡಿತವಾಗಿಯೂ....!! ಮಿಸ್ಸೆಸ್ ಸುನೀತಾ....

ಸುನೀತಾ— (ಆನಂದದಿಂದ) ಮಿಸೆಸ್ ಅಲ್ಲ, ಮಿಸ್ ಅನ್ನಿ.

ರಾಜಾರಾವ್— ಮಿಸ್..... ?? ಅದು ಹೇಗೆ ?? ಮತ್ತೆ ಆ ತಾಳಿ.....? ??

ಸುನೀತಾ— ಆ ತಾಳಿ ನಕಲೀ ಕಣ್ರೀ.... !! ನಂಬಿದರೆ ನಂಬಿ ಬಿಟ್ಟರೆ ಬಿಡಿ....!! ರಾಜಾರಾವ್....

ರಾಜಾರಾವ್—ಸುನೀತಾ !! ನೀವು ತುಂಬಾ ಘಾಟಿ ಕಣ್ರೀ !! I am really very very happy !!!

ನಿಜಾರಿಸಿರಿ

ಅಂದವಾದ ಮುದ್ರಣ ಕೆಲಸಗಳಿಗಾಗಿ
ಲಲಿತ ಮುದ್ರಣಾಲಯ, ಧಾರವಾಡ

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ಸಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ,
ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು : (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ನೀಡು ಬಿಟ್ಟು)

ಯುನೈಟೆಡ್ ಕನ್ಸರ್ನ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಟೀಪ್ಪುಸುಲ್ತಾನ್ ವಸ್ತುಸಂಗ್ರಹಾಲಯ

(ಪರಿಚಯಾತ್ಮಕ ಲೇಖನ)

ಭಾರತ ಸರಕಾರದ ಪ್ರಕಾಶನ ಶಾಖೆಯವರು

ಭೂತಕಾಲದ ರಾಜಕೀಯ ಸಾಮಾಜಿಕ ಜೀವನದ ಪ್ರತ್ಯಕ್ಷಾಪ್ರತ್ಯಕ್ಷ ಪರಿಚಯ ಮಾಡಿಕೊಡ ಬಲ್ಲ ವಸ್ತುಸಂಗ್ರಹಾಲಯಗಳ ಅಗತ್ಯ, ಇಂದಿನ ನಾಗರಿಕರಿಗೆ ತುಂಬ ಇದೆ. ಟಿಪ್ಪುವಿನಂತಹ ಕರ್ತೃತ್ವಶಾಲಿ ವೀರನ ಜೀವನವು ದುರಂತವಾಗ ಬೇಕಾದರೆ, ಆತನ ತಿಳಿವಳಿಕೆ-ಕಾರ್ಯಪದ್ಧತಿಗಳಲ್ಲಿ ಕುಂದು-ಕೊರತೆಗಳೇನಾದರೂ ಇರಬೇಕಲ್ಲವೆ ?

ಈ ವಸ್ತುಸಂಗ್ರಹಾಲಯವನ್ನು ಮೈಸೂರು ರಾಜ್ಯದ ಶ್ರೀರಂಗಪಟ್ಟಣದಲ್ಲಿರುವ 'ದರಿಯಾ ದೌಲತ್‌ಬಾಗ್'ನಲ್ಲಿ, ಟಿಪ್ಪುವಿನ ಬೇಸಗೆಯ ಅರಮನೆಯಲ್ಲಿ ತೆರೆಯಲಾಗಿದೆ. ಟಿಪ್ಪುವಿನ ಜೀವನವನ್ನೂ ರಾಜ್ಯಾಡಳಿತವನ್ನೂ ಆತನ ಸಮಕಾಲೀನ ಅವಶೇಷಗಳಿಂದ ತೋರಿಸುವುದೇ ಈ ವಸ್ತುಸಂಗ್ರಹಾಲಯದ ಉದ್ದೇಶವಾಗಿರುವುದು. ಭಾರತ ಸರ್ಕಾರದ ಪ್ರಾಚ್ಯವಸ್ತು ಸಂಶೋಧನ ಶಾಖೆಯವರು ವಿಶೇಷವಾಗಿ ನಿರ್ವಹಿಸಿರುವ ಅನೇಕ ವಸ್ತುಸಂಗ್ರಹಾಲಯಗಳಲ್ಲಿ ಇದೂ ಒಂದು. ಈ ಪ್ರತಿಯೊಂದು ವಸ್ತುಸಂಗ್ರಹಾಲಯವೂ ಇತಿಹಾಸದ— ಒಂದೊಂದು ಕಾಲಕ್ಕೆ ಸಂಬಂಧಪಡುವ—ವಸ್ತುಗಳನ್ನು ಸಂಗ್ರಹಿಸಿದೆ.

ಶ್ರೀರಂಗಪಟ್ಟಣವು ಪ್ರಾಮುಖ್ಯತೆಗೆ ಬಂದುದು ವಿಜಯನಗರದ ಕಾಲದಲ್ಲಿ. ಶ್ರೀರಂಗಪಟ್ಟಣದ ಒಡೆಯರ್ ರಾಜರಿಂದ ಸಿಂಹಾಸನವನ್ನು ೧೭೬೧ರಲ್ಲಿ ಹೈದರಾಲಿಖಾನನು ವಶಕ್ಕೆ ತೆಗೆದುಕೊಂಡಮೇಲೆ, ಅದು ರಾಜಕೀಯ ಪ್ರಾಮುಖ್ಯತೆ ಪಡೆದ ಒಂದು ಸ್ಥಾನವಾಗಿತ್ತು. ಹೈದರಾಲಿಯು ತನ್ನ ೨೦ ವರ್ಷಗಳ ಆಡಳಿತದಲ್ಲಿ ತನ್ನ ರಾಜ್ಯವನ್ನು ದಕ್ಷಿಣ ಭಾರತದಲ್ಲಿ ತುಂಗಭದ್ರಾ ನದಿಯ ವರೆಗೆ ಬಹುಭಾಗ ವಿಸ್ತರಿಸಿದನು. ಸಮಕಾಲೀನ ಪ್ರಬಲ ಶಕ್ತಿಗಳಿಸಿದ ಬ್ರಿಟಿಶರು ಮತ್ತು ಸ್ಥಳೀಯ ಶಕ್ತಿಗಳು, ತನ್ನ ವಿಸ್ತೃತವಾದ ಹಾಗೂ ಅಗಾಧಿನ ಜೈತ್ರ-ಯಾತ್ರೆಗಳಿಂದ, ತನ್ನ ಶಕ್ತಿಸಾಮರ್ಥ್ಯವನ್ನು ಅರಿಯುವಂತೆ ಮಾಡಿದ್ದ. ಆತನ ಮಗ ಟಿಪ್ಪು, ಆತನಷ್ಟೇ ಸಮರ್ಥ. ಆತನು ೧೭೮೨ರಲ್ಲಿ ಸಿಂಹಾಸನಕ್ಕೆ ಬಂದ, ಇಂಗ್ಲಿಷರನ್ನು ಭಾರತದಿಂದ ಓಡಿಸಲು ನಿರ್ಧರಿಸಿದ. ಟಿಪ್ಪುಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣವು (೧೭೮೨-೧೭೯೯) ತನ್ನ ವೈಭವದ ತುತ್ತ ತುದಿಯನ್ನು ಮುಟ್ಟಿತು,

ಈ ವಸ್ತುಸಂಗ್ರಹಾಲಯದ ಮೊದಲನೆಯ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆಯೇ ಪ್ರೇಕ್ಷಕರು, ಟಿಪ್ಪುವಿನ ಪ್ರತಿಕೃತಿಯೊಂದನ್ನು ಕಾಣಬಹುದು. ಅದಕ್ಕೆ ಟಿಪ್ಪು ತೊಡುತ್ತಿದ್ದ ಉಡುಪನ್ನೇ ತೊಡಿಸಲಾಗಿದೆ. ಇಲ್ಲಿ ಪ್ರದರ್ಶಿಸಲಾಗಿರುವ 'ಪಾಯಿಜಾಮ' ಮತ್ತು ಕೋಟುಗಳೆರಡೂ ಅತ್ಯುತ್ತಮ ರೇಷಿಮೆಯವಾಗಿದ್ದು ಅವುಗಳ ಮೇಲೆ ಚಿನ್ನದ ಸಂಗೆಯಲ್ಲಿ ಹೂಗಳನ್ನು ಬಿಲಿಸಲಾಗಿದೆ.

ಎರಡನೆಯ ಕೋಣೆಯಲ್ಲಿ ಸಮಕಾಲೀನ ಯುರೋಪಿಯನ್ ಕಲಾವಿದರಿಂದ ತೆಗೆಸಿದ ಎರಡು ಭಾವಚಿತ್ರಗಳನ್ನು ಇಡಲಾಗಿದೆ ಅವುಗಳಲ್ಲಿ ಒಂದು ಜಾಪ್ಪೆ ಎಂಬವನು ಬಿಡಿಸಿದ ಚಿತ್ರ— ಟಿಪ್ಪು ಕುಮಾರನಾಗಿದ್ದಾಗಿನದು. ಇನ್ನೊಂದು ೧೭೯೨ರ ಒಪ್ಪಂದದ ಪ್ರಕಾರ, ಟಿಪ್ಪುವಿನ ಮಕ್ಕಳಿಬ್ಬರು, ಬ್ರಿಟಿಶ್ ಅತಿಥಿಗಳಾಗಿ ನಿಗಮನವಾಗುತ್ತಿರುವುದನ್ನು ಚಿತ್ರಿಸಿದೆ. ಅದರ ಕಲಾವಿದನು. ಆರ್. ಹೋಂ. ಆತನು ಟಿಪ್ಪುಸುಲ್ತಾನನ ವಿರುದ್ಧ ನಡೆದ ಯುದ್ಧಗಳಲ್ಲಿ ಇಂಗ್ಲಿಷ್ ದಳಗಳೊಂದಿಗಿದ್ದನು. ೧೭೯೯ರ ಮೇ ೪ರಂದು ಶ್ರೀರಂಗಪಟ್ಟಣದ ಪತನವಾದುದನ್ನು ಕೆಲ್-ಸ್ಕೋಟ್ಟರ್ ಎಂಬ ಕಲಾವಿದನು ಚಿತ್ರಿಸಿರುವನು. ಅದನ್ನು ಮೂರನೆಯ ಕೋಣೆಯಲ್ಲಿ ಪ್ರದರ್ಶಿಸಲಾಗಿದೆ. ಈ ಚಿತ್ರವು ಅಂದಿನ ದಾರುಣ ಸನ್ನಿವೇಶವನ್ನು ಚಿತ್ರಿಸುತ್ತಿದೆ.

ಟಿಪ್ಪುವಿನ ಮಕ್ಕಳು, ಅಧಿಕಾರಿಗಳು ಮತ್ತು ಇತರ ಸಮಕಾಲೀನ ಚಿತ್ರಗಳನ್ನು ಸೀಸದ ಕಡ್ಡಿಯಿಂದ ಬಿಡಿಸಿರುವ ಚಿತ್ರಗಳು ಈ ವಸ್ತುಸಂಗ್ರಹಾಲಯದಲ್ಲಿರುವುವು. ಇವನ್ನು ಥಾಮಸ್ ಹಿಕೆ

ಎಂಬಾತನು ಚಿತ್ರಿಸಿರುವನು. ಈ ಚಿತ್ರಗಳನ್ನು ಮಧ್ಯದಲ್ಲಿರುವ ಅಂಗಣವಲ್ಲದೆಯೂ ಇತರ ಎರಡು ಕೋಣೆಗಳಲ್ಲಿಯೂ ಪ್ರದರ್ಶಿಸಲಾಗಿದೆ.

ಟಿಪ್ಪೂ ಹನ್ನೆರಡು ಟಂಕಸಾಲೆಗಳಿಂದ ಹೊರಡಿಸಿದ್ದ ವಿವಿಧ ಮೌಲ್ಯದ ತಾಮ್ರದ ನಾಣ್ಯಗಳನ್ನೂ, ಬ್ರಿಟಿಷರು ಟಿಪ್ಪೂಸುಲ್ತಾನನ ಮೇಲೆ ತಮ್ಮ ವಿಜಯವನ್ನು ಸೂಚಿಸುವಂತಹ ಅನೇಕ ಪದಕಗಳನ್ನೂ ಮಧ್ಯದ ಅಂಗಣದಲ್ಲಿ ಪ್ರದರ್ಶನಕ್ಕಿಡಲಾಗಿದೆ. ಈ ಪದಕಗಳಲ್ಲಿ ಕೆಲವು, ಒಂದು ಮುಖದಲ್ಲಿ ೧೭೯೯ರ ಮೇ ೪ರಂದು ಇದ್ದ ಶ್ರೀರಂಗಪಟ್ಟಣವನ್ನೂ ಟಿಪ್ಪೂವಿನ ರಾಜಧಾನಿಯ ಹೊರವಲಯಗಳಲ್ಲಿ ಇಂಗ್ಲೀಷರ ಸೇನೆಗಳು ಧಾಳಿ ಇಡುತ್ತಿದ್ದುದನ್ನೂ ತೋರಿಸುತ್ತವೆ. ಮತ್ತೊಂದು ಮುಖದಲ್ಲಿ ಬ್ರಿಟಿಷ್ ಸಿಂಹವು "ಟಿಪ್ಪೂ ಹುಲಿ"ಯನ್ನು ಗೆದ್ದಿರುವುದನ್ನು ತೋರಿಸುತ್ತವೆ. ಟಿಪ್ಪೂವಿನ ಸ್ವಂತಕ್ಕೆ ಸೇರಿದ ಚಿನ್ನದ ಕಾಲಮಾಪಕ ಯಂತ್ರವನ್ನೂ ಇಲ್ಲಿ ಪ್ರದರ್ಶನಕ್ಕಿಡಲಾಗಿದೆ.

ಈ ವಸ್ತುಸಂಗ್ರಹಾಲಯದಲ್ಲಿ, ಟಿಪ್ಪೂವಿನ ರಾಜ್ಯದಲ್ಲಿಯ ಇತರ ಪ್ರಾಮುಖ್ಯ ಸ್ಥಳಗಳನ್ನೂ ಕೋಟೆ-ಕೊತ್ತಲಗಳನ್ನೂ ತೋರಿಸುವ ವರ್ಣಚಿತ್ರಗಳಿರುವುವು. ಅವುಗಳನ್ನು ಕ್ಯಾಪ್ಟನ್ ಅಲೆನ್, ಓರ್ಮ್ ಮತ್ತಿತರರು ಚಿತ್ರಿಸಿರುವರು. ಈ ಚಿತ್ರಗಳು ಟಿಪ್ಪೂವಿನ ನೆಲೆಗಳನ್ನೂ ಆಗಿನ ಕಾಲದ ಮಿಲಿಟರಿ ತಿಲ್ಪವನ್ನೂ ತಿಳಿಸುತ್ತವೆ.

ಟಿಪ್ಪೂಸುಲ್ತಾನ್ (ಫತ್ತೇಮುಹಮದ್)

ಟಿಪ್ಪೂಸುಲ್ತಾನನು ತನ್ನ ಕಾಲದ ಭಾರತೀಯ ರಾಜರುಗಳಿಂತ ಮೇಲ್ಮಟ್ಟದಲ್ಲಿ ನಿಲ್ಲುತ್ತಾನೆ. ಅದಕ್ಕೆ ಕಾರಣ ಆತನು, ಉತ್ತಮ ಸೈನಿಕ ಹಾಗೂ ಮಿಲಿಟರಿ ಮುಖಂಡನಾಗಿ ಅಸಾಧಾರಣ ಸಾಮರ್ಥ್ಯ ತೋರಿಸಿದುದಷ್ಟೇ ಅಲ್ಲ; ಅಸಾಧಾರಣ ದೇಶಪ್ರೇಮವನ್ನೂ, ವಿಶಾಲ ದೃಷ್ಟಿಯನ್ನೂ ತನ್ನ ಪ್ರಜೆಗಳ ಯೋಗಕ್ಷೇಮವನ್ನೂ ಸದಾ ಇಟ್ಟುಕೊಂಡಿದ್ದುದು. ಬ್ರಿಟಿಷ್ ಸ್ವರ ಆಕ್ರಮಣದ ಸಂಶ್ಲಿಷ್ಟತೆಯನ್ನು ಅರ್ಥಮಾಡಿಕೊಂಡಿದ್ದನೆಂದರೆ ಇವನೊಬ್ಬನೇ ಇತರರು, ಪರಸ್ಪರ ವೈಷಮ್ಯಗಳಲ್ಲಿ ತಮ್ಮ ಶಕ್ತಿ-ಪೌರುಷಗಳನ್ನು ಅಪವ್ಯಯಗೊಳಿಸಿದರು. ಟಿಪ್ಪೂವಾದರೋ ವಿದೇಶೀ ಆಕ್ರಮಣದಿಂದ ದೇಶವನ್ನು ಪೂರ್ತಿ ಪಾರುಮಾಡುವುದಕ್ಕೆ ವಿಶೇಷ ಗಮನವಿತ್ತಿದ್ದ. ಆ ಉದ್ದೇಶ-ಸಾಧನೆಯಲ್ಲಿ ಇವನು ಪ್ರಾಣತ್ಯಾಗ ಮಾಡಿದ.

ಇಂಗ್ಲೀಷರೊಡನೆ ಪ್ರಥಮತಃ ಹೋರಾಟವನ್ನು ಆರಂಭಿಸಿದಾಗ ಟಿಪ್ಪೂ ಕೇವಲ ೨೬ ವರ್ಷ ವಯಸ್ಸಿನವನಾಗಿದ್ದ. ಆತನು ಮೈಸೂರು, ನೈಜಾಂ, ಮರಾಠಾ ಮತ್ತು ಫ್ರೆಂಚರ ಸಂಯುಕ್ತ ಸೇನೆಯನ್ನು ಎದುರಿಸಬೇಕಾಯಿತು. ಅಲ್ಲಿಂದೀಚೆಗೆ ಆತನು ಇಂಗ್ಲೀಷರನ್ನು ಹಿಮ್ಮೆಟ್ಟಿಸುವ ಏಕಮಾತ್ರ ಉದ್ದೇಶವನ್ನು ಇಟ್ಟುಕೊಂಡಿದ್ದ. ಆತನ ತಂದೆಯ ಅಕಾಲ ಮೃತ್ಯು (ಡಿಸೆಂಬರ್ ೧೭೮೨) ವಿನಿಂದ ಅವನು ದುರ್ಬಲಗೊಂಡನು. ಆದಾಗ್ಯೂ ಆತನು ತನ್ನ ಶೌರ್ಯದಿಂದ ಕುಶಲತೆಯಿಂದ ತಾನೊಬ್ಬನೇ ಇಂಗ್ಲೀಷರೊಂದಿಗೆ ಹೋರಾಡುತ್ತಲೇ ಇದ್ದ. ೧೭೮೪ರಲ್ಲಿ ಅವನು ಇಂಗ್ಲೀಷರನ್ನು ಸೋಲಿಸಿ ಅಪಮಾನಕಾರಕ ಷರತ್ತಿನ ಮೇಲೆ ಸಂಧಿಮಾಡಿಕೊಳ್ಳುವ ಅವಕಾಶ ವಿತ್ತಾಗಲೂ ಅವನ ಉದ್ದೇಶವು ಇಂಗ್ಲೀಷರನ್ನು ದೇಶದಿಂದ ಹೊರಗೆ ಓಡಿಸುವುದೇ ಆಗಿತ್ತು.

ತನ್ನ ಸಮಕಾಲೀನ ರಾಜರನ್ನು ಒಂದುಗೂಡಿಸಿ, ವಿದೇಶೀಯ ಆಕ್ರಮಣ ಶೀಲತೆಯಿಂದ ಹೋರಾಟ ಹೂಡುವುದರಲ್ಲಿ ಫಲದೊರೆಯಲಿಲ್ಲ. ಅವನ ಎಚ್ಚರಿಕೆ ಮಾತುಗಳು ಯಾರಿಗೂ ಕೇಳಿಸಲಿಲ್ಲ. ಕೊನೆಯಲ್ಲಿ ಅವನ ವಿರೋಧಿ ಶತ್ರುಗಳಾದರು. ಮರಾಠಾ ಸೇನೆಯು ೧೭೯೫ರಲ್ಲಿ ಅವನ ಮೇಲೆ ಧಾಳಿಯಿಟ್ಟಿತು. ಅನಂತರ ನಾಲ್ಕು ವರ್ಷಗಳಲ್ಲಿ ಹೈದ್ರಿ ಸಿಂಧಿಯಾ, ನೈಜಾಂ ಇವರೆಲ್ಲಾ ಇಂಗ್ಲೀಷರೊಡನೆ ಸೇರಿಯುದ್ಧ ಮಾಡಿದರು. ಇದರಲ್ಲಿ ಟಿಪ್ಪೂ ತನ್ನ ಅರ್ಧರಾಜ್ಯವನ್ನು ಕಳೆದುಕೊಂಡ ಇದಾದನಂತರ ಅವನಿಗೆ ಆರು ವರ್ಷಗಳ ಸಮಯ ಸಿಕ್ಕಿತು ಪುನಃ ಲಾರ್ಡ್ ವೆಲ್ಲಸ್ಲಿಯು ಅವನಿಗೆ ಸಹಾಯಕ ಸಂಧಿಯನ್ನು ಸ್ವೀಕರಿಸುವಂತೆ ಒತ್ತಾಯ ಮಾಡಿದ. ಈ ಸಂಧಿ ಹಾಗೂ ಅದರ ಫಲಸ್ವರೂಪವಾಗಿ ಪರಾಧೀನತೆಯನ್ನು ಸ್ವೀಕರಿಸುವ ಬದಲು ಇಂಗ್ಲೀಷರೊಡನೆ ಯುದ್ಧವನ್ನೇ ಮಾಡುತ್ತ ಸತ್ತ.

ಸುಧಾರಕ

ಟಿಪ್ಪೂ ಸೇನಾ ಯೋಧನಷ್ಟೇ ಅಲ್ಲ; ಸಮಾಜಸುಧಾರಕನೂ ಶಾಂತಿಪ್ರಿಯನೂ ಆಗಿದ್ದ. ತನ್ನ ರಾಜ್ಯಾಡಳಿತದಲ್ಲಿ ಬೆಳಗಿನಿಂದ ಸಂಜೆಯ ವರೆಗೂ ಅತನು ಸಾರ್ವಜನಿಕ ವ್ಯವಹಾರಗಳಲ್ಲಿ ತಲ್ಲೀನನಾಗಿರುತ್ತಿದ್ದನೆಂದು ಆತನ ಸಮಕಾಲೀನರು ಬರೆದಿರುವರು. ಆತನು ಅನೇಕ ಸಮಾಜಸುಧಾರಣೆಗಳನ್ನು ಆಚರಣೆಗೆ ತಂದನು. ಅವುಗಳಲ್ಲಿ ವಿಜ್ಞಾನರೀತಿಯ ಕ್ಯಾಲೆಂಡರ್ ಮತ್ತು ಹೊಸ ನಾಣ್ಯಗಳನ್ನು ಉಲ್ಲೇಖಿಸಬಹುದು. ಆತನು ಮೈಸೂರಿನಲ್ಲಿ ಉತ್ತಮ ರಸ್ತೆಗಳನ್ನು ನಿರ್ಮಿಸಿದ; ನೀರಾವರಿ ಕಾಮಗಾರಿ, ಬೇಸಾಯ ಸುಧಾರಣೆಗಳನ್ನು ಕೈಗೊಂಡ; ದೇಶದ ಕಲೆಮತ್ತು ಕುಶಲ ಕಲೆಗಳನ್ನು ಆಧುನಿಕಗೊಳಿಸಿದ.

ಆತನಿಗೆ ಪ್ರತಃ ಸಾಹಿತ್ಯ ಮತ್ತು ಲಲಿತಕಲೆಗಳಲ್ಲಿ ಆಸಕ್ತಿಯಿತ್ತು. ತನ್ನಲವಾಗಿ ಕಲೆ ಮತ್ತು ಸಾಹಿತ್ಯಕ್ಕೆ ಉತ್ತೇಜನವಿತ್ತ. ಜೇಮ್ಸ್ ಮಿಲ್ ಎಂಬ ಇತಿಹಾಸಜ್ಞನು ಆತನ ಆಚಾರವಾಗಿ ಬರೆಯುತ್ತಾ ಪೂರ್ವದ ರಾಜನಿಗೆ ಹೋಲಿಸಿದಲ್ಲಿ ಆತನು ಅತ್ಯುತ್ತಮ ಆಡಳಿತಗಾರನೆಂದು ಹೆಸರು ತಾಳಿರುವನೆಂದು ಹೇಳಿರುವನು.

ಮಾಹಿನದಿಯ ಮಡಿಲು

ಶ್ರೀ. ಸುಂದರ ಸಾಡಳಗರ್ಗ, ವಲ್ಲಭವಿದ್ಯಾನಗರ

೧

[ಯಾರು ಮೊದಲಿನ್ದರೋ ಹೇಳಲಾರೆ !]
ನದಿಯ ದಂಡೆಗೆ ಕುಳಿತ ಎಲೆ ಬಾಲಸೂರ್ಯ
ಆಡುವೆಯಾ ಈ ನದಿಯೊಳಗೆ ಬರಿ ಬತ್ತಲೆ ।
ಅಲ್ಲಲ್ಲಲ್ಲ-
ಅಣಕಿಸುವೆ ಸುತ್ತಲಿನ ಈ ಬಯಲು ಬತ್ತಲೆಗೆ
ಮಗುನಕ್ಕಿತು ಈ ಪರಿಯ ವೇಷ ಕಂಡು.
ಹೊಸ ಸೃಷ್ಟಿ ಇಲ್ಲೇ ಇದೆ, ಇಲ್ಲೇ ಇದೆ ಉಗಮ;
ಈ ಮುದ್ದು ಈ ಮಾಟ ಆ ಸೃಷ್ಟಿಗೆಲ್ಲಿ ?
ಬೃಂದಾವನ ನಂದನವನ ಚಂದನಬನ ಇಲ್ಲಿದೆ.
ಒಂದಿದೆ ಮೊಗ ಅಷ್ಟೇ ಸಾಕು ಎಲ್ಲವನೂ ತಂದಿದೆ.
ಬಿಸಿಲು ಬೇನೆ ಹಿಡಿವ ಮುಂಚು ನೀನೇ ಸೂರ್ಯ ಬಯಲಿಗೆ
ನಿನ್ನ ನಗುವು ನಿನ್ನ ಅಳುವು ನಿಲ್ಲಿಸುವುದು ಬಳಲಿಕೆ.
ಇಂಥ ಬಾಲ್ಯ ಇಂಥ ನಲಿವು ಇಂಥ ಹೊಳಪು ಎಲ್ಲಿದೆ ?
ಸೃಷ್ಟಿ ಅಡ್ಡಬಿದ್ದು ಕನ್ನ ಸೋಲನಿಲ್ಲಿ ಒಪ್ಪಿದೆ
ಚೆಲುವ ನೀನು ಸೃಷ್ಟಿ ನಿನ್ನ ಮೊಗಕೆ ಹಿಡಿದ ಕನ್ನಡಿ,
ನಿನ್ನ ಬಿಂಬದಿಂಬು ಅದಕೆ ಉಳಿದುದೆಲ್ಲ ಬರಿನುಡಿ.

೨

ಧ್ವನಿಯು ಪ್ರತಿಧ್ವನಿಯಾಗಿ ಹಿಡಿದು ನಡುಗಿಸುತ್ತಿತ್ತು
ನಿಂತಲ್ಲಿ ಧ್ವನಿಯಂತ್ರ ಮಾತ್ರಶೂನ್ಯ;
ದಂಡೆಯಿರಡನು ಬಿಗಿದು ಅಡ್ಡಾದ ಸೇತುವೆಯೇ
ನಿನ್ನ ಯೌವನದಿಚ್ಛೆ ದಾರಿಹೋಕರ ಮೇಲೆ.
ಉಸುಕಿನಲಿ ಕಾಲ್ಕಿಸಿದು ನಿಂತಿರುವ ಬಾಹುಬಲಿ.
ಎಷ್ಟು ದೇಶದ ಜನರ ಗುರುತು ನಿನಗೆ—
ಎಷ್ಟುದ್ದ ? ಎಷ್ಟಗಲ ? ಬೆಳೆದು ಪ್ರಯೋಜನವಷ್ಟೇ
ಕಲ್ಲು ಕಲ್ಲಲ್ಲದೇ ಬೇರೆ ಉಂಟೇ ?
ಗುಡ್ಡಗಳ ಸಾಲುಂಟು ಗಡಮರದ ದಂಡುಂಟು,
ಬಣ್ಣಬಣ್ಣದ ಪತ್ರ ನಗುಕಲಿಸುವಾ ಹೂವು
ಕಂಕುಳಲಿ ಇಟ್ಟು ನೀ ಓಡಬಲ್ಲೆ.
ಇದ್ದ ನದಿಗಳ ನೀರು ನೀರಡಿಕೆಗೆಂದೇ ಇನೆ.
ಅಸರೆಗೆ ಕುಡಿದೆಲ್ಲ ಅರಿಸಿಡುವೆ
ನಿನ್ನಾವ ಶಕ್ತಿ ಇದೆ ನಿನ್ನಾವ ಚೆಲುವು ಇದೆ?
ನಿನ್ನಾವ ಬೆಲೆಯುಂಟು ಈ ಸೃಷ್ಟಿಗೆ?
ಯೌವನದ ತೋಟದಲಿ ಇದು ಬರಿಯ ಬೆಚ್ಚಾಗಿ
ನೀನು ರಚಿಸಿದ ಸೃಷ್ಟಿ ನಿನ್ನ ರಕ್ಷಣೆಗೆ—
ಅದು ಒಂದು ಮಳಲ ಕಣ ನೀನೊಂದು ರಾಶಿ.
ನಿನಗೆ ದಿನವೂ ಹಬ್ಬ, ಅದಕೆ ಏಕಾದಶಿ.

೩

ಹುಡುಕುತಿದ್ದಳು ನೃದ್ದಿ ಹರಿಯ ಎಲ್ಲಿದೆಯೆಂದು.
ಮೈನಿರಿಗೆ ಹಾಕಿದ್ದ ಮಳಲಿನೊಳಗೆ;
ಮೈಯೊಣಗಿ ಮಾಹಿನದಿ ಮಾಯವಾಗಿರುವಾಗ
ಯಾವ ಉತ್ತರವುಂಟು ಮುಮಕಿ ನಿನಗೆ?
ಇಟ್ಟ ಹೆಜ್ಜೆಯ ಕೆತ್ತು ಮರಳಿ ನೋಡುವ ಮೊದಲು
ಕಾಣದಾಗುವ ಮಾಯೆ ಇಲ್ಲಿ ಉಂಟು.
ಮೂದಲಿಸಿ ಗಹಗಹಿಸಿ ನಗುವ ನಿಸರ್ಗನ ಹಿಡಿಮ
ಕಟ್ಟಕೋ ಸೆರಗಿನಲಿ ಹಳೆ ನಾಣ್ಯವೆಂದು.
ನಿನ್ನ ಸೆರೆಹಿಡಿದ ನಿಸರ್ಗವನು ನೀ ಹಿಡಿದು ಕಟ್ಟು
ದಿನಕೊಂದೇ ಮುಂಜಾವು ದಿನಕೊಂದೇ ಮಧ್ಯಾಹ್ನ
ದಿನಕೊಂದೇ ಸಂಜೆ-ಇದು ಅದಕೂ ಹೇಳು.
ಪ್ರಕೃತಿ ತಂದಿತೇ ಪ್ರಾಯ ?— ನಿಸ್ಪ್ರಯೋಜಕ ವ
ನೀನೊಮ್ಮೆ ತಂದಿದ್ದೆ ದೇವಲೋಕ
ಮುಮಕಿ ಮೈತುಂಬಿದಳು ಸೃಷ್ಟಿ ನಾಚಿತು ಅದಕೆ
ಅಗ್ರಸ್ಥಾನವೇ ನಮಗೆ ಸುತ್ತಲೆಲ್ಲ.

*　　*　　*　　*

ಕೇಕೆ ಹಾಕಿತು ಬಾಲ್ಯ ಮುಗುಳು ನಕ್ಕಿತು ಪ್ರಾಯ
ಚೈತನ್ಯ ತುಂಬಿತ್ತು ಇಳಿವ ವಯಸ್ಸಿಗೆ—
ಎಲ್ಲರೂ ನಲಿದೆದ್ದು ತಿರುಗಿ ಮನೆಗೆಮ್ಮಾಗ
ಸೂರ್ಯನೂ ಅಲ್ಲಿದ್ದ ಇಳಿಬಾಸಿಗೆ.

ಗೋಪಣ್ಣನ ಪ್ರಶ್ನೆ

(ನವ್ಯಕಥೆ)

ಆರ್. ಪಿ. ಕುಲಕರ್ಣಿ, ಎಮ್. ಎ. ಬೆಳಗಾಂವಿ.

ಶಿಕ್ಷಕ ಜೀವನವನ್ನು ಸೂಕ್ಷ್ಮ ದೃಷ್ಟಿಗಳಿಂದ ನೋಡುತ್ತ ಹೋಗುವ ಕುತೂಹಲಿಯ ಮನದೆದುರು ಅನೇಕ ಸಮಸ್ಯೆಗಳ ಭೂತಗಳು ಎದ್ದುನಿಂತು ಜೀವನದ ಸಹಜವಿಕೃತಿಯ ದರ್ಶನ ಮಾಡಿಸುವುವು. ಎಂತಲೇ ಜಗತ್ತಿನಲ್ಲಿ ಕಂಗುರುಡಾಗಿ ಬಾಳಬೇಕೆಂಬ ಪ್ರವೃತ್ತಿ ಬೆಳೆದಿದೆ. ಇದರಿಂದ ಜೀವನಕ್ಕೆ ಗುರಿಯು ದೊರೆತೀತೇ?

ಗೋಪಣ್ಣ ಗಾಡಿಯ ಕಟ್ಟಿ ಹತ್ತಿದ; ಥಣ್....ಥಣ್....ಥಣ್ ಗಂಟೆಯ ಸದ್ದು. ದೇವರಿಗೆ ನಮಸ್ಕರಿಸಿದ. ದೇವರ ಮುಂದೆ ಅಡ್ಡ ಬಿದ್ದ; ಎದ್ದು ನಿಂತ. ದೇವರಿಗೆ ಪ್ರದಕ್ಷಿಣೆ ಹಾಕಹತ್ತಿದ. ಇರುವೆಗಳ ಸಾಲುಗಳನ್ನು ತುಳಿದ, ಕೆಳಗೆ ನೋಡಿದ, ಕಾಲಕೆಳಗೆ ಒಕ್ಕ ಇರುವೆಗಳು ನುಗ್ಗುನುಗ್ಗಾಗಿದ್ದುವು. ಜೀವ ಉಳಿದವುಗಳು ಸತ್ತ ಇರುವೆಗಳನ್ನು ಬಾಯಲ್ಲಿ ಹಿಡಿದು ಬೇಗ ಬೇಗ ಹರಿಯತೊಡಗಿದುವು.

ಈ ಗುಡಿಯೇ ಊರ ಪಂಚಾಯತಿ ಕೂಡುವ ಸ್ಥಳ. ಮಾತಿನ ಅರುಳು ಹುರಿಯುವ ಪಾತ್ರೆ. ಮಧ್ಯಾಹ್ನ ರೊಕ್ಕ ಹಚ್ಚಿ ಪೆಟ್ಟು ಆಡುವವರ ಆಶ್ರಯವೂ ಇದೇ. ದನಗಳ ಕೊಟ್ಟಿಗೆಯೂ ಇದೇ. ಮಕದ ಸ್ವಾಮಿಗಳು ಇಳಿಯುವ ಸ್ಥಳವೂ ಇದೇ. ಸಂಗ್ಯಾಬಾಳ್ಯಾನ ಬಟ್ಟದಲ್ಲಿ ಕುಣಿಯುವ ಪ್ರಸಿದ್ಧ ಪಾತರದ ಮಲ್ಲಿಯ ಬೀಡಾರವೂ ಇದೇ.

ಗೋಪಣ್ಣನ ದೃಷ್ಟಿ ಗುಡಿಯ ಮುಂದಿದ್ದ ಕಿರಾಣಿ ಅಂಗಡಿಯ ಕಡೆಗೆ ಹರಿಯಿತು. ರೇಶಿಮೆಯ ಹೊಸಬಟ್ಟೆಯ ಮೈಬಣ್ಣದ ನೀಲವ್ವ ಏನೋ ಕೊಳ್ಳುತ್ತಿದ್ದಳು. ಆಕೆಯ ಮೊದಲ ಗಂಡ ಭಾವಿಯಲ್ಲಿ ಬಿದ್ದು ಸತ್ತ. ಜನರು ಆತ ಆತ್ಮಹತ್ಯೆ ಮಾಡಿಕೊಂಡನೆಂದು ಅನ್ನುತ್ತಿದ್ದರು. ಆ ಮೇಲೆ ನೀಲವ್ವ ಉಡಿಕೆಯಾಗಿದ್ದಳು. ಈಗ ಇರುತ್ತಿದ್ದುದು ಆಕೆ ಉಡಿಕೆಯ ಗಂಡನ ಕಡೆಗೆ. ಗೋಪಣ್ಣನ ತಂಗಿ ಸುಶೀಲೆ, ನೀಲವ್ವನನ್ನು ರೂಪದಲ್ಲಿ ಹೋಲುತ್ತಿದ್ದಳು. ಗೋಪಣ್ಣ ಕೆಸರು ಸಿಡಿದಂತೆ ಮುಖ ಮಾಡಿದ. ಸುಶೀಲೆಯ ಗಂಡನೂ ಇವನೂ ಸಹಪಾಠಿಗಳು. ಗೋಪಣ್ಣ ಬೀ. ಎ. ಪಾಸಾದಾಗ ಏನೇನೋ ಹೊಂಗನಸು ಕಟ್ಟಿದ್ದ; ಆದರೆ ಅವನಿಗೆ ಕೆಲಸ ಸಿಗಲಿಲ್ಲ. ಒದ್ದ ನಾಯಿಯಂತೆ ಕುಂಯಿಗುಟ್ಟುತ್ತ ಪಟ್ಟಣ ಬಿಟ್ಟು ಹಳ್ಳಿಯನ್ನು ಸೇರಿದ. ಅವನ ಬೀಗ ಮಾತ್ರ ಮೂರು ಸಾರೆ ಇಂಟರಿನಲ್ಲಿ ಡೊಂಬಾಟವನ್ನಾಡಿ, ಮಿಲಿಟರಿ ಸೇರಿ, ದೊಡ್ಡ ಹುದ್ದೆಗೇರಿದ್ದ. ತಂಗಿಯ ಗಂಡ ಇವನನ್ನು ನಾಯಿಯಂತೆ ಕಾಣುತ್ತಿದ್ದ. ಆಕೆಗೆ ಮಕ್ಕಳಾಗಿ ಇಲ್ಲ. ಒಮ್ಮೆ ಆಕೆಯನ್ನು ಕರೆತರಲು ಗೋಪಣ್ಣ ಹೋಗಿದ್ದ. ಸುಶೀಲೆ ತವರುಮನೆಗೆ ಹೋಗುವ ಹಟ ಹಿಡಿದಳು. ಗಂಡ ಆಕೆಗೆ ಎರಡೇಟು ಬಿಗಿದ. ಗೋಪಣ್ಣ ಒಡಕುಗಡಿಗೆಯಂತೆ ಮುಖಮಾಡಿಕೊಂಡು ಹಿಂದಿರುಗಿದ. ಸುಶೀಲೆಯು ಕೆಲವು ದಿನಗಳ ತರುವಾಯ ತೀರಿಕೊಂಡಳು. ಗೋಪಣ್ಣ ಈ ದುಃಖ ನುಂಗಿದ. ಅದಿರಲಿ, ಇವನ ತಂಗಿಯ ಗಂಡ ಬತ್ತದ ಗೊಳಲಿಯ ಬೆಲೆಯವ.—ಆದರೆ ಜಂಭ ಎಷ್ಟು? ಗೋಪಣ್ಣ ಅವನ ಮನೆಯ ಕೊಂಡವಾಡಿಗೆ ಮತ್ತೆ ಹೋಗಲಿಲ್ಲ.

ಗೋಪಣ್ಣ ನಸ್ಯ ಏರಿಸಿದ. ನಸ್ಯ ಮಾತ್ರ ಬಹಳ ಒಳ್ಳೆಯದು, ನಿಷ್ಪಾಣಿ ತಂಬಾಕಿನದು. ಹಳೆಯ ನೆನಪುಗಳನ್ನು ಮರೆಯಲು ಅತನಿಗೆ ಅದೊಂದೇ ಸಾಧನ. ಎರಡುಸಾರೆ ನಸ್ಯ ಏರಿಸಿದ. ಆದರೂ ಬೊಕ್ಕನೇ—ಒದಿಸಿಕೊಂಡಂತೆ—ಮುಖ ಕಿವುಚಿದ. ಗುಡಿಯ ಕಟ್ಟೆ ಇಳಿಯಬೇಕೆನ್ನುವಷ್ಟರಲ್ಲಿ ಕಲ್ಲಾ ಮುಚ್ಚಂಡಿ, ಭರಮಾ ಕಾವಳೆ, ಹರಿ ಧೋಂಡೋಪಂತ, ಶಿವಪ್ಪಾ ಶೆಟ್ಟಿ—ಮುಂತಾದ ಪಂಚರು ಬಂದರು. ಯಾವುದೋ ಒಂದು ನ್ಯಾಯವನ್ನು ಬಗೆಹರಿಸಬೇಕಾಗಿತ್ತು. ಗೋಪಣ್ಣನೂ ಊರಪಂಚ. ಅತ ಕುರಿ ಒದರಿದಂತೆ ನಕ್ಕ. ಉಳಿದ ಪಂಚರಿಗೆ ಕೆಲಸವಿಲ್ಲ; ಬೇಕು-ಬೇಡಗಳಿಲ್ಲ. ಅವರ ಮೈಗೆ ಮದ ಬಂದ ಟಗರಿನ ವಾಸನೆ. ಹಸನು ಬಟ್ಟೆಗಳಿದ್ದರೆ ಇವರಿಗೂ ಪಟ್ಟಣದ ಪೋಲಿಗಳಿಗೂ ಯಾವ ಅಂತರ? ಪಂಚರಿಗೆ ಯಾವ ನೆವ ಹೇಳಬೇಕು? 'ಒಕ್ಕುವುದಿದೆ' ಎಂದು ಬಹಳ ಸಾರೆ ಹೇಳಿ ಆಗಿತ್ತು. ಅತ ಹೇಳಿದಂತೆ ಪ್ರತಿಯೊಂದು ಸಾರೆ ಒಕ್ಕಿದ್ದರೆ, ಊರ ಹತ್ತು ಪಟ್ಟು ಭೂಮಿಯನ್ನು ಒಂದೇ ವರ್ಷದಲ್ಲಿ ಒಕ್ಕಿಯಾಗುತ್ತಿತ್ತು. ಮೊದಲೇ ಗೊತ್ತಿದ್ದರೆ, ಗೋಪಣ ಪಟ್ಟಣಕ್ಕೆ ಹೋಗಿ ನಾಟಕ ನೋಡುತ್ತಿದ್ದ. ಗೋಪಣ್ಣ ಉಳಿದ; ನ್ಯಾಯ ತೀರ್ಮಾನ ಮುಂದೆ ಬಿತ್ತು.

ಗೋಪಣ್ಣನಿಗೆ ಸೂತಕ ತೀರಿದಂತಾಯಿತು. ಗುಡಿಯಿಂದ ಹೊರಗೆ ಬಂದ. ನೆರೆಯ ಬೀದಿಯ ಕಲ್ಲು ತನ್ನ ಮುದಿ ಎತ್ತುಗಳ ಗಳೆಯನ್ನು ಹೊಡೆದುಕೊಂಡು ಮುಂದೆ ಬರುತ್ತಿದ್ದ. ರಪ್ಪನೆ ಎತ್ತುಗಳಿಗೆ ಏಟು ಕೊಟ್ಟ. ಬದಿಗೆ ದೇವರ ಗೂಳಿ ಡುರಕೆ ಹಾಕುತ್ತಿತ್ತು. ನಾಯಿಯೊಂದು ಚಕ್ಕಡಿಯ ಕೆಳಗೆ ನಿದ್ದೆಹೋಗಿತ್ತು. ಬೀದಿಯ ನಾಯೊಂದು ಡೊಂಕು ಮುಖ ಮಾಡಿ ಅತ್ತತ್ತ ಓಡುತ್ತಿತ್ತು. ಕಟ್ಟೆಯ ಮೇಲೆ ಹೆಂಗುಸೊಬ್ಬಳು ಕೆಲಸವಿಲ್ಲದೆ ಕುಳಿತಿದ್ದಳು. ಮುಲ್ಲ ಮತ್ತು ಅವನ ಹೆಂಡತಿ ದುಡಿದು ದುಡಿದು ಮಫೆಗೆ ಹಿಂದಿರುಗುತ್ತಿದ್ದರು

ತಂದ್ರ ಸ್ಥಿತಪ್ರಜ್ಞನಂತೆ ತನ್ನ ಕೆಲಸ ಮಾಡುತ್ತಿದ್ದ. ಏನಿದು ಇದೆಲ್ಲ? ಗೋಪಣ್ಣನ ಮನಸ್ಸಿನಲ್ಲಿ ಕಸಿವಿಸಿಯಾಯಿತು.

ಗೋಪಣ್ಣ ಹತ್ತು ಹೆಜ್ಜೆ ಮುಂದೆ ಹೋಗಿರಬಹುದು; ಕಾರಿಕೆಯನ್ನು ಕಂಡಂತೆ ಮುಖ ಮಾಡಿದ. ಶೇಷಾಚಾರಿಯನ್ನು ಕಂಡ. ಆತ ಪುಷ್ಟವಾಗಿ ಬೆಳೆದ ಕೋಣನಂತೆ ಕಾಣುತ್ತಿದ್ದ. ತಿನಿಸಿನ ಹೊರತು ಆತನಿಗೆ ಜಗತ್ತಿನಲ್ಲಿ ಮತ್ತೇನೂ ಕಾಣುತ್ತಿದ್ದಿಲ್ಲ. ಊಟ....ಊಟ.... ಊಟ...:ಊಟ! ಇಪ್ಪತ್ತು ನಾಲ್ಕು ತಾಸೂ ಅದೇ ವಿಚಾರ. ಶೇಷಾಚಾರಿ "ಊಟಾತೇನ್ರೀ ಗೋಪಣ್ಣಾ?" ಎಂದ. ಗೋಪಣ್ಣ ಕೊಳಚೆಯ ಮೇಲಿಂದ ಜಿಗಿಯುವಂತೆ ಟಣ್ಣನೆ ಜಿಗಿದ. "ಹೂಂ" ಎಂದು ಮನೆಯ ಕಡೆಗೆ ಟುಣು ಟುಣು ನಡೆದ.

ಸಂಗ್ಯಾ ಬಾಲ್ಯಾನ ಬಯಲಾಟದ ತಾಲೀಮು ನಡೆದಿತ್ತು. ಗೋಪಣ್ಣ ನಿಂತ. ಅಲ್ಲಿ ನೆರೆದ ಜನರ ಮುಖಗಳು ಮಂಗನ, ನಾಯಿಯ, ಒಂಟಿಯ ಮುಖಗಳನ್ನು ಹೋಲುತ್ತಿದ್ದವು. "ಪಿಚ್ಚ್" ಎಂದು ಉಗುಳಿದ ಒಬ್ಬ. ಹಿಂದೆ ನಿಂತವನ ಗಡ್ಡ ಗೋಪಣ್ಣನಿಗೆ ಮುಳ್ಳುಗಳಂತೆ ಚುಚ್ಚುತ್ತಿತ್ತು. ಇನ್ನೊಬ್ಬ "ಭುಸ್....ಭುಸ್" ಹೊಗೆಬಿಟ್ಟ. ಎಲೆ ತಿಂದು ಕೋಣನಂತೆ ಮೆಲುಕಾಡಿಸುವವರು ಕೆಲವರು. ಪಾತರದವಳು ಕುಣಿಯುತ್ತಿದ್ದಳು. ಜನ ಜುರುಮುರಿ ಹಾರಿಸುತ್ತಿದ್ದರು. ಅವು ಹುಳುಗಳಂತೆ ಅವಳ ಮೈಮೇಲಿಂದ ಉದುರುತ್ತಿದ್ದವು. ಗೋಪಣ್ಣ ತಲೆಯಲ್ಲಾಡಿಸಿದ. ಅವನಲ್ಲಿಯೂ ಇವರಲ್ಲಿಯೂ ಯಾವ ಸಾಮ್ಯ? "ವಿಪ್ರಬಾಂಧವ್ಯವಂತೆ! ಮುಕ್ಕಳ ತಲಿ!" ಎಂದ. ಎಲ್ಲರನ್ನೂ ಮಾನವತೆಯಿಂದ ಕಾಣುವುದು ಅವನಿಗಂತೂ ಅಸಾಧ್ಯ. ಆತ ವಿಪ್ರಬಾಂಧವ್ಯದ ವಿಚಾರವನ್ನೇ ಬಿಟ್ಟ.

ಮುಂದೆ ನಡೆದ. 'ಠಣಣ....ಠಣಣ....ಠಣಣ....ಠಣ್', ಎಂದು ಕರಡಿಯ ಮಜಲು ನಡೆದಿತ್ತು. ಮೇಳದವರು ಕುಣಿಯುತ್ತಿದ್ದರು. ತಾಳವನ್ನ ಹುರುಪು ಹೇಳತೀರದು. ಇದು ಮಜಲಿನವರ ನಿತ್ಯಕಾರ್ಯ. ಅದೇ ತಾಳ, ಅದೇ ಸ್ವರ, ಅದೇ ಕುಣಿತ. ಅವರಿಗೆ ಯಾವ ಸಮಾಧಾನವಾಗುತ್ತಿತ್ತು? ಕುಣಿಯುವಾಗ ಕರಡಿಯ ನನ್ನದ! ಸತ್ತಾಗ ಹುಲಿಗೆಯ ನದ್ದು! ಅದೂ ವಾದ್ಯವೇ! ಇದೂ ವಾದ್ಯವೇ!

ನಾಲ್ಕಾರು ಮನೆಗಳನ್ನು ದಾಟಬಹುದು. ಮುಳ್ಳು ತುಳಿದಂತೆ ನಿಂತ. ಹರೆಯ ಸೀರೆಯನ್ನುಟ್ಟ ಪೆಂಗುಸು ಬರಿಮೈಯ ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಕುಳಿತಿದ್ದಳು. ತನ್ನ ಸೀರೆಯಿಂದ ಮಗುವನ್ನು ಆಕೆಗೆ ತಪ್ಪಿಸಬೇಕಾಗಿತ್ತು. ಆದರೆ ತನ್ನ ಮಾನ ಮುಚ್ಚಲು ಅದು ಸಾಕಷ್ಟಿದ್ದಿಲ್ಲ. ಕರಡಿಯ ಮಜಲಿನವರು ಚಿಕ್ಕ ಮಕ್ಕಳಂತೆ ಕುಣಿಯುತ್ತಿದ್ದಾರೆ. ಕುಣಿಯುತಕ್ಕ ಮಗು ಮುದುಡಿದೆ. ಈ ತಾಯಿ-ಮಕ್ಕಳು ಹೀಗೇಕೆ ಮಳೆಯಲ್ಲಿ ತೊಯ್ದು ಹೆಕ್ಕಗಳಂತಾಗಿದ್ದಾರೆ? ಯಾಕೆ? ಹೇಗೆ? ಏನಿದು?

'ಬರ್ರಿ, ಗೋಪಣ್ಣಾ' ಶಿವಪ್ಪ ಶೆಟ್ಟರು ಕರೆದರು. ಶೆಟ್ಟರ ಕಟ್ಟೆಯ ಮೇಲೆ ಎಂಟು ಹತ್ತು ಜನರು ಕೂಡಿದ್ದರು ನೋವಿಗೆ ಮುತ್ತಿದ ನೊಣಗಳಂತೆ! ಶೆಟ್ಟರ ಮಗನೊಬ್ಬ ಕಾಲೇಜಿನಲ್ಲಿ ಓದುತ್ತಿದ್ದ. ವರ್ಷಕ್ಕೆ ಎರಡು ಬಾರಿ ಬೀ. ಏ. ಗ ಕಟ್ಟುತ್ತಿದ್ದ. ಹೀಗೆ ಮೂರು ವರ್ಷ ನಡೆದಿತ್ತು. ಗೋಪಣ್ಣ ಶೆಟ್ಟರ ಕಟ್ಟೆ ಏರಿದ. ಎಲ್ಲರೂ ಶೆಟ್ಟರ ಮಗನನ್ನು ಹೊಗಳುತ್ತಿದ್ದರು. ಅವರೆಲ್ಲರಿಗೆ ಆತನ ಚುರುಕು-ಬುದ್ಧಿ ಆತ ಚಿಕ್ಕವನಿರುವಾಗಲೇ ತಿಳಿದಿತ್ತಂತೆ! ಶಿವಪ್ಪ ಮಗನಿಗೆ ಹತ್ತುವ ಪುಸ್ತಕಗಳ ಖರ್ಚಿನ ಬಗ್ಗೆ ಹೇಳುತ್ತಿದ್ದ: ಪ್ರತಿವರ್ಷ ನೂರು ರೂಪಾಯಿಗಳ ಪುಸ್ತಗಳನ್ನು ಕೊಳ್ಳುತ್ತಿದ್ದ. ಒಂದು ಕೆರಾಣಿ ಅಂಗಡಿಯ ರದ್ದಿಯ ತೊಂದರೆ ಹಿಂಗುತ್ತಿತ್ತು! ಶಿವಪ್ಪನ ಮಗನಲ್ಲಿ ಕೊರತೆಗಳಿರಲಿಲ್ಲವೆ? ಒಂದಾದರೂ ಕೆಟ್ಟ ಕೆಲಸವನ್ನು ಆತ ಮಾಡಿರಲಿಲ್ಲವೆ? ಆತ ನಿಜವಾಗಿಯೂ ಬುದ್ಧಿವಂತನೆ? "ಥೂ-s ಇವರ! ಏನು ಮಾತಪ್ಪಾ ಇವರದು! ಇವರ ಮಾತಿನೊಳಗ ಎಳ್ಳಷ್ಟರೆ ಸತ್ಯ ಅದನ?" ಎಂದ ಗೋಪಣ್ಣ ಮನಸ್ಸಿನಲ್ಲಿ. ಜನ ಹೊಗಳಲಿ, ಉಪಯೋಗವೇನು? ಇಂಥವರನ್ನು ಹೊಗಳಲು ಜನ ಹುಟ್ಟಿರುವುದೆ? ಇಂಥವರು ಹುಟ್ಟಿರುವರೆಂದು ಜನ ಹೊಗಳುವುದೆ? ಕೆಸರಿಗಾಗಿ ಕೋಣನೋ? ಕೋಣಕ್ಕಾಗಿ ಕೆಸರೋ? ಧನವಂತರಲ್ಲಿ ಮಾನವಿಲ್ಲ, ದೋಷವಿಲ್ಲ, ತಪ್ಪು-ತಡೆಗಳಿಲ್ಲ ಅವರು ಮಾಡಿದ್ದೆಲ್ಲ ಒಳ್ಳೆಯದು. ನಡಿಪದ್ದೆಲ್ಲ ಸತ್ಯ. ಎಲ್ಲ ಗಿಲಾಯ್ ಮಾಡಿದ ಮಣ್ಣಿನ ಗೋಡೆ! ಒಳಗೆ ಮಣ್ಣು, ಹೊರಗೆ ಬಣ್ಣ.

ಇಲ್ಲಿಯ ಜೀವನವಾದರೂ ಎಂಥದು? ಒಕ್ಕಲಿಗನಿಗೆ ಓದು-ಬರೆಹ ಗೊತ್ತಿಲ್ಲ. ಓದುಬಲ್ಲವರಿಗೆ ನೇಗಿಲು ಹೊಡೆಯಲು ಗೊತ್ತಿಲ್ಲ ಬುದ್ಧಿಗೆ ಬೆಲೆಯಿಲ್ಲ. ನೇದಲು ಬೀಡಿ, ತಿನ್ನಲು ಎಲೆ, ಕುಡಿಯಲು ಚಹ ಕೊಟ್ಟವರಿಗೆ ಬೆಲೆ! ಯಾವನಾದರೂ ಸತ್ತರೆ ಅವನ ಬೀಡಿ, ಎಲೆ, ಚಹದ ಬಗ್ಗೆ ಮಾತು! ಏನಿದು? ಹದಿನೈದು ವರ್ಷಗಳ ಹಿಂದೆ ಇಲ್ಲಿ ಹ್ಯೇಗು ಹಬ್ಬಿತ್ತು. ನೂರಾರು ಜನ ಸತ್ತರು ಅವರಲ್ಲಿ ಎಷ್ಟು ಜನ ಬೀಡಿ ಸೇದುತ್ತಿದ್ದಿಲ್ಲ? ಎಲೆ ತಿನ್ನುತ್ತಿದ್ದಿಲ್ಲ? ಚಹ ಕುಡಿಯುತ್ತಿದ್ದಿಲ್ಲ? ಅವರೆಲ್ಲರೂ ಬೆಲೆಯಿಳ್ಳವರೇ?

ಗೋಪಣ್ಣ ಮೈಮರೆತಿದ್ದ. ಎಚ್ಚರಗೊಂಡ. ಮನೆಗೆ ಹೋಗಬೇಕಾಗಿತ್ತು. ಆರ್ತನ್ವರ ಕೇಳಿಸಿತು. ಜದು ಕಲ್ಲಪ್ಪನದು. ಕಲ್ಲಿನ ಪಟ್ಟಣಕ್ಕೆ ಹೋಗಿ ಏನೇನೋ ಮಾಡುತ್ತಿದ್ದ. ಅವನ ಒರೆ ಕೊಳಯುತ್ತಿತ್ತು. - ಮನೆಯಲ್ಲಿ ನರಳುತ್ತಿದ್ದ. ಗೋಪಣ್ಣ ಬಾಗಿಲ್ಲಿ ಹಣಿಕಿ ಹಾಕಿದ. ಕಲ್ಲಪ್ಪನ ಹತ್ತಿರ ಅವನ ಬಸಿರು ಹೆಂಡತಿ ಕುಳಿತಿದ್ದಳು. ಗೋಪಣ್ಣ ತಾನೇ ರೋಗಗ್ರಸ್ತನಂತೆ ಮೈಮುದುಡಿದ.

ಗೋಪಣ್ಣನಿಗೆ ಮೈತುಂಬ ನೊಣ ಮುಕುರಿದಂತಾಯಿತು ಇದೆಲ್ಲ ಮರೆಯುವುದೆಂದರೆ; ಆದರೆ ಅಸಾಧ್ಯವಾಯಿತು. ಒರೆ ತೆಗೆಯುವುದೆಂದರೆ ತಂಟೆಯಂತೆ ಹೆಚ್ಚು ಜಿಗುಟು. ತನ್ನ ತಂಗಿ ತೀರಿಕೊಂಡಳು. ಅವಳ ಗಂಡ ಕೊಂದನೆಂದರೂ ನಡೆದೀತು. ಆಕೆ ಹೆಣದ ಕೊರತೆಯೇ? ಮುಕ್ಕಳ ಕೊರತೆ. ಮುಕ್ಕಳಾಗದೆ ಸತ್ತಳು ಕಲ್ಲಪ್ಪ ಹೆಂಡತಿಯಲ್ಲಿ ರೋಗದ ಬೀಜ ಬಿತ್ತಿದ್ದ. ಆಕೆ ತುಂಬು ಬಸಿರಿ!

ಗೋಪಣ್ಣ ಮನೆಗೆ ಬಂದ. ಹೊರಗಿನಿಂದ ಕರೆ ಬಂದಿತು. ಸೆಗಣಿ ಮನೆಯ ಶೀನು ಕರೆದಿದ್ದ. ಪಗಡೆಯಾಟ. ಗೋಪಣ್ಣ ಹೋದ

ಕುಳಿತ. ನಂಬುಗಾದಿಯನ್ನು ಎಳೆದುಕೊಂಡ. ಇಂದು ಆಟ ಅವನಿಗೆ ಬೇಕಾಗಿದ್ದಿಲ್ಲ. ಗೌಡರ ಬಸಪ್ಪ, ಕುಲಕರ್ಣಿ ರಾಗಣ್ಣ, ಟಗರಿನ ಗಡ್ಡದ ಇಮಾಮ್, ಇಣಚಿಯ ಮುಖದ ನಿಂಗ, ಗೊಗ್ಗುದನಿಯ ಕಲ್ಲಪ್ಪ, ಸಾಲದಲ್ಲಿ ಮುಳುಗಿದ ಹರಿಪಂತ, ಹುಟ್ಟು ಸೋಮಾರಿ ದತ್ತು—ಎಲ್ಲರೂ ಪಟ್ಟದ ಸುತ್ತ ಕುಳಿತಿದ್ದರು.

ಗೋಪಣ್ಣನ ಹತ್ತಿರ ಗೌಡರ ಬಸಪ್ಪ ಕುಳಿತಿದ್ದ. ಬಸಪ್ಪನಲ್ಲಿ ಗೋಪಣ್ಣನಿಗೆ ಬಹಳ ಆದರ. ಬಸಪ್ಪ ಅಗರ್ಭ ಸಿರಿವಂತನಿದ್ದ. ನಾಲ್ಕುಸಾವಿರ ರೂಪಾಯಿ ಕೊಟ್ಟು ಹಿಟ್ಟಿನ ಗಿರಣಿ ತಂದ. ಊರಲ್ಲಿ ನಡೆಯಲಿಲ್ಲ. ಅದು ಮೂಲೆಗುಂಪಾಯಿತು. ಅದನ್ನು ಐದುಸೂರಕ್ಕೆ ಮಾರಿದ. ಊರ ಶಾಲೆ ಕಟ್ಟಲು ಮೂರು ಸಾವಿರ ರೂಪಾಯಿ ಉದಾರ ದಾನ ಮಾಡಿದ. ಮಕ್ಕಳ ಶಿಕ್ಷಣಕ್ಕೆ ನೀರಿನಂತೆ ಹಣ ಸುರುವಿದ; ಆದರೆ ಅವರು ಶಾಲೆ ಕಲಿಯಲಿಲ್ಲ ಹೊಲದಲ್ಲಿ ಆರು ಬಾವಿಗಳನ್ನು ತೋಡಿ ಹನ್ನೆರಡು ಸಾವಿರ ರೂಪಾಯಿ ಮಣ್ಣುಪಾಲು ಮಾಡಿದ; ನೀರು ಹತ್ತಲಿಲ್ಲ. ಪಟ್ಟಣದ ಕಮಲಾಸಾನಿಯನ್ನು ಹಾಡು-ಹಗಲೇ ತನ್ನ ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ಬಂದಿದ್ದ. ಆದರೆ ಆಕೆ ಅವನನ್ನು ಬಿಟ್ಟುಹೋದಳು. ಬಸಪ್ಪನ ಮೇಲೆ ಇವಾವುದರ ಪರಿಣಾಮವಾಗಲಿಲ್ಲ.

ಬಿಳಿಯ ಕೂದಲಿನ ಹರಿಪಂತ, ಕಾಗೆಯಂತೆ ಡೊಂಕುನೋಟ ಬೀರಿದ. ಕವಡೆಗಳನ್ನು ಗಳಗಳ ಅಲುಗಾಡಿಸಿ 'ಹತ್ತು' ಎಂದವನೇ ಚೆಲ್ಲಿದ. ಎರಡು ಬಿತ್ತು. ಹತ್ತು ಬಿದ್ದಿದ್ದರೆ ಕಡಿತವಾಗುತ್ತಿತ್ತು. ಅವನ ಕೈಗುಣವೇ ಅಂಥದು. ಆತ ಹೊನ್ನು ಮುಟ್ಟಿದರೂ ಅದು ಮಣ್ಣು. ಮದುವೆಯಾದ ನಾಲ್ಕು ವರ್ಷಗಳಲ್ಲಿ ಅವನ ಹೆಂಡತಿ ತೀರಿಕೊಂಡಳು. ಮಗ ಐದು ವರುಷದವನಾಗಿ ತೀರಿಕೊಂಡ. ಬಾವಿ ತೆಗೆದ; ನೀರು ಹತ್ತಲಿಲ್ಲ, ಇದ್ದ ಹಣ ತೀರಿತು, ಆತ ಪ್ರಯತ್ನ ಮಾತ್ರ ಬಿಟ್ಟಿಲ್ಲ. ಅವನಿಗೆ ಬೇಕಾದಾಗ, ಹತ್ತು ಸೂತ್ರ ಎಂದೂ ಬಿದ್ದಿಲ್ಲ.

ಹರಿಪಂತನು ಗೋಪಣ್ಣನ ಬೆನ್ನ ಮೇಲೆ ಗುದ್ದಿದ. ಗೌಡರ ಬಸಪ್ಪನ ಕಡೆಗೆ ಸನ್ನೆ ಮಾಡಿದ. ನಿನ್ನೆಯೆ ಬಸಪ್ಪನ ಮಗ ತೀರಿಕೊಂಡಿದ್ದ. ಆದರೆ ಬಸಪ್ಪ ಇಂದು ಆಟಕ್ಕೆ ಬಂದಿದ್ದ. ಹರಿಪಂತನು ಗೋಪಣ್ಣನಿಗೆ ಇದನ್ನೇ ಹೇಳಿದನು.

ಗೋವಣ್ಣ ಮನೆಗೆ ಬಂದ. ಹೊರಗೆ ನೋಡುತ್ತ ಒರಗಿದ. ಗೋಡೆಯ ಕಡೆಗೆ ದೃಷ್ಟಿ ಹರಿಯಿತು, ಗಿಲಾಯಿಯು ಮಣ್ಣು ಅಲ್ಲಲ್ಲಿ ಉದುರಿತ್ತು. ಗೋಡೆಗೆ ತೂಗುಹಾಕಿದ ಫೋಟೋ ಒಡೆದಿತ್ತು, ಕಿಡಕಿ ತೆರೆದಿತ್ತು. ಮುಂದಿನ ಮನೆಯಲ್ಲಿ ಬೆಳಕು ಕಂಡ. ಮಲ್ಲಿಯ ಮನೆಯಲ್ಲಿ ಯಾವನನ್ನೋ ಕಂಡ. ಆಕೆಯ ಗಂಡ ಇನ್ನೂ ಹೊಲದಿಂದ ಬಂದಿರಲಿಲ್ಲ. ಆಕೆ ಹುಬ್ಬು ಹಾರಿಸಿ ಕೈ ತಿರುವುತ್ತ ಮಾತಾಡುತ್ತಿದ್ದಳು. ಮಲ್ಲಿಯ ಮನೆಯಲ್ಲಿ ಆಕೆ ಮತ್ತು ಆಕೆಯ ಗಂಡನ ಹೊರತು ಮತ್ತಾರೂ ಇರುತ್ತಿದ್ದಿಲ್ಲ. ಗೋಪಣ್ಣ ಹೊರಗೆ ಎಂದು ಹಣಿಕಿ ನೋಡಿದ. ಈಗ ಮಲ್ಲಿಯ ಮನೆಯಲ್ಲಿದ್ದವ ಕಲ್ಲ. ಇಬ್ಬರೂ ತೀರ ಅಂಟಿಕೊಂಡು ನಿಂತಿದ್ದರು. ಮಲ್ಲಿಯ ಗುಳದಾಳಿ ಕಲ್ಲನ ಎದೆಗೆ ನಟ್ಟಿತು. ಕಲ್ಲ ಕೊರಳಿಗೆ ತಾಯಿತ ಕಟ್ಟಿದ್ದ. ಅದರಲ್ಲಿ ಒಬ್ಬ ಸಾಧುವಿನ ಫೋಟೋ. ಇಬ್ಬರು ಕಾಮಾಸಕ್ತರ ನಡುವೆ ಒಬ್ಬ ಸಾಧುವಿನ ಸಮಾಧಿ.

ಗೋಪಣ್ಣನಿಗೆ ಮಳೆಯಲ್ಲಿ ನಿಂತಂತೆ ಆಯಿತು. ಪಗಡೆ ಆಟ! ಇಸ್ಪೀಟು ಹೊತ್ತು ಆಡಿದ! ಎಲ್ಲವೂ ಪಗಡೆ ಆಟ! ಜಗತ್ತೂ ಒಂದು ದೊಡ್ಡ ಗುಡಿ.

ಎಲ್ಲರೂ ಪಗಡೆಗಳೆ! ಯಾವ ಪಗಡೆ ಎಷ್ಟು ಮನೆಗಳನ್ನು ದಾಟುವುದು? ಯಾವ ಪಗಡೆಗಳನ್ನು ಕೊಲ್ಲುವುದು? ಯಾವುದನ್ನು ಉಳಿಸುವುದು? ಉಳಿಯುವುದೋ? ಸಾಯುವುದೋ? ಯಾರಿಗೆ ಗೊತ್ತು? ಆಟಗಾರನಿಗೆ? ಏನು ಗೊತ್ತು? ತನ್ನ ಗಂಡ ಮರಣ ಹೊಂದಿದ್ದರಿಂದ ಒಬ್ಬಳು ಬಾವಿಯಲ್ಲಿ ಜಿಗಿದು ಜೀವ ಕೊಟ್ಟಳು. ಮತ್ತೊಬ್ಬಳು ಉಡಿಕೆಯಾದಳು. ಇನ್ನೊಬ್ಬಳು ಗಂಡನಿರುವಾಗಲೇ ದುರ್ಮಾರ್ಗದಲ್ಲಿ ಇಳಿದಿದ್ದಾಳೆ. ಬಡವರ ಚೀತ್ಕಾರ, ಸಿರಿವಂತರ ಆರ್ಭಟ, ನಲ್ಲ-ನಲ್ಲೆಯರ ಪ್ರೀತಿಯ ಮಾತು—ಎಲ್ಲವೂ ಮನುಷ್ಯರ ಸದ್ದೇ! ಇವೆಲ್ಲವೂ ಅವರವರ ಪಾಲಿಗೆ ಏಕೆ? ಹೇಗೆ? ಎಲ್ಲವೂ ಕತ್ತಲು, ಕಗ್ಗತ್ತಲು.

ಗೋಪಣ್ಣನಿಗೆ ತಾಯಿಯ ನೆನಪಾಯಿತು. ಒಮ್ಮೆ ಗೋಪಣ್ಣ ಉಂಗುರ ಕಳೆದಿದ್ದ. ತಂದೆಗೆ ಹೆದರಿದ. ತಾಯಿ "ಇರಲಿ ಬಿಡೋ ಗೋಪೂ! ನುತ್ತೊಂದು ಮಾಡ್ಸಿ ಕೊಡತೀನಿ" ಎಂದಳು. ಆಕೆ ತಂದೆಯ ಹೊಡೆತದಿಂದ ಅವನನ್ನು ಕಾಯ್ದಳು. ಕಲ್ಲಪ್ಪ ಸಣ್ಣ-ಸಣ್ಣ ಸಂಗತಿಗಳಿಗೂ ತಾಯಿಯಿಂದ ಏಟು ತಿನ್ನುತ್ತಿದ್ದ. ಆತ ಒಮ್ಮೆ ಮೆಟ್ಟು ಕಳೆದುಕೊಂಡಿದ್ದ, ತಾಯಿ ಹೆಡಮುರಿಗೆ ಕಟ್ಟಿ ಅವನನ್ನು ಥಳಿಸಿದಳು.

ಕುಲಕರ್ಣಿ ರಾಗಣ್ಣ ದಿನಾಲು ಗೋಪಣ್ಣನ ಮನೆಗೆ ಬರುತ್ತಿದ್ದ. ಗೋಪಣ್ಣ ಇಲ್ಲದಾಗಲೂ ಬರುತ್ತಿದ್ದ. ಈಸಲು ಬಾರದವ ನೀರಲ್ಲಿ ನುಳುಗಿದಂತೆ ಗೋಪಣ್ಣನಾದ. ಗೋಪಣ್ಣ ಗೊಂದಲದಲ್ಲಿ ಬಿದ್ದ. ರಾಧಾಬಾಯಿ—ಅವನ ಹೆಂಡತಿ. ಆಕೆಯನ್ನು ಕರೆಯುವುದರಲ್ಲಿದ್ದ. ಕೈಯಲ್ಲಿ ಸ್ಟೂಟು ಹಿಡಿದುಕೊಂಡು ಆಕೆ ಅವನ ಹತ್ತಿರ ಬಂದಳು. ಆಕೆಯ ಸೀರೆಗೆ ಹಿಟ್ಟು ಹತ್ತಿತ್ತು. ಅವಳೊಡನೆ ಒಳ್ಳೆಣ್ಣೆಯ ವಾಸನೆಯೂ ಬಂದಿತು. "ಸಂಜೆ ರಾಗಣ್ಣ ಬಂದಿದ್ದನೇನು?" ಗೋಪಣ್ಣ ಕಣ್ಣರಳಿಸಿ ಕೇಳಿದ. "ಏನ್ಹೆಳ್ಳಿ? ಬಂದು ಕೂತನಂದ್ರ ಮನೀನ ಬಿಟ್ಟು ತೊಗೋದಿಲ್ಲ" ಎಂದಳು ರಾಧಾಬಾಯಿ. "ನೆರೆಮನಿ ಮಲ್ಲಿ? ಏನಾರೆ ಕಡ್ಡಾ ಬೇಡ್ಲಿಕ್ಕೆ ಬಂದಿದ್ದಳೇನು?" "ಸುಡ್ರಿ ಅಕಿನ್ನ! ಅಕಿ ಎಂಥಾಕಿ ನಿಮಗ ಗೊತ್ತಿಲ್ಲ?" ಎಂದು ತಮ್ಮ ನಾಲ್ಕು ವರ್ಷದ ಸಾವಿತ್ರಿಯಂತೆ—ನಕ್ಕಳು. ಆ ನಗೆ ರಾಧಾಬಾಯಿಯ ಪಾವಿತ್ರ್ಯತೆಯನ್ನು ಪ್ರತಿಬಿಂಬಿಸಿತು.

"ಸುಡ್ರಿ, ಒಯ್ದು ಅಕಿನ್ನ, ಊಟ ತೀರ್ಸಿ ನನಗ ಬೀಳ್ಲಿಕ್ಕೆ ಹಾದೀ ಮಾಡ್ರಿ" ಎಂದಳು ರಾಧಾಬಾಯಿ.

(ಮುಂದೇ ಪುಟಕ್ಕೆ ಮುಂದವರಿದಿದೆ)

★ 'ಬಿಹು' ★

(ಅಸಾಮಿಗಳ ಜನಜೀವನ)

●ೀ. ಹ್ರ. ವೆಂ. ಗುಡಿ, ಗೋಹಟ್ಟಿ (ಅಸಾಮ್)

ಭಾರತದಲ್ಲಿ ಪ್ರತಿಯೊಂದು ಪ್ರದೇಶದಲ್ಲಿಯೂ, ಅಲ್ಲಿಯ ಪೈಸರ್ಗಿಕ ಗುಣಗಳಿಗೆ ಅನುಗುಣವಾದ ಜಾನಪದ ಹಬ್ಬಗಳಿರುವುವು. 'ಬಿಹು' ಅಸಾಮಿಗಳ ಜಾನಪದ ಹಬ್ಬ. ಈ ಹಬ್ಬದ ದಿನಗಳು ಅಸಾಮಿಗಳಿಗೆ ಹೊಸ ಸಭ್ಯತೆಗಳನ್ನೆಲ್ಲ ಮರೆಯಿಸಿ ಬಿಡುವುವು.

ಜನೆವರಿ ೫-೬ನೆಯ ತಾರೀಖಿನಿಂದಲೇ ಗೌಹಾಟಿಯಲ್ಲಿ ಎಲ್ಲ ಕಡೆಗೂ, ಎಲ್ಲರಲ್ಲಿಯೂ ಒಳ್ಳೇ ಉತ್ಸಾಹ ಕಂಡುಬರುತ್ತಿತ್ತು. ೧೦ನೆಯ ತಾರೀಖಿಗೆ ಪಂ. ಜವಾಹರಲಾಲ ನೆಹರುರವರು ಬ್ರಹ್ಮಪುತ್ರ ಸೇತುವೆಯ Foundation stone ಇಡುವುದಕ್ಕಾಗಿ ಬಂದರಲ್ಲವೇ. ಅದಕ್ಕಾಗಿ ಅವರನ್ನು ಸ್ವಾಗತಿಸುವುದಕ್ಕಾಗಿ ೨ ದಿನಸ ಮೊದಲಿನಿಂದಲೇ ಸನ್ನಾಹಗಳು ನಡೆಯುತ್ತಿದ್ದುವು. ಆ ನಂತರ ೧೦ನೆಯ ತಾರೀಖು ಮುಗಿದು, ನೆಹರೂರವರು ಬಂದು ಹೋಗಿ ೨-೩ ದಿನಸಗಳಾದರೂ ಎಲ್ಲ ಕಡೆಗೂ ಅದೇ ಮಾತು. ಚಿಕ್ಕಮಕ್ಕಳು ಕೂಡಿಮೊಡನೆ, ನೆಹರು ಚಾಚಾ ಮೋಟಾರಿನಲ್ಲಿ ಹೋಗುವಾಗ ತಾವು ಹೂವುಗಳನ್ನು ತೂರಿದ್ದನ್ನೂ, ಚ್ಯಾಚಾ ಮತ್ತೆ ನಗುತ್ತ ತಮ್ಮ ಕಡೆಗೆ ನೋಡಿ ಕೈ ಅಲ್ಲಾಡಿಸಿದ್ದನ್ನು ಹೇಳುತ್ತಿದ್ದರೆ, ಶಾಲೆಯಲ್ಲಿ ೩-೪ ವರ್ಷ ಕಳೆದ ಬಾಲಕರು, 'ಭಾರತದ ಪ್ರಧಾನಮಂತ್ರಿ ನೆಹರೂರವರು, ರಕ್ಷಣಾಮಂತ್ರಿ ಮೆನನರ ಜೊತೆಗೆ ಮೋಟಾರಿನಲ್ಲಿ ಹೋಗುತ್ತಿದ್ದುದನ್ನೂ ಮತ್ತು ಅವರು ರಾಜಧಾನಿಯಾದ ದಿಲ್ಲಿಯಲ್ಲಿ ಇರುತ್ತಾರೆಂದೂ, ಈಗ ಗೌಹಾಟಿಗೆ Bridge ಕಟ್ಟುವುದನ್ನು ಪ್ರಾರಂಭಿಸಲಿಕ್ಕೆ ಬಂದಿರುವರೆಂದೂ ಮಾತನಾಡಿಕೊಳ್ಳುತ್ತಿದ್ದರು. 'ನಡೆಯುತ್ತ ನಾಲ್ಕು ಮೈಲು ಹೋಗಿ ಅಲ್ಲಿ ಲೆಕ್ಚರಿನ ಸ್ಥಳದಲ್ಲಿ ಮುಂದೆಯೇ ಸ್ಥಳ ಹಿಡಿದು ನೆಹರೂರವರ ಹತ್ತಿರದಲ್ಲಿಯೇ ಜಾಗೆ ಹುಡುಕಿಕೊಂಡು ಕಲಿತ ತಮ್ಮ ಶೌರ್ಯವನ್ನು' ಹಾಯಸ್ಕೂಲಿನ ವಿದ್ಯಾರ್ಥಿಗಳು ಹೇಳಿಕೊಳ್ಳುತ್ತಿದ್ದರೆ, ಕಾಲೇಜಿನ ಸೀನಿಯರ್ (Senior) ವಿದ್ಯಾರ್ಥಿಗಳು 'ಈ Bridge ತಯಾರಾದ ನಂತರ ಅಸಾಮದಲ್ಲಿ ಆಗಬಹುದಾದ ಅನೇಕ ಸುಧಾರಣೆ ಮತ್ತು ಪ್ರಗತಿಗಳ ಬಗ್ಗೆ ಚರ್ಚಿಸುತ್ತಿದ್ದರು. ಇಲ್ಲಿಯ ತೋಟ ಪಟ್ಟಿಗಳ ಮಾಲಕರು ತಮ್ಮ ಮಾಲನ್ನು ಬೇರೆ ಕಡೆಗೆ ಕಳುಹಿಸಿ ಬೇಕಾದಷ್ಟು ಲಾಭ ಪಡೆಯಬಹುದೆಂಬ ಸಂತೋಷದಲ್ಲಿದ್ದರೆ, ಉಳಿದ ವ್ಯಾಪಾರಸ್ಥರು ಮಳೆಗಾಲದಲ್ಲಿಯ ತಮ್ಮ ಲಾಭ ಸಿಗಲಿಕ್ಕಿಲ್ಲವೆಂದು ಚಡವಡಿಸುತ್ತಿದ್ದರು. (ಮಳೆಗಾಲದಲ್ಲಿ ಬಹಳೇ ಮಳೆಯಿಂದ ಮಹಾಪೂರ ಬಂದು ಬ್ರಹ್ಮಪುತ್ರ ನದಿಯನ್ನು ದಾಟುವುದು ಅಸಾಧ್ಯವಾಗುತ್ತದೆ. ಅದ್ದರಿಂದ ಬೇರೆಕಡೆಯಿಂದ ಬರುವ ಧಾನ್ಯ ಮುಂತಾದುವುಗಳು ನಿಂತು ಹೋಗಿ, ಇಲ್ಲಿಯ ವ್ಯಾಪಾರಸ್ಥರು ಒಂದಕ್ಕೆ ಹತ್ತರಂತೆ ಲಾಭ ಮಾಡಿಕೊಳ್ಳುತ್ತಾರೆ).

ಜನೆವರಿ ೧೫ನೆಯ ತಾರೀಖು ನಾನು ಸಂಜೆಯ ಊಟ ಮುಗಿಸಿ ಹೊರಗೆ ಬಂದೆ. ಸ್ವಚ್ಛ ನೀಲಾಕಾಶದಲ್ಲಿ ಪೂರ್ಣ ಚಂದ್ರ; ಚಳಿಯೂ ಅಷ್ಟಿರಲಿಲ್ಲ. ಶುಭ್ರವಾದ ಬೆಳದಿಂಗಳು ನೀಲಾಚಲವನ್ನೂ, ಬ್ರಹ್ಮಪುತ್ರ ನದಿಯನ್ನೂ ಆವರಿಸಿ, ತನ್ನ ವಿಶಿಷ್ಟ ಸೌಂದರ್ಯವನ್ನು ಬೀರಿತ್ತು. ಈ ಶಾಂತವಾತಾವರಣದಲ್ಲಿ ಕೆಲವು ಹೊತ್ತು ಬ್ರಹ್ಮಪುತ್ರ ನದಿಯ ದಂಡೆಯ ಮೇಲೆ ಕುಳಿತು ಬರೋಣವೆಂದು ಹೊರಬಿದ್ದೆ.

ಮನೆಯ ಕಂಪೌಂಡ್ ದಾಟಿ ಹೊರಗೆ ಬಂದೆ; ಆದರೆ ನಾನು ನಿರೀಕ್ಷಿಸಿದಂತೆ ವಾತಾವರಣ ಶಾಂತವಿರಲಿಲ್ಲ. ರಸ್ತೆಯ ಮೇಲೆ ಅರ್ಧರ್ಧ ಫರ್ಲಾಂಗಿಗೆ ನಾಲ್ಕು ನಾಲ್ಕು ಜನ ಪೋಲೀಸರು ನಿಂತಿದ್ದರು. ಅಲ್ಲಲ್ಲಿ ಜನರ ಗುಂಪೂ ಕಂಡು ಬರುತ್ತಿತ್ತು. ಹುಡುಗರು, ಎಷ್ಟೋ ಜನ ಹಿರಿಯರು ಸಹ-ಒಳ್ಳೇ ಉತ್ಸಾಹದಿಂದ ಓಡಾಡುತ್ತಿದ್ದರು. ಒಬ್ಬ ಪೋಲೀಸನನ್ನು ಕೇಳಿದೆ; ಅವನೇನೋ ಅಸಾಮಿ ಭಾಷೆಯಲ್ಲಿ ಹೇಳಿದ. ನನಗೂ ಪೂರ್ಣ ಅರ್ಥವಾಗಲಿಲ್ಲ ಆದರೂ ಅವನ ಮಾತಿನ ಮೇಲಿಂದ 'ನಾಳೆ ಬಿಹು; ಈಗಿನಿಂದಲೇ ಮುಂಜಾಗ್ರತೆ ತೆಗೆದುಕೊಳ್ಳುತ್ತಿದ್ದೇವೆ' ಎಂಬುದಿಷ್ಟೇ ತಿಳಿಯಿತು 'ಸೊನ್ನೆ ನೊನ್ನೆ ನೆಹರೂರವರು ಬಂದು ಹೋಗಿದ್ದಾರೆ. ಮತ್ತೆ ಏನಾದರೂ ರಾಜಕೀಯದ ಮೀಟಿಂಗ್ ವಗೈರೆ ಇರಬಹುದು; ಆಥವಾ ಈ ಚೀನಾ ಜನರ ಬಗ್ಗೆಯೂ ಏನಾದರೂ ಇರಬಹುದು' ಎಂದುಕೊಂಡು ನದಿಯ ದಂಡೆಗೆ ಬಂದೆ. ಅಲ್ಲಿ ಒಂದು ಬೇರೆ ವಿಶೇಷ ನಡೆದಿದ್ದಿತು ೧೦೦-೧೫೦ ಜನ ಕುಳಿತುಕೊಳ್ಳಲಿಕ್ಕೆ ಬರುವಹಾಗೆ ಒಂದು ದೊಡ್ಡ ಗುಡಿಸಿಲು ಹಾಕಿದ್ದರು. ೫೦-೬೦ ಜನರು ಒಳ್ಳೇ ಗಡಿಬಿಡಿಯಿಂದ ಓಡಾಡುತ್ತಿದ್ದರು. ೩-೪ temporary ಒಲೆ ಮಾಡಿ— ಗುಡಿಸಲಿನ ಮುಂದೆ- ೧೦-೧೫ ಜನ ಅಡಿಗೆಯ ತಯಾರಿ ನಡೆಯಿಸಿದ್ದರು.. ಒಳ್ಳೇ ಆಶ್ಚರ್ಯವಾಗಿ ನಾನು ಅಲ್ಲಿಯ ಒಬ್ಬನನ್ನು ಕೇಳಿದೆ:— ಇವೇನೆಂದು. ಅವನೂ ಅಸಾಮಿಯಲ್ಲಿಯೇ ಹೇಳಿದ. ಅದರಿಂದಲೂ ನನಗೆ ತಿಳಿದದ್ದೆಂದರೆ 'ನಾಳೆ ಬಿಹು; ಅದಕ್ಕಾಗಿಯೇ ಇವೆಲ್ಲ ನಡೆದಿದೆ....' ನಾನು ಮನೆಗೆ ಹೋಗುವಾಗ ಮತ್ತೆ ದಾರಿಯಲ್ಲಿ ಇಂತಹ ೩-೪ ಗುಡಿಸಿಲುಗಳನ್ನು ನೋಡಿದೆ. ಮನೆಯ ಹತ್ತಿರ ಬಂದಾಗ, ನಮ್ಮ ನೆರೆಮನೆಯ ಗೃಹಸ್ಥ ಬಾಗಿಲಲ್ಲಿಯೇ ನಿಂತುಕೊಂಡು, ತಮ್ಮ ನೌಕರನಿಗೆ ಏನೋ ಹೇಳುತ್ತಿದ್ದರು ನನ್ನನ್ನು ನೋಡಿ ನಗುತ್ತ 'ನೋಡಿರಿ, ನಾಳೆ ಬಿಹು, ಈಗಿನಿಂದಲೇ ಕಾಳಜಿ ತೆಗೆದುಕೊಳ್ಳಬೇಕಾಗಿದೆ' ಎಂದು ನುಡಿದರು.

ನನಗೆ ಆಶ್ಚರ್ಯವಾಗಿ ಅವರನ್ನು ಕೇಳಿದೆ. 'ಈ ಬಿಹು ಇದ್ದದ್ದಾದರೂ ಏನು? ಮುಂಜಾಗ್ರತೆಗೆಂದು ನೂರಾರು ಪೋಲೀಸರು ರಸ್ತೆಯ ಮೇಲೆ ಇದ್ದಾರೆ. ಬಿಹು ಎಂದು ಗುಡಿಸಿಲುಗಳನ್ನು ಕಟ್ಟಿ ಎಷ್ಟೋ ಜನರು, ೧೦೦-೧೫೦ ಜನರ ಅಡಿಗೆ ಮಾಡತೊಡಗಿದ್ದಾರೆ. ಈ ಬಿಹುವಿನ ಸಲುವಾಗಿ ನೀವೇನು ಮಾಡುತ್ತಿದ್ದೀರಿ?

ಅವರು ಹೇಳಿದರು 'ಈ ಮನೆ ಕಟ್ಟಿಸುತ್ತಿದ್ದೇನಲ್ಲ, ಎಷ್ಟೋ ಕಟ್ಟಿಗೆಯ ಕಂಬ ತೊಲೆಗಳು ಇಲ್ಲಿಯೇ ಹೊರಗೆ ಬಿದ್ದಿವೆ. ನಾನಿವುಗಳನ್ನು ಒಳಗೆ ಇಡಿಸುತ್ತಿದ್ದೇನೆ.'

ನನಗುಂಟಾದ ಈ ಅನುಭವ ಇಲ್ಲಿ ಬಂದ ಅನೇಕ ಹೊಸಬರಿಗೆ ಪರಪ್ರಾಂತೀಯರಿಗೆ ಆಶ್ಚರ್ಯವನ್ನುಂಟು ಮಾಡಬಹುದು. 'ಬಿಹು' ಇಲ್ಲಿಯ— ಅಸಾಮದಲ್ಲಿಯ–ಬಹು ದೊಡ್ಡ ಹಬ್ಬ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಆಚರಿಸಲ್ಪಡುವ ಧಾರ್ಮಿಕ, ರಾಜಕೀಯ ಸಂಗಡಗಳಿಗೆ ಸಂಬಂಧಿಸಿದ ಜನರ ವೈಮನಸ್ಸಿಗೆ ಇಂಬುಗೊಡುವ ಹಬ್ಬಗಳಂತೆ ಇದಲ್ಲ. ಬಡವ-ಶ್ರೀಮಂತ, ಉಚ್ಚ-ನೀಚ, ಮುಂತಾದ ಭೇದಭಾವನೆಗಳನ್ನು ಮರೆತು, ಎಲ್ಲರೂ ಇದರಲ್ಲಿ ಭಾಗವಹಿಸುವ ಸುಗ್ಗಿಯ ಹಬ್ಬ ಇದು. ಮಾಘಮಾಸದಲ್ಲಿ ಬರುವ ಈ ಹಬ್ಬಕ್ಕೆ 'ಮಾಘ ಬಿಹು' ಎಂದು ಕರೆಯುತ್ತಾರೆ. ಎರಡನೆಯದು ಇದಕ್ಕೂ ದೊಡ್ಡ ಹಬ್ಬ —'ಬೋಹಾಗ ಬಿಹು'— ಎಪ್ರಿಲ್ ತಿಂಗಳಲ್ಲಿ, ವಸಂತಋತುವಿನಲ್ಲಿ ಬರುತ್ತದೆ.

ಅಗಾಧವಾದ ದರಿಕಂದರಗಳಿಂದ ಸುತ್ತುವರಿಯಲ್ಪಟ್ಟ ಈ ಪ್ರದೇಶದ ಜನರು ಸೃಷ್ಟಿಯ ಮಡಿಲಲ್ಲಿಯೇ ಹುಟ್ಟಿ ಬೆಳೆಯುತ್ತಾರೆ. ಸುಧಾರಿಸಿದವರೆಂದು ಹೇಳಿಕೊಳ್ಳುತ್ತಿರುವ ಜನರ ಸಂಪರ್ಕವೇ ಇಲ್ಲದ್ದರಿಂದ ಸೃಷ್ಟಿಯ ನಿಯಮವನ್ನೇ ಅನುಸರಿಸುತ್ತ ನಿಸರ್ಗಕ್ಕೆ ಹೊಂದಿಕೊಂಡೇ ಇವರ ಜೀವನ ಸಾಗುತ್ತದೆ. ಚಳಿಗಾಲ ಮುಗಿದು ವಸಂತ ಋತುವಿನಾಗಮನದೊಂದಿಗೆ ಸೃಷ್ಟಿಯಲ್ಲಿ ಹೊಸ ಜೀವನ ಚೈತನ್ಯ ಉಂಟಾದೊಡನೆ, ಅದರ ಪರಿಣಾಮ ಈ ಜನರ ಜೀವನದಲ್ಲಿಯೂ ಉಂಟಾಗದಿರುವುದಿಲ್ಲ. ನೋಡಿದಲ್ಲೆಲ್ಲ ನೃತ್ಯ ಸಂಗೀತ ಮುಂತಾದುವುಗಳೊಂದಿಗೆ ನಕ್ಕು ನಲಿಯುತ್ತಿರುವ ಜನರ ಗುಂಪುಗಳು ಕಂಡು ಬರುತ್ತವೆ. ಅಸಾಮಿನ ಜನರಿಗೆ ಈಗಲೇ ಹೊಸ ವರ್ಷ ಪ್ರಾರಂಭ— ವಸಂತ ಋತುವಿನೊಂದಿಗೆ ೭-೮ ದಿವಸಗಳ ವರೆಗೂ ನಾನಾ ತರದ ಕಾರ್ಯಕ್ರಮಗಳು ನಡೆಯುತ್ತವೆ. ಇವುಗಳಲ್ಲಿ ಮುಖ್ಯವೆಂದರೆ Folk dance (ಸಾಮೂಹಿಕ ನೃತ್ಯ) ಬೇರೆ ಬೇರೆ ಪ್ರದೇಶಗಳ (hilltribes) ಜನರು ಕೂಡಿ ತಮ್ಮ ತಮ್ಮ ವಿಶಿಷ್ಟ ಕಲೆಗಳನ್ನು ತೋರಿಸುತ್ತಾರೆ ನೃತ್ಯ, ಸಂಗೀತ ಇಲ್ಲಿಯ ಜನರ ಜೀವಾಳ. ಸಾಮೂಹಿಕ ಸಂಗೀತ, ತಾಳಕ್ಕೆ ಸರಿಯಾಗಿ ಕುಣಿತ— ಇವುಗಳಲ್ಲಿ ತಮ್ಮನ್ನು ತಾವೇ ಮರೆಯುತ್ತಾರೆ ಇಲ್ಲಿಯ ಜನರು.

ಪುರಾತನ ಇತಿಹಾಸದಲ್ಲಿ, ಐತಿಹಾಸಿಕ ಕಾದಂಬರಿಗಳಲ್ಲಿ ವಸಂತೋತ್ಸವದ ಬಗ್ಗೆ ಓದುತ್ತೇವೆ. ಈ 'ಬೋಹಾಗ ಬಿಹು' ಅದೇ ಮಾದರಿಯ ವಸಂತೋತ್ಸವವೆಂದು ಹೇಳಬಹುದು ವಸಂತೋತ್ಸವ ಯುವಕ-ಯುವತಿಯರ ಹಬ್ಬ— ಸೃಷ್ಟಿಯಲ್ಲಿಯೇ ಯೌವನ ತುಂಬಿ ಹರಿಯುತ್ತಿರುವುದರಿಂದ

" ಅಭಿನವ ಮಧುಮಾಸವು ಬರಲು.....
ಸೃಷ್ಟಿಯು ಹೊಸ ಹರೆಯದಲಿಹಳೊ,
ಸೃಷ್ಟಿ ಪತಿಯ ನೀಕ್ಷಿಸುತಿಹಳೋ,
ಎಂಬಂತೆ ತುಂಬಿತಾನಂದ,
ತುಂಬಿಯ ಸವಿಗಾಯನದಿಂದ."

ಎಂಬ ಹಾಡು (ಶ್ರೀ ಖಾನೋಳಕರರವರ 'ನೌಕಾತ್ರೋಡನ') ಎಷ್ಟೋ ಕನ್ನಡಿಗರ ಮನಸ್ಸಿನಿಂದ ಅಳಿಸಿರಲಿಕ್ಕಿಲ್ಲ. ಆ ನೃತ್ಯ, ಸಂಗೀತ, ಸುತ್ತಲಿನ ಹಚ್ಚ ಹಸುರಿನಿಂದ ಮುಚ್ಚಿದ ವನಶ್ರೀ, ಎಂತಹ ಮುದುಕರಲ್ಲಿಯೂ ಹುರುಪನ್ನೂ ಉತ್ಸಾಹವನ್ನೂ ಹುಟ್ಟಿಸುತ್ತವೆ. ಆ ಹಾಡುಗಳು ಕೂಡ ಪ್ರೇಮಾನುರಾಗ ಮತ್ತು ಅವುಗಳಿಗೆ ಪುಟಕೊಡುವ ಸೃಷ್ಟಿಸೌಂದರ್ಯಕ್ಕೆ ಸಂಬಂಧಿಸಿದುವುಗಳೇ ಇದ್ದರೆ ಆಶ್ಚರ್ಯವೇನು ?

'ಮಾಘ ಬಿಹು'

ಬೋಹಾಗ ಬಿಹುವಿನ ನಂತರ ಇಲ್ಲಿಯ ದೊಡ್ಡ ಹಬ್ಬ 'ಮಾಘ ಬಿಹು'. ಇದಕ್ಕೆ ಸುಗ್ಗಿಯ ಹಬ್ಬವೆಂದು ಹೇಳಬಹುದು. ವರ್ಷವೆಲ್ಲ ಶ್ರಮಪಟ್ಟು ಬೆಳೆದ ಶ್ರಮದ ಫಲ–ಬೆಳೆ ಮನೆಗೆ ಬಂದ ಬಳಿಕ ಎಲ್ಲರೂ ಸಂತೋಷದಲ್ಲಿರುವುದು ಸ್ವಾಭಾವಿಕ. ಆ ಸಂತಸ ಇಲ್ಲಿ ಕಂಡು ಬರುವುದು ನೃತ್ಯ ಸಂಗೀತಗಳಲ್ಲಿ. ಈ ಹಬ್ಬದಲ್ಲಿಯ ಮುಖ್ಯ ಕಾರ್ಯಕ್ರಮವೆಂದರೆ ಹೊಸ ಧಾನ್ಯದಿಂದಲೇ ಅಡಿಗೆ ಮಾಡಿ, ಎಲ್ಲರೂ ಕೂಡಿ ಊಟ ಮಾಡಿ ನಂತರ ಹಾಡು, ನೃತ್ಯ ಮುಂತಾದ ಮನೋರಂಜನ ಕಾರ್ಯಕ್ರಮಗಳನ್ನು ತೊಡಗುತ್ತಾರೆ. ಇದೆಲ್ಲ ನಡೆಯುವುದು ಬೈಲು ಸ್ಥಳಗಳಲ್ಲಿಯೆ. ಚಳಿಯ ಸಲುವಾಗಿ ಬೆಂಕಿ ಹೊತ್ತಿಸಿ, ಅದರ ಸುತ್ತಲೂ ಇವನ್ನೆಲ್ಲ ನಡೆಯಿಸುತ್ತಾರೆ. ಇದು ನೂರಾರು ವರ್ಷಗಳಿಂದ (ಸಾವಿರಾರು ವರ್ಷಗಳಿಂದ ಇದ್ದರೂ ಇರಬಹುದು) ನಡೆದು ಬಂದ ಪದ್ಧತಿಯೆಂದು ತೋರುತ್ತದೆ. ಭೂಮಿಯ ಸಾಗುವಳಿ ಇಲ್ಲದೆ ಬೇಟೆಯ ಮೇಲೆ ಅವಲಂಬಿಸಿದ್ದಾಗಿನ ಜನರಿಗೆ ಎಲ್ಲದೊಡನೆ ಕಲೆಯಲಿಕ್ಕೆ ಮತ್ತು ಮನೋರಂಜನೆ ಬೇಕೆ ಸಿಗುವುದೆಂದರೆ ರಾತ್ರಿಯಿಲ್ಲಿಯೇ; ಆಗ ಬೆಳಕಿನ ಸಲುವಾಗಿಯು ಹಿಂಸ್ರಪಶುಗಳ (ಗುಡ್ಡ ಮತ್ತು ಅರಣ್ಯಗಳ ಮಧ್ಯದಲ್ಲಿದ್ದದರಿಂದ ಹೆದರಿಕೆಗಾಗಿಯೂ ಬೆಂಕಿಯನ್ನು ಹೊತ್ತಿಸಿ ಕುಳಿತುಕೊಳ್ಳುವದ ನಾಡಿಕೆಯಾಗಿದ್ದಿರಬೇಕು. ಪೂರ್ವಕಾಲದ ಆ ಜನರ ಸಂಸ್ಕೃತಿ ಬೆಳೆದದ್ದು ಮತ್ತು ಇಲ್ಲಿಯ ವರೆಗೆ ಉಳಿದದ್ದು ಇದರಿಂದಲೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈಗೀಗ ಸುಧಾರಣೆ ಇಲ್ಲಿಗೂ ಬರತೊಡಗಿದೆ. ತಮ್ಮವರನ್ನು ಕೇಳೆಂದು ಭಾವಿಸುತ್ತ ಪಾಶ್ಚಾತ್ಯರ ರೀತಿ ನಡತೆಗಳೆಲ್ಲ ಅನುಕರಣೀಯವೆಂದು ತಿಳಿದು ಅವರಂತೆ ನಡೆಯುವುದೇ ಸುಧಾರಣೆಯೆಂದು ಭಾವಿಸುವ ಜನ ಹೆಚ್ಚಾಗುತ್ತಲಿದೆ. ಪಾಶ್ಚಾತ್ಯ ಧರ್ಮಾನುಯಾಯಿಗಳು (Foreign Missionries) ಇದಕ್ಕೆ ಉತ್ತೇಜನ ಕೊಡುತ್ತವೆ.

ಉಳಿದ ದಿವಸಗಳಲ್ಲಿ ಏನೇ ಆಗಲಿ; ಆದರೆ ಈ 'ಬಿಹು' ದಿವಸಗಳಲ್ಲಿ ಮಾತ್ರ ಎಲ್ಲರ ಮನಸ್ಸು ತಮ್ಮ ರೀತಿ ನಡತೆ ಕಲೆಗಳ ಕಡೆಗೆ ತಿರುಗುತ್ತದೆ. ಬೇರೆ ಬೇರೆ ಪ್ರದೇಶದ ಜನರು (Hill tribes) ತಮ್ಮ ವಿಶಿಷ್ಟವಾದ ರೀತಿಯಲ್ಲಿ ವಸ್ತ್ರ ಧರಿಸಿ, ನೃತ್ಯ ಸಂಗೀತಗಳಲ್ಲಿ ಭಾಗವಹಿಸುವುದನ್ನು ನೋಡುವುದೆಂದರೆ ಅದೊಂದು ಕಣ್ಣಿಗೆ ಹಬ್ಬ. ಈ ಮಾಘ ಬಿಹುದಲ್ಲಿ ಪುರಾತನ ಕಾಲದಿಂದಲೂ ನಡೆದು ಬಂದ ಪದ್ಧತಿಯನ್ನು ಇನ್ನೂ ಅನುಸರಿಸುತ್ತಾರೆ. ಬೆಳೆ ಬಂದ ನಂತರ ಬೈಲು (ತೆರವಾದ) ಹೊಲಗಳಲ್ಲಿಯೇ ಈ ಹಬ್ಬವನ್ನು — ಅಡಿಗೆ ಊಟಮಾಡಿ, ಆಚರಿಸುತ್ತಿರಬಹುದು. ಚಳಿಗಾಲದಲ್ಲಿ ಬೆಂಕಿ ಹೊತ್ತಿಸಿ ಅದರ ಸುತ್ತಲೂ ಜನರು ಕಲೆಯುವುದಂತೂ ಸ್ವಾಭಾವಿಕ. ಈ ಹಬ್ಬದಲ್ಲಿ ಅವರ ಎಲ್ಲ ಕಾರ್ಯಕ್ರಮಗಳೂ ಹೊಲಗಳ ಬೈಲಿನಲ್ಲಿಯೇ ನಡೆಯುವುದೊಂದು ವೈಶಿಷ್ಟ್ಯವಾಗಿದ್ದಿರಬೇಕು ಆದರೆ ಈಗ ಪಟ್ಟಣಗಳಲ್ಲಿ ಇಲೆಕ್ಟ್ರಿಕ್ ದೀಪಗಳಿದ್ದರೂ, ಬೈಲಿನಲ್ಲಿಯೇ ಬೆಂಕಿ ಹೊತ್ತಿಸಿ, ಅವಿವಿಗಳಲ್ಲಿಯಂತೆ ಹುಲ್ಲಿನ ಚಪ್ಪರ ಹಾಕಿ, ಆ ರಾತ್ರಿಯಲ್ಲಿ ಅಡಿಗೆ ಊಟ ಮಾಡುತ್ತಾರೆ. ಅವರ ನೃತ್ಯ, ಸಂಗೀತಗಳೂ ಅಲ್ಲಿಯೇ ನಡೆಯುತ್ತವೆ. ಇಲ್ಲಿಯ ಜನರ ಅಭಿರುಚಿ, ಕಲೆ, ಸಂಸ್ಕೃತಿಗಳನ್ನು ತಿಳಿದುಕೊಳ್ಳಬೇಕಾದರೆ ಅವರ ಈ ಎರಡೂ ಹಬ್ಬಗಳನ್ನು ನೋಡಬೇಕು.

ನಾಕ-ನರಕ

ಶ್ರೀ. ಎಂ. ಗಂಗಾಧರಭಟ್ಟ, ತೀರ್ಥಾಲು



ತುಂಬುಚಂದ್ರನು ಮೂಡುಗಡೆಯಲಿ
ಹೊನ್ನ ತೆರ ಹೊಳೆ-ಹೊಳೆಯಲು,
ರಸಿಕ ಜನತೆಯ ಸರಸದಾಟಕೆ
ನವ್ಯಚೇತನ ದೊರೆಯಲು—

ನಲ್ಲ-ನಲ್ಲೆಯರಿಲ್ಲ ಮೆಲ್ಲಗೆ
ಗಲ್ಲಗಲ್ಲಕೆ ತಂದರು,
ಮೆಲ್ಲ-ಮೆಲ್ಲನೆ ಅಧರಮಧುವನು
ಹೀರಿ ಸ್ವರ್ಗವ ಕಂಡರು.

ಹರ್ಮ್ಯ-ಹರ್ಮ್ಯಗಳೆಲ್ಲ ಕಾಂತಿಯ
ತುತ್ತತುದಿಯನ್ನೇರಿವೆ,
ಬಣ್ಣಬಣ್ಣದ ಹೂಗಳಿಂದಲಿ
ಭೂಮಿ ನಂದನವಾಗಿದೆ.

ರಂಭೆ-ಊರ್ವಸಿಯರನು ಮೀರಿಸಿ
ನೃತ್ಯ ಭರದಲಿ ಸಾಗಿದೆ;
ತಕತ ತಕಧಿಂ ಎಂಬ ನಾದವು
ಸರ್ವದಿಶೆಯಲಿ ಹರಡಿದೆ.

ವಿರಸವರಿಯದ ರಸಿಕಜನತೆಗೆ
ಸರಸವೇ ರಸದೂಟವು;
ಪ್ರೇಮಕಲಹದಿ ಮುನಿಸಿಕೊಳ್ಳುವ
ಪ್ರೇಮಿಗಳಿಗದೆ ಆಟವು.

ಹಗ್ಗ-ತಗ್ಗುಗಳೆಂಬ ಭಾವವ
ಅರಿಯದೆಂದೀ ಕೂಟವು
ಸರಸ ಸಂತೋಷವನು ಬೀರುವ
ಆಟ-ಕೂಟವೆ ನಾಕವು.

ಅಶೆಯೆಂಬುದು ವಾಶವಂದದಿ
ಮನುಜಬಾಳನು ಸುತ್ತಿರೆ—
ಮನವು ದಿನವೂ ಹಂಸತೂಲದ
ತಲ್ಪವನ್ನೆ ರಸುತ್ತಿರೆ—

ಬೆಂದ ಹೃದಯವು ಬೇಗೆ ತಾಳದೆ
ಸವಿಯ ಮಾತನು ಬಯಸಿರೆ—
ಸುತ್ತಲೆಲ್ಲವು ಕತ್ತಲಾಗಿಸೆ;
ದೀನಗಿಲ್ಲವು ಆಸರೆ.

ಇಹದ ನಂದನವನದ ಸುಖವನು
ಒಂದೆ ಅರೆಚಣ ಸವಿಯಲು
ಬಾಳಿನಮೃತವ ಕುಡಿದು ಬಾಳಿನ
ಅನುರದಿವಿಗೆ ಬೆಳಗಲು

ಜೀವ-ಜೀವನದಿಂದ ಗೋಳಿನ
ಬಾಳ ಪಾವನಗೊಳಿಸಲು
ಮನವು ಮಂಡಿಗೆ ಮೆಲ್ಲುತಿರುವುದು
ಭಾವಲೋಕವು ಹೆರಕಲು.

ನಸ್ಸು-ಭ್ರಷ್ಟಗಳೆಂಬ ದ್ವಂದ್ವಗ-
ಳೆಡೆಗೆ ಸಿಲುಕಿಹ ಜೀವವು
ಎತ್ತಲೆತ್ತಲೊ ಚೆವರಿ ಉರುಳಿದೆ
ಗಾಳಿಗೋಪುರ ಲೋಕವು

ಸತತ ಚಿಂತನ-ಬಾಳು ಪಾವನ-
ವಂತೆ ಮುಗಿಯದು ಶೋಕವು
ಕುಹಕವೆನ್ನುವ ಕಹಿಯ ಅಗರ
ನಿಜಕು ಮನುಜಗೆ ನರಕವು !

ಭಾರ್ಗವಿ

(ಪೌರಾಣಿಕ ಚೀನನ ರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

ದೃಶ್ಯ ೫

[ಅತ್ರಿ ಮಹರ್ಷಿಗಳ ಆಶ್ರಮ. ಸಂಧ್ಯಾಸಮಯ. ಅನಂದಿನೀದೇವಿ ಮತ್ತು ಅನಸೂಯಾದೇವಿ ಗಂಭೀರ ಚಿಂತೆಯಿಂದಿರುವರು]

ಅನಂ— (ನಿಡುಸುಯ್ದು) ಅನಸೂಯಾದೇವಿ, ನನ್ನ ನಿರೀಕ್ಷೆಯೆಲ್ಲಾ ನಿಷ್ಫಲವೇ? ನನ್ನ ಭರವಸೆಗಳೆಲ್ಲ ಗಾಳಿಪಾಲೇ? ಅಷ್ಟು ಕಾಲದಿಂದ ಬೆಳಸಿಕೊಂಡು ಬಂದಿದ್ದ ನನ್ನ ಬಯಕೆಯು ಬಳ್ಳಿ, ಬುಡ ತುಂಡಾಗಿ ಬತ್ತಿಹೋಗುವುದೇ?

ಅನ— (ಕಲಕಿದ ಮನಸ್ಸಿನಿಂದ) ನಾನೇನು ಹೇಳಲಿ? ಭರವಸೆಯ ಮಾತಾಡಿ ಆಸೆಯನ್ನು ಚಿಗುರಿಸಲು ನನ್ನ ನಾಲಗೆಯೇ ಏಳುತ್ತಿಲ್ಲ. ಭಾರ್ಗವಿ ಕಣ್ಮರೆಯಾಗಿ ಏಳು ವರ್ಷಗಳಾಗುತ್ತ ಬಂದವು ಕ್ಷಣಕ್ಷಣವೂ ಯುಗಯುಗವೆನಿಸಿವ ಈ ನಿರೀಕ್ಷೆಯು ತೀವ್ರವೇದನೆಯಲ್ಲಿ ನನ್ನೆದೆ ಬೆಂದು ಹೋಯಿತು. ಕೇವಲ ಆರು ವರ್ಷಗಳಲ್ಲಿ ಅನಂತಕಾಲವೇ ಕಳೆದು ಹೋಗಿ ಈಗೆಲ್ಲವೂ ತಟಸ್ಥವಾಗಿರುವಂತೆ ನನಗೆ ಭಾಸವಾಗುತ್ತಿದೆ. ನಿನ್ನೆ ಶುಭ ಸ್ವಪ್ನವನ್ನು ಕಂಡೆ. ಬೆಳಗಿನಲ್ಲಿ ಮನಸ್ಸು ಅಕಾರಣವಾಗಿಯೇ ತುಂಬಾ ಉಲ್ಲಸಿತವಾಗಿತ್ತು ಎಮ್ಮೊಡನೆ ಅನೇಕ ಶುಭಶಕುನಗಳನ್ನು ಕಂಡೆ ಭಾರ್ಗವಿಯ ಬರುವಿಕೆಯನ್ನೇ ಹಾರೈಸುತ್ತಿದ್ದ ನನ್ನ ಮನ, ಇವೆಲ್ಲ ಅವಳ ಬರುವನ್ನು ಸೂಚಿಸುವ ಶುಭ ಪೂರ್ವ ಸೂಚನೆಗಳೆಂದು ಭ್ರಮಿಸಿತು; ಬೆಳಗಿನಿಂದ ಅವಳಗಾಗಿ ಜೆ [ನಿಡುಸುಯ್ದು] ಈಗ ನನ್ನ ಭ್ರಮೆಯು ಹರಿಯಿತು. ಶುಭಸ್ವಪ್ನಕ್ಕೆಲ್ಲ ನನ್ನ ಸವಿಬಯಕೆಯು ಫಲನೇನೋ—ಶಕುನಗಳೆಲ್ಲ ನನ್ನ ಭ್ರಾಂತಿಯ ಫಲನೇನೋ! [ಕಣ್ಣೀರು ತುಂಬಿಕೊಂಡು] ಇಲ್ಲ. ಇಲ್ಲ. ಭಾರ್ಗವಿ ಮತ್ತೆ ಬರುವುದಿಲ್ಲ. ನಮ್ಮನ್ನು ತೊರೆದು ಹೋಗಿಬಿಟ್ಟಳು. ಹೌದು, ನಮ್ಮ ಬಯಕೆ ಬತ್ತಿತು. ಆಕೆ ನಿರಾಶೆಯಾಯಿತು ತೀವ್ರ ಬಯಕೆಯ ಬಳ್ಳಿ ತೀವ್ರ ನಿರಾಶೆಯು ವಿಷಫಲವಿತ್ತಿದೆ. ಹಿಗ್ಗಿನಬೆಟ್ಟ ಕೀರಿ ನಿರಾಶೆಯ ಪ್ರಪಾತಕ್ಕೆ ಕಾಲುಜಾರಿ ಬಿದ್ದಂತಾಗಿದೆ. ಎಂದೆಂದೂ ನಾನು ಭಾರ್ಗವಿಯನ್ನು ಕಾಣುವುದೇ ಇಲ್ಲವೇನೇ? ಈ ವೇದೆಯಳಲನ್ನು ಹೇಗೆ ಸಹಿಸಲಿ? (ನೋವಿನಿಂದ ಬಿಕ್ಕುವಳು)

ಅನಂ— ಅಮ್ಮಾ, ನಿನ್ನ ಈ ಸಂಕಟ ನೋಡಿ ನನ್ನೆದೆ ಬಿರಿಯುತ್ತಿದೆ. ತಾಯೆ ನನಗಷ್ಟು ಸಮಾಧಾನ ಹೇಳುತ್ತಿ? ನೀನೇ ಇಷ್ಟು ಧೈರ್ಯಗೆಟ್ಟರೆ ಹೇಗೆ? ಜ್ವಲಿಯು ನಂದಿಸಬೇಕಾದ ನೀರು ತಾನೇ ಬಿರಿಯಹತ್ತಿದರೆ ಗತಿಯೇನು? ಅನಸೂಯಾದೇವಿ, ನಿನ್ನ ಹಿಡಿ ಹೊಡಲ ಪುಣ್ಯ ದೊಡ್ಡದು ಭಾರ್ಗವಿ ಖಂಡಿತ ಬರುತ್ತಾಳೆ [ಆಲಿಸಿ] ಏನೋ, ಯಾರೋ ಬರುವ ಸದ್ದು ಕೇಳುತಿದೆ.

ಅನ — (ಕಣ್ಣೊರಸಿಕೊಂಡು) ಅಹುದೇ? ನನ್ನ ಎಡಗಣ್ಣೇನೋ ಅನಿಮಿತ್ತ ಹಾರುತಿದೆ ಭಾರ್ಗವಿಯ ಯೋಚನೆ ಬಂದಾಗಲೆಲ್ಲ ಶುಭ ಶಕುನಗಳೇ ಕಾಣುತ್ತಿವೆ. ಭಾರ್ಗವಿ ಖಂಡಿತ ಬರುವಳೆಂದು ನನ್ನೆದೆ ನುಡಿಯುತ್ತಿದೆ. ಆದರೆ ದೀರ್ಘನಿರೀಕ್ಷೆಯಿಂದ ಬಳಲಿದ ಮನ ನಂಬಿಕೆಯಲ್ಲೇ ನಂಬಿಕೆ ಕಳೆದುಕೊಂಡಿದೆ, ಒಮ್ಮೊಮ್ಮೆ ತೀರ ಅಧೀರಳಾಗುವೆನು. ಖಂಡಿತ ನಿನ್ನ ಮನಸ್ಸಿಗೇನೆನ್ನಿಸುತ್ತಿದೆ, ಹೇಳಿ ಭಾರ್ಗವಿ ಬರಬಹುದಲ್ಲವೇ?

ಅನಂ— ಖಂಡಿತವೂ ಬರುವಳು, ದೇವಿ! ಮಹಾಸಾಧ್ವಿಯಾದ ನಿನಗಾಗಿ ಶುಭಶಕುನಗಳು ಸುಳ್ಳಾಗವು. ಗೂಡಿಗೆ ಹಕ್ಕಿ ಹಿಂತಿರುಗಿ ಬರುವಂತೆ ಭಾರ್ಗವಿ ಬರುತ್ತಾಳೆ. ಓ, ಯಾರೋ ಬರುವಂತಿದೆ.

ಅನ— ಭಾರ್ಗವಿಯೇ ಇರಬಹುದೇ? [ಉತ್ಸುಕತೆಯಿಂದ ಎದ್ದು ನಿಲ್ಲುವಳು].

[ಶೀಲಾ ಸಾಲ್ಕು ವರ್ಷದ ಮಗ ಪ್ರಮೋದನೊಡನೆ ಪ್ರವೇಶಿಸುವಳು. ಪ್ರಮೋದ ಸುಂದರ ಬಾಲಕ.]

ಶೀಲಾ— ತೀರಿತೇನಪ್ಪಾ ನಿನ್ನ ಆಟ? ಅಮ್ಮಾ, ಇವನ ಕಾಟ ಸಹಿಸಲಾಗುವುದಿಲ್ಲ! ನಿನ್ನೊಡಗೆ ಬರಬೇಕೆಂದು ಒಂದೇ ಸನನೆ ರಚ್ಚೆ ಹಿಡಿದ. ನಾನು ಬರಲೇಬೇಕಾಯಿತು.

(ಪ್ರಮೋದ ಹರ್ಷದಿಂದ ಓಡಿಹೋಗಿ ಅನಸೂಯೆಗೆ ತಕ್ಕೈ ಬೀಳುವನು. ಅನಸೂಯೆ ಮುದ್ದಿಸುವಳು.)

ಪ್ರಮೋದ— [ಅನಸೂಯೆಯ ಕಣ್ಣೀರನ್ನು ಒರಸುತ್ತಾ] ಅತ್ತೇ, ಏಕೆ ಅತ್ತಿದೀರಿ? ನಿನಗೆ ಯಾರೇನು ಮಾಡಿದರು ಹೇಳಿ! ಮಾವ ಬೈದರೇ? ಅನಂದತ್ತೆ, ನೀವಾದರೂ ಹೇಳಿ, ಅತ್ತೆ ಏಕೆ ಅಳ್ತಾ ಇದ್ದರು?

ಅನ—(ಅವನನ್ನು ಮುದ್ದಿಸುತ್ತಾ) ಇಲ್ಲ ಮಗೂ, ನನ್ನ ಯಾರೂ ಏನೂ ಅನ್ನಲಿಲ್ಲ. ನನಗೇ ಏನೋ ನೆನಪಾಯಿತು. (ಹತ್ತಿರದಲ್ಲೇ ಇದ್ದ ಬುಟ್ಟಿಯಿಂದ ಉಂಡೆಗಳನ್ನು ತೆಗೆದುಕೊಡುವಳು.)

ಶೀಲಾ— ನೋಡಿದಿರಾ-ಇದಕ್ಕೇ ಇವನಿಷ್ಟು ತುಂಟಾಟ ಮಾಡುವುದು—ಉಂಡಿಪ್ರೀತ! ಮಧ್ಯಾಹ್ನದಿಂದ ಒಂದೇ ಸಮನೆ ನನ್ನನ್ನು ಗೋಳಾಡಿಸಿದ. ಹೋಗಲಿ, ನಿಮ್ಮ ಸಂಗಡಾನೇ ಅವನನ್ನು ಇಟ್ಟುಕೊಳ್ಳಿ. ನಿಮಗೂ ಬೇಜಾರು ಕಳೆಯುತ್ತೆ, ನನಗೂ ಕಾಟ ತಪ್ಪುತ್ತೆ.

ಪ್ರಮೋದ—(ಕೃತಕ ಗಾಂಭೀರ್ಯದಿಂದ) ಅತ್ತೇ, ತನಗೆ ಉಂಡೆ ಕೊಡಲಿಲ್ಲವೆಂದು ಅಮ್ಮನಿಗೆ ತುಂಬಾ ಸಿಟ್ಟು. ಅವಳಿಗೂ ಎರಡು ಉಂಡೆ ಕೊಡಿ.

ಅನ—ಎಂತಹ ಜಾಣ ಮರಿಯೋ ನೀನು ! ಇಲ್ಲೇ ಇದ್ದು ಬಿಡು. ನನ್ಮ ಮನೆಯೂ ತುಂಬಿದಂತಿರುತ್ತೆ.

ಪ್ರಮೋದ—ಆಗಲಿ, ಅತ್ತೆ. ಅಮ್ಮ ನನ್ನ ಮೇಲೆ ತುಂಬಾ ರೇಗ್ತಾಳೆ, ಅಪ್ಪ ಮಾತ್ರ ಏನೂ ಅನ್ನೋದಿಲ್ಲ. ಅಪ್ಪಾ ಬಂದೊಡನೇ ನನ್ನನ್ನೇ ಮೊದಲು ಕರೆದು ಮಾತನಾಡಿಸುತ್ತಾರೆ. ಅದಕ್ಕೆ ಅಮ್ಮನಿಗೆ ನನ್ನ ಮೇಲೆ ಸಿಟ್ಟು.

ಅನಂ— [ದೃಷ್ಟಿ ತೆಗೆದು ಲಟಕೆ ಮುರಿದು] ಅಹಾ, ಮುದ್ದು ಅರಗಿಣಿ! ಚೀತೋಹಾರಿಯಾಗಿ ಮಾತಾಡುತ್ತಾನೆ ನನ್ನ ಮಗ ಗೃಹಸ್ಥಾಶ್ರಮಿಯಾಗಿದ್ದರೆ ಇಂತಹ ಕಂದ ನನ್ಮನೆಯಲ್ಲೇ ಇರುತ್ತಿದ್ದ. ನಾನು ಆ ಭಾಗ್ಯ ಪಡೆಯಲಿಲ್ಲವಲ್ಲಾ.

ಅನ— ಭಾರ್ಗವಿಯೂ ಶೀಲಳ ಓರಗೆಯವಳು. ಶೀಲಳೇ ನನ್ನ ಮಗಳೆಂದು ಭಾವಿಸಿ ನನ್ನ ದುಃಖವನ್ನು ಎಷ್ಟೋ ಪಾಲು ಮರೆಯುತ್ತೇನೆ. ಅವರೂ ಒಮ್ಮೊಮ್ಮೆ ನೆನಪಿನ ನೋವು ಮರುಕಳಿಸಿ, ನನ್ನ ಕರುಳಲ್ಲಿ ಕೆಂಡ ಕಲಸಿದಂತಾಗುವುದು.

ಅನಂ— ನಿಮಗೂ ಈ ವೇಳೆಗೆ ಇವನಂತಹ ಮೊಮ್ಮಗನಿರಬೇಕಾಗಿತ್ತು.

ಅನ— (ನಿಡುಸುಯ್ದು) ನಾನೂ ಆ ಭಾಗ್ಯ ಪಡೆದು ಬಂದಿಲ್ಲ ನೇನೋ!

ಪ್ರಮೋದ—ಯೋಚಿಸಬೇಡಿ, ಅತ್ತೆ ಅಮ್ಮನೂ ಭಾರ್ಗವಿಯ ವಿಷಯ ಹೇಳುತ್ತಾ ದುಃಖಿಸುತ್ತಾಳೆ. ನೀವ್ಯಾರೂ ದುಃಖಿಸಬೇಡಿ. ನಾನು ಹೋಗಿ ಎಲ್ಲಿದ್ದರೂ ಭಾರ್ಗವಿಯನ್ನು ಹುಡುಕಿಕೊಂಡು ಬರುತ್ತೇನೆ.

ಶೀಲಾ—ನಿನ್ನ ಹಿಂದೆ ನಾನೂ ಬರಬೇಕಾಗುತ್ತೆ, ನೀನೆಲ್ಲಿ ತಪ್ಪಿಸಿಕೊಂಡು ಹೋಗುವೆಯೋ ಎಂದು ಕಾಯಲು !

ಪ್ರಮೋದ— [ಧೀರ ಗಾಂಭೀರ್ಯದಿಂದ] ನೀನೇನೂ ನನಗೆ ಕಾವಲಾಗಿ ಬರಬೇಕಾಗಿಲ್ಲ. ಭಗವಂತನೇ ನನಗೆ ಕಾವಲಾಗಿರುತ್ತಾನೆ. ಅತ್ತೇ, ಇನ್ನೆಂದೂ ಅಳಬೇಡಿ. ಅಪ್ಪನಿಗೆ ಹೇಳಿ, ನಾನು ಈ ದಿನವೇ ಹೊರಟು ಹುಡುಕಿಕೊಂಡು ಬರುತ್ತೇನೆ.

ಅನಸೂಯೆ—[ವಾತ್ಸಲ್ಯದಿಂದ ಅವನ ಮುಡಿನೇವರಿಸುತ್ತಾ] ಭಗವತಿಯು ದಯವಿಟ್ಟರೆ ಭಾರ್ಗವಿ ತಾನಾಗಿಯೇ ಬರುತ್ತಾಳೆ. ನನಗಾಗಿ ತಾಯಿ-ಮಕ್ಕಳೀಕೆ ಅಗಲಬೇಕಪ್ಪಾ ? ಭಾರ್ಗವಿಯ ಅಗಲಿಕೆಯಿಂದ ನಾನೆಷ್ಟು ಸಂಕಟ ಪಡುತ್ತಿದ್ದೇನೆ, ನೋಡು! ನಿನ್ನನ್ನು ಕ್ಷಣ ಕಾಣದಿದ್ದರೆ ನಿಮ್ಮಮ್ಮನೂ ಹಾಗೆಯೇ ಸಂಕಟ ಪಡುವುದಿಲ್ಲವೇ ?

ಅನಂ— ಇನ್ನೂ ಸ್ವಲ್ಪ ದೊಡ್ಡವನಾಗಪ್ಪ. ಆಮೇಲೆ ಹುಡುಕಿಕೊಂಡು ಬರುವೆಯಂತೆ.

ಶೀಲಾ—[ಅನಸೂಯೆಗೆ] ಅಮ್ಮಾ, ನಿಮ್ಮನ್ನು ಒಂದುದಿನ ನೋಡದಿದ್ದರೆ ನನಗಂತೂ ವಾಸನ್ನು ತಡೆಯುವುದಿಲ್ಲ. ಅದಷ್ಟು ಬೇಗ ಮನೆಗೆಲಸ ಮುಗಿಸಿಕೊಂಡು ನಿಮ್ಮಲ್ಲಿಗೆ ಬರಲು ಕಾತರಳಾಗಿರುತ್ತೇನೆ. ಭಾರ್ಗವಿ ಹೇಗೆ ವಾಸನ್ನನ್ನು ಬಿಗಿಹಿಡಿದು ಇಷ್ಟು ಕಾಲ ಸುಮ್ಮನಿದ್ದಾಳೆಯೋ ?

ಪ್ರಮೋದ— ಅತ್ತೆ, ಇದೆಲ್ಲಾ ಬಾಯಿತಿಂಡಿಯ ಮಾತು; ನಾನೆಷ್ಟು ಕೇಳಿಕೊಂಡರೂ ಇಲ್ಲಿಗೆ ತಕ್ಷಣ ಹೊರಡುವುದಿಲ್ಲ.

ಶೀಲಾ— ತುಂಟಪೋರ ! ನಿನಗಂತೂ ತಿಂಡಿಯ ಆಸೆ—ಸದಾ ಅದೇ ಚಿಂತೆ; ಮನೆಗೆಲಸ ಮುಗಿಯದ ಮುನ್ನ ನಾ ಹೇಗೆ ಹೊರಡಲಿ ? ನೋಡಿ, ಹೇಗೆ ನನ್ನನ್ನೇ ದೂರುತ್ತಾನೆ !

ಪ್ರಮೋದ— ಅಮ್ಮಾ, ಅಮ್ಮೋ ಅಲ್ಲಿ ಜಿಂಕೆ ಮರಿ ಓಡಿತು. ನೋಡಿಬರುತ್ತೇನೆ. (ಓಡಿಹೋಗಿ, ಕ್ಷಣಬಿಟ್ಟು ಹೂವೊಂದನ್ನು ಕೈಯಲ್ಲಿ ಹಿಡಿದು ಓಡಿಬರುವ) ಅಮ್ಮಾ, ಅಮ್ಮಾ, ಅಪ್ಪಾ ಬರ್ತಾ ಇದ್ದಾರೆ.

[ಸುಸುಂತ ಹರ್ಷೋತ್ಸಾಹದಿಂದ ಬರುವನು]

ಸುಸುಂತ— ತಾಯಿ, ಭಾರ್ಗವಿ ಬರುತ್ತಿದ್ದಾಳೆ !

(ಎಲ್ಲರೂ ಆಶ್ಚರ್ಯಗೊಳ್ಳುವರು. ಅನಸೂಯೆ ಆನಂದದಿಂದ ಕಣ್ಣೀರಿಡುವಳು. "ಎಲ್ಲಿ, ಎಲ್ಲಿ" ಎಂದು ಸಡಗರದಿಂದ ಶೀಲಾ ಕೇಳುವಳು.)

ತಪಸ್ಸೇ ಮೂರ್ತಿವೆತ್ತಂತೆ ಕಾಣುತ್ತಿದ್ದಾಳೆ, ಭಾರ್ಗವಿ! ಗುರುಗಳು ಯಾರೊಡನೆಯೋ ವತನಾಡುತ್ತ ಹಿಂದೆ ಬರುತ್ತಿದ್ದಾರೆ.

ಅನಂ— ಜ್ಞಾನೇಶ ಬಂದನೇ ?

ಸು— ಗುರುಗಳೊಡನೆ ಮಾತನಾಡುತ್ತಿದ್ದ ತೇಜಸ್ವಿ ಯಾರೋ ತಿಳಿಯದು ತಾಯಿ.

ಅನ— ಆತ ಜ್ಞಾನೇಶನೇ ಇರಬೇಕು.

ಅನಂ— ನಿನ್ನ ಬಾಯಿಹರಕೆಯಿಂದ ಆಶ್ಚರ್ಯವಾದರೆ ಸಾಕು, ದೇವಿ. (ಹರ್ಷೋದ್ವೇಗದಿಂದ ಅನಸೂಯೆಯನ್ನು ಆಲಂಗಿಸಿ, ಆನಂದಾಶ್ರು ಸುರಿಸುವಳು).

ಪ್ರ— ಅಪ್ಪಾ. ನಾನು ಈಗ ತಾನೇ ಹೋಗಿ ಅವರನ್ನು ಹುಡುಕಿಕೊಂಡು ಬರುವೆನೆಂದೆ. ಅವರು ಬಂದೇ ಬಿಟ್ಟರು ! ನಾನು ಹೊರಟಿದ್ದರೆ ಸಿಕ್ಕೇ ಬಿಡುತ್ತಿದ್ದರು ! ಎಲ್ಲಪ್ಪಾ ಅವರು ? ನಾನು ನೋಡಬೇಕು !

(ಎಲ್ಲರೂ ಕುತೂಹಲದಿಂದ ಮುಂದೆ ಬರುವರು)

[ಭಾರ್ಗವಿ ಧಾವಿಸಿ ಬಂದು ತಾಯಿಗೆ ನಮಸ್ಕರಿಸುವಳು. ಅನಸೂಯೆಯು ಸುಗಳನ್ನೆಬ್ಬಿಸಿ, ಅಪ್ಪಿಕೊಂಡು ಕಣ್ಣೀರಿಡುವಳು ಅವಳ ಮುಖ ಮೈಯನ್ನೆಲ್ಲಾ ನೇವರಿಸುವಳು]

ಅನ—(ಅದ್ಗದಿತೆಯಾಗಿ) ಕಂದ, ಕಡೆಗಾದರೂ ನೆನಪಾಯಿತೇ?

ಭಾ— (ತಾನು ಕಣ್ಣೀರು ತುಂಬಿಕೊಂಡು) ಅಮ್ಮಾ, ನಿನಗೆ ತುಂಬಾ ನೋವಿತ್ತೆ. ಕ್ಷಮಿಸು ಎಷ್ಟು ನಲುಗಿದ್ದೀಯಾ. ಈ ಮಗು ಯಾರು ? ತವ್ಮನೇನು?

ಅನ—ಅಲ್ಲ ಕಂದ, ಅವನೇ ಶೀಲಾಳ ಮಗ. ನೀನೆಷ್ಟು ಬಡವಾಗಿದ್ದೀಯಾ— ಕೂದಲೆಲ್ಲಾ ಜಡೆಗಟ್ಟಿಹೋಗಿದೆ—

ಭಾ— (ನಸುನಗುತ್ತಾ) ಇನ್ನೆಲ್ಲೂ ಹೋಗುವುದಿಲ್ಲಮ್ಮಾ; ನಿನ್ನ ಅರೈಕೆಯ ಅವ್ಯತವನೀಂಟುತ್ತಾ ಅನಂದದಿಂದಿರುತ್ತೆವೆ.

ಶೀಲಾ— ಭಾರ್ಗವಿ, ನಿನ್ನ ಬಡ ಸ್ನೇಹಿತೆ ನೆನಪಿದ್ದಾಳೆಯೇ?

ಭಾ— (ಅದರದಿಂದ ಶೀಲಳನ್ನು ಆಲಿಂಗಿಸುವಳು) ನಿನ್ನ ಮರೆಯಲು ಸಾಧ್ಯವೇ ಶೀಲಾ? ಹರಿಣಿ ನಿನ್ನ ರಕ್ಷಣೆಯಲ್ಲಿ ಸುಖವಾಗಿರುವುದೇ?

ಶೀ— ಓ ಹರಿಣಿಯನ್ನೂ ಮರೆತಿಲ್ಲನೇ? ಇಷ್ಟು ದಿನ ಹೇಗೆ ನನ್ನನ್ನೆಲ್ಲಾ ತೊರೆದಿದ್ದೆಯಮ್ಮಾ!

ಸುಮಂತ— (ಮುಂದೆ ಬಂದು) ಭಾರ್ಗವಿ, ಸುಮಂತನ ನೆನಪಿದೆಯೇ? ಇದೋ ನಮಸ್ಕರಿಸುವೆ. (ನೆಲಮುಟ್ಟಿ ನಮಸ್ಕರಿಸುವ)

ಭಾ— (ಹಿಂದಕ್ಕೆ ಸರಿದು) ಕಿರಿಯಳಾದ ನನಗೇಕೆ ನಮಿಸುವೆ? ಪರಮಾತ್ಮನಿಗೆ ನಮಿಸಿ.

ಸು— ಪರಮೇಶನ ಪರಮಭಕ್ತಳಾದ ನೀನು ಸಹ ಪೂಜಾರ್ಹಳೆ.

ಭಾ— ಶೀಲಾ, ನಿನ್ನ ಪತಿ ಯಾರು? (ಶೀಲಾ ನಾಚಿ ಸುಮಂತನ ಮುಖ ನೋಡುವಳು) ಓ, ಅಪೂರ್ವವಾಯಿತು. ಬಹಳ ಸಂತೋಷ. ಸುಮಂತಾ, ನನ್ನ ಗೆಳತಿ ತುಂಬ ಪುಣ್ಯವತಿ.

ಶೀ— (ನಸುನಗುತ್ತ) ನಿನ್ನ ಗೆಳತಿಯಾದ ಕಾರಣದಿಂದಲೇ ನನ್ನನ್ನೊಪ್ಪಿ ಕೈಹಿಡಿದರಂತೆ!

ಭಾ— ಓ, ಹಾಗೋ. (ಮೂವರೂ ನಗುವರು).

[ಅತ್ರಿ— ಜ್ಞಾನೇಶರು ಪ್ರವೇಶಿಸುವರು. ತಾಯಿಯನ್ನು ಕಂಡು ಅಚ್ಚರಿಯಿಂದ ಅಕೆಯಿಡಿಗೆ ನಮಸ್ಕರಿಸುವನು. ಅನಂದಿನಿ ಹರ್ಷಾತಿರೇಕದಿಂದ ಕಣ್ಣೀರಿಡುವಳು]

ಜ್ಞಾ— ಅಮ್ಮಾ, ಇನ್ನು ಅಳಬೇಡ. ಇನ್ನು ಮುಂದೆ ನಿನ್ನ ಕಣ್ಣಿಂದ ಹನಿನೀರು ಬೀಳದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ. ನಿನ್ನ ಬಿಟ್ಟು ಇನ್ನೆಲ್ಲಿಗೂ ಹೋಗುವುದಿಲ್ಲ.

ಅನಂ— ಮಗೂ, ಜ್ಞಾನೇಶ, ಇದು ಸತ್ಯನೇ? ಕನಸಲ್ಲನೇ? ಈ ಸಂತೋಷಾನ ಕಾಣುವ ಭಾಗ್ಯ ನಿಜವಾಗಿ ನನಗಿದೆಯೇ? ಎಷ್ಟೋ ದಿನ ಕನಸಿನಲ್ಲಿ ನಿನ್ನ ಬರವನ್ನು ಕಂಡು ಸತ್ಯವೆಂದು ಭ್ರಮಿಸಿದೆ. ಕಣ್ಬಿಟ್ಟೊಡನೆ ಕನಸು ಒಡೆಯುವುದು. ಹಿಗ್ಗಿದ ಹೃದಯ ಕುಗ್ಗಿ ಕಳವಳಿಸುವುದು. ಇದೂ ಸಹ ಕನಸಲ್ಲವಷ್ಟೇ?

ಜ್ಞಾ— (ಸಂತೈಸುತ್ತ) ಕನಸಲ್ಲಮ್ಮ, ನಿಜ! ನನ್ನಿಂದಾಗಿ ತುಂಬಾ ನೊಂದಿದೀಯ; ಇನ್ನೆಂದೂ ನಿನಗೆ ನೋವು ಕೊಡೆವಮ್ಮ; ಸತ್ಯವಾಗಿಯೂ ನೋವು ಕೊಡೆನಮ್ಮ!

ಅನಂ— (ಜ್ಞಾನೇಶನ ಮುಖವನ್ನೆಗಳನ್ನು ನೇವರಿಸುತ್ತ) ಮಗನೇ, ಎಷ್ಟು ಕಂದಿಕುಂದಿದ್ದೀಯಾ! ನಿಮ್ಮಣ್ಣನೂ ಕಾಶಿಗೆ ಹೋಗಿಬಿಟ್ಟ. ನನ್ನ ಸ್ಥಿತಿನ ಊಹಿಸಿಕೊ— ಅನಸೂಯಾದೇವಿಯ ದಯೆಯಿಂದ ನಾನು ಈ ವರೆಗೆ ಜೀವ ಹಿಡಿದೆ. ಇನ್ನೆಂದೂ ನನ್ನ ಬಿಟ್ಟು ಹೀಗೆ ಹೋಗಬೇಡ ಕಂದಾ.

ಭಾ— (ಶೀಲಳಿಗೆ, ಮೆಲ್ಲನೆ) ಈಕೆ ಯಾರು?

ಶೀ— ಇವರು ಅನಂದಿನೀದೇವಿ. ಅವರ ಯಾರು?

ಭಾ— (ನಸುನಾಚಿ) ಅಕೆಯ ಮಗನೆಂದು ಕಾಣಿತ್ತಿಲ್ಲವೇ? ಅಕೆಗೆ ನಮ್ಮ ಆಶ್ರಮದ ಪರಿಚಯ ಇತ್ತೀಚೆಗಾಯಿತೇ?

ಶೀ— ನೀನು ಗೃಹತ್ಯಾಗ ಮಾಡಿದ ಸುದ್ದಿ ಕೇಳಿ, ನಿಮ್ಮ ತಾಯನ್ನು ಸಂತೈಸಲು ಬಂದರು. ಆಗಿನಿಂದಲೂ ಪರಿಚಯ ಬೆಳೆದು ಸ್ನೇಹ ವೃದ್ಧಿಸಿದೆ.

(ಶೀಲಾ ಅನಸೂಯಾ ಒಳಗಡೆಗೆ ಹೋಗಿ ಹಣ್ಣು ಹಾಲು ತರುವರು)

ಅನ— ಅನಂದಿನಿದೇವಿ, ಬಳಲಿಬಂದಿರುವ ಮಕ್ಕಳು ಸ್ವಲ್ಪ ಫಲಾಹಾರ ತೆಗೆದುಕೊಂಡು ದಣಿವಾರಿಸಿಕೊಳ್ಳಲಿ.

ಅನಂ— ಹಾಗೇ ಆಗಲಿ. [ಭಾರ್ಗವಿಯನ್ನು ತುಂಬುಗಣ್ಣುಗಳಿಂದ ನೋಡುತ್ತ ಮಗಳೇ, ನಿನ್ನ ಹೆಸರೇನು?

ಭಾ— [ಅಕೆಗೆ ನಮಸ್ಕರಿಸಿ] ಭಾರ್ಗವಿ ಎನ್ನುತ್ತಾರೆ.

ಅನಂ— ಅಹಾ ಎಷ್ಟು ಮಧುರ ಶಂಕರ್ನನಿ. ನನಗೆ ಮಗಳಿಲ್ಲವೆಂಬ ಕೊರಗು ಇಂದಿಗೆ ತಪ್ಪಿತು. [ಭಾರ್ಗವಿಯು ನುಡಿ ನೇಮಿಸುವರು]

ಅತ್ರಿ— (ನಸುನಗುತ್ತಾ) ತಾಯಿ, ಇನ್ನೂ ಸಂಕೋಚವೇಕೆ? ಭಾರ್ಗವಿಯ ಬರುವಿಕೆಗಾಗಿ ಅಷ್ಟು ಕಾಲದಿಂದ ನೀವೂ ತಪಿಸುತ್ತಿದ್ದಿರಿ. ಇನ್ನು ಅನಳನ್ನು ನಿಮ್ಮ ಮನೆಯ ಮಗಳನ್ನಾಗಿಯೇ ಮಾಡಿಕೊಳ್ಳಬಹುದು. ನನ್ನ ಅಭಿಪ್ರಾಯಕ್ಕೆ ಭಾರ್ಗವಿ-ಜ್ಞಾನೇಶರ ಸಮ್ಮತಿಯಿದೆಯಷ್ಟೆ [ಇಬ್ಬರೂ ಲಜ್ಜಿತರಾಗಿ ನೆಲ ನೋಡುವರು] ದೇವಿಯ ಅಭ್ಯಂತರವೂ ಇಲ್ಲವಷ್ಟೆ?

ಅನ— ಇದಕ್ಕಿಂತಲೂ ಹೆಚ್ಚಿನ ಪ್ರಿಯಸಂಗತಿಯಾವುದು? ನನ್ನೆದೆಯು ಹಂಬಲವ ಹೂ ಈ ದಿನ ಅರಳಿತು.

ಅನಂ— ಆಹಾ! ಇದೆಲ್ಲಾ ಭ್ರಮೆಯೋ, ನಿಜವೋ? ಇದೆಲ್ಲವೂ ಖಂಡಿತ ಕನಸಾಗದಿರಲಿ!

ಜ್ಞಾನೇಶ— ಏಕಮ್ಮಾ ಹೀಗೆ ಕಳವಳಿಸುತ್ತಿರುವೆ?

ಅನಂ — ನಾ ಪಟ್ಟ ಯಾತನೆಯ ನೀನೇನು ಬಲ್ಲೆ? ಹೃದಯದ ಬಯಕೆಗಳೆಲ್ಲ ಬತ್ತಿ ತಹತಹಿಸುತ್ತಿದ್ದಾಗ ಒಮ್ಮೆಗೇ ಅವ್ಯತಸೇಚನೆಯಾದಂತಿದೆ. ಅಳಬೇಕೋ, ನಗಬೇಕೊ, ತೋರದಂತಾಗಿದೆ!

ಅನ— ನಗಬೇಕು, ಅನಂದಿಸಬೇಕು. ಬನ್ನಿ ಅನಂದಿನಿದೇವಿ! ಎಲ್ಲರಿಗೂ ಹಣ್ಣು ಹಾಲನ್ನು ಹಂಚುವ! ಎಲ್ಲರೂ ತಣಿಯಲಿ [ಇಬ್ಬರೂ ನಗುವರು.]

ಸುಮಂತ— [ಜ್ಞಾನೇಶನೆಡೆಗೆ ಹೋಗಿ] ಜ್ಞಾನೇಶ, ಬಹು ಕಾಲದಿಂದ ನಿನ್ನನ್ನು ಕಂಡಿಲ್ಲವಾಗಿ ನಿನ್ನನ್ನು ತಕ್ಷಣ ಗುರುತಿಸಲಿಲ್ಲ. ಬಾಲ್ಯದ ಮಿತ್ರ ಸುಮಂತನ ನೆನಪಿದೆಯೇ?

ಜ್ಞಾ— ಓಹೋ ನೆನಪಿದೆ. ಕುಶಲವೇ ಸುಮಂತ? (ಪರಸ್ಪರ ವಂದಿಸುವರು)

ಅತ್ರಿ— ಭಗವಂತನ ಸಂಕಲ್ಪ! ಭಾರ್ಗವಿ ಜ್ಞಾನೇಶರು ಸಂಧಿಸಿ ಒಂದಾಗಿ ಬರುವಂತೆ ಮಾಡಿತು, ಅವನ ಕೃಪೆ.

ಅನಂ— ಇಂತಹ ಸುದಿನ ಕಾಣಲು ನೂರುವರ್ಷದ ನೋವನ್ನಾದರೂ ಮುಂಗಬಹುದು.

ಪ್ರಮೋದ— ಅಮ್ಮಾ, ಇವರಿಬ್ಬರನ್ನೂ ನಮ್ಮ ಮನೆಗೆ ಕರೆದು ಕೊಂಡು ಹೋಗೋಣ

ಶೀ— ನಿನ್ನನ್ನೇ ಅವರ ಮನೆಗೆ ಕಳುಹಿಸಿ ಬಿಡುತ್ತೇವೆ.

ಪ್ರಮೋದ—ಈಗ ತಾನೇ ಕಾಡಿನಿಂದ ಬರ್ತಾ ಇದಾರೆ. ಅವರಿಗೆ ಮನೆ ಎಲ್ಲಿದೆ ?

ಅನ—(ನಗುತ್ತಾ) ಎಲ್ಲಾ ಮನೆಗಳೂ ಅವರವೆ. ಈ ಮನೆ, ಅನಂದತ್ತೆಯಮನೆ ಎರಡೂ ಅವರಿಗೇ ಸೇರಿದ್ದು.

ಅತ್ರಿ—ಅನಂದಿನಿದೇವಿ. ನಿಮ್ಮ ಪೂಜ್ಯಪತಿಗೆ ಈ ಕ್ಷಣವೇ ಸುದ್ದಿ ಕಳುಹಿಸುತ್ತೇನೆ, ಒನ್ನಿ. ನಿಮ್ಮೊಡನೆ [ಕೆಲವು ಮಾತುಗಳನ್ನಾಡಬೇಕು. ಬಾ ದೇವಿ!

ಸುಮಂತ— [ಉತ್ಸಾಹದಿಂದ] ಗುರುಗಳೇ, ಈ ಶುಭ ಸಮಾಚಾರವನ್ನು ನಾನೇ ತಿಳಿಸಿ ಬರಲೇ ? [ಅತ್ರಿ ಮಹರ್ಷಿ ಸಮ್ಮತಿಸುವರು]

[ಅನಂದಿನಿ, ಅನಸೂಯಾ ಅತ್ರಿ, ಸುಮಂತ ಹೊರಡುವರು. ಪ್ರಮೋದ ಕಾತರತೆಯಿಂದ ನೋಡುವನು.]

ವ್ರ— ಅಮ್ಮಾ, ಇವರನ್ನು ಬಿಟ್ಟು ಎಲ್ಲರೂ ಹೊರಟರಲ್ಲಾ! ಇವರು ಮತ್ತೆ ಕಾಡಿಗೆ ಹೊರಟು ಬಿಟ್ಟರೆ ?

ಅತ್ರಿ— (ಹಿಂತಿರುಗಿ ನಗುತ್ತಾ) ಕಾಡಿನಲ್ಲಿ ನಿರ್ಧರಿಸಿಯೇ ಊರಿಗೆ ಬಂದಿದ್ದಾರೆ. ಆದ್ದರಿಂದ ಮತ್ತೆ ಕಾಡಿಗೆ ಹೋದಾರೆಂಬ ಭೀತಿಯಿಲ್ಲ.

[ಶೀಲಾ, ಪ್ರಮೋದ ಅತ್ರಿ—ಎಲ್ಲರೂ ಹೊರಡುವರು] ಭಾರ್ಗವಿ ಜ್ಞಾನೇಶ್ವರಿಬ್ಬರೇ ಉಳಿಯುವರು. ಒಬ್ಬರ ಮುಖವನ್ನೊಬ್ಬರು ನೋಡುವರು]

ಜ್ಞಾ— ಈಗೇನು ಮಾಡುವುದು ಭಾರ್ಗವಿ ?

ಭಾ— ನಮಗೀ ಭಾಗ್ಯ ಕರುಣಿಸಿದ ವಿಶ್ವೇಶ್ವರನನ್ನು ಪ್ರಾರ್ಥಿಸೋಣ.

ಜ್ಞಾ— ನಿಜ ನನ್ನ ಬಾಳ ಪ್ರೇರಕ ಶಕ್ತಿಯಾಗಿ, ನನ್ನ ಪ್ರಾಣದ ಪ್ರಣವವಾಗಿ ನಿನ್ನಂಥ ಅನರ್ಘ್ಯ ರತ್ನವನ್ನು ಕೃಪೆಮಾಡಿದುದಕ್ಕಾಗಿ ಆ ನಿಯಾಮಕನನ್ನು ಪ್ರಾರ್ಥಿಸುವೆ.

[ಇಬ್ಬರೂ ಮುಂಡಿಯೂರಿ, ಕಣ್ಮುಚ್ಚಿ ಧ್ಯಾನಸ್ಥರಾಗುವರು, ಕ್ಷಣ ಕಾಲದ ನಂತರ ಅನಸೂಯೆ ಅನಂದಿನಿ ಪ್ರವೇಶಿಸುವರು.

ಅನಂದಿನಿ— ನಮ್ಮ ಅನಂದಪಲ್ಲಿ ಆ ವಿಷಯ ಹೊಳೆಯಲೇ ಇಲ್ಲ. ನನ್ನ ಪತಿಯೂ ಪುತ್ರನನ್ನು ಕಾಣಲು ಎಷ್ಟು ಕಾತರರಾಗಿರುವರೋ. ಸುಮಂತನ ಮಾತು ಕೇಳಿಬೊಡನೇ ಧಾವಿಸಿಬರುವರು. ನಾವೂ ಅರ್ಧದಾರಿಯಲ್ಲಿ ಅವರನ್ನು ಸಂಧಿಸುವ.

ಅನ— ಹೌದು. ಸಂಧಿಸಿ ಸ್ವಾಗತಿಸಿ ಕರೆತರುವ ಈ ದಿನ ನಮ್ಮ ಆತಿಥ್ಯ ಸ್ವೀಕರಿಸಿ ಇಲ್ಲಿಯೆ ತಂಗಬೇಕು.

[ಅವರು ಧ್ಯಾನಸ್ಥರಾಗಿರುವುದನ್ನು ಕಂಡು ಚಕಿತರಾಗುವರು.]

ಓ, ನಾವೇಕೆ ಸುಮ್ಮನೆ ನಿಂತಿರುವುದು ? ಈ ಸುವರ್ಣಸಂಧಿಯನ್ನು ನಾವೇಕೆ ಕಳೆದು ಕೊಳ್ಳೋಣ? ನಾವೂ ಪ್ರಾರ್ಥಿಸೋಣ. [ಮಕ್ಕಳ ಇಕ್ಕೆಡೆಗಳಲ್ಲೂ ಮುಂಡಿಯೂರಿ ಕಣ್ಮುಚ್ಚಿ ಪ್ರಾರ್ಥಿಸುವರು. ಹಿಂಬದಿಯಿಂದ ಸುಮಧುರ ಸಂಗೀತ ಕೇಳಿ ಬರುವುದು.]

ಅತ್ರಿ— (ಪ್ರವೇಶಿಸುತ್ತಾ) ಇಷ್ಟು ಹೊತ್ತಾದರೂ ಮಕ್ಕಳನ್ನು ಕರೆತರುವೆವೆಂದು ಬಂದ ತಾಯಿಯರು ಬರಲಿಲ್ಲವಲ್ಲಾ— ವಾತ್ಸಲ್ಯ ವಾರಿಧಿ ಉಕ್ಕೇರಿ ಹೊತ್ತಿನ ಪರಿವೆಯೇ ಮರೆತಿದೆಯೇನೋ [ಒಳಗಿನ ದೃಶ್ಯನೋಡಿ) ಇದೇನು ಭವ್ಯದೃಶ್ಯ ! ಸೂಜಿಗಲ್ಲು ಕಬ್ಬಿಣವನ್ನೆಳೆವಂತೆ, ತನ್ನೆಡೆಯ ಕಬ್ಬಿಣವನ್ನೂ ಸೂಜಿಕಲ್ಲಾಗಿ ಮಾರ್ಪಡಿಸುವಂತೆ ಆತ್ಮಜ್ಞಾನಿಗಳಾದ ಇವರ ಪ್ರಭಾವವೂ ಸಹ. ಅಗ್ನಿಗೆರೆದ ಆಜ್ಯದಂತೆ ಪರಸ್ಪರ ಸ್ನೇಹದಿಂದ ಜ್ಞಾನಜ್ಯೋತಿಯನ್ನು ಬೆಳಗಿಸಿಕೊಂಡಿರುವ ಭಾರ್ಗವೀ ಜ್ಞಾನೇಶ್ವರ ದಿವ್ಯ ಪ್ರಭಾವಕ್ಕೆ ಸಿಕ್ಕು ಇವರೂ ಪೈಮರೆತಿದ್ದಾರೆ. ನಾನೇಕೆ ಈ ಸುಸಂಧಿಯನ್ನು ಕಳೆದುಕೊಳ್ಳಲಿ. ಇವರೆಲ್ಲರ ಕಲ್ಯಾಣಕ್ಕಾಗಿ ಆ ಜಗತ್ಕಾರಣನನ್ನು ನಾನೂ ಪ್ರಾರ್ಥಿಸುತ್ತೇನೆ. [ಅನಸೂಯೆಯ ಪಕ್ಕದಲ್ಲಿ ಮುಂಡಿಯೂರಿ ಕುಳಿತು ಧ್ಯಾನಸ್ಥರಾಗುವರು ವಾದ್ಯ ಘೋಷ ತೀವ್ರವಾದಂತೆ ನಿಧಾನವಾಗಿ ತೆರೆ ಬೀಳುವುದು]

[ಸಂಪೂರ್ಣಂ]

(—೩೪೫ನೆಯ ಪುಟದಿಂದ ಬಂದುದು)

ಗೋಪಣ್ಣ ಊಟ ಮುಗಿಸಿದ. ಮಲಗಿದ. ಆದರೆ ನೂರಾರು ಚೇಳುಗಳು ಕಡಿಯುತ್ತಿದ್ದಂತೆ ಅವನಿಗೆನ್ನಿಸಿತು. ಅಂಗಡಿಯಲ್ಲಿ ಕಂಡ ನೀಲವ್ವ, ತಂಗಿ ಸುಶೀಲೆ, ಪಂಚರು, ಕಲ್ಲನ ಮುದಿಯೆತ್ತುಗಳು, ಗೂಳಿ, ಶೇಷಾಚಾರಿ, ಶೆಟ್ಟರ ಮಗ, ರೋಗಗ್ರಸ್ಥ ಕಲ್ಲಪ್ಪ ಮತ್ತು ಅವನ ಹೆಂಡತಿ, ಗೌಡರ ಬಸಪ್ಪ, ಹರೀಪಂತ—ಎಲ್ಲರೂ ಪಗಡೆಗಳೇ! ಇವರೆಲ್ಲರನ್ನು ಯಾರು ಆಡಿಸುವರು? ಏಕೆ? ಹೇಗೆ? ಈ ಪ್ರಶ್ನೆಗಳಿಗೆ ಉತ್ತರಗಳಿಲ್ಲ. ಮನುಷ್ಯ ಸರ್ವಜ್ಞಾನಿಯಾಗಿರಬೇಕು; ಇಲ್ಲದಿದ್ದರೆ ತಮ್ಮ ಮಗಳು ಸಾವಿತ್ರಿಯಂತಾದರೂ ಇರಬೇಕು. ಮನುಷ್ಯ ಒಂದು ಕಲ್ಲಿನಂತಿದ್ದರೂ ಒಳ್ಳೆಯದೇ. ಅದಕ್ಕೆ ಯಾವ ಸುಖ? ಯಾವ ದುಃಖ? ಯಾವುದಕ್ಕೂ ಮಹತ್ತ್ವ ಕೊಡದ ಬಸಪ್ಪನ ಗುಂಗಿರಲಿ! ದಾಟದ ಜೀವನದತ್ತ ಪ್ರೀತಿಯ ದುಃಖದ ನೋಟ ಬೇಡ. ಕೆಸರಿನಲ್ಲಿಯ ಕಮಲದಂತೆ ನಾವಿರಬೇಕು. ಜೀವನದ ಭವಿಷ್ಯದಲ್ಲಿ ಸುಖದ ಕನಸು ಕಾಣುವ ಆಶೆ ಬೇಡ. ಆದರೆ ಇದು ಹೇಗೆ ಸಾಧ್ಯ? ನಾವೆಲ್ಲ ಪಗಡೆಗಳು.

ಗೋಪಣ್ಣನಿಗೆ ಏನೂ ತಿಳಿಯಲಿಲ್ಲ. ಬಿತ್ತಿದ ಬೀಜಕ್ಕೆ ಮೊಳಕೆ ಹೇಗೆ ಒಡೆಯುತ್ತದೆ? ಜೇನು ಹುಟ್ಟು ಹೇಗೆ ಕಟ್ಟುತ್ತದೆ? ಹೂವುಗಳಿಗೆ ಮಾತ್ರ ವಾಸನೆ ಏಕೆ? ಕಲ್ಲಪ್ಪನ ಬಾವಿಯಲ್ಲಿ ನೀರು; ಬಸಪ್ಪನ ಬಾವಿಯಲ್ಲಿ ಏಕಿಲ್ಲ? ಸಂಪಿಗೆಗೆ ಸುವಾಸನೆ, ದಾಸಾಳಕ್ಕೆ ಇಲ್ಲ. ಎಲ್ಲ ಒಗಟು, ಒಗಟು, ಒಗಟು.

ಗೋಪಣ್ಣ ಬೇಸತ್ತ, ಕಣ್ಣಿಗೆ ಜೊಂಪು ಹಿಡಿಯಿತು. ಮರುದಿನ ಕಬ್ಬಿಗೆ ನೀರುಣ್ಣಿಸುವುದಿತ್ತು.

ಶ್ರೀ. ಕಣವಿಯವರ ಕವಿತಾವಿತಾನ

(ಕವಿಯು ಮತ್ತು ಕೃತಿಯು ಪರಿಚಯ)

ಶ್ರೀ. ಎಸ್. ಭೀಮಭಟ್ಟ ' ಸಾಹಿತ್ಯಶಿರೋಮಣಿ ' ಕನ್ಯಾನ (ದ. ಕ.

ನಮ್ಮ ನಾಡಿನ ಇಂದಿನ ತರುಣ ಕವಿಗಳಲ್ಲಿ, ಶ್ರೀ. ಜೆನ್ನವೀರ ಕಣವಿಯವರು ಮೇಲಿನ ಸ್ಥಾನದಲ್ಲಿ ಕಾಣುತ್ತಿದ್ದಾರೆ. ಇದಕ್ಕೆ ಅವರ ಕೃತಿಗಳಲ್ಲಿಯ ಗುಣಗಳೇ ಕಾರಣವಾಗಿವೆ ಹೊರತು ಲೌಕಿಕ ವಿಚಾರಗಳಾವುವೂ ಕಾರಣವಾಗಿಲ್ಲ.

ಕನ್ನಡ ಸಾಹಿತ್ಯರಂಗವಲ್ಲಿಯಂದು ಕಾವ್ಯಬಾಗಿಗಳೇ ಪ್ರಮುಖ ಸ್ಥಾನವಹಿಸಿ ಮೆರೆಯುತ್ತಿದ್ದರೂ, ಅಲ್ಲಲ್ಲಿ ಹಲವಾರು ಕವಿಗಳು ಕಾವ್ಯ ಮಾರ್ಗದಲ್ಲಿ ಅಜಪ್ರವಾಗಿ ನುನ್ನಡೆಯುತ್ತಿರುವುದು ನೆನ್ಮದಿಯ ವಿಚಾರವಾಗಿದೆ. ಕನ್ನಡ ಕಾವ್ಯ ಪ್ರಕಾರವೂ ಇಂದು ಹೊಸದಾಗಿಯನ್ನು ಹಿಡಿದು ಸಾಗಿದೆ. ಇಂಥ ಕಾವ್ಯಪ್ರಕಾರದ ಬೆಳವಣಿಗೆಗೆ ಕಾರಣರಾದ ತರುಣ ಕವಿಗಳಲ್ಲಿ, ಶ್ರೀಜೆನ್ನವೀರ ಕಣವಿಯವರು ಪ್ರಮುಖರಾಗಿದ್ದಾರೆ. ನಿರೂಪಣಾನನ್ಯತೆ, ಸ್ವತಂತ್ರ ಸರಣಿಗಳಿಂದ ಶ್ರೀ. ಕಣವಿಯವರು ಉನ್ನತಸ್ಥಾನವನ್ನು ಪಡೆದಿದ್ದಾರೆ. ಒಂದು ದಶಕದಿಂದ ಕನ್ನಡ ಕಾವ್ಯಕ್ಷಿತಿಯಲ್ಲಿ ಸತತ ಕೃಷಿನಿರತರಾಗಿ ಸಾಗಿ ಬಂದ ಶ್ರೀ. ಕಣವಿಯವರು, ಐದು ಕವನಸಂಕಲನಗಳನ್ನಿತ್ತುದಲ್ಲದೆ, ಇನ್ನಿತರ ಹಲವು ನೂತನ ಕವಿತೆಗಳನ್ನು ರಚಿಸಿ, ಕನ್ನಡ ರಸಿಕರಿಗೆ ಉತ್ತಮ ಕಾಣಿಕೆಯನ್ನಿತ್ತಿದ್ದಾರೆ.

ಶ್ರೀ. ಕಣವಿಯವರ ಕವನಗಳಲ್ಲಿ ಉದಾತ್ತ ವಿಚಾರಗಳು ತುಂಬಿರುತ್ತವೆ. ಕೃತ್ರಿಮತೆಯಾಗಲಿ, ಪಕ್ಷಪಾತ ಮನೋವೃತ್ತಿಯಾಗಲಿ ಅವರ ಕವನಗಳಲ್ಲಿ ವ್ಯಕ್ತವಾಗುತ್ತಿಲ್ಲ. ಶೈಲಿಯು ಮೃದುಮಧುರವಾಗಿದೆ. ನಿರೂಪಣೆಯಲ್ಲಿ ನಿತ್ಯನಾವೀನ್ಯವಿದೆ. ಇವರ ಪ್ರತಿಭೆ, ಪಾಂಡಿತ್ಯಗಳು ಅಂತೆಯೇ ಆಕರ್ಷಣೀಯವಾಗಿವೆ. ಶ್ರೇಯುತರ ಮನೋಧರ್ಮವು ಪ್ರಶಾಂತವಾದುದು ಸ್ವಭಾವದಲ್ಲಿ ಪ್ರಶಾಂತತೆಯೂ ರಮ್ಯತೆಯೂ ತುಂಬಿಕೊಂಡಿವೆ. ಉದಾತ್ತವಾದ ಸಹನೆ, ವಿಚಾರಪರತೆಗಳೇ ಈ ಕವಿಯ ಶಾಂತಿಮಂತ್ರದ ಬೀಜ. ಕವನಗಳಲ್ಲಿ ಉದ್ಬುದ್ಧವಾದ ಪ್ರತಿಭೆಯೊಂದಿಗೆ ಉದಾತ್ತವಾದ ಧ್ಯೇಯ, ಉಚ್ಚವಾದ ಆದರ್ಶ, ಸತತಾಭ್ಯಾಸ, ಲಲಿತಪದಗತಿಗಳು ಓತಪ್ರೋತವಾಗಿದ್ದು ಶ್ರೀ. ಕಣವಿಯವರು ಉತ್ತಮ ಕವಿತಾಸಾಮ್ರಾಜ್ಯವನ್ನು ಸುಲಭದಿಂದ ಗುರುತಿಸಬಹುದಾಗಿದೆ.

' ಕಾವ್ಯಶ್ರೀ ' ಯಿಂದ ವಿಸ್ತಾರಗೊಂಡ ಶ್ರೀ. ಕಣವಿಯವರ ಕವಿತಾಲಹರಿಯು ಅನುಸ್ಯೂತವಾಗಿ ಪ್ರವಹಿಸುತ್ತಾ ಮುಂದೆ ಸಾಗಿದೆ. 'ಭಾವಜೀವಿ'ಯು ಭಾವನಾವಿತಾನವು ' ಆಕಾಶಬುಟ್ಟಿ ' ಯನ್ನು ಹಾರಿಸಿ ' ಪಥಚಿಂತನ ' ತಂಗದಿರುಗಳನ್ನು ಆಸ್ವಾದಿಸಿ 'ದೀಪಧಾರಿ'ಯ ಜೊತೆಗೆ 'ನವೋದಯ' ದತ್ತ ಮುನ್ನಡೆಯುತ್ತಿದೆ. ಶ್ರೀ. ಕಣವಿಯವರ ನವೋದಯದ ಆಕಾಂಕ್ಷೆಯಲ್ಲಿ ಭವ್ಯೋದಯದ ಬಯಕೆಯು ತುಂಬಿಕೊಂಡಿದೆ.

ಕವಿಯು ಭಾವಜೀವಿ. ಭಾವಜೀವಿಯು ಭಾವನೆಗಳೇ ಕವನಗಳಿಗೆ ಸದಾ ಪ್ರೇರಕಗಳು. ಸಾಮಾನ್ಯಜೀವಿಗಿಂತ ಭಾವಜೀವಿಯು ಬದುಕು ಹೆಚ್ಚು ಸಾರವತ್ತಾಗುವ, ಹೆಚ್ಚು ಆನಂದಮಯವಾಗುವ, ವೈವಿಧ್ಯಪೂರ್ಣವಾದ ಬಗೆಯನ್ನು ನಾವು 'ಭಾವಜೀವಿ'ಯಲ್ಲಿ ಕಾಣಬಹುದು. ಪ್ರಕೃತಿಮಾತೆಯ ನುಡಿಲನ್ನು ಕವಿಯು ನೆನೆಯುವುದು ಸುಂದರವಾಗಿದೆ. ಆತ್ಮಚರಿತ್ರಪರವಾದ ಈ ಖಂಡಕಾವ್ಯದಲ್ಲಿ ಕವಿಯು ತನ್ನ ಹುಟ್ಟೂರಿನ ಬಣ್ಣನೆಯಿಂದ;ತೊಡಗಿ' ಅಲ್ಲಿಯ ಅನೇಕ ಸನ್ನಿವೇಶಗಳಿಂದ ಸ್ಫೂರ್ತಿಪಡೆದುದನ್ನು ನೆನೆಯುವಾಗ, ಹೃದಯವು ದ್ರವಿಸುತ್ತಿದೆ. ಕವಿಯ ಹೃದಯವು ಪ್ರಕೃತಿಯ ರಸಾಸ್ವಾದನೆಯೊಂದಿಗೆ ಕಾವ್ಯಾನಂದವನ್ನು ಸವಿಯುತ್ತಿದೆ. ಜಗತ್ತಿನ ವಿಪರೀತಗಳನ್ನು ಕೆಟ್ಟವಾತಾವರಣವನ್ನೂ ಕಂಡು ರೋಸಿದ ಕವಿಯು ಆತ್ಮಾನುಸಂಧಾನ, ಭಾವನಾಸಮನಸ್ಯತೆಗಳಿಂದ ಚಿತ್ತವನ್ನು ಸುವ್ಯವಸ್ಥಿತವಾಗಿರಿಸಲು ಹವಣಿಸುತ್ತಾನೆ.

ಪ್ರಕೃತಿಯ ಸುಂದರ ದೃಶ್ಯವನ್ನು ಕಂಡ ಕವಿದೃಷ್ಟಿಯು '' ಯುಗಯುಗಾಂತಗಳನ್ನೆ ಈ ಬಗೆಯ ಏಕಾಂತದೆಡೆಯಲ್ಲಿ ಮನವಾರೆ ಕಳೆಯಬಹುದು " ಎನ್ನುವಷ್ಟು ಸಮರಸವಾಗಿದೆ ಇಂಥ ಸೌಂದರ್ಯಾಸ್ವಾದಕ ದೃಷ್ಟಿಯು ವಿಚಾರದ ಬಗ್ಗೆ ಜಾಗೃತವಾಗಿರುವುದು " ನನ್ನ ನಾನೇ ಅಳೆದು ಕಳೆದುನೋಡಲು ಬೇಕು, ಎಂದು

ಹೀಡಿಸಿದಿರುವ ದಿನವದಿಲ್ಲ." ಎಂಬ ಸಾಲಿನಿಂದ ವ್ಯಕ್ತವಾಗಿದೆ. ಅಂತರಂಗದ ನಿಸ್ತರಂಗ ತಿಳಿಗೊಳದಲ್ಲಿ ಲಲಿತಾರವಿಂದಗಳ ಮುಕರಂದವು.

'ಅಂತು ನೆನಹಿನ ಗಂಧವರಮನೆಯ ಹೊಕ್ಕಂದು ಅಲ್ಲೀನು ಸ್ಮೃತಿಫಲದ ಮಾಕಂದವು" ಎಂಬುದಾಗಿ ಸ್ಮೃತಿಯ ಬಗ್ಗೆ ಸಾರಿದ ಸತ್ಯವು ನಿತ್ಯವಾಗಿದೆ. ಬಾಲ್ಯದ ಮಧುರವೃತ್ತ್ಯವೂ, ಸುಂದರ ವಾತಾವರಣವೂ ಭಾವಜೀವಿಯ ಭಾವಗಳನ್ನು ಪ್ರೋಜ್ವಲಗೊಳಿಸಿವೆ. ದೇವ-ದೆವ್ವಗಳಕತೆ ' ಜಾನಪದಗೀತೆಗಳು, ಲಂಬಾಣಿಯರು, ಕುಂಬಾರ, ಕಮ್ಮಾರ, ಕುರುಬರೆಲ್ಲಾ ಜೀವನದ ಸುತ್ತುಮುತ್ತು ನಿಂತಿದ್ದ ಭಂಗಿಗಳನ್ನು ನೆನೆಸುವುದರಲ್ಲಿ ಆನಂದವಿದೆ. ಬಾಲ್ಯಾನುಭವನ್ನು ನೆನೆಯುವುದರ ಬಗ್ಗೆ ಇನ್ನೊಂದು ಕಡೆ ಹೀಗಿದೆ: "ಇರುಳ ನಲಿ ಕಂದೀಲ ಬೆಳಕಿನಲಿ ಬರುವಂತೆ! ಬಾಲ್ಯದನುಭವ ಮುರಳಿ ಕರೆವು ದಯ್ಯ," ಇಲ್ಲಿ ಮುರಳಿ ಕರೆಯುವುದನ್ನು ಉಪಮಾವಿತಾನದ ಮೂಲಕ ತೋರಿಸಿದ ವಿಧಾನದಲ್ಲಿ ಚಾತುರ್ಯವಿದೆ. ಹಳ್ಳಿಯನ್ನು ಬಿಟ್ಟು ಧಾರವಾಡಕ್ಕೆ ಪಯಣಿಸಿದಾಗ ' ನೀರಶಪ್ಪಿದ ವಿಮಾನ ತೊಳಲಿದಂತೆ, ಭಾವಜೀವಿಯು ತೊಳಲುತ್ತಾನೆ. ' ಅಗಲಿಕೆಯ ಅನುತಾಪ, ಅನುಭವಿಸಲಸವಳವು ಅವಕಿಂತ ಮರಣವೇ ಸ್ವಲ್ಪವಾಸಿ! ' ಎನ್ನುವಲ್ಲಿ ಹಳ್ಳಿಯ ಜೀವನವು ಮೈಗೂಡಿಕೊಂಡ ಬಗೆಯೊಂದಿಗೆ ಪ್ರಕೃತಿ ಪ್ರೇಮದ ಅಮರತೆಯಲ್ಲಿ ಎರಕಗೊಂಡ ಹೃದಯದ ಗರಿಮೆಯು ಎದ್ದು ಕಾಣಿಸುತ್ತದೆ. ಪಟ್ಟಣದ ದುರ್ನಯವನ್ನು ಕಂಡು, ಡಾಂಭಿಕತೆಯನ್ನು ಅರಿತು ತೋರಿಸಿದ ಕವಿಹೃದಯವು " ಅವಳ ರಸಗಂಗೆಯಲಿ ಈಸಿ ಬಹ ಹಂಬಲದಿ ! ನೋವ ನುಂಗುತಪಡೆದೆ ಮಧುಸುಹಾಸ" ಎನ್ನುತ್ತದೆ. ಸಾಹಿತ್ಯಸರಸ್ವತಿಯ ಚೆಲುರಪೋತ್ಸವದಲ್ಲಿ ಭಾಗವಹಿಸುತ್ತದೆ " ಕಾವ್ಯಕಲೆ ಸಂಸ್ಕೃತಿಯು ಹೊಳಹು ತೆರೆಹೊದೆವಂತೆ! ಭಾವಜೀವಿಯ ಮನವು ಮುಂದೋಡಿತು, ಅಂತರಂಗದ ಶುದ್ಧಿಯಿಂದ ಚೆಲುವಿಕೆಯ ಆಸ್ವಾದನೆ ಮಾಡುವುದು ರಮ್ಯವಾಗಿದೆ ಅನ್ಯಾಯಗಾರರ ತಂಡವನ್ನು ಕಂಡು ಸಿಡಿದೆದ್ದ ಜೀವವು ವಿಚಾರಿಸಿದ ಮೇಲೆ ಕೊನೆಗೆ—

"ಇರಲಿ, ಲೋಕದ ಡೊಂಕ ತಿದ್ದುವಾಸೆಯು ಬೇಡ. ನನ್ನೊಡಲ ಬ್ರಹ್ಮಾಂಡ ನನ್ನ ಲೋಕ
ಇಂದ್ರ-ಚಂದ್ರಾದಿಗಳು ಕವಿ ಕಾಮಧೇನುಗಳು| ಅನುಭಾವಿಗಳ ಸಂಗದಲ್ಲಿ ಏಕ !"

ಎಂಬುದಾಗಿ ಸಮಾಧಾನ ಹೊಂದುತ್ತದೆ. ಶುದ್ಧಪ್ರೇಮದ ಬಗ್ಗೆ ಭಾವಜೀವಿಯ ಹೃದಯವು ಉಬ್ಬಿದ್ದವಾಗಿದೆ. ಪ್ರೇಮ ಮಂದಾಕಿನಿಯು ಗುಪ್ತಗಾಮಿನಿಯೆಂದೂ ನಿಜಕಲೋಪಾಸನೆಗೆ ದರ್ಶನವಿಶುದ್ಧಿಯೇ ಮೂಲ'ವೆಂದೂ ಕವಿಯು ಸಾರುತ್ತಾನೆ. ಪ್ರೇಮಸುಧಾಕರೆಯು ಕವಿಜೀವನದಲ್ಲಿ ವಹಿಸಿದ ಭಾಗ ಅನನ್ಯವಾದುದು. " ಧಾರವಾಡದ ತಾಯ ಮಡಿಲಲ್ಲಿ ಹೊರೆಯಿಟ್ಟು, ದತ್ತವಾಣಿಗೆ ಎದೆಯು ಕೋಡುತಿಹುದು " ಎನ್ನುವ ಕವಿಯು ಅಲ್ಲಿರುವ ಪ್ರಕೃತಿಸೌಂದರ್ಯವನ್ನು ಕವಿಮು ಹಾಡುವ ಭಂಗಿಯಲ್ಲಿಯೂ ರಮಣೀಯತೆಯಿದೆ. " ಭಾವಜೀವಿಯು ನಾನು, ನನ್ನೆದೆಯ ನಂಬಿರುವ ತುಂಬಿರುವ ಕನಸುಗಳೆ ಕಲ್ಪವೃಕ್ಷ " ಎನ್ನುವ ಭಾವಜೀವಿಗೆ ಅನುಭವನವನ್ನು ಸಾರುವಲ್ಲಿ ಆನಂದವಿದೆ.

" ಆ ಭಾವವೆಂಬುವದು ಅಂತರಂಗವ ರತ್ನ ! ತಿಸು ಕಂ
ಕನಸು ತಾನಾತ್ಮವಿದ್ಯೆ ! ನಿಜನಿವಾಸದಲ್ಲಿರಿಸಿ ತನ್ನರಿವ ತೋರುವುದು ! ಅನುಭಾವ ತಾನಲ್ಲ ಶಾಸ್ತ್ರವಿದ್ಯೆ " |

ಎಂಬುದಾಗಿ ಭಾವಜೀವಿಯು ಕೊನೆಗೆ ಸಾರುವ ಸಾಲುಗಳ ವಿಚಾರಪರಿಪ್ಲುತಗಳಾಗಿವೆ ಸುಂದರ ಭಾವನೆಗಳ ಪರಿಪಕ್ವತೆಯನ್ನು ಮಧುರತೆಯನ್ನೂ ಅನುಭವಿಸುವ ಭಾವಜೀವಿಯು, ಅನಂದೋಮಿಗಳಲ್ಲಿ ಸಲೀಲವಾಗಿ ವಿಹರಿಸುವುದನ್ನು ಕಾಣಬಹುದು. ಕಾವ್ಯ ಚೆಲುವಿಕೆಯೊಂದಿಗೆ ವಿಚಾರಗಳ ಪರಂಪರೆಯು ಸಾಗಿದ ವೈಖರಿಯು ರಮ್ಯವಾಗಿದೆ.

ದೀನಮಾನವ ರಚಿತ 'ಆಕಾಶಬುಟ್ಟಿ'ಯಲ್ಲಿ ಚೈತನ್ಯವನ್ನು ತುಂಬಿ ಹಾರಿಸುವುದರಲ್ಲಿ ಸೊಗಸಿದೆ. ಆಕಾಶಬುಟ್ಟಿಯಲ್ಲಿ ಆ ಬಲವ ವೈಶಿಷ್ಟ್ಯವನ್ನು ಕಾಣಬಹುದಾಗಿದೆ. ಹೊಸ ಬಾಳಿನ ಬಗ್ಗೆ ಕವಿಯು ಕಟ್ಟಿಕೊಂಡ ಬಯಕೆಗಳು ಎಷ್ಟು ಸುಂದರಗಳಾಗಿವೆಯೆಂಬುದನ್ನು ನೋಡಬಹುದು. " ಹಳೆಯ ಕಾಲದ ರೂಢಿ ಜಡಮತೀಯರನೆಲ್ಲ " ಅವರವರ ಪಾಡಿಗೆ ಬಿಟ್ಟು ಯುವ ಜನಾಂಗವನ್ನು ಹೊಬಾಳಿನ ಭವ್ಯತೆಯ ಕಡೆಗೆ ಕರೆಯುವಲ್ಲಿ ಕವಿಯ ಧೀರ ಶಕ್ತಿಯು ವ್ಯಕ್ತವಾಗಿದೆ. " ಮುತ್ತು ಪಡೆವರೆ ಆಳ ಮುಳಗಬೇಕು " ಎನ್ನುವ ಆಳವಾದ ಪರಿಶ್ರಮದ ವಿಚಾರವು ನಿರೂಪಿತವಾಗಿದೆ. ' ಹೊಬಾಳು ರಸಬಾಳನಪ್ಪುತಿಹುದು ' ಹೊಸ ಸಮಾಜದ ರೂಪರೇಗಳನ್ನೂ ಬಯಕೆಗಳನ್ನೂ ಸುಂದರವಾಗಿ ಭಾವಿಸುವ ಕವಿಯ ದೃಷ್ಟಿಯು ಭವ್ಯವಾಗಿದೆ. ಶೋಕಕೆದೆಗೊಟ್ಟು, ಸಣ್ಣತನ ಸ್ವಾರ್ಥಗಳನ್ನು ಹಿರಿದೊಗೆದು ಸುವಿಶಾಲಪರಿಧಿಯತ್ತ ಸಾಗಬಯಸುವ ಕವಿಯ ಬಯಕೆಯು ' ಸಾವುದೆಲ್ಲ ಸತ್ತು ' ಎಂಬ ಕವಿತೆಯಲ್ಲಿ ವ್ಯಕ್ತವಾಗಿದೆ. ಸಮಾಜದ ಕೊಳೆಯನ್ನು ತೊಳೆಯಲು, ಕ್ರಿಸ್ತ, ಬುದ್ಧ ಬಸವ, ಗಾಂಧೀಜಿ ಮೊದಲಾದವರೆಷ್ಟು ಯತ್ನಿಸಿದರೂ, ಸಮಾಜದ ಕೊಳಚೆಯು ಪೂರ್ಣವಾಗಿ ತೊಲಗಿ ವಾತಾವರಣವು ತೊಳಗಬೇಕಾದ ಧ್ಯೇಯವಾದಿಗಳ ಗಡಣ ಹೆಚ್ಚಬೇಕು. ಒಳಗು ಹೊರಗುಗಳನ್ನು ತೊಳೆದರೆ ಮಾತ್ರ ಸಮಾಜ ಉನ್ನತಿಯಾಗಬಹುದೆಂದು ಕವಿಯ ಕೊನೆಯ ಎಚ್ಚರಿಕೆಯನ್ನು ಕೊಡುತ್ತಾನೆ.

ಕಿತ್ತೂರಿನ ಕಿಡಿಗಳು, ಕ್ರಾಂತಿಕಲಿ, ಕವನಗಳಲ್ಲಿ ಕವಿಯ ಧೈರ್ಯವೂ ಅಭಿಮಾನವೂ, ಅಭಿವ್ಯಕ್ತವಾಗಿದೆ. ಶ್ರೀ ಅರವಿಂದರು ಬಸವನಾಳರು, ಭಾರತಕುಲಾವತಂಸ ' ಶ್ರೀ 'ಯವರು ಕವಿರತ್ನ ಬುದ್ಧ ಮೊದಲಾದವರ ಬಗ್ಗೆ ಬರೆದ ಕವನಗಳಲ್ಲಿ ಮಾನ್ಯತೆಯನ್ನು ಆರಾಧಿಸುವ ನಮ್ರತೆಯೊಂದಿಗೆ ಗುಣಗ್ರಾಹಿತ್ವದ ಆದರ್ಶಸ್ವೀಕೃತಿಯ ವಿಧಾನವು ಸ್ಪಷ್ಟವಾಗಿದೆ. ಗೆಳೆತನದ ಬಗ್ಗೆ ಕವಿಯು ಮಿಡಿಯುವ

ದನ್ನು 'ಚರಮಗೀತೆ'ಯಲ್ಲಿ ಕಂಡ ಕವಿಹೃದಯವು ಆರ್ದ್ರವಾಗುತ್ತದೆ. ಗೆಳೆಯನ ಬಗ್ಗೆ ಕವಿಯು ಅನುಭೂತಿಯು ವ್ಯಕ್ತಗೊಂಡ ಬಗೆಯು ಅತ್ಯಂತ ಹೃದಯವಿದ್ರಾವಕವಾಗಿದೆ. ಗೆಳೆತನದ ಬಗ್ಗೆ ಇನ್ನೊಂದು ಕಡೆ ಕವಿಯು ನಿಷ್ಕಾಮಕರ್ಮಿಯಾದ ಗೆಳೆಯನ ನಿರ್ಮಂಚನೆಯು ಶಬ್ದನವನ್ನು ಕೆಂಡಾಮಿನ್ನಾನೆ. "ಗೆಳೆತನದ ಶುಚಿರುಚಿಯು ಇವಕು ವಿಂಗಿಲಾಗಿಹುದು" ಎಂಬುದಾಗಿ ಮಾತ್ಸರಂಬಂಧಕ್ಕಿಂತಲೂ ಮಿಗಿಲೆನ್ನುವಂತೆ ಕವಿಯು ಕೆಂಡಾಡುತ್ತಾನೆ. 'ಗೆಳೆತನವೆ ಚಿರಬಾಳ ಸಂಜೀವಿನಿ, ವಿಶ್ವದಂತಃಕರಣ ಮಂದಾಕಿನಿ' ಎನ್ನುವುದರಲ್ಲಿ ಗೆಳೆತನದ ಅವ್ಯತತ್ವವೂ ಪಾವನತೆಯೂ ಅಭಿವ್ಯಕ್ತವಾಗಿವೆ.

ಧರ್ಮ, ನ್ಯಾಯಗಳ ಬಗ್ಗೆ ಕವಿಯು ಉತ್ಕಟೇಚ್ಛೆ ವ್ಯಕ್ತಪಡಿಸಿರುವುದು 'ತೀರ್ಥ' ಎಂಬ ಕವನದಲ್ಲಿ ಸುಂದರವಾಗಿ ಬಂದಿದೆ. 'ಬೆಳಕು' ಬೀರಬೇಕಾದುದರಲ್ಲಿ ಕವಿಗಿರುವ ಆಸ್ಥೆಯೂ ವ್ಯಕ್ತವಾಗಿದೆ. 'ಗಾಂಧಿಯುಗವಲ್ಲಿ' ಗಾಂಧಿತತ್ತ್ವದ ಆಚರಣೆಯಿಂದ ಹೃದಯದ ವಿಶುದ್ಧಿಯು ದೊರಕುವ ಆಶೆಯು ಸ್ಪಷ್ಟವಾಗಿದೆ. ಪ್ರಜಾಪ್ರಭುತ್ವದ ಬಗೆಗಿರುವ ಕವಿಯ ಒಲವು ಗಗನಸಾಮ್ರಾಜ್ಯದಲ್ಲಿಯು ವಿಸ್ತರಿಸುವಹೊಂಗನಸನ್ನು ಕಂಡು ಕಲ್ಪನೆಯ ಅನಂತತೆಯನ್ನು ಸಾರುತ್ತದೆ. ಪ್ರಕೃತಿಯ ಬಗ್ಗೆ ಕವಿಗಿರುವ ಆದರವನ್ನು ಇನ್ನಿತರ ಕವನಗಳಲ್ಲಿ ಕಾಣಬಹುದು. 'ಶ್ರಾವಣ ಲಾವಣ್ಯ' 'ಸೃಷ್ಟಿ ನೋಡು ನಿಂತಿದೆ,' 'ಬಂತು ಭಾರತ ಹುಣ್ಣಿಮೆ' 'ಹೂ ಬೇಲಿ,' 'ಒಂದು ಸಂಜೆ' 'ಪ್ರಕೃತಿಯ ಮಡಿಲಲ್ಲಿ,' 'ವಿಶ್ವಕವಿಯ ದೃಶ್ಯಕಾವ್ಯ' ಮೊದಲಾವ ಕವನಗಳಲ್ಲಿ ಕಾಣಬಹುದು. " ಗಿಡವ ರಿಂಬೆ ಕೊಂಬೆಗಳಲಿ ಚಿಗುರು ಕಣ್ಣ ತೆರೆದಿದೆ. ಎಲ್ಲಿ ನೋಡಿದಲ್ಲಿ ಚೆಲುವು ಗೆಲ್ಲಗಂಬ ನಿಲಿಸಿದೆ " ಎಂಬ ಸೃಷ್ಟಿಸೌಂದರ್ಯದ ವರ್ಣನೆಯು ಸೊಗಸಾಗಿದೆ. ಸಂಜೆ ವೆಣ್ಣಿನ ಸಕಲ ಸೌಭಾಗ್ಯ ಹೊಮ್ಮುತಿಹನೋಟವು ರಮಣೀಯವಿದೆ. ರಸಾಹ್ಲಾದಿನಿ ಪರಾಪ್ರಕೃತಿ ಸಂಜೀವಿನಿಯಾವ ಸೃಷ್ಟಿಯ ಮಾನಸ ಪೂಜೆಯೆಸಗುವುದು ಸುಂದರವಾದುದು. " ಮಹಾಕಾವ್ಯವೀ ಭವ್ಯಸೃಷ್ಟಿ ಇದ ನೋಡಿದನಿತುರನ್ಯ! ಮಹಾಕವಿಯ ನಿವ್ವಿದ್ವಿಭೂತಿ ಅನುಭಾವಿ ಹೃದಯಗಮ್ಯ " ಎಂಬುದಾಗಿ ವಿಶ್ವಕವಿಯ ದೃಶ್ಯಕಾವ್ಯವಾದ ಸೃಷ್ಟಿಯ ಸೊಬಗಿನ ಸ್ತವವು ವಿನೂತನವಾಗಿದೆ. " ಭವದ ಬಾಳಿನೊಳೆಲ್ಲ ದಿವದ ಕನಸನು ಕಂಡು, ಜೀವನವ ಪಾವನಂಗೊಳಿಪ ಹಂಬಲದೊಳಿರೆ " ಎಂಬುವರಿಂದ ಜೀವನದ ಪಾವಿತ್ರ್ಯವನ್ನು ಸಾರುವುದು ರಮಣೀಯವಾಗಿದೆ

ಪ್ರಕೃತಿಯ ವಿಸ್ತಾರ, ವೈವಿಧ್ಯ, ಅನಂತತೆ, ರಮ್ಯತೆಗಳು ಕವಿಹೃದಯಕ್ಕೆ ಹಿಂದಿನಿಂದಲೂ ಸ್ಫೂರ್ತಿಕವಾಗಿ ಬಂದಿವೆ. ಪ್ರಕೃತಿಸಭಗತೆಯು ಕವಿತಾಸೌಂದರ್ಯವನ್ನು ವರ್ಧಿಸುತ್ತದೆ. ಸುತ್ತುಮುತ್ತಿನ ರಮ್ಯವಾತಾವರಣದಲ್ಲಿ " ಬಾನಿನುದ್ದಕು ಭೂಮಿಯಗಲಕು ಎಲ್ಲಿಯೂ ಸ್ವಚ್ಛಂದವೇ " ಇರುವಂತೆ ಭಾಸವಾಗುವುದು ಸುಂದರ ಕಲ್ಪನೆ. ಮಾತಂಗ ಬೆಟ್ಟದಿಂದಲೂ ಗೋಳಗುಮ್ಮಟದಿಂದಲೂ ಕಾಣಿಸುವ ದೃಶ್ಯದೊಂದಿಗೆ ಸೃಷ್ಟಿಯ ಚೆಲುವಿಕೆಯು ಅಸ್ವಾಧ್ಯವಾದಂತೆ, ನಿತ್ಯದ ಪರಿಸರವಲ್ಲಿಯೂ ವ್ಯಕ್ತವಾಗುವ ಸಹಜಾನಂದದ ಸವಿಯು ಅನರ್ಘ್ಯವಾಗಿದೆ. ಇಂಥ ಸೌಂದರ್ಯವನ್ನು ಸವಿಯುವ ಸೌಭಾಗ್ಯವನ್ನು ಕವಿಯು 'ಪಥಿಕನಿಗೆ ಒದಗಿಸಿದ್ದಾನೆ. " ಯಾರಿಗೀ ಸುಂದರತೆ ? ಯಾರಿಗೀ ಪರವಶತೆ ? ಯಾರಸುಖಕೀ ಸೃಷ್ಟಿ ನಿನಗಲ್ಲದೆ ?" ಎಂದು ಕವಿಯು ಕೇಳಿದ್ದಾನೆ.

'ಅಂಜಿಯೂಳಿ'ನ ಕುರಿತು ಕವಿಗಿರುವ ಆದರವಲ್ಲಿ, ಒಂದು ಬಗೆಯ ವಿಲಕ್ಷಣ ಸೌಂದರ್ಯದೊಂದಿಗೆ ಆಳವಾದ ರಸಾಭಿಜ್ಞತೆಯೂ ವ್ಯಕ್ತಗೊಂಡಿದೆ. ಜೀವನದಲ್ಲಿ ಅಂಜೆಯಾಳಿನ ಪಾತ್ರವಿಂದು ಪ್ರಮುಖವಾಗಿದೆ. ಸ್ನೇಹ, ಪ್ರೇಮ, ಆಶೆ, ಆಕಾಂಕ್ಷೆಗಳ ಬಗ್ಗೆ, ಇರುವ ಆದರವು ಅಂಜೆಯಾಳಿನ ಮೂಲಕ ಅಭಿವ್ಯಕ್ತವಾಗುವ ಭಂಗಿಯಲ್ಲಿ ನಾವೀನ್ಯವಿದೆ. ಸೌಂದರ್ಯವಿದೆ. 'ಶ್ವೇತಪತ್ರ'ಯಲ್ಲಿಯೂ ಈ ಬಗೆಯ ಮೋಡಿಯು ತುಂಬಿಕೊಂಡಿದೆ

'ಸಾಮರಸ್ಯ'ದ ಸವಿಯನ್ನು ಬಣ್ಣಿಸುವಲ್ಲಿ ಕವಿಯ ಆನಂದವು ಉದ್ರಿಕ್ತವಾಗಿದೆ. "ಶಬ್ದಮುಕುರದಿ ಕವಿಯು ತನ್ನ ತನವನು ಕಂಡು ಮುಗ್ಧ ಕಾವ್ಯಾನಂದ ಪಡೆಯುವಂತೆ " ಎಂಬ ಹೋಲಿಕೆಯೊಂದಿಗೆ ಯುವತಿಯು ಜೀವನದ ಆನಂದಾಸ್ವಾದನವನ್ನು ಬಣ್ಣಿಸಿರುವುದು ದಿವ್ಯವಾಗಿದೆ. ಸಾಮರಸ್ಯದ ಸೃಷ್ಟಿಯಲ್ಲಿ ಭವ್ಯತೆಯು ರೂಪುಗೊಂಡುದು ಆಹ್ಲಾದಜನಕವಾಗಿದೆ. ಕವಿಭಾವನೆಯು ಮನೋಜ್ಞವಾಗಿಸುವ ಬಗೆಯು ಅನನ್ಯಸದೃಶವಾಗಿದೆ ಚಿಂತನಪರನಾದ ಕವಿಯ ವಿಚಾರವೈಖರಿಯು ಸಾಗುವಲ್ಲಿ ಪಾಂಡಿತ್ಯದ ಆಳವೂ, ತರ್ಕದ ಪರಣಿಯೂ, ಪ್ರತಿಭೆಯ ವಿಲಾಸವೂ, ಪ್ರಕೃತಿಯ ಹಿನ್ನೆಲೆಯೂ, ವ್ಯಕ್ತಗೊಂಡ ಬಗೆಯನ್ನು ಈ ಹಿಂದಿನ ಕವನಗಳಲ್ಲಿ ಕಂಡರೆ, ಪ್ರಕೃತಿಯೊಂದಿಗೆ ಪ್ರೇಮವನ್ನಾರಾಧಿಸುವ ಕವಿಹೃದಯವು 'ವಧುಚಂದ್ರ'ದ ಪ್ರೇಮಗೀತಗಳಲ್ಲಿ ಪ್ರಕಟಗೊಂಡಿದೆ. "ಒಳತೆಲ್ಲವು ಬೆಳಕಾಯಿತು, ಬಾನ್ ಕರೆಯಿತು ಜೇನು, ಆನಂದದ ಕಡಲಾಳದಿ, ನಾವಾದೆವು ಮಿನು" ಎಂಬ ಸಾಲುಗಳಲ್ಲಿ ಪ್ರೇಮದ ಅಗಾಧತೆಯೂ, ಆನಂದದ ಪರಮಾವಧಿಯೂ ಸಿಚ್ಚಳವಾಗಿವೆ. ಈ ಬಗೆಯ ಪ್ರಕೃತಿ-ಪ್ರೇಮಗಳ ಆರಾಧನೆಯು ಕವಿಯ ಉತ್ತಮ ರಸಾಭಿಜ್ಞತೆಯ ದ್ಯೋತಕವಾಗಿದೆ.

ಒಲಿದವರ ಹೃದಯವು ಒಂದಾದಾಗ ವಾತಾವರಣದ ರಮ್ಯತೆಯು ಇನ್ಮಡಿಗೊಳ್ಳುತ್ತದೆ. 'ಒಲಿವ ಮನಕೊಲಿವ ಎದೆ, ಎರಡು ಒಂದಾಗಿರಲು. ಹಾಡುತಿದೆ ಗಾಳಿಗೂ ಗುಂಗು ಹಿಡಿಸಿ' ಇವರಿಂದ ಒಲಿದವರ ಆನಂದವು ಗಾಳಿಯಲ್ಲಿಯೂ ಲೀನವಾಗಿ ಅಲ್ಲಿಯೂ ಸೇರಿಕೊಳ್ಳುವ ಕಲ್ಪನೆಯು ಭವ್ಯವಾದುದು. ಚೆಂಗುಲಾಬಿಯ ಸೊಗಸೆಷ್ಟು ಹೆಚ್ಚಾಗಿದ್ದರೂ, ಅದನ್ನು ಮುಡಿಯುವವಳ ಮಹತ್ತ್ವಕ್ಕೆ ಅದು ಸರಿದೂಗಲೆಂದೆನಿಸದಂತೆ ! ಹೂವಿನಂತಹ ಹುಡುಗಿ ಈ ಹೂವ ಮುಡಿಯುವಳೆ, ಹೂವು ಪಡೆದಿಹುದೇನು ಅಂಥ ಭಾಗ್ಯ ?" ಇದರಿಂದ ಹೂವಿನಂತಹ ಹುಡುಗಿಯ ಸೌಂದರ್ಯಾತಿಶಯವು ವರ್ಣಿತವಾಗಿದೆ.

'ಗಿರಿಗಿರಿಗಿಂಡಿ'ಯಲ್ಲಿ ಜೀವನ ಗೆಳತಿಯನ್ನು ಕರೆಯುವ ಭಂಗಿಯು ಸುಂದರ ಚಿತ್ರವಿದ್ದರೆ 'ವಿಲನ'ದಲ್ಲಿ ಸೌಂದರ್ಯಾಸ್ವಾದದ

ಸ್ವಾರಸ್ಯವಿದೆ. "ಎರಡೆದೆಗಳು ತುಡಿಯುತ್ತಿವೆ. ಪ್ರೇಮಾಂಬುಧಿಗೆಳಸಿ ಆ ಗಂಗಾ-ಯಮುನೆಯರೊಲು, ಚಿರಸಂಗಮ ಬಯಸಿ' ಎನ್ನುವಲ್ಲಿ ಪ್ರೇಮಸಮಾಗಮದ ಸುಂದರಚಿತ್ರವು ಕಣ್ಮುಂದೆ ನಿಲ್ಲುತ್ತದೆ. ಮಾಧುರ್ಯದ ಪರಮಾವಧಿಯು ಅಭಿವ್ಯಕ್ತವಾಗುತ್ತದೆ. "ಪ್ರೇಮ-ಜೀವಿಯು ಚಿರಂಜೀವಿ ಕೇಳ್ ಮುಗುದೆ" ಎಂಬ ಸಂದೇಶವು ಅನುರಣಾದುದು. "ನಿನ್ನ ಹೊಗೆನ್ನೆಯಲಿ ನನಗಿಂದ್ರ ಸಂಪದಂ, ಜಿಲುವಿ ನೊಲವಿನ ಭೋಗ ದೈವಪ್ರಸಾದಂ' ಎನ್ನುವ ರಸಿಕ ಕವಿಯ ಪ್ರೇಮ ಪಾಣಿಯು ಸೊಗಸು ಅಸ್ವಾವ್ಯವಾಗಿದೆ. ಸಾಮರಸ್ಯದ ಸಾಮಗಾನವೂ ಒಲವಿನಾಳವೂ ಅಲ್ಲಲ್ಲಿ ಬೇರೆ ಕವನಗಳಲ್ಲಿ ವ್ಯಕ್ತವಾಗಿದೆ. "ಅಳಲ ಕಂಬನಿಯೊರೆಸಿ, ಸೊಗವ ಹೂಮಳೆ ಸುರಿಸಿ, ಮೌನವಾಗಿಯೆ ಮನವ ಮಿಡಿಯುವವಳು" ಜೀವ ಜೀವಾಳದಲ್ಲಿ ಕೂಡಿದವಳು ಕವಿಯ ಸಾರ ಸರ್ವಸ್ವವಾಗಿದ್ದಾಳೆ, "ಸೃಷ್ಟಿಯ ಸೌಂದರ್ಯೋಪಾಸನೆಯಲಿ ನೀಜೊತೆಗಿರೆ ನಾಪರಮಸುಖಿ" ಎನ್ನುವುದರಿಂದ ಸೃಷ್ಟಿಯ ಸೌಂದರ್ಯವನ್ನು ಪ್ರೇಯಸೀಯೋಗದ ರಸಾನಂದವನ್ನು ಪಡೆಯುವ ಕವಿಯ ಸೌಭಾಗ್ಯವು ಅಭಿನಂದನೀಯವಾಗಿದೆ. ಹೊಂದಾವರೆಯು ಕಂಗೊಳಿಸಿದಾಗ ಭಾವವ ಮಧುರ ಮಕರಂದವು ವೃದುಲವಲ ದಲಗಳಲಿ ಪರಿಮಳಿಸಿದೆ. "ಬಿಸಿಲೊ ಬೆಳದಿಂಗಳವು, ಕಾಡೊ ನಂದನ ವನವು, ಮಧುರ ಮಿಲನದೊಳಿಲ್ಲ ಜೀನಾಗಿದೆ" ಎಂಬುದರಿಂದ ಕಷ್ಟ ದಲ್ಲೂ ಸುಖವನ್ನು ಕಾಣುವ ದಿವ್ಯಭಾವವೂ ಒಲವಿನ ಪರಿಶುದ್ಧ ಸ್ವರೂಪವೂ ನಿರೂಪಿತವಾಗಿವೆ. ಬಾಳಗೆಳತಿಯ ಮೇಲಿನ ಅಕ್ಕರೆಯನ್ನು ವ್ಯಕ್ತಪಡಿಸುವ ಸುಂದರಭಾವಗಳು ವಿವಿಧ ರೂಪಗಳಲ್ಲಿ ಬೆಳಕು ಕಂಡಿವೆ. ಹಕ್ಕಿಯಂತೆ ಅಂದವಾದ ಸುರಸುಂದರಿಯ ಬಗ್ಗೆ ಕವಿಯ ಭಾವವು ಅವ್ಯಕ್ತವಾಗಿ ಕೆರಳಿದೆ. ಕವಿಗೆ ಚೇತನೋತ್ಸಾಹ. "ಚೇತನಂ ಪಡೆವನಕ, ಕವಿಮನವು ಬರಿಯುದಾಸೀನ ರಸಹೀನತೆಯ ದೀನತೆಯ ತವರು" ಎನ್ನುವುದರಲ್ಲಿ ಸತ್ಯವಿದೆ. ಸಮಾಗಮ ಶೃಂಗಾರದ ಅನುಭವವು ರಮ್ಯ ಪರಿಸರದಲ್ಲಿ ಕವಿಹೃದಯಕ್ಕೆ ಅವಿಣಾನಂದ ಪ್ರದವಾಗಿದೆ. ವಿಪ್ರಲಂಭವು ಶೃಂಗಾರರಸದ ಮತ್ತೊಂದು ಮೊಗ. ಸಂಯೋಗಶೃಂಗಾರದ ಚಿತ್ರಣದಿಂದ ರಸದ ಒಂದು ಮುಖದ ದರ್ಶನ ವಾಗುವುದಾದರೆ, ವಿಪ್ರಲಂಭದಿಂದ ಸಮಗ್ರರಸದ ದರ್ಶನವೂ ಆಸ್ವಾದನೆಯೂ ನಡೆಯುತ್ತದೆ. ಇಲ್ಲಿ ಕವಿಯು ವಿಪ್ರಲಂಭದ ಸವಿಯನ್ನು ಅನುಭವಿಸುವ ಕವನಗಳು ರಮ್ಯವಾಗಿವೆ. ತವರುಮನೆಯ ವ್ಯಾಮೋಹವು ಸಹಜವಾಗಿದ್ದರೂ, ಅಕೆಗೆ ಹೋಗಲು ಮನಸಿಲ್ಲ; ಅದರೂ ಕಳಿಸಿ ಆಗಿದೆ. ರವಿವಾರ ಹೋಗಲು ಪತ್ರಬಂದಿದೆ. "ಅದು ಎಲ್ಲ ಸರಿ ಅದರಿಂದು ಮಂಗಳವಾರ, ನಾಲ್ಕು ದಿನಗಳನೆಂತು ನೂಕಬೇಕು" ಎನ್ನುವ ಭಾವನೆಯ ಉತ್ಕಟತೆಯು ಅನನ್ಯವಾಗಿದೆ. 'ಪಯಣ'ದ ಲ್ಲಿಯೋ ಇದೇ ವಿರಹದ ಭಾವವು ಪಡಿಮಿನಿಯುತ್ತಿದೆ. 'ಮೌನಭಾರ' ದಲ್ಲಿ ವಿರಹಿಣಿಯ ಎದೆಯ ಭಾರವು ಮೌನದ ರೂಪದಲ್ಲಿ ಪ್ರತಿಬಿಂಬಿತ ವಾಗಿದೆ. 'ನಿರೀಕ್ಷೆ'ಯಲ್ಲಿ ನಲ್ಲನ ಆಗಮನದ ನಿರೀಕ್ಷೆಯು ಆತುರ ಜನಕವಾಗಿದೆ. "ತುಂಬುಗೈ ಬಾಗಿಲಿಗೆ, ಇಂಬುಗೊಟ್ಟಿದೆ ಕಾಲ, ತುದಿಬೆರಳು ಹೊಸತಿಲಕೆ ಹೂವಾಗಿದೆ" ಎಂಬುದಾಗಿ ನಿರೀಕ್ಷೆಯು ಕಾಲದ ಭಂಗಿಯ ಸಹಜ ಸುಂದರ ಚಿತ್ರವಿದೆ. ಹೀಗೆ ವಿರಹದಲ್ಲೂ ರಸಾಸ್ವಾದವನ್ನನುಭವಿಸುವ ಕವಿದೃಷ್ಟಿಯು ಮಧುರವಾಗಿದೆ.

ಶ್ರೀ. ಕಣವಿಯವರ ಕವಿತೆಗಳಲ್ಲಿ ನವ್ಯತೆಯ ಸೊಗಸು ಹಿಂದಿ ನಿಂದಲೇ ಅಭಿವ್ಯಕ್ತವಾಗುತ್ತ ಬಂದಿದೆ. ನವ್ಯಕವಿತೆಯು ಪದಾರ್ಪಣ ಮಾಡುವ ಮೊದಲೇ ಇವರ ಕವಿತೆಗಳಲ್ಲಿ ಆ ಚಿಲುವು ತೂರಿಕೊಂಡು ಬಂದಿದೆ. ಇವರ ಭಾವನೆಯಲ್ಲಿ ವಿನೇಕದ ಭಾಗವು ಅಧಿಕವಾಗಿದ್ದು ಪರಿಸರದ ಬಗ್ಗೆ ಹೆಚ್ಚಿನ ವಿಚಾರ ನಡೆದಿದೆ.

ನವ್ಯಕವಿಗಳಲ್ಲಿಯೂ ಶ್ರೀ ಕಣವಿಯವರು ಅಗ್ರಪಂಕ್ತಿಯವ ರೆಂಬುದು, ಅವರ ನವ್ಯಕವನಗಳಿಂದ ಸ್ಪಷ್ಟವಾಗಿದೆ. ನವ್ಯತೆಯಲ್ಲಿ ದಿವ್ಯತೆಯನ್ನು ಭವ್ಯತೆಯನ್ನು ಸಾರುವ ಕವಿಗಳಲ್ಲಿ ಶ್ರೀ ಕಣವಿಯವ ರೊಬ್ಬರು. ಇವರೊಬ್ಬ ಸಫಲ ಕವಿಗಳೆನ್ನುವುದರಲ್ಲಿ ಸಂಶಯವಿಲ್ಲ. ಆಧುನಿಕ ಭಾವಗೀತೆ ಹಾಗೂ ನವ್ಯ ಕವನಗಳ ಮಧ್ಯೆ ಇರುವ ಬಿರು-ಕನ್ನು ಸರಿಪಡಿಸುವ ಯತ್ನವನ್ನು ಶ್ರೀ. ಕಣವಿಯವರು ತಮ್ಮ 'ದೀಪ ಧಾರಿ'ಯಲ್ಲಿ ಕೈಗೊಂಡು ಯಶಸ್ವಿಯಾಗಿದ್ದಾರೆ. "ಈ ಸಂಗ್ರಹದ ಕೆಲ ಕವಿತೆಗಳಲ್ಲಿ ನವ್ಯಮಾರ್ಗದ ಹಲವು ಅಂಶಗಳನ್ನು ಓದುಗರು ಕಾಣಬಹುದು. ಈ ಮಾರ್ಗದಲ್ಲಿ ನಡೆದ ಯಶಸ್ವೀ ಪ್ರಯೋಗಗಳೆಂದು ಕರೆಯುತ್ತಿಲ್ಲವಾದರೂ, ಆಧುನಿಕ ಭಾವಗೀತೆ ಹಾಗೂ ನವ್ಯ ಮಾರ್ಗ ಗಳ ನಡುವೆ ನಿರ್ಮಾಣಗೊಂಡಿರುವ ಕಂದರಕ್ಕೆ ಇದು ಸೇತುವೆ ಯಾದೀತೆಂಬ ನಮ್ರಭಾವನೆ ನನಗಿದೆ" ಕವಿಯು ದೀಪಧಾರಿಯ ಮುನ್ನುಡಿಯಲ್ಲಿ ಹೇಳಿದ ಈ ಮಾತುಗಳು, ಕವನಗಳನ್ನೋದಿದಾಗ ಯಥಾರ್ಥವೆನ್ನಿಸುತ್ತವೆ.

'ಕಾಲಾತೀತ'ದಲ್ಲಿ 'ಮಹಿಷವಾಹನನಾಗಿ ಕೊಳಲೂದಿ ಸಾಗು ತಿಹ ದನಗಾಹಿಯ ಮನಸ್ಸಿನ ಶಾಂತಿಯು ಯಾರಾಗಿದೆ?' ಎಂಬುದಾಗಿ ಪ್ರಶ್ನಿಸಿ, ನರನ ಭೌತಿಕಸಾಹಸಗಳನ್ನೆಲ್ಲಾ ಬಣ್ಣಿಸಿ ನಿಜವಾದ ಶಾಂತಿ ಯನ್ನು ಗುರುತಿಸಿದುದು ರಮ್ಯವಾಗಿದೆ, ಇಲ್ಲಿ ರಮ್ಯತೆಯಿದೆ. ಚಮ-ತ್ಕೃತಿಯಿದೆ. ಭಾವನೆಯ ಸೌಂದರ್ಯವೂ ತುಂಬಿಕೊಂಡಿದೆ. 'ಪಡುಗಡಲು' ಕವನದಲ್ಲಿಯೂ ಇಂಥದೇ ವೈಶಿಷ್ಟ್ಯವಿದೆ. 'ನಾಗರಿ ಕತೆ ಮುಗಿಲಿಗೇರಿ ಬಾಂಬಿನ ಮಳೆಗರೆಯಿತು' 'ಮೊನ್ನೆ ಮೊನ್ನೆ ಯುದ್ಧವಾಯ್ತು ಮನುಕುಲದುದ್ದಾರಕೆ' ಇತ್ಯಾದಿಗಳಿಂದ ಅನಾಹುತ ವನ್ನು ಚಿತ್ರಿಸಿ ಪಡುಗಡಲಿನ ಅನಂತತೆಯ ಪ್ರತಿಮೆಯ ಮೂಲಕ ವಿಚಾರಸರಣಿಯನ್ನು ಪೋಣಿಸಿದುದು ಸುಂದರವಾಗಿದೆ. 'ನರನ ಒಂದೊಂದು ಕೃತಿ-ವಿಕೃತಿ ಋತುಋತುವಿನೊಡಸಿಂತು ಬೆಸುಗೆಯಾಗಿ' 'ರಂಜಿಸುವ 'ಋತುಸಂಸಾರ' ವುಂಗಿಯೂದಿ ಬರುವ 'ಸೊಳ್ಳೆ,' 'ವಿರಹಸಂಜೆ,' 'ದ್ವಂದ್ವ' 'ಕೊನೆಯ ನಿರ್ವಾಣ' 'ಪಣತಿ,' 'ನೇಪಳ್ಯ' 'ಮೃತ್ಯುಬಂಧ' ಮೊದಲಾದ ಕವನಗಳಲ್ಲಿ ನಿರೂಪಣೆಯ ನವ್ಯತೆ, ಚಮತ್ಕಾರ, ಶೈಲಿಗಳಲ್ಲಿ ಭವ್ಯತೆಯಿದೆ. 'ಮಧ್ಯಾಹ್ನದ ಮಜಲಿನ' ವರ್ಣನೆಯೂ, ಮಜಲು ಬರುವುದು ಮತ್ತೆ ಹಗಲ ಸಂಜನು ಹಿಡಿದು ಜಗದ ಹೆಗಲಿಗೆ ನೊಗವ ಹೇರಿಸುವುದು, ಎನ್ನುವುದರ ಮೂಲಕ ಸಮಯದ ವಿಚಾರವಾಗಿ ಎಚ್ಚರಿಕೆಯನ್ನು ಕೊಡುವ ಮಾರ್ಮಿಕ

ಕವನ. ಕಟಕಿಯ ಬಳಿ ಕುಳಿತು ಅಂತರ್ಮುಖಿಯಾಗುವುದು, "ಎಳೆಯ ಕಂಗಳಲಿ ಹೊಳೆವ ತಿಂಗಳ ಬೆಳಕ. ದಿನದ ದಾರಿಯೊಳೆಮಗೆ ದೀಪಧಾರಿ"ಯಾಗುವುದೂ ಸುಂದರವಾಗಿದೆ. 'ಬೇಲಿಯ ಮೇಲಿನ ನೀಲಿಯ ಹೂವು" ಜೀವನೋತ್ಸಾಹವನ್ನು ಎದೆದುಂಬಿಸುವ ರೂಪು, ಆಗಿರುವಂತೆ, ಎಲೆಯ ತೋಟಕೆ ಜಯ ಯ ಮಳೆಗರೆದ ಅತಿಥಿಗಳು ಎದೆಯೊಲವನ್ನರಳಿಸುವ ಬಗೆಯು ಆಹ್ಲಾದಕರವಾಗಿದೆ. 'ಜೀವನ ಹುಟ್ಟಿಗೆ ಯಾರೊ ಕೊಗೆಯಿಟ್ಟು ಹೋದಂತೆ, ನುಂದಿ ಗಿಜಿಗಿಟ್ಟಿರುವ ನಿರ್ವಾಣ'ಎಂಬ ನಿರೂಪಣೆ, ಕೊನೆಯ ನಿರ್ವಾಣದ ಸಕಲ ವಿಚಾರ ಗಳೂ ವೈನೋಜ್ಞವಾಗಿವೆ.

ಒಟ್ಟಿನಲ್ಲಿ 'ದೀಪಧಾರಿ' ಯಲ್ಲಿ ಕವಿಯು ಅಶಿಸಿದಂತೆ ಆಧುನಿಕ ಭಾವಗೀತೆ ಹಾಗೂ ನವ್ಯಕಾವ್ಯಗಳ ನಡುವೆ ಇರುವ ಅಂತರದ ಪರಿ-ಹಾರ ಯತ್ನವು ನಡೆದಿರುವುದು ಸ್ಪಷ್ಟವಾಗಿದೆ. ಈ ರೀತಿಯ ಯತ್ನ ದಿಂದ ನವ್ಯಕಾವ್ಯಮಾರ್ಗವು ಸುಗಮವೂ ಜನಪ್ರಿಯವೂ ಆಗಬಹು ದಾಗಿದೆ.

"ಕನ್ನಡ ಕವಿತೆ ಈಚೆಗೆ ಒಂದು ಹೊಸ ಆಕೃತಿಯಲ್ಲಿ ನೂತನ ರಚನಾ ವಿಧಾನದಿಂದ ರೂಪುಗೊಳ್ಳುತ್ತಿದೆ. ನವ್ಯಕಾವ್ಯದ ಹೆಸರಿ ನಲ್ಲಿ ಅದು ಮತ್ತೊಂದು ಮಜಲು ಮುಂದುನಡೆಯುತ್ತಿದೆ. ಒಂದೇ ಇಡವ ಕೊಂಬೆಗಳಾದರೂ ಅವುಗಳ ಆಕಾರ, ಮಾಣಿತ, ಭಂಗಿ, ರಸ ಪೃಷ್ಟಿ, ಬೇರೆ ಬೇರೆಯಾಗಿರುವಂತೆ ಇತ್ತೀಚಿನ ಕವಿತೆಗಳಲ್ಲೂ ಶೈಲಿಯ ರೂಪ, ಪದಗಳ ಬಳಕೆ ಒಟ್ಟಂದದ ಪರಿಣಾಮ ಇತ್ಯಾದಿಗಳಲ್ಲಿ ಹಿಂದಿನ ಕವಿತೆಗಳಿಗಿಂತ ಭಿನ್ನವಾದ ಹಾಗೂ ತೀಕ್ಷ್ಣವಾದ ಒಂದು ಹೊಸ ಜಜ ಕಂಡುಬರುವಂತಿದೆ. ಇಂಥದೇ ಒಂದು ನಿರ್ದಿಷ್ಟ ಸ್ವರೂಪವನ್ನು ಇದು ತಳೆದಿದೆಯೆಂದು ಈಗಲೇ ಹೇಳಬರುವಂತಿಲ್ಲವಾದರೂ, ತನ್ನದೇ ಇದ ಸ್ವತಂತ್ರರೀತಿಯಲ್ಲಿ ಅದು ಬೆಳೆದುಬರಬೇಕಾಗಿದ್ದು , ಅದನ್ನು ಇಾಗೆಯೇ ಬೆಳೆಯಗೊಟ್ಟು ನೋಡಬೇಕಾದುದು ನಿಜವಾದ ಕಾವ್ಯ-ಕ್ರಮಿಗಳ ಕರ್ತವ್ಯ" ನವ್ಯಕವಿತೆಗಳ ಬಗ್ಗೆ ಶ್ರೀ ಕಣವಿಯವರು ಟ್ಟಿಕೊಂಡಿರುವ ಆಶೆ, ಆಕಾಂಕ್ಷೆಗಳನ್ನು ಕೃತಿಯಲ್ಲಿ ವ್ಯಕ್ತಗೊಳಿಸ ಲ್ಲಿ ಅವರು ಸಫಲರಾಗಿದ್ದಾರೆ.

'ನವ್ಯಧ್ವನಿ'ಯ 'ಯುಗಾದಿ" ಕವನವೂ ಅವರ ನವ್ಯ ಕವಿ ಯ ಸಾಫಲ್ಯದ ಮತ್ತೊಂದು ನಿದರ್ಶನ. ವಿನೋದದ ಛಾಯೆ ಹೊಂದಿಗೆ ವಿಚಾರದ ಪ್ರವಾಹವೂ ಸುತ್ತುಮುತ್ತಲಿನ ವಸ್ತು ಸನ್ನಿ ವೇಶಗಳನ್ನು ಮಾರ್ಮಿಕವಾಗಿ ಟೀಕಿಸುವ ಭಂಗಿಯೂ ರಮ್ಯವಾಗಿದೆ. ಲ್ಲಿ ಪುನರ್ಜನನಶೀಲವಾದ ಜಗತ್ತಿನ ಒಳಿತು-ಕೆಡುಕುಗಳ ಬಗ್ಗೆ ಸೂಕ್ಷ್ಮವಾದ ನೋಟ್ಸೆಯಿದೆ. 'ಮಣ್ಣಿನ ವೀಣೆಗೆ'ಯಲ್ಲಿಯೂ ಲಿ-ನವ್ಯತೆಗಳಂತೆ, ಪ್ರತೀಕವು ಪ್ರಾಧಾನ್ಯ ಪಡೆದಿದೆ. 'ಆಷಾಢ ಬ್ಬಣವು ಸೂಸ್ಯಾಡಿ ಬರುವಾಗ ಎಸೆ ಬೊಂದು ಚೆಂಡವಿತ್ತ' ಎನ್ನು ಲ್ಲಿ ರಮ್ಯತೆಯ ಉಚ್ಚಸ್ತರೂಪವು ದರ್ಶನವಾಗಿತ್ತದೆ. ಇತ್ತೀಚಿನ ನವ್ಯ ಕವಿತೆಗಳೆಲ್ಲಾ ಶ್ರೀ. ಕಣವಿಯವರ ನೂತನ ಪ್ರತಿಭೆಗೆ ಸಾಕ್ಷಿ ಯಾಗಿ, ಹೆಚ್ಚಿನ ಆಶೆಯನ್ನುಂಟುಮಾಡಿವೆ. ಮೃದುವಾದ ಶೈಲಿಯಲ್ಲಿ ಪ್ರತಿಮಾವಿಧಾನದಿಂದಲೂ, ಪ್ರತೀಕನಿಷ್ಠತೆಯಿಂದಲೂ, ಮಾರ್ಮಿಕ ನಿರೂಪಣ ಭಂಗಿ-ಚಮತ್ಕೃತಿಗಳಿಂದಲೂ ಶ್ರೀ. ಕಣವಿಯವರು ಉತ್ಕೃ ಲವಾದ ದಾರಿಯನ್ನು ಕ್ರಮಿಸುತ್ತಿದ್ದಾರೆ.

ಶ್ರೀ. ಕಣವಿಯವರು ನಾಳಿನ ಬಗ್ಗೆ ಭವ್ಯವಾದ ಭವಿತವ್ಯವನ್ನು ಮನಗಂಡವರು. ಹಿಂದಿನ ನೆನಹುಗಳು, ಪ್ರಾಚೀನ ವಿಚಾರಗಳು ಇವುಗಳ ಬಗ್ಗೆ ವಿವೇಚನಾತ್ಮಕವೂ ಸುಂದರವೂ ಆವ ದೃಷ್ಟಿಯನ್ನಿ ಟ್ಟುಕೊಂಡು ಬಂದವರು. ಕಾವ್ಯರಚನೆಗೆ ಬೇಕಾದ ಸಕಲ ಸಾಮಗ್ರಿ ಗಳೂ, ಇವರಲ್ಲಿ ದೈವದತ್ತವಾಗಿ ಬಂದಿರುವುದನ್ನು ಸಹಜವಾಗಿ ಗುರುತಿಸಬಹುದಾಗಿದೆ. ಶ್ರೀ. ಕಣವಿಯವರ ಭಾವದಂತೆ, ಪದ-ಬಂಧವು ಸುಮಸುಕೋಮಲವಾದುದು. ಶೈಲಿಯು ನಿರರ್ಗಳವೂ, ಸಲಲಿತವೂ ಆಗಿದೆ. ವಿಚಾರ ಪರಿಪ್ಲುತತೆಯು ಪ್ರತಿಭಾವಿಲಾಸ ದೊಂದಿಗೆ ಸೇರಿ, ಅವಶ್ಯವಾದ ಮೆರುಗನ್ನು ಪಡೆದಿದೆ. ಅಲಂಕಾರ ಗುಣಗಳೆಲ್ಲೂ ಕವಿಯ ಮಾರ್ಗದಲ್ಲಿ ನೂತನತೆಯಿದೆ. ಇವರ ಕವಿತೆ ಗಳಲ್ಲಿ ಅನ್ಯಾದೃಶವಾದ ಸೌಂದರ್ಯ, ಅಪೂರ್ವವಾದ ಮಾಧುರ್ಯ, ಉಜ್ವಲವಾದ ವಿಚಾರ ವೀಚಿಗಳು ಸಮಗ್ರವಾಗಿ ನೆಲೆಸಿಕೊಂಡಿವೆ. ನಾಳೆಯ ಬಗ್ಗೆ ಉತ್ತಮ ಭರವಸೆಯನ್ನು, ಕನ್ನಡ ಕಾವ್ಯನವೋದಯದ ಹಿರಿಯಾಸೆಯನ್ನು ಕಟ್ಟಿಕೊಂಡ ತರುಣಕವಿ ಶ್ರೀ. ಕಣವಿಯವರಿಂದ ಕನ್ನಡ ವಾಚಕ ರಸಿಕಲೋಕವು ಇನ್ನಷ್ಟು ಉಜ್ವಲ ಕೃತಿಗಳನ್ನು ಬಯಸುವುದು ಸಹಜವಾಗಿದೆ. ಅವರ ವಯೋಮಿತಿಯಿಂದ ವಿಚಾರಿ ಸಿದರೆ, ಅವರ ಪ್ರಕಟಿತ ಕಾವ್ಯಗಳ ಬಗ್ಗೆ ಇನ್ನಷ್ಟು ಹೆಚ್ಚಿನ ಗೌರ ವವು ಉಮ್ಮಳಿಸುತ್ತದೆ. ಇವರ ಕಾವ್ಯಶ್ರೀಯು ನಿತ್ಯತಾರುಣ್ಯ-ಲಾವಣ್ಯಗಳಿಂದ ಸದಾ ಕಂಗೊಳಿಸಲೆಂದು ಹಾರೈಸುತ್ತೇನೆ.

— —

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಮಾಳಪ್ಪ ಮೀನು ತಿಂದ ಕತೆ

(ಪಣ್ಣ ಕತೆ)

" ರಂಜನೆ "ಭಟ್ಟ, ಮದ್ರಾಸ

ಪ್ರಾಣಾಂತ್ಯದ ಪ್ರಸಂಗ ಬಂದಾಗ, ಮಾನವನು ತನ್ನ ಪೂರ್ವಾಚಾರ-ಸಂಪ್ರದಾಯಗಳಿಗೆ, ಅನಿವಾರ್ಯವಾಗಿ ತಿಲಾಂಜಲಿಯನ್ನು ಕೊಡಬೇಕಾಗುವುದು. ಸಂಪೂರ್ಣ ಶಾಕಾಹಾರಿಯಾಗಿದ್ದ ಮಾಳಪ್ಪ, ಅಂತಹ ಪ್ರಸಂಗ ಬಂದಾಗಲೇ ಮತ್ಸ್ಯಾಹಾರಿಯಾದ; ಮುಂದೆ ಅವನ ಕುಲದವರೆಲ್ಲರೂ ಈ ಹೊಸ ಆಚಾರವನ್ನು ಪುರಸ್ಕರಿಸಿದರು.

ಹಿಂದೂದೇಶದ ಬುರಾಮಿಯಾ ಪ್ರಾಂತದಲ್ಲಿ ಪಾತಾಳೀಯರೇ ಪ್ರಬಲರಾದ ಜನ: ವ್ಯಾಪಾರ ಉದ್ಯಮಗಳೆಲ್ಲ ಅವರ ವಶದಲ್ಲಿವೆ ಅಧಿಕಾರ, ಸ್ಥಾನ-ಮಾನಗಳೂ ಅವರವೇ. ವೈಕಟ್ಟು, ರೂಪ ನಡೆ-ನುಡಿಗಳಲ್ಲಿಯೂ ಅವರು ದೇಶೀಯರಿಂದ ತೀರ ಭಿನ್ನರಾಗಿಯೇ ಕಾಣುತ್ತಾರೆ. ಆದರೆ ತಮ್ಮ ಸೌಜನ್ಯದಿಂದ ತಮ್ಮ ವ್ಯವಹಾರ ಚಾತುರ್ಯದಿಂದ, ತಮ್ಮ ಸ್ವಾಯತ್ತವಾದ ಬುದ್ಧಿಕೌಶಲದಿಂದ ಪಾತಾಳೀಯರು ಹಿಮದ ನಾಡಿನಲ್ಲೇ ತುಂಬ ಗೌರವ ಗಳಿಸಿದ ಸಂಪನ್ನರು ಹಿಡಿ-ಹಿಡಿಯಾಗಿ, ಬೊಗಸೆ-ಬೊಗಸೆಯಾಗಿ ಇವರು ಮೀನು ತಿನ್ನುವದರಲ್ಲಿ ಅಪ್ರತಿಮರು. ಸಮುದ್ರದಲ್ಲಿಯೋ, ನದಿಯಲ್ಲಿಯೋ, ಪಾಚಿಯಲ್ಲಿಯೋ, ಹಾಯಾಗಿ ಮೀನುಗಳು ಈಸಾಡುವುದನ್ನು ಕಂಡಾಗ, ಎಂತಹ ಪಾತಾಳೀಯನಲ್ಲೂ ಬಾಯಿ ನೀರೂರುತ್ತದೆ. ಎಂತಹ, ಏನೆಲ್ಲ ಗಹನವಾದ ವಿಷಯವನ್ನು ಅವನು ಮಾತನಾಡುತ್ತಿದ್ದರೂ, ಗಗನದೆಡೆಗೆ ಉದಾತ್ತನಾಗಿ ನೋಡುತ್ತಿದ್ದುದಾದರೂ, ಮೀನು-ಮೊಸಳೆಗಳು ಈಜುವದನ್ನು ಕಂಡಾಗ, ಎಂತಹ ಪಾತಾಳೀಯನಿಗೂ ಸೈರಿಸುವದು ದುಸ್ತರವಾದ ವಿಷಯ. ಒಂದೇ ನೆಗೆತಕ್ಕೆ ನೀರಿನಲ್ಲಿ ಹಾರಿ, ಹೋರಾಡಿ, ಜೀವಂತ ಮೀನು-ಮೊಸಳೆಗಳನ್ನು ಹಿಡಿದು ಕಚಕಚನೆ ಕೊಚ್ಚಿಕೊಚ್ಚಿ ತಿನ್ನುವದರಲ್ಲಿ ಪಾತಾಳೀಯರನ್ನು ಸರಿಗಟ್ಟುವವರು ಭೂಮಂಡಲದಲ್ಲಿಯೇ ಇರಲಿಕ್ಕಿಲ್ಲ. ಮೀನನ್ನು ಹದಮಾಡಲು ದೈವದತ್ತವಾದ ಬಾಯಿ—ಹಲ್ಲುಗಳಿರುವಾಗ, ಜೀಕಿ ಮಸಾಲೆಗಳ ಅಗತ್ಯವೇನು—ಎಂದು ಕೇಳುವ ನಿಸ್ಸೀಮರು ಪಾತಾಳೀಯರು. ಇಷ್ಟೇ ಸಾಲದು. ಮಳೆಗಾಲದಲ್ಲಿ ನದಿಗಳು, ಸಮುದ್ರ ಉಕ್ಕಿ ಹರಿದಾಗ, ಇವರು ಮತ್ಸ್ಯದಿನವನ್ನಾಚರಿಸುತ್ತಾರೆ. ಆಗ ಎಲ್ಲ ಪಾತಾಳೀಯರ ಮನೆಯ ಮುಂದೆ, ಮೀನು-ಮೊಸಳೆಗಳ ತೋರಣ ಬಿಗಿದಿರುತ್ತಾರೆ! ಮತ್ಸ್ಯದೇವನನ್ನು ಎಲ್ಲರ ಮನೆಗಳಲ್ಲಿಯೂ ಆಹ್ವಾನಿಸುತ್ತಾರೆ.! ಆ ಒಂದು, ಪಾತಾಳೀಯರೆಲ್ಲರಿಗೂ ಮೀನು ತಿನ್ನಲು ನಿಸೇಧನಿದೆ.

ಹೆಣ್ಣು ಗಂಡುಗಳೆಲ್ಲ ಅಂದು ನದಿ ಸಮುದ್ರಗಳಿಗೆ ಹೋಗಿ ಮತ್ಸ್ಯಪೂಜೆಯನ್ನು ಗೈದು ಕೊಡಮುಂಬ ನೀರು ಹೊತ್ತು ತಂದು ಪೂಜಿಸಿ ಆ ನೀರಿನಲ್ಲಿಯೇ ಎಲ್ಲರೂ ಸ್ನಾನಗೈಯುತ್ತಾರೆ. ಪಾತಾಳೀಯರ ಕುಲಗೌರವಗಳಿರುವದು ಅವರ ಮತ್ಸ್ಯಪ್ರೀತಿಯಲ್ಲಿ ಎಂದು ಪಾತಾಳೀಯರ ಮತ. ಪ್ರೇಮದ ಅತ್ಯುಚ್ಚ ಸಂಕೇತ ಪ್ರೇಮಿಸಿದುದನ್ನು ತಿನ್ನುವದರಲ್ಲಿದೆ—ಎಂಬ ನಂಬಿಕೆ ಕಾಡು ಜನಾಂಗಗಳಲ್ಲಿದೆ: ತಾಯಿಜೆಕ್ಕೆ ತನ್ನ ಮರಿಯನ್ನೇ ತಿನ್ನುವದಾಗಿ ಎಷ್ಟೋ ಜನಾಂಗಗಳು ಇಂದಿಗೂ ಇಲ್ಲಿ ನಂಬುತ್ತಿವೆ

ಹೀಗಾಗಿ ಎಷ್ಟೋ ಪಾತಾಳೀಯರು ತಮ್ಮ ಮಕ್ಕಳನ್ನು " ಮತ್ಸ್ಯ ಭೂಪ" "ಮತ್ಸ್ಯದೂತ" " ಮತ್ಸ್ಯ ಮುಖಿ" ಎಂದು ಮುಂತಾಗಿ ತಮ್ಮ ಭಾಷೆಯಲ್ಲೇ ಸಂಬೋಧಿಸುತ್ತಾರೆ. ತಮ್ಮ ಮತ್ಸ್ಯಪ್ರೇಮವನ್ನು ಕುರಿತು ಪಾತಾಳೀಯರು ನೂರಾರು ಕತೆಗಳನ್ನು ಹೊಸೆದು,-ರುಚಿ ರುಚಿಯಾದ ಮೀನುಗಳ ಪಕ್ವಾನ್ನಗಳನ್ನು ಮೆಲ್ಲುವಾಗ ಹೇಳುತ್ತಿರುತ್ತಾರೆ. ಅವುಗಳಲ್ಲಿ ನಿಮಗೆ ಸ್ವಾರಸ್ಯವೆನಿಸಬಹುದಾದ ಒಂದು ಕತೆಯನ್ನು ನಿಮ್ಮ ಮುಂದಿಡಲೇ?

ಶತಮಾನಗಳ ಹಿಂದಿನ ಮಾತು: ಹಿಂದುಸ್ತಾನದಿಂದ ಮೂಟೆ ಹೊತ್ತುಕೊಂಡು, ಭಾರತೀಯ ವರ್ತಕರು ಭೂಮಂಡಲದ ತುಂಬೆಲ್ಲ ದೊಡ್ಡ ದೊಡ್ಡ ಹಾಯಿ ಹಡಗುಗಳಿಂದ ಓಡಾಡುತ್ತಿದ್ದಾಗಿನ ಮಾತು : ಸಯಾಮು, ಜಾವಾ, ಸುಮಾತ್ರಾ, ಮಲಯಾಗಳಿಗೆ ಕಾಳುಕಡಿ, ಬಟ್ಟೆ ವಜ್ರ ವೈಡೂರ್ಯಗಳನ್ನು ಹೊತ್ತುಕೊಂಡು ಹೊರಟ ಒಂದು ಹಾಯಿ ಹಡಗು, ನಡುಸಮುದ್ರದಲ್ಲೆಲ್ಲೊ ದಾರಿತಪ್ಪಿ, ಎಲ್ಲಿಗೋ ಹೊರಟುದು ಎತ್ತಲೋ ಮುಖವಾಗಿ ಗೊತ್ತುಗುರಿಯಿಲ್ಲದೆ ಸಾಗಿತು. ಆಗ ಹಾಯಿ-ಹಡಗುಗಳು ನಿಶ್ಚಿತ ನೆಲೆಗೇ ತಲ್ಪುವುದೆಂದರೆ ದೈವದತ್ತವಾದ ಮಾತು. ನೀರಿಗಿಳಿಸುವವರೆಗೆ ಮನುಷ್ಯ ಪ್ರಯತ್ನ: ನೆಲೆಗೆ ಬರುವವರೆಗೆ ದೈವ ಯತ್ನ—ಎಂದು ಜನರಾಡಿಕೊಳ್ಳುತ್ತಿದ್ದ ಕಾಲವದು. ಸಯಾಮು ದೇಶಕ್ಕೆ ಇನ್ನು ವಾರ ಎರಡು ವಾರಗಳಲ್ಲಿ ತಲ್ಪುವೆವೆಂದುಕೊಂಡ ವರ್ತಕರಿಗೆ, ಹಾಗೂ ಹಡಗಿನ ನೌಕರರಿಗೆ-ಯಾವ ನೆಲೆಯಾದರೂ ಯಾವ ನೆಲವಾದರೂ ಅಡ್ಡಿ ಇಲ್ಲ-ಯಾವಾಗ ಕಂಡೀವು, ಏನು ಮಾಡಿಯೀವು ಎನ್ನಿಸಿತು-ಭೋರೆಂಬ ಬಿರುಗಾಳಿ ನಿರಂತರದಿನ ರಾತ್ರಿ ಬೀಸಿ, ಸಾಗರವನ್ನೇ ಅಲ್ಲೋಲಕಲ್ಲೋಲವಾಗಿಸಿತ್ತು. ಹಾಯಿ ಕಂಬ ಉರುಳಿತ್ತು. ಹಾಯಿ ಹರಿದಿತ್ತು. ಚುಕ್ಕಾಣಿ ದಿಕ್ಕುಗೆಟ್ಟಿತ್ತು. ನೆಲದ ಸುಳಿವನ್ನು ಕಾಣದೆ, ಮುಂದೇನು ಕಾದಿದೆಯೆಂಬುದನ್ನು ಅರಿಯದೆ ಅದೆಷ್ಟೋ ದಿನಗಳನ್ನು ತಿಂಗಳನ್ನು ಅವರು ಕಳೆದಿರಬೇಕು. ಹಡಗದಲ್ಲಿದ್ದ ಆಹಾರ ಸಾಮಗ್ರಿಗಳೆಲ್ಲಾ ತೀರಿ ಸಾಗರದ ಅನಂತತೆ, ವಿಶಾಲತೆ ಅವರನ್ನು ಕಂಗೆಡಿಸಿತ್ತು. ಹಿಂದೆ ಹೋಗುವಂತೆಯೂ ಇಲ್ಲ, ಮುಂದೆ ಹೋಗು

ವಂತೆಯೂ ಇಲ್ಲ: ಕರಾಳವಾದ ಸಾಗರ! ಎಷ್ಟು ದಿನ ಹೀಗೆ ಅವರ ಸಾರಾಟ-ಹೋರಾಟ ಸಾಗೀತು? ಹೀಗೆ ಪದಗೆಟ್ಟು ಅಸಹಾಯರಾಗಿ, ತಮ್ಮ ಉಳಿವು-ಅಳಿವನ್ನು ದೈವಕ್ಕೆ ಒಪ್ಪಿಸಿ, 'ಗಾಳಿಯೊಲಿದತ್ತ ಹಡಗು ತೇಲೀತು' ಎಂದು ನಿರಾಶರಾಗಿ, ಶಟಸ್ಥರಾಗಿ ಅವರು ಕೈಕಟ್ಟಿ ಕುಳಿತರೆಂದು ಊಹಿಸಿಕೊಳ್ಳುವುದು ತಪ್ಪೆ? ಇಂತಹ ನಿಪತ್ತಿನಲ್ಲಿ, ಹಡಗು ಯಾವುದೋ ದಾರಿತಪ್ಪಿದ ಬಂಡೆಗೋ, ಸಾಗರದಲ್ಲಿ ಒಮ್ಮೊಮ್ಮೆ ತೇಲಿ ಬರುವ ಹಿಮದ ಬಂಡೆಗೋ ಆಗಾಗ ಬಡಿಯುವ ಭಯ ಬೇರೆ - ಸಾಗರದ ಅಳದಂತೆಯೇ ಮನುಷ್ಯನ ಅಸಹಾಯತೆ: ಎರಡರ ನೆಲೆಯೂ ನಿಲುಕದ ಮಾತು ಎಂದು ಸಾಗರದಲ್ಲಿ ಪ್ರಯಾಣ ಮಾಡುವವರು ಆಗ ಹೇಳುತ್ತಿದ್ದದ್ದು ಸತ್ಯದ ಮಾತೇ. ಇರಲಿ. ಆ ಮಾತು ಈಗೇಕೆ? ಸಾಗೆ ಹಾದಿತಪ್ಪಿದ ಆ ಹಡಗು ಕೊನೆಗೊಮ್ಮೆ ತೇಲಿ ತೇಲಿ ಯಾವುದೋ ಲದ ಸನಿಯವನ್ನು ಸೇರಿತ್ತು. ಆ ಹಡಗಿನವರು ಮೊದಲು ಕಾಣದ, 'ಳದ ನೆಲ! ಹಸಿರು ಹಸಿರಾಗಿ ಕಂಗೊಳಿಸುವ ಸೂಚಿಪರ್ಣದ ಗಿಡಳು! ಅನತಿದೂರದಲ್ಲೇ ಕಂಗೊಳಿಸುವ ಹಿಮದ ಬಳೆ ಬಿಳಿಯಾದ ಡ್ಡಗಳು. ಹೆಪ್ಪುಗಟ್ಟುತ್ತಿರುವ ನೊರೆನೊರೆಯಾವ, ಬೆಳ್ಳಿ ಬೆಳ್ಳಿಯಾದ ಸಾಗರ! ಎಲ್ಲವೂ ಬಿಳಿದು-ಸೃಷ್ಟಿಯೇ ಕುಲು ಕುಲು ನಗುತ್ತಿವುದೇನೋ ಈ ಬೆಳ್ಳಿಯ ನಾಡಿನಲ್ಲಿ! ಅಂದ ಮೇಲೆ ಹಾರುವ ಕಾರಾಡುವ ಹಕ್ಕಿಗಳು ಬೆಳ್ಳಗಿದ್ದರೆ ಏನಚ್ಚರಿ! ಓಡಾಡುವ, ನಲಿದಾಡುವ ನೆಲಚರ ಪ್ರಾಣಿಗಳು ಬಿಳಿಯಾಗಿದ್ದುದರಲ್ಲಿ ಏನಾಶ್ಚರ್ಯ! ಸಾಗರಕ್ಕೆ ತೀರ ಹತ್ತಿಕೊಂಡ ನಾಡೆಲ್ಲ ಮಳಲಿನ ರಾಜ್ಯವಾಗಿತ್ತು! ಬಿಳಿಯಾದ ಮಳಲು! ಕಣ್ಣು ಕಾಣುವಷ್ಟೂ ಹಾಯಾಗಿ ಸಯವಾಗಿ ಪರಡಿ ಹಾಸಿತ್ತು! 'ಕೊನೆಗಾದರೂ ನೆಲ ಮುಟ್ಟಿದೆನಲ್ಲಾ' ಎಂದು ಂಡು ಹಿಗ್ಗಿನಿಂದಲೇ ಆ ಹಡಗಿನಲ್ಲಿಯ ಅಸಹಾಯರು ತಮ್ಮ ಕುಲದೈವವನ್ನು ನೆನೆಯುತ್ತ ಹಡಗಿನಿಂದ ಇಳಿದರು. ಯಾರು ಅವರನ್ನು ಸ್ವಾಗತಿಸಬೇಕು? ಯಾರು ಅವರ ಹಡಗಿನ ಹಾದಿ ಕಾಯುತ್ತಿರಬೇಕು? ಅವರು ಹೋದುದೇ ಹಾದಿ: ಮುಟ್ಟಿದುದೆಲ್ಲ ಅವರದೇ ವಸ್ತು. ಂಡುದೇ ರಾಜ್ಯ: ಆ ಮಳಲಿನಲ್ಲಿ ಅತ್ತ ಇತ್ತ ಓಡಿಯಾಡಿದರು. ಒಕ್ಕೊತ್ತಿ ಬರುವ ಹಸಿವಿನ ಆಕ್ರೋಶವನ್ನು ತಡೆಯಲಾರದೆಯೆ, ಮಳಲಿನಾಚೆಯ ಬೆಳೆದ ಮರಗಳ ರೆಂಬೆಗಳನ್ನು ಅಲುಗಿಸಿ ಬಿದ್ದ ಣ್ಣುಗಳನ್ನೆಲ್ಲಾ ಹೆಕ್ಕಿ ತಿಂದರು; ಹೆಪ್ಪುಗಟ್ಟಿದ ಸಾಗರದ ನೀರನ್ನೇ ಸಿದರು. ಹವೆಯೂ ತಂಪಾಗಿತ್ತು. ಬಿಸಿಲೂ ಇಳಿಮುಖವಾಗಿತ್ತು. ೂನೆಗೂ ಬದುಕಿದೆವಲ್ಲಾ—ಎಂಬ ಸಂತಸದಲ್ಲಿ ತಿಂದು ತೇಗಿದ ಆಹಾರ ಸುಖಾನುಭವದಲ್ಲಿ ಹಾಯಾಗಿ ಮಳಲಿನಲ್ಲೇ ಒರಗಿ ನಿದ್ದೆ-ೀದರು—

ಅವರಿಗೆ ಎಚ್ಚರವಾದಾಗ, ಅವರ ಸುತ್ತಲೂ ಕನಡಿ, ಶಂಖ, ಣಿಸರಗಳನ್ನು ವೈತುಂಬ ಅಲಂಕರಿಸಿಕೊಂಡ, ಬಿಳಿಯ ಹೂಗಳ ಾಲೆಯನ್ನು ವೈತುಂಬ ಹಾಕಿಕೊಂಡ ಸೂಚಿಪರ್ಣಿಯ ವಸ್ತ್ರ ಳನ್ನು ಹೊದ್ದುಕೊಂಡ, ಕೈಯಲ್ಲಿ ಭಲ್ಲೆ-ಬರ್ಚಿಗಳನ್ನು ಹಿಡಿದ, ೃತವರ್ಣದ ದೃಢಕಾಯರು ನಗುತ್ತ, ಕುಣಿದಾಡುತ್ತ, ಕೇಕೆ ಾಕುತ್ತ ಕೆಲೆದಿದ್ದರು: ಅವರು ಬುರಾಮಿಯಾ ರಾಜ್ಯದ ಕಡಲ ಕಿನಾರೆಯ ಕಾವಲಿಗರು— ತಮ್ಮ ರಾಜ್ಯಕ್ಕೆ ಯಾರೋ ದಂಡೆತ್ತಿ, ಹಡಗಿನಿಂದ ಬಂದಿಳಿದಿರುವರೆಂದು ಬಗೆದು, ರಣಕಹಳೆಯನ್ನೂದಿ, ಸಜ್ಜಾಗಿ ಬಂದ ಯೋಧರವರು— ಆದರೆ ಮುಂದೆ ನಡೆದುದು ಯುದ್ಧವಲ್ಲ! ಹಡಗಿನವರಾರೂ ಹೋರಾಡಲು ಸಿದ್ಧರಿದ್ದಿಲ್ಲ! ಅವರಿಗೆ ಬೇಕಾದುದು ರಾಜ್ಯವಲ್ಲ; ಆಸರೆ: ಬದುಕಿಕೊಂಡಿರಲು ತಾಣ: ಬುರಾಮಿಯಾರ ಮುಂದೆ ಹುಲ್ಲುಕಚ್ಚಿ ಕೈಕಟ್ಟಿ ನಿಂತರು—

ಮರುದಿನವೇ ಬುರಾಮಿಯಾದ ರಾಜನಿಗೆ ಸುದ್ದಿ ಹೋಯಿತು. ಸುದ್ದಿ ಕೇಳಿದೊಡನೆಯೇ ಅವನೂ ಅಲ್ಲಿಗೆ ತನ್ನ ಪರಿವಾರದೊಡನೆ ನೆಗೆದು ಬಂದ. ಬುರಾಮಿಯಾರಿಗೆ ಆಗ ತಮ್ಮ ಹಿಮದೇಶವನ್ನು ಬಿಟ್ಟು ಬೇರೆ ನಾಡಿದ್ದು ದೇ ತಿಳಿಯದು. ಹಿಮದೇಶದ ಪ್ರಾಂತಗಳೇ ತಮ್ಮತಮ್ಮಲ್ಲಿ ಕಾದಾಡಿ ಕದನನೆಸಗುತ್ತಿದ್ದವು; ಆದರೆ ಈ ಹಡಗಿನಲ್ಲಿ ಬಂದವರಾರೂ ಹಿಮದೇಶದವರಾಗಿರಲಿಲ್ಲ. ಅವರ ಶ್ವೇತ ದೃಢ ಕಾಯ ಇವರದಾಗಿರಲಿಲ್ಲ. ಎಲ್ಲ ಬಗೆಯಿಂದಲೂ ಭಿನ್ನರಾಗಿದ್ದರು ಇವರು; ಮೇಲೆ ಶರಣಾರ್ಥಿಗಳು. ಏನು ಮಾಡಬೇಕೆಂಬುದು ಮೊದಲು ಬುರಾಮಿಯಾರಿಗೆ ತಿಳಿಯದಾಯಿತು. ಇಂತಹ ಪ್ರಸಂಗಗಳೇ ಬುರಾಮಿಯಾರಿಗೆ—ಏಕೆ ಹಿಮದ ನಾಡಿನವರಿಗೇ—ಮೊದಲು ಬಂದಿರಲಿಲ್ಲ. ಕಾದಾಡುವ ಹಗೆಗಳನ್ನು ಅವರು ಅರಿತಿದ್ದರು. ಆದರೆ, "ದಮ್ಮಯ್ಯ, ಬದುಕಿಕೊಳ್ಳುತ್ತೇವೆ" ಎಂಬ ಮಾನವರನ್ನು ಅವರು ಕಂಡಿರಲಿಲ್ಲ ಹಾಗೆಂದು, ಸುಮ್ಮನಿರುವುದಾದರೂ ಹೇಗೆ?

ಹಿಮದೇಶ ಹಿಮದವರದ್ದು; ಬೇರೆ ಯಾವ ನೆಲ್ಲೀಂಛರೂ ಬಂದು ಹಿಮದೇಶವನ್ನು ತೊತ್ತುಳಿಯದಂತೆ ನೋಡಿಕೊಳ್ಳುವುದು ಆ ಹಿಮದೇಶೀಯರ ಆದ್ಯಕರ್ತವ್ಯವೆಂದು, ತಲೆತಲಾಂತರದಿಂದ ಬಂದ ನಂಬುಗೆಯಾಗಿತ್ತು. ಬುರಾಮಿಯಾರ ರಾಜ ದಿಕ್ಕುಗಾಣದಾಗಿದ್ದ. ತನ್ನವರ ಸಭೆಯನ್ನು ಕರೆದ. ಎಲ್ಲರೂ ಕಕ್ಕಾವಿಕ್ಕಿಯಾಗಿ 'ಮುಂದೇನು?' ಎಂದು ಕೇಳಿಕೊಂಡರು. ಹಡಗಿನಲ್ಲಿದ್ದವರು ಹೆಗೆಯಾಗಿ ಬಂದಿದ್ದರೆ ಅವರಿಗೆ ಈ ಪ್ರಮೇಯವೇ ಬರುತ್ತಿರಲಿಲ್ಲ. ಹೊಳೆಯುವ ಚೂಪಾದ ಆವರ ಕತ್ತಿ ಅವರ ಪ್ರಶ್ನೆಗೆ ಉತ್ತರ ಹೇಳಬಹುದಿತ್ತು. ಆದರೆ ಈಗ ಹಾಗಲ್ಲ! 'ನಮಗೂ ಬದುಕಲು ಜಾಗಕೊಡಿ' ಎನ್ನುವವರ ಮುಂದೆ ಕತ್ತಿ ಏನು ಪ್ರಯೋಜನ? ಹಡಗಿನವರು ನಾನಾವಿಧವಾಗಿ ಬೇಡಿಕೊಂಡರು. ತಾವು ತಂದ ವಜ್ರವೈಡೂರ್ಯಗಳನ್ನು ಬುರಾಮಿಯಾದ ಭೂಪನಿಗೆ ಕಾಣಿಕೆ ಕೊಡುವೆನೆಂದರು. ಆ ಬೆಲೆ ಬಾಳುವ ಮಾಣಿಕ್ಯ ಮುತ್ತುಗಳಿಂದ ಅವನಿಗೇನಾಗಬೇಕಿತ್ತು? ಅವರ ಕಡಲತಡಿಯ ಶಂಖ ಚಿಪ್ಪುಗಳೆಲ್ಲಿ? ಆ ಹಡಗಿನವರ ವಜ್ರ ವೈಡೂರ್ಯಗಳೆಲ್ಲಿ? ಹಡಗಿನವರ ಯಾವ ಆಟವೂ ಬುರಾಮಿಯಾರ ಮುಂದೆ ನಡೆಯಲಿಲ್ಲ. ಕೊನೆಗೂ ಬುರಾಮಿಯಾರ ರಾಜಪಂಡಿತ ನಿಷುರನು, ತನ್ನ ಬಿಳಿಯದಾದ ಗಡ್ಡವನ್ನು ನೇವರಿಸಿಕೊಳ್ಳುತ್ತ ಹೀಗೆಂದಿದ್ದ: "ಕಡಲಿನಿಂದ ಬಂದ ಇವರನ್ನು ಬುರಾಮಿಯಾರ ನಾಡದೇವತೆಯಾದ ಕಡಲ ದೇವಿಗೆ ಬಲಿಯಾಗಿಸುವುದೇ ಒಳ್ಳೆಯದು: ಅವಳೇ ಎಣಿಸಿ ಬಯಸಿ ತಂದ ಆಹುತಿಗಳು ಇವರು—" ರಾಜ ಪಂಡಿತನ ಮಾತಿಗೆ ಎದುರು ಯಾರು ಏನು ಹೇಳಬೇಕು?

ಮಾಳಪ್ಪ ಮೀನು ತಿಂದ ಕತೆ

(ಸಣ್ಣ ಕತೆ)

" ರಂಜನೆ "ಭಟ್ಟ, ಮದ್ರಾಸ

ಪ್ರಾಣಾಂತ್ಯದ ಪ್ರಸಂಗ ಬಂದಾಗ, ಮಾನವನು ತನ್ನ ಪೂರ್ವಾಚಾರ-ಸಂಪ್ರದಾಯಗಳಿಗೆ, ಅನಿವಾರ್ಯವಾಗಿ ತಿಲಾಂಜಲಿಯನ್ನು ಕೊಡಬೇಕಾಗುವುದು. ಸಂಪೂರ್ಣ ಶಾಕಾಹಾರಿಯಾಗಿದ್ದ ಮಾಳಪ್ಪ, ಅಂತಹ ಪ್ರಸಂಗ ಬಂದಾಗಲೇ ಮತ್ಸ್ಯಾಹಾರಿಯಾದ; ಮುಂದೆ ಅವನ ಕುಲದವರೆಲ್ಲರೂ ಈ ಹೊಸ ಆಚಾರವನ್ನು ಪುರಸ್ಕರಿಸಿದರು.

ಸಮುದ್ರತೀರದ ಬುರಾಮಿಯಾ ಪ್ರಾಂತದಲ್ಲಿ ಪಾತಾಳೀಯರೇ ಪ್ರಬಲರಾದ ಜನ: ವ್ಯಾಪಾರ ಉದ್ಯಮಗಳೆಲ್ಲ ಅವರ ವಶದಲ್ಲಿವೆ. ಅಧಿಕಾರ, ಸ್ಥಾನ-ಮಾನಗಳೂ ಅವರವೇ. ವೈಕಟ್ಟು, ರೂಪ ನಡೆ-ನುಡಿಗಳಲ್ಲಿಯೂ ಅವರು ದೇಶೀಯರಿಂದ ತೀರ ಭಿನ್ನರಾಗಿಯೇ ಕಾಣುತ್ತಾರೆ. ಆದರೆ ತಮ್ಮ ಸೌಜನ್ಯದಿಂದ ತಮ್ಮ ವ್ಯವಹಾರ ಚಾತುರ್ಯದಿಂದ, ತಮ್ಮ ಸ್ವಾಯತ್ತವಾದ ಬುದ್ಧಿ ಕೌಶಲದಿಂದ ಪಾತಾಳೀಯರು ಹಿಮದ ನಾಡಿನಲ್ಲೇ ತುಂಬ ಗೌರವ ಗಳಿಸಿದ ಸಂಪನ್ನರು ಹಿಡಿ-ಹಿಡಿಯಾಗಿ, ಬೊಗಸೆ-ಬೊಗಸೆಯಾಗಿ ಇವರು ಮೀನು ತಿನ್ನುವದರಲ್ಲಿ ಅಪ್ರತಿಮರು. ಸಮುದ್ರದಲ್ಲಿಯೋ, ನದಿಯಲ್ಲಿಯೋ, ಪಾಚಿಯಲ್ಲಿಯೋ, ಹಾಯಾಗಿ ಮೀನುಗಳು ಈಸಾಡುವುದನ್ನು ಕಂಡಾಗ, ಎಂತಹ ಪಾತಾಳೀಯನಲ್ಲೂ ಬಾಯಿ ನೀರೂರುತ್ತದೆ. ಎಂತಹ, ಏನೆಲ್ಲ ಗಹನವಾದ ವಿಷಯವನ್ನು ಅವನು ಮಾತನಾಡುತ್ತಿದ್ದರೂ, ಗಗನದೆಡೆಗೆ ಉದಾತ್ತನಾಗಿ ನೋಡುತ್ತಿದ್ದುದಾದರೂ, ಮೀನು-ಮೊಸಳೆಗಳು ಈಜುವದನ್ನು ಕಂಡಾಗ, ಎಂತಹ ಪಾತಾಳೀಯನಿಗೂ ಸೈರಿಸುವದು ದುಸ್ತರವಾದ ವಿಷಯ. ಒಂದೇ ನೆಗೆತಕ್ಕೆ ನೀರಿನಲ್ಲಿ ಹಾರಿ, ಹೋರಾಡಿ, ಜೀವಂತ ಮೀನು-ಮೊಸಳೆಗಳನ್ನು ಹಿಡಿದು ಕಚಕಚನೆ ಕೊಚ್ಚಿಕೊಚ್ಚಿ ತಿನ್ನುವದರಲ್ಲಿ ಪಾತಾಳೀಯರನ್ನು ಸರಿಗಟ್ಟುವವರು ಭೂಮಂಡಲದಲ್ಲಿಯೇ ಇರಲಿಕ್ಕಿಲ್ಲ. ಮೀನನ್ನು ಹಪಹಪಿಸಲು ದೈವದತ್ತವಾದ ಬಾಯಿ-ಹಲ್ಲುಗಳಿರುವಾಗ, ಬೆಂಕಿ ಮಸಾಲೆಗಳ ಅಗತ್ಯವೇನು---ಎಂದು ಕೇಳುವ ನಿಸ್ಪೀನುರು ಪಾತಾಳೀಯರು. ಇನ್ನೇ ಸಾಲದು. ಮಳೆಗಾಲದಲ್ಲಿ ನದಿಗಳು, ಸಮುದ್ರ ಉಕ್ಕಿ ಹರಿದಾಗ, ಇವರು ಮತ್ಸ್ಯದಿನವನ್ನಾಚರಿಸುತ್ತಾರೆ. ಆಗ ಎಲ್ಲ ಪಾತಾಳೀಯರ ಮನೆಯ ಮುಂದೆ, ಮೀನು-ಮೊಸಳೆಗಳ ತೋರಣ ಬಿಗಿದಿರುತ್ತಾರೆ! ಮತ್ಸ್ಯದೇವನನ್ನು ಎಲ್ಲರ ಮನೆಗಳಲ್ಲಿಯೂ ಆಹ್ವಾನಿಸುತ್ತಾರೆ.! ಆ ಒಂದು, ಪಾತಾಳೀಯರೆಲ್ಲರಿಗೂ ಮೀನು ತಿನ್ನಲು ನಿಷೇಧವಿದೆ.

ಹೆಣ್ಣು ಗಂಡುಗಳೆಲ್ಲ ಅಂದು ನದಿ ಸಮುದ್ರಗಳಿಗೆ ಹೋಗಿ ಮತ್ಸ್ಯಪೂಜೆಯನ್ನು ಗೈದು ಕೊಡತುಂಬ ನೀರು ಹೊತ್ತು ತಂದು ಪೂಜಿಸಿ ಆ ನೀರಿನಲ್ಲಿಯೇ ಎಲ್ಲರೂ ಸ್ನಾನಗೈಯುತ್ತಾರೆ. ಪಾತಾಳೀಯರ ಕುಲಗೌರವಗಳಿರುವದು ಅವರ ಮತ್ಸ್ಯಪ್ರೀತಿಯಲ್ಲಿ ಎಂದು ಪಾತಾಳೀಯರ ಮತ. ಪ್ರೇಮದ ಅತ್ಯುಚ್ಚ ಸಂಕೇತ ಪ್ರೇಮಿಸಿದುದನ್ನು ತಿನ್ನುವದರಲ್ಲಿವೆ---ಎಂಬ ನಂಬಿಕೆ ಕಾಡು ಜನಾಂಗಗಳಲ್ಲಿದೆ. ತಾಯಿಬೆಕ್ಕು ತನ್ನ ಮರಿಯನ್ನೇ ತಿನ್ನುವದಾಗಿ ಎಷ್ಟೋ ಜನಾಂಗಗಳು ಇಂದಿಗೂ ಇಲ್ಲಿ ನಂಬುತ್ತಿವೆ

ಹೀಗಾಗಿ ಎಷ್ಟೋ ಪಾತಾಳೀಯರು ತಮ್ಮ ಮಕ್ಕಳನ್ನು " ಮತ್ಸ್ಯ ಭೂಪ" "ಮತ್ಸ್ಯದೂತ"" ಮತ್ಸ್ಯ ಮುಖಿ" ಎಂದು ಮುಂತಾಗಿ ತಮ್ಮ ಭಾಷೆಯಲ್ಲೇ ಸಂಬೋಧಿಸುತ್ತಾರೆ. ತಮ್ಮ ಮತ್ಸ್ಯದೇವನನ್ನು ಕುರಿತು ಪಾತಾಳೀಯರು ನೂರಾರು ಕತೆಗಳನ್ನು ಹೊಸೆದು,-ರುಚಿ ರುಚಿಯಾದ ಮೀನುಗಳ ಪಕ್ವಾನ್ನಗಳನ್ನು ಪಿಲ್ಲುವಾಗ ಹೇಳುತ್ತಿರುತ್ತಾರೆ. ಆವುಗಳಲ್ಲಿ ನಿಮಗೆ ಸ್ವಾರಸ್ಯವೆನಿಸಬಹುದಾದ ಒಂದು ಕತೆಯನ್ನು ನಿಮ್ಮ ಮುಂದಿಡಲೇ?

ಶತಮಾನಗಳ ಹಿಂದಿನ ಮಾತು: ಹಿಂದುಸ್ತಾನದಿಂದ ಮೂಟೆ ಹೊತ್ತುಕೊಂಡು, ಭಾರತೀಯ ವರ್ತಕರು ಭೂಮಂಡಲದ ತುಂಬೆಲ್ಲ ದೊಡ್ಡ ದೊಡ್ಡ ಹಾಯಿ ಹಡಗುಗಳಿಂದ ಓಡಾಡುತ್ತಿದ್ದಾಗಿನ ಮಾತು : ಸಯಾಮು, ಜಾವಾ, ಸುಮಾತ್ರಾ, ಮಲಯಾಗಳಿಗೆ ಕಾಳುಕಡಿ, ಬಟ್ಟೆ ವಜ್ರ ನೈಡೂರ್ಯಗಳನ್ನು ಹೊತ್ತುಕೊಂಡು ಹೊರಟ ಒಂದು ಹಾಯಿ ಹಡಗು, ನಡುಸಮುದ್ರದಲ್ಲೆಲ್ಲೊ ದಾರಿತಪ್ಪಿ, ಎಲ್ಲಿಗೋ ಹೊರಟುದು ಎತ್ತಲೋ ಮುಖವಾಗಿ ಗೊತ್ತುಗುರಿಯಿಲ್ಲದೆ ಸಾಗಿತು. ಆಗ ಹಾಯಿ-ಹಡಗುಗಳು ನಿಶ್ಚಿತ ನೆಲೆಗೇ ತಲ್ಪುವುದೆಂದರೆ ದೈವದತ್ತವಾದ ಮಾತು. ನೀರಿಗಿಳಿಸುವವರೆಗೆ ಮನುಷ್ಯ ಪ್ರಯತ್ನ: ನೆಲೆಗೆ ಬರುವವರೆಗೆ ದೈವ ಯತ್ನ---ಎಂದು ಜನರಾಡಿಕೊಳ್ಳುತ್ತಿದ್ದ ಕಾಲವದು. ಸಯಾಮು ದೇಶಕ್ಕೆ ಇನ್ನು ವಾರ ಎರಡು ನಾಗಗಳಲ್ಲಿ ತಲ್ಪುವೆವೆಂದುಕೊಂಡ ವರ್ತಕರಿಗೆ, ಹಾಗೂ ಹಡಗಿನ ನೌಕರರಿಗೆ-ಯಾವ ನೆಲೆಯಾದರೂ ಯಾವ ನೆಲವಾದರೂ ಅಡ್ಡಿ ಇಲ್ಲ-ಯಾವಾಗ ಕಂಡೇವು, ಏನು ಮಾಡಿಯೇವು ಎನ್ನಿಸಿತು-ಭೋರೆಂಬ ಬಿರುಗಾಳಿ ನಿರಂತರ ದಿನ ರಾತ್ರಿ ಬೀಸಿ, ಸಾಗರವನ್ನೇ ಅಲ್ಲೋಲಕಲ್ಲೋಲವಾಗಿಸಿತ್ತು. ಹಾಯಿ ಕಂಬ ಉರುಳಿತ್ತು. ಹಾಯಿ ಹರಿದಿತ್ತು. ಚುಕ್ಕಾಣಿ ದಿಕ್ಕುಗೆಟ್ಟಿತ್ತು. ನೆಲದ ಸುಳಿವನ್ನು ಕಾಣದೆ, ಮುಂದೇನು ಕಾದಿದೆಯೆಂಬುದನ್ನು ಅರಿಯದೆ ಅದೆಷ್ಟೋ ದಿನಗಳನ್ನು ತಿಂಗಳನ್ನು ಅವರು ಕಳೆದಿರಬೇಕು. ಹಡಗದಲ್ಲಿದ್ದ ಆಹಾರ ಸಾಮಗ್ರಿಗಳೆಲ್ಲಾ ತೀರಿ ಸಾಗರದ ಅನಂತತೆ, ವಿಶಾಲತೆ ಅವರನ್ನು ಕಂಗೆಡಿಸಿತ್ತು. ಹಿಂದೆ ಹೋಗುವಂತೆಯೂ ಇಲ್ಲ, ಮುಂದೆ ಹೋಗು

ಜರಯಂತೆ

ನಂತೆಯೂ ಇಲ್ಲ: ಕರಾಳವಾದ ಸಾಗರ! ಎಷ್ಟು ದಿನ ಹೀಗೆ ಅವರ ಹಾರಾಟ-ಹೋರಾಟ ಸಾಗೀತು? ಹೀಗೆ ಪದಗೆಟ್ಟು ಅಸಹಾಯರಾಗಿ, ತಮ್ಮ ಉಳಿವು-ಅಳಿವನ್ನು ದೈವಕ್ಕೆ ಒಪ್ಪಿಸಿ, 'ಗಾಳಿಯೊಲಿದತ್ತ ಹಡಗು ತೇಲೀತು' ಎಂದು ನಿರಾಶರಾಗಿ, ತಟಸ್ಥರಾಗಿ ಅವರು ಕೈಕಟ್ಟಿ ಕುಳಿತರೆಂದು ಊಹಿಸಿಕೊಳ್ಳುವುದು ತಪ್ಪೆ? ಇಂತಹ ನಿಪತ್ತಿನಲ್ಲಿ, ಹಡಗು ಯಾವುದೋ ದಾರಿತಪ್ಪಿದ ಬಂಡೆಗೋ, ಸಾಗರದಲ್ಲಿ ಒಮ್ಮೊಮ್ಮೆ ತೇಲಿ ಬರುವ ಹಿಮದ ಬಂಡೆಗೋ ಆಗಾಗ ಬಡಿಯುವ ಭಯ ಬೇರೆ - ಸಾಗರದ ಆಳದಂತೆಯೇ ಮನುಷ್ಯನ ಅಸಹಾಯತೆ: ಎರಡರ ನೆಲೆಯೂ ನಿಲುಕದ ಮಾತು ಎಂದು ಸಾಗರದಲ್ಲಿ ಪ್ರಯಾಣ ಮಾಡುವವರು ಆಗ ಹೇಳುತ್ತಿದ್ದದ್ದು ಸತ್ಯದ ಮಾತೇ. ಇರಲಿ. ಆ ಮಾತು ಈಗೇಕೆ? ಹಾಗೆ ಹಾದಿತಪ್ಪಿದ ಆ ಹಡಗು ಕೊನೆಗೊಮ್ಮೆ ತೇಲಿ ತೇಲಿ ಯಾವುದೋ ನೆಲದ ಸನಿಯವನ್ನು ಸೇರಿತ್ತು. ಆ ಹಡಗಿನವರು ಮೊದಲು ಕಾಣದ, ಕೇಳದ ನೆಲ! ಹಸಿರು ಹಸಿರಾಗಿ ಕಂಗೊಳಿಸುವ ಸೂಚಿಪರ್ಣದ ಗಿಡಗಳು! ಅಸತಿಪೊರವಲ್ಲೇ ಕಂಗೊಳಿಸುವ ಹಿಮುವ ಬಿಳಿ ಬಿಳಿಯಾದ ಗುಡ್ಡಗಳು. ಹೆಪ್ಪುಗಟ್ಟುತ್ತಿರುವ ನೊರೆನೊರೆಯಾದ, ಬೆಳ್ಳಿ ಬೆಳ್ಳಿಯಾದ ಸಾಗರ! ಎಲ್ಲವೂ ಬಿಳಿದು-ಸೃಷ್ಟಿಯೇ ಕುಲು ಕುಲು ನಗುತ್ತಿತ್ತು ಎಷ್ಟೆಷ್ಟೋ ಈ ಬೆಳ್ಳಿಯ ನಾಡಿನಲ್ಲಿ! ಅಂದ ಮೇಲೆ ಹಾರುವ ಹಾರಾಡುವ ಹಕ್ಕಿಗಳು ಬೆಳ್ಳಗಿದ್ದರೆ ಏನಚ್ಚರಿ! ಓಡಾಡುವ, ನಲಿದಾಡುವ ನೆಲಚರ ಪ್ರಾಣಿಗಳು ಬಿಳಿಯಾಗಿದ್ದುದರಲ್ಲಿ ಏನಾಶ್ಚರ್ಯ! ಸಾಗರಕ್ಕೆ ತೀರ ಹತ್ತಿಕೊಂಡ ನಾಡೆಲ್ಲ ಮಳಲಿನ ರಾಜ್ಯವಾಗಿತ್ತು! ಬಿಳಿಯಾದ ಮಳಲು! ಕಣ್ಣು ಕಾಣುವಷ್ಟೂ ಹಾಯಾಗಿ ಸಮನಾಗಿ ಪರಡಿ ಹಾಸಿತ್ತು! 'ಕೊನೆಗಾದರೂ ನೆಲ ಮುಟ್ಟಿದೆವಲ್ಲಾ' ಎಂದುಕೊಂಡು ಹಿಗ್ಗಿನಿಂದಲೇ ಆ ಹಡಗಿನಲ್ಲಿಯ ಅಸಹಾಯರು ತಮ್ಮ ಕುಲದೈವವನ್ನು ನೆನೆಯುತ್ತ ಹಡಗಿನಿಂದ ಇಳಿದರು. ಯಾರು ಅವರನ್ನು ಸ್ವಾಗತಿಸಬೇಕು? ಯಾರು ಅವರ ಹಡಗಿನ ಹಾದಿ ಕಾಯುತ್ತಿರಬೇಕು? ಅವರು ಹೋದುದೇ ಹಾದಿ: ಮುಟ್ಟಿದುದೆಲ್ಲ ಅವರದೇ ವಸ್ತು. ಕಂಡುದೇ ರಾಜ್ಯ: ಆ ಮಳಲಿನಲ್ಲಿ ಅತ್ತ ಇತ್ತ ಓಡಿಯಾಡಿದರು. ಕೊತ್ತಿ ಬರುವ ಹಸಿವಿನ ಆಕ್ರೋಶವನ್ನು ತಡೆಯಲಾರದೆಯೆ, ಮಳಲಿನಾಚೆಯ ಬೆಳೆದ ಪುರಗಳ ರಂಬೆಗಳನ್ನು ಅಲುಗಿಸಿ ಬಿದ್ದ ಹಣ್ಣುಗಳನ್ನೆಲ್ಲಾ ಹೆಕ್ಕೆತಿಂದರು; ಹೆಪ್ಪುಗಟ್ಟಿದ ಸಾಗರದ ನೀರನ್ನೇ ಕುಡಿದರು. ಹವೆಯೂ ತಂಪಾಗಿತ್ತು. ಬಿಸಿಲೂ ಇಳಿಮುಖವಾಗಿತ್ತು. ನಾನೆಗೂ ಬದುಕಿದೆವಲ್ಲಾ—ಎಂಬ ಸಂತಸದಲ್ಲಿ ತಿಂದು ತೇಗಿದ ಆಹಾರ ಸುಖಾನುಭವದಲ್ಲಿ ಹಾಯಾಗಿ ಮಳಲಿನಲ್ಲೇ ಒರಗಿ ನಿದ್ದೆಹೋದರು—

ಅವರಿಗೆ ಎಚ್ಚರವಾದಾಗ, ಅವರ ಸುತ್ತಲೂ ಕವಡೆ, ಶಂಖ, ಮಣಿಪರಗಳನ್ನು ವೈತುಂಬ ಅಲಂಕರಿಸಿಕೊಂಡ, ಬಿಳಿಯ ಹೂಗಳ ಮಾಲೆಯನ್ನು ವೈತುಂಬ ಹಾಕಿಕೊಂಡ ಸೂಚಿಪರ್ಣಿಯ ವಸ್ತ್ರವನ್ನು ಹೊದ್ದುಕೊಂಡ, ಕೈಯಲ್ಲಿ ಭಲ್ಲೆ-ಬರ್ಚಿಗಳನ್ನು ಹಿಡಿದ, ಶ್ವೇತವರ್ಣದ ವೃಷಕಾಯರು ನಗುತ್ತ, ಕುಣಿದಾಡುತ್ತ, ಕೇಕೆ ಹಾಕುತ್ತ ಕೆಲಿದಿದ್ದರು: ಅವರು ಬುರಾಮಿಯಾ ರಾಜ್ಯದ ಕಡಲ ಕೆನಾರೆಯ ಕಾವಲಿಗರು— ತಮ್ಮ ರಾಜ್ಯಕ್ಕೆ ಯಾರೋ ದಂಡೆತ್ತಿ, ಹಡಗಿನಿಂದ ಬಂದಿಳಿದಿರುವರೆಂದು ಬಗೆದು, ರಣಕಹಳೆಯನ್ನೂದಿ, ಸಜ್ಜಾಗಿ ಬಂದ ಯೋಧರವರು— ಆದರೆ ಮುಂದೆ ನಡೆದುದು ಯುದ್ಧವಲ್ಲ! ಹಡಗಿನವರಾರೂ ಹೋರಾಡಲು ಸಿದ್ಧರಿದ್ದಿಲ್ಲ! ಅವರಿಗೆ ಬೇಕಾದುದು ರಾಜ್ಯವಲ್ಲ; ಆಸರೆ: ಬದುಕಿಕೊಂಡಿರಲು ತಾಣ: ಬುರಾಮಿಯಾರ ಮುಂದೆ ಹುಲ್ಲುಕಚ್ಚಿ ಕೈಕಟ್ಟಿ ನಿಂತರು—

ಮರುದಿನವೇ ಬುರಾಮಿಯಾದ ರಾಜನಿಗೆ ಸುದ್ದಿ ಹೋಯಿತು. ಸುದ್ದಿ ಕೇಳಿದೊಡನೆಯೇ ಅವನೂ ಅಲ್ಲಿಗೆ ತನ್ನ ಪರಿವಾರದೊಡನೆ ನೆಗೆದು ಬಂದ. ಬುರಾಮಿಯಾರಿಗೆ ಆಗ ತಮ್ಮ ಹಿಮದೇಶವನ್ನು ಬಿಟ್ಟು ಬೇರೆ ನಾಡಿದ್ದುದೇ ತಿಳಿಯದು. ಹಿಮದೇಶದ ಪ್ರಾಂತಗಳೇ ತಮ್ಮತಮ್ಮಲ್ಲಿ ಕಾದಾಡಿ ಕದನವೆಸಗುತ್ತಿದ್ದವು; ಆದರೆ ಈ ಹಡಗಿನಲ್ಲಿ ಬಂದವರಾರೂ ಹಿಮದೇಶದವರಾಗಿರಲಿಲ್ಲ. ಅವರ ಶ್ವೇತ ದೃಢಕಾಯ ಇವರದಾಗಿರಲಿಲ್ಲ. ಎಲ್ಲ ಬಗೆಯಿಂದಲೂ ಭಿನ್ನರಾಗಿದ್ದರು ಇವರು; ಮೇಲೆ ಶರಣಾರ್ಥಿಗಳು. ಏನು ಮಾಡಬೇಕೆಂಬುದು ಮೊದಲು ಬುರಾಮಿಯಾರಿಗೆ ತಿಳಿಯದಾಯಿತು. ಇಂತಹ ಪ್ರಸಂಗಗಳೇ ಬುರಾಮಿಯಾರಿಗೆ—ಏಕೆ ಹಿಮದ ನಾಡಿನವರಿಗೇ—ಮೊದಲು ಬಂದಿರಲಿಲ್ಲ. ಕಾದಾಡುವ ಹಗೆಗಳನ್ನು ಅವರು ಅರಿತಿದ್ದರು. ಆದರೆ, "ದಮ್ಮಯ್ಯ, ಬದುಕಿಕೊಳ್ಳುತ್ತೇವೆ" ಎಂಬ ಮಾನವರನ್ನು ಅವರು ಕಂಡಿರಲಿಲ್ಲ ಹಾಗೆಂದು, ಸುಮ್ಮನಿರುವುದಾದರೂ ಹೇಗೆ?

ಹಿಮದೇಶ ಹಿಮದವರದ್ದು; ಬೇರೆ ಯಾವ ಮ್ಲೇಂಛರೂ ಬಂದು ಹಿಮದೇಶವನ್ನು ತೊತ್ತುಳಿಯದಂತೆ ನೋಡಿಕೊಳ್ಳುವುದು ಆ ಹಿಮದೇಶೀಯರ ಆದ್ಯಕರ್ತವ್ಯವೆಂದು, ತಲೆತಲಾಂತರದಿಂದ ಬಂದ ನಂಬುಗೆಯಾಗಿತ್ತು. ಬುರಾಮಿಯಾರ ರಾಜ ದಿಕ್ಕುಗಾಣದಾಗಿದ್ದ. ತನ್ನವರ ಸಭೆಯನ್ನು ಕರೆದ. ಎಲ್ಲರೂ ಕಕ್ಕಾವಿಕ್ಕಿಯಾಗಿ 'ಮುಂದೇನು?' ಎಂದು ಕೇಳಿಕೊಂಡರು. ಹಡಗಿನಲ್ಲಿದ್ದವರು ಹಗೆಯಾಗಿ ಬಂದಿದ್ದರೆ ಅವರಿಗೆ ಈ ಪ್ರಮೇಯವೇ ಬರುತ್ತಿರಲಿಲ್ಲ. ಹೊಳೆಯುವ ಚೂಪಾದ ಅವರ ಕತ್ತಿ ಅವರ ಪ್ರಶ್ನೆಗೆ ಉತ್ತರ ಹೇಳಬಹುದಿತ್ತು. ಆದರೆ ಈಗ ಹಾಗಲ್ಲ! 'ನಮಗೂ ಬದುಕಲು ಜಾಗಕೊಡಿ' ಎನ್ನುವವರ ಮುಂದೆ ಕತ್ತಿ ಏನು ಪ್ರಯೋಜನ? ಹಡಗಿನವರು ನಾನಾವಿಧವಾಗಿ ಬೇಡಿಕೊಂಡರು. ತಾವು ತಂದ ವಜ್ರವೈಡೂರ್ಯಗಳನ್ನು ಬುರಾಮಿಯಾದ ಭೂಪನಿಗೆ ಕಾಣಿಕೆ ಕೊಡುವೆವೆಂದರು. ಆ ಬೆಲೆ ಬಾಳುವ ಮಾಣಿಕ್ಯ ಮುತ್ತುಗಳಿಂದ ಅವನಿಗೇನಾಗಬೇಕಿತ್ತು? ಅವರ ಕಡಲತಡಿಯ ಶಂಖ ಚಿಪ್ಪುಗಳೆಲ್ಲಿ? ಆ ಹಡಗಿನವರ ವಜ್ರ ವೈಡೂರ್ಯಗಳೆಲ್ಲಿ? ಹಡಗಿನವರ ಯಾವ ಆಟವೂ ಬುರಾಮಿಯಾರ ಮುಂದೆ ನಡೆಯಲಿಲ್ಲ. ಕೊನೆಗೂ ಬುರಾಮಿಯಾರ ರಾಜಪಂಡಿತ **ನಿಖುರನು**, ತನ್ನ ಬಿಳಿಯ ದಾಪ ಗಡ್ಡವನ್ನು ನೇವರಿಸಿಕೊಳ್ಳುತ್ತ ಹೀಗೆಂದಿದ್ದ: "ಕಡಲಿನಿಂದ ಬಂದ ಇವರನ್ನು ಬುರಾಮಿಯಾರ ನಾಡದೇವತೆಯಾದ ಕಡಲ ದೇವಿಗೆ ಬಲಿಯಾಗಿಸುವುದೇ ಒಳ್ಳೆಯದು: ಅವಳೇ ಎಣಿಸಿ ಬಯಸಿ ತಂದ ಆಹುತಿಗಳು ಇವರು—" ರಾಜ ಪಂಡಿತನ ಮಾತಿಗೆ ಎದುರು ಯಾರು ಏನು ಹೇಳಬೇಕು?

ಮರುದಿನ ಬುರಾಮಿಯಾರ ಕುಲದೈವವಾದ ಕಡಲದೇವಿಯ ಮುಂದಿರದೆದುರಿನ ಮಳಲಿನಲ್ಲಿ, ಹಡಗಿನವರು ಬಲಿಯಾಗಲು ಸಿದ್ಧರಾಗುತ್ತಿದ್ದರು. ಬುರಾಮಿಯಾರು ತಮ್ಮ ಹಿಮಗುಡ್ಡೆಗಳಿಂದ ಅವರ ದೇವಿಗೆ ಪ್ರಿಯವಾದ 'ಹಿರಿಹಿರಿ' ಹೂವನ್ನು ಹರಿದು ತಂದು ಮಾಲೆ ಮಾಡಿ ಹಡಗಿನವರ ಕೊರಳಿಗೆ ಹಾಕಿದ್ದರು. ರಾಜನ ಅಪ್ಪಣೆಯಂತೆ ದೇವಿಯ ಪೂಜೆಯನ್ನೂ ಸುರುಮಾಡಿದರು. ಅಹ್ವಾನವಾಯಿತು. ಆರಾಧನೆಯಾಯಿತು. ಆರತಿಯನ್ನೂ ಎತ್ತಿಯಾಯಿತು. ಇನ್ನು ನೈವೇದ್ಯವಾಗುವದೊಂದೇ ತಡ: ಹಡಗಿನವರೆಲ್ಲರೂ ದಿಕ್ಕುಗೆಟ್ಟಿದ್ದರು. ದಿಕ್ಕುಗೆಟ್ಟ ಹದಗೆಟ್ಟ ಅವರನ್ನು ವಿಧಿ ಈ ರೀತಿ ತಂದು ಇಲ್ಲಿ ಈ ರೀತಿಯಾಗಿ ಅವರನ್ನು ಬಲಿಯಾಗಿಸಬೇಕಿತ್ತೆ ? ಇದರ ಬದಲು ಅವರ ಹಡಗಾದರೂ ಸಾಗರದಲ್ಲಿ ಮುಳುಗಿದ್ದರೆ? ಏನು ಚಿಂತಿಸಿ ಏನು ಫಲ ? ಸಾಯುವ ಮೊದಲು ತಮ್ಮ ಕುಲದೈವವನ್ನು ನೆನೆದರು; ತಮ್ಮವರನ್ನು ತಮ್ಮ ನಾಡನ್ನು ನೆನೆದರು. ಬಲಿಯಾಗುವವರನ್ನು ಕುರಿತು ಕೊನೆಯ ಬಾರಿಯೆಂಬ್ಕೆ ಬುರಾಮಿಯಾದ ಭೂಪ ಕೇಳಿದ: "ಇನ್ನೇನಾದರೂ ಹೇಳುವುದು ಇದೆಯೆ ?" ಸಾಯಲು ಸಿದ್ಧರಾಗಿರುವವರಿಗೆ ಮೃತ್ಯುವಿನ ತೆರೆದ ದವಡೆಯ ಎದುರಿರುವವರಿಗೆ ಮಾತನಾಡಲು ಮಾತು ಹೊರಬರುವುದುಂಟೆ ? ಆದರೂ ಹಾಗೆ ಕೇಳುವ ಸಂಪ್ರದಾಯ; ಅಂತೆಯೇ ಹಾಗೆ ಅವರನ್ನು ಕೇಳಿದ್ದ. ಅವರಿಂದ ಯಾವ ಉತ್ತರವನ್ನೂ ಅವನು ಬಯಸಿರಲಿಲ್ಲ. ಅವರಾರೂ ಎಣಿಸಿರಲಿಲ್ಲ. ಪೂಜೆಯು ಕೊನೆಗೊಳ್ಳುವುದರಲ್ಲಿತ್ತು. ಹಡಗಿನವರು ತಮ್ಮಲ್ಲಿ ಒಬ್ಬರಿಗೊಬ್ಬರನ್ನು ಕಂಡುಕೊಂಡರು— ನಿಸ್ಸಹಾಯರಾಗಿ ! ಎದುರು ಬಾಯ್ತೆರೆದು ವಿಕಾರವಾಗಿ ನರಬಲಿಯನ್ನೆಣಿಸಿ ಕುಳಿತ ಆ ಕಲ್ಲಿನ ಮೂರ್ತಿಯನ್ನು ಕಂಡರು— ಕಣ್ಣುಮುಚ್ಚಿದರು—

" ಜೀಯಾ, ಆಳುವ ಮಹಾಪ್ರಭು,
ನನ್ನದೊಂದು ಕೋರಿಕೆಯಿದೆ...."

ಹಡಗಿನವರಿದ್ದಲ್ಲಿಂದ ಸ್ವರ ಬಂದಿತು. ಹಾಗೆ ಮಾತನಾಡಿದುದು ಹಡಗಿನವರಲ್ಲಿಯ ಮಾಳಪ್ಪ— ಹಾಯಿಹಡಗನ್ನು ಜಲ್ಲಿನಿಂದ ಒತ್ತಿ ನಡೆಸುವವರಲ್ಲಿ ಅವನೊಬ್ಬನಾಗಿದ್ದನು. ಹಡಗಿನವರಾದ ವರ್ತಕರಿಗೆಲ್ಲ ವಿಸ್ಮಯ ! "ಊಳಿಗದ ಮಾಳಪ್ಪ ಇಂತಹ ವಿಪತ್ತಿನಲ್ಲಿ ಏನು ಕೇಳಬಯಸುತ್ತಾನೆ ? ಮೂರ್ಖ—" ಎಂದು. ಬುರಾಮಿಯಾದವರಿಗೂ ವಿಸ್ಮಯ; ಆದರೂ, ತೋರಗೊಡದೆ ಅವರ ರಾಜನೆಂದ:

" ಏ-ದು, ಕೇಳಬಹುದು—"

ಮಾಳಪ್ಪ ಒಮ್ಮೆ ಆಕಾಶವನ್ನೂ ಒಮ್ಮೆ ಸಾಗರವನ್ನೂ ಭಯವಿಸ್ಮಿತನಾಗಿ ನೋಡಿ, ಕೈಜೋಡಿಸಿ ಹೇಳಿದ:

" ಆಳುವ ದೊರೆಯೇ, ನಾವು ಪಾತಾಳದೇಶದವರು; ನಾವೆಲ್ಲರೂ ಕಡಲದೇವಿಯ ಮರಿಮಕ್ಕಳು: ನಮ್ಮನ್ನು ಬಲಿಯಾಗಿಸಿದರೆ ಕಡಲತಾಯಿ ಕೆರಳಬಹುದು; ಹಾಗೆ ಅವಳನ್ನು ಕೆರಳಿಸಬಾರದೆಂದು ನಿಮ್ಮಲ್ಲಿ ನನ್ನ ಪ್ರಾರ್ಥನೆ; ಮಹಾಪ್ರಭುಗಳ ಚಿತ್ತ—" ಬುರಾಮಿಯಾರು ಎಂದೂ ಕೇಳಿ ತಿಳಿಯದ ನಾಡು ಪಾತಾಳದೇಶ: ಅಲ್ಲಿಯೂ, ಕಡಲದೇವಿ ಆಳುತ್ತಿದ್ದುದು ಅವರಿಗೆ ತಿಳಿಯದ ವಿಷಯ: " ಏನೋ ಸುಳ್ಳುಹೇಳುತ್ತಿರಬೇಕು ಈ ಮನುಷ್ಯ " ಎಂದು ಒಮ್ಮೆ ಎನಿಸಿದರೆ, ಇನ್ನೊಮ್ಮೆ 'ದೇವರ ವಿಷಯ: ಹೇಗೆ ಸುಳ್ಳೆನ್ನುವದು ?" ಎನಿಸಿತು. ಬುರಾಮಿಯಾರ ರಾಜಪಂಡಿತ ಕೇಳಿದ:

' ಎಲ್ಲಿದೆ ನಿಮ್ಮ ಪಾತಾಳದೇಶ ?'

"ಅಯ್ಯೋ, ನಮ್ಮ ದೇಶ ಈ ಎದುರು ಕಾಣುವ ಕಡಲತಲದಲ್ಲಿದೆ; ನಾವೆಲ್ಲರೂ ನಮ್ಮ ಕಡಲತಾಯಿಯ ಮುಂದಿರಕ್ಕೆ ಪೂಜೆಗೆಂದು ಹೋಟಿದ್ದೆವು.— ಹಾದಿ ತಪ್ಪಿತು; ಇಲ್ಲಿಗೆ ಬಂದೆವು— ಆದರೂ ಚಿಂತೆಯಿಲ್ಲ. ಕಡಲದೇವಿಯ ಮುಂದಿರಕ್ಕೇ ಬಂದಿರುವೆವು; ನಾವೇ ದನ್ಯರು—" ಎಂದು ಮಾಳಪ್ಪ ಕೈಜೋಡಿಸಿ ದೇವಿಯ ಮುಂದಿರದೆದುರು ಬಿದ್ದುಕೊಂಡ. ಹಡಗಿನವರಿಗೂ ಹಾಗೆ ಮಾಡದೆ ಬೇರೆ ಗತಿಯಿರಲಿಲ್ಲ. " ಈ ಮಾತಿಗೆ ರುಜುವಾತು ಇದೆಯೆ ?" ರಾಜಪಂಡಿತ ಕೇಳಿದ. " ಓ ಅದಕ್ಕೇನು ?" ಎಂದವನೇ ಮಾಳಪ್ಪ ತನ್ನ ಮೈಮೇಲಿನ ಅಂಗಿಯನ್ನೆಲ್ಲ ಕಳಚಿ, ಬರೇ ಲಂಗೋಟಿಯನ್ನುಟ್ಟುಕೊಂಡು " ಜಯಜಯ ಮತ್ಸ್ಯದೇಶ " ಎಂದು ಸಾಗರಕ್ಕೆ ಹಾರಿ, ಕ್ಷಣಾರ್ಧದಲ್ಲಿ ಮುಳುಗಿ ಮಾಯವಾದ. ಒಂದು ಅರೆತಾಸಾದರೂ ಹಾಗೆಯೇ ಮುಳುಗಿ ಕುಳಿತಿರಬೇಕು ಮಾಳಪ್ಪ. ಹಾಗೆಂದು ಎಷ್ಟು ಹೊತ್ತು ಹಾಗೆ ಕುಳಿತಿರಬಹುದಿತ್ತು ? ಮೇಲೆ ಬರುತ್ತಾ ನಾಲ್ಕೆಂಟು ಮೀನು-ಮೊಸಳೆಗಳನ್ನು ಹಿಡಿದು ಮಾಳಪ್ಪ ಬಂದಿದ್ದ. ಬಂದಿದ್ದವನೇ ಆ ಮೀನು ಮೊಸಳೆಗಳನ್ನು ತಮ್ಮವರಲ್ಲಿ ಹಂಚಿ "ಜಯಜಯ ಮತ್ಸ್ಯದೇಶ! ಜಯಜಯ ಪಾತಾಳನುಂಡಳ!" ಎನ್ನುತ್ತಾ, ಕಣ್ಣುಮುಚ್ಚಿಕೊಂಡು, ತಟಪಟಪಟಿಸುತ್ತಿರುವ ಆ ಮೀನು-ಮೊಸಳೆಗಳನ್ನು ಕಚ್ಚಿ ಕಚ ಕಚನೆ ಜಗಿದ. ಹುಟ್ಟಿನಿಂದಲೂ ಶಾಕಾಹಾರಿಯಾಗಿದ್ದ ಮಾಳಪ್ಪ, ತನ್ನ ಪ್ರಾಣದೆದುರು ಮತ್ಸ್ಯಾಹಾರಿಯಾಗಿದ್ದ. ತನ್ನ ಪ್ರಾಣಹೋಗುವ ಭೀತಿಯಲ್ಲಿ ಮತ್ಸ್ಯದ ಪ್ರಾಣವನ್ನು ಹಿಂದಿದ್ದ.

ಮಾಳಪ್ಪ ಮತ್ತು ಅವನ ಜತೆಗಾರರು ಮತ್ಸ್ಯದೇಶದವರು; ಕಡಲತಾಯಿಯ ಭಕ್ತರೆನ್ನುವದಕ್ಕೆ ಬೇರೆ ಯಾವ ರುಜುವಾತು ಯಾಕಾದರೂ ಬೇಕು ? ಹಿಡಿದು ತಂದ ಮೀನನ್ನು ತಿಂದವನೇ ಮಾಳಪ್ಪ ಕಣ್ಣುಮುಚ್ಚಿ ಗಟ್ಟಿಯಾಗಿ, "ಮತ್ಸ್ಯಂ-ಮೀನಂ—" ಎಂದೇನನ್ನೋ ಅರಚುತ್ತಾ, ಮಳಲಿನಲ್ಲಿ ಮಲಗಿಕೊಂಡ. ಬುರಾಮಿಯಾರೆಲ್ಲ ಸ್ತಂಭೀಭೂತರಾದರು. ಆ ದಿನವ ಪೂಜೆ ಮುಂದುವರಿಯಲಿಲ್ಲ. ಸಾಗರವನ್ನೇ ತಮ್ಮ ರಾಜ್ಯದ ಗಡಿಯೆಂದುಕೊಂಡ ಬುರಾಮಿಯಾರು, ಸಾಗರವನ್ನು ಇಲ್ಲಿಯವರೆಗೂ ಹೊಕ್ಕಿರಲಿಲ್ಲ. ಕಡಲಿನಲ್ಲಿ ಈಜಾಡುವದು, ಮುಳುಗಿ ಏಳುವದು, ಮೀನನ್ನು ಹಿಡಿದು ತಿನ್ನುವದು—ಅವರು ಕಂಡರಿಯದ ಅದ್ಭುತ! ಮಾಳಪ್ಪನೂ ಅವನ ಸಂಗಾತಿಗಳೂ ಅವರ ಪಾಲಿಗೆ ಅದ್ಭುತರಮ್ಯರಾಗಿದ್ದರು. ಅಲ್ಲಿಂದ ಮುಂದೆ ಮಾಳಪ್ಪನಿಗೂ ಅವನ ಸಂಗಾತಿಗಳಿಗೂ ಸಂಭ್ರಮದ, ಅಭೂತಪೂರ್ವವಾದ ಸ್ವಾಗತ ದೊರೆಯಿತೆಂದು ಬೇರೆ ಹೇಳಬೇಕಿಲ್ಲವಷ್ಟೇ ?

ಎಷ್ಟೋ ಶತಮಾನಗಳ ಹಿಂದಿನ ಮಾತೆಂದು ಮೊದಲೇ ಹೇಳಿದ್ದೇನೆ ಪಾತಾಳೇಯರು ಈಗ ಬುರಾಮಿಯಾರೇ ಆಗಿದ್ದಾರೆ. ಮಾಳಪ್ಪ ತಮ್ಮ ಕುಲಪುರುಷನೆಂದು ಅವರು ಈಗಲೂ ಭಕ್ತಿಯಿಂದ ನೆನೆಸುತ್ತಾರೆ. ತಾವೆಲ್ಲರೂ ಭಾರತೀಯರೇ ಎಂದು, ಸೂರ್ಯಾಸ್ತ—ಸೂರ್ಯೋದಯಗಳಾಗುವಾಗ ಕಡಲತಡಿಯತ್ತ ಕೈಮಾಡಿ ಅವರಲ್ಲಿ ಕೆಲವರಾದರೂ ಈಗಲೂ ಕೈಮುಗಿಯುತ್ತಿರುತ್ತಾರೆ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಕೇಳಿಕೊಂಡಂತೆ 'ಅರಣ್ಯ' ಕಥೆಯನ್ನು ಕುರಿತ ವಿಮರ್ಶೆಗಳು ನಾಲ್ಕು ಜನರಿಂದ ಮಾತ್ರ ಬಂದಿವೆ. ಕಥೆಯು ನನ್ಮತೆಯನ್ನು ಕಂಡು ಬೆರಗುಗೊಂಡೋ ಬೆದರಿಯೋ, ಹೆಚ್ಚು ಜನರು ವಿಮರ್ಶೆಮಾಡಲು ಮುಂದೆ ಬಾರದಿರುವುದು ವಿಷಾದದ ಸಂಗತಿಯಾಗಿದೆ.

ನಾವು ಅನೇಕಸಲ ಈ ಮಾತನ್ನು ವಿವರಿಸಿದ್ದೇವೆ: ವಿಮರ್ಶೆಯೆಂದರೆ ಕೃತಿಯ ಹೊಗಳಿಕೆಯೂ ಅಲ್ಲ; ತೆಗಳಿಕೆಯೂ ಅಲ್ಲ. ಯಾವುದೇ ಕೃತಿ ತಮಗೆ ಮೆಚ್ಚಿಕೆಯೆನಿಸಿದರೆ, ಅದೇಕೆ ಹಾಗೆನಿಸಿತೆಂಬುದರ ಸಪ್ರಮಾಣ ನಿರೂಪಣೆ ವಿಮರ್ಶೆ. ಅದರಂತೆಯೆ ತಮಗೆ ಮೆಚ್ಚಿಕೆಯೆನಿಸದೆ ಹೋದರೆ, ಏಕೆ ಮೆಚ್ಚಿಕೆಯೆನಿಸಲಿಲ್ಲವೆಂಬುದರ ಸಪ್ರಮಾಣ ವಿವರಣೆಯೂ ವಿಮರ್ಶೆ. ವಿಮರ್ಶಕ ದಾಕ್ಷಿಣ್ಯಕ್ಕಾಗಿ ಕೃತಿಯನ್ನು ಬರೀ ಹೊಗಳಬೇಕಿಲ್ಲ; ಪೂರ್ವಗ್ರಹದ ಮನಸ್ಸಿನಿಂದ ತೆಗಳಬೇಕಿಲ್ಲ. ಸ್ವಂತದ ಅಭಿರುಚಿಯನ್ನೂ ಸಾಮಾನ್ಯ ಅಭಿರುಚಿಯನ್ನೂ ತಿಳಿದುಕೊಂಡು, ಕೃತಿಯ ಗುಣ-ದೋಷಗಳನ್ನು ಸಹಾನುಭೂತಿಯ ಭಾಷೆಯಲ್ಲಿ ವಿವರಿಸಿದರೆ ಆಯಿತು.

ವಿಮರ್ಶಕರ ಹರಿವಿಡಿ:

೧ ಶ್ರೀ. 'ಕಮಲಾಕರ' ಹೈಸ್ಕೂಲ್ ಟೀಚರ್, ಸದಲಿಗಿ. ೨ ಶ್ರೀಮತಿ ವಸಂತಮಾಲಾ ಗೌಡರ, ಮುಂಬೈ. ೩ ಶ್ರೀಮತಿ 'ವಸಂತಲಕ್ಷ್ಮಿ', ಮದ್ರಾಸ. ೪ ಶ್ರೀ. ವಸಂತಗೌಡರ, ಪನವೇಲ.

ಜಯಂತಿಯ ಸಂಪಾದಕ ಸಮಿತಿಯವರೇ ಎಲ್ಲ ವಿಮರ್ಶೆಗಳನ್ನು ನೋಡಿ, ತಮ್ಮ ನಿರ್ಣಯಕೊಟ್ಟಿದ್ದಾರೆ.

ಸಂಖ್ಯೆಯಲ್ಲಿ ವಿಮರ್ಶೆಗಳು ಕಡಮೆಯಿದ್ದರೂ, ಬಂದಿರುವ ನಾಲ್ಕೂ ವಿಮರ್ಶೆಗಳೂ ಒಳ್ಳೆಯ ವಿಮರ್ಶೆಗಳೆನಿಸಿಕೊಳ್ಳಲು ತಕ್ಕುವಾಗಿವೆ. ಅದರಲ್ಲಿಯೂ ಮದ್ರಾಸಿನ ಶ್ರೀಮತಿ 'ವಸಂತ ಲಕ್ಷ್ಮಿ'ಯವರ ವಿಮರ್ಶೆ ಹೆಚ್ಚು ಒಳ್ಳೆಯದಾಗಿದೆ. ಶ್ರೀ. 'ಕಮಲಾಕರ' ಅವರು ಒಳ್ಳೆಯ ವಿಮರ್ಶಕರು. ಆದರೆ ಅವರು ಲೇಖನದಲ್ಲಿ ಶಬ್ದಶುದ್ಧಿಯ ಕಡೆಗೆ ಹೆಚ್ಚು ಲಕ್ಷ್ಯಕೊಟ್ಟರೆ, ಒಳ್ಳೆಯ ವಿಮರ್ಶಕರಾಗುವರು ಶ್ರೀಮತಿ ವಸಂತಮಾಲಾ ಗೌಡರ ಅವರ ವಿಮರ್ಶೆಯೂ ಉತ್ತಮವಾಗಿದೆ. ಈ ಸಲದ ವಿಮರ್ಶಕರಲ್ಲಿ 'ವಸಂತ' ಎಂಬ ಹೆಸರಿನವರು ಹೆಚ್ಚು ಜನರಿರುವುದು ಒಂದು ಯೋಗಾಯೋಗವೆಂದೇ ಹೇಳಬಹುದಾಗಿದೆ. ವಸಂತಋತುವಿನ ಪ್ರಾರಂಭಕಾಲವಲ್ಲವೇ ಇದು!

ಮುಂದಿನ ಸಂಚಿಕೆಯ ವಿಮರ್ಶೆಗಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ **'ಬೆದರು'** ಎಂಬ ರೂಪಕವನ್ನಾಗಲಿ, **"ಗೋಪಣ್ಣನ ಸಮಸ್ಯೆ"** ಎಂಬ ಕಥೆಯನ್ನಾಗಲಿ ತೆಗೆದುಕೊಳ್ಳಬೇಕು.

—ಸಂಪಾದಕರು

ಅರಣ್ಯ

(ಕಥೆಯ ವಿಮರ್ಶೆ)

ಶ್ರೀಮತಿ "ವಸಂತಲಕ್ಷ್ಮಿ" ಮುದ್ರಾಸ

'ಅರಣ್ಯ' ಒಂದು ರೂಪಕಾತ್ಮಕವಾದ ಒಳ್ಳೆಯ ಕತೆ. ಹೊರಗಿನ ಭಾಗಗಳಿಂದ ಕನ್ನಡಕ್ಕೆ ಬಂದ ಉತ್ತಮ ಕತೆಗಳಲ್ಲಿ ಇದೂ ಒಂದು ಎನ್ನಬಹುದು.

ಈ ಕತೆಯಲ್ಲಿ ನಾವು ಸ್ಥೂಲವಾಗಿ ಮೂರು ಭಾಗಗಳನ್ನು ಅಥವಾ ಪದರುಗಳನ್ನು ಕಾಣುತ್ತೇವೆ. ೧) ವ್ಯಾಘ್ರರಾಜ ಮತ್ತು ಅವನ ಪರಿವಾರದ ಕತೆ. ೨) ಅನ್ನಾ ಮತ್ತು ಲಚ್ಚಿಯರ ಪ್ರೀತಿಯ ದಾರುಣ ಕತೆ. ೩) ನಾಂಪ್ರೇಕರ್ ಮತ್ತು ಅವನ ಸಂಗಡಿಗರ ಬೇಟೆಯ ಕತೆ.

ಮೊದಲನೆಯದರಲ್ಲಿ ಅರಣ್ಯದ ಒಂದು ವಿಹಂಗಮ ದರ್ಶನವನ್ನು ಲೇಖಕರು ನಮಗೆ ಕೊಟ್ಟಿದ್ದಾರೆ. ಎರಡನೆಯದರಲ್ಲಿ ತಾಂಪಾಳದ ಅರಣ್ಯದಲ್ಲಿ ವಾಸಿಸುವ ಜನರ ಪ್ರೀತಿಯ ಕತೆಯೊಂದಿದೆ. ಮೂರನೆಯದರಲ್ಲಿ ಇಂದಿನ ನಾಗರಿಕತೆಯಲ್ಲಿಯ ಅನೇಕ ಪಾಶವೀ ವೃತ್ತಿಗಳಲ್ಲಿ ಒಂದನ್ನು ಅನುಸರಿಸಿ, ಪಶುಸಮಾನವಾಗಿರುವ ಬೇಟೆಗಾರ ಮತ್ತು ಅವನ ಬಳಗದ ಕತೆಯಿದೆ. ಆದರೆ ಈ ಮೂರು ಭಾಗಗಳು ಒಂದೇ ಕತೆಯ ಭಾಗಗಳು: ತಾಂಪಾಳದ ಅರಣ್ಯದಲ್ಲಿಯೆ ಈ ಎಲ್ಲ ಸಂಗತಿಗಳು ನಡೆಯುವುದರಿಂದ, ಕತೆಗೆ ಏಕಮುಖತೆ ಬಂದಿದೆ. ತಾಂಪಾಳದ ಅರಣ್ಯವೇ ವ್ಯಾಘ್ರರಾಜನ ಆಳಿಕೆಯಲ್ಲಿದೆ. ಅವನ ಗರ್ಜನೆಯು ಅರಣ್ಯದಲ್ಲೆಲ್ಲ ಕೇಳುತ್ತದೆ. ಅವನ ಓಲಗದವರಾದ 'ಕಪೂ' 'ಕಾಕಾ' ಕೋಗಿಲೆ, ಎಲ್ಲರೂ ಇಲ್ಲಿಯೇ ವಾಸಿಸುತ್ತಾರೆ. ಅನ್ನಾ ಮತ್ತು ಲಚ್ಚಿಯರ ಪ್ರೇಮದಾಟವು ನಡೆಯುವುದೂ ಇದೇ ಅರಣ್ಯದಲ್ಲಿ. ಜೇನನ್ನು ಕೂಡಿಸಲು ಅಥವಾ ಕಟ್ಟಿಗೆಯನ್ನು ಕಡಿಯಲು ಬಂದ ಅನ್ನಾ ಮೊಟ್ಟ ಮೊದಲು ಲಚ್ಚಿಯನ್ನು ಕಾಣುವುದು ಇದೇ ಅರಣ್ಯದಲ್ಲಿ. ಅವರ ಪ್ರೀತಿಯು ಚಿಗುರಿ, ಪೂವಾಗಿ ಅರಳುವ ಮೊದಲೇ ಕಮರಿ ಹೋಗುವುದೂ ಇದೇ ಅರಣ್ಯದಲ್ಲಿ. ಏನನ್ನೋ ಬೇಟೆಯಾಡಲೆಂದು ಬಂದು ಇನ್ನೇನನ್ನೋ ಬೇಟೆಯಾಡಿದ ನಾಂಪ್ರೇಕರ್ ಮತ್ತು ಅವನ ಸಂಗಡಿಗರಾದ ರಾಬರ್ಟ್ಸನ, ಪಾಟೆಕರ್, ಬನ್ನಾ ಎಲ್ಲರೂ ಆಗಮಿಸುವುದು ತಾಂಪಾಳದ ಶಾಲವನಕ್ಕೇನೇ 'ಅರಣ್ಯ' ಎಂಬ ಹೆಸರು, ಆದುದರಿಂದ ಈ ಕತೆಗೆ ಶೋಭಿಸುತ್ತದೆ. ವ್ಯಾಘ್ರರಾಜನು ಬೇಟೆಯಾಡಲೆಂದು ಬಂದು ನಾಂಪ್ರೇಕರನು ಪಾಟೆಕರ್‌ನ ಹೆಂಡತಿಯಾದ ನಂದಿನಿಯ ಬೇಟೆಯಾಡುತ್ತಾನೆ, ನಿಷ್ಪಾಪ ಅನ್ನಾನನ್ನು ಆಹುತಿಯಾಗಿ ಹುಲಿಗೆ ಅರ್ಪಿಸುತ್ತಾನೆ. ಹೀಗೆ ಕತೆಗೆ ಮೂರು ಪದರಗಳಿದ್ದರೂ ಅವು ಒಂದಕ್ಕೊಂದು ಒಂದೇ ಹೂವಿನ ಪಕಳೆಗಳಂತೆ ಹೊಂದಿಕೊಂಡಿವೆ; ಕತೆಯನ್ನು ಕಲಾತ್ಮಕವಾದ ಕೃತಿಯನ್ನಾಗಿಸಿವೆ. ಮೂರು ಭಾಗಗಳಿಗೂ ಅನ್ಯೋನ್ಯವಾದ ಸಂಬಂಧವಿದೆ. ವ್ಯಾಘ್ರರಾಜನು ತನ್ನ ಅರಣ್ಯದಲ್ಲಿ ಕುಳಿತ್ತುಕೊಂಡು 'ಅನ್ನಾ'ನ ಬೇಟೆಯನ್ನಾಡಬೇಕೆಂದು ಹವಣಿಸುತ್ತಿರುವಾಗ ವ್ಯಾಘ್ರರಾಜನ ಬೇಟೆಯಾಡಲಿಕ್ಕೆ ನಾಂಪ್ರೇಕರ್ ಮತ್ತು ಅವನ ಸಂಗಡಿಗರು ಅಲ್ಲಿಯೇ ಬರುತ್ತಾರೆ. ವಿಘ್ನನಾದ 'ಅನ್ನಾ'ನು ಹುಲಿಯ ಸೈಸರ್ಗಿಕ ಕೌರ್ಯಕ್ಕೆ ಪಾತ್ರನಾದಂತೆ, ನಾಂಪ್ರೇಕರನ ದುಃಖಿಸ್ಪದ ಅಸುರೀಪ್ರವೃತ್ತಿಗೂ ಆಹುತಿಯಾಗುತ್ತಾನೆ

ತಾಂಪಾಳದ ಅರಣ್ಯದ ಚಿತ್ರವನ್ನು ಕತೆಯು ಆರಂಭದಲ್ಲಿ ಲೇಖಕರು ತುಂಬ ಸುಸ್ಪೋಹರವಾಗಿ ನಿರ್ಮಿಸಿದ್ದಾರೆ. "ಅರಣ್ಯದಲ್ಲಿ ಯಾರು ಯಾರ ಚಿಂತೆಯನ್ನೂ ಮಾಡುವದಿಲ್ಲ" ಎಂದು ಅರಣ್ಯಕಾನೂನನ್ನು ಪಂಡಿಸಿದ ಅರಣ್ಯದ ರಾಜನೆನಿಸಿದ ಹುಲಿ, ಗರ್ವಿಷ್ಠಳಾದರೂ 'ಅನ್ನಾ'ನ ಮೇಲೆ ದಯೆ ತೋರಿಸುವ ಕೋಗಿಲೆ, ಮೈಯನ್ನು ಕೆರೆದು ಕೊಳ್ಳುತ್ತ, ಜೇಷ್ಟೆಯನ್ನು ಮಾಡುತ್ತ ಒಂದು ಟೊಂಗೆಯಿಂದ ಮತ್ತೊಂದಕ್ಕೆ ಜಿಗಿಯುವ, ವಿದೂಷಕನಂತಿರುವ ಕೋತಿ 'ಕಪೂ', ನಾರದಮುನಿಯಂತೆ ಜಗತ್ತನ್ನೆಲ್ಲ ಸುತ್ತಾಡಿ, ವ್ಯಾಘ್ರರಾಜನಿಗೆ ಎಲ್ಲ ವರ್ತಮಾನವನ್ನು ತಿಳಿಸಿ, ಅನ್ನಾನ ಬಳಿ ಸುಳಿದಾಡಿ ತನ್ನದೇ ಆದ ಭಾಷೆಯಲ್ಲಿ ಅವನಿಗೂ ಎಚ್ಚರಿಕೆಯನ್ನು ಕೊಟ್ಟ 'ಕಾಕಾ'— ಈ ಎಲ್ಲ ಪ್ರಾಣಿ-ಪಕ್ಷಿಗಳು ಬೇರೆ ಬೇರೆ ನಮ್ಮ ಸ್ವಭಾವಗಳ ಪ್ರತೀಕಗಳಂತಿವೆ. "ಬೇಟೆಯಾಡುವದು ಅಥವಾ ಬೇಟೆಯಾಗುವದು", "ಸಾಯಿ ಅಥವಾ ಸಾಯಿಸು"ಎಂಬ ತತ್ತ್ವಗಳ ಡಂಗುರವನ್ನು ಹೊಡೆದು ಹೇಳುವ ವ್ಯಾಘ್ರರಾಜನಾದರೋ, ಸಮಾಜದಲ್ಲಿಯ ರಾಕ್ಷಸೀವೃತ್ತಿಯ ಜನರ ಪ್ರತೀಕನಾಗಿದ್ದಾನೆ. ಹಾಗೆ ನೋಡಿದರೆ ವ್ಯಾಘ್ರರಾಜನ ದರ್ಬಾರು ಅಖಿಲ ಜಗತ್ತಿನದೇ ಒಂದು ಪ್ರತೀಕದಂತಿದೆ. ಕತೆಯ ಈ ಭಾಗವು ಒಂದು ಸ್ವಯಂಪೂರ್ಣವಾದ 'ರೂಪಕ' (Allegory) ಇದ್ದಂತಿದೆ. ಪಂಚತಂತ್ರದ ಮಾದರಿಯ ಕತೆ ಹೇಳುವ ರೀತಿಯನ್ನಿಲ್ಲಿ ಗುರುತಿಸಬಹುದಾಗಿದೆ.

ಈ ಘೋರ ಅರಣ್ಯದಲ್ಲಿ ನಿಸರ್ಗದ ಮುಕ್ತಳಾದ 'ಅನ್ನಾ' ಮತ್ತು 'ಲಚ್ಚಿ'ಯರ ಪವಿತ್ರವಾದ ಪ್ರೇಮವು ಚಿಗುರಿದೆ. 'ಅನ್ನಾ'ನ ಕತೆಯನ್ನು ಹುಲಿಗೆ (ಓದುಗರಿಗೂ ಕೂಡ) ಕಾಗೆಯು ಬಂದು ಹೇಳುತ್ತದೆ. ಅದರ ಪರಿಣಾಮವಾಗಿ ಹುಲಿಗೆ 'ಅನ್ನಾ'ನ ಮೇಲೆ ಮುತ್ತಿಷ್ಟು ಹೆಚ್ಚು ಸಿಟ್ಟು ಬರುತ್ತದೆ. ಕೊನೆಯಲ್ಲಿ 'ಅನ್ನಾ'ನು ಹುಲಿಯ "ಜನ್ನ"ವೊಳಗುತ್ತಾನೆ. ಮೌನಿಯಾ ವರ್ವತದಲ್ಲಿ ತಾಂಪಾಳದ ಕಾಡುಜನರಾಂಗಕ್ಕೆ

ಸೇರದ ಅನ್ನಾ'ನಿಗೆ ಉಳಿದೆಲ್ಲ ಕನ್ನ ಜನಾಂಗದವರಂತೆ, ಚೀನನ್ನು ಕೂಡಿಸುವುದೇ ಮುಖ್ಯ ಉದ್ಯೋಗವಾಗಿತ್ತು. ಅವನ ಮೇಲೆ ಪ್ರಾಣಾಪಾಯ ಬಂದೊದಗಿದಾಗ ಲಚ್ಚಿಯು ಅನಿರೀಕ್ಷಿತವಾಗಿ ಅವನ ಜೀವವನ್ನು ಉಳಿಸುತ್ತಾಳೆ. ಇದರಿಂದಾಗಿ ಪೊಳೆತ ಅವರಲ್ಲಿಯ ಪರಿಚಯ ಪ್ರೀತಿಯಲ್ಲಿ ಕೊನೆಗಾಣುತ್ತದೆ 'ಅನ್ನಾ'ನಲ್ಲಿ ಲಚ್ಚಿಯ ಬಗ್ಗೆ ಹುಟ್ಟಿದ ಕೃತಜ್ಞತಾಭಾವ ಈ ಪ್ರೀತಿಗೆ ಪುಟವನ್ನು ಕೊಡುತ್ತದೆ. ಆದರೆ ಅನರು ಮದುವೆಯಾಗಬೇಕಾದರೆ ಲಚ್ಚಿಯ ಮಾವನಿಗೆ 'ಅನ್ನಾ'ನು ನಾಲ್ಕತ್ತು ರೂಪಾಯಿಗಳನ್ನು ಒದಗಿಸಬೇಕು. ಚೀನನ್ನು ಕೂಡಿಸಿಯೋ, ಕಟ್ಟಿಗೆಯನ್ನು ಕಡಿಸೋ ಹೊಟ್ಟೆಯನ್ನು ತುಂಬಿಕೊಳ್ಳುವ 'ಅನ್ನಾ'ನಿಗೆ ಇದು ಕೂಡ ಅಸಾಧ್ಯದ ಸಂಗತಿ ಅರಣ್ಯವಾಸಿಗಳ ಕಷ್ಟದ ಕಡುದಾರುಣ ಜೀವನದ ದರ್ಶನ ನಮಗೆ ಇಲ್ಲಿ ಆಗುತ್ತದೆ. ನಾಲ್ಕತ್ತು ರೂಪಾಯಿಗಳನ್ನು ಕೂಡಿಸಲಾಗದೆ, ಮದುವೆಯನ್ನು ಮಾಡಿಕೊಳ್ಳಲಾಗದೆ, ಲಚ್ಚಿಯನ್ನು ಜೇಲಿಂದ ಮೇಲೆ ಕದ್ದು ಕಂಡು ಸಮಾಧಾನವನ್ನು ಪಡುತ್ತಾನೆ, 'ಅನ್ನಾ'!

ಬೇಟೆಗಾರರ ಬಳಗ ಇದೇ ಅರಣ್ಯಕ್ಕೆ ಬಂದುದು 'ಅನ್ನಾ'ನಿಗೆ ತುಂಬ ಸಕಾಲಿಕವಾಗುತ್ತದೆ. ಬೇಟೆಗಾರರಿಗೆ ಸೇವೆಯನ್ನು ಸಲಿಸಿ ತನಗೆ ಬೇಕಾದ ನಾಲ್ಕತ್ತು ರೂಪಾಯಿಗಳನ್ನು ಕೂಡಿಸಲೆಂದು ಅವನು ಮನುಷ್ಯರೂಪದಲ್ಲಿದ್ದ ಹುಲಿಯೆಡೆಗೆ (ನಾಂದ್ರೆಕರ) ಹೋಗುತ್ತಾನೆ ಕತೆಯು ಆರಂಭಕ್ಕೆ ಬರುವ ಹುಲಿಯು "ಅನ್ನಾ"ನನ್ನು ಹುಡುಕಿಕೊಂಡು ಹೊರಟರೆ, ಅಂತ್ಯಕ್ಕೆ ಬರುವ ಮನುಷ್ಯರೂಪಿಯಾದ ಹುಲಿಯನ್ನು (ನಾಂದ್ರೆಕರ್) "ಅನ್ನಾ" ತಾನೇ ಹುಡುಕಿಕೊಂಡು ಹೋಗುತ್ತಾನೆ. ಇದರ ಫಲವಾಗಿ ಅವನು ಎರಡೂ ಹುಲಿಗಳಿಗೆ ಆಹುತಿಯಾಗುತ್ತಾನೆ.

ಬೇಟೆಗಾರರ ತಂಡದ ಮುಖಂಡನಾದ ನಾಂದ್ರೇಕರನು ಶುದ್ಧ ಪಶು. ಅವನ ಜೊತೆಯಲ್ಲಿದ್ದ ಪಾಟ್ಕರನ ಕರುಣ ಮತ್ತು ಜೆಲುವೆ ಹೆಂಡತಿಯಾದ ನಂದಿನಿಯ ಮೇಲೆ ಅವನ ಕಣ್ಣು. ಬೇಟೆಯು ನೆವವನ್ನು ಮಾಡಿಕೊಂಡು ಅರಣ್ಯಕ್ಕೆ ಬಂದು, ನಂದಿನಿಯ ಬೇಟೆಯನ್ನು ಆಡುತ್ತಾನೆ. ಕತೆಯಲ್ಲಿಯ ಮೂರು ಭಾಗಗಳಲ್ಲಿ ನಾವು ಪ್ರೀತಿಯ ಮೂರು ಸ್ವರೂಪಗಳನ್ನು ಕಾಣುತ್ತೇವೆ ವ್ಯಾಳ್ಪ ಮತ್ತು ವ್ಯಾಳ್ಪಿಣಿಯರಲ್ಲಿ ಇದ್ದ ಅನುರಾಗ ಒಂದು ನೈಸರ್ಗಿಕ ಪ್ರವೃತ್ತಿಯೆನಿಸಿದರೆ (natural instinct) ಅನ್ನಾ ಮತ್ತು ಲಚ್ಚಿಯರಲ್ಲಿ ಕಾಣುವದು ಪರಿಶುದ್ಧ, ನಿಷ್ಕಾಮ ಪ್ರೇಮ; ಆದರೆ ನಾಂದ್ರೆಕರ್ ಮತ್ತು ನಂದಿನಿಯರದು ಬರೀ ಕಾಮ. ಹೀಗೆ ವಿಚಾರ ಮಾಡಿದರೆ ಕತೆಯು ಸೂಚ್ಯವೆನಿಸಿ ಮತ್ತಷ್ಟು ಕಲಾತ್ಮಕವೆನಿಸುತ್ತದೆ. ನಾಂದ್ರೇಕರನಿಗೆ ದಯೆ, ಮಾಯೆ ಏನೂ ಗೊತ್ತಿಲ್ಲ. ನಂದಿನಿಯೊಡನೆ ಬೇಟೆಯ ಮನೆಯ ಅಟ್ಟದ ಮೇಲಿದ್ದಾಗ, ಹುಲಿಯು ಸನ್ನೀಸನೇ ಬಂದಿದೆ ಎಂದು ಗೊತ್ತಿದ್ದರೂ ಕನ್ನ ಕಾಮದ ದಾಸನಾಗಿ "ಅನ್ನಾ"ನನ್ನು ಉದ್ವೇಶಪೂರ್ವಕವಾಗಿಯೇ ಬಹಿರ್ದೆಸೆಗೆ ತರುವ ನೆವಮಾಡಿ ಹೊರಗೆ ಕಳುಹಿಸುತ್ತಾನೆ. ಪರಿಣಾಮವಾಗಿ "ಅನ್ನಾ"ನು ಹುಲಿಯ ಬಾಯಿಗೆ ತುತ್ತಾಗುತ್ತಾನೆ. ನಿಜವಾಗಿ ನೋಡಿದರೆ ಅನ್ನಾನ ಮರಣಕ್ಕೆ ಕಾರಣ ನಾಂದ್ರೇಕರನೇ ಎನ್ನಬಹುದು.

ಪಾಟ್ಕರ್, ರಾಬರ್ಟ್ಸ್ ಮುಂತಾದವರು ಹೊರಗೆ ಹೋಗಿ ನಿಜವಾದ ಬೇಟೆಯನ್ನು ಆಡಿದರೆ, ನಾಂದ್ರೇಕರನು ಬೇಟೆಯ ಮನೆಯಲ್ಲಿಯೆ ಇದ್ದುಕೊಂಡು ಬೇರೆ ಬಗೆಯ ಬೇಟೆಯೊಂದನ್ನು ಆಡಿದ್ದ. "ಅನ್ನಾ"ನ ಮರಣದ ಬಗ್ಗೆ ಅವನಿಗೆ (ಯಾಕೆ ಅನಿಸಬೇಕು) ಏನೂ ಅನಿಸಲಿಲ್ಲ "ಇದರಲ್ಲಿ ನನ್ನದೇನು ತಪ್ಪಿದೆ? ಇದಂತೂ accident. We cant help" ಎಂದು ಬಿಡುತ್ತಾನೆ. "ಅನ್ನಾ"ನ ತಾಯಿಗೆ ಐವತ್ತು ರೂಪಾಯಿಗಳನ್ನು ಕೊಡುವ ಮಾತನ್ನು ಹೇಳಿ ಸಮಾಧಾನವನ್ನು ಪಡುತ್ತಾನೆ. ಇವನ ಮಾತಿಗೂ ವ್ಯಾಳ್ಪರಾಜ "ಅನ್ನಾ"ನ ಸಾವಿನ ಬಗ್ಗೆ ನುಡಿದ ಮಾತುಗಳಲ್ಲಿಯೂ ಎಷ್ಟು ಸಾಮ್ಯವಿದೆ! "ಅನ್ನಾ"ನನ್ನು "ಏಕೆ ಕೊಂದೆ" ಎಂದು ಕಾಗೆ ಕೇಳಿದಾಗ, ಹುಲಿಯು ನುಡಿಯುತ್ತದೆ "ಅರಣ್ಯದಲ್ಲಿ ಯಾರೂ ಯಾರ ಚಿಂತೆಯನ್ನೂ ಮಾಡುವದಿಲ್ಲ..... ಅರಣ್ಯದ ಕಾನೂನು ನೇರವಾದುದು ಮತ್ತು ಸ್ಪಷ್ಟವಾದುದು, ಸಾಯಿ, ಇಲ್ಲಿನೇ ಸಾಯಿಸು."

ನಮ್ಮ ಸಮಾಜದಲ್ಲಿ ನಾಂದ್ರೇಕರನಂತಹ ಹೃದಯಸಂಸ್ಕಾರವಿಲ್ಲದ ಪಶುಗಳು ಇದ್ದಾರೆ ಎಂಬುದನ್ನು ಲೇಖಕರು ಈ ಕತೆಯಲ್ಲಿ ತೋರಿಸಿಕೊಟ್ಟಿದ್ದಾರೆ. ಆದರೆ ಇದನ್ನು ನೇರವಾಗಿ ಹೇಳದೆ ಸೂಚ್ಯವಾಗಿ, ಕಲಾತ್ಮಕವಾಗಿ ಸಾರಿದ್ದಾರೆ. ಒಂದು ಬದಿಗೆ ಅರಣ್ಯದ ಚಿತ್ರವನ್ನು ತಂದು ಹುಲಿಯು 'ಅನ್ನಾ'ನನ್ನು ನೋಡಿಕೊಂಡ ರೀತಿಯನ್ನು ಚಿತ್ರಿಸಿದ್ದಾರೆ. ಮತ್ತೊಂದು ಚಿತ್ರದಲ್ಲಿ ಅದೇ ಆರಣ್ಯಕ್ಕೆ ಬಂದ ಮನುಷ್ಯರು ಮುಗ್ಧನಾದ ಅನ್ನಾನನ್ನು ಕಂಡ ರೀತಿಯನ್ನು ಚಿತ್ರಿಸಿದ್ದಾರೆ. ಒಂದು ಚಿತ್ರದಲ್ಲಿ ಒಂದು ವ್ಯಾಳ್ಪ, ವ್ಯಾಳ್ಪಿಣಿ ಮತ್ತು ಅವರ ಓಲಗದವರಿದ್ದಾರೆ, ಮತ್ತೊಂದರಲ್ಲಿ ಮನುಷ್ಯ ರೂಪದಲ್ಲಿದ್ದ ವ್ಯಾಳ್ಪ, ವ್ಯಾಳ್ಪಿಣಿ ಮತ್ತು ಅವರ ಓಲಗದವರಿದ್ದಾರೆ. ಈ ಎರಡೂ ಚಿತ್ರಗಳನ್ನು ನೋಡಿಕೊಂಡು ಕತೆಗಾರನಿಗೆ ಏನು ಹೇಳುವುದಿದೆ ಎಂಬುದನ್ನು ಓದುಗರು ತಿಳಿದುಕೊಳ್ಳಬೇಕು. ಕತೆಗಾರರು ಒಂದು ಬಗೆಯ "impressionistic technique"ನ್ನು ಉಪಯೋಗಿಸಿದ್ದಾರೆ. ಅದಲ್ಲದೆ ಕತೆಗಾರರು ತಾವು ಹೇಳಬೇಕಾದುದನ್ನು ಸೂಚ್ಯವಾಗಿ ತಿಳಿಸಿದ್ದಾರೆ.

ಭಾಷಾಂತರದ ದೃಷ್ಟಿಯಿಂದ ನೋಡಿದರೆ ಕನ್ನಡಕ್ಕೆ ಈ ಕತೆಯು ಹೊಸ್ತಾಗಿ ಭಾಷಾಂತರವಾದಂತೆ ಕಾಣುತ್ತದೆ. ಭಾಷೆಯು ಶುದ್ಧವೂ, ಸ್ವಾಭಾವಿಕವೂ ಆಗಿದೆ.

ಒಟ್ಟಿನ ಮೇಲೆ ಇದೊಂದು ಉತ್ತಮ ಕತೆ— ಕನ್ನಡಕ್ಕೆ ಈ ಬಗೆಯ ಕತೆ ತುಂಬ ಹೊಸದು ಎಂದು ಬೇರೆ ನೆನೆಯಬೇಕಿಲ್ಲವಷ್ಟೇ!

ಸಿಡಿಲಿನ ಭೇರಿ!

'ಅನಂಸಳಂದ'

೧

ಕೊಳಲೆ, ವೀಣೆ, ನಿಲ್ಲಿಸಿಬಿಡಿರಿ ನಿಮ್ಮ ಸನಿಸರಿ !
ಬಾರಿಸಬೇಕೆಂದು ನಾನು ಗುಡುಗುನಗಾರಿ– ಬರಸಿಡಿಲಿನ ಭೇರಿ !

ದಿಕ್ಕು-ದಿಕ್ಕಿನಿಂದ ಅಪಸ್ವರವೆ ಎದ್ದು ಬರುತಿವೆ,
ನಿಮ್ಮ ಸವಿಯ ಸಂಗೀತವ ತಡೆದು ಕೆಡಿಸಿ ಬಿಡುತಿವೆ !
ಈ ಅಪಸ್ವರಂಗಳೆಲ್ಲ ಜನಕೆ ಕೇಳದಂತೆ
ಘುಡುಘುಡು ಮೊರೆವೇಳಬೇಕು ದಿಸೆಯ ಸೀಳುವಂತೆ—
ಬಾನಿಗೇಳುವಂತೆ—
ಬಾರಿಸಬೇಕೆಂದು ನಾನು ಗುಡುಗುನಗಾರಿ—ಬರ ಸಿಡಿಲಿನ ಭೇರಿ!

೨

ನಿಮ್ಮ ರಾಗ ನಿಮ್ಮ ತಾಳ ನಿಮ್ಮ ಸಪ್ತಸ್ವರದ ಮೇಳ
ನಿಮ್ಮ ತಾನ ನಿಮ್ಮ ಗಾನ ಸುರಸಂಗೀತಕೆ ಸಮಾನ -
ಆದೊಡೇನು ಕಾಗೆ-ಗೂಗೆ ಕಿರಚುತಿರುವುವು,
ನರಿನಾಯ್ಗಳು ಸ್ವೈರವಾಗಿ ಅರಚುತಿರುವುವು—
ಗಾನ ಮರಸುತಿರುವುವು.
ಅದಕೆಂದೇ ಬಾರಿಸಲಿಹೆ ಗುಡುಗುನಗಾರಿ— ಬರ ಸಿಡಿಲಿನ ಭೇರಿ

೩

'ವೀಣೆ-ಕೊಳಲು ಹಳತುನೇನೊ, ಹಳೆಯವಾಗಿ ಹುಳಿತುನೇನೊ
ವಾದನದಲಿ ಸವಿಯೆ ಇಲ್ಲ, ಚೆಲ್ಲಬೇಕು ಇವನ್ನೆಲ್ಲ !'
ಎಂದು ಮುಂದಿ ಅಡುತಿಹುದ ಕೇಳಿ ನೊಂದೆ ನಾನು—
ಎದ್ದಿರುವೀ ಅಪಸ್ವರವನಡಗಿಸಬೇಕೆನುವೆನು—
ಜಡಿಯಲೆ ಬೇಕೆನುವೆನು,
ಅದಕೆಂದ್ಯೇ ಕೈಕೊಂಡಿಹೆ ಗುಡುಗುನಗಾರಿ—ಬರ ಸಿಡಿಲಿನ ಭೇರಿ

೪

ತಾಳಬೇಡ ತಂತಿಬೇಡ, ಮೇಳ-ಗೀಳವೊಂದು ಬೇಡ !
ಘುಡು ಘುಡು ಘುಡು ಘುಡು ಘುಡು ಘುಡು
ಒಂದೆ ಒಂದು ಗರ್ಜನೆಯನು ಹರಿಸಿ ಬಿಡುವೆನು
ನಾಡ ಕಾಡ ಹಳ್ಳಿ ಹೊಲಕ ತುಂಬಿ ಬಿಡುವೆನು— ಬೇರೆ
ಕೇಳಿಸದಂತೇನೂ !
ಅದಕೆಂದೇ ಜಡಿಯಲಿಹೆನು ಗುಡುಗುನಗಾರಿ— ಬರ-
ಸಿಡಿಲಿನ ಭೇರಿ !

೫

ಕಾಗೆ–ಗೂಗೆ ಬೆನರಬೇಕು, ನರಿ–ನಾಯ್ಗಳು ಹೆದರಬೇಕು,
ಲೋಕದೆದೆಯೆ ಅದಿರಬೇಕು, ಜನಪದ ನುರೆವು ಚೆದರಬೇಕು,—
ಹೀಗೆ ನಾನು ಬಾಜಿಸುವೆನು ಘನರನಭೇರಿ—
ಕೈಯ ಕುಡುಹು ಮುರಿವನರೆಗು, ಸ್ವೈಯ ಬಲುಹು ಮುಗಿವ
ನರೆಗು,
ಘುಗು ಘುಡು ಘುಡು ಘುಡು ಘುಡು ಘುಡು
ಹೊಡೆವೆ ನಗಾರಿ—ಬರಸಿ-ಡಿಲಿನ ಭೇರಿ !

ಜೀವನರಂಗ

ಶ್ರೀ. ವೀರಣ್ಣ ಎಸ್. ಕರಭಂಟನಾಳ, ನ್ಯೂ ಹಾಯಸ್ಕೂಲ್, ಅಥಣಿ

ಜೀವನರಂಗದ ರಂಗಭೂಮಿಯಲಿ
ಹೆಣ್ಣು ಗಂಡು ಪಾತ್ರ
ಜೀವ ಜೀವ ಜತೆಗೂಡಿ ಹಾಡುವುದು
ಕನಸಿನಲ್ಲಿ ಮಾತ್ರ ‖ ೧ ‖

ಪ್ರೇಮದ, ಪ್ರಣಯದ, ಮೋಹದ ಬೆಲೆಯಿದು
ನಿತ್ಯದ ಜೀವನವು,
ಲೀಲಾಜಾಲದ ಬಲೆಯಿದು, ಕಲೆಯಿದು
ಜೀವನ ನಾಟಕವು. ‖ ೨ ‖

ಸತ್ಯದ ಸಮತೆಯ ಜೀವನಪಾವನ
ಬಾಳಿನ ಬದುಕಿನಲಿ
ಪ್ರೇಮವೆ ಜೀವನ ಸಂಜೀವಿನಿಯು
ಜೀವನರಂಗದಲಿ ‖ ೩ ‖

ಒಲುವಿನ ಜೆಲುವೇ ಬಾಳಿನ ಗೆಲುವು
ಬಾಳಿನ ಸವಿ ಸೊಲ್ಲ
ಬಣ್ಣದ ಬಾಳಿದು ಬರಿಜೇಸಲ್ಲ
ಬಾಳು ಬೇವು-ಬೆಲ್ಲ ! ‖ ೪ ‖

ಸಾದರ ಸ್ವೀಕಾರ



೬೫. **ಬನವಾಸಿ** (ಸಾಮಾಜಿಕ ಕಾದಂಬರಿ) ಬರೆದವರು **ಶ್ರೀಮಾನ್ ಕುಲಕರ್ಣಿ ಬಿಂದುಮಾಧವ. ಪ್ರಕಾಶಕರು.** ಶ್ರೀ. ವರದ ರಾಜ: **ಪ್ರಕಾಶನ, 'ಶಂಕರವನ' ಬೆಂಗಳೂರು-೪. ಕ್ರೌ. ಅ.** ೨೩೦ **ಪುಟಗಳು. ಬೆಲೆ** ೧.೭೫

೬೬. **ರುದ್ರವೀಣೆ (ಕಥಾ ಸಂಕಲನ)** ಬರೆದವರು ಶ್ರೀಮಾನ್ ಶಂ. ಗು. **ಬಿರಾದಾರ. ಪ್ರಕಾಶಕರು** ಭಾರತೀ ಸಾಹಿತ್ಯಮಂದಿರ ಯರನಾಳ, ಜಿ. ವಿಜಾಪುರ. **ಕ್ರೌ. ಅ.** ೧೦೧ **ಪುಟಗಳು. ಬೆಲೆ** ೧.೦೦

೬೭. **ಗಂಗಾ-ಗೌರಿ** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ಕುಲಕರ್ಣಿ ಬಿಂದುಮಾಧವ ಪ್ರಕಾಶಕರು ಸುದರ್ಶನ ಪ್ರಕಟನಾಲಯ, ತಿಪಟೂರು. ಕ್ರೌ.ಅ. ೧೩೮ **ಬೆಲೆ** ೧. ೫೦.

೬೮. **ಮುಂಬಯಿ ಎನ್. ಕೆ. ಇ. ಎಸ್. ಹೈಸ್ಕೂಲಿನ** ಹಳೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಸಂಪುಟ (ಇಂಗ್ಲಿಷ್-ಕನ್ನಡ)- ಸಂಪಾದಕರು ಶ್ರೀ. ಪಿ. ಎನ್. ಮೂರ್ತಿ ಎಂ. ಎ., ಬಿ. ಟಿ; ಶ್ರೀ. ಪಿ. ಎಂ ಕಾಮತ; ಶ್ರೀ.ಕೆ.ಜಿ. ಎಸ್. ರಂಗ ಮತ್ತು ಶ್ರೀ ಜಿ ಡಿ ಜೋಶಿ ಅವರುಗಳು. ಪ್ರಕಾಶಕರು ಶ್ರೀ. ಎಸ್. ವಿ. ಶಾಸ್ತ್ರಿ ಬಿ. ಎ. ಕಾರ್ಯದರ್ಶಿ N. K. E. S ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಸಂಘ, ಮುಂಬಯಿ ೩೧. ಕ್ರೌ. ೧೮೮ ಪುಟಗಳು.

ಇದರಲ್ಲಿ ಇಂಗ್ಲಿಷ್ ವಿಭಾಗಕ್ಕಾಗಿ ೨೨ ಪುಟಗಳಿದ್ದು ಕನ್ನಡ ವಿಭಾಗಕ್ಕಾಗಿ ೧೪ ಪುಟಗಳಿವೆ. ಹೊರನಾಡಿನಲ್ಲಿಯ ಕನ್ನಡಿಗರು ಇಂಗ್ಲಿಷಿನಲ್ಲಿ ಏನೇನನ್ನೋ ಬರೆಯುವುದಕ್ಕಿಂತ, ಕರ್ನಾಟಕ ಸಾಹಿತ್ಯ, ಸಂಸ್ಕೃತಿ, ಚರಿತ್ರಗಳನ್ನು ಕುರಿತು ಪರಿಚಯಾತ್ಮಕ ಲೇಖನಗಳನ್ನು ಬರೆಯುತ್ತಿದ್ದರೆ ಹೆಚ್ಚು ಪ್ರಯೋಜನಕಾರಿಯಾದಾವು. ತಾವು ವಾಸಿಸುತ್ತಿರುವ ಪ್ರದೇಶದ ಜನರಿಗೆ ಕನ್ನಡ-ಕರ್ನಾಟಕಗಳ ಹಿರಿಮೆಯ ಪರಿಚಯ ಮಾಡಿ ಕೊಡುವುದು ಹೊರನಾಡಿನ ಕನ್ನಡಿಗರ ಕರ್ತವ್ಯವಾಗಿದೆ. ಕನ್ನಡ ವಿಭಾಗದಲ್ಲಿ ಪ್ರಕಟವಾಗಿರುವ ಲೇಖನ-ಕವಿತೆಗಳು, ಲೇಖಕರ ವಿಷಯದಲ್ಲಿ ಆಶೆಯನ್ನು ಹುಟ್ಟಿಸುವಂತಿವೆ. ಅಭ್ಯಾಸ - ಲೋಕಾನುಭವಗಳಿಂದ ಅವರು ಒಳ್ಳೆಯ ಲೇಖಕರಾಗಿ ಸಿದ್ಧಿಬಲ್ಲರು.

ಹೊರನಾಡಿನಲ್ಲಿರುವ ಕನ್ನಡಿಗರ ಮೊದಲ ಕರ್ತವ್ಯವೆಂದರೆ, ಕನ್ನಡ ನುಡಿಯಿಂದ ತಾವು ದೂರವಾಗದಿರುವುದು. ಎಲ್ಲಿಯೇ ಇರಲಿ, ಅವರು ಕನ್ನಡದ ಸಂಬಂಧವನ್ನು ತಂದುಕೊಳ್ಳಲೇ ಬೇಕು. ಈ ಸಂಸ್ಥೆಯ ಸದಸ್ಯರು ಆ ಕರ್ತವ್ಯವನ್ನು ಮರೆಯದೆ ನೆರವೇರಿಸಿದುದಕ್ಕಾಗಿ ಅನೇಕ ಧನ್ಯವಾದಗಳು.

೬೯. **ಅನುಭವ ಮಂಟಪ** ಅರ್ಥಾತ್ **ಧಾರ್ಮಿಕ** ಪಾರ್ಲಿಮೆಂಟ್ (ವಿವರಣಾತ್ಮಕ ಪ್ರಬಂಧ). ಬರೆದವರು ಶ್ರೀ. ಮ. ನಿ. ಪ್ರ. ಪೂಜ್ಯ ಬಂಥನಾಳ ಶಿವಯೋಗಿಗಳು. **ಪ್ರಕಾಶಕರು ಶ್ರೀ ಶಿವಾನುಭವ** ಮಂಟಪ, ಸುಕ್ಷೇತ್ರ ಬಂಥನಾಳ **ಪುಣ್ಯಪೀಠ. ಕ್ರೌ. ಅ.** ೧೪೪ **ಪುಟಗಳು ಬೆಲೆ** ೦೦.೧೫

೭೦. **ಜನಸಂಖ್ಯೆ ಹಾಗೂ ಆಹಾರಸಮಸ್ಯೆ** (ಪರಿಚಯಾತ್ಮಕ ಕಿರುಹೊತ್ತಗೆ). ಬರೆದವರು **ಶ್ರೀಮಾನ್ ಪಿ. ಎಂ.** ಉಮಾಕಾಂತಶಾಸ್ತ್ರಿ ಎಂ ಎ. ಯಾದಗಿರಿ, **ಪ್ರಕಾಶಕರು ಕರ್ನಾಟಕ ವಿಶ್ವವಿದ್ಯಾನಿಲಯ,** ಧಾರವಾಡ. ಫೂ. ಕ್ರಾ. **ಅ.** ೮೨ **ಪುಟಗಳು. ಬೆಲೆ** ೦೦. ೨೫.

ನಮ್ಮ ನಾಡಿನ ಪ್ರತಿಯೊಂದು ಕುಟುಂಬದ ಹೊಣೆಗಾರ ಜನರು ಅವಶ್ಯವಾಗಿ ತಿಳಿದುಕೊಳ್ಳಬೇಕಾದ ಮಹತ್ತ್ವದ ವಿಷಯವನ್ನು ಈ ಪುಟ್ಟ ಪುಸ್ತಕವು ವಿವರಿಸುವುದು. ಇಂದಿನ ಆಹಾರದ ಕೊರತೆಗೆ ನಮ್ಮ ತಿಳಿಯದಂತೆಯೆ ಬೆಳೆಯುತ್ತ ಹೋಗುವ ಜನಸಂಖ್ಯೆಯೆ ಹೇಗೆ ಕಾರಣವಾಗಿದೆಯೆಂಬುದನ್ನು ಅಂಕಿ-ಸಂಖ್ಯೆಗಳ ಪ್ರಮಾಣಗಳೊಂದಿಗೆ ಇದರಲ್ಲಿ ನಿರೂಪಿಸಲಾಗಿದೆ. ಪ್ರತಿಯೊಬ್ಬರೂ ಇದನ್ನು ಓದಿ ತಿಳಿದುಕೊಳ್ಳಬೇಕು.

೭೧. **ಮುಳ್ಳು ಮತ್ತು ಮಲ್ಲಿಗೆ** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್. ದು. ನಿಂ. ಬೆಳಗಲಿ **ಬನಹಟ್ಟಿ. ಪ್ರಕಾಶಕರು** ವೀರಭಾರತ ಪ್ರಕಾಶನ, ಬೆಂಗಳೂರು— ೪. **ಕ್ರೌ. ಅ.** ೧೬೪ **ಪುಟಗಳು. ಬೆಲೆ** ?

೭೨. **ಉದಯ** (ವಾರ್ಷಿಕ ಸಂಪುಟ ೧೯೫೯-೬೦) ಸಂಪಾದಕರು ಪ್ರೊ. ಎಂ. ಎಸ್. ನಾರಾಯಣ ಸ್ವಾಮಿ ಮತ್ತು ಪ್ರೊ. ಯು. ಎಸ್. ಕೆಣಿ ಅವರು. **ಪ್ರಕಾಶಕರು ಕರ್ನಾಟಕ ಸಂಘ, ಕಾಶೀ ಹಿಂದೂ** ವಿದ್ಯಾಪೀಠ, ವಾರಣಾಸಿ. **ಡೆ. ಅ.** ೨೬೬ **ಪುಟಗಳು.**

ಕಾಶೀ ಹಿಂದು ವಿ. ವಿ. ನಿಲಯದಲ್ಲಿ ವಿದ್ಯಾರ್ಥಿಗಳಾಗಿಯೂ ಪ್ರಾಧ್ಯಾಪಕರಾಗಿಯೂ ಅನೇಕ ಜನ **ಕನ್ನಡಿಗರು** ಇದ್ದಾರೆ. ಅವರು ತಮ್ಮ ನಾಡು-ನುಡಿಗಳನ್ನು ಮರೆಯದೆ, ತಮ್ಮದೇ ಆದ ಒಂದು ಕರ್ನಾಟಕ ಸಂಘವನ್ನು ಸ್ಥಾಪಿಸಿಕೊಂಡು, ಅನೇಕ ಬಗೆಯ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಯಿಸುತ್ತಿರುವುದು ಸಂತೋಷದ ಸಂಗತಿ. ಈ ಸಂಘದ ವಾರ್ಷಿಕ ಸಾಹಿತ್ಯ ಸಂಪುಟವಾದ ಈ ಉದಯದಲ್ಲಿ, ಸದಸ್ಯ ಲೇಖಕರೇ ಬರೆದ ಲೇಖನ, ಕವನ, ಕಥೆ, ಏಕಾಂಕಗಳಿವೆ

೭೩. **ಸುವಿಚಾರ ಕ್ರಾಂತಿ** (ಪದ್ಯಸಂಗ್ರಹ). ಶ್ರೀ. ಬಸವರಾಜ ಜಂಗಡಿ ಬಂಕಾಪುರ, ಶ್ರೀ. ಸಿಂಡಪ್ಪಾ ದೊಡ್ಡೂರು ಬಸಾಪುರ, ಶ್ರೀ. ಕೆ, ಸರ್ವೇಶ ಹಲ್ಯಾಪುರ, ಪೋ. ಕಳಸ, ಜಿ. ಧಾರವಾಡ ಅವರು ಪ್ರಕಾಶಕರು. **ಕ್ರೌ. ಅ.** ೧೮ **ಪುಟಗಳು. ಬೆಲೆ** ೦೦.೧೫

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ ! **ಜಾನಪದ ಪ್ರೀತಿಗೀತಗಳು !!**

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತೀನಿ!' 'ನಮ್ಮೂರ ಜಾತ್ರಿ' 'ಬೆಣ್ಣೆಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕಿನ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X X

ಲಲಿತಸಂಗೀತಕಾರರಿಗೆ ಗೆಲುವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಕಿಯೊಬ್ಬಳು ತನ್ನ ಭಾವವನ್ನು ವ್ಯಕ್ತಪಡಿಸಿದಂತೆ:

ನಂದನವನ ಪಾರಿಜಾತಾ — ಬಂದು ಭೂಮಿಗಿಳದೈತವ್ವಾ —
ಮುಂದ ಹಿಂದ ಮ್ಯಾಲ ತೆಳಗs — ಚಿಂದs ಗಂಧs ಹರಡೈತವ್ವಾ !

ಎಂಬ ಆನಂದಾನುಭವವನ್ನು ವ್ಯಕ್ತಪಡಿಸದೆ ಇರಲಾರರು.

X X X X X

ಕ್ರಾ. ಅ. ೬೦ ಪುಟಗಳು **ಬೆಲೆ ರೂ. ೧. ೨೫ ನ. ಪೈ.**

ಬೇಕೆನ್ನುವವರು ಕಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು :

ಶ್ರೀ. ಎಸ್. ಡಿ. ಧರಮುಟ್ಟಿ, ಶರತ್ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ಸಭ್ಯತೆಯ ವಿಜಯಧ್ವಜ!

ಬಾನಿಗೇರಿ ಬೀಭತ್ಸವಾಗಿ ಹಾರಾಡುತ್ತಿದೆ, ಇಂದಿನ ಸಭ್ಯತೆಯ ವಿಜಯಧ್ವಜ! ಧ್ವಜಪಟದ ನೀಲಿನ ಅಂಕಿತಗಳಾವುವು ಕಂಡಿರಾ? ಹಸುವ ಮುರಿದು ತಿನ್ನುವ ಹುಲಿಯೊಂದು ಬದಿಗೆ; ಗರತಿಯ ಸೀರೆಯನು ಸೆಳೆವ ಗಂಡು ಇನ್ನೊಂದು ಬದಿಗೆ!

ಧ್ವಜದಂಡನೆಂತಿದೆ ದಿಟ್ಟಿಯಿಟ್ಟು ನೋಡಿರಯ್ಯಾ! ಮಾನವನ ಮೂಳೆಗಳೇ ಗೆಣ್ಣು ಗೆಣ್ಣಾಗಿ ಹೆಣೆದುಕೊಂಡಿವೆ. ದೊಂಡೆಗರುಳ ಗೊಂಡೆಯಗಳು ದಂಡವನ್ನು ಸಿಂಗರಿಸಿವೆ. ಧ್ವಜದಡಿಯಲ್ಲಿ ಘಿಂತ ಬೀರರ ಬಳಗವಿಂತು ಗೆಲ್ಲಾಡನ್ನು ಹಾಡುತ್ತಲಿದೆ:

'ದಯೆ-ದಾಕ್ಷಿಣ್ಯ-ಸಹೋದರತೆಯ ತುಳಿದು—
ಬಾನಿಗೇರಿ ಮೆರೆವುದು ಧ್ವಜವಿಂದು!'

ಧ್ವಜವ ಮೆರೆವಣಿಗೆಯ ನೋಡುತ್ತ ನಾಗದೆ, ಗಣಿತಕ್ಕೆ ನಿಲುಕದ ಜನಗಣ. ತಿರುಳಿಲ್ಲದ ಮೈ! ಕಂಬನಿಗೂಡಿದ ಕಣ್ಣು! ಹಸಿವಿನುರಿಯ ಹೊಟ್ಟೆ! ಮೊಗದಲ್ಲಿ ಆರ್ತಭಾವ! ಮುಂಬರಿಯಲು ಕಾಲಲ್ಲಿ ಬಲವಿಲ್ಲ; ಮಾತನಾಡಲು ನಾಲಗೆಯಿಲ್ಲ.

ನೋಡಿ, ನೋಡಿ ಧ್ವಜವಾಲಕನ ಅಟ್ಟಹಾಸವನು. ನೆತ್ತರಲ್ಲಿ ನೆನೆದ ಆತನ ಉಡಿಗೆ-ತೊಡಿಗೆ ರೌದ್ರಭಾವವ ಹರಡುತ್ತಲಿವೆ. ಕೈಯಲ್ಲಿ ಹಿಡಿದ ಪರಶು, ಭೀತಿಭಾವದ ತವರಾಗಿದೆ. ಕೊಚ್ಚಿನ ಧ್ವನಿಯಲ್ಲಿ ಆತ ಅರಚುವ ಆಜ್ಞೆಯಪಾಣಿಯಿದು:

'ಶಾಂತಿಬೇಕು ಶಾಂತಿಬೇಕು, ಶಾಂತಿಗೆಂದೆ ನಾವಿಹೆವು
ಶಾಂತಿಯ ಸಂಕೇತವಹುದು ನಮ್ಮಾ ವಿಜಯಧ್ವಜವು!'

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

ಅರುವತ್ತು ವರುಷದ ವಯಸ್ಸು (ಸಂಪಾದಕೀಯ)
ಸಂಪಾದಕರು ೩೬೫

ಸಾಡಸಡಿ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೩೬೭

ತಿಮ್ಮುಡು ಕೈಹಿಡಿದ ಹುಡುಗಿ (ಸಣ್ಣಕಥೆ)
'ಭಾರತೀಸುತ' ವೀರರಾಜಪೇಟೆ ೩೬೯

ಜರ್ಮನಿಯಲ್ಲಿ ದಕ್ಷಿಣ ಭಾರತದ ಬಗ್ಗೆ ಅಧ್ಯಯನ
ಶ್ರೀ. ವಾಲ್ಟರ್ ಲೈಫರ್ ೩೭೯

ನಿನ್ನ ಪೂಜೆಗೆ (ಕವನ)
ಶ್ರೀ ಬಿ. ಬಿ. ಹಿಂಗಮಿರೆ, ಅಧಣಿ ೩೮೧

ಶ್ರೀ ಶಂಕರಾಚಾರ್ಯರು (ತರಂಗರೂಪಕ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೩೮೨

ಪ್ರಾಗ್ಜ್ಯೋತಿಷದಲ್ಲಿ ವಸಿಷ್ಠರು (ಪ್ರಾದೇಶಿಕ ಪುರಾಣಕಥೆ)
ಶ್ರೀ. ಪಿ. ವಿ. ಗುಡಿ, ಗೋಹಟ್ಟಿ (ಅಸಾಮ) ೩೯೧

ಕಲ್ಪನಾ ಲೋಕದಲಿ ವಿಹರಿಸುವೆನು (ಕವನ)
ಶ್ರೀ. ಎಸ್. ಆರ್. ಪಾಡ ೩೯೩

ನಸುಕಿನಲ್ಲಿ ಏಳುವುದು (ಹಂಟ)
ಶ್ರೀ. ಎನ್. ಎಸ್. ಗಸಗಕರ, ಧಾರವಾಡ ೩೯೪

ಕನಸಿನಲ್ಲಿ....! (ಕವನ)
ಶ್ರೀ. ಆರ್. ವ್ಹಿ. ಹೊರಡಿ, ಹಾನೇರಿ ೩೯೫

ಸಾಹಿತ್ಯ ವಿಮರ್ಶೆಯು ಶಿಕ್ಷಣರಂಗ
ಶ್ರೀ. ಕೆ. ವಿ. ತಿರುಮಲೇಶ, ಪೂನ್ನೆಸ್ಪಲ ಮತ್ತು
ವಸಂತಲಕ್ಷ್ಮಿ, ಮದ್ರಾಸ ೩೯೬

ಸಾದರ ಸ್ವೀಕಾರ .... ಕವರ್ ೩ನೇಯ ಪುಟ

ಜಯಂತಿ

ಸಂಪುಟ ೩೨] [ಸಂಚಿಕೆ ೧೧

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ನೂಸಪತ್ರಿಕೆ

❖

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

❖

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

❖

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

❖

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಅರುವತ್ತು ವರುಷದ ವಯಸ್ಸು

ಅನಾದ್ಯನಂತವಾದ ಕಾಲಪ್ರವಾಹದಲ್ಲಿ ಅರುವತ್ತು ವರುಷದ ಒಂದು ಕಾಲಖಂಡವೆಂದರೆ ಒಂದು ತುಂತುರ್‌ವನಿ ಇದ್ದಂತೆ. ಆದರೆ ಪರಿಮಿತಕಾಲವಷ್ಟೇ ಬದುಕಬಲ್ಲ ಮಾನವನ ಜೀವನದಲ್ಲಿ, ಅರುವತ್ತು ವರುಷದ ಕಾಲಖಂಡವು ವಿಶಾಲವಾದುದೆನಿಸುವುದು. ಆದುದರಿಂದ ಅರುವತ್ತು ವರ್ಷದ ವಯಸ್ಸನ್ನು ದಾಟಿದಾಗ, ದಾಟಿದ ವ್ಯಕ್ತಿಗೂ ಒಂದು ರೀತಿಯ ಸಮಾಧಾನವೆನಿಸುವುದು. ಬಹುಜನರಿಗೆ ಬೇಕಾದ ವ್ಯಕ್ತಿಯಾಗಿದ್ದರೆ, ಆತನ ಅರುವತ್ತು ವರುಷದ ವಯಸ್ಸಿನ ವಿಷಯದಲ್ಲಿ ಜನರೂ ಆದರಾಭಿಮಾನಗಳನ್ನು ವ್ಯಕ್ತಪಡಿಸುವರು. ಇದೊಂದು ಪರಂಪರೆಯಿಂದ ಬಂದ ಸಂಪ್ರದಾಯವಾಗಿದೆ.

ಕಳೆದ ಏಪ್ರಿಲ್ ೧೬ನೆಯ ದಿನಾಂಕಕ್ಕೆ ನಾನೂ ನನ್ನ ಜೀವನದ ಅರುವತ್ತು ವರುಷಗಳನ್ನು ಕಳೆದು ಅರುವತ್ತೊಂದನೆಯದರಲ್ಲಿ ಕಾಲಿರಿಸಿದೆ. ಅದಕ್ಕಾಗಿ ಕನ್ನಡನಾಡಿನಲ್ಲಿಯ ಅನೇಕ ಜನ ಮಾನ್ಯ ಮಹನೀಯರೂ, ಸ್ನೇಹಿತರೂ, ಆಪ್ತ-ಭ್ರಾಂಧವರೂ ಸಂತೋಷವನ್ನು ವ್ಯಕ್ತಪಡಿಸಿ, ನನಗೆ ಆಯುರಾರೋಗ್ಯಗಳನ್ನು ಕೋರಿ ಪತ್ರಗಳನ್ನು ಬರೆದಿರುವರು. ಈ ನನ್ನ ಎಲ್ಲ ಹಿತಚಿಂತಕರಿಗೂ ನನ್ನ ಕೃತಜ್ಞತೆಯ ವಂದನೆಗಳನ್ನು, ಜಯಂತಿಯ ಮುಖಾಂತರವಾಗಿಯೆ ಸಲ್ಲಿಸಬಯಸುತ್ತೇನೆ.

ಜೀವನದಲ್ಲಿ ಒಂದಿಲ್ಲೊಂದು ಬಗೆಯ ಆಪತ್ತಿಗಳನ್ನೆದುರಿಸುತ್ತಲೆ ಬದುಕಬೇಕಾಗಿ ಬಂದುದರಿಂದ, ಅನೇಕ ಜನ ಹಿತಚಿಂತಕರ ಸ್ನೇಹದ ಬೆಂಬಲವಿಲ್ಲದೆ ಹೋಗಿದ್ದರೆ, ನಾನು ನಿಷ್ಕ್ರಿಯನಾಗಿ ಬಿದ್ದುಬಿಡುತ್ತಿದ್ದೆನೋ ಏನೋ ! ಆದರೆ ಹಿತಚಿಂತಕರ ಬೆಂಬಲದ ನಂಬುಗೆ ಮತ್ತೆಮತ್ತೆ ನನ್ನಲ್ಲಿ ಉತ್ಸಾಹವನ್ನು ತುಂಬಿತು; ಕಾರ್ಯಪ್ರವೃತ್ತನನ್ನಾಗಿ ಮಾಡಿತು.

ಕಾಲಪುರುಷ ನನ್ನನ್ನು ಹೇಗೆ ಹೇಗೆಯೊ ಬೆಳಸಿಕೊಂಡು ಬಂದ. ಅನೇಕ ಕ್ಷೇತ್ರಗಳಲ್ಲಿ ಅಲೆದಾಡಿಸಿದ. ಅನೇಕ ವ್ಯಕ್ತಿಗಳ ಪರಿಚಯ ಮಾಡಿಕೊಟ್ಟ. ಲೋಕದ ವಿವಿಧ ಅನುಭವನಗಳ ಜ್ಞಾನವನ್ನು ಆತನೆ ಮಾಡಿಕೊಟ್ಟ. ಆ ಸುರಸಿಲ್ಪಿಗೆ ನನ್ನ ಹೃದಯವ ಕಗ್ಗಲ್ಲಿನಿಂದ ಎಂತಹ ಮೂರ್ತಿಯನ್ನು ಕಡೆಯಬೇಕಾಗಿದೆಯೊ, ಉಳಿಯ ಏಟುಗಳನ್ನು ಎಡೆಬಿಡದೆ ಹಾಕುತ್ತಲೇ ಇದ್ದಾನೆ. ಆತನ ಸಂಕಲ್ಪಕ್ಕೊಪ್ಪುವ ಮೂರ್ತಿತ್ವ ಇನ್ನೂ ನನ್ನ ಹೃದಯ-ಮನಗಳಿಗೆ ಬಂದಿಲ್ಲವೆಂಬ ತೋರುವುದು. ಉಳಿಯ ಏಟುಗಳನ್ನವನು ಹಾಕಿಯೆ ಹಾಕುತ್ತಲಿದ್ದಾನೆ; ಎಂತಹದೋ ಮೂರ್ತಿಯಾಗಲಿರುವೆನೆಂಬ ಆಶೆಯಿಂದ, ನನ್ನ ಪ್ರಾಣವೂ ಆ ಆಘಾತಗಳನ್ನು ಸಮಾಧಾನದಿಂದ ಸಹಿಸಿಕೊಳ್ಳುತ್ತಿದೆ.

ಸಾಹಿತ್ಯ ಕ್ಷೇತ್ರವನ್ನಲ್ಲಿ ಇದುವರೆಗೂ ನನ್ನಿಂದ ಕಾರ್ಯವಾಗಿದೆಯೆಂಬುದನ್ನು ನವ್ಮ ಜನ ಒಪ್ಪುತ್ತಾರೆ. ಅದಕ್ಕಾಗಿ ಅನೇಕ ಜನರು ಹೆಚ್ಚಿನ ಪ್ರೀತಿ-ವಿಶ್ವಾಸಗಳಿಂದಲೂ ನನ್ನನ್ನು ಕಾಣುತ್ತಾರೆ. ಆದರೆ ಈಗ ನನ್ನಿಂದ ಆಗಿರುವ ಸಾಹಿತ್ಯ ಕಾರ್ಯದಿಂದ ನನಗೇನೋ ತೃಪ್ತಿಯಿಲ್ಲ. ನನ್ನ ಸಂಕಲ್ಪ ನನ್ನ ಮನಸ್ಸಿನ ಮೇಲೆ, ಮಾಡಬೇಕಾದ ಕಾರ್ಯದ ಒಂದು ಬೆಟ್ಟವನ್ನೇ ಹೊರಿಸಿದೆ. ನಾನು, ನನ್ನ ಬಾಳಿನ ಅವಕಾಶ ದೊರೆತಾಗ, ಆ ಬೆಟ್ಟದ ಕೆಲವು ಶಕಲಗಳನ್ನು ಎಬ್ಬಿಸಿ ಜನರೆದುರು ಇರಿಸಿರುವೆನೆನಷ್ಟೆ ! ನನ್ನ ಇದುವರೆಗಿನ ಸಾಹಿತ್ಯಕೃತಿಗಳೆಂದರೆ, ನನ್ನ ಸಂಕಲ್ಪವಲ್ಲಿ ಹುನುಗಿಕೊಂಡಿರುವ ಸರಕಿನ ಮಾದರಿಗಳು ಮಾತ್ರ. ಯಾವ ಸರಕನ್ನೂ ಹೆಚ್ಚು ಹೆಚ್ಚಾಗಿ ಒಪಗಿಸಿಕೊಡುವಂತಹ ಜೀವನಾನುಕೂಲತೆಯನ್ನು ನಾನು ಪಡೆದು ಬಂದಿಲ್ಲ.

ಒಂದೆ ಒಂದು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿ, ೪೪ ಕಾದಂಬರಿಗಳನ್ನು ಬರೆಯಬೇಕೆಂದು ಸಂಕಲ್ಪಿಸಿ ಸುಮಾರು ೧೦ ವರ್ಷಗಳಾದವು. ಹೊಸ ಹುರುಪಿನಲ್ಲಿ 'ರಾಜಯೋಗಿ' 'ಅಶಾಂತ ಪರ್ವ'ಗಳನ್ನು ಒಂದರ ಹಿಂದೆ ಒಂದರಂತೆ ಬರೆದೆ. ಜನರು ಅವುಗಳನ್ನು ತುಂಬ ಮೆಚ್ಚಿಕೊಂಡರು. ಸಹೃದಯ ವಿಮರ್ಶಕರು 'ಕನ್ನಡಕ್ಕೆ ಇವು ಹೊಸ ಮಾದರಿಯವು' ಎಂದು ಮುಕ್ತಕಂಠದಿಂದ ಹೇಳಿದರು. ಆದರೆ ಇಪ್ಪತ್ತೈದು ವರ್ಷಗಳ ದೀರ್ಘಾವಧಿ ಕಳೆದರೂ ಅವು ಎರಡೇ ಎರಡಾಗಿ ಉಳಿದಿದ್ದುವು; ಈಗ ಮನೋಹರ ಗ್ರಂಥ ಮಾಲೆಯ ಸಂಪಾದಕರ ಪ್ರಚೋದನೆಯಿಂದ "ಮಲ್ಲಿಕಾರ್ಜುನ" ಕಾದಂಬರಿ ಸಿದ್ಧವಾಗಿದೆ. ಇನ್ನುಳಿದವುಗಳು ನನ್ನ ಸಂಕಲ್ಪದಲ್ಲಿಯೆ ಸಮಾಧಿಹೊಂದುವುವೇನೋ— ಎಂದು ಎನಿಸುತ್ತಿದೆ. ಏಕೆಂದರೆ ನನ್ನ ಆಯುಷ್ಯದ ಅರುವತ್ತು ವರ್ಷಗಳು ಕಳೆದುವು. ಮುಪ್ಪಿನ ನಿರ್ವಿಣ್ಣತೆ ಮುತ್ತಿಗೆ ಹಾಕಲು ಏರಿ ಬರುತ್ತಲಿದೆ.

"ಕರ್ನಾಟಕ ಜನಜೀವನ" ಎಂಬ ನನ್ನ ಕೃತಿ ಕನ್ನಡ ಸಾಹಿತ್ಯದ ನನ್ನ ಅಭ್ಯಾಸವು ಕೊಟ್ಟ ಒಂದು ಫಲ. ಇನ್ನೂ ಆ ಬಗೆಯ ೩-೪ ಫಲಗಳನ್ನು ಒದಗಿಸುವ ಸಾಮಗ್ರಿ ನನ್ನ ಬಳಿಯಲ್ಲಿದೆ ಆ ಬಗೆಯ ಕಾರ್ಯಕ್ಕೆ ಸಾಂಸ್ಕೃತಿಕ ಸಂಸ್ಥೆಗಳ ಬೆಂಬಲವಾದರೂ ಬೇಕು; ಸರಕಾರದ ಬೆಂಬಲವಾದರೂ ಬೇಕು. ಆದರೆ ಅಂತಹ ಬೆಂಬಲದೊರೆಯುವ ಆಶೆಯೆ ನನಗಿಲ್ಲವಾಗಿದೆ. ಏಕೆಂದರೆ ಈ ಕಾಲದಲ್ಲಿ ಸಂಸ್ಥೆ-ಸರಕಾರಗಳ ಬೆಂಬಲವನ್ನು ಪಡೆದುಕೊಳ್ಳುವುದಕ್ಕೆ ಅವಶ್ಯವಾದ ಗುಣಗಳು ನನ್ನಲಿಲ್ಲ. ಎಂತಲೇ ಈದ್ದ ಸಂಶೋಧಿತ ಸಾಮಗ್ರಿಯೂ ನನ್ನ ಮನಸ್ಸಿನಲ್ಲಿಯೆ ಉಳಿಯಬಹುದಾಗಿದೆ.

ಹರಿದಾಸ ಸಾಹಿತ್ಯದ ಬಗೆಗೆ ನಾನು ನೂಡಬೇಕೆಂದು ಸಂಕಲ್ಪಿಸಿದ ಕಾರ್ಯ ತುಂಬ ಭಾರವಾದುದು. ಹಳೆಯ ಮಡಿವಂತರ ಕೈಯಲ್ಲಿ ಸಿಕ್ಕಿ, ಅವರ ಮಡಿಪಂಜೆಗಳಂತೆಯೇ ಮಲಿನವಾಗಿರುವ ದಾಸಸಾಹಿತ್ಯದ ರತ್ನರಾಶಿಯನ್ನು ಉಜ್ಜಿತೊಳೆಯುವ ಕೆಲಸವನ್ನು ಕೈಕೊಳ್ಳಬೇಕೆಂದು ಅದೆಷ್ಟೋ ಕಾಲದಿಂದ ಹವಣಿಸುತ್ತಲಿದ್ದೇನೆ. ಆದರೆ ಜೀವನಾವಶ್ಯಕವಾದ ಕೂಲಿಯ ಕೆಲಸ, ನನಗಿದ್ದ ಬೇಳೆಯನ್ನೆಲ್ಲ ತಿಂದುಬಿಡುತ್ತಲಿದೆ.

ಕನ್ನಡ ಜಾನಪದ ಸಂಸ್ಕೃತಿಯ ಅಭ್ಯಾಸದ ಅಭಿರುಚಿ ನನಗಿರುವುದರಿಂದ, ಆ ಕ್ಷೇತ್ರದಲ್ಲಿ ಕಂಡು ಉಂಡುದನ್ನೆಲ್ಲ, ಇಂದಿನ ಜನತೆಯ ಕಣ್ಣೆದುರು ಇರಿಸಬೇಕೆಂದು ತಂಬ ಆಪೇಕ್ಷೆಯಿರಿಸಿಕೊಂಡಿದ್ದೇನೆ. ಅಂತಹ ಸಂಸ್ಕೃತಿಯ ಇತಿಹಾಸವನ್ನು ಬರೆದು ಮುಗಿಸಲು ಸಮಾಧಾನ ಜೀವನವಿಲ್ಲದೆ ಸಾಧ್ಯವಿಲ್ಲ. ನನ್ನ ಬಾಳಿನಲ್ಲಿ ಅಂತಹ ಸಮಾಧಾನ ಜೀವನ ದೊರೆಯುವುದೆಂಬ ಆಶೆ, ದಿನದಿನಕ್ಕೆ ಇಂದು ದೂರವಾಗುತ್ತಲಿದೆ.

ಇನ್ನೂ ಎಷ್ಟೆಷ್ಟೋ ಭಾವಬೀಜಗಳನ್ನು ಚಿತ್ತ ಬೆಳೆಸಿ, ನನ್ನ ನಾಡಿಗರಿಗೆ ಒದಗಿಸಿಕೊಡಬೇಕೆಂಬ ಆಪೇಕ್ಷೆ ನನಗಿದೆ. ಅರುವತ್ತು ವರುಷಗಳ ವರೆಗೆ ನನ್ನ ಕೈಯನ್ನು ಹಿಡಿದು, ಹೇಗೆ ಹೇಗೆಯೋ ನಡೆಯಿಸಿ, ಏನೇನೋ ಕಾರ್ಯಮಾಡಿಸಿದ ಕಾಣದಾಯ, ನನಗೆ ಸಮಾಧಾನದ ಬಾಳನ್ನು ಒದವಿಸಿದರೆ, ನನ್ನ ಸಂಕಲ್ಪಗಳೆಲ್ಲ ಕೃತಿರೂಪವನ್ನು ಪಡೆದು ಹೊರಗೆ ಬಂದಾವು. ನಾನೇನು ನಿರಾಶಾವಾದಿಯಲ್ಲ. ಅವರೆ ಎಂತಹ ಆಶಾವಾದಿಯಿದ್ದರೂ ಕೈಕಾಲುಕಟ್ಟಿ ಕೆಡುಹುವಂತಹ ವಾತಾವರಣಕ್ಕೆ ಸಿಕ್ಕಿದಾಗ, ಅನಿವಾರ್ಯವಾಗಿ ಅವನು ನಿಷ್ಕ್ರಿಯನಾಗುವನು. "ಜಯಂತಿ" ಇನ್ನೊಂದು ತಿಂಗಳಿಗೆ ತನ್ನ ತೀನೆಯ ವರ್ಷವನ್ನು ಮುಗಿಸುವುದು. ಇಷ್ಟು ಕಾಲ ಅದನ್ನು ನಾನು ಹೇಗೆ ನಡೆಯಿಸಿಕೊಂಡು ಬಂದೆನೆಂಬುದು, ನನಗೇ ಆಶ್ಚರ್ಯವನ್ನು ಹುಟ್ಟಿಸುವ ಸಂಗತಿಯಾಗಿದೆ. ನನ್ನ ತುತ್ತನ್ನು ಜಯಂತಿಯ ಹೊಟ್ಟೆಗೆ ಹಾಕಿ, ನಾನು ಬಡವಾಗಿದ್ದೇನೇನೋ ಸರಿ. ಇದಕ್ಕಾಗಿ ನಾನೆಂದೂ ವ್ಯಸನಪಡುವುದಿಲ್ಲ. ಆದರೆ ಇಷ್ಟುಕಾಲ ಬೆಳೆಯಿಸಿಕೊಂಡು ಬಂದ ನನ್ನ ಈ ಜಯಂತಿ, ಬಹುಕಾಲ ಬಾಳಿ, ಕನ್ನಡಕ್ಕಾಗಿ ದುಡಿಯುತ್ತಿರಬೇಕೆಂದು ನನ್ನ ಆಸೇಕ್ಷೆ. ನನ್ನ ಆಯುರಾರೋಗ್ಯವನ್ನು ಕುರಿತು ಆತ್ಮೀಯತೆಯಿಂದ ಬರೆದ ಹಿತಚಿಂತಕರು ಜಯಂತಿಯ ಆಯುರಾರೋಗ್ಯದ ವಿಚಾರದಲ್ಲಿ ಉಪೇಕ್ಷೆಯಿಂದ ಇರಲಾರದೆಂದು ನನ್ನ ನಂಬುಗೆ. ಕನ್ನಡ ಜನತೆಗೆಲ್ಲ ನನ್ನ ಒಲವಿನ ನಮಸ್ಕಾರ!

—ಬೆಟಗೇರಿ ಕೃಷ್ಣಶರ್ಮ

ಜಯಂತಿಗೆ ಸಹಾಯಧನ

ಕಳೆದ ತಿಂಗಳಲ್ಲಿ ಜಯಂತಿಯ ಕಡೆಗೆ ಸಹಾಯದೃಷ್ಟಿಯಿಂದ ನೋಡಿದವರ ಸಂಖ್ಯೆ ಹೆಚ್ಚಿದುದು ಶುಭಸೂಚಕ ಸಂಗತಿಯಾಗಿದೆ. ಸಹಾಯ ನೀಡಿದವರು:

ಜಯಭದ್ರಕಾಳಿ ಕೃಪಾಪೋಷಿತ ಯಕ್ಷಗಾನ ಮಿತ್ರಮಂಡಳಿ ಗೋಕರ್ಣ. ೧೫೫ ರೂಪಾಯಿ.

ಕುಮಾರಿ ಮಲ್ಲಿಕಾರಾವ್, ಸದಲಗಿ (ಜಯಂತಿಯ ವಿಷಯವಾದ ಪ್ರೀತಿಯಿಂದ ಇವರು, ಸ್ವಯಂಪ್ರೇರಣೆಯಿಂದ ಹಣವನ್ನು ಕೂಡಿಸಿ ಕಳುಹಿದ್ದಾರೆ.(೧೩ ರೂಪಾಯಿ.

ಶ್ರೀ. ಎ. ಎಂ. ಅಣ್ಣಿಗೇರಿ ಎಂ. ಎ. ಧಾರವಾಡ ಅವರು ಚಂದಾಸಹಿತ. ೧೦ ರೂ. ಕೊಟ್ಟಿದ್ದಾರೆ.

ಶ್ರೀ. ಎನ್. ಎಂ. ಕಾಂಜನ, ಮುಂಬಯಿ ಅವರು ಕಳಲವಂತೆಯೆ ೧೦ ರೂ. ಕಳುಹಿದ್ದಾರೆ.

ಶ್ರೀ. ಸಿ. ಬಿ. ಬೆಲ್ಲದ. ಇಟಗಿ ಅವರಿಂದಲೂ ಚಂದಾಸಹಿತ ೧೦ ರೂ. ಗಳು ಬಂದಿವೆ.

ಶ್ರೀ. ಎನ್. ಜಿ. ಜೋಶಿ ಬಿ. ಎ. ಹೈದರಾಬಾದ್ ಅವರು ಚಂದಾಸಹಿತ ೧೦ ರೂ. ಗಳನ್ನು ಕಳುಹಿದ್ದಾರೆ.

ಈ ಸಹಾಯಕ ಮಹನೀಯರಿಗೆಲ್ಲ ಜಯಂತಿಯ ಹೃತ್ಪೂರ್ವಕ ಧನ್ಯವಾದಗಳು.

—ಸಂಪಾದಕ

ನಾಡನಡೆ

ಯಕ್ಷಗಾನ ಮಿತ್ರಮಂಡಲಿಯ ವಾರ್ಷಿಕೋತ್ಸವ

ಕಳೆದ ತಿಂಗಳ ತಾ. ೧೭-೧೮ ರಂದು ಗೋಕರ್ಣದ ಜಯಭಜ್ರ ಕಾಳೀ ಕೃಪಾಪೋಷಿತ ಯಕ್ಷಗಾನ ಮಿತ್ರಮಂಡಲಿಯವರು, ಶ್ರೀ. ಬೆಟಗೇರಿ ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ, ತಮ್ಮ ಸಂಸ್ಥೆಯ ೮ ನೆಯ ವಾರ್ಷಿಕೋತ್ಸವವನ್ನು ಜರುಗಿಸಿದರು. ಉತ್ಸವ ಕಾಲದಲ್ಲಿ 'ದುಷ್ಯಂತ ಪ್ರತಾಪ' 'ಮಾರೆ-ನರಕಾಸುರ ಸಂಹಾರ' ಎಂಬ ಯಕ್ಷಗಾನ ಬಯಲಾಟಗಳನ್ನು ಪ್ರದರ್ಶಿಸಿದರು. ಸ್ಥಳೀಯ ರಸಿಕರಿಗೆ ಇದೊಂದು ರಸದ ಹಬ್ಬವಾಗಿ ಪರಿಣಮಿಸಿತು.

ಮಿತ್ರಮಂಡಲಿಯ ಮಿತ್ರರೆಲ್ಲರೂ ಕೇಣಿಯ ಕಲಾನಿಲಾಸಿಗಳು. ಯಾವ ಯಾವ ಊರುಗಳಲ್ಲಿಯೋ ಇದ್ದುಕೊಂಡು ತಂತಮ್ಮ ಜೀವನೋಪ್ಯವಾಗಳಲ್ಲಿದ್ದವರು. ಆದರೂ ಯಕ್ಷಗಾನದ ಮೇಲಿನ ಪ್ರೀತಿಯಿಂದ ಆಗಾಗ ಕೂಡಿ, ಪ್ರಬಂಧಗಳನ್ನು ಪ್ರದರ್ಶಿಸುವರು. ಕಳೆದ ವರ್ಷ ಮುಂಬಯಿಯ ಕನ್ನಡಿಗರನ್ನು ತಮ್ಮ ಕಲಾನೈಪುಣ್ಯದಿಂದ ಸೆಳೆದು ಬಂದಿದ್ದಾರೆ.

ಯಕ್ಷಗಾನ ಬಯಲಾಟಗಳಲ್ಲಿರುವ ಪಾತ್ರಗಳ ವೇಷಗಾರಿಕೆಯೂ ನಾಂಪ್ರದಾಯಿಕ-ಭಾವಪ್ರಚೋದಕ-ನರ್ತನವೂ ಯಾರ ಮನಸ್ಸನ್ನೂ ಸೆಳೆಯುವಂತಿರುವುದು. ಪಾತ್ರೋಚಿತ ವೇಷಗಾರಿಕೆಯಲ್ಲಿ ಪ್ರತಿಯೊಬ್ಬ ನಟನೂ ಪಾಂಡಿತ್ಯ ಪಡೆದಿರುವನು. ಗಮಕಕಲೆಯಲ್ಲಿ ಸುರಿತ ಸಂಗೀತಜ್ಞನು ಭಾಗವತನಾದರೆ, ಅವನ ಕಾರ್ಯವೂ ಜನಸ್ತುತಿಯಾಗ ಬಹುದು. ಕಾಲೋಚಿತವಾಗಿ ಹಿನ್ನೆಲೆಗಳನ್ನು ಯೋಜಿಸಿಕೊಂಡರೆ, ಪಾತ್ರಧಾರಿಗಳ ಭಾವನಿಸ್ಕಾರಕ್ಕೆ ಇನ್ನೂ ಹೆಚ್ಚಿನ ಪೋಷಣೆ ದೊರೆಯಬಹುದು.

ವೇಷಗಾರಿಕೆ-ನರ್ತನಗಳಿಗೇ ಪ್ರಾಧಾನ್ಯವಿರುವ ಈ ನಾಟ್ಯತಂತ್ರ, ಆಧುನಿಕ ಕಥಾವಸ್ತುಗಳನ್ನು ಅಡಿಕೋರಿಸಲು ಅನುಕೂಲವೆನಿಸದು. ಪೌರಾಣಿಕ ಕಥಾವಸ್ತುಗಳೇ ಇದರಲ್ಲಿ ಕಳೆಕಟ್ಟಿ ನಿಲ್ಲಬಲ್ಲವು. ಗೋಕರ್ಣದ ತರುಣ ಯಕ್ಷಗಾನ ನಿಲಾಸಿಗಳಂತೆ, ನಿಮ್ಮ ಕಡೆಯ ತರುಣರೂ ಈ ಪ್ರಾಚೀನ ಜಾನಪದ ನಾಟ್ಯಕಲೆಯನ್ನು ಸಂರಕ್ಷಿಸಲು ಪ್ರಯತ್ನಿಸಬೇಕು.

ಚೀನದ ಮುಖ್ಯಮಂತ್ರಿ ಬಂದರು—ಹೋದರು

ಗಡಿತಂಟೆಯನ್ನು ಸಾಮದಿಂದಲೇ ಬಿಡಿಸಬೇಕೆನ್ನುವ ಮಾನ್ಯ ಜವಾಹರಲಾಲ ನೆಹರು ಅವರು, ಚೀನಾದ ಮಂತ್ರಿ ಚೌ ಎನ್ ಲಾಯರನ್ನು, ತುಂಬು ವಿಶ್ವಾಸದಿಂದ ಬರಮಾಡಿಕೊಂಡರು; ಒಲ್ಲೆನೆಂದ ಹೇಳಬಾರದೆಂದೇನೋ ಚೌ ಎನ್ ಲಾಯರವರು— ಯಾವ ಮಾತಿನಲ್ಲಿಯೂ ತಾವು ಸೋಲಬಾರದೆಂಬ ನಿಶ್ಚಯಬುದ್ಧಿಯನ್ನು ಒಳಗಿರಿಸಿಕೊಂಡೇ ಭಾರತಕ್ಕೆ ಬಂದರು. ಸಾಂಪ್ರದಾಯಿಕ ಮಾನ-ಸನ್ಮಾನಗಳನ್ನು ಕೊಡಲು ಭಾರತ ಸರಕಾರ ಯಾವ ರೀತಿಯಲ್ಲಿಯೂ ಕಡಿಮೆ ಮಾಡಲಿಲ್ಲ. ಚೌ ಎನ್ ಲಾಯರವರು ದಿಲ್ಲಿಯಲ್ಲಿ ಇದ್ದ ಐದು ದಿನಗಳಲ್ಲಿ ಹೆಚ್ಚು ಕಾಲ ಮಾನ್ಯ ಜವಾಹರಲಾಲರೊಂದಿಗೆ ಮಾತನಾಡಿದರು. ಭಾರತದ ಜನತೆ ಇವರಿಬ್ಬರ ಮಾತಿನ ತೀರ್ಮಾನವನ್ನು ಆಶಾ-ಕುತೂಹಲಗಳಿಂದ ನೋಡುತ್ತಿತ್ತು. ಆದರೆ ಯಾವ ಸಂಧಾನದ ಮಾತುಗಳಿಗೂ ತಮ್ಮ ಒಪ್ಪಿಗೆಯನ್ನು ಕೊಡದೆ ಚೌ ಎನ್ ಲಾಯರವರು ಮರಳಿ ಹೊರಟುಬಿಟ್ಟರು.

ಸಂಧಾನಕ್ಕೆ ಚೌ ಎನ್ ಲಾಯರವರು ಏಕೆ ಒಪ್ಪಿಗೆ ಕೊಡಬೇಕು? ಅವರು ಸುಲಿಗಾರರು; ಭಾರತೀಯರು ಸುಲಿಗೆಗೆ ಒಳಗಾದವರು. ಭಾರತದ ಪ್ರದೇಶವನ್ನು ಚೀನೀಯರು— ಅದರಲ್ಲಿಯೂ ಕಮ್ಯುನಿಸ್ಟ್ ಮನೋವೃತ್ತಿಯವರು- ಅಜ್ಞಾತವಾಗಿ ಆಕ್ರಮಿಸಿಕೊಂಡು, ಅಲ್ಲಿ ತಮ್ಮ ಗೂಢಾಚಾರ-ಬೇಡಾರಗಳನ್ನು ಹೂಡಿದು, ಹಾಯಾಗಿ ಕುಳಿತುಕೊಂಡಿದ್ದಾರೆ. ಸಾಮೋಪಾಯಕ್ಕೆ ಅವರು ಒಲಿಯುವವರಾಗಿದ್ದರೆ, ಮೊದಲು ಆಕ್ರಮಣಕ್ಕೇ ಅವರು ಕೈಹಾಕುತ್ತಿರಲಿಲ್ಲ. ಆಕ್ರಮಣ ಬುದ್ಧಿಯಿಂದಲೇ ಭಾರತದ ಪ್ರದೇಶವನ್ನು ವಶಪಡಿಸಿಕೊಂಡಿರುವರೆಂದಮೇಲೆ, ಸಾಮೋಪಾಯದಿಂದ ಅದನ್ನು ಅವರು ಬಿಟ್ಟುಕೊಡುವರೆ? ರಾಜಕೀಯ ಲೋಕದಲ್ಲಿ ಆಕ್ರಮಣ ಮಾಡಿದವನೇ ಬುದ್ಧಿವಂತ; ಆಕ್ರಮಣಕ್ಕೆ ಒಳಗಾದವರು ಎಂತಹ ಬುದ್ಧಿವಂತರಿದ್ದರೂ ಅವರು ಮೂಢರು, ಮೂರ್ಖರು. ಚೀನೀಯರು ಹೊಸ ಪ್ರದೇಶವನ್ನು ಗಳಿಸಿದ್ದಾರೆ; ಭಾರತೀಯರು ಕಳೆದುಕೊಂಡಿದ್ದಾರೆ. ಆದುದರಿಂದಲೇ ಚೌ ಎನ್ ಲಾಯರವರು ಸಂಧಾನಕ್ಕೆಂದು ಬಂದಿದ್ದರೂ, ಒಂದಕ್ಕೂ ಒಪ್ಪಿಗೆ ಕೊಡದೆ ಮರಳಿದರು; ಇಷ್ಟೆ ಅಲ್ಲ, ಅವರು ಎಲ್ಲಿಯೆ ಮಾತನಾಡಲಿ; ಗೆಲವಿನ ಅಹಂಕಾರವನ್ನು ತುಂಬಿಕೊಂಡೇ ಮಾತನಾಡಿದ್ದಾರೆ. ಚೀನಾ—ಭಾರತದ ಗಡಿವಿಚಾರವು ಸಂಧಾನದಿಂದ ಬಗೆಹರಿದರೆ, ಅದೊಂದು ಜಗತ್ತಿನಲ್ಲಿಯ ಅತ್ಯಂತ ಆಶ್ಚರ್ಯಕರವಾದ ಘಟನೆಯೆನಿಸೀತು.

ಮುಂಬಯಿರಾಜ್ಯ ಮಾಯವಾಯಿತು!

ಭಾರತರಾಷ್ಟ್ರದ ಅರ್ವಾಚೀನ ಇತಿಹಾಸದಲ್ಲಿ, ಎಂದಿನಿಂದಲೂ ಮಹತ್ತ್ವದ ವ್ಯಾಂತನೆನಿಸಿಕೊಂಡು ಮೆರೆದ ಮುಂಬಯಿ ರಾಜ್ಯವು ಮಾಯವಾಗಿಬಿಟ್ಟಿತು. ಮೊದಲು ಉತ್ತರಕರ್ನಾಟಕದ ನಾಲ್ಕು ಜಿಲ್ಲೆಗಳು ಆ ರಾಜ್ಯದಿಂದ ಹೊರಬಿದ್ದು ಮೈಸೂರುರಾಜ್ಯದಲ್ಲಿ ಸೇರಿದುವು; ಆದರೆ ಮರಾಠಾವಾಡಾ ಜಿಲ್ಲೆಗಳೂ ವರ್ಹಾಡ-ನಾಗಪುರ ಪ್ರದೇಶದ ಜಿಲ್ಲೆಗಳೂ ಹೊಸತಾಗಿ ಸೇರಿಕೊಂಡು, ಮುಂಬಯಿ ರಾಜ್ಯದ ವೈಶಾಲ್ಯವನ್ನು ಇನ್ನಿಪ್ಪು ಹೆಚ್ಚಿಸಿದುದರಿಂದ, ಈ ನಾಲ್ಕು ಜಿಲ್ಲೆಗಳು ಕಡಿಮೆಯಾದ ಕೊರತೆಯೇನೂ ಆ ರಾಜ್ಯಕ್ಕೆ ಎನಿಸಿಕೊಳ್ಳಲಿಲ್ಲ.

ಕಾಂಗ್ರೆಸ್ಸಿನ ಪ್ರಮುಖ ನಾಯಕರ ಮನಸ್ಸಿನಲ್ಲಿ ಮುಂಬಯಿ ರಾಜ್ಯವನ್ನು ದ್ವಿಭಾಷಿಯದನ್ನಾಗಿಯೇ ಉಳಿಸಿ, ಅದನ್ನೊಂದು ಮಾದರಿಯ ರಾಜ್ಯವನ್ನಾಗಿ ಮಾಡಿ ತೋರಿಸಬೇಕೆಂದು ಇದ್ದಿತೇನೋ! ಅವರ ಅನೇಕ್ಷೆಗೆ ಪರಿಪೋಷಕವೆನಿಸುವಂತಹ ರಾಜಕೀಯ ಪರಂಪರೆ ಮುಂಬಯಿಗೆ ಇದ್ದುದೇನೂ ಸುಳ್ಳಲ್ಲ.

ಆದರೇನು! ಅತಿವಾದಿ ಗಜರಾಥಿಗಳಿಗೂ ಅತಿವಾದಿ ಮರಾಠಿಗರಿಗೂ ಸ್ವತಂತ್ರ ಪ್ರಾಂತಗಳೇ ಬೇಕಾದುವು. ಅದಕ್ಕಾಗಿ ಅವರು ತಮ್ಮ ತಮ್ಮ ರೀತಿಯಲ್ಲಿ ಪ್ರಚಂಡ ಚಳುವಳಿಯನ್ನೇ ನಡೆಸಿದರು. ಕಾಂಗ್ರೆಸ್ಸಿನ ಪ್ರಮುಖ ನಾಯಕರು, ಈ ಚಳವಳಿಗಾರರ ಉಗ್ರತೆಗೆ ಮಣಿಯಬೇಕಾಯಿತು. ಇದರ ಪರಿಣಾಮವೆಂದರೆ ಮಹಾರಾಷ್ಟ್ರ, ಗುಜರಾಥ ರಾಜ್ಯಗಳ ಉದಯ; ಮುಂಬಯಿರಾಜ್ಯದ ವಿಲಯ.

ಮಹತ್ತ್ವದ ಬಂದರಸ್ಥಳ, ಅಂತರರಾಷ್ಟ್ರೀಯ ವ್ಯಾಪಾರ-ವ್ಯವಹಾರ—ಇವುಗಳ ಮೂಲಕ ಮುಂಬಯಿ ನಗರವು ತನ್ನ ಮೊದಲಿನ ಸ್ಥಾನವನ್ನು ಕಾಯ್ದುಕೊಳ್ಳಬಹುದಾದರೂ, ರಾಜಕೀಯ ದೃಷ್ಟಿಯಿಂದ ಅದು ತನ್ನ ಮೊದಲಿನ ಸ್ಥಾನವನ್ನು ಕಳೆದುಕೊಂಡಿತೆಂದೇ ಹೇಳಬಹುದು. ವ್ಯಾಪಾರ-ವ್ಯವಹಾರಗಳ ಮುಂಬಯಿಯನ್ನು ಬೆಳಿಸಿಕೊಂಡು ಬಂದವರು ಗುಜರಾಥಿಗಳು, ಪಾರಸಿಗಳು, ಮಾರವಾಡಿಗರು. ರಾಜಕೀಯದಲ್ಲಿ ಇನ್ನಮುಂದೆ ಅವರ ಸ್ಥಾನ ಅಸ್ಥಿರವಾದುದರಿಂದ, ಮುಂಬಯಿ ವಿಷಯದಲ್ಲಿ ಅವರಿಗೆ ಆತ್ಮೀಯತೆ ಎಷ್ಟೊಂದು ಉಳಿಯುವದೋ ಏನೋ! ಇದರಿಂದ ಮುಂಬಯಿಯ ಮೊದಲಿನ ಅಂತಸ್ತು ಕಡಮೆಯಾಗುತ್ತಲೇ ಹೋಗಬಹುದು!

ಮಹಾರಾಷ್ಟ್ರದ ಒಳವೊಡಕು!

ಸ್ವತಂತ್ರ ಮಹಾರಾಷ್ಟ್ರರಾಜ್ಯ ಸಿದ್ಧನಾಗಿ ನಿಂತಿತಾದರೂ, ನಾಗವರ್ಹಾಡಿಗರ ಒಡಕುಧ್ವನಿಯು ದಿನದಿನಕ್ಕೆ ಹೆಚ್ಚುತ್ತಲೇ ನಡೆದಿದೆ. ಮೊದಲಿನಿಂದಲೂ ಸ್ವತಂತ್ರರಾಗಿ ಆಡಳಿತ ನಡೆಯಿಸಿದ ಅವರಿಗೆ, ಸ್ವತಂತ್ರ ಪ್ರಾಂತವೇ ಬೇಕಾಗಿದೆ. ಭಾಷಾಭಿಮಾನದ ಪಾರದಲ್ಲಿ ತಮ್ಮನ್ನು ಬಿಗಿದುಕೊಳ್ಳಲು ಅವರು ಸಿದ್ಧರಿಲ್ಲ.

ಎಂತಲೇ ಮಹಾರಾಷ್ಟ್ರದ ವಿಕ್ಕಕಡೆಗಳಲ್ಲೆಲ್ಲ ಸ್ವತಂತ್ರ ರಾಜ್ಯೋದಯದ ಉತ್ಸವ ಸಮಾರಂಭಗಳು ನಡೆದರೆ, ನಾಗಪುರದ ಸ್ವತಂತ್ರವಾದಿಗಳು, ನಗರದಲ್ಲೆಲ್ಲ ಕಪ್ಪು ಬಾವುಟಗಳನ್ನು ಹಚ್ಚಿದರು. ಶಿವಜಯಂತಿಯ ಉತ್ಸವದ ಮೆರವಣಿಗೆಯನ್ನು ತಡೆದು ಬಗೆಬಗೆಯಾಗಿ ಗೊಂದಲ ಹಾಕಿದರು. ಮಹಾರಾಷ್ಟ್ರೀಯರಿಂದಲೇ ಮಹಾರಾಷ್ಟ್ರ ವೀರವಿಭೂತಿಯ ಮೆರವಣಿಗೆಗೆ ತಡೆ. ಈ ಸಂಗತಿ ಕರ್ನಾಟಕದ ಗಡಿಯಲ್ಲಿ ಘಟಿಸಿದ್ದರೆ, ಮರಾಠಿಗರ ಒಂದಿದ್ದ ಬಾಯಿ ನೂರಾಗಿ ಅರಚುತ್ತಿದ್ದುವು. ಮಹಾರಾಷ್ಟ್ರದ ಪತ್ರಿಕೆಗಳು ಬಾಯಿಗೆ ಬಂದಂತೆ ಕನ್ನಡಿಗರನ್ನೂ ಸರಕಾರವನ್ನೂ ಬೈಯುತ್ತಿದ್ದುವು. ಆಜ್ಞ ಮರಾಠಿಗರನ್ನು ರೊಚ್ಚಿಗೆಬ್ಬಿಸಲು, ಬೆಳಗಾಂವಿಯ ಮರಾಠೀ ಮುಖಂಡರು, ಶಿವಾಜಿಯ ಅಪಮಾನವೆಂಬ ಮಾತನ್ನು ಒಂದು ದೊಡ್ಡ ಸಾಧನವನ್ನಾಗಿ ಮಾಡಿಕೊಂಡಿದ್ದರು. ಎಂತಲೇ ಶಿವಾಜಿಯ ಪಟಗಳನ್ನು ತಾವೇ ಹರಿದು, ಕನ್ನಡ ಪೋಲೀಸರ ಮೇಲೆ ಆರೋಪ ಹೊರಿಸುತ್ತಿದ್ದರು, ಈಗ ನಾಗಪುರದ ಕಡೆಯವರು ಕಣ್ಣು ಹೊರಳಿಸಲಿ! ಮರಾಠಿಗರೇ ಶಿವಾಜಿಯ ಉತ್ಸವದ ಮೆರವಣಿಗೆಯನ್ನು ತರುಬಿ, ಗೊಂದಲ ಹಾಕಿದ್ದಾರೆ. ಬೆಳಗಾಂವಿಯ ಮರಾಠಿಗರು, ತಮ್ಮ ವೀರವಿಭೂತಿಗಾದ ಅವಮಾನವನ್ನ ಹೇಗೆ ಸಹಿಸಿಕೊಳ್ಳುವರು? ಅಲ್ಲಿಯೂ ಹೊರಡುವರೇನು, ತಮ್ಮ 'ಸತ್ಯಾಗ್ರಹ' ಚಳವಳಿ ನಡೆಯಿಸಲಿಕ್ಕೆ?

ಮಾನ್ಯ ಜತ್ತಿಯವರನ್ನೂ, ಮೈಸೂರು ಸರಕಾರವನ್ನೂ ಬೈದು ಬೈದು ಬರೀ ಬಾಯತಿಂಡಿಯನ್ನು ಕಳೆದುಕೊಳ್ಳುತ್ತಿರುವ ಈ 'ಮರ್ವ್' ರು ನಾಗಪುರದ ದಾರಿಯನ್ನು ಹಿಡಿದು, ಒಡೆಯಲಿರುವ ಮಹಾರಾಷ್ಟ್ರವನ್ನು ಭದ್ರವಾಗಿಸಲಿ!

ಮಾನ್ಯ ಚವ್ಹಾಣ ಮಂತ್ರಿಗಳು ಮರೆಯದಿರಲಿ!

ನಾಗಪುರದ ಮಹಾರಾಷ್ಟ್ರ ವಿರೋಧೀ ಚಳವಳಿಗಾರರ ಮೇಲೆ, ಚವ್ಹಾಣ ಮಂತ್ರಿಗಳ ಪೋಲೀಸರೇ ಲಾಠಿಗಳನ್ನು ಪ್ರಯೋಗಿಸಿದರು; ಅಶ್ರುವಾಯುವನ್ನು ಉಪಯೋಗಿಸಿದರು. ಅದೇಕೆ ಹೀಗೆ ಮಾಡಿದರೋ!

ಶಾಸನನಿರೋಧಿಗಳಾದ ಚಳವಳಿಗಾರರ ಗೊಂದಲವನ್ನು ಅಡಗಿಸಲು ಮೈಸೂರು ರಾಜ್ಯದ ಪೋಲೀಸರು ಹೀಗೆ ಮಾಡಿದಾಗ, ಮಾನ್ಯ ಚವ್ಹಾಣ ಮಂತ್ರಿಗಳು, ಬಾಯಿಗೆ ಬಂದಂತೆ ಮಾತನಾಡಿದ್ದರು, ಮರಾಠೀ ಭಾಷೆಯ ದುರಭಿಮಾನದ ಭೂತ, ಹೊಣೆಗಾರಿಕೆಯ ಕಲ್ಪನೆಯನ್ನು ಮರೆಯಿಸಿ, ಅವರಿಂದ ಹಾಂಬನಂತೆ ಬಡಬಡಿಸಲು ಹಚ್ಚಿತ್ತು. ಈಗ ಮಾನ್ಯ ಚವ್ಹಾಣರು ನಾಗಪುರದ ಪೋಲೀಸರ ಸಂರಕ್ಷಣಕ್ರಮವನ್ನು ಹೇಗೆ ಒಪ್ಪಿಟ್ಟುಕೊಳ್ಳುವರು? ತಾವು ಗಾಜಿನ ಮನೆಯಲ್ಲಿ ನಿಂತು ಇನ್ನೊಬ್ಬರ ಗಚ್ಚುಗಾರೆಯ ಮನೆಯ ಮೇಲೆ ಕಲ್ಲೆಸೆಯುವುದು ಬುದ್ಧಿವಂತಿಕೆಯ ಲಕ್ಷಣವೆ?

ತಮ್ಮ ರಾಜ್ಯದಲ್ಲಿಯೆ— ತಮ್ಮ ಜನರ ಮೇಲೆಯೆ—ಪೋಲೀಸ ಕ್ರಮ ತೆಗೆದುಕೊಳ್ಳಬೇಕಾದ ಸಂದರ್ಭಗಳು ಮಾನ್ಯ ಚವ್ಹಾಣ ಮಂತ್ರಿವರ್ಯರಿಗೆ ಮತ್ತೆ ಮತ್ತೆ ಒದಗಬಹುದು; ಆಗ ಅವರು, ಮೈಸೂರು ಸರಕಾರದ ಪೋಲೀಸ್ ಅಧಿಕಾರಿಗಳನ್ನು ಕುರಿತು ಆಡಿದ ವೀರವಾಗಳನ್ನ ಮತ್ತೆ ಮತ್ತೆ ನೆನಪು ಮಾಡಿಕೊಳ್ಳುತ್ತಿರಲಿ!

ಜಯಂತಿ ಮಾಸಪತ್ರಿಕೆಗೆ

ಚಂದಾದಾರರಾಗಿರಿ

ತಿಮ್ಮುಡು ಕೈ ಹಿಡಿದ ಹುಡುಗಿ!

[ಒಂದು ಸಣ್ಣ ಕತೆ]

"ಭಾರತೀಸುತ" ವೀರರಾಜಪೇಟೆ

ಇದೊಂದು ಕೊಡಗಿನ ಜನಜೀವನದ ಚಿತ್ರ. ಕಾಡನ್ನೇ ಬೀಡನ್ನಾಗಿ ಮಾಡಿಕೊಂಡ ಕೊಡಗು ವೀರನೊಬ್ಬನ ಸಾಹಸದ ಕಥನ ಇದರ ಜೀವಾಳ. ತಿಮ್ಮುಡು ಕೈಹಿಡಿದ ಹುಡುಗಿ, ಆತನ ಸಾಹಸಜೀವನ ಚಿತ್ರಣದಲ್ಲಿ ಸಹಾಯಳಾಗಿ ಮೂಡಿ ಬಂದಿರುವಳಷ್ಟೆ!

ದನಗಳು ನಡೆಯುವ ದಾರಿ ಕಾಡನ್ನು ಸೀಳಿ ಗುಡ್ಡವನ್ನು ಇಳಿದು ಬರುತ್ತಿತ್ತು. ದಾರಿಯುದ್ದಕ್ಕೂ ಸಮೆದ ಪಚ್ಚೆ ತೋರಣಗಳಂತುಳ್ಳ ಲಂತಾನ ಬಲೆಗಳ ಅಡಿಯಲ್ಲಿ ಬೆನ್ನನ್ನು ಬಾಗಿಸಿ, ನುಸುಳಿ ನುಸುಳಿ, ತಿಮ್ಮುಡುವಿನ ಬೆಸ್ನ ನೋಯತೊಡಗಿತ್ತು. ಅವನು ಎಡಗೈಯಲ್ಲಿ ಕೋವಿಯನ್ನು ಹಿಡಿದಿದ್ದ. ತೋಳಿಗೊಂದು ಸಂಚಿಯನ್ನು ಸೆಕ್ಕಿಸಿಕೊಂಡಿದ್ದ. ಅವನು ಕಾಕೆ ಜೆಲ್ಲಣವೊಂದನ್ನು ಹಾಕಿ, ಅದೇ ಬಣ್ಣದ ತುಂಡುಗೈ ಜುಬ್ಬವನ್ನು ತೊಟ್ಟುಕೊಂಡಿದ್ದ. ತಲೆಯ ಮೇಲೊಂದು ಹ್ಯಾಟು ಇತ್ತು. ಅವನು ಕಾಲುಗಳಿಗೆ ಶೂಗಳನ್ನು ಸೆಕ್ಕಿಸಿಕೊಂಡಿದ್ದ. ಅವನು ಎಡಗೈಯ ಬೆರಳುಗಳ ತುದಿಯಿಂದ ತನ್ನ ಕುಡಿಮೀಸೆಯನ್ನು ಹುರಿಗೊಳಿಸುತ್ತಾ ಮುಂದೆ ಸಾಗುತ್ತಿದ್ದ.

ತಿಮ್ಮುಡುವಿನ ಪ್ರಾಯ ಮೂವತ್ತೈದರ ಮನೆಯನ್ನು ದಾಟಿರಲಿಲ್ಲ. ನಸು ಉದ್ದವಾದ ಕೋಲುಮುಖ ಆತನದು. ಅವನ ತೋಳುಗಳು ಉದ್ದವಾಗಿದ್ದುವು ಧೃಷ್ಟಪುಷ್ಟವಾದ ಮೈ ಆತನದು. ತುಂಡುಗೈ ಶರ್ಟಿನಿಂದ ಹೊರಚಾಚಿದ ತೋಳುಗಳು–ದುಂಡಗೆ–ನೆಲ್ಲು ಮಿದಿಯುವ ಒನಕೆಗಳಂತೆ ಇದ್ದುವು.

ತಿಮ್ಮುಡುವನ್ನು ಹಿಂಬಾಲಿಸಿಕೊಂಡು ಜೂಬಿ ಬರುತ್ತಿತ್ತು. ಜೂಬಿ ತಿಮ್ಮುಡುವಿನ ಪ್ರೀತಿಯ ನಾಯಿ. ಲಂತಾನ ಪೊದೆಗಳ ಎಡೆಯಿಂದ ತೂರಿಬಂದ ಬೆಳಕಿನ ಕುಂಚ, ಕಪ್ಪು ಬಳುಪು ಬೆರೆತ ನಾಯಿಯ ಮೈಮೇಲೆ ಬಿಸಿಲ ಹೂಗಳನ್ನು ಬಳಿಯುತ್ತಿತ್ತು. ಜೂಬಿಯ ಅರೆ ಬೆರೆದ ಬಾಯಲ್ಲಿ ಮೊನಚಾದ ಬಿಳಿಯ ಹಲ್ಲುಗಳು ಕೋಲುಮಲ್ಲಿಗೆಯ ಮೊಗ್ಗುಗಳಂತೆ ತೋರುತ್ತಿದ್ದುವು.

ತಿಮ್ಮುಡುವಿನ ಹೆಜ್ಜೆಗಳ ಸದ್ದು, ಲಂತಾನ ಹೂವಿನ ಮಕರಂದವನ್ನು ಹೀರಲು ಆ ಕುಸುಮದ ಮೇಲೆ ಕುಳಿತಿದ್ದ ಪತಂಗಕ್ಕೆ ಕೇಳಿಸಿತು. ಅದು ಭೀತಿಗೊಂಡು ಮಧುಪಾನವನ್ನು ನಿಲ್ಲಿಸಿ, ತನ್ನ ಬಣ್ಣದ ರೆಕ್ಕೆಗಳನ್ನು ಅಗಲಿಸಿ ಹಾರಿತು. ಪತಂಗದ ಹಳದಿ ಕೆಂಪು ರೆಕ್ಕೆಗಳು ಜೂಬಿಯ ದೃಷ್ಟಿಯನ್ನು ಸೆಳೆದುವು. ನಾಯಿ ಆ ಬಣ್ಣದ ಪತಂಗವನ್ನು ಹಿಡಿಯಲೆಂದು ನೆಗೆದು ಹಿಂಬಾಲಿಸಿತು. ನಾಯ ನಾಲಗೆಗೆ ಸೋಂಕಿದ ಚಿಟ್ಟೆ ನುಣ್ಣನೆ ಜಾರಿ, ನಾಯಿಯ ಬಾಯಿಂದ ತಪ್ಪಿಕೊಂಡು, ಲಂತಾನ ಪೊದೆಯ ಎಡೆಯಲ್ಲಿ ನುಸುಳಿ ಹಾರಿಹೋಯಿತು.

ಪತಂಗ ನಾಯ ಬಾಯಿಂದ ಪಾರಾದುದನ್ನು ತಿಮ್ಮುಡು ನೋಡಿದ. ಅವನ ಮನಸ್ಸಿನಲ್ಲಿ ಆಲೋಚನೆಯೊಂದು ಸುಳಿಯಿತು. ಅವನು "ನಾಯ ದವಡೆಯಿಂದ ಚಿಟ್ಟೆ ಪಾರಾಗಿ ಹೋದಂತೆ, ಸುಃನಸ್ಸ ಕೈಬೆರಳುಗಳ ಎಡೆಯಿಂದ ನುಸುಳಿ ತಪ್ಪಿಸಿಕೊಳ್ಳುತ್ತಿದೆ" ಎಂದ ತನ್ನಲ್ಲಿಯೇ ಹೇಳಿಕೊಂಡ.

ಈಗ ತಿಮ್ಮುಡು ಗುಡ್ಡವನ್ನಿಳಿದು ಹೊಳೆಯ ದಂಡೆಗೆ ಬಂದ ಆ ಕೆರುಹೊಳೆ ಗುಡ್ಡವನ್ನು ಕೊರೆಕೊರೆದು ಬಳುಕಿ ಬಾಗುತ್ತಾ ಮುಂದೆ ಸಾಗುತಿತ್ತು. ಇಕ್ಕಡೆಗಳಲ್ಲಿ ಬೆಳೆದ ಮರಗಳು ಹೊಳೆ ಬಿಸಿಲ ಬಾಧೆ ತಟ್ಟಬಾರದೆಂದು ಕೊಂಬೆಗಳನ್ನು ಚಾಚಿ ದಟ್ಟವಾದ ನೆರಳನ್ನು ಹರಡಿದ್ದುವು. ಕೊಂಬೆಗಳ ಹಸಿರೆಲೆಗಳು ತೊರೆಯ ನೀರಿಗೆ ಹಸಿರು ಬಣ್ಣವನ್ನು ಹೆಚ್ಚಿದುದರಿಂದ, ಆ ಕೆಡುಹೊಳೆ ಗುಡ್ಡದ ಸೊಂಟಕ್ಕೆ ಬಿಗಿದ ಹಸಿರು ನೂಲಿನ ಉಡಿದಾರದಂತೆ ತೋರುತ್ತಿದ್ದಿತು.

ತಿಮ್ಮುಡು ಕೈ ಎತ್ತಿ ಮುಂಗೈ ಗಡಿಯಾರವನ್ನು ನೋಡಿದ. ಆಗಲೇ ಹನ್ನೆರಡು ತಾಸು ಆಗಿತ್ತು. ಬೆಳಗಿನಿಂದ ಕೈಯಲ್ಲಿ ಕೋವಿ ಹಿಡಿದು ಅಲೆದಾಡಿದುದರಿಂದ ಅವನು ದಣಿದಿದ್ದ. ಹೊಟ್ಟೆ ಬೇರೆ ಹಸಿದು ತಾಳ ಹಾಕತೊಡಗಿತ್ತು. ಈ ಅಲೆದಾಟದಲ್ಲಿ ಅವನಿಗೆ ದೊರೆತ ಬೇಟೆಯಾದರೂ ಏನು? ಒಂದು ನೊಲ ಮತ್ತು ಎರಡು ಕೊಕ್ಕರೆಗಳು ಮಾತ್ರ. ಕಾಡುಹಂದಿಯನ್ನೋ, ಜಿಂಕೆಯನ್ನೋ ಹೊಡೆಯಬೇಕೆಂದು ಆಸೆ ಕಟ್ಟಿಕೊಂಡು ಅವನು ಮುಂಜಾನೆ ಮನೆಯಿಂದ ಹೊರಟಿದ್ದ. ಅವನು ಅಡವಿಯಲ್ಲೆಲ್ಲಾ ಸುತ್ತಾಡಿ ಅಯಾಸಗೊಂಡರೂ ಒಂದೇ ಒಂದು ಹಂದಿಯಾಗಲಿ, ಜಿಂಕೆಯಾಗಲೀ ಅವನ ಕಣ್ಣಿಗೆ ಬೀಳಲಿಲ್ಲ. ಈಗ ತಿಂಡಿಯನ್ನು ತಿಂದು ತುಸ ವಿಶ್ರಮಿಸಿ ದಣಿವಾರಿಸಿಕೊಂಡ ಮೇಲೆ, ಅಡವಿಯಲ್ಲಿ ತನ್ನ ಅದೃಷ್ಟವನ್ನು ಪರೀಕ್ಷಿಸುವೆನೆಂದು ಅವನು ತನ್ನಲ್ಲಿಯೇ ಹೇಳಿಕೊಂಡ.

ತಿಮ್ಮುಡು ಹೆಗಲಮೇಲಿನ ಸಂಚಿ ಮತ್ತು ಕೈಯ ಕೋವಿಗಳನ್ನು ನೆಲದ ಮೇಲಿರಿಸಿ, ಹೊಳೆಗಿಳಿದು ಕೈಕಾಲು ಮೋರೆಗಳನ್ನು

ತೊಳೆದುಕೊಂಡ. ಅವನಿಗೆ ನೀರಡಿಕೆಯಾಗಿತ್ತು. ಬೊಗಸೆಯಿಂದ ನೀರೆತ್ತಿ ಕುಡಿದು ಆಸರನ್ನು ನಿವಾರಿಸಿದ. ಜೂಬಿಯೂ ನೀರಡಿಸಿತ್ತು. ಅದು ಹೊಳೆಯ ನೀರಲ್ಲಿ ಎರಡು ಕಾಲುಗಳನ್ನೂರಿ ನೀರನ್ನು ನೆಕ್ಕಿ ಕುಡಿಯತೊಡಗಿತು.

ತಿಮ್ಮುಡುವಿಗೆ ಬೇಟೆಯ ಗೀಳು ಬಹು ಹಿಂದಿನಿಂದಲೇ ಹಿಡಿದಿತ್ತು. ಕೈಯಲ್ಲಿ ಕೋವಿಯನ್ನು ಹಿಡಿದುಕೊಂಡು ಕಾಡಿನಲ್ಲಿ ಅಲೆದಾಡಿ, ಕನಿಷ್ಠ ಪಕ್ಷ ಒಂದು ಮೊಲವನ್ನಾದರೂ ಕೊಂದು ತರದಿದ್ದರೆ ಅವನ ಕಣ್ಣುಗಳಿಗೆ ಇರುಳು ನಿದ್ದೆ ಬರದು. ಹಿಂದೆ ವಾರಕ್ಕೊಮ್ಮೆಯಾದರೂ ನಾಲ್ವರು ಗೆಳೆಯರನ್ನು ಕಲೆ ಹಾಕಿ ಅಡವಿಯಲ್ಲಿ ಕಾಡು ಹಂದಿ ಮತ್ತು ಜಿಂಕೆಗಳನ್ನು ಬೇಟೆಯಾಡುತ್ತಿದ್ದ. ನಾಲ್ಕು ವರುಷಗಳ ಹಿಂದೆ ಅವನು ದೊಡ್ಡ ಹುಲಿಯನ್ನು ಹೊಡೆದಿದ್ದ. ಅವನ ಕಣ್ಣುಗಳು ಬಹು ಚುರುಕು; ಅವನು ಇಟ್ಟ ಈಡು ಎಂದೂ ತಪ್ಪುತ್ತಿರಲಿಲ್ಲ. ಆ ದಿನಗಳಲ್ಲಿ ಕುಟ್ಟಯ್ಯ, ಬೊಳ್ಳಿಕಟ್ಟೆ, ರಾಜು, ಡಾಲ ಇವರೆಲ್ಲ ತಿಮ್ಮುಡುವಿನ ಬೇಟೆಯಲ್ಲಿ ಭಾಗವಹಿಸುವ ಆಪ್ತರಾಗಿದ್ದರು.

ತಿಮ್ಮುಡುವಿಗೆ ಹೇಳಿಕೊಳ್ಳುವಂತಹ ಆಸ್ತಿಪಾಸ್ತಿಗಳೇನೂ ಇರಲಿಲ್ಲ. ಪಿತ್ರಾರ್ಜಿತವಾದ ಐವತ್ತು ಬಟ್ಟೆ ಗದ್ದೆ ಮಾತ್ರ ಇತ್ತು. ಅವನು ಎಳವೆಯಲ್ಲಿಯೇ ತಾಯಿ-ತಂದೆಗಳನ್ನು ಕಳೆದುಕೊಂಡಿದ್ದ. ಸೋದರಮಾವ ಅವನನ್ನು ಮಡಿಕೇರಿಯಲ್ಲಿ ಸ್ಕೂಲ್ ಫೈನಲ್ ತನಕ ಓದಿಸಿದ. ಅವನು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮೂರುಸಲ ಗೋತಾ ಹೊಡೆದುದರಿಂದ, ಪರೀಕ್ಷೆಯಲ್ಲಿ ಪಾಸಾಗಿ ಕಾಲೇಜಿನಲ್ಲಿ ಓದುವ ಹಂಬಲವನ್ನು ತೊರೆದು ಹಳ್ಳಿಯನ್ನು ಸೇರಿದ. ತಂದೆ ತನ್ನ ಪಾಲಿಗೆ ಬಿಟ್ಟುಹೋದ ಐವತ್ತು ಬಿಟ್ಟು ಭೂಮಿಯನ್ನು ಬೇಸಾಯ ಮಾಡುತ್ತಾ, ಮೃಗಗಳನ್ನು ಬೇಟೆಯಾಡುವುದರಲ್ಲಿ ದಿನದೂಡಿದ. ಜತೆಯಲ್ಲಿಯೇ ಸೌಕರಿ ಬೇಟೆಯನ್ನೂ ಕೈಕೊಂಡ.

ಯುದ್ಧ ಬಂತು. ತಿಮ್ಮುಡು ದಂಡಿಗೆ ಸೇರಿದ. ಮೊದಲು ಸಾಮಾನ್ಯ ಸೈನಿಕನಾಗಿ ಸೇರಿದರೂ ಅವನು ತನ್ನ ದಕ್ಷತೆ ಮತ್ತು ಸಾಮರ್ಥ್ಯಗಳಿಂದ ಜಮೇದಾರನ ಸ್ಥಾನಕ್ಕೆ ಏರಿದ. ಯುದ್ಧ ಮುಗಿದಾಗ ಅವನು ದಂಡನ್ನು ಬಿಟ್ಟು ಮರಳಿ ಬರಬೇಕಾಗಿ ಬಂತು. ಈ ನಾಲ್ಕೈದು ವರುಷಗಳ ಅವಧಿಯಲ್ಲಿ ಅವನು ಆರೇಳು ಸಾವಿರ ರೂಪಾಯಿ ಗಳಿಸಿದ್ದ. ಅವನ ಗೈದ ಸೇವೆಗೆ ಪಾರಿತೋಷಕವಾಗಿ ಸರಕಾರ ತಿಮ್ಮುಡುವಿಗೆ ಇಪ್ಪತ್ತು ಎಕರೆ ಕಾಡನ್ನು ಕೊಟ್ಟಿತು. ತಿಮ್ಮುಡು ಕಾಡಿನ ಪಕ್ಕದಲ್ಲಿದ್ದ ನೂರು ಬಟ್ಟ ಗದ್ದೆಯನ್ನು ಮೂರು ಸಾವಿರ ರೂಪಾಯಿ ಕೊಟ್ಟು ಕೊಂಡ. ಅವನು ಗದ್ದೆ ಬೇಸಾಯ ಮಾಡಿದ; ಹತ್ತು ಎಕರೆ ಕಾಡು ಕಡಿಸಿ ಕಾಫಿಗಿಡಗಳನ್ನು ಹಾಕಿಸಿದ. ಅವನು ನೆಟ್ಟ ಕಾಫಿಗಿಡಗಳು ಮುದ್ದುಮುದ್ದಾಗಿ ಬೆಳೆದುವು. ಇನ್ನೆರಡು ವರ್ಷಗಳು ಕಳೆದರೆ ಅವನ ಕಾಫಿ ತೋಟ ಆರೇಳು ಖಂಡಿ ಕಾಫಿಯನ್ನು ಕೊಡಬಲ್ಲುದು.

ತಿಮ್ಮುಡು ದಂಡಿನಿಂದ ಮರಳಿ ಬಂದು ಹೊಸಮನೆ ಹೂಡಿ ಮೇಲೆ, ಅವನಲ್ಲಿಗೆ ಒಮ್ಮೊಮ್ಮೆ ಹಳೆಯ ಗೆಳೆಯರಾದ ಕುಟ್ಟಯ್ಯ ಡಾಲ, ಬೊಳ್ಳಿಕಟ್ಟೆ, ರಾಜು ಬರುತ್ತಿದ್ದರು. ಮನೆಗೆ ಬಂದ ಗೆಳೆರನ್ನು ತಿಮ್ಮುಡು ನಾಲ್ಕು ದಿನ ನಿಲ್ಲಿಸಿಕೊಳ್ಳುತ್ತಿದ್ದ. ಅವರನ್ನ ಬೇಟೆಯಾಡಲು ಅಡವಿಗೆ ಕರೆದುಕೊಂಡು ಹೊಗುತ್ತಿದ್ದ; ಕಾಡ ಹಂದಿಯನ್ನೋ, ಜಿಂಕೆಯನ್ನೋ, ಹೊಡೆದು ಗೆಳೆಯರಿಗೆ ಪುಷ್ಕ ವಾದ ಮಾಂಸಭೋಜನವನ್ನು ಒದಗಿಸುತ್ತಿದ್ದ.

"ಅಲ್ಲ ತಿಮ್ಮುಡು, ನಿನಗೆ ಬೇಟೆಯ ಗೀಳು ಬಹಳ." ಯನ ಬೇಟೆಯ ಹುಚ್ಚನ್ನು ಕಂಡು ರಾಜು ಕೇಳುತ್ತಿದ್ದ. "ನೀ ದಂಡಿನಲ್ಲಿದ್ದಾಗ ಬೇಟೆಯಾಡದೆ ನಾಲ್ಕುವರ್ಷ ಹೇಗೆ ಕಳೆದೆ!"

"ಇಲ್ಲಿ ನಾಲ್ಕುಕಾಲಿನ ಹಂದಿಗಳನ್ನು ಹೊಡೆಯುತ್ತಿದ್ದೆ ತಿಮ್ಮುಡು ಉತ್ತರಿಸಿದ: "ಅಲ್ಲಿ ಎರಡು ಕಾಲಿನ ಹಂದಿಗಳನ್ನ ಹೊಡೆದುರುಳಿಸುತ್ತಿದ್ದೆ!"

"ತಿಮ್ಮುಡು ಮೃಗಬೇಟೆಯನ್ನಾಡಿದ; ನರಬೇಟೆಯನ್ನಾ ಡಿದ." ನಗು ತುಂಬಿದ ಸ್ವರದಲ್ಲಿ ಬೊಳ್ಳಿಕಟ್ಟೆ ಉಸುರಿದ: "ಇನ್ ಒಂದು ಬೇಟೆ ಮಾತ್ರ ಬಾಕಿ ಉಳಿದಿದೆ!"

"ಯಾವ ಬೇಟೆಯದು?" ಉತ್ಸುಕತೆಯಿಂದ ಕುಟ್ಟಯ್ಯ ಕೇಳಿದ.

"ಹೆಣ್ಣುಬೇಟೆ!"

"ತಿಮ್ಮುಡುವಿಗೆ ಬೇರೆ ಯಾರು ಹೆಣ್ಣು ಕೊಡುತ್ತಾರೆ" ಬೊಳ್ಳಿಕಟ್ಟೆ ಅಣಕವ ಸ್ವರದಲ್ಲಿ ನುಡಿದ: "ಆತನ ಕೂದಲು ನರೆ ಹಣ್ಣಾಗತೊಡಗಿದೆ; ಸಾಲದುದಕ್ಕೆ ಬೇರೊಬ್ಬ ಹೆಂಡತಿ ಇದ್ದಾಳೆ!"

"ಬೇರೊಬ್ಬ ಹೆಂಡತಿ!" ತಿಮ್ಮುಡು ವಿಸ್ಮಯದ ಕಣ್ಣಾ ನೆರೆದ ಕಣ್ಣುಗಳಿಂದ ಗೆಳೆಯನ ಮೋರೆಯನ್ನು ನೋಡಿದ.

"ಹೌದು, ಯಾವಾಗಲೂ ಕೈಯನ್ನು ಬಿಟ್ಟು ಕದಲದಿರೋ ಕೋವಿಯೇ ಮೊದಲನೆಯ ಹೆಂಡತಿ!"

ತಿಮ್ಮುಡು ತೊರೆಯ ತಿಳಿನೀರಲ್ಲಿ ತೋರಿದ ತನ್ನ ಪಡಿನೆಳಲ ನೋಡಿದ. ಅವನ ತಲೆಯ ಕಪ್ಪು ಕೂದಲಿನ ಎಡೆಯಲ್ಲಿ ಅಲ್ಲೊಂ ಇಲ್ಲೊಂದು ನೆರೆತ ಕೂದಲುಗಳು ಗೋಚರಿಸಿದುವು. ತನ್ನ ಕೂದ ಹಣ್ಣಾಗ ತೊಡಗಿದೆ; ತನ್ನ ವಾಯ ಮೂವತ್ತೈದರ ಮನೆಯ ಡಾಟದೆ-ಎಂಬುದು ಅವನಿಗೆ ಹೊಳವಾಯಿತು. ಈಗ ಎರಡು ತಿಂ ಹಿಂದೆ ಬೊಳ್ಳಿ ಕಟ್ಟೆ ಆಡಿದ ಮಾತು ನೆನಪಿಗೆ ಬಂದಿತು. ಅ ಎಸೆಯಿಂದ ನಿಡುಸುಯ್ದೊಂದು ಹೊರಸೂಸಿತು.

ಅವನು ಹೊಳೆಯ ದಡದಲ್ಲಿ ಬೆಳೆದು ನಿಂತ ಗೋಳವ ನೆರಳನ್ನು ಸೇರಿದ. ಜೂಬಿಯು ಯಜಮಾನನನ್ನು ಹಿಂಬಾಲಿಸಿ ಅವನು ಸಂಚಿಯೊಳಗಿಂದ ಅಡುಗೆಯವನು ಕಟ್ಟಿಕೊಟ್ಟ ಒ ಯನ್ನು ಹೊರತೆಗೆದು ಬಿಚ್ಚಿದ. ಆ ಬುತ್ತಿಯಲ್ಲಿ ಅರೆಂಟು ಚ

ಮತ್ತು ಕೋಳಿಯ ಪಲ್ಯಗಳಿದ್ದುವು. ಅವನು ಎರಡು ಚಪಾತಿ ಮತ್ತು ಒಂದು ಹಿಡಿ ಪಲ್ಯ ತೆಗೆದು ಜೂಬಿಗೆ ಹಾಕಿದ. ಹಸಿದ ನಾಯಿ ದೊರೆತ ಉಣಿಸನ್ನು ಗಬಗಬನೆ ಮುಕ್ಕತೊಡಗಿತು.

ತಿಮ್ಮುಡು ಚಪಾತಿ ಮುರಿದು ಪಲ್ಯ ಬೆರಸಿ ಬಾಯೊಳಗೆ ಹಾಕಿಕೊಂಡ. ಆದರೆ ಆ ತಿನಿಸು ಅವನ ನಾಲಗೆಗೆ ಸವಿದೋರಲಿಲ್ಲ. ಅಡುಗೆಯ ಚಂದು ಚಪಾತಿ ಮತ್ತು ಕೋಳಿಕರಿಗಳನ್ನು ಸೊಗಸಾಗಿಯೇ ತಯಾರಿಸಿದ್ದ; ಆದರೂ ಆ ಅಡುಗೆಯಲ್ಲಿ ಏನೋ ಕೊರತೆ ಇದ್ದಂತೆ ಅವನಿಗೆ ತೋರಿತು. 'ಈ ತಿನಿಸನ್ನು ತನಗೊಲಿದು ಬಂದ ಹೆಣ್ಣಿನ ಕೈ ತಯಾರಿಸಿದ್ದರೆ!' ಎಂಬ ಆಲೋಚನೆ ಅವನ ಚಿತ್ತದಲ್ಲಿ ಸುಳಿಯಿತು. ಆಗ ಅದು ಕೊರಕಲು ರೊಟ್ಟಿಯಾಗಿದ್ದರೂ ಏಸೊಂದು ಸವಿಯಾಗಿರುತ್ತಿತ್ತು! ನನ್ನ ಬಾಳು ಒಲುಮೆಯ ಚಿಲುಮೆ ಸೋಂಕದ ಬರಡು ಬಾಳು! ಹೆಣ್ಣುಕೊರಳಿನ ಇನಿನುಡಿಗಳು ತನ್ನ ಕಿವಿಗಳಿಗೆ ಬೀಳವು; ಬಳೆಗಳ ಕಣಕಣ ನಿನಾದ ತನ್ನನ್ನು ಕರೆಯದು; ಮೆದುಮೈಯ ಸೋಂಕು ತನ್ನನ್ನು ಪುಳಕಗಳ ಮಡುವಿನಲ್ಲಿ ಅದ್ದದು; ಹೂಗಳ ಕಂಪು ತನ್ನ ಮನೆಯನ್ನು ತುಂಬದು; ಬಣ್ಣ ಬಣ್ಣದ ಸೀರೆಗಳ ಅಂದ ತನ್ನ ಕಣ್ಣುಗಳನ್ನು ನಲಿಸುವಂತಿಲ್ಲ! ತನ್ನ ಒಂಟಿತನದ ಬಾಳ್ವೆಯಿಂದ ಯಾವ ಸುಖವನ್ನು ಸಾಧಿಸಿದ ಹಾಗಾಯಿತು!

ಈ ಆಲೋಚನೆಯ ಅಲೆಗಳು ತಿಮ್ಮುಡುವಿನ ಚಿಕ್ಕನುದ್ದುದಲ್ಲಿ ಎದ್ದುವು. ಅವನ ಎದೆ ಭಾರವಾಯಿತು. ಬರಡು ತುಂಬಿದ ಒಂಟಿ ಬಾಳು ಇನ್ನು ತನಗೆ ಸಲ್ಲದು; ಅದಷ್ಟು ಬೇಗ ಮಂಗಲವಾಗಿ (ಮದುವೆಯಾಗಿ) ಹೆಣ್ಣೊಂದನ್ನು ತಂದು ಮನೆ ತುಂಬಬೇಕು-ಎಂದು ಅವನು ತನ್ನಲ್ಲಿಯೇ ಹೇಳಿಕೊಂಡ.

ಬುತ್ತಿಯಲ್ಲಿ ಇನ್ನೂ ಎರಡು ಚಪಾತಿಗಳು ಉಳಿದಿದ್ದುವು. ಆದರೆ ಅವನ್ನು ತಿಂದು ಮುಗಿಸಬೇಕೆಂದು ತಿಮ್ಮುಡುವಿಗೆ ಅನಿಸಲಿಲ್ಲ. ಅವನು ಅವುಗಳನ್ನೆತ್ತಿ ಜೂಬಿಯ ಮುಂದೆ ಎಸೆದು ಬಿಟ್ಟ. ನಾಯಿ ಸಂತೋಷ ತುಂಬಿದ ಕಣ್ಣುಗಳಿಂದ ಧನಿಯನ್ನು ನೋಡಿತು; ಆತ ಚೆಲ್ಲಿಕೊಟ್ಟ ಚಪಾತಿಗಳನ್ನು ಮೆಲ್ಲತೊಡಗಿತು.

ತಿಮ್ಮುಡು ಹೊಳಿಗಿಳಿದು ಕೈ ಬಾಯಿಗಳನ್ನು ತೊಳೆದುಕೊಂಡ. ಅವನು ಸಂಚಿಯನ್ನೇ ದಿಂಬಾಗಿ ತಲೆಯಡಿಗೆ ಇರಿಸಿಕೊಂಡು ಗೋಳಿಮರದ ನೆರಳಿನಲ್ಲಿ ಮೈ ಚಾಚಿದ. ಅಡವಿಯ ಮರಗಿಡಗಳನ್ನು ತೀಡಿ ಬಂದ ತಂಗಾಳಿ ಅವನ ಮೈ ಕೈಗಳನ್ನು ತಡವಿತು. ಅವನು ಮರದ ಕೊಂಬೆಗಳಲ್ಲಿ ತೂಗುತ್ತಿದ್ದ ಹಸಿರು ಕಾಯಿಗಳ ಜೊಂಪೆಯನ್ನು ನೋಡಿದ. ಆತನು "ಹೌದು. ಈ ವರುಷ ಮಳೆಗಾಲ ತೊಡಗುವ ಮುನ್ನ ಹೆಣ್ಣೊಂದನ್ನು ಮಂಗಲಗೈದು ಮನೆಗೆ ಕರೆತರಬೇಕು." ಎಂದು ತನ್ನಲ್ಲಿಯೇ ಹೇಳಿಕೊಂಡ.

ಆದರೆ ಯಾವ ಹೆಣ್ಣನ್ನು ಮದುವೆಯಾಗುವುದು? ಅಮ್ಮುತ್ತಿಯಲ್ಲಿ ಕಾಣಸಿಕ್ಕಿದ ದೇಚು; ಆದರೆ ಅವಳು ಸೆಣಕಲು ಮೈಯ ಬೆಳ್ಳಗಿನ ಹುಡುಗಿ; ಅವಳ ಉಬ್ಬುಹಲ್ಲುಗಳು ತುಟಿ ಮೀರಿ ಹೋಗಿ ಬಂದಿವೆ. ವೀರರಾಜ ಪೇಟೆಯಲ್ಲಿ ನೋಡಿದ ಮಾಚು; ಆದರೆ ಅವಳು ಬಣ್ಣದ ಬೊಂಬೆ. ಅವಳಿಗೆ ಬೇಕಾದ ಪೌಡರು, ಪಫ್, ಸೆಂಟು, ಕ್ರೀಮು, ನೈಯ್‌ಲೋನ್, ಸೇಟಿನ್, ಜಾರ್ಜೆಟ್ಟುಗಳನ್ನು ಕೊಂಡು ತಂದು ಒದಗಿಸುವುದರಲ್ಲಿ ತನ್ನ ಗಳಿಕೆ ಎಲ್ಲ ಕರಗಿ ನೀರಾಗಿ ಹೋದೀತು! ಇನ್ನು ನೆರೆಮನೆಯ ಚೆಂಗಪ್ಪನ ಮಗಳು ಚೋಂದು. ಮೈ ಕೈಗಳಲ್ಲಿ ರಕ್ತ ಮಾಂಸ ತುಂಬಿ ಅವಳು ಕಡೆದಿರಿಸಿದ ಗೊಂಬೆಯಂತಿದ್ದಳು. ಆಕೆಯ ಕೈಕಾಲುಗಳು ಬಲು ಚುರುಕು; ಆಕೆಯ ಕಣ್ಣುಗಳ ಹೊಳಪು ಮಿಂಚಿಗಿಂತ ಮಿಗಿಲು; ಆದರೆ ಆ ಕಾಡಿಗೆ ಬಣ್ಣದ ಹುಡುಗಿಯನ್ನು ತಾನು ಮದುವೆಯಾಗುವುದೇ?

ಹಿಂದೆ ಚೆಂಗಪ್ಪ ತಿಮ್ಮುಡುವನ್ನು ನಾಲ್ಕಾರು ಸಲ ಊಟ-ಔತಣಗಳಿಗೆ ಆಹ್ವಾನಿಸಿದ್ದ. ನೆರೆಯವನ ಕರೆಯನ್ನು ಒಲ್ಲೆನೆಂದು ಅಲ್ಲಗಳೆಯಲಾರದೆ ತಿಮ್ಮುಡು ಆತನಲ್ಲಿಗೆ ಹೋಗಿದ್ದ. ಚೆಂಗಣ್ಣನ ಔತಣದೂಟಗಳನ್ನು ಮೆದ್ದು ಸವಿದಿದ್ದ. ಚೆಂಗಣ್ಣ ಆಗಾಗ ತಿಮ್ಮುಡುವನ್ನು ಮನೆಗೆ ಕರೆಯುವುದನ್ನು ಕಂಡು ಗೆಳೆಯ ಬಿದ್ದಪ್ಪ "ತಿಮ್ಮುಡು, ನೋಡು, ಆ ಚೆಂಗು ಮಾವ ಕಾಡಿಗೆ ಬಣ್ಣದ ಮಗಳನ್ನ ನಿನ್ನ ಕೊರಳಿಗೆ ಕಟ್ಟಬೇಕೂಂತ ಈ ಔತಣ ಉಪಚಾರಗಳ ಬಲೇನ ಹೆಣೆದಿದ್ದಾನೆ. ಜೋಕೆ!" ಎಂದು ಹೇಳಿ, ಗೆಳೆಯನನ್ನು ಎಚ್ಚರಿಸಿದ್ದ.

"ನೋಡು, ಬಿದ್ದು, ನಾನು ಚೆಂಗುಮಾವನ ಮಗಳನ್ನು ಮದುವೆಯಾಗುವುದರ ಬದಲು ಸಿಂಗಳೀಕನ ಕೊರಳಿಗೆ ತಾಳಿ ಕಟ್ಟಿಯೇನು!" ತಿಮ್ಮುಡು ನಗುತ್ತಾ ಅಂದು ಮಾರ್ನುಡಿದಿದ್ದ.

ಚೋಂದುವಿನ ರೂಪು ತಿಮ್ಮುಡುವಿನ ಕಣ್ಣಿಗೆ ಬಂದು ಕಟ್ಟಿದ ಹಾಗಾಯಿತು. ಬಣ್ಣ ಕಪ್ಪು ಎಂಬ ಕೊರತೆಯಲ್ಲದೆ, ಆಕೆಯಲ್ಲಿ ಬೇರೆ ಯಾವ ಕುಂದೂ ಇರಲಿಲ್ಲ. ಅವಳು ಬಹು ಜಾಣೆಯಾದ ಹುಡುಗಿ ಎಂದು ಅವನು ಕೇಳಿ ತಿಳಿದಿದ್ದ. ಅವಳು ನೆಲ್ಲನ್ನು ಮಿದಿಯಬಲ್ಲಳು; ಹೆಟ್ಟಿಯ ಸೆಗಣಿ ಬಳಿಯಬಲ್ಲಳು; ನಾಟ ಕೆಲಸದ ಸಮಯದಲ್ಲಿ ಯಾಕಲಿನ ಅಗೆ ಕೀಳಬಲ್ಲಳು, ದನಕರುಗಳನ್ನು ಮಾಳಕ್ಕೆ ಆಟ್ಟಿಕೊಂಡು ಹೋಗಿ ಮೇಯಿಸಬಲ್ಲಳು; ಸೊಗಸಾಗಿ ತಿಂಡಿ ತಿನಿಸುಗಳನ್ನು ಅಡಬಲ್ಲಳು. ಚೆಂಗುಮಾವ ಒಂದೆರಡು ಸಲ ತಿಮ್ಮುಡುವಿನ ಮುಂದೆ "ಚೋಂದು ಹುಡುಗಿಯಾದರೂ, ಕೆಲಸಬೊಗಸೆಗಳಲ್ಲಿ ಗಂಡನ್ನು ಮೀರಿಸಬಲ್ಲಳು!" ಎಂದು ಅಭಿಮಾನದಿಂದ ಹೇಳಿದ್ದ.

ಹೌದು. ಚೋಂದುವಿನ ಬಣ್ಣ ಕಪ್ಪಾಗಿರದಿದ್ದರೆ ಆಕೆಯನ್ನು ಮದುವೆಯಾಗಬಹುದಿತ್ತು; ಬೇಸಾಯಗಾರನಾದ ತನಗೆ ತಕ್ಕ ಮಡದಿಯಾಗುತ್ತಿದ್ದಳು– ಎಂದು ತಿಮ್ಮುಡು ಮನಸ್ಸಿನಲ್ಲಿ ನೆನೆದುಕೊಂಡ.

ತಿಮ್ಮುಡುವಿಗೆ ಆಕಳಿಕೆ ಬಂತು. ಅವನ ಕಣ್ಣೆವೆಗಳು ಭಾರವಾದುವು. ಅವನ ಜೀವ ನಿದ್ದೆಯ ತೆಕ್ಕೆಗೆ ಒಳಗಾಯಿತು. ಜೂಬಿ ಅವನ ಕಾಲಬಳಿಯಲ್ಲಿ ಬಂದು ಬಿದ್ದುಕೊಂಡಿತು.

* * * *

ತಿಮ್ಮುಡುವಿಗೆ ಎಚ್ಚರವಾದಾಗ ಸೂರ್ಯ ನೆತ್ತಿಯ ಮೇಲಿಂದ ಹತ್ತೆಂಟು ಮಾರು ಕೆಳಗಿಳಿದಿದ್ದ. ಅವನು ಕೈಗಡಿಯಾರವನ್ನು ನೋಡಿದ: ತಾಸು ಆಗಲೇ ಮೂರು ದಾಟಹೋಗಿತ್ತು. ತಾನು ತುಂಬಾ ಹೊತ್ತು ನಿದ್ರಿಸಿಬಿಟ್ಟೆನೆಂದು ಹೇಳಿಕೊಳ್ಳುತ್ತಾ ಎದ್ದು ಅವನು ಹೊಳಿಗಿಳಿದು ಮೋರೆಯನ್ನು ತೊಳೆದುಕೊಂಡ. ಅವನು ಹೆಗಲಿಗೆ ಸಂಚಿಯನ್ನು ಸೆಕ್ಕಿಸಿ, ಬಲಗೈಯಲ್ಲಿ ಕೋವಿಯನ್ನು ತೆಗೆದುಕೊಂಡು ಹೊರಟ. ಜೂಬಿ ಬಾಲವನ್ನು ಬೀಸುತ್ತಾ ಬಂದು ಅವನ ಪಾದವನ್ನು ನೆಕ್ಕಿತು. ಅವನು "ಜೂಬಿ, ಇನ್ನು ಹೋಗೋಣ. ತುಂಬಾ ತಡವಾಯಿತು" ಎಂದು ಹೇಳುತ್ತಾ ಅಡವಿಯೊಳಗೆ ನುಸುಳಿದ. ನಾಯಿ ಆತನನ್ನು ಹಿಂಬಾಲಿಸಿತು.

ತಿಮ್ಮುಡು ಅರೆಮೈಲಿನಷ್ಟು ದೂರ ಸಾಗಿದ. ಅವನು ಕಾಡ ನಡುವೆ ಇದ್ದ ಒಂದು ಸಣ್ಣ ಪಾಳಕ್ಕೆ ತಲುಪಿದ. ಸುತ್ತಲೂ ಸಣ್ಣ ಕುರುಚಲುಪೊದೆಗಳು ಬೆಳೆದಿದ್ದುವು. ಅಡವಿಯೂ ದಟ್ಟವಾಗಿರಲಿಲ್ಲ. ದೂರದ ತಗ್ಗಿನಲ್ಲಿ ಗದ್ದೆಬಯಲು ಕಾಣಿಸಿತು. ತಾನೀಗ ಊರ ಸಮೀಪಬಂದಿದ್ದೇನೆ ಎಂದು ಅವನಿಗೆ ಅರಿವಾಯಿತು. ಅವನು "ಇಂದು ತಾನು ಎದ್ದ ಹೊತ್ತು ಒಳ್ಳೆಯದಲ್ಲ, ಒಂದು ಮೊಲ ಮತ್ತು ಎರಡು ಕೊಕ್ಕರೆಯಲ್ಲದೆ ಬೇರೇನೂ ಬೇಟೆ ಸಿಗಲಿಲ್ಲ. ಕಾಡಿನಲ್ಲಿ ಅಲೆದುದಕ್ಕೆ ಫಲವಿಲ್ಲದಾಯಿತು. ಇನ್ನು ಮನೆ ಸೇರುವುದು ವಾಸಿ" ಎಂದು ಉದ್ಗಾರವೆತ್ತಿ ಬಯಲಿರುವ ದಿಕ್ಕಿಗೆ ಸೋರೆ ಮಾಡಿ ನಡೆದ.

ಈ ವರೆಗೆ ಸದ್ದಿಲ್ಲದೆ ಒಡೆಯನನ್ನು ಹಿಂಬಾಲಿಸುತ್ತಿದ್ದ ಜೂಬಿ ಈಗ ಬಾಯ್ತೆರೆದು ಬಂದೇ ಸಮನೆ ಬಗುಳಲಾರಂಭಿಸಿತು. ದನಿಯಲ್ಲಿ ಅಂಜಿಕೆ ತುಂಬಿತ್ತು. ನಾಯಿ ಮೊಲವನ್ನೋ, ಕಾಡು ಹುಲ್ಲೆಯನ್ನೋ ಕಂಡು ಬಗಳುತ್ತಿದೆ- ಎಂದು ತಿಮ್ಮುಡು ಊಹಿಸಿದ. ಆದರೆ ಜೂಬಿ ತನ್ನ ಸ್ವಭಾವದಂತೆ ಮಿಗವನ್ನು ಹಿಡಿಯಲು ನೆಗೆದೋಡಲಿಲ್ಲ. ಅದು ನಿಂತಲ್ಲಿಂದ ಕದಲದೆ ಮಾಳವ ಅಂಚಿನಲ್ಲಿರುವ ಮತ್ತಿಮರದ ನೆಳಲನ್ನು ನೋಡುತ್ತಾ ಗಂಟಲು ಬಿರಿಯುಹೋಗುವಂತೆ ಅರಚಿತು.

ಜೂಬಿ ಹೋಗುತ್ತಿದ್ದ ಕಡೆಗೆ ತಿಮ್ಮುಡು ದೃಷ್ಟಿ ಹರಿಯಿಸಿದ. ಅಲ್ಲಿ ಮತ್ತಿ ಮರದ ಆಚೆ ಬೇಸಿಗೆ ಬಿಸಿಲಿಂದ ಹೊಂಬಣ್ಣವನ್ನು ತೂರಿ ಹುಲ್ಲ ಮೇಲೆ ಸಂಜೆ ಸೂರ್ಯನ ಮಂದ ಕಿರಣಗಳು ಕುಣಿದಾಡುತ್ತಿದ್ದುವು. ಅಲ್ಲಿನ ಹಸಿರು ಗಿಡಗಳ ಹಿನ್ನೆಲೆಯಲ್ಲಿ ಬರೆದಿರಿಸಿದ ಚಿತ್ರದಂತೆ ಹುಲಿ–ಮರಿಗಳೆರಡು ಮುಂಗಾಲುಗಳನ್ನೆತ್ತಿ ಆಟ ಮಾಡುತ್ತಿದ್ದುವು. ಸಾಯಂಕಾಲದ ಹೂಬಿಸಿಲಲ್ಲಿ ಅವುಗಳ ಮೈಮೇಲಿನ ಹಳದಿ ಮತ್ತು ಕಪ್ಪು ಪಟ್ಟೆಗಳು ಎದ್ದು ತೋರುತ್ತಿದ್ದುವು. ಅವು ನಾಯಿಯ ಬಗಳುವಿಕೆಗೆ ಲಕ್ಷ್ಯಗೊಡದೆ ತಮ್ಮ ಮುಂಗೈಗಳಂದ ಪರಸ್ಪರ ಅಪ್ಪಳಿಸುತ್ತಿದ್ದುವು. ಒಂದರ ಬೆನ್ನುಮೇಲೆ ಇನ್ನೊಂದು ನೆಗೆಯುತ್ತಿದ್ದಿತು. ಒಂದು ಮರಿ ಓಡಿಹೋಗಿ ಕುರುಚಲು ಗಿಡಗಳ ಮರೆಯಲ್ಲಿ ಅವಿತಾಗ, ಎರಡನೆಯದು ಅದರ ಹಿಂದೆ ಓಡಿಹೋಗಿ ನೆಗೆದು ಮೊದಲನೆಯದರ ಕಿವಿಯನ್ನು ಕಚ್ಚುತ್ತಿದ್ದಿತು. ಮೊದಲನೆಯದು ರೊಚ್ಚಿಗೆದ್ದಂತೆ ನಟಿಸಿ ತನ್ನ ಸೋದರನ ಮೇಲೆ ಎರಗುತ್ತಿತ್ತು.

ಎರಡು ಹುಲಿಮರಿಗಳು ಪರಸ್ಪರ ಕಾದುತ್ತಾ ಹುಲ್ಲಹಾಸಿನ ಮೇಲೆ ಹೊರಳಿದುವು. ಸೆಣಸಿನಿಂದ ದಣಿದಾಗ ಎರಡೂ ದೂರ ಸರಿದು ಕುಳಿತು, ಒಂದನ್ನೊಂದು ನಿಟ್ಟಿಸಿ ನೋಡಿದುವು. ದಣಿವು ಆರಲು ಅವು ಮರಳಿ ತಮ್ಮ ಆಟವನ್ನು ಪ್ರಾರಂಭಿಸಿದುವು.

ತಿಮ್ಮುಡು ಬಗುಳಬೇಡವೆಂದು ನಾಯಿಗೆ ಸನ್ನೆಮಾಡಿ ತಿಳಿಸಿದ. ಅವನು ಹುಲಿಮರಿಗಳ ಬಾಲಕ್ರೀಡೆಯನ್ನು ನೋಡುತ್ತಾ ನಿಂತ. ಆ ಮರಿಗಳು ದೊಡ್ಡವೇನೂ ಅಲ್ಲ. ಮೂರುಗೇಣಿಗಿಂತ ಹೆಚ್ಚು ಉದ್ದವಾಗಿರಲಿಲ್ಲ. ಒಂದು ಗೇಣಿಗಿಂತ ಹೆಚ್ಚು ಎತ್ತರವಾಗಿರಲಿಲ್ಲ. ಹುಲಿ ಈದು ಒಂದು ವಾಕ್ಕಿಂತ ಹೆಚ್ಚು ದಿನ ಆಗಿರದು. ಹಸಿದ ತಾಯಿ ಬೇಟೆಯನ್ನು ಅರಸಲೆಂದು ಕಾಡೊಳಗೆ ಹೋಗಿರಬೇಕೆಂದು ಅವನು ಊಹಿಸಿದ.

ಈ ಹುಲಿಮರಿಗಳನ್ನು ಹಿಡಿದುಕೊಂಡು ಹೋದರೆ, ಮನೆಯಲ್ಲಿ ಪಂಜರದೊಳಗಿಟ್ಟು ಸಾಕಬಹುದು; ಮನೆಗೆ ಬಂದು ಹೋಗುವವರ ದೃಷ್ಟಿಯನ್ನು ಸೆಳೆಯುವ ಸೋಜಿಗದ ನೋಟವಾಗುವುದು ಈ ಪುಟ್ಟ ಮರಿಗಳನ್ನು ಹಿಡಿಯುವುದು ಪ್ರಯಾಸದ ಕೆಲಸವೇನೂ ಅಲ್ಲ- ಎಂದು ತಿಮ್ಮುಡು ಆಲೋಚಿಸಿದ.

ತಿಮ್ಮುಡು ಮನಸ್ಸಿನಲ್ಲಿ ಸುಳಿದ ಆಲೋಚನೆಯನ್ನು ಕೃತಿಗಿಳಿಸಲು ಹೊರಟ. ಅವನು ಮೆಲ್ಲನೆ ಸರಿದು, ಮಾಳವ ಅಂಚಿನಲ್ಲಿದ್ದ ಪೊದೆಗಳ ಎಡೆಯನ್ನು ಸೇರಿದ. ತನ್ನ ಧನಿ ಯಾವುದೊ ಒಂದು ಸಾಹಸದ ಕೆಲಸಕ್ಕೆ ಕೈಹಾಕಿದ್ದಾನೆಂದು ಜೂಬಿಗೆ ಅರಿವಾಯಿತು. ಅದು ಆತನ ಕೈಸನ್ನೆಗಳನ್ನು ಅರ್ಥಮಾಡಿಕೊಂಡ ಬಗುಳಪೆ ಅವನನ್ನು ಹಿಂಬಾಲಿಸಿತು.

ತಮ್ಮನ್ನು ಹಿಡಿಯಲು ಮನುಷ್ಯನೊಬ್ಬ ಹೊಂಚುಹಾಕಿತ್ತಿರುವನೆಂಬುದು ಹುಲಿಮರಿಗಳಿಗೆ ತಿಳಿಯಲೇ ಇಲ್ಲ. ಒಂದನೆಯ ಮರಿ ತನ್ನ ಸೋದರನನ್ನು ಹುಲ್ಲುಹಾಸಿಗೆಯ ಮೇಲೆ ಅಂಗಾತ ಹೊರಳಿಸಿ, ತನ್ನ ನಾಲಗೆಯಿಂದ ಅದರ ಹೊಟ್ಟೆಯನ್ನು ನೆಕ್ಕಿ ಕಚುಗುಳಿಗುಟ್ಟಿಸುತ್ತಿತ್ತು. ಎರಡನೆಯ ಮರಿ ತನ್ನ ಮೇಲೆ ಬಿದ್ದ ಸೋದರನನ್ನು ಕೆಳಗೆ ಉರುಳಿಸಲೆಂದು ಅದರ ಕೊರಳ ತೊಗಲನ್ನು ಹಲ್ಲುಗಳಿಂದ ಕಡಿದು ಎಳೆಯುತ್ತಿತ್ತು.

ಪೊದೆಯ ಮರೆಯಲ್ಲಿ ನಿಂತ ತಿಮ್ಮುಡು ಸದ್ದುಮಾಡದೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿರಿಸುತ್ತಾ ಸರಿದ. ಅವನು ಕೈಯನ್ನು

ಮುಂದೆ ಚಾಚಿದ. ಅವನ ಕೈಗೆ" ಸೋದರನ ಒಡಲನ್ನು ನೆಕ್ಕುತ್ತಿದ್ದ ಹುಲಿಮರಿಯ ಕೊರಳು ಸಿಕ್ಕಿತು. ಅವನು ಬೆರಳುಗಳಿಂದ ಹುಲಿ ಮರಿಯ ಕೊರಳನ್ನು ಒತ್ತಿ ಹಿಡಿದು ಮೇಲೆತ್ತಿದ. ಅದರ ಕೊರಳನ್ನು ಕಡಿದ ಎರಡನೆಯ ಹುಲಿಮರಿ ಧೊಪ್ಪನೆ ಕೆಳಗೆ ಬಿದ್ದಿತು.

ಯಜಮಾನನ ಗೈಮೆಯನ್ನು ಕಣ್ಣಾರಳಿಸಿ ನೋಡುತ್ತಿದ್ದ ಜೂಬಿ ತಾನೂ ಒಂದು ಕಿರಿಯ ಸಾಹಸವನ್ನು ಮಾಡಿ ಒಡೆಯನನ್ನು ಮೆಚ್ಚಿಸುವೆನು ಎಂದು ಆಲೋಚಿಸಿತು. ಅದು ನೆಲದ ಮೇಲೆ ಬಿದ್ದ ಹುಲಿ ಮರಿಯ ಮೇಲೆ ನೆಗೆಯಿತು; ಅದನ್ನು ಹಿಡಿಯಲೆಂದು ಮುಸುಡಿಯನ್ನು ಮುಂದೆ ಚಾಚಿತು.

ಅದರೆ ಹುಲಿಮರಿಯ ಕೊರಳು ಜೂಬಿಯ ಬಾಯಿಗೆ ಸಿಗಲಿಲ್ಲ. ಬೆಚ್ಚಿಬಿದ್ದ ಮರಿಹುಲಿಯ ಮೈ ರೋಮಗಳೆಲ್ಲ ನಿಗುರಿದುವು. ಅದು ತಿರುಗಿ ನಿಂತು ತನ್ನ ಮುಂಗೈಯನ್ನು ಚಾಚಿತು. ತನ್ನನ್ನು ಹಿಡಿಯಲೆಂದು ಬಾಯ್ದೆರೆದು ಬಂದ ಜೂಬಿಯ ಮುಸುಡಿಯ ಮೇಲೆ ಮುಂಗೈಯಿಂದ ಅಪ್ಪಳಿಸಿತು. ಹುಲಿಮರಿಯ ಮೊನಚು ಉಗುರುಗಳು ಜೂಬಿಯ ಬಲಗಣ್ಣನ್ನು ಸೀಳಿದುವು. ಅದರ ಕಣ್ಣಿನಿಂದ ಬುಳು ಬುಳನೆ ರಕ್ತದ ಕಾರಂಜಿ ಚಿಮ್ಮಿತು. ಹುಲಿಮರಿ ಅಲ್ಲಿ ನಿಲ್ಲದೆ ನೆಗೆದು ಕುಪ್ಪಳಿಸಿ ಪೊದೆಯ ಮರೆಗೆ ಓಡಿತು.

ಕಣ್ಣೊಂದನ್ನು ಕಳೆದುಕೊಂಡ ಜೂಬಿ ನೋವನ್ನು ತಡೆಯಲಾಗದೆ 'ಬಕ್', ಬಕ್', ಬೌ' ಎಂದು ಉಚ್ಚಧ್ವನಿಯಲ್ಲಿ ಬಗುಳಿತು. ತನ್ನ ನಚ್ಚಿನ ನಾಯಿ ಹುಲಿಮರಿಯಿಂದ ಪೆಟ್ಟುತಿಂದುದನ್ನು ಕಂಡು ತಿಮ್ಮುಡುವಿಗೆ ಆಯ್ಯೋ ಪಾಪ ಎನಿಸಿತು. ಅವನು ಅದರ ನೆತ್ತಿಯನ್ನು ಎಡಗೈಯಿಂದ ಸವರಿ, " ನೀನೇಕೆ ಹುಲಿಹಿಡಿವ ಸಾಹಸಕ್ಕೆ ಹೋದೆ ? ನೋಡು, ಈಗ ನಿನ್ನ ಕಣ್ಣಿಗೆ ಕೇಡು ಬಂತು ! " ಎಂದು ಹೇಳಿದ.

ತಿಮ್ಮುಡು ಬಲಗೈಯಲ್ಲಿ ಹಿಡಿದ ಹುಲಿಮರಿ ಹಾಗೆಯೇ ಇತ್ತು. ಅವನು ಎಡಗೈಯಿಂದ ತೋಳ ಮೇಲಿನ ಸಂಚಿಯನ್ನು ಜಾಡಿಸಿದ. ಅನಂತರ ಅದರೊಳಗೆ ಕೈಹಾಕಿದಾಗ ದಾರವೊಂದು ಸಿಕ್ಕಿತು. ಅವನು ದಾರದಿಂದ ಹುಲಿಮರಿಯ ಕೈ-ಕಾಲುಗಳನ್ನು ಜತೆಗೂಡಿಸಿ ಬಿಗಿದ. ಬುತ್ತಿಯನ್ನು ಸುತ್ತಿ ತಂದಿದ್ದ ಅರಿವೆಯ ತುಂಡನ್ನು ತೆಗೆದು ಹುಲಿಮರಿಯ ತೆರೆದ ಬಾಯೊಳಗೆ ತುರುಕಿದ. ಈಗ ಅದಕ್ಕೆ ಬಾಯ್ದೆರೆದು ಅರಚಲಾಗಲಿಲ್ಲ. ಅವನು ಹುಲಿಮರಿಯನ್ನು ಸಂಚಿಯೊಳಗೆ ಸೇರಿಸಿ ಕಗಲ ಮೇಲೆ ಹಾಕಿಕೊಂಡ.

ಚೀಲದೊಳಗೆ ಸೇರಿದ ಹುಲಿಮರಿ ತಾನು ಸೆರೆಯಿಂದ ವಾರಾಗಿ ಹೋಗುವೆನು ಎಂದು ಹೊರಳಾಡಿತು. ಅದರೆ ಅದರ ಕೈಕಾಲುಗಳನ್ನು ಬಿಗಿದುದರಿಂದ ಅದಕ್ಕೆ ಸಂಚಿಯಿಂದ ಹೊರಬರಲಾಗಲಿಲ್ಲ.

ತಿಮ್ಮುಡು ನೆಲದಮೇಲಿರಿದ್ದ ಕೋವಿಯನ್ನು ಎತ್ತಿಕೊಂಡ. ಜೂಬಿ ಭೀತಸ್ವರದಲ್ಲಿ ಬಗುಳಿತು. ತಿಮ್ಮುಡು ಕತ್ತು ಹೊರಳಿಸಿ ನೋಡಿದ. ಪೊದೆಗಳ ಎಡೆಯಿಂದ ತಾಯಿಹುಲಿ ಜಿಗಿದು ಬರುತ್ತಿತ್ತು. ಅದರ ಕೆಂಗಣ್ಣುಗಳು ಕಿಡಿ ಕಾರುತ್ತಿದ್ದುವು. ಅದರ ತೆರೆದ ಬಾಯೊಳಗೆ ತೋರುತ್ತಿದ್ದ ಕೋರೆಹಲ್ಲುಗಳು ತಿಮ್ಮುಡುವನ್ನು ಇರಿಯಲೆಂದು ಎತ್ತಿದ ಈಟಿಗಳಂತೆ ತೋರಿದುವು. ತನ್ನ ಮರಿಯನ್ನು ಅಪಹರಿಸಿದ ನೆಂದು ಅರಿತ ಹುಲಿ ಮುಳಿಸಿಂದ ಆರ್ಭಟಿಸಿತು. ಅದರ ಗರ್ಜನೆಯನ್ನು ಕೇಳಿದಾಗ ತಿಮ್ಮುಡುವಿನ ಎದೆ ತಲ್ಲಣಿಸಿ ಹೋಯಿತು. ಓಡಿ ಹೋಗಿ ಮರವನ್ನೇರುವೆನೆಂದರೆ ಪಕ್ಕದಲ್ಲೆಲ್ಲಿಯೂ ಎತ್ತರದ ಮರಗಳಿರಲಿಲ್ಲ. ಅವನು ನಿಂತಲ್ಲಿಂದ ಉದ್ದದ ಮತ್ತಿಮರಕ್ಕೆ ಇಪ್ಪತ್ತು ಮಾರುಗಳಿಗಿಂತ ಹೆಚ್ಚು ದೂರವಿದೆ !

ಒದಗಿದ ಆಪತ್ತನ್ನು ಎದುರಿಸುವೆನೆಂದು ತಿಮ್ಮುಡು ಧೈರ್ಯ ತಂದುಕೊಂಡ. ಅವನು ಹುಲಿಗೆ ಈಡು ಮಡಗಲೆಂದು ಕೋವಿಯನ್ನು ಮೇಲೆತ್ತಿದ.

ಹುಲಿ ಸುತ್ತಲಿನ ಪೊದೆಗಳೆಲ್ಲ ಕಂಪಿಸುವಂತೆ ಭೀಕರ ದನಿಯಲ್ಲಿ ಆರ್ಭಟಿಸಿತು. ಅದು ಹಿಂಗಾಲುಗಳಿಂದ ನೆಲವನ್ನು ಅವುಂಕಿ ಮುಂಗಾಲುಗಳನ್ನು ಚಾಚಿ ತಿಮ್ಮುಡುವಿನ ಮೇಲೆ ನೆಗೆಯಿತು.

ತಿಮ್ಮುಡು ಹುಲಿಗೆ ಈಡುಮಡುಗಲೆಂದು ಕೋವಿಯನ್ನು ಚಾಚಿದ. ಆದರೆ ಅತನಿಗೆ, ನೆಗೆದ ಹುಲಿಗೆ ಈಡುಮಡಗಲಾಗಲಿಲ್ಲ. ಹುಲಿ ಧೊಪ್ಪನೆ ತಿಮ್ಮುಡುವಿನ ಮೇಲೆ ಬಿತ್ತು. ಅದರ ನೆಗೆತದ ರಭಸವನ್ನು ತಾಳಿಕೊಳ್ಳಲಾಗದೆ ತಿಮ್ಮುಡು ನೆಲದ ಮೇಲೆ ಬಿದ್ದುಹೋದ. ಕೈಯಲ್ಲಿ ಹಿಡಿದ ಬಂದೂಕು ಕೆಳಗೆ ಜಾರಿತು. ಹುಲಿ ತನ್ನ ಮುಂಗೈಯಿಂದ ಅವನ ಭುಜವನ್ನು ಅಪ್ಪಳಿಸಿತು. ಅದರ ಮೊನಚು ಉಗುರುಗಳು ಅತನ ಹೆಗಲಿಗೆ ನಾಟಿದುವು. ಭೀತಿಯಿಂದ ಅವನ ಮೈ ನಡುಗಿ ಬೆವರಿಹೋಯಿತು. ವೇದನೆಯನ್ನು ತಾಳಲಾಗದ ತಿಮ್ಮುಡುವಿನ ಕೊರಳಿಂದ ಹೊಮ್ಮಿದ ಕ್ರಂದನ ಸ್ವನ ಅಡವಿಯ ಮರಗಳಲ್ಲಿ ಮಾರ್ದನಿಗೊಂಡಿತು. ಮರುಕ್ಷಣದಲ್ಲಿ ಹುಲಿ ಅತನ ಕೊರಳನ್ನು ಸೀಳಿ ನೆತ್ತರನ್ನು ಹೀರುವೆನೆಂದು, ಅವನ ಕೊರಳಿಡೆಗೆ ಮುಸುಡನ್ನು ಚಾಚಿತು. ತನ್ನ ಕೊನೆಗಳಿಗೆ ಬಂತೆಂದು ತಿಮ್ಮುಡು ಕಣ್ಣು ಮುಚ್ಚಿದ.

ಜೂಬಿ ತನ್ನ ಒಡೆಯನಿಗೆ ಒದಗಿದ ವಿಪತ್ತನ್ನು ಅರಿತುಕೊಂಡಿತು. ಅದರ ಎದೆಯಲ್ಲಿ ಕೆಚ್ಚಿನ ಚಿಲುಮೆ ಸಿಡಿದೊಸರಿತು. ಅದು ಹುಲಿಯ ಬೆನ್ನ ಹಿಂದೆ ಹೋಗಿ, ಹುಲಿಯ ಬಾಲವನ್ನು ಹಲ್ಲುಗಳಿಂದ ಕಡಿದೆಳೆಯಿತು. ನಾಯಿಯ ಹಲ್ಲುಗಳು ಹುಲಿಯ ಬಾಲಕ್ಕೆ ನಾಟಿದುವು. ಹುಲಿಗೆ ನೋವನ್ನು ತಾಳಿಕೊಳ್ಳಲಾಗಲಿಲ್ಲ. ಅದು ತಿಮ್ಮುಡುವಿನ ಮೊಗದೆಡೆಗೆ ಚಾಚಿದ್ದ ಮುಖವನ್ನೆತ್ತಿ ಆರ್ಭಟಿಸಿತು. ತನ್ನ ಬಾಲವನ್ನು ಕಡಿದು ಅಪಮಾನಗೊಳಿಸಿದ ಕುನ್ನಿಯನ್ನು ಮೊದಲು ಸೀಳಿ ಹಾಕಿ, ಆ ಮೇಲೆ ಮನುಷ್ಯನಿಗೆ ಶಾಸ್ತಿ ಮಾಡುವೆನೆಂದು, ಹುಲಿ ನಾಯಿಯ ಕಡೆಗೆ ಹೊರಳಿತು. ಅದು ತಿಮ್ಮುಡುವಿನ ಭುಜದ ಮೇಲಿಂದ ಮುಂಗೈಯನ್ನು ಎತ್ತಿತು. ಆದು ಕೈಯನ್ನು ಮೇಲಕ್ಕೆತ್ತಿದಾಗ, ಉಗುರುಗಳ ಎಡೆಯಲ್ಲಿ ಒಂದು ಮಾಂಸದ ಮುದ್ದೆಯೇ ಕಿತ್ತು ಬಂತು. ಗಾಯದಿಂದ ಬುಳುಬುಳುನೆ ಒಸರಿದ ನೆತ್ತರು ಆತ ತೊಟ್ಟ ಜುಬ್ಬಕ್ಕೆ ಕೆಂಬಣ್ಣವನ್ನು ಮೆತ್ತಿತ್ತು.

ರೊಚ್ಚಿಗೆದ್ದ ಹುಲಿ ಜೂಬಿಯ ಕಡೆಗೆ ಹೊರಳಿತು. ನಾಯಿ ಧೈರ್ಯದಿಂದ ನೆಗೆದು ಹುಲಿಯನ್ನು ಎದುರಿಸಿತು ಆದರೆ ಪುಟ್ಟ ಕುನ್ನಿ ರೊಚ್ಚಿಗೆದ್ದ ಹುಲಿಗೆ ಹೇಗೆ ತಾನೇ ಸಾಟಿಯಾಗಬಲ್ಲುದು? ಹುಲಿ ಮುಂದೆ ನುಗ್ಗಿ ತನ್ನ ಮುಂಗೈಯನ್ನೆತ್ತಿ ನಾಯಿ ನೆತ್ತಿಗೆ ಅಪ್ಪಳಿಸಿತು. ಈ ಆಘಾತಕ್ಕೆ ನಾಯಿಯು ನೆತ್ತಿಯೊಡೆದು ನೆಲದ ಮೇಲೆ ಕುಸಿದಿತು. ಜೂಬಿ ತನ್ನ ದೀನದೃಷ್ಟಿಯನ್ನೊಮ್ಮೆ ಯಜಮಾನನ ಕಡೆಗೆ ಹೊರಳಿಸಿ ಕೊನೆಯುಸಿರನ್ನು ಎಳೆಯಿತು. ತನ್ನ ಅಕ್ಕರೆಯ ನಾಯಿಯು ಸಾವನ್ನು ಕಂಡಾಗ ತಿಮ್ಮುಡುವಿಗೆ ತನ್ನ ಒಡಲಿಂದ ಜೀವ ಹಾರಿಹೋದಂತೆ ಎನಿಸಿತು. ತನ್ನ ನಚ್ಚಿನ ನಾಯಿಯನ್ನು ಹುಲಿಯ ಬಾಯಿಂದ ಉಳಿಸಿಕೊಳ್ಳಲಾರದೆ ಹೋದೆನಲ್ಲ— ಎಂದು ಅವನು ಮರುಗಿದ. ಹುಲಿಯನ್ನು ಕೊಂದು ಸೇಡು ತೀರಿಸಿಕೊಳ್ಳಬೇಕೆಂದು ಅವನು ನೆಲದ ಮೇಲೆ ಬಿದ್ದ ಬಂದೂಕಕ್ಕೆ ಕೈಚಾಚಿದ.

ಅವನ ಕೈಗೆ ಕೋವಿ ಸಿಕ್ಕಿತು. ಅವನು ಬಂದೂಕನ್ನು ಎತ್ತಿ ಕೊಂಡ. ಹುಲಿ ಅತನ ಎಡ ಹೆಗಲಿನ ಮಾಂಸವನ್ನು ಕಿತ್ತು ಹಾಕಿ– ದುದರಿಂದ, ಎಡಗೈ ಅವನ ಸ್ವಾಧೀನ ತಪ್ಪಿತ್ತು. ಎಡಗೈಯು ನೆರವಿಲ್ಲದೆ ಬಲಗೈಯಿಂದಲೇ ಹುಲಿಗೆ ಈಡು ಮಡುಗಲಾಗುವುದಿಲ್ಲ. ತನ್ನ ಆಯುಷ್ಯ ತುಂಬಿತು; ಇನ್ನೊಂದು ಕ್ಷಣದಲ್ಲಿ ಹುಲಿ ತನ್ನನ್ನು ಸೀಳಿ ಬಿಡುವುದು— ಎಂದು ಅವನು ತಿಳ್ಳಣಗೊಂಡ.

ಜೂಬಿಯನ್ನು ಕೊಂದಾದ ಮೇಲೆ, ಹುಲಿ ತಿಮ್ಮುಡುವಿನ ಕಡೆ ತಿರುಗಿತು. ಅದು ಆತನ ಕೊರಳನ್ನು ತುಂಡರಿಸಿ ಆತನ ನೆತ್ತರಿನಿಂದ ತನ್ನ ಆಸರನ್ನು ನೀಗಿಕೊಳ್ಳುವೆನೆಂದು ಅವನ ಮೇಲೆ ಹಾರಿತು. ನೆಗೆ ಯುವ ಮುನ್ನ ತಿಮ್ಮುಡುವಿನ ಕಿವಿಯ ತಂಬಟಿಗಳು ಕಿತ್ತು ಹೋಗು ವಂತೆ ಭೀಕರ ದನಿಯಲ್ಲಿ ಆರ್ಭಟಿಸಿತು.

ತಿಮ್ಮುಡು ತನ್ನ ಕತೆ ಮುಗಿಯಿತೆಂದೇ ಭಾವಿಸಿದ. ಅವನು ಬಿದ್ದಲ್ಲಿಂದ ಎದ್ದು ನಿಂತು ಒಂದು ಕೈಯಿಂದಲೇ ಬಂದೂಕನ್ನೆತ್ತಿ ಹುಲಿಯನ್ನು ಹೊಡೆಯಲು ಹವಣಿಸಿದ. ಆದರೆ ಹೆಗಲ ಗಾಯದಿಂದ ನೆತ್ತರು ಬಸಿದುದರಿಂದ, ಅವನ ತ್ರಾಣ ಉಡುಗಿ ಹೋಗಿತ್ತು. ಅವನಿಗೆ ಎದ್ದು ನಿಲ್ಲಲಾಗಲಿಲ್ಲ. ಕೋವಿಯನ್ನು ಹಿಡಿದ ಕೈ ಕಂಪಿಸಿತು.

ಹುಲಿ ತಿಮ್ಮುಡುವಿನ ಮೇಲೆ ನೆಗೆದೇ ಬಿಟ್ಟಿತು. ತಿಮ್ಮುಡು ನೆಲದ ಮೇಲೆ ತೆವಳಿ ಎರಡು ಮಾರು ಹಿಂದೆ ಸರಿದ. ತನ್ನ ಪ್ರಾಣ ಉಳಿಸಿ ಕೊಳ್ಳಲು ಹೆಣಗುತ್ತಿದ್ದ ತಿಮ್ಮುಡುವಿನ ತೋಳಿಗೆ ರಾಕ್ಷಸ ಬಲ ಬಂತು. ಅವನು ಬಲಗೈಯಲ್ಲಿ ಬಂದೂಕನ್ನು ಚಾಚಿ ಹಿಡಿದ.

ಹುಲಿ ತಿಮ್ಮುಡುವಿನ ಮೈಮೇಲೆ ಬೀಳದೆ ಒಂದು ಮಾರು ಹಿಂದೆ ಬಿದ್ದಿತು. ತನ್ನ ನೆಗೆತಕ್ಕೆ ಹಗೆಸಿಗಲಿಲ್ಲವೆಂದು ಅದರ ರೋಷ ಇಮ್ಮಡಿ– ಸಿತು. ಅದು ಬಾಯ್ದೆರೆದು ಘೋರಿಯಿತು.

ತಿಮ್ಮುಡು ಬಲಗೈಯಲ್ಲಿ ಹಿಡಿದಿದ್ದ ಬಂದೂಕಿನ ನಳಿಗೆಯನ್ನು ಹುಲಿಯ ಬಾಯೊಳಗೆ ತುರುಕಿದ. ಹುಲಿ ನಳಿಗೆಯನ್ನು ಹಗೆಯ ತೋಳೆಂದು ಎಣಿಸಿ ಹಲ್ಲುಗಳಿಂದ ಕಡಿಯಿತು. ಉಕ್ಕಿನ ನಳಿಗೆ ಘರ್ಷಿಸಿದಾಗ, ಹುಲಿಯ ಕೋರೆ ಹಲ್ಲುಗಳೆರಡು ಉದುರಿಹೋದುವು.

ಹಲ್ಲುಗಳುದುರಿದ ನೋವು ಹುಲಿಯ ಮುನಿಸನ್ನು ಕೆರಳಿಸಿತು. ಅದು ಇನ್ನೊಮ್ಮೆ ಆರ್ಭಟಿಸಿತು. ಹುಲಿಯ ಬಾಯೊಳಗಿಂದ ಬಂದೂಕದ ನಳಿಗೆ ಜಾರದಂತೆ ತಿಮ್ಮುಡು ತನ್ನ ಬೈಯ ಕಸುವನ್ನೆಲ್ಲ ಬಲತೋಳ ಮೇಲೆ ಹಾಕಿ, ನಳಿಗೆಯನ್ನು ಬಾಯೊಳಗೆ ದೂಡಿದ. ಹುಲಿ ತಲೆಯನ್ನು ಎಷ್ಟು ಹೊರಳಿಸಿದರೂ ನಳಿಗೆ ಮಾತ್ರ ಅದರ ಬಾಯೊಳಗೆ ಉಳಿದಿತು. ನಳಿಗೆಯ ತುದಿ ಹುಲಿಯ ಗಂಟಲೊಳಗೆ ತಗಲಿ ನೆತ್ತರು ಒಸರಿತು.

ಈ ಒಂದು ಕ್ಷಣವನ್ನು ತಾನು ಸರಿಯಾಗಿ ಬಳಸಿಕೊಂಡರೆ ತನ್ನ ಜೀವ ಉಳಿಯುವುದು– ಎಂಬ ಭರವಸೆ ತಿಮ್ಮುಡುವಿನಲ್ಲಿ ತಲೆದೋರಿತು ಅವನು ಬಂದೂಕಿನ ಮೇಲಿನ ಹಿಡಿತವನ್ನು ಸಡಿಲಿಸಲಿಲ್ಲ. ನಳಿಗೆ ಹುಲಿಯ ಬಾಯೊಳಗಿಂದ ಜಾರಲು ಅವಕಾಶ ಕೊಡಲಿಲ್ಲ. ಅವನು ತೋಳನ್ನು ಕದಲಿಸದೆ ತಲೆಯನ್ನು ಬಾಗಿಸಿದ. ಮುಸುಡವನ್ನು ಕೊತ್ತಿಯ ಹತ್ತಿರ ತಂದ. ಅವನು ಕೋವಿಯ ಕೊತ್ತಿಯನ್ನು ಹಲ್ಲುಗಳಿಂದ ಕಚ್ಚಿ ಹಿಂದಕ್ಕೆ ಎಳೆದ.

ಬಂದೂಕಿನೊಳಗೆ ತುಂಬಿದ್ದ ಕಡತೂಸು, ಡಂ ಎಂದು ಸಿಡಿಯಿತು ಹಾರಿನ ಗುಂಡು ಹುಲಿಯ ನೆತ್ತಿಯನ್ನು ಸೀಳಿತು. ಹುಲಿಯು ಮೆದುಳು ಸುತ್ತಲಿನ ಒಣ ಹುಲ್ಲಿನ ಮೇಲೆ ಜೆಲ್ಲಾಪಿಲ್ಲಿಯಾಗಿ ಹರಡಿತು ಹುಲಿಯ ಬೈಯಿಂದ ಒಸರಿದ ನೆತ್ತರ ಕಾರಂಜಿ ಅಲ್ಲಿ ಮುಡುಗಟ್ಟಿ ನಿಂತಿತು.

ಹುಲಿ ಮಡಿದು ಬೀಳಲು ತಿಮ್ಮುಡುವಿನ ಶಕ್ತಿ ಉಡುಗಿತು ಅವನ ಕಣ್ಣುಗಳಿಗೆ ಕತ್ತಲೆ ಕವಿಯಿತು. ಅವನು ಬವಳಿಗೊಂಡ ಹುಲಿಯ ಪಕ್ಕದಲ್ಲಿಯೇ ಹೊರಳಿದ.

* * * *

ಸಂಜೆಯಾದರೂ ಕರೆಯುವ ಹಸು ಗೌರಿ ಹಟ್ಟಿಗೆ ಬರಲಿಲ್ಲ ಮನೆಯೊಡತಿ ಮಾಚವ್ವನಿಗೆ ಚಿಂತೆ ಹಿಡಿಯಿತು. ಮೇಯಲೆಂದು ಅಡವಿಗೆ ಹೋದ ಹಸುವನ್ನು ಅರಸಿಕೊಂಡು ಬರಲು ಮನೆಯಲ್ಲಿ ಗಂಡಾಳುಗಳು ಯಾರೂ ಇರಲಿಲ್ಲ. ಗಂಡ ಜೆಂಗಪ್ಪ ಸಾಮಾನು ತರ ಲೆಂದು ಗೋಣಿಕೊಪ್ಪಲು ಸಂತೆಗೆ ಹೋದವನು ಇನ್ನೂ ಮರ ಬಂದಿರಲಿಲ್ಲ. ಹಟ್ಟಿಗೆ ಹಸು ಮರಳಿ ಬರದಿದ್ದರೆ, ಇರುಳು ಅವನ ಹುಲಿ ಹಿಡಿದೀತು ಎಂಬ ಚಿಂತೆ ಮಾಚವ್ವನನ್ನು ಕವಿದಿತು.

ಮಗಳು ಜೋಂದು ಗದ್ದೆಯಲ್ಲಿ ಮಾಡಿದ ಬೆಳ್ಳೇರಿ ತೋಟಕ್ಕೆ ನೀರೆರೆಯುತ್ತಿದ್ದಳು. ತಾಯಿ ಹೋಗಿ ಮಗಳನ್ನು ಕರೆದಳು.

"ಏನವ್ವಾ?" ನೀರು ತುಂಬಿದ ಒಂದು ಬಿಂದಿಗೆಯನ್ನು ನೆತ್ತಿಗೆ ಮೇಲಿರಿಸಿ, ಇನ್ನೊಂದನ್ನು ಕಂಕುಳಲ್ಲಿರಿಸಿಕೊಂಡು ತೋಡಿನಿಂ ನೀರು ತರುತ್ತಿದ್ದ ಜೋಂದು ಕೇಳಿದಳು.

" ನೋಡು, ಮೇಯಲು ಹೋದ ಗೌರಿ ಇನ್ನೂ ಬಂದಿಲ್ಲ."

ತಾಯಿ ಉಸುರಿದಳು: " ಹೊತ್ತು ಕಂತುತ್ತಾ ಬಂತು."

" ಅಡವಿಯಲ್ಲಿ ಹುಲಿಯೊಂದು ಇದೆಯಂತೆ. ಮೊನ್ನೆ ಅಜ್ಜಿ ಕಾರ್ಯಪ್ಪ ಮಾವನ ಕಡಸೊಂದನ್ನು ಹೊಡೆದು ಹಾಕಿತಂತೆ."

"ಹಸುವನ್ನು ಹುಡುಕಿ ಹೊಡೆದುಕೊಂಡು ಬರಲು ಮನೆಯಲ್ಲಿ ಗಂಡಸರೂ ಇಲ್ಲ."

"ಅದಕ್ಕೇನವ್ವ," ಜೋಂದು ದಿಟ್ಟತನದ ಸ್ವರದಲ್ಲಿ ಮಾರ್ನುಡಿದಳು. "ನಾನು ಹೋಗಿ ಗೌರಿಯನ್ನು ಹುಡುಕಿ ಹೊಡೆದುಕೊಂಡು ಬರುವೆನು."

"ಅಡವಿಯಲ್ಲಿ ಹುಲಿ ಇದೇಂತ ನೀನೇ ಹೇಳಿದೆಯಲ್ಲ?

"ಹುಲಿ ನನ್ನ ಏನೂ ಮಾಡದು." ಸೆತ್ತಿ ಮತ್ತು ಕಂಕುಳ ಗಳಲ್ಲಿದ್ದ ಬಿಂದಿಗೆಗಳನ್ನು ಇಳಿಸುತ್ತಾ ಜೋಂದು ಹೇಳಿದಳು: "ಅಲ್ಲದೆ ಹೊತ್ತು ಕಂತುವ ವೇಳೆಗೆ ಬಂದುಬಿಡುತ್ತೇನೆ."

"ನೀನು ಗೌರಿಯನ್ನು ಅಟ್ಟಿಕೊಂಡು ಬರುವಷ್ಟರಲ್ಲಿ, ನಾನು ಬೆಳ್ಳೇರಿ ತೋಟಕ್ಕೆ ನೀರೆರೆದು ಮುಗಿಸುತ್ತೇನೆ." ಮಾಚವ್ವ ಮಗಳು ಕೆಳಗಿರಿಸಿದ ಬಿಂದಿಗೆಗಳನ್ನು ಎತ್ತಿಕೊಂಡಳು: "ನೋಡು, ನೀನು ಒಬ್ಬಳೇ ಹೋಗಬೇಡ. ಜತೆಯಲ್ಲಿ ಬೊಳ್ಳು ನಾಯಿಯನ್ನು ಕರೆದುಕೋ."

ಜೋಂದು ಕೈಯಲ್ಲೊಂದು ದೊಣ್ಣೆಯನ್ನು ಹಿಡಿದು, ಜತೆಯಲ್ಲಿ ಬೊಳ್ಳು ನಾಯಿಯನ್ನು ಕರೆದುಕೊಂಡು, ಗೌರಿಯನ್ನು ಅರಸಲು ಹೊರಟಳು. ಅವಳು ಮನೆಯ ಹಿಂದಣ ಗುಡ್ಡವನ್ನೇರಿ ಅಡವಿಯನ್ನು ಸೇರಿದಳು. ಅವಳು ದೊಡ್ಡದನಿಯಲ್ಲಿ "ಗೌರೀ, ಗೌರೀ" ಎಂದು ಹಸುವಿನ ಹೆಸರು ಹಿಡಿದು ಕೂಗುತ್ತಾ ಮುಂದೆ ಸಾಗಿದಳು.

ಜೋಂದುವಿನ ಹೆಜ್ಜೆಗಳ ಸದ್ದು ಮತ್ತು ದನಿಗಳನ್ನು ಕೇಳಿ, ಗಿಡಗಳಲ್ಲಿ ನೆಲೆಸಿದ್ದ ಹಕ್ಕಿಗಳು ಹಾರಿಹೋದವು. ಅಳಿಲುಗಳು ದೂರ ಸರಿದುವು. ಕೊಂಬೆಗಳಲ್ಲಿ ನೆಲಸಿದ್ದ ಮಂಗಗಳು ಹಲ್ಲು ಕಿರಿದು ದೊಡ್ಡ ದನಿಯಲ್ಲಿ ಕಿರುಚಿದುವು. ಪೊದೆಯ ಸಂದಿನಲ್ಲಿ ಇಲಿಯೊಂದನ್ನು ಅರಿ-ಸುಂಗಿದ್ದ ಕೇರೆ ಹಾವು, ಭೀತಿಯಿಂದ ಸರಸರನೆ ಹರಿಸೋಡಿತು. ಪೊದೆ ಗಳ ಎಡೆಯಲ್ಲಿದ್ದ ಹಸಿರು ಹುಲ್ಲನ್ನು ಮೇಯುತ್ತಿದ್ದ ನೊಲವೊಂದನ್ನು ಕಂಡು ಬೊಳ್ಳುನಾಯಿ ಅದನ್ನು ಬೆನ್ನಟ್ಟಿಕೊಂಡು ಹೋಯಿತು. ಆದರೆ ನಾಯ ಬಾಯಿಗೆ ನೊಲ ಸಿಗಲಿಲ್ಲ. ಅದು ಕುಪ್ಪಳಿಸಿ ನೆಗೆದು ಗಿಡಗಳ ಸಂದಿನಲ್ಲಿ ಮರೆಯಾಯಿತು.

ಗೌರಿ ಜೋಂದುವಿನ ಕಣ್ಣುಗಳಿಗೆ ಬೀಳಲಿಲ್ಲ. ಅಡವಿಯಲ್ಲಿ ಸುತ್ತಾಡಿ ಜೋಂದುವಿಗೆ ಸಾಕಾಯಿತು. ಬಯಲಾಚೆ ಇನ್ನೊಂದು ಕಾಡಿದೆ; ಗೌರಿ ಅಲ್ಲಿರಬಹುದೇನೋ—ಎಂಬ ಸಂದೇಹ ಜೋಂದುವಿನಲ್ಲಿ ತಲೆದೋರಿತು. ಅವಳು ಅಡವಿಯಿಂದ ಬಯಲಿಗಿಳಿದಳು. ಅವಳು ಗದ್ದೆಗಳನ್ನು ಅಡ್ಡಹಾಯ್ದಳು. ಬಯಲಿನಲ್ಲಿಯೂ ಗೌರಿ ಕಣ್ಣಿಗೆ ಬೀಳಲಿಲ್ಲ. ಅವಳು ಮರಳಿ ಬಯಲಿನಿಂದೇರಿ ಎರಡನೆಯ ಅಡವಿ ಯನ್ನು ಹೊಕ್ಕಳು. ಅವಳು ಗೌರಿಯ ಹೆಸರನ್ನೆತ್ತಿ ಕೂಗುತ್ತಾ ಅಡವಿಯಲ್ಲಿ ಸಾಗಿದಳು.

ಆರೆಪ್ಪೈಲಿನಷ್ಟು ದೂರ ಹೋದಾಗ, ಗೌರಿ ಜೋಂದುವಿಗೆ ಗೋಚರಿಸಿತು. ಅಡವಿಯ ನಡುವೆ ಇರುವ ಸಣ್ಣ ಮಾಳದಲ್ಲಿ ಹಸು ನುಲಗಿ, ಹೂಬಿಸಿಲಿಗೆ ಮೈಯೊಡ್ಡಿ ಮೆಲುಕು ಹಾಕುತ್ತಿತ್ತು.

ಗೌರಿಯನ್ನು ಕಂಡಾಗ ಜೋಂದುವಿಗೆ ಸಮಾಧಾನವಾಯಿತು. ಅವಳು ಹಸುವಿನ ಹತ್ತಿರ ಹೋಗಿ ಕೈಯಿಂದ ಬೆನ್ನನ್ನು ಸವರಿ, "ಗೌರಿ, ನೀನು ನನ್ನ ಎಷ್ಟು ಅಲೆಯಿಸಿಬಿಟ್ಟೆ! ಕಾಡಿನಲ್ಲಿ ಸುತ್ತಾಡಿ ನನ್ನ ಪಾದಗಳು ತೂತಾದುವು!" ಎಂದು ಉದ್ಗರಿಸಿದಳು.

"ಈ ಬಿರುಬೇಸಗೆಯಲ್ಲಿ ಪೊದೆಗಳ ಸಂದುಗೊಂದುಗಳಲ್ಲಿ ಹಿಡಿ ಹಸುರು ಅರಸಿ, ಅರಸಿ ನನ್ನ ಕಾಲುಗಳೂ ಸೋತು ಸುಣ್ಣವಾದುವು" ಎಂದು ನೊಂದ ದನಿಯಲ್ಲಿ ಉತ್ತರಿಸುವಂತೆ, ಗೌರಿ ಜೋಂದುವಿನ ಮೋರೆಯತ್ತ ಕಣ್ಣೋಡಿಸಿತು.

"ಏಳು, ಹೊತ್ತು ಕಂತುತ್ತಾ ಬಂತು." ಜೋಂದು ಮಲಗಿದ್ದ ಹಸುವನ್ನು ಕೈಯಿಂದ ತಟ್ಟಿ ಎಬ್ಬಿಸಿದಳು. "ಹುಲಿಯ ಅಂಜಿಕೆ ಸಹ ಇಲ್ಲದೆ ನೀನು ಅಡವಿಯಲ್ಲಿ ಹಾಯಾಗಿ ಮಲಗಿರುವೆಯಲ್ಲ!"

ಅಡವಿಯನ್ನು ಅಡ್ಡ ಸೀಳಿ ಹೋದರೆ ಮನೆ ಬಹು ಸಮೀಪ ವಾಗುವುದು. ಜೋಂದು ಹಸುವನ್ನು ಅಟ್ಟಿಕೊಂಡು ಅಡವಿಯನ್ನು ಅಡ್ಡ ಹಾಯ್ದಳು. ಬೊಳ್ಳುನಾಯಿ ಆಕೆಯನ್ನು ಹಿಂಬಾಲಿಸಿತು.

ಐನೂರು ಗಜಗಳಷ್ಟು ದೂರ ಜೋಂದು ಅಡವಿಯಲ್ಲಿ ಸಾಗಿರ ಬಹುದು. ಅಷ್ಟರಲ್ಲಿ ಬೊಳ್ಳುನಾಯಿ ಗಾಳಿಯನ್ನೊಮ್ಮೆ ಮೂಸಿ ನೋಡಿ, ಬಕ್ ಬೌ ಎಂದು ಉಚ್ಚದನಿಯಲ್ಲಿ ಬಗುಳಿತು. ಗೌರಿ ಭೀತಿ ನೆರೆವ ಕಣ್ಣುಗಳಿಂದ ಒಡತಿಯನ್ನೊಮ್ಮೆ ದಿಟ್ಟಿಸಿ ನೋಡಿತು; ತಲೆಯನ್ನು ಮುಂದೆ ಚಾಚಿ, ಬಾಲವನ್ನು ನೆಗಹಿ ನೆಗೆದೋಡಿತು. ಹಸು ಗಾಬರಿಗೊಂಡು ಓಡಿದುದನ್ನು ಕಂಡು ಜೋಂದುವಿಗೆ ಆಶ್ಚರ್ಯ ವಾಯಿತು. ಗೌರಿ ಹಟ್ಟಿಗೆ ಬಾರದೆ ಇರದು— ಎಂದು ಆಲೋಚಿಸುತ್ತಾ ಅವಳು ಮುಂದೆ ಸಾಗಿದಳು.

ಜೋಂದು ಹತ್ತು ಮಾರು ಮುಂದೆ ಸರಿದಾಗ, ಇನ್ನೊಂದು ಪುಟ್ಟ ಮಾಳ ಅವಳ ಕಣ್ಣುಗಳಿಗೆ ಬಿತ್ತು. ಅವಳು ಮಾಳವನ್ನು ಅಡ್ಡಹಾಯ್ದು ಗದ್ದೆ ಬಯಲಿಗೆ ಇಳಿಯುವೆನೆಂದು ಹೆಜ್ಜೆಯನ್ನು ಮುಂದಿರಿಸಿದಳು. ಆದರೆ ಬೊಳ್ಳುನಾಯಿ "ಮುಂದೆ ಹೋಗಬೇಡ; ಅಪಾಯವಿದೆ." ಎಂದು ಜೇಳಿ, ಆಕೆಯನ್ನು ತಡೆಯುವಂತೆ ಕಾಲು ಗಳಿಗೆ ಸುತ್ತು ಬಂದು ಬಗುಳತೊಡಗಿತು.

ನಾಯಿ ನೋಡುತ್ತಿದ್ದ ದಿಕ್ಕಿಗೆ ಜೋಂದು ದೃಷ್ಟಿ ಹೊರಳಿಸಿ ದಳು. ಅವಳ ಕಣ್ಣುಗಳಿಗೆ ಬಿದ್ದ ದೃಶ್ಯ ಆಕೆ ಮುಂದಿಟ್ಟ ಹೆಜ್ಜೆ ಯನ್ನು ಹಿಂದೆ ಎಳೆಯುವಂತೆ ಮಾಡಿತು. ಅವಳು ನಾಲ್ಕು ಹೆಜ್ಜೆ ಹಿಂದೆ ಸರಿದು ಪೊದೆಯ ಮರೆಯಲ್ಲಿ ನಿಂತು ನೋಡಿದಳು.

ಅಲ್ಲಿ ಕಂತುವ ಸೂರ್ಯನ ನಿಡುಕಿರಣಗಳಿಗೆ ಮೈಯೊಡ್ಡಿ ದೊಡ್ಡ ಹುಲಿಯೊಂದು ಅಡ್ಡಲಾಗಿ ಮಲಗಿತ್ತು. ಬಿಸಿಲಲ್ಲಿ ಮೈ ಮೇಲಿನ ಕಪ್ಪು ಮತ್ತು ಹಳದಿ ಪಟ್ಟೆಗಳು ಎದ್ದು ತೋರುತ್ತಿದ್ದುವು. ಬೊಳ್ಳು ಹುಲಿಯನ್ನು ನೋಡುತ್ತಾ ಉಚ್ಚದನಿಯಲ್ಲಿ ಬೊಗಳುತ್ತಿತ್ತು. ನಿದ್ದಿಸುತ್ತಿದ್ದ ಹುಲಿ ಎಚ್ಚತ್ತು ತನ್ನ ನಿದ್ದೆಗೆಡಿಸಿದ ನಾಯಿಯ ಮೇಲೆ ಎರಗೀತು— ಎಂದು ಜೋಂದುವಿನ ಎದೆ ತಲ್ಲಣಿಸಿಹೋಯಿತು.

ಆದರೆ ಹುಲಿ ಮಿಸುಕಾಡಲಿಲ್ಲ. ಆದು ಮಲಗಿದಲ್ಲಿಂದ ಏಳಲಿಲ್ಲ. ಹುಲಿ ಕದಲದುದನ್ನು ಕಂಡು ಬೊಳ್ಳುವಿಗೆ ಧೈರ್ಯಬಂತು. ಆದು ನಾಲ್ಕು ಹೆಜ್ಜೆ ಮುಂದೆ ಸರಿದು ಬಗುಳಿತು. ಆದರೆ ಹುಲಿ ಎಚ್ಚತ್ತು ಏಳುಗಲಿಲ್ಲ. ನಾಯಿಯು ಕೆಚ್ಚುಕೊನರಿ ಕುಡಿಯೊಡೆದಿತು. ಆದು ನುಂದೆ ಸರಿದು ಹುಲಿಯ ಹತ್ತಿರಕ್ಕೆ ಬಂದಿತು. ಈಗ ನಾಯಿಗೂ ಹುಲಿಗೂ ಇದ್ದ ಅಂತರ ನಾಲ್ಕೇ ಮೂರು. ಆದರೂ ಹುಲಿ ನಾಯಿಯ ಮೇಲೆ ಕೈ ಮಾಡಲೆಂದು ಏಳಲಿಲ್ಲ.

ಆದು ಜೀವವಿರುವ ಹುಲಿಯಲ್ಲ; ಸತ್ತ ಹುಲಿ— ಎಂಬ ಜನುಮಾನ ಜೋಂದುವಿನಲ್ಲಿ ಮೂಡಿತು. ಆಕೆಯ ಎದೆಯ ತುಡಿತ ನಿಧಾನವಾಯಿತು. ಆವಳು ಪೊದೆಯ ಮರೆಯಿಂದ ಸರಿದು ಹೊರಬಂದಳು. ನಾಯಿ ಹತ್ತಿರ ನಿಂತು ಎಷ್ಟು ಬೊಗುಳಿದರೂ ಹುಲಿ ಮಾತ್ರ ಕಣ್ಣು ತೆರೆಯಲಿಲ್ಲ. ಆವಳು ಹತ್ತಿರ ಸರಿದಳು. ಆವಳ ಊಹೆಯಂತೆ ಆದು ಸತ್ತ ಹುಲಿಯಾಗಿತ್ತು. ಆದರ ನೆತ್ತಿ ಸಿಡಿದು ಮೆದುಳು ನಾಲ್ಕು ದಿಕ್ಕುಗಳಿಗೆ ಜಿಲ್ಲಿತ್ತು. ದೇಹದಿಂದ ಬಸಿವ ನೆತ್ತರಲ್ಲಿ ಹುಲಿಯ ಮೈ ಎಲ್ಲ ತೊಯ್ದುಹೋಗಿತ್ತು. ಆದು ಇವ್ವಲ್ಲಿಂದ ನಾಲ್ಕು ಮೂರು ದೂರವಲ್ಲಿ ನಾಯಿಯೊಂದು ಸತ್ತುಬಿದ್ದಿತ್ತು. ಇನ್ನೊಂದು ಪಾರ್ಶ್ವದಲ್ಲಿ ಗಂಡುಸೊಬ್ಬ ಮೈಮರೆತು ಬಿದ್ದಿದ್ದ. ಹೆಗಲಮೇಲೆ ಸೆಕ್ಕಿಸಿದ ಚೀಲ ದೂರ ಉರುಳಿ ಬಿದ್ದಿತು. ಬಲಗೈ ಬಂದೂಕಿನ ಮೇಲಿತ್ತು.

ಜೋಂದು ಬಿದ್ದ ಮನುಷ್ಯನ ಮೊಗದತ್ತ ಕಣ್ಣು ಹೊರಳಿಸಿದಳು. ಆಕೆಗೆ ಅವನ ಗುರುತು ಹತ್ತಿತು. ಆತ ನೆರೆಯ ತೋಟಗಾರ ತಿಮ್ಮುಡು; ತಮ್ಮ ಮನೆಗೆ ಹಬ್ಬ ಔತಣಗಳ ವೇಳೆಯಲ್ಲಿ ಆಗಾಗ ಬರುತ್ತಿದ್ದವನು,-ಎಂಬುದು ಆಕೆಗೆ ಅರಿವಾಯಿತು. ಆಕೆಯ ಅಂತರಂಗದಲ್ಲಿ ಭಯ-ವಿಸ್ಮಯಗಳ ಅಲೆಗಳು ಎದ್ದುವು. ಆತ ಹುಲಿಯೊಡನೆ ಹೋರಿ ಬಿದ್ದಿರಬೇಕೆಂದು ಅವಳು ಊಹಿಸಿದಳು.

ಜೋಂದು ಆತನ ಪಕ್ಕಕ್ಕೆ ಸರಿದಳು. ಮೆಲ್ಲನೆ ಆತನ ಎದೆಯ ಮೇಲೆ ಕೈ ಇರಿಸಿ ನೋಡಿದಳು. ಆತನ ಮೈ ಬಿಸಿಯಾಗಿತ್ತು. ಎದೆ ತುಡಿದುಕೊಳ್ಳುತ್ತಿತ್ತು. ಆತ ಮಡಿದಿಲ್ಲ: ಬವಳಿ ಬಂದು ವಿಸ್ಮೃತಿ ಹೊಂದಿದ್ದಾನೆ– ಎಂದು ಅವಳು ಅರಿತಳು. ಆಕೆಯ ಕಣ್ಣುಗಳು ಅವನ ಎಡತೋಳಿನೆಡೆಗೆ ಹೊರಳಿದುವು. ಹುಲಿ ಬಗಿದ ಗಾಯದಿಂದ ಇನ್ನೂ ನೆತ್ತರು ಒಸರುತ್ತಿದ್ದಿತು. ಅವಳು ಸೀರೆಯ ಸೆರಗನ್ನು ಹರಿದು ಆತನ ತೋಳಿಗೆ ಸುತ್ತು ತಂದು, ಗಾಯವನ್ನು ಬಿಗಿಯಾಗಿ ಕಟ್ಟಿದಳು. ಈಗ ನೆತ್ತರು ಒಸರುವುದು ನಿಂತಿತು.

ಗದ್ದೆಯಂಚಿನಲ್ಲಿ ತೋಡೊಂದು ಹರಿಯುತ್ತಿದ್ದಿತು. ತೋಡಿನಿಂದ ನೀರು ತಂದು ತಿಮ್ಮುಡುವಿನ ನೆತ್ತಿ ಮತ್ತು ಮೊಗಗಳ ಮೇಲೆ ಚಿಮುಕಿಸಿದರೆ ಪ್ರಜ್ಞೆ ಬಂದೀತು ಎಂದು ಜೋಂದು ಆಲೋಚಿಸಿದಳು. ಆದರೆ ನೀರನ್ನು ತುಂಬಿ ತರಲು ಪಾತ್ರೆಯಿಲ್ಲ. ಅವಳು ತಲೆಗೆ ಸುತ್ತಿದ ಮುಂಡೆವಸ್ತ್ರವನ್ನೇ ಬಿಚ್ಚಿ, ನೀರಲ್ಲಿ ಎದ್ದಿ ತರುವೆನೆಂದು ಆ ಕೆರುಗುಡ್ಡವನ್ನಿಳದು ಬಯಲಂಚಿಗೆ ಹೋದಳು.

ಅದೊಂದು ಕೊಲ್ಲಿಯ ಸ್ಥಳ. ಅವಳು ಎಣಿಸಿದಂತ ಅಲ್ಲೊಂದು ತೋಡು ಹರಿಯುತ್ತಿತ್ತು. ಕೊಲ್ಲಿಯ ಸ್ಥಳ ತಂಪಾಗಿದ್ದುದರಿಂದ, ಅಲ್ಲಿ ಕಾಡುಕೆಸುವಿನ ಗಿಡಗಳು ಬೆಳೆದಿದ್ದುವು. ಜೋಂದು ಎರಡು ದೊಡ್ಡ ಕೆಸುವಿನ ಎಲೆಗಳನ್ನು ಗಿಡದಿಂದ ಕಿತ್ತಳು. ನೆತ್ತಿಗೆ ಸುತ್ತಿದ ವಸ್ತ್ರವನ್ನು ಬಿಚ್ಚಿ ತೋಡುನೀರಲ್ಲಿ ಅದ್ದಿ ಹೆಗಲ ಮೇಲೆ ಹಾಕಿಕೊಂಡಳು. ಆ ಕೆಸುವಿನ ಎಲೆಗಳನ್ನು ದೊನ್ನೆ ಮಾಡಿ ನೀರು ತುಂಬಿಸಿ ತಂದಳು.

ಜೋಂದು ತಿಮ್ಮುಡುವಿನ ಮೋರೆ ಮತ್ತು ನೆತ್ತಿಗಳಿಗೆ ನೀರು ಚಿಮುಕಿಸಿದಳು. ಆತನು ತೊಟ್ಟ ಶರ್ಟಿನ ಗುಂಡಿಗಳನ್ನು ಬಿಚ್ಚಿ ತೊಡುಗೆಗಳನ್ನು ಸಡಲಿಸಿದಳು. ಅವಳು ಗಿಡದ ಗೆಲ್ಲುಗಳನ್ನು ಮುರಿದು ತಂದು, ಅವುಗಳನ್ನು ಬೀಸಿ ಗಾಳಿ ಹಾಕಿದಳು.

ಕೆಲವು ನಿಮಿಷಗಳಲ್ಲಿ ತಿಮ್ಮುಡುವಿಗೆ ಪ್ರಜ್ಞೆ ಬಂತು. ಆವನು ಮೆಲ್ಲನೆ ಕಣ್ದೆರೆದ. ತಾನು ಎಲ್ಲಿರುವೆನೆಂದು ಕಣ್ಣುಗಳನ್ನು ಅಗಲಿಸಿ ನೋಡಿದ. ತನಗೆ ಗಾಳಿ ಹಾಕುತ್ತಾ ಕುಳಿತ ಜೋಂದುವಿನ ನೇರಿಬಣ್ಣದ ಮೋರೆಯನ್ನು ನೋಡಿ, ಆವನಿಗೆ ವಿಸ್ಮಯವಾಯಿತು. ಆವನು "ಜೋಂದು, ನೀನೇಕೆ ಇಲ್ಲಿ ಬಂದೆ?" ಎಂದು ಕ್ಷೀಣಸ್ವರಲ್ಲಿ ಕೇಳಿದ.

"ನಾನು ಬಾರದಿದ್ದರೆ ನೀನು ಇರುಳು ನರಿಗಳ ಬಾಯಿಗೆ ಊಣಿಸಾಗುತ್ತಿದ್ದೆ." ಜೋಂದು ಪಡಿನುಡಿದಳು.

"ಹುಲಿ ಸತ್ತಿದೆಯೇ?"

"ನೋಡು, ನಿನ್ನ ಪಾದಗಳ ಬಳಿಯಲ್ಲಿ ಬಿದ್ದು ಹೊರಳುತ್ತಿದೆ."

ತಿಮ್ಮುಡು ಸತ್ತುಬಿದ್ದ ಹುಲಿಯನ್ನೊಮ್ಮೆ ನಿಟ್ಟಿಸಿ ನೋಡಿದ ಆತನ ಬಾಡಿದ ಮೋರೆಯ ಮೆಲೆ ಗೆಲುವಿನ ಹೂಬಿಸಿಲು ಕುಣಿದಾಡಿತು.

"ತಿಮ್ಮುಡು, ನೀನು ಇಲ್ಲಿಯೇ ಇರು. ನಾನು ಮನೆಗೆ ಓಡಿ ಹೋಗಿ ಅಪ್ಪನಿಗೆ ತಿಳಿಸುತ್ತೇನೆ. ಆತ ನಿನ್ನ ಎತ್ತಿಕೊಂಡ ಹೋಗಲು ಜನ ಕರೆತರುವನು.

"ಬೇಡ. ನಾನು ನಡೆಯಬಲ್ಲೆ." ತಿಮ್ಮುಡು ಮೆಲ್ಲನೆ ಎದ್ದು ನಿಂತ. "ನನಗೆ ಅಂತಹ ಪೆಟ್ಟೇನೂ ಆಗಿಲ್ಲ."

"ಹೆಗಲ ಮೇಲೊಂದು ದೊಡ್ಡ ಗಾಯವಿದೆಯಲ್ಲ!"

"ಅದೇ ಹುಲಿ ಪರಚಿದುದು." ತಿಮ್ಮುಡು ಉತ್ತರಿಸಿದ "ಅದಲ್ಲದೆ ಹೆಚ್ಚಿನ ಗಾಯಗಳೇನೂ ಆಗಿಲ್ಲ."

"ನಾನು ನಿನ್ನ ಸಂಚಿ ಮತ್ತು ಬಂದೂಕುಗಳನ್ನು ತೆಗೆದ ಕೊಳ್ಳುವೆನು."

"ಜೋಕೆ! ಸಂಚಿಯೊಳಗೆ ಹುಲಿಮರಿ ಇದೆ."

"ಹುಲಿಮರಿ!" ಜೋಂದುವಿನ ಕಣ್ಣುಗಳಿಂದ ವಿಸ್ಮಯ ಕಣಗಳು ಸಿಡಿದುವು. ಅವಳು ಸಂಚಿಯ ಬಾಯ್ದೆರೆದು ನೋಡಿದಳೆ

ಸಂಚಿಯೊಳಗೆ ತಿಮ್ಮುಡು ಹೇಳಿದಂತೆ ಕೈಕಾಲುಗಳನ್ನು ಕಟ್ಟಿ ಹಾಕಿದ ಹುಲಿಮರಿ ಇತ್ತು. ಅದು ಭಯ ತುಂಬಿದ ಕಣ್ಣುಗಳಿಂದ ಜೋಂದುವಿನ ಮುಖವನ್ನು ನೋಡಿತು.

"ನೀನು ಹುಲಿಮರಿಯನ್ನು ಹಿಡಿದುವಕ್ಕೇ ತಾಯಿ ಹುಲಿ ರೇಗಿ ನಿನ್ನ ಮೇಲೆ ಎರಗಿತು. ಅದು ನಿನ್ನ ಸೀಳಿ ಹಾಕದೆ ಇರೋದು ನಿನ್ನ ಪುಣ್ಯ.!"

"ಸೀಳಿ ಹಾಕುತ್ತಿತ್ತು. ಕೂದಲೆಳೆಯಷ್ಟು ತಪ್ಪಿದ್ದರೆ, ಇಲ್ಲಿ ಹುಲಿ ಸತ್ತು ಬೀಳುವುದರ ಬದಲು ನಾನು ಸತ್ತು ಬಿದ್ದಿರುತ್ತಿದ್ದೆ."

"ಹೊತ್ತು ಆಗಲೇ ಕಂತಿತು ಬಾ." ಜೋಂದು ಸಂಚಿಯನ್ನು ಎಡಗೈಯಲ್ಲಿ ಹಿಡಿದುಕೊಂಡಳು. ಬಲಗೈಯಲ್ಲಿ ತಿಮ್ಮುಡುವಿನ ಕೋವಿಯನ್ನು ಎತ್ತಿಕೊಂಡಳು.

ತಿಮ್ಮುಡು ಎದ್ದು ನಿಂತ. ಗಾಯದಿಂದ ನೆತ್ತರು ಬಸಿದುದರಿಂದ ಅವನ ಮೈ ನಿಶ್ರಾಣಗೊಂಡಿತ್ತು. ಆದುದರಿಂದ ಅವನು ಹೆಜ್ಜೆಗಳನ್ನು ಇರಿಸುವಾಗ ಕಾಲುಗಳು ನಡುಗಿದುವು. ಅವನು ತಪ್ಪುಹೆಜ್ಜೆಗಳನ್ನಿರಿಸ ತೊಡಗಿದ.

"ತಿಮ್ಮುಡು, ನಿನ್ನ ಮೈಯಿಂದ ರಕ್ತ ಸೋರಿದುದರಿಂದ ನೀನು ಕಂಗಾಲಾಗಿ ಹೋಗಿದ್ದೀಯೆ!" ಜೋಂದು ಉಸುರಿದಳು: "ನೀನು ನನ್ನ ಹೆಗಲನ್ನು ಹಿಡಿದುಕೋ."

ತನಗೆ ಆಧಾರವಿಲ್ಲದೆ ಹೋದರೆ ತೂಕ ತಪ್ಪಿ ಬಿದ್ದೇನೆಂದು ತಿಮ್ಮುಡುವಿಗೆ ಎನಿಸಿತು. ಅವನು ಪ್ರತಿ ಹೆಜ್ಜೆಯ ಜೋಂದುವಿನ ಹೆಗಲಿಗೆ ಕೈಹಾಕಿ ಹಿಡಿದುಕೊಂಡ. ಇಬ್ಬರೂ ಗುಡ್ಡವನ್ನಿಳಿದು ಬಯಲಿಗೆ ಬಂದರು. ಬೊಳ್ಳುನಾಯಿ ಅವರನ್ನು ಹಿಂಬಾಲಿಸಿತು.

* * * *

ಜೋಂದು ತಿಮ್ಮುಡುವನ್ನು ಮನೆಗೆ ಕರೆದುಕೊಂಡು ಹೋವಾಗ ಗೋಣಿಕೊಪ್ಪಲು ನಂತೆಗೆ ತೆರಳಿದ್ದ ಜೆಂಗಪ್ಪ ಮರಳಿ ಬಂದಿದ್ದ. ನೆರೆಮನೆಯ ತಿಮ್ಮುಡುವಿಗೆ ಹುಲಿಯಿಂದ ಕೇಡೊದಗಿತೆಂದು ತಿಳಿದಾಗ ಅವನಿಗೆ ತುಂಬಾ ಕಳವಳವಾಯಿತು. ಗೆಳೆಯನ ಸೇವೆ-ಶುಶ್ರೂಷೆಗಳಿಗೆ ತಾನೇ ಟೊಂಕಕಟ್ಟಿ ನಿಂತ. ಅವನು ದಣಿದು ಕಂಗಾಲಾದ ತಿಮ್ಮುಡುವಿಗೆ ಬಿಸಿ ಹಾಲು ಕುಡಿಸಿ, ಹಾಸಿಗೆಯ ಮೇಲೆ ಮಲಗಿಸಿದ. ನೋವಿನ ಬಾಧೆಯಿಂದ ಅತನ ನಿದ್ದೆಗೆ ಭಂಗಬಾರದಂತೆ ನಾಲ್ಕು ಬೆರಳು ಕಳ್ಳನ್ನು ಎರೆದುಕೊಟ್ಟ. ಇರುಳು ತಿಮ್ಮುಡು ಸುಖನಿದ್ರೆಯನ್ನು ಮಾಡಿದ.

ಜೆಂಗಪ್ಪ ಮನೆಯ ಆಳುಗಳನ್ನು ಕೂಡಿಸಿ ಕಾಡಿನಲ್ಲಿ ಸತ್ತು ಬಿದ್ದ ಹುಲಿಯನ್ನು ಹೊರಿಸಿ ತರಿಸಿದ. ಆ ಇರುಳೇ ಹುಲಿಯ ಚರ್ಮವನ್ನು ಸುಲಿದಾಯಿತು.

ಮರುದಿನ ಜೆಂಗಪ್ಪ ತಿಮ್ಮುಡುವನ್ನು ಆಳುಗಳಿಂದ ಹೊರಿಸಿ ಗೋಣಿಕೊಪ್ಪಲು ಆಸ್ಪತ್ರೆಗೆ ಸಾಗಿಸಿದ ಅಲ್ಲಿ ಡಾಕ್ಟರರು ಗಾಯವನ್ನು ತೊಳೆದು ಮದ್ದುಹಾಕಿ ಕಟ್ಟಿದರು. ನಂಜಾಗದಂತೆ ಅವನ ಮೈಗೆ ಸೂಜಿಮದ್ದನ್ನು ಚುಚ್ಚಿದರು. ಒಂದು ವಾರದ ವರೆಗೆ ತಿಮ್ಮುಡು ಆಸ್ಪತ್ರೆಯಲ್ಲೇ ಇರಬೇಕೆಂದು ಹೇಳಿದರು.

ಆಸ್ಪತ್ರೆಯಲ್ಲಿ ತಿಮ್ಮುಡುವಿನ ಶುಶ್ರೂಷೆ ಮಾಡಲು ತಾನೇ ನಿಲ್ಲುವೆನೆಂದು ಜೋಂದು ಹಟತೊಟ್ಟಳು. ತಂದೆ ಆಕೆ ಇರುಳು ಉಳಿದುಕೊಳ್ಳಲು ನೆಂಟರ ಮನೆಯಲ್ಲಿ ಏರ್ಪಾಡು ಮಾಡಿದ. ಜೋಂದು ಅಕ್ಕರೆಯಿಂದ ತಿಮ್ಮುಡುವಿಗೆ ಹೊತ್ತಿಗೆ ಸರಿಯಾಗಿ ಊಟ ಉಣಿಸುಗಳನ್ನು ಕೊಟ್ಟು ಉಪಚರಿಸಿದಳು; ಅತನ ಕೊಳೆವಸ್ತ್ರಗಳನ್ನು ಒಗೆದು ಮಡಿಮಾಡಿ ಶುಶ್ರೂಷೆ ಎಸಗಿದಳು.

ಆಸ್ಪತ್ರೆಯಲ್ಲಿದ್ದಾಗ ತಿಮ್ಮುಡುವಿಗೆ ಜೋಂದುವಿನ ಅಂತರಂಗ ದರ್ಶನವಾಯಿತು. ಆಕೆಯ ಮೈಬಣ್ಣ ಕಪ್ಪಾಗಿದ್ದರೂ, ಆಕೆಯ ಅಂತರಂಗ ಸ್ನೇಹ ಅನುಕಂಪೆಗಳೆಂಬ ಬೆಳುದಿಂಗಳ ಮಡುವಾಗಿದೆ ಎಂಬುದು ಅವನಿಗೆ ತಿಳಿಯಿತು. ತನ್ನ ಆರೈಕೆಯಲ್ಲಿ ಆಕೆ ತೋರಿದ ಆಸಕ್ತಿ ಅವನ ಬಗೆಯನ್ನು ಸೂರೆಗೊಂಡಿತು.

ಒಂದು ವಾರದಲ್ಲಿ ತಿಮ್ಮುಡು ಆಸ್ಪತ್ರೆಯಿಂದ ಮರಳಿದ. ಆದರೆ ಜಂಗಪ್ಪ ಅತನನ್ನು ಮನೆಗೆ ಹೋಗಲು ಬಿಡಲಿಲ್ಲ. ಅವನು "ತಿಮ್ಮುಡು, ನಿನ್ನ ಮನೆಗೆ ಹೋಗಲು ಆಸ್ಟೇಕೆ ಆತುರ? ನಿನ್ನ ಹೆಗಲಗಾಯ ಇನ್ನೂ ಪೂರ್ಣವಾಗಿ ಮಾಯಲಿಲ್ಲ. ಆ ಮಲೆಯಾಳಿ ರಾಮು ನಿನ್ನ ಏನು ನೋಡಿಕೊಂಡಾನು; ಇಲ್ಲಿಯೇ ನಾಲ್ಕು ದಿನ ಇದ್ದು ಹೋಗು." ಎಂದು ಹೇಳಿ ತಿಮ್ಮುಡುವನ್ನು ತಡೆದು ನಿಲ್ಲಿಸಿಕೊಂಡ.

ಅವನ ಮಾತು ಮೀರಲಾಗದೆ ತಿಮ್ಮುಡು, ಜಂಗಪ್ಪನ ಮನೆಯಲ್ಲಿ ಇನ್ನು ನಾಕ್ಕು ದಿನ ನಿಂತ. ಅವನ ಸೇವೆಗೆ ಜೋಂದು ಟೊಂಕಕಟ್ಟಿ ನಿಂತಳು. ಆಸ್ಪತ್ರೆಯಲ್ಲಿ ನೀರು ಕಾಣದಿದ್ದ ಅತನ ಮೈಗೆ ಅವಳು ನೀರೆರೆದು ಮಿಾಸಿದಳು; ಅವನ ಊಟ ಉಪಚಾರಗಳನ್ನು ನೋಡಿಕೊಂಡಳು. ಆಕೆಯ ಸೇವೆಯನ್ನು ಕೈಗೊಳ್ಳುವುದು ಅವನಿಗೊಂದು ಆಹ್ಲಾದಕರ ಸಂಗತಿಯಾಯಿತು.

* * * *

ತಿಮ್ಮುಡುವಿನ ಹೆಗಲ ಗಾಯ ಮಾಸಿಯಾಯಿತು. ಅವನು ಊರ ಜನರನ್ನು ಸಂಭ್ರಮದಿಂದ ಆಹ್ವಾನಿಸಿ, ಹುಲಿ ಮದುವೆಯನ್ನು ನಡೆಸಿದ. ಮುಂದೆರಡು ತಿಂಗಳಲ್ಲಿ ಅವನ ಮದುವೆಯೂ ನಡೆದು ಹೋಯಿತು. ಅವನ ಮದುವೆಯಾದುದು ಜೋಂದುವನ್ನೇ ಆಗಿತ್ತು. ಹಿಂದೆ ಅವನು ಆ ಕಾಡಿಗೆ ಬಣ್ಣಿಸಿದ ಹುಡುಗಿಯನ್ನು ಯಾರು ಮದುವೆಯಾಗುತ್ತಾರೆಂದು ಕಡೆಗಣಿಸಿದ್ದನು. ಈಗ ಆ ಜೋಂದುನೇ ಮನೆಯನ್ನು ಬೆಳಗಲು ನವದಿಯಾಗಿ ಬಂದಿದ್ದಳು.

ಜೋಂದು ಆ ಪುಟ್ಟ ಸಂಸಾರವನ್ನು ಅಚ್ಚುಕಟ್ಟಾಗಿ ಸಾಗಿಸಿಕೊಂಡು ಹೋಗುತ್ತಿದ್ದಳು; ತಿಮ್ಮುಡುವಿನ ಬೇಕು-ಬೇಡಗಳನ್ನು ಅರಿತುಕೊಂಡು ಅತನಿಗೆ ಅನುಕೂಲಳಾಗಿ ನಡೆದುಕೊಳ್ಳುತ್ತಿದ್ದಳು.

ಆ ವರ್ಷ ಕೈಯಿಲ್ ಮುಹೂರ್ತ ಹಬ್ಬ ಕಳೆದ ಎರಡು ದಿನಗಳಲ್ಲಿ ಬೊಳ್ಳಿಕಟ್ಟೆ ಮತ್ತು ರಾಜು ಗೆಳೆಯನ ಮನೆಯಲ್ಲಿ ನಾಲ್ಕು ದಿನ

ಇದ್ದು ಹೋಗಲೆಂದು ಬಂದರು. ರಾಜುವಿಗೆ-ಹೆಚ್ಚು ಓದುಕಲಿಯದ ನೇರಿಲೆ ಬಣ್ಣದ ಜೋಂದುವನ್ನು ಗೆಳೆಯ ಮದುವೆಯಾದುದನ್ನು ಕಂಡು ಆಶ್ಚರ್ಯವಾಯಿತು. ಅವನು "ತಿಮ್ಮುಡು, ನೀನು ಈ ಕಾಡಿಗೆ ಬಣ್ಣದ ಹುಡುಗಿಯನ್ನು ಏನೆಂದು ಮೆಚ್ಚಿದೆ?" ಎಂದು ಕೇಳಿದ.

"ರಾಜು, ನಾನು ಆಕೆಯ ಮೈಬಣ್ಣವನ್ನು ನೋಡಿ ಮಂಗಲ ಮಾಡಿಕೊಳ್ಳಲಿಲ್ಲ;" ತಿಮ್ಮುಡು ಮಾರ್ನುಡಿದ: "ಆಕೆಯ ಮನಸ್ಸಿನ ಬಣ್ಣವನ್ನು ನೋಡಿ ಮದುವೆಯಾದೆ!"

ಹಿಂದೆ ಮನೆಗೆ ಗೆಳೆಯರು ಬಂದರೆ ಸಾಕು, ತಿಮ್ಮುಡು ಕೈಯಲ್ಲಿ ಕೋವಿಯನ್ನು ಹಿಡಿದುಕೊಂಡು, ಗೆಳೆಯರನ್ನು ಕರೆದುಕೊಂಡು ಬೇಟೆಗೆ ಹೊರಡುತ್ತಿದ್ದ, ಈಗ ಅವರು ನಾಲ್ಕು ದಿನ ತಿಮ್ಮುಡುವಿನ ಮನೆಯಲ್ಲಿ ಉಳಿದುಕೊಂಡರೂ, ಅವನು ಅವರ ಮುಂದೆ ಬೇಟೆಯ ಸುದ್ದಿಯನ್ನು ಎತ್ತಲಿಲ್ಲ. ಬೇಟೆಗೆ ಹೊರದುವ ಸನ್ನಾಹವನ್ನೂ ಮಾಡಲಿಲ್ಲ. ಗೆಳೆಯನ ಬೇಟೆಯ ಹುಚ್ಚು ಮಾಯವಾದುದನ್ನು ಕಂಡು ಬೊಳ್ಳಿಕಟ್ಟೆ ಮತ್ತು ರಾಜುಗಳಿಗೆ ಆಶ್ಚರ್ಯವಾಯಿತು.

"ನೋಡು, ಬೊಳ್ಳಿಕಟ್ಟೆ," ರಾಜು ನುಡಿದ: "ಈಗ ತಿಮ್ಮುಡು ಬೇಟೆಯ ಸುದ್ದಿಯನ್ನೇ ನಮ್ಮ ಮುಂದೆ ಎತ್ತುವುದಿಲ್ಲವಲ್ಲ?"

"ಅವನಿಗೆ ಇನ್ನೇಕೆ ಬೇಟೆ? ಅವನು ಬಂದು ಹೆಣ್ಣುಜಿಂಕೆಯನ್ನು ಬೇಟೆಯಾಡಿ ಮನೆಯ ಗೂಡೊಳಗೆ ಸೇರಿಸಿದ್ದಾನೆ!" ಬೊಳ್ಳಿಕಟ್ಟೆ ನಗುತ್ತಾ ಮಾರ್ನುಡಿದ: "ಇನ್ನೇಕೆ ಅವನಿಗೆ ಬೇಟೆಯ ಗೋಜು!"

ಅಷ್ಟರೆಲ್ಲಿ ತೋಟದಲ್ಲಿ ಆಳುಗಳಿಗೆ ಕೆಲಸ ಒಪ್ಪಿಸಲೆಂದು ಹೋಗಿದ್ದ ತಿಮ್ಮುಡು ಮನೆಗೆ ಬಂದ. ಬೊಳ್ಳಿಕಟ್ಟೆ "ತಿಮ್ಮುಡು, ನಾವು ಬಂದು ನಾಲ್ಕು ದಿನವಾದುವು. ನೀನೇಕೆ ನಮ್ಮನ್ನು ಬೇಟೆಯಾಡಲು ಕರೆದುಕೊಂಡು ಹೋಗುವುದಿಲ್ಲ?" ಎಂದು ಕೇಳಿದ.

"ನನ್ನ ಕೈ ಈಗ ತೆರವಾಗಿಲ್ಲ."

"ಅಂದರೆ?"

"ಕೋವಿಯನ್ನು ಹಿಡಿಯುತಿದ್ದ ಕೈ ಈಗ ಜೋಂದುವಿನ ಕೈ ಹಿಡಿಯಿತು!"

ನೆಂಟರಿಗೆ ಕಾಫಿ ಕೊಡಲೆಂದು ಕಾಫಿ ತುಂಬಿದ ಕಪ್ಪುಗಳನ್ನು ತಟ್ಟೆಯ ಮೇಲಿರಿಸಿ ಜೋಂದು ಒಳಮನೆಯಿಂದ ತರುತಿದ್ದಳು. ಆಕೆಯ ಕಿವಿಗಳಿಗೆ ಗಂಡನಾಡಿದ ಮಾತುಗಳು ಬಿದ್ದುವು. ಆಕೆಯ ನೇರಿಲೆ ಬಣ್ಣದ ತುಟಿಗಳ ಮೇಲೆ ನಗೆಯ ಮುಗುಳೊಂದು ಅರಳಿತು.

ಜಗಲಿಯಂಚಿನಲ್ಲಿ ಕಬ್ಬಿಣದ ಪಂಜರವೊಂದು ಇತ್ತು. ಆ ಪಂಜರದೊಳಗಿದ್ದ ಹುಲಿಮರಿ ಬಾಯ್ದೆರೆದು ಬಾಲವನ್ನು ಬೀಸುತ್ತಾ "ತಿಮ್ಮುಡು ಜೋಂದುವಿನ ಕೈ ಹಿಡಿಯುವಂತೆ ಮಾಡಿದವನು ನಾನು!" ಎಂದು ಕೂಗಿ ಹೇಳುವಂತೆ ಅಭಾಸವಾಯಿತು.

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ಸಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅಕ್ಕ
ಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ಸೀಮೆ ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಜರ್ಮನಿಯಲ್ಲಿ ದಕ್ಷಿಣಭಾರತದ ಬಗ್ಗೆ ಅಧ್ಯಯನ

ಡಾ. ವಾಲ್ಟರ್ ಬೈಫರ್*

ಧರ್ಮಪ್ರಚಾರದ ಉದ್ದೇಶದಿಂದ ಭಾರತಕ್ಕೆ ಬಂದವರಾದರೂ, ಜರ್ಮನಿಯ ಕ್ರೈಸ್ತ ವಿದ್ವಾಂಸರು, ದಕ್ಷಿಣ-ಭಾರತದ ಸಾಹಿತ್ಯ-ಸಂಸ್ಕೃತಿಗಳನ್ನು ಕಂಡು ಮೆಚ್ಚಿದ್ದಾರೆ. ತಮ್ಮ ರೀತಿಯಲ್ಲಿ ಅವುಗಳ ಸೊಗಸು-ಸೌಂದರ್ಯಗಳನ್ನು ಬೆಳಕಿಗೆ ತರುವ ಕಾರ್ಯವನ್ನು ಮಾಡಿದ್ದಾರೆ.

ಧರ್ಮ, ತತ್ವ ಹಾಗೂ ಸಾಹಿತ್ಯ— ಈ ಕ್ಷೇತ್ರಗಳಲ್ಲಿ ಭಾರತದ ಪ್ರಾಚೀನ ಪರಂಪರೆಯು ಐರೋಪ್ಯ ವಿದ್ವಾಂಸರಿಗೆ ಸಾರ್ವಕಾಲಿಕ ಆಕರ್ಷಣೆಯ ಹಾಗೂ ಅಧ್ಯಯನದ ವಿಷಯವಾಗಿದೆ. ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಭಾರತೀಯ ಸಂಸ್ಕೃತಿಶಾಸ್ತ್ರವು ಜ್ಞಾನ ಶೋಧನೆಯ ಒಂದು ಬೃಹತ್ ಶಾಖೆಯ ಅಂತಸ್ತನ್ನು ಪಡೆದಿದೆ. ಈ ಪಾಶ್ಚಾತ್ಯ ರಾಷ್ಟ್ರಗಳ ಪೈಕಿ ಜರ್ಮನಿಯು ಪ್ರಾಚೀನ ಭಾರತ ಸಂಸ್ಕೃತಿಯ ಸಂಸ್ಕೃತ ಹಾಗೂ ದ್ರಾವಿಡ ಅಂಶಗಳೆರಡರಲ್ಲೂ ನಡೆಸಿರುವ ಅಧ್ಯಯನವು ನಿರರ್ಗಳವೂ, ಆಳವೂ ಆಗಿದೆ. ವಿಶ್ವವಿಖ್ಯಾತ ಜರ್ಮನ್ ಕವಿಯಾದ ಗೂಯ್ಟೆಯು ಕಾಳಿದಾಸನ "ಶಾಕುಂತಲ"ವನ್ನು ಅದರ ಮೂಲಸ್ವರೂಪದಲ್ಲೇ ಓದುವ ಸಲುವಾಗಿ, ತನ್ನ ಅರವತ್ತನೇ ವಯಸ್ಸಿನಲ್ಲಿ ಸಂಸ್ಕೃತವನ್ನು ಕಲಿತನು; ಅನಂತರ ಅದರ ಸಾಹಿತ್ಯ ಸೌಂದರ್ಯವನ್ನು ಸವಿದಾಗ, ಸಂತೋಷದಿಂದ ಕುಣಿದಾಡಿದನು. ಭಾರತೀಯ ಸಂಸ್ಕೃತಿ ಶಾಸ್ತ್ರದ ಪ್ರಖ್ಯಾತ ಪ್ರವೀಣನಾದ ಮಾಕ್ಸ್‌ಮುಲ್ಲರನು, ವೇದಸಾಹಿತ್ಯಕ್ಕೆಂತ ಹೆಚ್ಚು ಗಾಢವಾದದ್ದನ್ನು ತಾನು ಯಾವಾಗಲೂ ಎಲ್ಲಿಯೂ ಓದಿಲ್ಲವೆಂದು ಸಾರಿದನು.

ಆದರೆ ಜರ್ಮನ್ ವಿದ್ವಾಂಸರು ಸಂಸ್ಕೃತದ ವೈಭವಕ್ಕೆ ಮಾರುಹೋಗಿ ಅದಕ್ಕೆ ತಮ್ಮ ಪ್ರಶಂಸೆಯನ್ನು ಸಲ್ಲಿಸುವುದಕ್ಕೆ ಮುಂಚೆಯೇ ಅವರು ದಕ್ಷಿಣಭಾರತವನ್ನು ಕಂಡುಕೊಂಡಿದ್ದರು. ತಮಿಳು, ಮಲೆಯಾಳ, ಕನ್ನಡ, ತುಳು ಸಾಹಿತ್ಯವನ್ನು ಒಳಗೊಂಡ ಈ ತೊಟ್ಟಿಲು, ಭಾರತದ ಸಾಂಪ್ರದಾಯಿಕ ಪರಂಪರೆಯ ಇತರ ಅಂಶಗಳೊಡನೆ ಸುಗಮವಾಗಿ ಮಿಲನಗೊಂಡು, ಇಡೀ ದೇಶದ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸ್ವರೂಪದ ಪ್ರತೀಕವಾಗಿದೆ.

೧೬೧೬ ರಲ್ಲಿ ನಾಲ್ಕಾಡಿ ಕ್ರಿಶ್ಚಿಯನ್ ಎಂಬ ಡೇನಿಷ್ ದೊರೆಯ ಡೇನಿಷ್ ಈಸ್ಟ್ ಏಷಿಯಾಟಿಕ್ ಕಂಪೆನಿ ಎಂಬ ಒಂದು ಸಂಸ್ಥೆಯ ಸ್ಥಾಪನೆಗೆ ಅನುಮತಿ ಇತ್ತನು. ಆಗಿನ ಕಾಲದಲ್ಲಿ ಡೆನ್ಮಾರ್ಕು ಜರ್ಮನಿಯೊಡನೆ ಅನೇಕ ಸಂಬಂಧಗಳನ್ನು ಹೊಂದಿತ್ತು. ಏಕೆಂದರೆ ಡೇನಿಷ್ ದೊರೆಗಳು ಜರ್ಮನಿಯ ಸ್ಲೆಸ್ವಿಕ್ ಕೌಂಟಿಯ ಡ್ಯೂಕರೂ ಆಗಿದ್ದರು. ಆ ದೊರೆಗೆ ನೌಕಾಶಕ್ತಿಯುಳ್ಳ ರಾಷ್ಟ್ರಗಳ ವಲಯದಲ್ಲಿ ಅಧಿಕಾರಗಳಿಸುವ ಆಸೆಕ್ಕೆ ಇತ್ತು. ಆದ್ದರಿಂದ ಅವನು ಸಿಂಹಳ ದ್ವೀಪದಲ್ಲಿ ಆಗ ಉಂಟಾಗಿದ್ದ ಪರಿಸ್ಥಿತಿಯನ್ನು ಪೂರ್ಣವಾಗಿ ಉಪಯೋಗಿಸಿಕೊಂಡನು. ಸಿಂಹಳದಲ್ಲಿ ಕ್ಯಾಂಡಿಯ ದೊರೆಗೂ, ಪೋರ್ತುಗೀಸರಿಗೂ ನಡುವೆ ತೊಂದರೆಗಳು ಉದ್ಭವಿಸಿದ್ದುವು. ಆದರೆ ಆ ಸಿಂಹಳ 'ಚಕ್ರವರ್ತಿ'ಗೆ ಸಹಾಯ ಮಾಡಲು ಹಿಂದೂಸಾಗರಕ್ಕೆ ಯಾನಮಾಡಿದ ಡೇನಿಷ್ ನೌಕಾಪಡೆಯು ಕದನದಲ್ಲಿ ಪರಾಜಿತವಾಯಿತು. ಆಗ ಅದರಲ್ಲಿದ್ದ ಡೇನರು ತಂಜಾವೂರಿಗೆ ತಪ್ಪಿಸಿಕೊಂಡು ಹೋದರು. ಅಲ್ಲಿ ತಂಜಾವೂರಿನ ಸ್ಥಳೀಯ ದೊರೆಯು ಅವರನ್ನು ಆದರದಿಂದ ಬರಮಾಡಿಕೊಂಡನು. ರಘುನಾಥನಾಯಕನೆಂಬ ಹೆಸರಿನ ಈ ದೊರೆಯು ತನ್ನ ರಾಜ್ಯದ ಕರಾವಳಿಯಲ್ಲಿ ಡೇನರಿಗೆ ಸ್ವಲ್ಪ ಭೂಮಿಯನ್ನು ಬಿಟ್ಟುಕೊಟ್ಟನು. ಅದೇ ಈಗ ಟ್ರಾಂಕ್ವಿಬಾರ್ ಅಥವಾ ತರಂಗಂಬಾಡಿ ಎಂದು ಕರೆಯಲ್ಪಡುತ್ತಿರುವ ಗ್ರಾಮವಾಗಿತ್ತು. ಮೊದಲು ಡೇನರಿಗೆ ಕೊಡಲಾದ ಈ ಪ್ರದೇಶದ ವಿಸ್ತೀರ್ಣವು ಹದಿನೈದು ಚದುರು ಮೈಲಿಗಳಷ್ಟು ವಿಸ್ತೀರ್ಣವುಳ್ಳದ್ದಾಗಿದ್ದು, ಅನಂತರ ಅದನ್ನು ವಿಸ್ತರಿಸಲಾಯಿತು.

ಕೈ ಬರಹದ ಪತ್ರಿಕೆಗಳು :

ಬಾರ್ತೊಲೋಮಿಯಸ್ ಜೀಗನ್‌ಬಾಲ್ಗ್ ಎಂಬ ಡೇನನು ಕರಂಗಂಬಾಡಿ ಎಂಬ ಈ ಸಣ್ಣ ಪಟ್ಟಣವನ್ನು ೧೭೦೬ನೇ ಇಸವಿ ಜುಲೈ ತಿಂಗಳ ಒಂಭತ್ತನೇ ತಾರೀಖಿನ ದಿನ ಪ್ರವೇಶಿಸಿದನು. ಈ ದಿನವು ಜರ್ಮನ್ ವಿವೃತ್ತಿನ ಇತಿಹಾಸದಲ್ಲಿ ಒಂದು ಮುಖ್ಯ ದಿನಾಂಕವಾಗಿದೆ. ಏಕೆಂದರೆ ತಮಿಳು ಭಾಷೆಯಲ್ಲಿ ಜರ್ಮನರ ಅಧ್ಯಯನಗಳನ್ನು ಪ್ರಾರಂಭಿಸಿದ ಕೀರ್ತಿಯು ಈ ಜೀಗಲ್‌ಬಾಲ್ಗನಿಗೆ ಸಲ್ಲತಕ್ಕದ್ದಾಗಿದೆ. ಅತನು ಕೈಬರಹದ ಪ್ರತಿಗಳನ್ನು ಸಂಗ್ರಹಿಸಿ, ತಮಿಳರ ಆಧ್ಯಾತ್ಮಿಕ ಪರಂಪರೆಯನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದನು. ಜೀಗಲ್‌ಬಾಲ್ಗನ ವಿವೃತ್ತನ್ನು, ಅತನ ಮೊದಲನೇ ತಮಿಳು ವ್ಯಾಕರಣ, ದಕ್ಷಿಣ ಭಾರತದ ದೇವತೆಗಳ ಬಗ್ಗೆ ಅತನು ಬರೆದಿರುವ ವಿವರಣೆಗಳು, ತಮಿಳು ಭಾಷೆಯಲ್ಲಿ ಅತನು ಮಾಡಿರುವ ಕ್ರೈಸ್ತಧರ್ಮದ ಕೃತಿಗಳ ಭಾಷಾಂತರ— ಇವುಗಳಲ್ಲಿ ಕಾಣಬಹುದಾಗಿದೆ. ಇವು ಅತನ ವಿವೃತ್ತನ್ನು ಇತರರ ಮನ ಮುಟ್ಟುವಂತೆ ಸಾರುವ ದಾಖಲೆಗಳಾಗಿವೆ.

---

* ನವದೆಹಲಿಯ 'ಇಂಡಿಯನ್ ನ್ಯೂಸ್ ಅಂಡ್ ಟ್ರಾನ್ಸ್‌ಲೇಶನ್ ಬ್ಯೂರೊ' ಅವರಿಂದ ಬಂದ ಬರಹವಿದು. —ಸಂ. ಜ.

೧೭೧೩ರಲ್ಲಿ ಬರೆದು ಮುಗಿಸಲ್ಪಟ್ಟ "ಮಲಬಾರ ದೇವತೆಗಳ ವಂಶಾವಳಿ" ಎಂಬ ಗ್ರಂಥವು ಜೀಗನ್‌ಬಾಲ್ಗನ ಪ್ರಧಾನ ಕೃತಿಯಾಗಿದೆ ದಕ್ಷಿಣ ಭಾರತದ ದೇವರುಗಳ ಬಗ್ಗೆ ಸಾಮಾನ್ಯ ವಿವರಣೆಯನ್ನು ನೀಡುವುದರಲ್ಲಿ ಇದು ಮೊಟ್ಟ ಮೊದಲನೆಯ ಪುಸ್ತಕವಾಗಿತ್ತು. ಇದರಲ್ಲಿ ಹಿಂದೂ ಹಬ್ಬಗಳನ್ನೂ, ಸಂಪ್ರದಾಯಗಳನ್ನೂ ವಿವರಿಸಲಾಗಿತ್ತು.

ಬಾರ್ಥೊಲೋಮಿಯಸ್ ಜೀಗನ್ ಬಾಲ್ಗನು ಬರೆದ ಮತ್ತೊಂದು ಪುಸ್ತಕವನ್ನು, ಭಾರತೀಯ ಸಂಸ್ಕೃತಿಶಾಸ್ತ್ರದಲ್ಲಿ ಒಂದು ಮಹಾಗ್ರಂಥವೆನ್ನಬಹುದು. ಮೊಟ್ಟಮೊದಲನೆಯ ತಮಿಳ ವ್ಯಾಕರಣವೇ ಆ ಪುಸ್ತಕವಾಗಿತ್ತು.

ಜರ್ಮನ್ ವಿದ್ವಾಂಸರ ಆದಿಕೃತಿಗಳು.

ಟ್ರಾಂಕ್ವಿಬಾರ್ ಅಥವಾ ಕರಂಗಂಬಾಡಿಯು ಬಹಳ ಕಾಲದ ವರೆಗೆ ಭಾರತೀಯ ಸಂಸ್ಕೃತಿ ಶಾಸ್ತ್ರದ ಅಧ್ಯಯನಕ್ಕೆ ಕೇಂದ್ರವಾಗಿತ್ತು. ಈ ಅಧ್ಯಯನ ಕ್ಷೇತ್ರದಲ್ಲಿ ಬಾರ್ಥೊಲೋಮಿಯಸ್ ಜೀಗನ್‌ಬಾಲ್ಗನ ಉತ್ತರಾಧಿಕಾರಿಗಳಾಗಿ ಬಂದವರಲ್ಲಿ ಜೆ. ಬಿ. ಫೆಬ್ರೀಷಿಯಸ್ ಎಂಬವನು ಬಹಳ ಮುಖ್ಯನಾದವನಾಗಿದ್ದನು. ಇವನು ೧೭೭೯ ರಲ್ಲಿ "ಮಲಬಾರ್ ಮತ್ತು ಇಂಗ್ಲಿಷ್ ನಿಘಂಟು" ಎಂಬ ಪುಸ್ತಕವನ್ನು ಸಂಪಾದಿಸಿದನು. ಸುಮಾರು ಒಂಭತ್ತು ಸಾವಿರ ಪದಗಳನ್ನೂ, ಅಧಿಕ ಸಂಖ್ಯೆಯಲ್ಲಿ ವಾಗ್ವ್ಯವಹಾರದ ಉಕ್ತಿಗಳ ಸಂಗ್ರಹವನ್ನೂ ಒಳಗೊಂಡ ಈ ನಿಘಂಟು ಮುಂಬಿ ಡಾ. ರಾಟ್ಲರ್ ಅವರೂ, ಡಾ: ವಿನ್ಸ್ಲೋ ಅವರೂ ಬರೆವ ಗ್ರಂಥಗಳಿಗೆ ಆಧಾರವಾಯಿತು

ಜಿ. ಸಿ. ರಾಟ್ಲರ್ ಅವರು 'ತಮಿಳು-ಇಂಗ್ಲಿಷ್ ನಿಘಂಟ'ನ್ನು ೧೭೩೪ರಲ್ಲಿ ಸಂಕಲಿಸಿದರು. ಇದರನಂತರ ೧೭೩೬ರಲ್ಲಿ ಶ್ವೇನಿಯಸ್ ಅವರು ತಮಿಳು ವ್ಯಾಕರಣವನ್ನೂ, ೧೭೫೪ರಲ್ಲಿ ಗ್ರೌಲ್ ಅವರು "ತಮಿಳು ಭಾಷೆಯ ರೂಪುರೇಷೆ" ಎಂಬ ಗ್ರಂಥವನ್ನೂ ಬರೆದರು.

ತಮಿಳುನಾಡಿನ ಭಾಷೆಯಲ್ಲಿ ಕಟ್ಟಕಡೆಯ ಜರ್ಮನ್ ಕೃತಿಯು ದ್ವಿತೀಯ ವಿಶ್ವಯುದ್ಧದ ಸಮಯದಲ್ಲಿ ಸಂಪಾದಿಸಲ್ಪಟ್ಟಿತು: ಜರ್ಮನ್ ಬೈಥಾನ್ ಇವರು ಬರೆದ "ತಮಿಳು ಭಾಷೆಯ ವ್ಯಾವಹಾರಿಕ ವ್ಯಾಕರಣ"ವೇ ಆ ಪುಸ್ತಕವಾಗಿತ್ತು. (ಲೀಪ್ಜಿಗ್-೧೯೪೩).

ಪ್ರಸಿದ್ಧ ಜರ್ಮನ್ ಕವಿ ಮತ್ತು ವಿದ್ವಾಂಸನಾದ ಫ್ರೆಡ್ರಿಕ್ ರ್ಯೂಕರ್ಟನಿಗೂ ಸಹ ತಮಿಳುನಾಡು ಸ್ಫೂರ್ತಿದಾಯಕವಾಗಿತ್ತು. ೧೯ನೇ ಶತಮಾನದಲ್ಲಿ ಪಾಶ್ಚಾತ್ಯದಲ್ಲಿ ಜರ್ಮನರು ತಳೆದ ಆಸಕ್ತಿ ಶ್ರದ್ಧೆಗಳಿಂದ ಪ್ರಭಾವಿತನಾದ ರ್ಯೂಕರ್ಟನು ಸಂಸ್ಕೃತ ಭಾಷಾ ಸಂಸ್ಕೃತಿಯ ಪ್ರಾಚೀನಸಂಪತ್ತನ್ನು ಆಳವಾಗಿ ಪರಿಶೋಧಿಸಿದನು. ತಮಿಳು ಜನರ ಸಾಹಿತ್ಯ ಮತ್ತು ಭಾಷಾಮಹತ್ವವನ್ನೂ ಸಹ ಶೋಧಿಸಿ ತಿಳಿಯಲು ಆತನು ಕಾತುರನಾದನು. ೧೮೩೦ರಲ್ಲಿ ಆತನು ತನ್ನದೇ ಆದ ತಮಿಳು ನಿಘಂಟಿನಸಂಕಲನವನ್ನು ಪ್ರಾರಂಭಿಸಿ ಅದನ್ನು ೧೮೩೨ರ ವರೆಗೆ ಮುಂದುವರಿಸಿದನು.

ದಕ್ಷಿಣದ ಭಾರತದ ವಿಷಯಗಳ ಮೇಲೆ ಬರೆಯಲ್ಪಟ್ಟಿರುವ ಜರ್ಮನ್ ಗ್ರಂಥಗಳ ಪೈಕಿ, ಕೇರ್ಡಿಯನ್ನು ಗಳಿಸಿರುವ ಬಹುತೇಕ ಕೃತಿಗಳು ವಿಶಾಲತರ ದ್ರಾವಿಡಸಮಸ್ಯೆಗಳನ್ನು ಕುರಿತು ಚರ್ಚೆ ನಡೆಸಿವೆ " ದ್ರಾವಿಡರು ಎಲ್ಲಿಂದ ಬಂದರು ?" ಎಂಬ ಪ್ರಶ್ನೆಗೆ ಇದುವರೆಗೂ ಉತ್ತರವೇ ಸಿಕ್ಕಿಲ್ಲ. ಇಂದಿಗೂ ಸಹ ಅದು ಜರ್ಮನ್ ವಿದ್ವಾಂಸರಿಗೆ ಒಂದು ಆಕರ್ಷಕ ಪ್ರಶ್ನೆಯಾಗಿದೆ. ಇತ್ತೀಚಿನವರೆಗೆ ಕೀಲ್ ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರೂ, ಒಮ್ಮೆ ಅಡ್ಯಾರ್ ಗ್ರಂಥಾಲಯದ ಅಪೇಕ್ಷಕರೂ ಆಗಿದ್ದ ಡಾ. ಆಟ್ಟೋ ಪ್ರೇಡರ್ ಆವರು, ದ್ರಾವಿಡ ಭಾಷೆಗಳಲ್ಲಿ ಅನೇಕ ಅಧ್ಯಯನಗಳನ್ನು ನಡೆಸಿದ್ದಾರೆ.

ದ್ರಾವಿಡ ಸಂಸ್ಕೃತಿಯಲ್ಲಿ ಜರ್ಮನ್ ಸಂಶೋಧನೆಯು ಇತರ ಭಾಷೆಗಳಾದ ತೆಲುಗು, ಮಲೆಯಾಳ, ತುಳು ಮತ್ತು ಕನ್ನಡ—ಇವುಗಳಿಗೂ ಸಹ ವ್ಯಾಪಿಸಿತ್ತು. ತೆಲುಗು ಭಾಷೆಯಲ್ಲಿ ಜರ್ಮನ್ ಅಧ್ಯಯನಗಳಿಗೆ ಜೆ. ಸಿ. ಎಫ್. ಹೆಯರ್ ಎಂಬಾತನು ಆದಿ ಪರಿಶೋಧಕನಾಗಿದ್ದನು. ಆತನು ೧೭೮೨ರಲ್ಲಿ ಗುಂಟೂರಿಗೆ ಬಂದು ನೆಲೆಸಿ, ಅಲ್ಲಿ ಅನೇಕ ಧಾರ್ಮಿಕ ಗ್ರಂಥಗಳನ್ನು ಬರೆದನು.

ದುಲೆಯಾಳದಲ್ಲಿ ಜರ್ಮನ್ ಅಧ್ಯಯನಗಳು

ಜೋಹನ್ ಆರ್ನೆಸ್ಟ್ ಹಾಂಕ್ಸ್ ಲೀಡನ್ ಎಂಬಾತನು ಮಲೆಯಾಳ ಭಾಷೆಯಲ್ಲಿ ಮೊಟ್ಟ ಮೊದಲನೇ ಜರ್ಮನ್ ವಿದ್ವಾಂಸನಾಗಿದ್ದನು. ಈತನು ಅತ್ಯುತ್ತಮ ಸಂಸ್ಕೃತ ವಿದ್ವಾಂಸನಾಗಿದ್ದನೆಂದೂ, ಇದುವರೆಗೆ ಈತನೊಡನೆ ಆ ವಿದ್ವತ್ತಿನಲ್ಲಿ ಯಾವ ಐರೋಪ್ಯನೂ ಸ್ಪರ್ಧಿಸಲು ಸಾಧ್ಯವಾಗಿಲ್ಲವೆಂದೂ, ಸುಸ್ಪಷ್ಟ ಭಾಷಾಶಾಸ್ತ್ರ ಪರಿಣತನೆಂದೂ ಜೋಹನ್ ಫಿಲಿಪ್ ವೆಸ್ಡಿನ್ ಹೇಳಿದ್ದಾನೆ. ಇಂದೂ ಸಹ ಜೋಹನ್ ಆರ್ನೆಸ್ಟ್ ಹಾಂಕ್ಸ್‌ಲೀಡನ್ ಕೇರಳದಲ್ಲಿ 'ಆರ್ನೋಸ್ ಪಾದ್ರಿ' ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಈತನು ಮಲೆಯಾಳ ಭಾಷೆಯಲ್ಲಿ ಮೊದಲನೇ ವ್ಯಾಕರಣವನ್ನು ಬರೆದದ್ದು ಮಾತ್ರವಲ್ಲದೆ, ಒಂದು ನಿಘಂಟನ್ನೂ ಸಹ ಸಂಕಲಿಸಿದನು.

ಆಸ್ಟ್ರಿಯಾದ ಕಾರ್ಮೆಲೈಟ್ ಪಾದ್ರಿ ಜೋಹನ್ ಫಿಲಿಪ್ ವೆಸ್ಟಿನ್ನರು ೧೭೩೩ರಲ್ಲಿ ಮಲಬಾರ್ ಕರಾವಳಿಗೆ ಹೋಗಿ ಅಲ್ಲಿ ನೆಲೆಸಿದನು. ಅಲ್ಲಿ ಆತನು ೧೫ ವರ್ಷಗಳ ಕಾಲ ಇದ್ದನು. ಆತನು ತನ್ನ ಹೊಸನಾಡಿನ ಭಾಷೆಯನ್ನು ಸುಲಭವಾಗಿ ಕಲಿತನು. ಇವನ ಮಲೆಯಾಳ ಭಾಷೆಯಲ್ಲಿ ಎಷ್ಟು ನುರಿತನೆಂದರೆ, ಆ ಭಾಷೆಯಲ್ಲಿ ಅನೇಕ ಕೈಪಿಡಿಗಳನ್ನೂ ಸಹ ಪ್ರಕಟಿಸಿದನು. ಇಡೀ ಯೂರೋಪಿನಲ್ಲೆ ಭಾರತೀಯ ಸಂಸ್ಕೃತಿ ಶಾಸ್ತ್ರದ ಪ್ರವೀಣನೆಂದು ವಿಖ್ಯಾತನಾಗಿದ್ದ ಅತನ ಹೆಸರನ್ನು ಸಂಸ್ಕೃತ ಭಾಷಾ ಶಾಸ್ತ್ರದ ಪುಸ್ತಕದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿದೆ. ಅವನು ಸಂಸ್ಕೃತ ವ್ಯಾಕರಣವೊಂದನ್ನೂ ಸಹ ಬರೆದು ಪ್ರಕಟಿಸಿದನು. ಆದರೆ ಇದು ದೇವನಾಗರೀ ಲಿಪಿಯಲ್ಲಿಲ್ಲದೆ, ತಮಿಳು ಲಿಪಿಯಲ್ಲಿದೆಯೆಂಬ ಅಂಶವು ತುಂಬ ಗಮನಾರ್ಹವಾನುದಾಗಿದೆ.

ನಿನ್ನ ಪೂಜೆಗೆ

ಶೀ. ಬಿ. ಬಿ. ಹಿಂಗಮರೆ ಬಿ. ಎ. ಸ್ಕೂಬೈಸ್ಕೂಲ್, ಅಥಣಿ

ನನ್ನ ಬಾಳಿನ ಕತೆಯ ಎಂತೊರೆಯಲಿ
ನಿನ್ನ ಪೂಜೆಗೆ ನಾನು ಏನು ತರಲಿ—?

ಬಂದೇ ಬರುವರು, ತಂದೇ ತರುವರು
—ನಿನಗೆ ಕಾಣಿಕೆಯ ಉಳ್ಳವರು;
ದೀಪ ಉರಿಸುವರು ಪಾಪ ನೀಗಲಿಕೆ
—ಪೂಜಿಸಿ ಪ್ರಸಾದ ಕೊಳ್ಳುವರು.

ಧೂಪ-ದೀಪ-ನೈವೇದ್ಯವಿಲ್ಲದೆಯೆ
—ನಂಬಿ ನಿನ್ನಡಿಗೆ ಬಂದಿರುವೆ;
ನನ್ನೀ ಸಾಹಸ-ವಿಚಿತ್ರ-ಭಕ್ತಿಯ
—ಬೆಲೆಯೇನಿರುವುದೊ ನಾನರಿಯೆ

ಇಕೊ ಇಲ್ಲಿರುವೆನು, ದೀನರ ಪ್ರತಿನಿಧಿ
— ನಂದಿಸುತಿರುವೆನೆಂ ಬರಿಗೈಲಿ;
ಸಿಂಗರ ಸೂಸುವ ಒಣ ಆಡಂಬರ
—ಏನೊಂದಿಲ್ಲದ ಸುಕುಮಾರಿ—!

ನನ್ನಯ ಕೊರಳಿಗೆ, ನಿನ್ನಯ ಪೂಜೆಗೆ
ತಂದೇನೆಂದರೆ ಹೂಗಳನು;
ಪಾಳಾಗಿರುವುದು ಉಪವನ-ನಶ್ವರ
ಕ್ಷಮಿಸೋ ಈಶ್ವರ ನನ್ನನ್ನು—!

ಹೊಗಳೇನೆಂದರೆ, ಹಾಡೇನೆಂದರೆ—
ಅಪಸ್ವರವಾಗಿದೆ ನನ್ನ ಉಲಿ;
ಭಾವನೆ-ಕಾಮನೆ ಪ್ರಕಟಿಸುವುದಕೂ
ಸಾಲದು ಶಕ್ತಿಯು ನುಡಿಗಳಲಿ.

ದಾನ-ದಕ್ಷಿಣೆಯೆ, ಅಲ್ಲ ಕಾಣಿಕೆಯೆ ?
ಏನೇನಿಲ್ಲವೊ ನನ್ನ ಬಳಿ;
ಪೂಜೆಯ ವಿಧಿಯನು ಅರಿಯದ ಮುಗ್ಧೆಯೊ
ಬಂದೇನಂತೆಯೆ ನನ್ನನರಿ !

ಪವಿತ್ರ-ಪ್ರೇಮದ ಹೃದಯಾಂತರವನೆ
ನಿನಗೆ ತೋರಲಿಕೆ ಬಂದಿರುವೆ;
ಮಾನ-ದಾನ-ಧನ-ತನು-ಮನ-ಸಂಚಿತ
ಒಲವಿನೈಸಿರಿಯ ತಂದಿರುವೆ !

ಅರ್ಪಿಸುತಿರುವೆನೆಂ ಜೀವನ-ನಿಧಿಯನೆ
ಮೆಚ್ಚಿದೆಯಾದರೆ ಸ್ವೀಕರಿಸು;
ನಿನ್ನದೆ ಇರುವುದೊ ಈ ಕಾಣಿಕೆಯೂ—
ಸೇವಿಸು ಇಲ್ಲವೆ ಸೀವರಿಸು !

ನನ್ನ ಬಾಳಿನ ಕತೆಯ ಎಂತೊರೆಯಲಿ
ನಿನ್ನ ಪೂಜೆಗೆ ನಾನು ಏನು ತರಲಿ—?

*ಒಂದು ಹಿಂದೀ ಕವನ

ಕನ್ನಡ ಮತ್ತು ತುಳು ಭಾಷೆಗಳಲ್ಲಿ ಜರ್ಮನ್ ಅಧ್ಯಯನಗಳು.

ಕನ್ನಡ ಮತ್ತು ತುಳು ವಲಯದಲ್ಲಿ ಜರ್ಮನರ ವಿಸ್ತೃತ ಕಿಟ್ಟೆಲ್‌ನ ಹೆಸರಿನೊಡನೆ ನಿಕಟ ಸಂಪರ್ಕವನ್ನು ಹೊಂದಿದೆ. ಕಿಟ್ಟೆಲ್‌ನು ತುಳು ಮತ್ತು ಕನ್ನಡ ಭಾಷೆಗಳನ್ನು ಕಲಿತು, ಅವುಗಳ ಪರಸ್ಪರ ಸಂಬಂಧವನ್ನೂ, ದ್ರಾವಿಡ ಭಾಷಾವರ್ಗದಲ್ಲಿ ಅವುಗಳ ಸ್ಥಾನವನ್ನೂ ಅಧ್ಯಯನ ಮಾಡಿದನು. ಕನ್ನಡದಲ್ಲಿ ನಿಜವಾಗಲೂ ಮೊಟ್ಟ ಮೊದಲನೆಯ ಆಧುನಿಕ ನಿಘಂಟನ್ನು ಸಂಕಲಿಸಿದ ಯಶಸ್ಸು ಕಿಟ್ಟೆಲ್‌ನಿಗೇ ಸಲ್ಲುತಕ್ಕದಾಗಿದೆ. ಈ ನಿಘಂಟು ಒಟ್ಟು ೧೬೫೨ ಪುಟಗಳನ್ನು ಹೊಂದಿದೆ.

ನೊವಲನೇ ವಿಶ್ವಯುದ್ಧದ ನಂತರ, ಕಿಟ್ಟೆಲ್ ನಿಘಂಟಿಗೆ ಜೊತೆಯಾಗಿ, ಜೆ. ಬುಚರ್ ಅವರ ಕನ್ನಡ-ಇಂಗ್ಲೀಷ್ ನಿಘಂಟು ಮಂಗಳೂರಿನಲ್ಲಿ ೧೯೩೩ ರಲ್ಲಿ ಪ್ರಕಟವಾಯಿತು. ಜೆ. ಫ್ರಾಹನ್ ನೆಯರ್ ಅವರೂ ಸಹ ಕನ್ನಡದಲ್ಲಿಯ ಜರ್ಮನ್ ವಿದ್ವಾಂಸರ ಪೈಕಿ ಒಬ್ಬನಾಗಿದ್ದರು. ಆದರೆ ಕಿಟ್ಟೆಲ್‌ನ ಮಹಾಕೃತಿಯಾದ ಆ ನಿಘಂಟಿಗೆ ಸರಿಸಾಟಿಯಾದ ಪುಸ್ತಕವನ್ನು ಇದುವರೆಗೆ ಯಾರೂ ಬರೆದಿಲ್ಲ. ವಾಸ್ತವವಾಗಿ "ತುಳುವ" ಎಂಬ ಐತಿಹಾಸಿಕ ಹೆಸರುಳ್ಳ ತುಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ, ಇಡೀ ಕರ್ನಾಟಕದಲ್ಲೂ, ಇಂದಿಗೂ ಸಹ ಕಿಟ್ಟೆಲ್ ನಿಘಂಟು ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ, ಆಲೋಕನದ ಪುಸ್ತಕವಾಗಿದೆ.

★ ಶ್ರೀ ಶಂಕರಾಚಾರ್ಯರು ★

(ತರಂಗರೂಪಕ)

ಶ್ರೀ. ಬಿಟಗೇರಿ ಕೃಷ್ಣಶರ್ಮ, ಧಾರವಾಡ

ಪಾತ್ರಪರಿಚಯ

ನಿರೂಪಕ (ನಾಟಕದ ಸೂತ್ರಧಾರ), **ವೇದಮಾತೆ** (ವೇದಾಭಿಮಾನಿ ದೇವತೆ), **ಮಹೇಶ್ವರ** (ಪರಶಿವ),
ಗುರುಗಳು (ಪಾಠಶಾಲೆಯ ಶಿಕ್ಷಕರು), **ಪುರೋಹಿತರು** (ಶಂಕರಾಚಾರ್ಯರ ಮನೆಯ ಪುರೋಹಿತ),
ಗೋವಿಂದ ಭಗವತ್ಪಾದರು (ಶಂಕರಾಚಾರ್ಯರಿಗೆ ಸಂನ್ಯಾಸನಿತ್ತವರು), **ಶಂಕರ** (ಬಾಲಕ ಶಂಕರಾಚಾರ್ಯರು),
ಮೂವರು ವಿದ್ಯಾರ್ಥಿಗಳು, ಮೂವರು ಶಿಷ್ಯರು, ಆಕಾಶವಾಣಿ.

ಮಂಗಲಾಚರಣ

(ಒಂದೇ ದನಿಯಲ್ಲಿ)

ಷಣ್ಮತಸ್ಥಾಪನಾಚಾರ್ಯಂ ಅದ್ವೈತಾನಂದ ರೂಪಣಂ ||
ಜಗದ್ಗುರುಮಹಂ ವಂದೇ ಶ್ರೀಮಚ್ಛಂಕರ ದೇಶಿಕಂ ||೧||
ಶ್ರುತಿ-ಸ್ಮೃತಿ-ಪುರಾಣಾನಾಂ ಆಲಯಂ ಕರುಣಾಲಯಂ ||
ನಮಾಮಿ ಭಗವತ್ಪಾದ ಶಂಕರಂ ಲೋಕಶಂಕರಂ ||೨||

(ಅನೇಕರು ಸೇರಿ ತಾಳ-ಮೃದಂಗಗಳೊಂದಿಗೆ)

ವಿದಿತಾಖಿಲ ಶಾಸ್ತ್ರಸುಧಾಜಲಧೇ,
ಮಹತೋಪನಿಷತ್ ಕಥಿತಾರ್ಥನಿಧೇ!
ಹೃದಯೇ ಕಲಯೇ ವಿಮಲಂ ಚರಣಂ
ಭವಶಂಕರದೇಶಿಕ ಮೇ ಶರಣಂ ||
ಜಯ ಜಯ ಶಂಕರ, ಜಯ ಜಯ ಶಂಕರ
ಜಯ ಜಯ ಶಂಕರ ಮಾಂ ಪರಿಪಾಹಿ!

೧

ನಿರೂಪಕ

ಅನೇಕಶತಮಾನಗಳ ಹಿಂದೆ ಭರತಖಂಡದಲ್ಲಿ, ತನ್ನ ಜ್ಯೋತಿರ್ಮಯ ಮಂಗಲವಾಣಿಗಳಿಂದ ಜ್ಞಾನವೃಷ್ಟಿಧಾರೆಯನ್ನು ಸುರಿದ ವೇದಮಾತೆಗೆ ಇಂದು ನಿಲ್ಲಲು ನೆಲೆಯಿಲ್ಲ. ಕಾಡಿನ ಋಷಿ-ಮುನಿಗಳ ಪರ್ಣಕುಟಿಗಳಲ್ಲಿಯೂ, ನಾಡಿನ ನಾಗರಿಕರ ಮನೆ-ಮನೆಗಳಲ್ಲಿಯೂ ನಲಿದಾಡಿ ಅವರ ಅಂತರಂಗದಲ್ಲಿ ಜ್ಞಾನಮಯಪ್ರದೀಪವನ್ನು ಹೊತ್ತಿಸುತ್ತಿದ್ದ ಗಾಯತ್ರಿದೇವಿಯನ್ನಿಂದು ಕೇಳುವವರೇ ಇಲ್ಲ. ಎಲ್ಲರೂ ಕೇವಲ ಲೌಕಿಕಕರ್ಮಾಸಕ್ತರು. ಇಹವೇ ಸರ್ವಸ್ವವೆಂದು ನಂಬಿ, ಭೂಲೋಕದ ಕಗ್ಗತ್ತಲೆಯಲ್ಲಿಯೇ ಸುಖವನ್ನು ಹುಡುಕಲು ಹವಣಿಸುವವರು. ಲೌಕಿಕವಾದವನ್ನೇ ಉಚ್ಚಸ್ವರದಿಂದ ಉಪದೇಶಿಸುವ ಅಭಾಸಜ್ಞಾನಿಗಳ ಕೂಗಿನಲ್ಲಿ, ವೇದಮಾತೆಯ ಕರುಣಾಧ್ವನಿಯನ್ನು ಯಾರೂ ಕೇಳುವವರೇ ಇಲ್ಲ.

ವೇದಮಾತೆ:

(ಬಿರುಗಾಳಿಗಳ ಮೊರೆತದ ಹಿನ್ನೆಲೆಯಲ್ಲಿ– ಮುರುಕದ ಕಂಠದಲ್ಲಿ)

ಅಕಟ, ಅಣುಗರೆ ಇವರು? ನನ್ನನೇ ಮರೆತಿಹರು
ವಿಕಟನೀತಿಯ ಪಾಶದಿಂದ ಬಂಧಿತರು–
ಸುಖಸುಧೆಯ ಸಾರವುಣಿಸಿದ ತಾಯಿಯನೆ ತ್ಯಜಿಸಿ
ಮುಖನನಾವಾಪೆಡೆಗೊ ಹೊರಳಿಸಿಹರು!
ಜ್ಞಾನಸಾಧನಕರ್ಮವಾವುದೆಂಬುದ ಮರೆತು
ಕರ್ಮಪಥವಿಡಿದು ಕತ್ತಲಿಗಿಳಿದರು–
ಜ್ಞಾನ–ಕರ್ಮಗಳ ಸಾಂಗತ್ಯದರಹನು ತೊರೆದು
ಕತ್ತಲೊಳೆ ನಡೆದೆಡಹಿ ಬೀಳುತಿಹರು!
ಓ! ನನ್ನ ಚಿಣ್ಣಗಳೆ, ಬೆಳಕನುಂಡಣ್ಣಗಳೆ,
ಸಚಿಯತ್ರಾಣೆಂದ ಬನ್ನಿರಿ ಸತ್ಯದೆಡೆಗೆ–
ಕತ್ತಲೆಯನುಳಿದು ಬನ್ನಿರಿ ಬೆಳಕಿನೆಡೆಗೆ–
ಸಾವಿನೆಡೆಯನುಳಿದು ಬನ್ನಿರಿ ಅನೃತದೆಡೆಗೆ!

(ಗುಡುಗಿನ ಮೊಳಗು ಅದರೊಂದಿಗೆ ಅಗಸದಿಂದ ಕೆಳಗಿಳಿ 'ಭರ್ ಭಂವ್' ಎಂಬ ಸಪ್ಪಳ)

ವೇದಮಾತೆ

ಓ! ನನ್ನ ಆರ್ತಧ್ವನಿಯು ಯಾರ ಕಿವಿಗಳನ್ನು ಕೊರೆಯಿತು ಯಾರ ಹೃದಯದಲ್ಲಿ ಪೂರ್ವೊರೆಯಿತು? ಅಗಸದಿಂದ ಇಳಿಗಿಳಿ ಯಾರೋ ನನ್ನೆಡೆಗೆ ಬರುತ್ತಲಿದ್ದಾರೆ. ಓ! ಸರ್ವಮಂಗಲಾಧನನಾ ಮಹೇಶ್ವರನೀತ!

ಮಹೇಶ್ವರ

ಅಹುದು, ತಾಯೇ ನಾನು ಮಹೇಶ್ವರ. ಎಲೌ ಸುಜ್ಞಾ ವಾಹಿನೀ! ನಾಡ ಹೆಣ್ಣುಗಳಂತೆ ನಿನಗೂ, ಗತಿಯಿಲ್ಲದೆ ಬಾಯ್ಬಿಡು

ಕಾಲ ಬಂದಿದೆಯೆ? ಇದೊಂದು ಋತದ ಚಕ್ರನೇಮಿಕ್ರಮ! ಕೆಳಗಿಳಿದ ಗಾಲಿಯ ಹಲ್ಲು, ಅದರ ಗತಿಯೊಂದಿಗೆ ಮೇಲೆ ಬರಲೇಬೇಕು. ಅದಕ್ಕೆ ನಿಮಿತ್ತಕಾರಣ ನಾನಾಗಬೇಕೆಂದು ಕಾಲಪುರುಷನ ಆಜ್ಞೆ ನನಗಾಗಿದೆ.

ವೇದಮಾತೆ :

ಏನು? ನಾನು ಮತ್ತೆ ಅಭ್ಯುದಯ ದಿನಗಳನ್ನು ಕಾಣುವೆನೆಂದು ನಂಬಲೇ?

ಮಹೇಶ್ವರ :

ತಾಯೆ, ನಿನ್ನ ಅಭ್ಯುದಯಕ್ಕಾಗಿ ದುಡಿಯಲೆಂದೇ, ಈಗಾಗಲೆ ಭರತಖಂಡದಲ್ಲಿ ಅನೇಕ ದೈವತಗಳು ಅವತರಿಸಿ, ಅಧಿಷ್ಠಾನಶುದ್ಧಿಯ ಕಾರ್ಯವನ್ನು ಮಾಡುತ್ತಲಿವೆ. ನನ್ನ ಮಗನಾದ ಷಣ್ಮುಖನೇ ಕುಮಾರಿಲಭಟ್ಟನಾಗಿ ಅವತರಿಸಿ, ವೇದಧರ್ಮದಲ್ಲಿ ಉಸಿರನ್ನು ಊದುವ ಕಾರ್ಯವನ್ನು ನಡೆಯಿಸಿದ್ದಾನೆ; ಆದರೆ ನಿನ್ನ ವಾಣಿಯಲ್ಲಿಯ ಕರ್ಮ-ಜ್ಞಾನ ಸಮನ್ವಯದ ರಹಸ್ಯವನ್ನು ಆತ ಸರಿಯಾಗಿ ಅರಿತುಕೊಂಡಿಲ್ಲ. ಆದರೂ ನಿನ್ನ ಉದ್ಧಾರಕ್ಕಾಗಿ ರಭಸದಿಂದಲೇ ಆತ ಹೆಣಗುತ್ತಿದ್ದಾನೆ.

ವೇದಮಾತೆ :

ಕರ್ಮ-ಜ್ಞಾನಗಳ ಸಮನ್ವಯದ ರಹಸ್ಯ ಗೊತ್ತಿಲ್ಲದವರಿಂದ, ನನ್ನ ಉದ್ಧಾರಕಾರ್ಯ ಸಾಧ್ಯವೇ ಶಂಕರಾ!

ಮಹೇಶ್ವರ :

ಯೋಚನೆ ಬೇಡ ತಾಯೇ! ಅದಕ್ಕಾಗಿ ನಾನೇ ಭೂಲೋಕಕ್ಕೆ ಇಳಿದು ಬಂದಿದ್ದೇನೆ. ನಿನ್ನ ವಾಣಿಯ ಒಗಟುಗಳನ್ನು ಒಡೆದು, ಲೋಕದಲ್ಲಿ ನಿನ್ನ ತಿಳಿವಿನ ಹೊಳೆಯನ್ನು ಹರಿಸಲಿದ್ದೇನೆ.

ವೇದಮಾತೆ :

ಧನ್ಯೆ, ಧನ್ಯೆ ನಾನು! ಮಹೇಶ್ವರನೇ ನನ್ನ ಪುನರುಜ್ಜೀವನಕ್ಕಾಗಿ ಅಣಿಗೊಂಡಿದ್ದಾನೆ. ಮಹಾದೇವಾ, ನಿನ್ನ ಕಾರ್ಯಕ್ಕೆ ಗೆಲವು ದೊರೆಯಲಿ! ಭವ್ಯಂ! ಶುಭಂ! ಮಂಗಲಂ!

(ಮಂಗಲಕರವಾದ ರಾಗದಲ್ಲಿ ವೀಣೆಯ ಮಿಡಿತ ಕೇಳಿಸುವುದು.)

೨

ನಿರೂಪಕ :

ಸಾಗರದ ಸಂರಕ್ಷಣೆಯಲ್ಲಿ, ನಿಸರ್ಗಸೌಂದರ್ಯದ ಸಂಪತ್ತನ್ನು ತುಂಬಿಕೊಂಡು ನಿಂತ ಕೇರಳ ದೇಶ. ಪೂರ್ಣಾ ನದಿಯು ತನ್ನ ಶುದ್ಧ ಜಲಲಾಶಿಯಿಂದ ಪ್ರವಹಿಸುತ್ತಲಿದೆ. ಅದರ ತಡಿಯಲ್ಲಿ 'ಕಾಲಟಿ' ಎಂಬ ಹೆಸರಿನ ಅಗ್ರಹಾರ ನೆಲಸಿರುವುದು. ಅಗ್ರಹಾರದ ತುಂಬ ವೇದ-ವೇದಾಂಗ ಪಾರಂಗತರಾದ ಬ್ರಾಹ್ಮಣರ ಮನೆಗಳು. ಇಲ್ಲಿಯ ಬ್ರಾಹ್ಮಣರಲ್ಲಿ ಶಿವಗುರುವು ತನ್ನ ಸದ್ಧರ್ಮ-ಸದಾಚಾರಗಳಿಂದ ಅಗ್ರಗಣ್ಯನಾಗಿ ಶೋಭಿಸುತ್ತಲಿದ್ದಾನೆ. ಶಿವಗುರುವಿನ ಹೆಂಡತಿ ಆರ್ಯಾಂಬೆ. ಅನಸೂಯೆ-ಅರುಂಧತಿಯರಂತೆ ಆರ್ಯಾಂಬೆ, ಪಾತಿವ್ರತ್ಯದ ಮಹಿಮೆಯನ್ನು ಹೊಂದಿದವಳು.

ಶಿವಗುರು-ಆರ್ಯಾಂಬೆಯರಿಗೆ ಬಹುಕಾಲ ಮಕ್ಕಳಾಗಿರಲಿಲ್ಲ. ಪತ್ನಿಯ ಪುತ್ರಾಪೇಕ್ಷೆಯ ಉತ್ಕಟತೆಯನ್ನರಿತು ಶಿವಗುರು, ವೃಷಭಾಚಲಕ್ಕೆ ಹೋಗಿ ಪರಮೇಶ್ವರನನ್ನು ಕುರಿತು ತಪಸ್ಸು ಮಾಡಿದನು. ಆತನ ತಪಸ್ಸಿಗೆ ಮೆಚ್ಚಿ ಪರಮೇಶ್ವರನು ಸಂತಾನಲಾಭದ ವರವನ್ನು ಕರುಣಿಸಿದನಾದರೂ, ಹುಟ್ಟಿದ ಮಗು ಅಲ್ಪಾಯುವೂ ಮಹಾ ಪ್ರತಿಭಾಶಾಲಿಯೂ ಆಗುವನೆಂದು ಹೇಳಿದನು.

ಪರಮೇಶ್ವರನ ವರಪ್ರಸಾದದಿಂದ ಆರ್ಯಾಂಬೆ, ತುಂಬ ತೇಜಸ್ವಿಯಾದ ಗಂಡುಮಗುವನ್ನು ಹೆತ್ತಳು. ಸಂತೃಪ್ತರಾದ ತಾಯಿ-ತಂದೆಗಳು, ಮಗುವಿಗೆ 'ಶಂಕರ' ಎಂದು ಹೆಸರನ್ನಿರಿಸಿದರು. ಶಂಕರನು ಶಿಶುತನದಲ್ಲಿಯೇ ಅನೇಕ ಮಾಹಾತ್ಮ್ಯಗಳನ್ನು ತೋರಿಸಿ, ಅಗ್ರಹಾರದಲ್ಲಿಯ ಹಿರಿ-ಹಿರಿಯ ಬ್ರಾಹ್ಮಣರನ್ನು ಅಚ್ಚರಿಗೊಳಿಸಿದನು. ಹುಟ್ಟಿದ ಎರಡನೆಯ ವರ್ಷ, ತಮ್ಮ ತಾಯ್ನುಡಿಯನ್ನು ಶುದ್ಧವಾಗಿ ಮಾತನಾಡಬಲ್ಲ ಶಿಶುಗಳೆಷ್ಟು? ಶಂಕರನಾದರೋ, ತನ್ನ ಎರಡನೆಯ ವರ್ಷದ ವಯಸ್ಸಿನಲ್ಲಿ, ಗೀರ್ವಾಣವಾಣಿಯಾದ ಸಂಸ್ಕೃತಭಾಷೆಯಲ್ಲಿಯೂ ಪ್ರವೀಣನಾಗಿದ್ದನು.

ಇಗೋ, ಇಲ್ಲಿದೆ ಬಾಲಶಂಕರನು ವಿದ್ಯಾಭ್ಯಾಸ ಮಾಡುವ ಪಾಠಶಾಲೆ. ಶಂಕರನ ಜೊತೆಯ ಬಾಲಕರು ಸಂಸ್ಕೃತಭಾಷೆಯ ಅಭ್ಯಾಸ ನಡೆಯಿಸಿದ್ದಾರೆ.

ಒಬ್ಬ ವಿದ್ಯಾರ್ಥಿ:

ರಾಮೋಹರೀ ಕರೀ ಬೂಬತ್ ಬಾನುಕ್ಕರ್ತಾಚ ಚಂದ್ರಮಾ! (ಎರಡು ಮೂರು ಸಲ ಹೀಗೆಯೇ ಹೇಳುವನು!

ಇನ್ನೊಬ್ಬ ವಿದ್ಯಾರ್ಥಿ

ಏ, ಚಂದ್ರಮಾ! ಯಾವಾಗಲೂ ನಿನ್ನ ಹರಿ ಕರಿಯೆ! ಮೂರು ತಿಂಗಳಾದರೂ ನಿನಗೆ 'ಭೂಭೃತ್' ಎಂದು ಹೇಳಲಿಕ್ಕೆ ಬರಲೊಲ್ಲದು. ಭಾನುವು ನಿನ್ನ ಬಾಯಲ್ಲಿ ಬಾನುನೇ ಆಗುತ್ತಾನೆ. ಆ ಚಿಕ್ಕ ಶಂಕರ ನನ್ನ ನೋಡಿ, ನಾವೆಲ್ಲರೂ ನಾಚಿ ತಲೆಕೆಳಗೆ ಮಾಡಬೇಕು.

ಮೂರನೆಯ ವಿದ್ಯಾರ್ಥಿ

ಹೋಗಯ್ಯಾ! ನಿನಗೆ ಜೇಕೆನಿಸಿದರೆ ಹಗಲಿರುಳೂ ತಲೆ ಕೆಳಗೆ ಮಾಡಿಕೋಡು ಇರು! ಶಂಕರನನ್ನು ನೋಡುತ್ತಿರುವಾಗ, ತಲೆ ಕೆಳಗೆ ಮಾಡಲಿಕ್ಕೆ ನನ್ನಿಂದಂತೂ ಸಾಧ್ಯವಾಗದು. ಅವನನ್ನು ಹಾಗೆಯೇ ತಲೆಯೆತ್ತಿ ನೋಡುತ್ತಿರಬೇಕು; ಅವನು ಆಡುವ ಮಾತುಗಳನ್ನು ಕೇಳುತ್ತಿರಬೇಕು—ಎಂದು ನನಗೆ ಯಾವಾಗಲೂ ಆಶೆಯಾಗುವದು.

ಇನ್ನೊಬ್ಬ ವಿದ್ಯಾರ್ಥಿ

ಅಹುದಯ್ಯಾ! ಬರೀ ಅವನನ್ನು ನೋಡುತ್ತಲಿದ್ದರೆ—ಅತನ ಮಾತುಗಳನ್ನು ಕೇಳುತ್ತಲಿದ್ದರೆ, ಅವನಂತೆ ಆಗುವೆವೇ ನಾವು? ಈ

ಭೂಪನಿಗೆ ಇನ್ನೂ 'ಭೂಭೃತ್' ಎನ್ನಲಿಕ್ಕೆ ಬರಲೊಲ್ಲದು. ಭಾನು ವಂತೂ ಇವನ ಭಾಯಲ್ಲಿ ಸಿಕ್ಕಿ ಅಲ್ಪಪ್ರಾಣನಾಗುತ್ತಾನೆ.

ಒಬ್ಬ ವಿದ್ಯಾರ್ಥಿ :

ಏನಯ್ಯಾ, ಯಾವಾಗ ನೋಡಿದರೂ ನೀನು ಶಂಕರನನ್ನು ಹೊಗಳುತ್ತೀಯೆ! ಆ ಮೂಲೆಯ ಕೂಸಿನ ಮಾಹಾತ್ಮ್ಯ ಎಷ್ಟಿದೆ ಯೆಂಬುದು ನನಗೆ ಗೊತ್ತಿಲ್ಲವೆ? ನನ್ನ ಹಾಗೆ ಅವನು ತೆಂಗಿನಮರವನ್ನು ಸರಸರನೆ ಏರಬಲ್ಲನೆ? ಕಳವಿನಿಂದ ಎಳನೀರುಗಳನ್ನು ತರಬಲ್ಲನೇ ?

ಮೂರನೆಯ ವಿದ್ಯಾರ್ಥಿ :

ಎಲೋ, ನೀನು ಹತ್ತು ವರ್ಷದ ಧಡಿಯ. ಶಂಕರ ಇನ್ನೂ ಮೂರುವರ್ಷ ಮುಗಿಯದ ಮುದ್ದುಮಗು! ನಿನ್ನ ಹಾಗೆ ಕಳವಿನಿಂದ ಎಳನೀರು ತರಬೇಕೇ ಅವನು?

ಇನ್ನೊಬ್ಬ ವಿದ್ಯಾರ್ಥಿ :

ಈ ಜಟ್ಟಿಗನಿಗೆ ಕಳವೂ ಒಂದು ಮಹಾವಿದ್ಯೆಯೆ! ಅದರಲ್ಲಿ ತಾನು ನಿಪುಣನಿದ್ದೇನೆಂದು ಈತನಿಗೆ ತುಂಬ ಅಹಂಕಾರ!

ಒಬ್ಬ ವಿದ್ಯಾರ್ಥಿ :

ಯಾಕಯ್ಯಾ– ಇರಬಾರದು ಅಹಂಕಾರ? ನಾನು ಇರಿಸೆ ಇದ್ದರೆ, ಆಗಾಗ ನಿಮ್ಮ ಬಾಯಿಗೆ ತನಿವಣ್ಣು, ಇನಿಗಬ್ಬು, ಎಳನೀರು– ಇವೆಲ್ಲ ದೊರೆಯುತ್ತಿದ್ದುವೇ? ತಂದಾಗ ಸನಿಮಾಡಿಕೊಂಡು ಹೊಡೆಯುತ್ತೀರಲ್ಲ! ಈಗ ಒಂದು ಮಾತು: ನನ್ನೊಂದಿಗೆ ನೀವೀಗ ಅವಧಾನಿಗಳ ತೋಟಕ್ಕೆ ಬರುವಿರೇನು? ತೋಟದ ತುಂಬ ಮರಗಳಲ್ಲಿ ಇಮ್ಮಾವು ಕಳಿತುನಿಂತಿದೆ! ಇಲ್ಲಿ ನಾವು ಕುಳಿತು 'ಭಾನು' ಎಂದು ಕೂಗಿದರೂ ಅವು ಬರುವುದಿಲ್ಲ; 'ಭಾನು' ಎಂದು ಬಾಯಿ ಹರಿಯುವಂತೆ ಕಿರಿಚಿದರೂ ಅವು ಬರುವುದಿಲ್ಲ.

ಮೂರನೆಯ ವಿದ್ಯಾರ್ಥಿ :

ಓ! ಶಂಕರ....ಶಂಕರ ಬಂದ!

ಶಂಕರ :

(ಎಳೆಯದಾದ ಕಂಠದಲ್ಲಿ ಶಂಕರನ ಧ್ವನಿ ದೂರದಿಂದ, ಹತ್ತಿರ ಹತ್ತಿರ ಬರುವುದು)

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ |
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ ||

ಮೂರನೆಯ ವಿದ್ಯಾರ್ಥಿ :

ಸರಿ! ಶಂಕರನು ಬಂದ! ನೀನೇ ಹೋಗಿರಪ್ಪಾ, ನಾನು ಬರಲಾರೆ! ನೀನೇ ಹೋಗಿ ಹೊಟ್ಟೆ ತುಂಬ ಹೊಡೆದು ಬಸ್ಸಿರಿ!

ಒಬ್ಬ ವಿದ್ಯಾರ್ಥಿ

ಆ ಕೂಸನ್ನೂ ಕರೆದುಕೊಂಡು ಹೋಗೋಣವೊ! ಒಮ್ಮೆ ಇಮ್ಮಾವಿ ಸವಿಯನ್ನು ಅತನ ಬಾಯಿಗೆ ಹಚ್ಚಿಬಿಟ್ಟಿನೆಂದರೆ, ಅವನ ವಿದ್ಯಾಭ್ಯಾಸವೂ ನಮ್ಮಂತೆಯೇ ಆಗುವುದು.

ಇನ್ನೊಬ್ಬ ವಿದ್ಯಾರ್ಥಿ

ಹಾಗಾದರೆ ಅವನನ್ನು ಕರೆ; ಬರುವನೇನೋ ನೋಡುವಾ !

ಒಬ್ಬ ವಿದ್ಯಾರ್ಥಿ

ಮುದ್ದು ಶಂಕರಾ! ನಮ್ಮ ಜೊತೆ ಅವಧಾನಿಗಳ ತೋಟಕ್ಕೆ ನಡೆ! ಅವಧಾನಿಗಳ ಮನೆಯವರು ಯಾರೂ ಊರಲ್ಲಿಲ್ಲ. ಗಿಡಗಳ ತುಂಬ ಇಮ್ಮಾವಿನ ಪಾಡು. ಹೋಗಿ ಹೊಟ್ಟೆತುಂಬ ಗಿಟ್ಟಿಸಿ ಬರೋಣ ನಡೆ!

ಶಂಕರ

ಏನು? ಕಳವು! ಇದು ಕಳವು!! ಕಳವು ಮಾಡುವನನ್ನು ಮಹಾಪಾತಕಿ!

ಒಬ್ಬ ವಿದ್ಯಾರ್ಥಿ

ಶುದ್ಧ ಮರುಳು! ಅಲ್ಲವೋ, ಯಾರಾದರೂ ನೋಡಿದರೆ ಅದು ಕಳವು ಎನಿಸೀತು; ಅಲ್ಲಿ ನಮ್ಮನ್ನು ನೋಡಲು ಯಾರೂ ಇಲ್ಲ!

ಶಂಕರ

ಆಶ್ಚರ್ಯ! ಯಾರೂ ಇಲ್ಲವೇ? ದೇವರು? ದೇವರೂ ಇಲ್ಲವೆ? ಈಶಾವಾಸ್ಯಮಿದಂ ಸರ್ವಂ! ಈ ಪ್ರಪಂಚವೆಲ್ಲವೂ ಪರಮಾತ್ಮನ ನಿವಾಸಸ್ಥಾನವಾಗಿರುವುದು. ಅತನಿಲ್ಲದ ಒಂದು ಪರಮಾಣುವೂ ಈ ಜಗತ್ತಿನಲ್ಲಿಲ್ಲ. ಅತನು ಕೈಯೆತ್ತಿ ಕೊಟ್ಟುದನ್ನು ಮಾತ್ರ ನಾವು ಊಟಮಾಡಬೇಕು. ನಮ್ಮದಲ್ಲದ ವಸ್ತುವನ್ನು ನಾವೆಂದೂ ತೆಗೆದು ಕೊಳ್ಳಲಾಗದು!

ಇನ್ನೊಬ್ಬ ವಿದ್ಯಾರ್ಥಿ

ಅದೆಲ್ಲಾ ಆಯಿತಪ್ಪಾ ಶಂಕರಾ! ಎಲ್ಲೆಲ್ಲಿಯೂ ತುಂಬಿರುವ ನಿನ್ನ ಪರಮಾತ್ಮ, ನಮಗೇಕೆ ಕಾಣುವುದಿಲ್ಲ?

ಶಂಕರ

ಏಕೆ ಕಾಣುವುದಿಲ್ಲವೆಂದರೆ, ನಿಮಗೆ ಕಣ್ಣುಗಳಿಲ್ಲ.

ಒಬ್ಬ ವಿದ್ಯಾರ್ಥಿ

ನಮಗೆ ಕಣ್ಣುಗಳಿಲ್ಲವೆಂದು ಹೇಳುವ ನಿನಗೇ ಕಣ್ಣುಗಳಿಲ್ಲವೆಂದ ತೋರುತ್ತದೆ. ಕಣ್ಣುಗಳಿಲ್ಲದಿದ್ದರೆ ನಮಗೆ, ಗಿಡದ ಮೇಲಿನ ಹಣ್ಣುಗಳು ಹೇಗೆ ಕಾಣುತ್ತಿದ್ದುವು? ನಮಗೆ ಕಣ್ಣುಗಳಿಲ್ಲದೆ ಹೋಗಿದ್ದರೆ ನಾವು ಎಂದೋ ಪೂರ್ಣಾನದಿಯ ಪ್ರವಾಹದಲ್ಲಿ ತೇಲಿಹೋಗುತ್ತಿದ್ದೆವೆ

ಶಂಕರ :

ಅಹುದು ಗೆಳೆಯಾ! ನಿನ್ನ ಮಾತನ್ನು ಒಪ್ಪಿದೆ. ನಿನಗೆ ಕಣ್ಣುಗಳಿವೆ; ಆದರೆ ಅವು ಎಂತಹ ಕಣ್ಣು? ಇಲ್ಲದ ವಸ್ತುವನ್ನು ಇದ್ದಂ

ಕಾಣುವ ಹುಚ್ಚುಗಣ್ಣು. ಇದ್ದ ಒಂದೆ ಒಂದು ಸತ್ಯವಸ್ತುವನ್ನು— ಎಂದರೆ ಪರಮಾತ್ಮನನ್ನು—ಕಾಣುವ ಅಚ್ಚುಗಣ್ಣು ಅಲ್ಲ !

(ಪಾಠಶಾಲೆಯ ಗುರುಗಳ ಆಗಮನ. 'ಓ, ಗುರುಗಳು' 'ಗುರುಗಳು ಬಂದರು' ಎಂಬ ಗದ್ದಲವೆದ್ದು ಅಡಗುವುದು.)

ಶಂಕರ :

ಗುರುಗಳ ಅಡಿಗಳಿಗೆ ಶತಶಃ ವಂದನೆ.

ಗುರುಗಳು

(ಶಂಕರನನ್ನು ಪ್ರೀತಿಯಿಂದ ತಬ್ಬಿಕೊಳ್ಳುವರು. ಬಳಿಕ:)

ಶಂಕರಾ, ನಾನು ನಿನಗೆ ಗುರುವೆ ? ನೀನು ಗುರುಗಳೆಲ್ಲರ ಪರಮ ಗುರುವಾಗುವವನು ! ಭಲೆಭಲೆ ! ಶಂಕರಾ, ನಾನು ಮರೆಯುಲಿದ್ದು ನಿನ್ನ ಎಲ್ಲ ಮಾತುಗಳನ್ನೂ ಕೇಳಿದೆ. ಸಾಕ್ಷಾತ್ ಶ್ರುತಿದೇವತೆಯೇ ನಿನ್ನ ವಾಣಿಯಲ್ಲಿ ನೆಲಸಿದ್ದಾಳೆ. ನಿನ್ನ ವಾಣಿಯ ಅರ್ಥವು ಈ ಸಾಮರ—ಬಾಲಕರಿಗೆ ಹೇಗೆ ಆದೀತು ? ಧನ್ಯರು; ನಿನ್ನ ಜನನೀ-ಜನಕರು ಪರಮ ಧನ್ಯರು ! ನಿನ್ನ ಜನ್ಮದಿಂದ ನಮ್ಮ ಕಾಲಟಿಯ ಕೀರ್ತಿ ಚಿರಕಾಲವೂ ಮೆರೆಯಲಿದೆ. ನನ್ನಂತಹ ಗುರು ನಿನಗೆ ಏನನ್ನು ಕಲಿಸಬಲ್ಲ ? ಅತನ ಬಳಿ ನೀನು ಕಲಿಯುವುದೇನಿದೆ?

ಒಬ್ಬ ವಿದ್ಯಾರ್ಥಿ

ಅಹುದು ಗುರುಗಳೆ ! ಈ ಮೂರು ವರುಷದ ಮೋಟು, ನಿಮ್ಮ ಬಳಿ ಏನು ಕಲಿತೀತು ? ಈ ಮಗುವಿಗೆ ಇನ್ನೂ, ಜನರಿಗೆಲ್ಲ ಕಣ್ಣು ಗಳಿರುತ್ತವೆಯೆಂಬುದು ಗೊತ್ತಿಲ್ಲ !

ಗುರುಗಳು

(ಸಿಡುಕಿನ ಧ್ವನಿಯಲ್ಲಿ)

ಶುಂಭ ! ಮೊದ್ದುಮಣಿ ! ನಿನಗೆ ಇರುವ ಕಣ್ಣುಗಳು ಕರಟದ ತೂತುಗಳು ! ನಿಮ್ಮ ಈ ಕಣ್ಣಿಂದ— ಒಬ್ಬನೆ ಒಬ್ಬ ಸೂರ್ಯನ ಸಾಮಾನ್ಯ ಪ್ರಭೆಯನ್ನಾದರೂ ನೋಡಬಲ್ಲೆರಾ ? ಈ ಶಂಕರನ ಒಳಗಣ್ಣು ಕೋಟಿಸೂರ್ಯರ ದಿವ್ಯಪ್ರಭೆಯನ್ನು ಅವಿರತವಾಗಿ ನೋಡುತ್ತಿರುವುದು ! ಹೇಳು ಶಂಕರಾ ! ನೀನು ಯಾವಾಗಲೂ ನಿನ್ನ ಕಣ್ಣೆದುರು ಇರಿಸಿಕೊಂಡಿರುವ ವಸ್ತು ವಾವುದು ?

ಶಂಕರ

(ಮಂಜುಲಧ್ವನಿಯಲ್ಲಿ ಭಾವಪರವಶನಾಗಿ)

ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತೀ ।
ನಾರಾಯಣಸ್ಸರಸಿಜಾಸನ ಸನ್ನಿವಿಷ್ಟಃ ॥
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ ।
ಹಾರೀ ಹಿರಣ್ಮಯವಪುರ್ಧೃತ ಶಂಖ-ಚಕ್ರಃ ॥

(ಈ ಶ್ಲೋಕವನ್ನು ಹೇಳಿದ ರಾಗವನ್ನೇ ಮುಂದುವರಿಸಿ, ಆಲಾಪನೆಯನ್ನು ವಿಸ್ತರಿಸಿ, ತಂತುವಾದ್ಯ ವಿರಾವನವನ್ನು ಹೊಂದಬೇಕು.)

೩

ನಿರೂಪಕ

ಪ್ರಾರಬ್ಧಕರ್ಮವಶನಾದ ಶಿವಗುರು, ಶಂಕರನ ಬ್ರಹ್ಮೋಪದೇಶ ಸಮಾರಂಭದ ವಿಚಾರದಲ್ಲಿರುವಾಗಲೇ ಕಾಲವಶನಾದ. ಪತಿವ್ರತೆಯಾದ ಆರ್ಯಾಂಬೆಗೆ ಅಪರಿಮಿತ ದುಃಖವಾಯಿತಾದರೂ, ಬಾಲಕ ಶಂಕರನ ಯೋಗಕ್ಷೇಮದ ಹೊಣೆಯನ್ನರಿತ ಆ ತಾಯಿ, ಪತಿವಿಯೋಗದ ದುಃಖವನ್ನು ಒಳಗೇ ನುಂಗಿಕೊಂಡಳು. ಐದನೆಯ ವರ್ಷದ ವಯಸ್ಸಿನಲ್ಲಿ ಶಂಕರನಿಗೆ ಬ್ರಹ್ಮೋಪದೇಶವನ್ನು ಮಾಡಿಸಿದಳು. ಶಂಕರನು ನಟುವಾಮನನಂತೆ ತೇಜಸ್ವಿಯಾದ ಬ್ರಹ್ಮಚಾರಿಯಾಗಿ ಶೋಭಿಸಿದ. ಮೊದಲ ದಿನವೇ ಊಟಕ್ಕೆ ಕುಳಿತುಕೊಳ್ಳಲಿರುವಾಗ :

ಪುರೋಹಿತರು

ಹುಂ ! ಹೇಳು ಶಂಕರಾ, ಋತಂಚ ಸತ್ಯೇನ ಪರಿಷಿಂಚಾಮಿ ! ಈ ಮಂತ್ರವನ್ನು ಹೇಳಿ ಪರಿಷೇಚನ ಮಾಡು.

ಶಂಕರ

ಆರ್ಯರೆ, ಭೋಜನಕ್ಕೆ ಮೊದಲು ಪರಿಷೇಚನವನ್ನು ಏಕೆ ಮಾಡಬೇಕು ?

ಪುರೋಹಿತರು

ಅಯ್ಯಾ, 'ಅನ್ನಂ ಬ್ರಹ್ಮೇತಿ ವ್ಯಜಾನಾತ್' ಎಂಬ ಶ್ರುತಿವಚನ ನಿನಗೆ ಗೊತ್ತಿದೆ. 'ಈ ಅನ್ನಬ್ರಹ್ಮದ ಸಾಕ್ಷಿಯಾಗಿ ನಾನು ಸತ್ಯನನ್ನೇ ಆರಾಧಿಸುತ್ತೇನೆ' ಎಂಬುದನ್ನು ಈ ಪರಿಷೇಚನ ನಿತ್ಯವೂ ಸಂಕಲ್ಪ ಮಾಡಿಸುತ್ತದೆ. 'ಋತಂಚ ಸತ್ಯೇನ ಪರಿಷಿಂಚಾಮಿ' ಎಂಬ ಮಂತ್ರದ ಅರ್ಥವು ಇದೇ— ಸತ್ಯಕ್ಕಿಂತಲೂ ಶ್ರೇಷ್ಠವಾದ ಧರ್ಮ ಜಗತ್ತಿನಲ್ಲಿ ಇನ್ನೊಂದಿಲ್ಲ. ವೇದವಾಣಿ ಇದನ್ನೇ ಸಾರುತ್ತದೆ. ಬ್ರಹ್ಮಚಾರಿ ಇಂತಹ ಸತ್ಯದ ಆರಾಧಕನಾಗಬೇಕು. ಆದ್ದರಿಂದಲೇ ಅವನು ನಿತ್ಯವೂ 'ಅನ್ನಸಾಕ್ಷಿಯಾಗಿಯೂ ನಾನು ಸತ್ಯೋಪಾಸಕನಾಗುತ್ತೇನೆ' ಎಂದು ಶಪಥಮಾಡುತ್ತಿರಬೇಕು.

ಶಂಕರ

(ಧನ್ಯತೆಯ ಸ್ವರದಲ್ಲಿ)

ಧನ್ಯ ಧನ್ಯ ! ನಮ್ಮ ಪುರೋಹಿತರು ಸತ್ಯದ ಸ್ವರೂಪವನ್ನು ಚೆನ್ನಾಗಿ ಅರಿತಿರುವರು.

ನಿರೂಪಕ

ಇನ್ನೊಂದು ದಿನ ಶಂಕರನು ಸಂಧ್ಯಾವಂದನೆಗೆ ಕುಳಿತಿದ್ದಾನೆ. ಪುರೋಹಿತರು ಬಳಿಯಲ್ಲಿಯೆ ಕುಳಿತು ದಿಗ್ದರ್ಶನ ಮಾಡುತ್ತಿದ್ದಾರೆ.

ಪುರೋಹಿತ

ಸರಿ ! ಶಂಕರಾ, ಇನ್ನು ಗಾಯತ್ರೀಮಂತ್ರವ ಜಪಮಾಡಬೇಕು. ಜಪಕ್ಕಿಂತ ಮೊದಲು ಆಸನ, ದಿಗ್ಬಂಧನ, ಕರನ್ಯಾಸಗಳನ್ನು ಮಾಡಿಕೊಳ್ಳಬೇಕು.

ಶಂಕರ

ಆರ್ಯ, 'ಗಾಯತ್ರಿ ಎಂದರೇನು ? ಈ ಮಂತ್ರದ ವೈಶಿಷ್ಟ್ಯ ಗಳೇನು ?

ಪುರೋಹಿತ :

ಅದು ಹೀಗಿದೆ ನೋಡು ಮಗು! ಗಾಯಂತಂ ತ್ರಾಯತಿ ಇತಿ ಗಾಯತ್ರಿ! ಯಾವ ಮಂತ್ರವನ್ನು ಪುನಃ ಪುನಃ ಹಾಡುತ್ತಲಿ ಇರುವುದರಿಂದ, ಹಾಡುವವನನ್ನು ಅದು ಅಜ್ಞಾನಾಂಧಕಾರದಿಂದ ದಾಟಿಸುವುದೋ, ಅಂತಹ ಮಹತ್ತ್ವದ ಮಂತ್ರವಿದು. ಗಾಯತ್ರಿಗೆ ಸಮಾನವಾದ ಮಂತ್ರವಿಲ್ಲ; ತಾಯಿಗೆ ಸಮಾನವಾದ ದೈವತವಿಲ್ಲ.

ಶಂಕರ :

ದೇವೀಗಾಯತ್ರಿಗೆ ನನ್ನ ಸಾಷ್ಟಾಂಗ ನಮಸ್ಕಾರ! ಇನ್ನೊಂದು ವಿಷಯ ಪುರೋಹಿತರೆ! ಬ್ರಹ್ಮಚಾರಿ ಭಿಕ್ಷಾಟನೆಮಾಡಿ, ಗುರುಕುಲದಲ್ಲಿದ್ದು ವಿದ್ಯಾಭ್ಯಾಸ ಮಾಡಬೇಕೆಂದು ಅದೇಕೆ ನಿಯಮ ಮಾಡಿದ್ದಾರೆ— ನಮ್ಮ ಪೂರ್ವಜರು ?

ಪುರೋಹಿತ :

ನಿನ್ನ ಪ್ರಶ್ನೆಗಳೆಲ್ಲ ವಿಲಕ್ಷಣವಾದುವು ಮಗು. ಐದು ವರ್ಷದ ಬಾಲಕನಲ್ಲಿ ಇಂತಹ ಜಿಜ್ಞಾಸು ಬುದ್ಧಿಯಿರುವುದು, ಇನ್ನೆಲ್ಲಿಯಾದರೂ ನೋಡಲು ದೊರೆತೀತೆ? ಶಂಕರ! ಬ್ರಹ್ಮಚಾರಿ ಸತ್ಯಜ್ಞಾನದ ಉಪಾಸಕ; ಇಂತಹ ಉಪಾಸಕನಲ್ಲಿ ಅಹಂಕಾರ-ಮಮಕಾರಗಳಿಗೆ ಅವಕಾಶವಿರಕೂಡದು. ಭಿಕ್ಷಾವೃತ್ತಿ ವ್ಯಕ್ತಿಯ ಅಹಂಕಾರ-ಮಮಕಾರಗಳನ್ನು ಸಮೂಲವಾಗಿ ಕಿತ್ತು ಚೆಲ್ಲಬಲ್ಲದು. ಸತ್ಯಜ್ಞಾನದ ಉಪಾಸಕ ವಿನಯಶೀಲನಾಗಿರಬೇಕು. ಗುರು, ಜ್ಞಾನವಿವರೊಂದಿಗೆ ವಿಧೇಯನಾಗಿ ನಡೆದುಕೊಳ್ಳಬೇಕು. ಸಿರಿವಂತನಾದ ವಿದ್ಯಾರ್ಥಿಗೆ ವಿನಯ-ವಿಧೇಯತೆಗಳು ದೂರದ ಮಾತು !

ಶಂಕರ :

ತಮ್ಮಂತಹ ಅಭೀಜ್ಞ ಶಿಷ್ಯನಾನಾದುದು ನನ್ನ ಪುರಾಕೃತದ ಫಲ.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರೇವ ಮಹೇಶ್ವರಃ
ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇನಮಃ ॥

೪

ನಿರೂಪಕ :

ಶಂಕರನು ಏಳನೆಯ ವಯಸ್ಸಿನಲ್ಲಿ ಗುರುಕುಲದ ವಿದ್ಯಾಭ್ಯಾಸವನ್ನು ಮುಗಿಸಿ, ತಾಯಿ ಆರ್ಯಾಂಬೆಯ ಅನುಜ್ಞೆಯನ್ನು ಪಡೆದು, ಮನಸಾಸಂನ್ಯಾಸಾಶ್ರಮವನ್ನು ಸ್ವೀಕರಿಸಿದನು. ವಿಧಿಪೂರ್ವಕ ಸಂನ್ಯಾಸಗ್ರಹಣ ಗುರುಮುಖಾಂತರವಾಗಿ ನಡೆಯಬೇಕು. ಯೋಗ್ಯ ಗುರುವನ್ನು ಹುಡುಕುತ್ತ ಶಂಕರನು ಉತ್ತರದ ದಾರಿಯನ್ನು ಹಿಡಿದು ಹೊರಟಿದ್ದಾನೆ.

ಗಹನವಾದ ಅರಣ್ಯದಾರಿ, ದಟ್ಟವಾದ ಗಿಡ-ಮರಗಳು ಬೆಳೆದು, ಹಗಲಿನಲ್ಲಿ ಕೂಡ ಸೂರ್ಯಪ್ರಕಾಶಕ್ಕೆ ಅವಕಾಶವಿಲ್ಲ. ಜೀರುಂಡೆಗಳ ಜಿರ್‌ಜಿರ್ ಎಂಬ ಕರ್ಕಶನಾದ ಕಿವಿಗಳನ್ನು ಕೊರೆಯುತ್ತಲಿದೆ. ಅಡವಿಯ ಹಕ್ಕಿಗಳ ಭಯಾನಕ ಕೂಗುಗಳು ಆಗಾಗ ಕಿವಿಗೆ ಬೀಳುತ್ತಲಿವೆ. ದೂರದಲ್ಲಿ ಎಲ್ಲಿಯೋ ಸಿಂಹಗಳು ಗರ್ಜಿಸುತ್ತಿವೆ. ಹುಲಿಗಳು ಗುಡುಗು ಹಾಕುತ್ತಲಿವೆ. ತೊಲೆಯಾಕಾರದ ಹೆಬ್ಬಾವು ಅಲ್ಲಲ್ಲಿ ಭೀಕರವಾಗಿ ಬಾಯ್ದೆರೆದು ಬಿದ್ದುಕೊಂಡಿವೆ. ಕಾಡಿನ ದಾರಿಯಲ್ಲಿ ಕಲ್ಲುಗಳೆಷ್ಟೋ, ಕಂಟಕಗಳೆಷ್ಟೋ; ಆದರೆ ನಿರ್ಭಿತಿಯಿಂದ ಮುಂದೆ ವರೆಯುತ್ತಲಿದೆ— ಬಾಲಶಂಕರನ ಲೀಲಾಮೂರ್ತಿ.

ಅರಣ್ಯ ಮಧ್ಯದಲ್ಲಿಯ ಒಂದು ಕಾಸಾರ. ಕಮಲಗಳಿಗೆ ಮುತ್ತಿಡುವ ಭ್ರಮರಗಳ ಗುಂಜಾರವದಿಂದ ಕಾಸಾರಪ್ರದೇಶವೆಲ್ಲ ನಿನಾದಿತವಾಗಿದೆ. ತಡಿಯ ವೃಕ್ಷಗಳಲ್ಲಿ ಕುಳಿತು ಪಕ್ಷಿಗಳು ಕಲಕಲಿಸುತ್ತಿವೆ. ಶಂಕರನು ಕಾಸಾರದಲ್ಲಿಳಿದ; ಹಸ್ತ-ಪಾದ-ಮುಖ ಪ್ರಕ್ಷಾಲನವನ್ನು ಮಾಡಿಕೊಂಡು, ತಟದ ತರುವಿನಡಿಯ ಶಿಲೆಯೊಂದರ ಮೇಲೆ ವಿಶ್ರಮಿಸಿದ. ಅತನ ಆ ತೇಜಸ್ವಿಯಾದ ಮುಖದಲ್ಲಿ ಉತ್ಕಟವಾದ ಆಶೆ ತುಂಬಿ ನಿಂತುಕೊಂಡಿದೆ. ಇದೋ ಶಂಕರ!

ಶಂಕರ

(ಮಂಜುಲ ಧ್ವನಿಯಲ್ಲಿ)

ಚಿನ್ನದ ತಳಿಗೆಯು ಮರೆಯು ಮಾಡಿಹುದಯ್ಯ
ನನ್ನಿಯಂಬೆಯ ಮೊಗಸಿರಿಯ,
ನನ್ನಿಯ ಧರ್ಮವ ನೋಡಲಾಟಿಪೆನಯ್ಯ
ಸರಿಸು ಈ ಪಾತ್ರೆಯ ಮರೆಯ—
ಹೇ ಪೂಷಾ—ತವಿಸು ಈ ತಳಿಗೆಯ ತೆರೆಯ !

ಲೋಕದ ಜೀವಕುಲವೆಲ್ಲವೂ ತೆರೆಮರೆಯ ಕೆಳಗೆ ತೊಳಲಾಡುತ್ತಿದೆ. ಒಂದಕ್ಕೂ ಸತ್ಯದ ಸುಖದರ್ಶನವಿಲ್ಲ. ಜೀವಕುಲಕ್ಕೆ ತಿಳಿಸ್ವರೂಪರಂತೆ ಮಾನವರು; ಅಂತಹ ಮಾನವರು ಇಂದು ಆತ್ಮಸ್ವರೂಪವನ್ನು ಮರೆತು, ಕತ್ತಲೆಯಲ್ಲಿ ಕಾಲಾಡಿಸುತ್ತಲಿದ್ದಾರೆ. ಭರಖಂಡವನಲ್ಲಿ ಎಷ್ಟೆಷ್ಟೋ ಋಷಿ-ಮುನಿಗಳು ಅವತರಿಸಿ, ಸತ್ಯಜ್ಞಾನ ಆತ್ಮತೇಜ್ಯೋತಿಗಳನ್ನು ಹೊತ್ತಿಸಿಟ್ಟು ಹೋಗಿದ್ದಾರೆ. ಆದರೆ ಅವುಗಳನ್ನು ನೋಡಬೇಕೆಂಬ—ನೆನಪನ್ನೇ ಕಳೆದುಕೊಂಡಿದೆ ನವಜನ !

ವಿಶ್ವಚಕ್ರವು ಒಂದೆ ಒಂದು ದೈವೀಶಕ್ತಿಯ ಅಪೇಕ್ಷೆಯಂತೆ ನಡೆಯುವುದೆಂಬ ಶ್ರುತಿಮಾತೆಯ ಸತ್ಯವಾಣಿಯನ್ನು ಯಾರೂ ನಂಬುತ್ತಿಲ್ಲ. ನೂರಾರು ಬಗೆಯ ದೇವರು—ನೂರಾರು ಬಗೆಯ ಭಕ್ತರು ! ಇವು ಶಾಂತಿಯನ್ನು ನೀಡುವ ದೇವರುಗಳಲ್ಲ; ಸಮವನ್ನು ಹೂಡಿಸುವ ದೆವ್ವಗಳು. ಎಂತಲೇ ಭಿನ್ನ ಭಿನ್ನ ದೇವ ಭಕ್ತರುಗಳಲ್ಲಿ ಅಖಂಡವಾಗಿ ನಡೆದಿದೆ— ಕಾದಾಟ, ಹಣೆದಾಟ ಜ್ಞಾನವನ್ನು ತನ್ನ ಸ್ವರೂಪದಲ್ಲಿ ಅಡಗಿಸಿ ಇಟ್ಟುಕೊಂಡಿರುವಾನವ, ಹೀಗೆಯೆ ಹೋರಾಟದ ಕಳವಳದಲ್ಲಿಯೆ ಬಾಳನ್ನು ಕಳೆಯ

ಬೇಕೆ ? ಬೇಡ ಬೇಡ, ಈ ನನ್ನ ಜನರಿಗಾಗಿ ದಿವ್ಯಜ್ಞಾನದ ಅಕ್ಷಯ ಜ್ಯೋತಿಯನ್ನು ಹಿಡಿದುಕೊಂಡು, ಭರತಖಂಡದ ತುಂಬ ತಿರುಗಾಡುವೆನು. ಅದಕ್ಕಾಗಿ ನಾನು ಪೂರ್ಣಪ್ರಜ್ಞನಾಗಬೇಕು. ಅದಕ್ಕಾಗಿ ಹೊರಟ್ಟಿದ್ದೇನೆ, ಗುರುದೈವತವನ್ನು ಸಂಶೋಧಿಸುತ್ತ.

(ಮಧುರಧ್ವನಿಯಲ್ಲಿ ಅಶರೀರವಾಣಿ)
ನಿನ್ನ ಗುರು ನಿನ್ನ ಬರವನೆ ಕಾಯುತಿರುವ—
ತನ್ನ ಜ್ಞಾನವನು ನಿನ್ನಲಿ ಬೆಳಗಲಿರುವ
ನಡೆ, ನರ್ಮದಾ ತಟದ ಪರ್ಣಶಾಲೆಯಲಿ
ಕಡುದವಸಿ ಗೋವಿಂದಯತಿಗಳಿಹರಲ್ಲಿ!

ಶಂಕರ:

ಓ, ಇದು ನನ್ನ ತಾಯಿಯ ಮಧುರಧ್ವನಿ! ಸಂನ್ಯಾಸ ತೆಗೆದು ಕೊಳ್ಳಲು ಕಳವಳದಿಂದ ಒಪ್ಪಿಗೆ ಕೊಟ್ಟಳಾದರೂ, ನನಗೀಗ ಅವ್ಯಕ್ತ ರೂಪದಿಂದ ಸಂದೇಶ ನೀಡುತ್ತಲಿದ್ದಾಳೆ. ಗುರುಗಳು ಯಾರೆಂಬುದು ತಿಳಿಯದೆ ತೊಳಲುತ್ತಿರುವ ನನಗೆ ಗುರುಗಳ ಗೊತ್ತನ್ನು ತಿಳುಹಿಸಿದಳು. ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನಭವತಿ! ಜ್ಞಾನಶಕ್ತಿ-ಸ್ವರೂಪಿಣಿ ನನ್ನ ತಾಯಿ !

ತಾಯಿ, ಎಂಟು ವರ್ಷದ ವಯಸ್ಸಿನಲ್ಲಿ ನನ್ನನ್ನೂ ಈ ಭವ ನಾಟಕದ ನಟನನ್ನು ಮಾಡಬೇಕೆಂದು ಎಷ್ಟೊಂದು ಅಪೇಕ್ಷಿಸುತ್ತಿದ್ದೆಯಲ್ಲ ! ಈಗ ಗುರುವಿನ ನೆಲೆಯನ್ನು ತಿಳುಹುತ್ತಿರುವ ನೀನು, ನಿನ್ನ ಲೌಕಿಕಭಾವವನ್ನು ಮರೆಮಾಡಿಕೊಂಡಿರುವೆಯಾ ? ಛೇ ಛೇ ! ಅದು ನನ್ನ ತಾಯಿಯ ಲೌಕಿಕಭಾವವಿರಲಾರದು; ನನ್ನ ಚಿತ್ತ-ದಾರ್ಢ್ಯವನ್ನು ಪರೀಕ್ಷಿಸಲು ಆ ಜ್ಞಾನದೇವತೆ. ಅದೊಂದು ತಂತ್ರವನ್ನು ಒಡ್ಡಿರಬಹುದು.

(ಮತ್ತೆ ಅದೇ ಧ್ವನಿಯಲ್ಲಿ ಅಶರೀರವ್ವಾಣಿ)
ಜಗದ ತಮವನು ಕಳೆಯಿಬಂದ ಬೆಳಕನ್ನು
ತೆಗೆದು ಮನೆಯೊಳು ಮುಚ್ಚಿ ಇಡುವೇನೇ ನಾನು!
ಸಾಗು ಶಂಕರ, ಬೇಗ ಸಾರು ಸದ್ಗುರುವ
ಲೋಗರಿಗೆ ಒದಗಿಸೈ ಜ್ಞಾನ ಸುರತರುವ |

ಶಂಕರ

ಮತ್ತೆ ಮಾತೆಯ ದಿವ್ಯಸಂದೇಶ. ಅವರೊಂದಿಗೆ ಉತ್ಸಾಹದಾಯಕವಾದ ಆಶೀರ್ವಾದ! ಮಾತೇ, ಇದೋ ಹೊರಟುಬಿಟ್ಟೆ. ನರ್ಮದಾತೀರ ನೂರುಯೋಜನದ ಅಂತರವಲ್ಲಿರಲಿ, ಹಕ್ಕಿಯಾಗಿ ಹಾರಿಹೋಗುವೆನು; ಗಾಳಿಯಾಗಿ ತೂರಿ ಹೋಗುವೆನು !

(ಮತ್ತೆ ಅಶರೀರವಾಣಿ)
ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ !

ಮೇ ೧೯೬೦

೫

ನಿರೂಪಕ:

ನರ್ಮದಾತಟಪ್ರದೇಶ. ನರ್ಮದೆಯು ತನ್ನ ನಿರ್ಮಲಜಲಭಾಂಡಾರವನ್ನು, ಅವಿಚ್ಛಿನ್ನವಾಗಿ ಹರಿಸುತ್ತಲಿದ್ದಾಳೆ. ತಟದ ಆಶ್ರಮದಲ್ಲಿಯ ಕಪಿಲೆಗಳು ಉತ್ಸಾಹದಿಂದ ಕೂಗುತ್ತಲಿವೆ. ಕೋಗಿಲೆ ನವಿಲುಗಳು ತಮ್ಮ ಕುಕಿಲು-ಕೇಕೆಗಳಿಂದ ಯಾರನ್ನೋ ಆಶ್ರಮಕ್ಕೆ ಆಹ್ವಾನಿಸುತ್ತಲಿವೆ. ಮೊದಲ ಜಾವದ ಸೂರ್ಯ, ಆಶ್ರಮಪ್ರದೇಶದಲೆಲ್ಲ ಹೊನ್ನಹುಡಿಯನ್ನು ಹರಡಿದ್ದಾನೆ. ಆಶ್ರಮದ ಕುಲಪತಿಗಳಾದ ಗೋವಿಂದ ಭಗವತ್ಪಾದರು, ಬೆಳಗಿನ ವಿಧಿ-ವಿಧಾನಗಳನ್ನೆಲ್ಲ ಮುಗಿಸಿ, ಆಶ್ರಮದ ಮುಂಜಗುಲಿಯ ಮೇಲೆ, ಅಜಿನಾಸನದ ಮೇಲೆ ಕುಳಿತುಕೊಂಡಿದ್ದಾರೆ.

ಗೋವಿಂದ ಭಗವತ್ಪಾದರು:

ಅಪೂರ್ಯಮಾಣಮಚಲಪ್ರತಿಷ್ಠಂ ।
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ॥
ತದ್ವತ್ ಕಾಮಾಯಂ ಪ್ರವಿಶಂತಿ ಸರ್ವೇ ।
ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥

ಓಂ ನಮೋ ಭಗವತೇ ವಾಸುದೇವಾಯ! ಗೀತಾಪತೇ, ಶ್ರೀಕೃಷ್ಣಾ ! ನಿನ್ನ ಒಂದೊಂದು ನುಡಿಗಳೂ ಜ್ಞಾನಮಯ ಪ್ರದೀಪಗಳಾಗಿ, ಶಾಂತಿಲೋಕದತ್ತ ದಾರಿಯನ್ನು ತೋರಿಸುತ್ತವೆ. ಆದರೆ ಕುಮತಿಗಳ ಅಭಾಸಜ್ಞಾನದ ವಿದ್ಯುಲ್ಲಹರಿ, ಜನರ ಕಣ್ಮನಗಳನ್ನು ಸೆರೆಹಿಡಿದು ಬಿಟ್ಟಿದೆ. ಇಂದು ಕ್ಷತ್ರಿಯರ ಕ್ಷಾತ್ರಬಲ, ಅಭಾಸ ಜ್ಞಾನವನ್ನೇ ಪುರಸ್ಕರಿಸಿ, ಸಂರಕ್ಷಿಸುತ್ತಲಿದೆ. ವೈಶ್ಯರ ಸಂಪದ್ಬಲವೂ ಆ ಕ್ಷಣಿಕ ಪ್ರಕಾಶವನ್ನೇ ಪೋಷಿಸಲು ಹೆಣಗುತ್ತಿದೆ. ಮಾನವಕುಲದ ದುರ್ದೈವ! ಹುದುಗಿ ಕುಳಿತಿರುವ ಸತ್ಯವನ್ನು ಕೆದಕಿ ಹೊರಗೆ ತೆಗೆಯುವವರು ಯಾರೂ ಇಲ್ಲ.

ಶ್ರೀಬಾದರಾಯಣರಿಂದ ಆಜ್ಞಾಪ್ತನಾಗಿ, ನಾನು ಇಲ್ಲಿ ಬಂದು ನೆಲೆಯೂರಿದ್ದೇನೆ. ದಕ್ಷಿಣದೇಶದಿಂದ ಒಬ್ಬ ಮಹಿಮಾಪುರುಷನಾಗಬಲ್ಲ ಬ್ರಹ್ಮಚಾರಿ ಬರಲಿರುವನಂತೆ; ಅತನಿಗೆ ನಾನು ಸಂನ್ಯಾಸದೀಕ್ಷೆಯನ್ನು ಕೊಡಬೇಕಂತೆ; ಹಾಗೆಯೆ ಅವನನ್ನು ಬಾದರಾಯಣರ ಸಾನ್ನಿಧ್ಯಕ್ಕಾಗಿ ಬದರಿಕಾಶ್ರಮಕ್ಕೆ ಕಳುಹಬೇಕಂತೆ. ಆ ಬಾಲ-ಸಂನ್ಯಾಸಿಯಿಂದ ಬಾದರಾಯಣರು ಸತ್ಯಜ್ಞಾನವನ್ನು ಪುನರುಜ್ಜೀವನಗೊಳಿಸುವರಂತೆ.

ಕೃಷಿಕ ಮಳೆಯ ದಾರಿಯನ್ನು ಕಾಯ್ದಂತೆ— ನಾನು ಆ ಬ್ರಹ್ಮಚಾರಿಯ ದಾರಿಯನ್ನು ಕಾಯುತ್ತಿದ್ದೇನೆ. ಆದರೆ ಇದುವರೆಗೂ ಆ ಮಾಣವಕನ ದರ್ಶನವಾಗಲೊಲ್ಲದು. ಕಾಲರಾಯನ ಸಂಕಲ್ಪವೇನಿದೆಯೋ ಬಲ್ಲವರಾರು ?

(ದೂರದಿಂದ ಬಾಲಕಂಠದಲ್ಲಿ ಗೀತಧ್ವನಿ ಕೇಳಿಸುವುದು.)
ಅರಸುತೈತಂದೆ ಸದ್ಗುರು ಚರಣಕಮಲವನು,
ನರುಮಮತೆಯ ತಡಿಯಿದುವೆ ! ಶುಭವಾಹಿನೀ,

ನಿನ್ನ ನಿರ್ಮಲಜಲದೊಳೆನ್ನ ಕಲುಷವ ತೊಳೆದು
ಇನ್ನು ಮುಂದಿನ ಪಥವ ತೋರೆ ಜನನೀ !

ಗೋವಿಂದ ಭಗವತ್ಪಾದರು

ಓ, ಇದಾರದಿದು ಮಧುರಸಂಗೀತ! ಇದೇನು, ನನ್ನ ಬಲದ ಕಣ್ಣೀಕೆ ಸ್ಫುರಿಸುತ್ತಿದೆ! ಇದ್ದುದಿದ್ದಹಾಗೆಯೆ ಬೈಗೆ ಹೊಂಪುಳಿಯೇಕೆ? (ಹಕ್ಕಿಗಳ ಕಿಲಕಿಲಾಟ) ಅದೇಕೆ ಈ ಆಶ್ರಮಪಕ್ಷಿಗಳಿಗೆ ಇಷ್ಟೋದು ಉಲ್ಲಾಸ! ಇವೆಲ್ಲವನ್ನೂ ಲೌಕಿಕರು ಶುಭಶಕುನಗಳೆಂದು ಭಾವಿಸುವರು, ಹಾಗಾದರೆ ನನ್ನ ಹಾರೈಕೆಯ ಬಳ್ಳಿಗೆ ಕಾಯಿಬಿಟ್ಟೆನೆನ್ನಲೆ? ಅಹುದು, ಈ ಚಿತ್ತಾಕರ್ಷಕವಾದ ಮಧುರಧ್ವನಿಯು, ಖಂಡಿತವಾಗಿಯೂ, ನಾನು ನಿರೀಕ್ಷಿಸುತ್ತಿರುವ ಬ್ರಹ್ಮಚಾರಿಯದು!

ಶಂಕರ:

(ಅನತಿದೂರದಿಂದ)

ನರ್ಮದೆಯಲ್ಲಿ ಸ್ನಾನಮಾಡುತ್ತಿರುವಾಗ; ಮತ್ತೆ ನನಗೆ ಮಾತೃದೇವತೆಯ ಸಂದೇಶ ದೊರೆಯಿತು: 'ಅತ್ರ ಆಚಾರ್ಯವಾನ್ ಭವ!' —ಅಹಹ! ಅಮೃತ ಮಧುರವಾಣಿ! (ಮತ್ತೆ ಮತ್ತೆ ಆ ವಾಣಿ ಕೇಳಿಸುತ್ತಿರಬೇಕು.)

'ಅತ್ರ ಆಚಾರ್ಯವಾನ್ ಭವ!' 'ಅತ್ರ ಆಚಾರ್ಯವಾನ್ ಭವ!'

ಶಂಕರ:

ಅಹುದು, ಈ ವಾಣಿ ನನಗೆ ದಾರಿಯನ್ನು ತೋರಿಸುತ್ತಲಿದೆ. ಇದರೊಂದಿಗೆ ನಾನು ಹೊರಡಬೇಕು. ಓ, ಯ ಗ ಆಶ್ರಮದ ಗುರುತು ಕಾಣತೊಡಗಿತು. ಇಲ್ಲಿಯ ಗಾಳಿ ಚೈತನ್ಯದಾಯಿಯಾಗಿದೆ! ಇಲ್ಲಿಯ ಹುಡಿಯಲ್ಲಿ ಪ್ರಾಸಾದಿಕ ಶಕ್ತಿಯಿದೆ! ಇಲ್ಲಿಯ ಬೆಳಕು ತಿಳಿವನ್ನು ತೂರುತ್ತಲಿದೆ! (ಸ್ವಲ್ಪ ದೂರ ನಡೆದು) ಓ, ಪರ್ಣಶಾಲೆ! ಜಗುಲಿಯು ಮಂಗಡೆ ನಿಂತು, ನನ್ನ ಬರುವಿಕೆಯನ್ನೇ ನಿರೀಕ್ಷಿಸುತ್ತಿರುವ ಆ ಮಹಾತ್ಮರಾರು? ಅವರೇ ಭಗವಾನ್ ಗೋವಿಂದಯತಿಗಳೆರ ಬಹುದೇ? ಹೃದಯ ಹಿಗ್ಗಿನಿಂದ ತುಂಬಿದೆ. (ಮುಂದುವರಿದು ಹೋಗಿ) ಮಹಾತ್ಮರ ಶ್ರೀಪಾದಗಳಿಗೆ ಪ್ರಣಿಪಾತಗಳು! (ನಮಸ್ಕರಿಸುವನು).

ಗೋವಿಂದ ಭಗವತ್ಪಾದರು:

(ಸಂಭ್ರಮಭಾವದಲ್ಲಿ)

ಯಾರಯ್ಯಾ ಮಗು ನೀನು? ಎಲ್ಲಿಂದ ಬಂದೆ?

ಶಂಕರ

ಮಹಾತ್ಮಾ! ಈ ದೇಹವನ್ನು ತಾವು ಮಗುವೆಂದು ಕಂಡಿರೇನೊ! ಅದರೆ ಪಂಚಭೂತಗಳ ನಶ್ವರನಿರ್ಮಿತಿಯಾದ ಈ ದೇಹ ನಾನಲ್ಲ; ದೇಹದೊಳಗೆ ಇದ್ದು ದೇಹದ ಆಗು-ಹೋಗುಗಳನ್ನು ಅರಿತುಕೊಳ್ಳುವ ಚೈತನ್ಯಸ್ವರೂಪ ನಾನು!

ಗೋವಿಂದ ಭಗವತ್ಪಾದ:

ಓ! ಆನಂದ! ನಿನಗಾಗಿಯೆ ಇಲ್ಲಿಯ ನನ್ನ ಅಸ್ತಿತ್ವ. ನಿನಗೆ ದೀಕ್ಷಾಗುರುವಾಗುವ ಭಾಗ್ಯ ನನಗೆ ದೊರೆತುದು ನನ್ನ ಪುರಾಕೃತ ಪುಣ್ಯ ವಿಶೇಷ!

ಶಂಕರ:

ಭಗವನ್, ನಾನು ಹುಟ್ಟುಸಂನ್ಯಾಸಿ. ಆದರೂ ಸ್ಮೃತಿ-ಮಾರ್ಗಕ್ಕೆ ಸರಿಯಾಗಿ ನಾನು, ತಮ್ಮ ಕಡೆಯಿಂದ ಸಂನ್ಯಾಸ ದೀಕ್ಷೆ ಪಡೆಯುವುದಕ್ಕಾಗಿ ಇಲ್ಲಿಗೆ ಬಂದಿದ್ದೇನೆ.

ಗೋವಿಂದ ಭಗವತ್ಪಾದರು:

ಅದನ್ನು ಕೊಡುವುದು ನನ್ನ ಕರ್ತವ್ಯವೇ ಆಗಿದೆ. ಇಲ್ಲಿ ಬಾ! ನನ್ನೆದುರು ಕುಳಿತುಕೋ! ನಿನ್ನ ಸಂನ್ಯಾಸ ಮಾಡಬೇಕಾದ ಮಹತ್ಕಾರ್ಯವೆಂದರೆ, ನಾನೀಗ ಹೇಳಲಿರುವ ಶ್ರುತಿವಾಕ್ಯಗಳ ತತ್ಪಾರ್ಯವನ್ನು ಲೋಕವಲ್ಲೆಲ್ಲ ಬಿತ್ತರಿಸುವುದು

ಶಂಕರ:

ದಯೆಯಿಟ್ಟು ಆ ಮಹಾವಾಕ್ಯಗಳಾವುವೆಂಬುದನ್ನು ಅರುಹಬೇಕು.

ಗೋವಿಂದ ಭಗವತ್ಪಾದರು:

ಹಾಗಾದರೆ ಇದೋ ಕೇಳು! 'ಅಹಂ ಬ್ರಹ್ಮಾಸ್ಮಿ' 'ಅಯಮಾತ್ಮಾ ಬ್ರಹ್ಮ' 'ತತ್ತ್ವಮಸಿ' 'ಪ್ರಜ್ಞಾನಂ ಬ್ರಹ್ಮ!' ಈ ನಾಲ್ಕು ವಾಕ್ಯಗಳಲ್ಲಿಯೇ ನಿಜವಾದ ಅಧ್ಯಾತ್ಮಜ್ಞಾನದ ರಹಸ್ಯ ಕೇಂದ್ರೀಕೃತವಾಗಿದೆ. ಈ ರಹಸ್ಯವನ್ನು ಅರಿತುಕೊಳ್ಳದೆ ಲೋಕ, ಯಾವುಯಾವ್ದೋ ಆಭಾಸ ವೇದಾಂತಗಳ ಬೆನ್ನು ಹತ್ತಿ ನಡೆದಿದೆ. ಒಬ್ಬನೆ ಒಬ್ಬ ಪರಬ್ರಹ್ಮನನ್ನು ಅಸಂಖ್ಯ ನಾಮ-ರೂಪಗಳಿಂದ ಭಜಿಸುತ್ತ, ಶುದ್ಧವೇದಾಂತದಿಂದ ದೂರಸಿಡಿದು ನಿಂತಿದೆ. ಅವಸ್ತುವನ್ನು ವಸ್ತುವೆಂದು ಭ್ರಮಿಸಿದೆ. ವಸ್ತುವಿನ ಸತ್ಯಸ್ವರೂಪವನ್ನ ಅರಿಯದಾಗಿದೆ. ಜಗತ್ತಿನಲ್ಲಿ ಪಸರಿಸಿದ ಅಭಾಸಜ್ಞಾನ ನಿನ್ನಿಂದ ಹರಿದುಹೋಗಬೇಕು. ವೇದಾಂತ ಪ್ರಪಂಚದಲ್ಲಿ ಇಂದಿನಿಂದ ನೀನು-ಅಲ್ಲಲ್ಲ ನೀವು-ಶಂಕರ ಭಗವತ್ಪಾದರು!

ಶಂಕರ:

ಮಹಾತ್ಮರ ಜ್ಞಾನದೀಕ್ಷೆಯಿಂದ ಧನ್ಯನಾದೆನು.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರೇವ ಮಹೇಶ್ವರಃ
ಗುರುಸಾಕ್ಷಾತ್ ಪರಬ್ರಹ್ಮಾ ತಸ್ಮೈ ಶ್ರೀಗುರವೇನಮಃ ॥

ಗುರುದೈವತಕ್ಕೆ ಸಹಸ್ರ ಸಹಸ್ರ ಪ್ರಣಿಪಾತಗಳು. ದಯೆಯಿಟ್ಟು ಕೆಲವು ಕಾಲ ತಮ್ಮ ಜ್ಞಾನಸಿದ್ಧಿಯ ಸಾಧಕನಾಗಿ ಸಾನ್ನಿಧ್ಯದಲ್ಲಿಯೆ ಇರುವೆನು.

ಗೋವಿಂದ ಭಗವತ್ಪಾದರು:

ತಥಾಸ್ತು, ಸರ್ವಾಭೀಷ್ಟ ಸಿದ್ಧಿರಸ್ತು!

ನಿರೂಪಕ

ಕಲವು ದಿನಗಳು ಗತಿಸಿದುವು. ಶ್ರೀಶಂಕರ ಭಗವತ್ಪಾದರು ಕತ್ವದರ್ಶನ ಸಿದ್ಧಿಯನ್ನು ಸಂಪೂರ್ಣವಾಗಿ ಪಡೆದಿದ್ದಾರೆ, ಗುರು-ಶಿಷ್ಯರು ಪ್ರತಿದಿನವೂ ಅಧ್ಯಾತ್ಮದ ಚರ್ಚೆಯಲ್ಲಿ ಬಹಳ ವೇಳೆಯನ್ನು ಕಳೆಯುವರು.

ವರ್ಷಾಋತು ಕುಂಭವೃಷ್ಟಿಯಿನ್ನು ಕರೆಯುತ್ತಲೆ ಪ್ರಾರಂಭವಾಯಿತು. ಸೆಳಕಿನ ಹಿಂದೆ ಸೆಳಕು. ಮಳೆಯು ನೀರು ನೆಲಕ್ಕೆ ಬಿದ್ದು ಎಲ್ಲೆಲ್ಲಿಯೂ ದಡದಡನೆ ಹರಿಯುತ್ತಿದೆ. ಭೂಮಿಯ ತುಂಬ ಎಲ್ಲಿ ನೋಡಿದಲ್ಲಿ ನೀರೇ ನೀರು. ನರ್ಮದೆಯ ಮಹಾಪೂರ ತಡಿಗಳನ್ನು ಮೀರಿ ಬಂದು ಗೋವಿಂದಭಗವತ್ಪಾದರ ಆಶ್ರಮವು ಜಲಪ್ರಳಯಕ್ಕೆ ಕಿಕ್ಕಂತಾಗಿದೆ. ಪರ್ಣಕುಟಿಗಳಲ್ಲಿಯೂ ನದಿಯ ನೀರು ನುಗ್ಗಿ ಎಂದಿದೆ.

ಒಬ್ಬ ಶಿಷ್ಯ

ಗುರುಗಳೆ, ಪ್ರಳಯ, ಜಲಪ್ರಳಯ! ನರ್ಮದೆಯು ಕೆರಳಿದ ಕ್ಷಸಿಯಂತಾಗಿದ್ದಾಳೆ. ನಮ್ಮ ಆಶ್ರಮಕ್ಕೆ ಉಳಿಗಾಲವೇ ಇದ್ದಂತಿಲ್ಲ.

ಇನ್ನೊಬ್ಬ ಶಿಷ್ಯ

ಅಡಿಗೆ ಮಾಡಲಿಕ್ಕೂ ಎಡೆಯಿಲ್ಲ ಗುರುಗಳೆ! ಒಲೆಗಳೆಲ್ಲ ನೀರಿನ ಪೂರದಲ್ಲಿ ಮುಳುಗಿ ಹೋಗಿವೆ. ಒಣ ಸವುದೆಗಳೆಲ್ಲ ಪಾಡಜೊಂದಿಗೆ ತೇಲಿ ಹೋದುವು.

ಮತ್ತೊಬ್ಬ ಶಿಷ್ಯ

ಮೂರುದಿನಗಳಾದುವು ಗುರುಗಳೆ, ಹೊಟ್ಟೆಯಲ್ಲಿ ಒಂದು ಹಿಡಿ ಕಾಳೂ ಇಲ್ಲ. ಹಸಿವು! ಹಸಿವು ಕರುಳುಗಳಲ್ಲಿ ಉರಿಯನ್ನೇ ಹಚ್ಚಿಟ್ಟಿದೆ.

ಗೋವಿಂದ ಭಗವತ್ಪಾದರು

(ಮೇಲು ನಗೆ ನಗುತ್ತ)

ಆ ಉರಿಯ ಮೇಲಾದರೂ ಅಡಿಗೆಯಾಗುವುದೇನೋ ನೋಡು! ನಪ್ಪಾ, ಇದು ಪ್ರಾರಬ್ಧಕರ್ಮದ ಫಲ, ಅನುಭವಿಸಲೇ ಬೇಕು.

ಮತ್ತೊಬ್ಬ ಶಿಷ್ಯ

ಇದನ್ನು ಅನುಭವಿಸುವುದೆಂದರೆ ಏನು ಗುರುಗಳೇ! ಒಬ್ಬೊಬ್ಬರಾಯಿಬಾಯಿ ಬಿಟ್ಟು ಸತ್ತು ಹೋಗುವುದು! ಆ ಶಂಕರ ಭಗವತ್ಪಾದರನ್ನು ನೋಡಿರಿ. ಯಾವ ಚಿಂತೆ-ವ್ಯಥೆಗಳೂ ಇಲ್ಲದೆ ಆನಂದ ಕುಳಿತಿದ್ದಾರೆ.

ಗೋವಿಂದ ಭಗವತ್ಪಾದರು

ನಾನು ನಿಮಗೊಂದು ಮಾತನ್ನು ಹೇಳಲೆ?

ಎಲ್ಲರೂ ಕೂಡಿ

ಅದೇನು ಹೇಳಿರಿ ಗುರುಗಳೆ! ಈ ಸಂಕಟದಿಂದ ಪಾರಾಗುವ ಮಾತು ಇದ್ದರೆ ಸಾಕು.

ಗೋವಿಂದ ಭಗವತ್ಪಾದರು:

ಹಾಗಾದರೆ ನೀವೆಲ್ಲರೂ ಶ್ರೀಶಂಕರಭಗವತ್ಪಾದರ ಬಳಿ ಹೋಗಿರಿ; ನಿಮಗೊದಗಿದ ತೊಂದರೆಗಳನ್ನು ವಿನ್ನವಿಸಿಕೊಳ್ಳಿರಿ.

ಎಲ್ಲರೂ ಕೂಡಿ:

ಆಗಲಿ ಗುರುಗಳೇ! ಈಗಲೇ ಹೋಗಿ ವಿನ್ನವಿಸಿಕೊಳ್ಳುತ್ತೇವೆ. ನಡೆಯಿರೋ, ಶಂಕರಭಗವತ್ಪಾದರ ಬಳಿ ಹೋಗೋಣ.

ಶಂಕರ ಭಗವತ್ಪಾದ:

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾ |
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ
ವ್ಯಶೇಮ ದೇವಹಿತಂ ಯದಾಯುಃ ||

ಓಂ ಶಾಂತಿಃ ಶಾಂತಿಃ ಶಾಂತಿಃ

ಶಿಷ್ಯರೆಲ್ಲರೂ:

ಭಗವತ್ಪಾದರ ಪಾದಕಮಲಗಳಿಗೆ ಶಿರಬಾಗಿ ವಂದನೆಗಳು.

ಶಂಕರ ಭಗವತ್ಪಾದರು:

ಶಾಂತಿರಸ್ತು, ತುಷ್ಟಿರಸ್ತು, ಪುಷ್ಟಿರಸ್ತು!

ಮತ್ತೊಬ್ಬ ಶಿಷ್ಯ:

ಶಾಂತಿಯೆಲ್ಲಿಂದ ಬಂದೀತು ಮಹಾತ್ಮಾ! ಈ ಸುರಿಮಳೆ, ಈ ಬಿರುಗಾಳಿ, ಈ ಮಹಾಪೂರ– ಎಲ್ಲವೂ ಸೇರಿ, ಅಶಾಂತಿಯ ಕಂದರದಲ್ಲಿ ನಮ್ಮನ್ನು ನೂಕಿಬಿಟ್ಟಿವೆ.

ಇನ್ನೊಬ್ಬ ಶಿಷ್ಯ:

ಇನ್ನು ತುಷ್ಟಿಯ ಮಾತಂತೂ ದೂರವೆ ಉಳಿಯಿತು. ಹೊಟ್ಟೆಯಲ್ಲಿ ತುತ್ತುಕೂಳೂ ಇಲ್ಲದಾಗ, ತುಷ್ಟಿ ದೊರೆಯುವ ಬಗೆ ಹೇಗೆ?

ಶಂಕರ ಭಗವತ್ಪಾದರು:

ಈಗ ನಿಮಗೆ ಬೇಕಾದದ್ದೇನು? ಯಾವ ಬಯಕೆಯಿಂದ ಬಂದಿದ್ದೀರಿ ನೀವು?

ಒಬ್ಬ ಶಿಷ್ಯ:

ಇನ್ನೇನೂ ಇಲ್ಲ. ಎಡೆಬಿಡದೆ ಉಕ್ಕಿ ಮೊರೆಯುತ್ತಿರುವ ಈ ಮಹಾಪೂರದಿಂದ ನಮ್ಮನ್ನು ಬದುಕಿಸಬೇಕು.

ಮತ್ತೊಬ್ಬ ಶಿಷ್ಯ:

ಇಲ್ಲವಾದರೆ ನಮ್ಮ ಹೊಟ್ಟೆಗೆ ಕೂಳು ದೊರೆಯುವ ಆಶೆಯೇ ಇಲ್ಲ.

ಶಂಕರ ಭಗವತ್‌ಪಾದರು

(ಕಳವಳ ಬೆರೆತ ಧ್ವನಿಯಲ್ಲಿ)

ಅಯ್ಯೋ, ನಶ್ವರದೇಹದ ಅಳಿವಿಗಾಗಿ ನಿಮಗೆ ಇಷ್ಟೊಂದು ವ್ಯಥೆಯೆ! ಗೋವಿಂದ ಭಗವತ್‌ಪಾದರ ಸಾನ್ನಿಧ್ಯದಲ್ಲಿಯೂ ಅಜ್ಞಾನದ ಸುಳಿದಾಟವೇ! ಆಗಲಿ, ನೀವೆಲ್ಲರೂ ಈಗ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ನಿಲ್ಲಿರಿ.!

ನಿರೂಪಕ:

ಶಿಷ್ಯರೆಲ್ಲರೂ ಕಣ್ಣುಮುಚ್ಚಿ ಕಲ್ಲುಬೊಂಬೆಗಳಂತೆ ನಿಂತುಕೊಂಡರು. ಆಗ ಶಂಕರ ಭಗವತ್‌ಪಾದರು ವರುಣಸೂಕ್ತವನ್ನು ಪಠಿಸಿ, ಗುರುಗಳನ್ನು ಮನಸ್ಸಿನಲ್ಲಿಯೇ ವಂದಿಸಿದರು. ಬಳಿಕ ತಮ್ಮ ಕೈಯಲ್ಲಿಯ ಕಮಂಡಲುವನ್ನು ಪ್ರವಾಹಕ್ಕೆ ಎದುರಾಗಿ ಹಿಡಿದರು. ಅಗಸ್ತ್ಯರು ಸಾಗರವನ್ನು ಹೀರಿದಂತೆ, ಜಹ್ನುವು ಸುರಗಂಗೆಯನ್ನು ಬೊಗಸೆಯಲ್ಲಿ ಅಡಗಿಸಿದಂತೆ, ಭಗವತ್‌ಪಾದರ ಕಮಂಡಲು ನರ್ಮದೆಯ ಮಹಾಪೂರದ ನೀರನ್ನು ಕುಡಿಯತೊಡಗಿತು. ಕುಡಿಯಿತು.... ಕುಡಿಯಿತು.... ಕೊನೆಗೆ ನದಿಯ ಪ್ರವಾಹವನ್ನೇ ಬತ್ತಿಸಿಬಿಟ್ಟಿತು. ನದಿಯಲ್ಲಿಯ ಜಲಚರ ಪ್ರಾಣಿಗಳು ಸಂಕಟದಿಂದ ಕೂಗಿಟ್ಟುವು. ಆಗ ಶಂಕರಭಗವತ್‌ಪಾದರು ಕಮಂಡಲುವನ್ನು ನಸುವೆ ಬಾಗಿಸಿದರು. ನರ್ಮದೆ ತನ್ನ ಎಲ್ಲೆಯಲ್ಲಿ ಪ್ರವಹಿಸತೊಡಗಿದಳು. ಆಶ್ರಮದಲ್ಲಿರುವ ಎಲ್ಲರಿಗೂ ಆನಂದವೇ ಆನಂದ.

ಮತ್ತೊಬ್ಬ ಶಿಷ್ಯ:

ಏ! ಇವರೇನು ಮಾಟಾ ಮಾಡಿದರು ನೋಡಿರೋ! ನರ್ಮದೆಯ ಪ್ರವಾಹ ಒಮ್ಮೆಲೆ ಇಳಿದು ಹೋಯಿತು!

ಇನ್ನೊಬ್ಬ ಶಿಷ್ಯ:

ಶಂಕರಭಗವತ್‌ಪಾದರು ಸಾಮಾನ್ಯಮಾನವರಲ್ಲ. ಸರ್ವಜ್ಞರಾದ ಮಹಾತ್ಮರು! ಜಲಾಭಿಮಾನಿ ದೇವತೆಯನ್ನು ಒಲಿಸಿಕೊಂಡು, ಪ್ರವಾಹವನ್ನು ತಗ್ಗಿಸಿಬಿಟ್ಟರು!

(ಶಂಖ-ಜಾಗಟೆ-ತಾಳಗಳ ಸಪ್ಪಳ; ಜಯಜಯಕಾರದ ಕೂಗು!)

ನಿರೂಪಕ

ಗೋವಿಂದ ಭಗವತ್‌ಪಾದರ ಮೈಯಲ್ಲಿ ಸಂತೋಷ ಉಕ್ಕಿ ಹರಿಯುತ್ತಿದೆ. ಇದೊ, ಅವರು ಓಡಿಓಡಿ ಬಂದು, ಶ್ರೀಶಂಕರಭಗವತ್ಪಾದರನ್ನು ತಬ್ಬಿಕೊಂಡರು. ಕಂಬನಿ ಸುರಿಯುತ್ತಿದೆ; ಧ್ವನಿ ಗದ್ಗದಿತವಾಗಿದೆ.

ಗೋವಿಂದ ಭಗವತ್‌ಪಾದರು

ಬಂದಿತು! ವೈದಿಕಧರ್ಮದ ಉದ್ಧಾರಕಾಲವು ಬಂದೇಬಿಟ್ಟಿತು. ಶ್ರೀಮದ್ ಬಾದರಾಯಣರು ಹೇಳಿದ ಮಾತುಗಳೆಲ್ಲ ಸತ್ಯವಾದುವು. ಶಂಕರಭಗವತ್‌ಪಾದರೆ, ನಿಮ್ಮ ಸ್ಥಾನವು ಇನ್ನು ಮೇಲೆ ಇಲ್ಲಿ ಇಲ್ಲ. ನೀವಿನ್ನು ಬದರಿಕಾಶ್ರಮಕ್ಕೆ ಹೊರಡಬೇಕು. ಭಗವಾನ್ ಬಾದರಾಯಣರು ನಿಮ್ಮ ದಾರಿಯನ್ನು ಕಾಯುತ್ತ ಕುಳಿತಿದ್ದಾರೆ ಅಲ್ಲಿ. ಬ್ರಹ್ಮಸೂತ್ರಗಳಿಗೆ ಅವರು, ನಿಮ್ಮಿಂದಲೇ ಭಾಷ್ಯವನ್ನು ಬರೆಯಿಸುವವರಿದ್ದಾರೆ. ಆ ಸೂತ್ರಗಳಿಗೆ ಸರಿಯಾದ ಶುದ್ಧವಾದ ಅರ್ಥವಿವರಣೆ ಮಾಡಬಲ್ಲವರು ನೀವೊಬ್ಬರೇ— ಎಂದು, ತಮ್ಮ ದಿವ್ಯಜ್ಞಾನದಿಂದ ಅವರು ಕಂಡುಹಿಡಿದಿದ್ದಾರೆ.

ಶಂಕರ ಭಗವತ್‌ಪಾದರು

ಗುರುದೇವಾ, ತಮ್ಮ ಆಜ್ಞೆ ನನಗೆ ತುಂಬ ಆನಂದವನ್ನುಂಟು ಮಾಡಿತು. ನಾನೀಗ ಬದರಿಕಾಶ್ರಮಕ್ಕೆ ಹೋಗಿ, ಬಾದರಾಯಣದ ಪ್ರಸಾದವನ್ನು ಪಡೆದು, ಮರಳಿ ಬರುವೆನು. ಪರಮಾತ್ಮ ನನಗಾಗಿ ನಿಯಮಿಸಿ ಇರಿಸಿದ ಕಾರ್ಯಗಳು ಘನವಾದುವಾಗಿವೆ. ಆಸೇತು ಹಿಮಾಚಲ ಸಮಗ್ರ ಭಾರತದಲ್ಲಿ, ವೈದಿಕ ವೇದಾಂತದ ವಿಜಯಭೇರಿಯನ್ನು ಮೊಳಗಿಸಬೇಕಾಗಿದೆ. ವೈದಿಕಧರ್ಮವನ್ನು ಅಡ್ಡದಾರಿಯಿಂದ ನಡೆಯಿಸುತ್ತಿರುವ ನಿರ್ದೇಶಕರ ನಾಲಗೆಗೆ ತಡೆಯನ್ನು ಒಡ್ಡಬೇಕಾಗಿದೆ. ಜೀವ–ಪರಮಾತ್ಮರ ನಿಜವಾದ ಸ್ವರೂಪವನ್ನು ನಮ್ಮ ಜನಕ್ಕೆ ತಿಳುಹಬೇಕಾಗಿದೆ. ಗುರುಗಳೆ, ಇದೋ ಶತಶಃ ಪ್ರಣಾಮಗಳು. ನನ್ನ ಪ್ರಯಾಣಕ್ಕೆ ಕೃಪೆಯಿಟ್ಟು ಆಜ್ಞೆ ಕೊಡಬೇಕು.

ಗೋವಿಂದ ಭಗವತ್‌ಪಾದರು

ಶಾಂತಿಃಪುಷ್ಟಿಸ್ತುಷ್ಟಿಶ್ಚಾಸ್ತು । ಶುಭಾಸ್ತೇ ಪಂಥಾನಃ ।

ಶಂಕರ ಭಗವತ್‌ಪಾದರು

ಅನುಗೃಹಿತೋಸ್ಮಿ! ನನ್ನ ತತ್ತ್ವಜ್ಞಾನದ ಶಿಖರಮಂತ್ರವಿದು. ಇದು ಜಗತ್ತನ್ನೇ ಉದ್ಧರಿಸಬಲ್ಲುದು:

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವ ಶಿಷ್ಯತೆ ॥
ಓಂ ಶಾಂತಿಃ ಶಾಂತಿಃ ಶಾಂತಿಃ !

ವೃಂದಗೀತ

ವಿದಿತಾಖಿಲ ಶಾಸ್ತ್ರ ಸುಧಾ ಜಲಧೇ । ಮಹತೋಪನಿಷತ್
ಕಥಿತಾರ್ಥನಿಧೇ ।
ಹೃದಯೇ ಕಲಯೇ ವಿಮಲಂ ಚರಣಂ । ಭವಶಂಕರ–
ದೇಶಿಕ ಮೇ ಶರಣಂ ।

———

ಪ್ರಾಗ್ಜ್ಯೋತಿಷದಲ್ಲಿ ವಸಿಷ್ಠರು

(ಪ್ರಾದೇಶಿಕ ಪುರಾಣ ಕತೆ)

ಶ್ರೀ. ಪಿ. ವಿ. ಗುಡಿ, ಗೋಹಟ್ಟಿ (ಆಸಾಮು)

ಭಾರತದಲ್ಲಿಯ ಪ್ರತಿಯೊಂದು ದೇಶಕ್ಕೂ ಪುರಾಣಕಾಲದ ಋಷಿ-ಮುನಿಗಳ ಸಂಬಂಧವು ಇದ್ದೇ ಇರುತ್ತದೆ. ಅಲ್ಲಲ್ಲಿಯ ಜಾನಪದ ಸಂಪ್ರದಾಯ ಪರಂಪರೆಗಳನ್ನು ಅಧಿಕೃತವಾದವುಗಳನ್ನಾಗಿ ಮಾಡಿಕೋರಿಸುವ ಪ್ರಯತ್ನವಿದು. ಕನ್ನಡನಾಡಿಗೂ ಅನೇಕ ಜನ ಋಷಿಮುನಿಗಳ ಸಂಬಂಧವಿದ್ದ ಕಥೆಗಳಿವೆ.

'ನಾವು ವರ್ಷವನ್ನು ಬೇಸಗೆ, ಮಳೆಗಾಲ, ಚಳಿಗಾಲಗಳೆಂದು ಮೂರು ಭಾಗವಾಗಿ ವಿಂಗಡಿಸುತ್ತೇವೆ. ಆದರೆ ಆಸಾಮದಲ್ಲಿ ಎರಡೇ ಕಾಲಗಳು— ಬೇಸಗೆ ಮತ್ತು ಚಳಿಗಾಲ. ಮಳೆಯು ಹನ್ನೆರಡು ತಿಂಗಳೂ ಇರುತ್ತದೆ.' ಇದು ಭಾರತದ ಭೂಗೋಲವನ್ನು ಅಭ್ಯಾಸಿಸುವಾಗ ನೆನಪಿಡುವ ಸಂಗತಿ; ಆದರೆ ಈ ಸಲದ ನನ್ನ ಅನುಭವ ಮಾತ್ರ ವಿಪರೀತವಾಗಿದೆ. ಈಗ ೫-೬ ತಿಂಗಳಿಂದಲೂ ಮಳೆಯೇ ಇಲ್ಲ. ಅದರ ಮೂಲಕವಾಗಿ ನೀರಿನ ಪೂರಯಿಕೆ ಕೂಡ ದಿನದಿನಕ್ಕೆ ಕಡಮೆಯಾಗತೊಡಗಿದೆ. ಎಲ್ಲರ ಬಾಯಲ್ಲಿಯೂ ಮುಂಜಾನೆಯಿಂದ ಅದೇ ಮಾತು:— 'ಇವೊತ್ತಾದರೂ ನಳದಲ್ಲಿ ನೀರು ಬರಬಹುದೇ ?' ಎಂದು.

ನಾನು ಕೂಡ ಮುಂಜಾನೆಯಿಂದ ನಳದ ಕಡೆಗೇ ನೋಡುತ್ತ ಕುಳಿತಿದ್ದೆ; ಈಗೆರಡು ದಿವಸ ಸ್ನಾನವಿಲ್ಲ, ಇಂದು ನೀರು ಬರದಿದ್ದರೆ ಕುಡಿಯುವುದಕ್ಕೂ ಇಲ್ಲ. ಮುಂಜಾನೆಯ ವರ್ತಮಾನ ಪತ್ರದಲ್ಲಿಯೂ ಇದೇ ಸುದ್ದಿ:— 'ಆಸಾಮಿನ ಎಲ್ಲ ಪ್ರದೇಶಗಳಲ್ಲಿಯೂ ಮಳೆ ಇಲ್ಲ. ಎಲ್ಲರೂ ಆಕಾಶದ ಕಡೆಗೆ ನೋಡುತ್ತ ಕುಳಿತಿದ್ದಾರೆ. ಬೆಳೆಗಳೆಲ್ಲ ಒಣಗತೊಡಗಿವೆ.... ಮುಂ.' ಇವುಗಳ ಜೊತೆಗೆ ಒಂದು ನೋಜಿನ ಸಂಗತಿ ಕಣ್ಣಿಗೆ ಬಿತ್ತು:— ಮಳೆಯಿಲ್ಲವಾಗಿ ಒಂದು ಊರಲ್ಲಿ ಕಪ್ಪೆ ಮದುವೆ ಮಾಡಿದರಂತೆ. ಭಜನೆ, ಕೀರ್ತನೆ, ಪೂಜೆ, ಹವನ ಮುಂತಾದುವುಗಳನ್ನು ಮಾಡುತ್ತಾರೆಂಬುದನ್ನು ಕೇಳಿದ್ದೆ, ನೋಡಿದ್ದೆ. ಹೊಂದು ದೇವರ ಮೇಲಿನ ಭಕ್ತಿವಿಶ್ವಾಸ, ನಿಜ; ಆದರೆ ಕಪ್ಪೆಗಳ ಮದುವೆ ಮಾಡುವುದನ್ನು ನಾನೆಂದೂ ಕೇಳಿಲ್ಲ. ಇದನ್ನೇ ಯೋಚಿಸುತ್ತ ನೀರಿನ ವಿಷಯ ಸ್ವಲ್ಪ ಮರೆತಂತಾಗಿ ಕುಳಿತಿದ್ದೆ. ಅದೇ ಹೊತ್ತಿಗೆ ಅಕಸ್ಮಾತ್ತಾಗಿ ಪಂಡಿತಜಿಯವರು 'ಅದೇನು, ಇಂದಿನ ವಿಶೇಷ ವರ್ತಮಾನ ?' ಎಂದೆನ್ನುತ್ತ ಬಂದರು.

'ಬನ್ನಿರಿ, ಕುಳಿತುಕೊಳ್ಳಿರಿ' ಎಂದು ಅವರಿಗೆ ಕುರ್ಚಿಯನ್ನು ತೋರಿಸಿ ಹೇಳಿದೆ. 'ಇದು ನೋಡಿ, ಎಲ್ಲರಿಗೂ ಆಮಂತ್ರಿಕೆ— ಕಪ್ಪೆಗಳ ಲಗ್ನಕ್ಕಾಗಿ !'

'ಅದೊಂದು ಇಲ್ಲಿಯ ಜನರ ಅಂಧಶ್ರದ್ಧೆ' ಎಂದು ಅವರೆಂದರು. ಅಗೊಳ್ಳೇ ವಿಚಿತ್ರವೆನಿಸಬಹುದು. ಇಲ್ಲಿಯ ಜನರ ಅಭಿಪ್ರಾಯದ ಪ್ರಕಾರ, ಈ ಮದುವೆಯಿಂದ ಎಷ್ಟೋ ಕಪ್ಪೆಗಳು ಒಂದೆಡೆಗೆ ನೆರೆದು ಮದುವೆಯ ಸಂಭ್ರಮದಲ್ಲಿ ಹೆಚ್ಚಿಚ್ಚಾಗಿ ಧ್ವನಿಮಾಡುತ್ತವೆ. (ಒದರುತ್ತವೆ)— ಲಗ್ನದ ಮನೆಯಲ್ಲಿ ಗದ್ದಲವಿರುವದಿಲ್ಲವೇ ? ಹಾಗೆ! ಆ ಧ್ವನಿಯಿಂದ ಮೋಡಗಳು ಆಕರ್ಷಿತವಾಗಿ ಬಂದು ಮಳೆ ಸುರಿಸುತ್ತವೆ..... ಮುಂ. ಮಳೆ ಬಂದನಂತರ ಕಪ್ಪೆಗಳು ಒದರುತ್ತವೆಯಾದ್ದರಿಂದ, ಕಪ್ಪೆಗಳು ಒದರಿದರೆ ಮಳೆ ಬರಲೇಬೇಕೆಂದು ಈ ಜನರ ತತ್ತ್ವ ವಿರಬಹುದು. ಅದೇನೇ ಇರಲಿ, ನಾಳೆ ನಿಮಗೆ ಸೂಟಿ ತಾನೆ? ಯಾವುದಾದರೊಂದು ಸ್ಥಳ ನೋಡಲಿಕ್ಕೆ ಹೋಗೋಣವೇ ?'

ಅಷ್ಟರಲ್ಲಿ ಪೇಪರಿನಲ್ಲಿಯ ಮತ್ತೊಂದು ಸಂಗತಿ ನನ್ನ ದೃಷ್ಟಿಯನ್ನೆಳೆಯಿತು. 'ಮನುಷ್ಯಾಕೃತಿಯಷ್ಟು ದೊಡ್ಡದಾದ ತಾರಾದೇವಿಯ ಮೂರ್ತಿಯನ್ನು—ಕೆಲವರು ಕದ್ದುಕೊಂಡು ಹೋಗುವಾಗ, ಪೋಲಿಸರು ಹಿಡಿದರಂತೆ. ಈ ಮೂರ್ತಿ ೨-೩ ಸಾವಿರ ವರ್ಷಗಳ ಪೂರ್ವದ್ದಂತೆ....'

'ಆ !! ಇದೇನು ಹೇಳುತ್ತಿದ್ದೀರಿ !! ಎಂದು ಉದ್ಗಾರತೆಗೆದರು ಪಂಡಿತಜಿಯವರು. 'ಹಾಗಾದರೆ ನಾಳೆ ನಾವು ಪ್ರೋಗ್ರಾಮ್ ರದ್ದುಗೊಳಿಸಬೇಕಾಯಿತು.'

'ಇದು ಇಲ್ಲಿಯದಲ್ಲ' ಎಂದು ನಾನು ಮುಂದೆ ಓದತೊಡಗಿದೆ. 'ಈ ಮೂರ್ತಿಯು ಕುರ್ಕಿಹಾರ್ ಎಂಬ ಗ್ರಾಮದಲ್ಲಿಯದು-ಗಯಾದ ಹತ್ತಿರ. ಈ ಊರಿಗೆ ಮೊದಲು 'ಕುಕ್ಕುಟಗಿರಿ ವಿಹಾರ' ಎಂಬ ಹೆಸರಿತ್ತಂತೆ. ಇಲ್ಲಿ ಗೌತಮ ಬುದ್ಧನು ಕೆಲವು ದಿವಸ ಇದ್ದನೆಂದು ಕಂಡುಬರುತ್ತದೆ....' 'ಬೆಳ್ಳಿ, ಬಂಗಾರ ಮುಂತಾದ ಬೆಲೆಯುಳ್ಳ ವಸ್ತುಗಳನ್ನು ಬಿಟ್ಟು, ಈ ದೇವರ ಮೂರ್ತಿಗಳನ್ನು ಯಾಕೆ ಕಳವು ಮಾಡುತ್ತಾರೆಯೋ ಈ ಜನ ?' ಎಂದು ನಾನೆಂದೆ.

'ಇನಕ್ಕೆ ಕೂಡ ಹೆಚ್ಚು ಬೆಲೆಬರಬಹುದು. ಈ ಜನರು ಇವುಗಳನ್ನು ಪುರಾತನ ವಸ್ತುಸಂಗ್ರಹಾಲಯಕ್ಕೆ ಮಾರುತ್ತಾರೆ.' ಎಂದು ಪಂಡಿತಜಿಯವರು ನುಡಿದರು. 'ನೀವು ತಾರಾವಿಗ್ರಹವೆಂದ ಕೂಡಲೆ ಉಗ್ರತಾರಾ ಎಂತಲೇ ನಾನು ಭಾವಿಸಿದೆ. ಹಾಗಾದರೆ ನಾಳೆ ವಸಿಷ್ಠಾಶ್ರಮ ಮತ್ತು ಉಗ್ರತಾರಾ ಮಂದಿರಕ್ಕೆ ಹೋಗೋಣವೇ ?'

'ಉಗ್ರತಾರಾ—ತಾರಾ ದೇವತೆಗಳಲ್ಲಿ 'ಉಗ್ರ' 'ಸೌಮ್ಯ' ಎಂದು ಭೇದವಿದೆಯೇ?' ಎಂದು ನಾನು ನಗುತ್ತಾ ಕೇಳಿದೆ.

'ಕಾಲಿಕಾ ಪುರಾಣದಲ್ಲಿ ಉಲ್ಲೇಖವಿದೆ—ಇವಳು ಶಿವನ ಆಜ್ಞೆಯ ಮೇರೆಗೆ ಉಗ್ರವಾದ ಕೆಲಸ ಕೈಕೊಳ್ಳಬೇಕಾದ್ದರಿಂದ, ಇವಳಿಗೆ ಉಗ್ರತಾರಾ ಎಂಬ ಹೆಸರು ಬಂದಿದೆ. ನಾನು ಆಗಲೇ ಹೇಳಿದೆನಲ್ಲ ವಸಿಷ್ಠಾಶ್ರಮವೆಂದು—ವಸಿಷ್ಠರು ಇಲ್ಲಿ ಆಶ್ರಮ ಹಾಕಿಕೊಂಡು ಕುಳಿತುಕೊಳ್ಳಲಿಕ್ಕೂ ಒಂದು ಕಾರಣವಿದೆ' ಎಂದು ಪಂಡಿತಜಿಯವರು ನುಡಿದರು.

ನನಗೆ ಮತ್ತಿನ್ನು ಆಶ್ಚರ್ಯವಾಗಿ 'ಸೂರ್ಯವಂಶದ ರಾಜರ ಕುಲಗುರುಗಳಾದ ವಸಿಷ್ಠರು ಅಯೋಧ್ಯೆಯನ್ನು ಬಿಟ್ಟು ಇಲ್ಲಿಗೇಕೆ ಬಂದರು?' ಎಂದು ಪ್ರಶ್ನಿಸಿದೆ.

'ನೀವು ಇಲ್ಲಿ ಕಾಮರೂಪದಲ್ಲಿರುವವರೆಗೆ, ಆ ಸೌಮ್ಯಮೂರ್ತಿ, ಸೂರ್ಯವಂಶದ ರಾಜರ ಕುಲಗುರುಗಳಾದ ವಸಿಷ್ಠರನ್ನು ಮರೆತು ಬಿಡಿರಿ' ಎಂದು ಪಂಡಿತಜಿಯವರು ಪ್ರಾರಂಭಿಸಿದರು. 'ಪೂರ್ವ ಕಾಲದಲ್ಲಿ ಆರ್ಯರು ಉತ್ತರ ಹಿಂದುಸ್ಥಾನವನ್ನೆಲ್ಲ ತಮ್ಮ ಆಧೀನ ಕ್ಕೊಳಪಡಿಸಿಕೊಂಡ ನಂತರ, ಪೂರ್ವಕ್ಕೂ ದಕ್ಷಿಣಕ್ಕೂ ತಮ್ಮ ವಸಾಹತುಗಳನ್ನು ಸ್ಥಾಪಿಸಿ, ತಮ್ಮ ಧರ್ಮ-ಸಂಸ್ಕೃತಿಗಳನ್ನು ಹಬ್ಬಿಸಲಿಕ್ಕೆ ಪ್ರಾರಂಭಿಸಿದವರು. ಆಗ ಪೂರ್ವಕ್ಕೆ—ಪ್ರಾಗ್ಜ್ಯೋತಿಷವೆಂದು ಹೆಸರಾದ ಈ ಪ್ರದೇಶಕ್ಕೆ ಬಂದ ಆರ್ಯರ ಮುಖಂಡರೇ ಈ ವಸಿಷ್ಠರು. ನರಕಾಸುರನ ಮೇಲೆ ಸಿಟ್ಟಾಗಿ ಕಾಮಾಖ್ಯಾದೇವಿಯು ನೀಲಾಚಲದಿಂದ ಅದೃಶ್ಯಳಾಗುವಳೆಂದೂ, ಮತ್ತು ತಂದೆಯಿಂದಲೇ ನರಕಾಸರನು ಕೊಲ್ಲಲ್ಪಡುವನೆಂದೂ ಶಾಪ ಕೊಟ್ಟು, ವಸಿಷ್ಠರು ಇಲ್ಲಿ ಸಂಧ್ಯಾಚಲದಲ್ಲಿ ಬಂದು ತಪಸ್ಸಿಗೆ ಕುಳಿತರು. ಕೃಷ್ಣನು ನರಕಾಸುರನನ್ನು ಯುದ್ಧದಲ್ಲಿ ಸಂಹರಿಸಿ, ಅವನ ಮಗನಾದ ಭಗದತ್ತನನ್ನು ಪಟ್ಟಕ್ಕೆ ಕುಳ್ಳಿರಿಸಿ, ಆರ್ಯರ ಪ್ರಭುತ್ವ ಬೀರಿದ. ಇದೆಲ್ಲಕ್ಕೂ ವಸಿಷ್ಠರೇ ಹೇಗೆ ಕಾರಣರಾದರೆಂಬ ಸಂಗತಿಯನ್ನು ನಾನು ಈ ಮೊದಲೇ ಹೇಳಿದ್ದೇನೆ.

ಪ್ರಸಿದ್ಧ ತಾಂತ್ರಿಕ ಗೋರಖನಾಥನ ಹೆಸರನ್ನು ನೀವು ಕೇಳಿರಬಹುದು. ಅವನು ಈ ಕಾಮಾಖ್ಯಾದೇವಿಯ ಭಕ್ತ. ಅವನ ಹೆಸರು ಹೇಳಲಿಕ್ಕೆ ಕಾರಣವಿಷ್ಟೆ— ಈ ಮಂತ್ರತಂತ್ರಗಳು ಇಲ್ಲಿಯೇ ಹೆಚ್ಚಾಗಿ ಕಂಡುಬರುತ್ತವೆ. ಕಾಮರೂಪ ಇವುಗಳ ತವರುಮನೆಯೆಂದೇ ಹೇಳಬಹುದು. ಇವುಗಳು ಹುಟ್ಟಿದ್ದು ವಾಮಾಚಾರದ ಪೂಜೆಯಿಂದ; ಆ ವಾಮಾಚಾರದ ಪೂಜೆ ಹುಟ್ಟಿನ್ನಕ್ಕೂ ವಸಿಷ್ಠರೇ ಕಾರಣರು.'

'ವಾಮಾಚಾರದ ಪೂಜೆಯೆಂದರೆ?' ನಾನು ಕೇಳಿದೆ.

'ನಾವೆಲ್ಲ ಮಾಡುವುದು ದಕ್ಷಿಣಾಚಾರವೆಂದು ಹೇಳುತ್ತಾರೆ.' ಎಂದರು ಪಂಡಿತಜಿಯವರು. 'ವಾಮಾಚಾರದಲ್ಲಿ ಪಂಚ 'ಮ'ಕಾರಗಳು ಪೂಜೆಯ ಮುಖ್ಯ ಅಂಗಗಳು—ಮಾಂಸ, ಮತ್ಸ್ಯ, ಮದಿರಾ, ಮದಿರಾಕ್ಷಿ, ಮೈಥುನ—; ಶಕ್ತಿ ಮತ್ತು ಶಿವರು ಆರಾಧ್ಯ ದೇವತೆಗಳು. ನೀವು ಕೇಳಿರಬಹುದು., ಈ ತೆರನಾದ ಪೂಜಕರಾದ ಅಸುರರು, ಅಸಾಧಾರಣ ಮಾಯಾಶಕ್ತಿಯನ್ನು ಪಡೆದಿದ್ದರೆಂದು.'

'ಈ ವಾಮಾಚಾರಕ್ಕೂ ವಸಿಷ್ಠರಿಗೂ ಏನು ಸಂಬಂಧ?' ಎಂದು ನಾನು ಕೇಳಿದೆ.

'ಅದನ್ನೇ ಹೇಳುತ್ತಿದ್ದೇನೆ' ಎಂದು ಪಂಡಿತಜಿಯವರು ಪ್ರಾರಂಭಿಸಿದರು: 'ಕಾಮರೂಪವು ಮೊದಲು ಒಳ್ಳೇ ಪುಣ್ಯಕ್ಷೇತ್ರವಾಗಿತ್ತು (ಇದರ ಬಗ್ಗೆ ಈ ಮೊದಲೇ ಹೇಳಿದ್ದೇನೆ). ಇಲ್ಲಿಯ ಪ್ರತಿಯೊಬ್ಬ ಸ್ತ್ರೀಪುರುಷರಲ್ಲಿ ಪಾರ್ವತಿ ಶಿವರ ಅಂಶವೇ ಇದ್ದುದರಿಂದ, ಎಲ್ಲರೂ ಪುಣ್ಯಜೀವಿಗಳೇ ಆದರು. ಆದ್ದರಿಂದ ಯಾರೂ ಯಮಲೋಕಕ್ಕೆ ಹೋಗದೆ, ಯಮನಿಗೊಂದು ದೊಡ್ಡ ಸಮಸ್ಯೆಯೇ ಬಿದ್ದಿತು. ಅವನು ಬ್ರಹ್ಮ-ವಿಷ್ಣುವಿರೊಂದಿಗೆ ಶಿವನನ್ನು ಪ್ರಾರ್ಥಿಸಿದ. ಶಿವನು ಅವರಿಗೆ ಅಭಯವಚನ ಕೊಟ್ಟು, ತನ್ನ ಗಣಗಳೊಂದಿಗೆ, ನಂದಿಯನ್ನೇರಿ ಕಾಮರೂಪಕ್ಕೆ ಬಂದ. ಅಲ್ಲಿದ್ದ ಉಗ್ರತಾರೆಗೆ (ನಾನು ಮೇಲೆ ಹೇಳಿದ ಉಗ್ರತಾರಾ ಮಂದಿರ) ಕಾಮರೂಪದಿಂದ ಎಲ್ಲರನ್ನೂ ಹೊಡೆದೋಡಿಸಲಿಕ್ಕೆ ಅಪ್ಪಣೆ ಕೊಟ್ಟ. ಅವಳು ಶಿವನ ಗಣಗಳೊಂದಿಗೆ, ಎಲ್ಲರನ್ನೂ ಹೊಡೆದೋಡಿಸಿ, ವಸಿಷ್ಠರು ತಪಸ್ಸು ಮಾಡುವಲ್ಲಿಗೆ—ಸಂಧ್ಯಾಚಲಕ್ಕೆ ಬಂದಳು. ವಸಿಷ್ಠರು ಅವಳನ್ನು ಲಕ್ಷ್ಯಿಸದಿರಲು, ಬಲವಂತದಿಂದ ಅವಳು ಅವರನ್ನು ಅಲ್ಲಿಂದ ಹೊಡಲು ಪ್ರಯತ್ನಿಸಿದಳು. ಆಗ ವಸಿಷ್ಠರು ಕೋಪಾವಿಷ್ಟರಾಗಿ ಅವಳನ್ನೂ, ಅವಳಿಗೆ ಆಜ್ಞೆ ಮಾಡಿದ ಶಿವನನ್ನೂ ಈ ರೀತಿಯಾಗಿ ಶಪಿಸಿದರು.—ನೀನು ಸ್ತ್ರೀಯಾಗಿ (ವಾಮಾ) ನನ್ನನ್ನು ಇಲ್ಲಿಂದ ಹೊರದೂಡಲು ಪ್ರಯತ್ನಿಸುತ್ತಿರುವುದರಿಂದ, ಇನ್ನು ಮೇಲೆ ನಿನ್ನನ್ನು ವಾಮಾಚಾರದ ಸ್ವಕಾರವಾಗಿಯೇ ಎಲ್ಲರೂ ಪೂಜಿಸುವಂತಾಗಲಿ; ಶಿವನ ಗಣಗಳೆಲ್ಲ ನ್ಲೇಚ್ಛರಂತೆ ವರ್ತಿಸುತ್ತ ಈ ಕೆಲಸದಲ್ಲಿ (ಎಲ್ಲರನ್ನೂ ಹೊಡೆದೋಡಿಸುವ) ನಿರತರಾಗಿರುವುದರಿಂದ, ಅವರೂ ಕೂಡ ನ್ಲೇಚ್ಛರಿಂದಲೇ ವಾಮಾಚಾರ ಪದ್ಧತಿಯಂದ ಪೂಜಿಸಲ್ಪಡಲಿ!"

ಈಗಲೂ ಸಹ ಇಲ್ಲಿ ಮಹಾಭೈರವನ ರೂಪದಲ್ಲಿ ಶಿವನಿಗೆ ಮಾಂಸ, ಮದಿರಾ, ಮದಿರಾಕ್ಷಿಯರಿಲ್ಲದೆ ಪೂಜೆ ಸಲ್ಲುವುದಿಲ್ಲ.

'ಶಾಂತ ಮೂರ್ತಿಗಳೆಂದು ಹೆಸರಾದ ವಸಿಷ್ಠರ ಬಗ್ಗೆ—ಅವರು ಹೀಗೆ ಸಿಟ್ಟಿಗೆದ್ದದ್ದನ್ನೂ, ಶಾಪ ಕೊಟ್ಟದ್ದನ್ನೂ ಎಲ್ಲಿಯೂ ಕೇಳಿಲ್ಲ.' ಎಂದು ನಾನೆಂದೆ.

'ನಾನು ಮೊದಲೇ ಹೇಳಿಲ್ಲವೇ? ಈ ಕಾಮರೂಪದ ವಸಿಷ್ಠರು' ಬೇರೆಯೇ! ಈ ವಸಿಷ್ಠರು ಸಿಟ್ಟಿನ ಮೂರ್ತಿಗಳು. ಇದಕ್ಕೆ ಉದಾಹರಣೆಯೆಂದರೆ ಕಾಲಿಕಾಪುರಾಣದಲ್ಲಿ ಹೇಳಿದ ಮೇಲಿನ ಉದಾಹರಣೆಗಳಷ್ಟೇ ಅಲ್ಲ. ಅವರ ಕೋಪದ ಕಿಡಿ ಐತಿಹಾಸಿಕ ಕಾಲದವರೆಗೂ ಸಿಡಿದಿದೆಯೆಂಬುದನ್ನೂ ನಿಮಗೆ ತೋರಿಸುತ್ತೇನೆ.

ಭಾರತದ ಉಳಿದ ಭಾಗಗಳಲ್ಲಿಯಂತೆ ಅಸಾಮದಲ್ಲಿ ಸಹ, ಅನೇಕ ರಾಜಮನೆತನಗಳು ಆಗಿ ಹೋದುವು. ಅವೆಲ್ಲವುಗಳಲ್ಲಿ 'ಅಹೋಮ' ವಂಶದ ರಾಜರೇ ಹೆಚ್ಚುಕಾಲ ಆಳಿದವರು. ಅವರ ಆಳಿಕೆಯಲ್ಲಿಯೆ

ಇದು ಸಾಮ್ರಾಜ್ಯದ ಘನತೆಯನ್ನು ಪಡೆಯಿತು. ಅಹೋಮರಿಂದಲೇ ಈ ಪ್ರಾಂತಕ್ಕೆ ಅಸಾಮವೆಂದು ಹೆಸರು ಬಂದಿತೆಂದು ಅನೇಕ ಇತಿಹಾಸ ಜ್ಞರ ಅಭಿಪ್ರಾಯವಿದೆ. ಇಂತಹ ಅಹೋಮವಂಶ ಪ್ರಾರಂಭವಾದ ಕಾರಣವೂ ಈ ವಸಿಷ್ಠರೇ! ಅವರ ಕೋಪವೇ!! ಅದರ ಸಂಗತಿ ಹೀಗಿದೆ :

ಕಾಮರೂಪವು ಪ್ರಕೃತಿಸೌಂದರ್ಯದ ಬೀಡು. ಇಲ್ಲಿಯ ಸೃಷ್ಟಿಸೌಂದರ್ಯ ಯಾರನ್ನೂ ಬೆರಗುಗೊಳಿಸುವಂತಹದು. ದೇವತೆಗಳು ಸಹ ತಮ್ಮ ಅರ್ಧಾಂಗಿ, ಅಪ್ಸರೆಯರೊಂದಿಗೆ ಇಲ್ಲಿ ಕ್ರೀಡಿಸುವುದಕ್ಕೆ ಬರುತ್ತಿದ್ದರಂತೆ. ಒಂದು ಸಾರೆ ಇಂದ್ರನು ತನ್ನ ರಾಣಿಯರೊಂದಿಗೆ, ಊರ್ವಸಿ, ಮೇನಕೆಯರನ್ನೊಡಗೊಂಡು ವಿಹರಿಸುವುದಕ್ಕಾಗಿ ಇಲ್ಲಿಗೆ ಬಂದನಂತೆ. ಇಲ್ಲಿಯ ಸೌಂದರ್ಯಕ್ಕೆ ಎಲ್ಲರೂ ಮುಗ್ಧರಾಗಿ ತನ್ಮುನ್ನೇ ತಾವು ಮರೆತು ಕ್ರೀಡೆಯಲ್ಲಿಯೇ ಮಗ್ನರಾದರು. ಅವರ ಹಾಸ್ಯ ವಿನೋದ ಸಂಗೀತಗಳಿಂದ ಇಡೀ ಪ್ರದೇಶ ತುಂಬಿಹೋಯಿತು. ಮುದ್ದೈನಕ್ಕನುಸಾರವಾಗಿ ವಸಿಷ್ಠರು ತಪಸ್ಸು ಮಾಡುತ್ತಿದ್ದ ಸಂಧ್ಯಾಚಲ ಅಲ್ಲಿಯೇ ಸಮೀಪವಾಗಿತ್ತು. ಆ ಗದ್ದಲದಿಂದ ವಸಿಷ್ಠರ ಏಕಾಗ್ರತೆಗೆ ಭಂಗಬಂದು ಕಣ್ಣು ತೆರೆದು ನೋಡಲು, ಇಂದ್ರನೇ ಕಣ್ಣಿಗೆ ಬಿದ್ದ. ಕೂಡಲೇ ಅವರು 'ನಿನ್ನ ವಿಷಯಲಂಪಟತನದಿಂದ ನನ್ನ ತಪಸ್ಸಿಗೆ ವಿಘ್ನ ತಂದಿದ್ದರಿಂದ, ನೀನು ಒಬ್ಬ ಮ್ಲೇಚ್ಛ ಸ್ತ್ರೀಯ ಸಂಗದಲ್ಲಿರುವಂತಾಗಲಿ' ಎಂದು ಇಂದ್ರನನ್ನು ಶಪಿಸಿದನು.

ಅದರಂತೆ ಇಂದ್ರನು ಮ್ಲೇಚ್ಛ ಸ್ತ್ರೀಯೊಡನೆ ಇದ್ದು ಅದರಿಂದ ಹುಟ್ಟಿದವನೇ ಈ ಅಹೋಮ. ವಂಶದ ಮೂಲಪುರುಷನೆಂದು ಹೇಳುತ್ತಾರೆ. ಇವೆಲ್ಲವುಗಳನ್ನು ನೋಡಲಾಗಿ ಇಲ್ಲಿಯ ಧಾರ್ಮಿಕ, ನೈತಿಕ, ರಾಜಕೀಯ ಜೀವನಗಳು ವಸಿಷ್ಠರಿಗಾಗಿ ಪೂರ್ವಕಾಲದಿಂದಲೂ ಹೇಗೆ ಬದಲಾಗುತ್ತ ನಡೆದಿದೆಯೆಂಬುದು ಗೊತ್ತಾಗುತ್ತದೆ ❋

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್
ರಿಪೇರಿ ಮಾಡುವವರು; ನೂರಾಪ ಪೂಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!
ಧಾರವಾಡದಲ್ಲಿ
ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**
ಸುಭಾಷ ರೋಡ್, ಧಾರವಾಡ

ಕಲ್ಪನಾಲೋಕದಲಿ ವಿಹರಿಸುವೆನು!

ಶ್ರೀ. **ಎಸ್. ಆರ್. ಪಾಡಿ**, 'ರಾಷ್ಟ್ರಭಾಷಾ ವಿಶಾರದ'

೧

ಈ ಜಗದ ಜಂಜಡವ ಮರೆತು ನಾ ಹಾಯಾಗಿ
ಕಲ್ಪನಾಲೋಕದಲಿ ವಿಹರಿಸುವೆನು!
ಅಲ್ಲಿನಾ ಮೇಲ್ಪಾಸು ಅಗ್ಗಗಲಿ ದೊರೆಕೊಳಲು
ಸೊಗದ ಸಗ್ಗವ ಸೂರೆಗೊಳದೆ ಬಿಡೆನು ||

೨

ಅಲ್ಲಿ ಬಡತನವಿಲ್ಲ ಕಷ್ಟಸಿಷ್ಟುರವಿರಿಯೆ
ಕಲ್ಪನಾಸಾಮ್ರಾಜ್ಯದಧಿರಾಜನು—
ಪರತಂತ್ರನೆನಿಸಿಲ್ಲ ನೋಡೆ ಸರ್ವ ಸ್ವತಂತ್ರ
ಸ್ವೇಚ್ಛೆಯಿಂದೋಡಾಡಿ ವಿಹರಿಸುವೆನು ||

೩

ಹಲವು ಮಹದಾಳೆಗಳ ಹೊಂಗನಸನುರೆ ಕಟ್ಟಿ
ನೊಂದವರಿಗಲ್ಲಿ ಇಷ್ಟಾರ್ಥ ಸಿದ್ಧಿ
ಈ ಲೋಕದಸ್ಥಿರದ ಸುಖಕಿಂತ ಮಿಗಿಲಾಗಿ
ದೊರೆಕೊಂಬುದಲ್ಲಿ ಸಂತಸ ಸಮೃದ್ಧಿ ||

೪

ಎಲ್ಲೆಲ್ಲಿ ನೋಡಿದರು ಜೆಲ್ಲಿರುವ ಸುಮರಾಶಿ
ಕಂಪ್ಪು ಬೀರುವ ತಂಪಿನೆಲರು ಬೀಸಿ—
ಮೈಮನವ ತಣಿಸುತಿರೆ ಕೋಲಿ ಬರುತಿದೆ ಕೊಳಲ
ನಾದಲಹರಿಯು ಗಾನಸುಧೆಯ ಸೂಸಿ ||

೫

ಭಾವನಾಭಾಮೆಯನ್ಪೊಡಗೂಡಿ ನೋದದಿಂ
ವಿಹರಿಸುವೆ ನಂದನದಿ ಭೋಗಿಯಾಗಿ
ಪೊಂದಿ ಪರಮಾನಂದ ಭಾವದ ಸಮಾಧಿಯಲಿ
ಇಹವನ್ನೆ ಮರೆಯುವೆನು ಯೋಗಿಯಾಗಿ ||

೬

ಸತ್ಯಸದ್ಗುಣ ನ್ಯಾಯ ಆದರ್ಶ ಜೀವನಕೆ
ಬೆಲೆಯಿಲ್ಲದೀ ಜಗವ ನೋಡಿ ನಗುವೆ—
ಇಲ್ಲಿಲ್ಲದೆಲ್ಲ ಸೌಭಾಗ್ಯಗಳ ಪಡೆದಲ್ಲಿ
ಸುಖಶಾಂತಿಯನ್ನೈದಿ ಮೈಮರೆಯುವೆ ||

ನಸುಕಿನಲ್ಲಿ ಏಳುವದು

(ಹರಟೆ)

ಶೀ. ಎಸ್. ಎಸ್. ಗದಗಕರ, ಬಿ. ಎ. ಧಾರವಾಡ.

ನಸುಕಿನಲ್ಲಿ ಏಳುವವರೂ ಇರುವರು. ಏಳದಿರುವವರೂ ಇರುವರು.
ಇಬ್ಬರೂ ತಮ್ಮ ತಮ್ಮ ನಡೆವಳಿ ಒಳ್ಳೆಯದೆಂದು ಸಶ್ರಮಾಣವಾಗಿ ವಾದಿಸುವರು.
ವಾದಿಸಲೇ ಬೇಕಿನ್ನುವವರಿಗೆ ತಮ್ಮ ತಮ್ಮ ನಡೆವಳಿಯೇ ಒಳ್ಳೆ.

ಕ್ಷಣ ಕ್ಷಣಕ್ಕೆ ಬೋಧನೆ ಪ್ರಬಲವಾದ ಈಗಿನ ಮನ್ವಂತರದಲ್ಲಿ ಈ ಹೊಸದೊಂದು ಬೋಧನೆಗೆ ಈ ಪ್ರಾಣಿ ತೊಡಗಿದನಲ್ಲಾ—ಎಂದು ತಲೆಕೆಡಿಸಿಕೊಳ್ಳುವನರಿಗೆ, ಅಂತಹ ಯಾವ ತೊಡಕೂ ಈ ಲಘುಲೇಖನದಲ್ಲಿಲ್ಲವೆಂದು ಪ್ರಾರಂಭಕ್ಕೇ ಸೂಚನೆ ಕೊಡುವೆ. ಹಾಗೆ ನೋಡಿದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಸಾಕಷ್ಟು ಎಡೆ ಇರುವಾಗ, ಯಾವ ವ್ಯಕ್ತಿಯನ್ನೂ ಯಾರ ವಿಚಾರ ಲಹರಿಗೂ ಕಟ್ಟಿ ಹಾಕುವದು ಸರಿ ಎನಿಸದು. ಹಲವರಂತೂ, 'ತೀವ್ರ ಎದ್ದೆವು; ಮುಂದೇನು ಮಾಡುವದು? ಇದೇ ನನಗೆ ಸಮಸ್ಯೆ'-ಎಂದರೆ, ಅಂತಹರು ಮನಸೋಕ್ತ ಮಲಗುವದೇ ಕ್ಷೇಮವೆಂದು ಹೇಳದೇ ಗತ್ಯಂತರವಿಲ್ಲ; ಅಲ್ಲದೆ, ನಸುಕಿನಲ್ಲೆದ್ದರೆ ಅಂತಹದೇನು ನಿಶ್ಚಿತವಾಗಿ ಸಾಧಿಸುವದೆಂದು ಖಡಾಖಡಿ ಕೇಳುವ Utilitarian Stand pointದ ಸದ್ಗೃಹಸ್ಥರಿದುರು ನಾವು ನಿರುತ್ತರ ಕುಮಾರರಾಗುವದೇ ಮೇಲಲ್ಲವೆ?

ಏನೇ ಆಗಲಿ, ಜನಸಾಮಾನ್ಯರ ಮಾತೇ ಬೇರೆ. ವಿವೇಕದ ಆಟ ಅವರ ಮುಂದೆ ನಿರಂತರ ನಡೆಯುವದು. ಅಂತಹರಿದುರು ಸಮಂಜಸವಾದದ ಸರಣಿ ಹೂಡಲು ಏನು ಅಡ್ಡಿ?

ಮುಖ್ಯವಾಗಿ ನಸುಕಿನ ಸದ್ಗುಣ ಬಣ್ಣಿಸುವವರು ಅದರ ಮೋಹಕತೆಗೆ ಮೂರು ಹೋಗಿರಬೇಕು. ರಾಗರಂಜಿತ ಆಕಾಶ, ಹಕ್ಕಿಗಳ ಚಿಲಿಪಿಲಿ ನಾದ, ಪ್ರಶಾಂತತೆ-ಕವಿಹೃದಯಿಗಳನ್ನಂತೂ ಸಹಜವಾಗಿ ಸೂರೆಗೊಳ್ಳುವವು. ಗಂಧರ್ವರ ಸೀಮೆಗೆ ಒಯ್ದು ಮುಟ್ಟಿಸುವವು. (ಸ್ವಲ್ಪ ವೇಳೆ ಆಚೆ! ಹಿಂದುಗಡೆ ತರುವವು,) "The very houses seem to be asleep" ಎಂದ ವರ್ಡ್ಸ್‌ವರ್ಥ್ ಕವಿಯ ಉನ್ಮಾದದ ಒಂದು ಅಂಶ ಎಂತಹ ಅರಸಿಕರಿಗೂ ಒಮ್ಮೊಮ್ಮೆ ಆಗ ಆಗಿಯೇ ತೀರುವದುಂಟು. ತುಂತುರಿನ ಸೋನೆಮಳೆಯಾಗಿ ಸುಂಯ್ ಎಂಬ ನಾದ ಹುಟ್ಟುವಾಗಂತೂ ಅದನ್ನಾಲಿಸುತ್ತ ನಿಲ್ಲದವರೇ ವಿರಳ. ಕೊನೆಗೆ ಏನು ಸಾಧಿಸದಿದ್ದರೂ ರೈಲುನಿಲ್ದಾಣವಿದ್ದ ಊರಿನಲ್ಲಿ ನಸುಕಿನಲ್ಲಿ ಅಲೆದಾಡಲು ರೈಲಿನ ದಿಕ್ಕಿನಲ್ಲಿ ಹೊರಟರೆ, ಪ್ಯಾಸಿಂಜರ್ ಗಾಡಿಯೊಂದು ಕಣ್ಣಿಗೆ ಬೀಳುವದು. (ಅದು ತಡಮಾಡಿ ಬಂದ ಹಿಂದಿನ ರಾತ್ರಿಯದಿದ್ದರೂ ಚಿಂತೆ ಇಲ್ಲ!)

ನಸುಕಿನಲ್ಲಿ ಏಳುವದರಲ್ಲಿ ಏನೊ ಅನಿರೀಕ್ಷಿತ ಲಾಭವಿದೆಯೆಂಬದು ನನಗೆ ವಿದ್ಯಾರ್ಥಿ ದೆಸೆಯಿಂದಲೂ ಪೂರ್ಣ ಮನದಟ್ಟಾಗಿದೆ. ನಮ್ಮ ಗುರುಗಳೊಬ್ಬರು (ದುರ್ದೈವದಿಂದ ಈಗವರಿಲ್ಲ!) ಅತಿ ರಂಜಕ ಮಾತುಗಾರರು. ಯಾವ ವಿಷಯವನ್ನು ಅವರು ಪ್ರತಿಪಾದಿಸಿದರೂ, ತಮ್ಮ ವಾಗ್‌ವೈಖರಿಯಿಂದ ನಮ್ಮನ್ನು ಮರುಳು ಮಾಡಿಬಿಡುತ್ತಿದ್ದರು. ಇಂಗ್ಲಿಶ್, ಮಾತೃಭಾಷೆ ಎನ್ನುವಷ್ಟು ಅದು ಅವರಿಗೆ ಕರಗತವಾಗಿ ಬಿಟ್ಟಿತ್ತು. ಅಂತಹರು ನಸು ತೀವ್ರ ಏಳುವದರ ಮಹಿಮೆಯನ್ನೊಮ್ಮೆ ವರ್ಗದಲ್ಲಿ ಅಸ್ಖಲಿತವಾಗಿ ಪ್ರತಿಪಾದಿಸುತ್ತ- I lost a good job once, man, as I could not rise early!" ಎಂದು ಉದ್ಗಾರ ತೆಗೆದರು. ಉಳಿದ ಯಾವ ವೈಯಕ್ತಿಕ ಅಡಚಣೆ ಅವರ ನೌಕರಿಗೆ ಅಡ್ಡ ಬಂದುವೊ ದೇವರೇ ಬಲ್ಲ! ಅಂತೂ ಅವರು ಕಲಿಸಿದ ಆ ಸದ್ಗುಣದ ಮಹಿಮೆ ಮಾತ್ರ ಇಂದಿಗೂ ನನ್ನ ಮನೋಮಂದಿರದಲ್ಲಿ ದೃಢವಾಗಿ ಬೇರೂರಿದೆ—ಚಿರ್ತಾರ್ಪಿತವಾದಂತೆ!

ಇರಲಿ—ತೀವ್ರ ನಸುಕಿನಲ್ಲಿ ಎದ್ದೇನು ಮಾಡುವುದು ಎಂದು ನುಂಡ ವಾದಿಸುವವರಿಗೆ, ಮಲಗಿಯೇ ಬಿಡಿರೆಂದು ಬುದ್ಧಿವಂಕರು(?) ಲೈನ್ ಕ್ಲಿಯರ್ ಕೊಟ್ಟರೂ, ನಮ್ಮ ಪೂರ್ವಜರು ಮಾತ್ರ ಈ ಸಮಸ್ಯೆಯನ್ನು ಬಹಳ ಮಾರ್ಮಿಕವಾಗಿ ಬಿಡಿಸುತ್ತಿದ್ದರು. ಹಿಂದಿನ ಇಪ್ಪತ್ತೈದು ವರುಷಗಳ ಸಾಮಾಜಿಕ ಜೀವನ ನೆನಸಿಕೊಳ್ಳಿರಿ ಬೇಕಾದರೆ: "ತಮ್ಮಾ, ಏದಕ್ಕೇ ಎದ್ದು ಅಮರಕೋಶ, ಸಮಾಸಚಕ್ರ ಘಟ್ಟಿ ಮಾಡು; ಆಗ ಓದಿದ್ದು ಕಡಿತನಕಾ ನೆನಪು"—ಎಂದು ಕರ್ಮಠ (ಧಾರ್ಮಿಕ ದೃಷ್ಟಿಯಿಂದಲ್ಲ-ಶ್ರದ್ಧೆಯ ದೃಷ್ಟಿಯಲ್ಲಿ) ತಂದೆ ವಾತ್ಸಲ್ಯದಿಂದ ಹೇಳಿ, ಅವನ (ಮಗನ) ಮನಸ್ಸಿಲ್ಲದಿದ್ದರೂ ಓದಿಸಿದ್ದು ನಮಗೆ ಗೊತ್ತು. ಆಗ "ಇದೇನು, ಪೀಡಾ ಬಂದಿತೆಂದು" ಮುಖ ಸಣ್ಣ ಮಾಡಿದ್ದರೂ, ಈಗ ಅದರ ಲಾಭ ಉಣ್ಣುವ ಮಹಸೀಯರಿಲ್ಲಿಲ್ಲ?

ನಸುಕಿನಲ್ಲೇಳುವುದರ ಉಪಯುಕ್ತತೆ ಬಹಳವೆಂದು ಹೇಗೋ ಮನಗಂಡರೂ, ಏಳುವವನ ತೊಡಕುಗಳು ಸಾಕಷ್ಟು ನೈಜವಿರುವುದಲ್ಲದೆ ರಂಜಕವೂ ಇರುವೆಂದು ಒಪ್ಪಲೇಬೇಕು. ಮುಖ್ಯವಾಗಿ ಅವಿಭಕ್ತ ಕುಟುಂಬದಲ್ಲಿ ಓದುವ ಹುಡುಗನು (ಹುಡುಗಿಯಲ್ಲ-ಅಕಗೇಕೆ ಆಷ್ಟು ಶ್ರಮ?) ಅಕಸ್ಮಾತ್ತಾಗಿ ತೀವ್ರ ಏಳಲೇಬೇಕೆಂದು ಸಂಕಲ್ಪಿಸಿ ಅಲಾರ್ಮ್ ಗಡಿಯಾರದ ನೆರವು ಪಡೆದುಕೊಂಡಿದ್ದರೂ, ಕತ್ತಲೆಯಲ್ಲಿ-ಕಂದೀಲು ಹುಡುಕುವಾಗ (ವಿದ್ಯುದ್ದೀಪ ಎಲ್ಲರ ಮನೆಯಲ್ಲಿ ಹೇಗೆ ಬಂದಾವು?) ಅದರ ಗ್ಲಾಸನ್ನೇ ಒಡೆಯುವ-ಒಡೆದ ಉದಾಹರಣೆ ಎಷ್ಟಿಲ್ಲ? ಅಷ್ಟಕ್ಕೇ ಬೈಗಳ ಜೊತೆಗೆ ಓದಿಗೂ ಕೊನೆ. ಮತ್ತೆ ನಿದ್ರೆಗೆ ಹಾಸಿಗೆ ಹಾಸಿ

ಹೊಟ್ಟಂತೆ—ಎಂದರೂ ತಪ್ಪಿಲ್ಲ. ಇದೆಲ್ಲ ಪೇಚು ಸಹಜವಾಗಿ ಪರಿಹಾರ ವಾಯತೆನ್ನೋಣ. ಆದರೆ ಆಗಿನ ಚಹದ ಸಿದ್ಧತೆ ಹುಡುಗ ತಾನೇ ಮಾಡಿಕೊಳ್ಳಬೇಕು. ಬೇರೆಯವರೇಕೆ ಬಂದಾರು? ಓದುವವರು, ಪರೀಕ್ಷೆಗೆ ಕೂಡ್ರುವವರು. ಪರೀಕ್ಷೆಗೆ ಕೂಡುವವನು ಅವರೊ ಇವನೊ?

ವಿದ್ಯಾರ್ಥಿಗಳ ಮಾತು ಬೇರೆ. ಬೇರೆಯವರ ದೃಷ್ಟಿಯಿಂದ ಇನ್ನೂ ಅವಲೋಕಿಸಿದ್ದಾದರೆ, ನಸುಕಿನಲ್ಲಿ ಎದ್ದವರಲ್ಲಿ ಹಲವಾರು ವಿಶಿಷ್ಟ ಪಂಗಡಗಳಿವೆ. ತಾವು ಎದ್ದೊಡನೆ 'ಏಳು ನಾರಾಯಣಾ' ಎಂದು ಒಂದೆಡೆ ದೇವರನ್ನಾಹ್ವಾಸಿಸುವ ಧರ್ಮಿಷ್ಠರಿದ್ದರೆ, ದಪ್ಪೋದ್ದಕ್ಕೆ ಸಂಸಾರಿಗರು ಅವಾಚ್ಯ ನುಡಿಗಳಿಂದಲೆ ಕೆಳಗಿನವರನ್ನು ಎಚ್ಚರಗೊಳಿಸುವ ಪರಿಪಾಠ ಇನ್ನೊಂದೆಡೆ. ಅತ್ತೆ ಅಕಸ್ಮಾತ್ತಾಗಿ ತೀವ್ರನೆದ್ದಿದ್ದರೆ, ನಲ್ಲುಡಿಯಿಂದಲೇ ಸೊಸೆಯನ್ನು ಎಬ್ಬಿಸಿಯಾಳು ಅನ್ನುವದು ಕಠಿಣ! ಅತಿಥಿ-ಅಭ್ಯಾಗತರು, ಅಥವಾ ರಾತ್ರಿಯಲ್ಲಿ ಈಶಭಜನೆಯಲ್ಲಿ ಕಾಲಕ್ಷೇಪ ಮಾಡಿದ ಋಷಾಸಕರ ಮಾತೇ ಬೇರೆ. 'ಯಾ ನಿಶಾ ಸರ್ವ ಭೂತಾನಾಂ' ಸಂಘವದು.

ಮರುದಿನ ನಸುತೀವ್ರ ಮಹತ್ತ್ವದ ಕಾರ್ಯಕ್ರಮವಿಟ್ಟುಕೊಂಡ ಗೃಹಸ್ಥೀಯರಿಗೆ ತೀವ್ರ ಏಳುವುದರ ಅರಿವು ಚೆನ್ನಾಗಿ ಇರುವುದು. ಯಾವುದೊ ಸಂಘ ಸಂಸ್ಥೆಯ ಉದ್ಘಾಟನೆ, ಭಾಷಣಕ್ಕೆ ಹೋಗುವ ನಿಶ್ಚಿತೆ ತೀವ್ರ ಏಳುವ ಪ್ರಶ್ನೆ ಇಲ್ಲ. ಅಲ್ಲಿ ಮರ್ಯಾದೆಗೆ ಸ್ಥಾನವಿವೆ. ಅಂತಹರು ತೀರ ಸಾಮಾನ್ಯ ಭಾಷಣಕಾರರಿದ್ದರೆ(Amateur)ಇರಲು ಸಲಗಲಿಕ್ಕೂ ಇಲ್ಲ. ಆದರೆ ಜೀವನದ ಪ್ರಶ್ನೆ ನಿರ್ಣಯವಾಗು ಅಂತಹ ಮಹತ್ತ್ವದ ಕಾರ್ಯವಿದ್ದವರು ಮಾತ್ರ ಬೇಗ ಏಳುವ ಗುಣ ಹೊಗಳಿಯೇ ಹೊಗಳುತ್ತಾರೆ, ಮಹಾತ್ಮಾಜಿ, ನೆಪೋಲಿಯನ್ನರಂತಹ ಸ್ಥಿತಪ್ರಜ್ಞಾನಸ್ಥೆ ಅವರಿಗೆ ಹಿರಿದೆಂದು ತೋರಿದರೆ ವಿಶೇಷವೇನಿಲ್ಲ. ಭೀಷ್ಮರಂತಪರ ಇಚ್ಛಾಶಕ್ತಿಯ ಮಾತು ಸಣ್ಣ ಬಾಯಿಗೆ ದೊಡ್ಡ ತುತ್ತಲ್ಲವೆ?

ಏನೇ ಆಗಲಿ! ತೀರ ವಾಸ್ತವ ಸಾಮಾಜಿಕ ರಂಗಕ್ಕೆಳಿದರೆ ಸ್ಪರ್ಧೆಯ ಲಹರಿಗೆ ಎಷ್ಟೇ ಬೆಲೆ ಇದ್ದರೂ, ನುಸುಸ್ಸಿರಲಿ ಬಿಡಲಿ, ಕೇಗಿಲುಯೋಗಿ (ಉಪಹಾರಗೃಹದ ಜೋಗುಳಕ್ಕೆ ಮನೋತರೂ ಕರವಾ ಇಲ್ಲ!) ತೀವ್ರ ಏಳುವನು, ಆ ಉಪಹಾರಗೃಹದ ಕಾರ್ಮಿಕ ಪಂಗಡವೇ ಟಕ್ಕು ಹಿಡಿದು ಮಲಗುವದು. ಬಿಡುವಿನ ದಿನ ಈ ನುಡಿತದ ಸೇಡು ತೀರಿಸಿಕೊಳ್ಳಲಿ ಬೇಕಾದರೆ! ಹಾಗೆಯೆ ನೇಕಯೇ ಕಣನೆಂದು ಲಾಗಹಾಕುವ ಬೃಹನ್ನಗರ ನಿವಾಸಿಗಳು ಎಷ್ಟಾದರೂ ಗಡನಾಡಿ ಎದ್ದಾರು? ತೀವ್ರ ಏಳದೇ ವಿಧಿಯಿಲ್ಲ! ಪರೀಕ್ಷೆಯ ಸ್ಪರ್ಧೆಯೇ ಬದಲಾಗಿ ವಿದ್ಯಾರ್ಥಿಗಳ ಬುದ್ಧಿಗ್ರಹಣದ ಮಟ್ಟ ನಿಶ್ಚಿತವಾಗಿ ತೀವ್ರ ಸುಲಭವಾಗಿ ತಿಳಿಯಲೆಂದು ವೇಪರ್ 'ತಪಾಸಿಸುವ' Examine) ಯಂತ್ರವನ್ನೇ ಹುಡುಕಿ ತೆಗೆದು ಮುಂದುವರಿದ (?) ಕ್ಷಣೆಕ ಮುಂದಾಳುಗಳು ವೇಳೆಯ ಮಹತಿಯನ್ನು ಅಲಕ್ಷಿಸಿಯಾರೆ? ಸು ತೀವ್ರ ಏಳುವದೇ ಏಕೆ, ಮಲಗುವ ಕಾಲವನ್ನು ನಿಯಂತ್ರಿಸಿಮಾರು! ಅಂಗಡಿಗಳಲ್ಲಿ ಗಿರಾಕಿಗಳಿಂದ ಹಣ ತೆಗೆದುಕೊಳ್ಳಲು ವೇಳೆ

ಕನಸಿನಲ್ಲಿ.....!

ಶ್ರೀ. ಆರ್. ವ್ಹಿ. ಹೊರಡಿ, ಹಾವೇರಿ

ಬಾಳಬೇಗುದಿಯಲ್ಲಿ ಬೆಂದ ಮನ ನಲಿದಿತ್ತು
ಕನಸಿನರಮನೆಯಲ್ಲಿ ಅರಸನಂತೆ
ದಣಿದ ತನು ದಣಿದಿತ್ತು, ಮೊಗದಿ ನಗೆ ಮೂಡಿತ್ತು
ಸಂತಸದ ನಗೆ ಸೂಸಿ ಅಮರಗೀತೆ! —೧

ಕಲ್ಪನೆಯು ಕಟ್ಟಿದ್ದ ಭವ್ಯ ಮಹಲಿನ ರೂಪ
ಬಗೆಬಗೆಯ ಬಣ್ಣದಲಿ ಬಲು ರಂಜಿಸಿ
ಬಂದು ಮುಂದಿನ ನೆನಪು, ಹೊಯ್ದಾಡಿ ಸಿರಿದೀಪ
ಅಂಜಿಸಿತು ಮನವನ್ನು ಚಣ ಅಣಕಿಸಿ —೨

ಬಾಳ ಗೋಳುಗಳೆಲ್ಲ 'ಹಿಂದು' 'ಮುಂದು' ಗಳೆಲ್ಲ
ನೆನಾಯವಾದುವು ಮೂಡಿ ಬೆಳಕು ತೋರಿ
ಗಿರಿಯೇರಿ ನಿಂತಿರಲು ಸೂತ ಆಸೆಗಳೆಲ್ಲ
ಕಾಯಕವು ಕರೆಯುವದು ಗೆಲುವು ಕೂರಿ —೩

ಕನಸಾದರೇನಾಯ್ತು? ಅಳಿಲೆಲ್ಲ ಮರೆತಿರಲು
ನಿತ್ಯನಲಿವಿನ ನಗೆಯ ಗಾನ ಹಾಡಿ,
ಜಿಲುವು ರಾತಿಯು ಸೂಸಿ, ಕೈಬೀಸಿ ಕರೆಯುವದು
ಬಿಸಿಲುಗುದುರೆಯ ತೆರದಿ ಮುಂದೆ ಓಡಿ —೪

ಬಲಿತ ಬಯಕೆಗಳೆಲ್ಲ ಕೊನೆಯನ್ನು ಕಂಡಿರಲು
ಸಗ್ಗದಲಿ ಹಿಗ್ಗಿ ನಾ ಮೆರೆದಾಡಿದೆ
ನಿತ್ಯ ಜೀವನದಲ್ಲಿ ಮತ್ತೆ ಬಂದಿಳಿದಿರಲು
'ತಿರುಕನಾ ಕನಸೆಂದು' ಕನವರಿಸಿದೆ. —೫

ಇಲ್ಲದ್ದರಿಂದ ಯಂತ್ರವನ್ನು ನಿರ್ಮಿಸಿ ಅಚ್ಚುಕಟ್ಟಾಗಿ ಪ್ರಾಮಾಣಿಕ ವ್ಯವಹಾರ ಸಾಗಿಸಿದ ಮುಂದುರಿದ ರಾಷ್ಟ್ರಗಳ ಜನಾಂಗಗಳು, ತೀವ್ರ ಏಳುವನ್ನು ಹೇಗೆ ವಂದಿಸಿಯಾವು? ಬೇಗ ಮಲಗುವ ಪ್ರಶ್ನೆಯೇ ಅಲ್ಲಿ ಇಲ್ಲ.!

ಇಂತು ನಸುಕಿನಲ್ಲೇಳುವದರ ಗೂಢನೇನಿದೆ ಎಂದು ಚಿಕಿತ್ಸಕತೆಯಿಂದ ಪ್ರಶ್ನೆ ಹಾಕುವವರಿಗೆ ಆದರಲ್ಲಿಲ್ಲದ್ದೇನು ಎಂದು ಕೇಳಬೇಕಲ್ಲದೆ ಬೇರೇನು? ಆ ಗುಣವೊಂದು ಮಾನವನ ಮನೋರಂಗದ ಚಟುವಟಿಕೆಗಳ ಉಚಿತ ಹಾಗೂ ಉತ್ತೇಜಕ ಹಿನ್ನೆಲೆಯಲ್ಲವೆ? ಬರಿ "It is a world in small letters" ಎಂದು ಉದ್ಗಾರ ತೆಗೆದರೆ ಪುನರುಕ್ತಿಯಾದೀತು!

———

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ನಾವು ಕೇಳಿಕೊಂಡ ಮೇರೆಗೆ **'ಬೆದರು'** ಸಾಮಾಜಿಕ ರೂಪಕದ ಬಗೆಗೆ ೫ ಜನರಿಂದಲೂ 'ಗೋಪಣ್ಣನ ಪ್ರಶ್ನೆ' ಎಂಬ ಕಥೆಯನ್ನು ಕುರಿತು ೪ ಜನರಿಂದಲೂ **ವಿಮರ್ಶೆ**ಗಳು ಬಂದಿವೆ.

'ಬೆದರು' ರೂಪಕದ ವಿಮರ್ಶಕರು:

೧ 'ಕಮಲಾಕರ' ಸದಲಿಗಿ. ೨ ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ. ೩ ಶ್ರೀ. ಸಿ. ಬಿ. ಮಹೀಂದ್ರಕರ, ಬೆಳಗಾಂವಿ. ೪ ಶ್ರೀ. ಕೆ.ವಿ. ತಿರುಮಲೇಶ್ವರಭಟ್ಟ, ಪೊನ್ನೆಸ್ಪಲ. ೫ ಶ್ರೀ. ಎ. ಜಿ. ತಿನಡೀಕರ, ಬೆಳಗಾಂವಿ.

'ಗೋಪಣ್ಣನ ಪ್ರಶ್ನೆ' ಕಥೆಯ ವಿಮರ್ಶಕರು:

೧ ಶ್ರೀ. ಕೆ. ವಿ. ಶರಣಪ್ಪ, ಗುಲ್‌ಬುರ್ಗಾ. ೨ ಶ್ರೀ. ಕೆ. ವಿ. ತಿರುಮಲೇಶ್ವರಭಟ್ಟ, ಕಾಸರಗೋಡು. ೩ ಶ್ರೀ. ಎಂ. ಗಂಗಾಧರ ಭಟ್ಟ, ನೀರ್ಕಾಲು. ೪ ಶ್ರೀಮತಿ ವಸಂತಲಕ್ಷ್ಮಿ, ಮದ್ರಾಸ್.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯವರೇ ನೋಡಿ, ನಿರ್ಣಯವನ್ನು ಕೊಟ್ಟಿದ್ದಾರೆ:

'ಬೆದರು' ರೂಪಕವನ್ನು ಕುರಿತುಬಂದ ವಿಮರ್ಶೆಗಳಲ್ಲಿ **ಶ್ರೀ. ಕೆ. ವಿ. ತಿರುಮಲೇಶ್ವರಭಟ್ಟ** ಮತ್ತು **'ಕಮಲಾಕರ'** ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಬಿ. ಮಹೀಂದ್ರಕರ ಅವರ ವಿಮರ್ಶೆ ಜೀನ್ನಾಗಿದೆ ವಿಮರ್ಶೆಪಡು ಸಾಮಾನ್ಯವಾಗಿವೆ.

'ಗೋಪಣ್ಣನ ಪ್ರಶ್ನೆ' ಕಥೆಯ ವಿಮರ್ಶೆಗಳಲ್ಲಿ ಶ್ರೀಮತಿ **ವಸಂತಲಕ್ಷ್ಮಿ**ಯವರ ವಿಮರ್ಶೆ ಅತ್ಯುತ್ತಮವಾಗಿದೆ. ಮಿಕ್ಕುವುಗಳೂ ಒಳ್ಳೆಯ ವಿಮರ್ಶೆಗಳೆ. ಕಥೆಯ ವಿಮರ್ಶೆಗಳೆಲ್ಲವೂ ಉತ್ತಮವಾಗಿರುವುದು ಸಂತೋಷದ ಸಂಗತಿ.

'ನವ್ಯಕಥೆ'ಯ ಕುರಿತು ವಿಮರ್ಶಿಸುವವರು, ಈಗ ದೇಶ-ವಿದೇಶಗಳಲ್ಲಿ ರೂಢಿಯಾಗಿರುವ ಅದರ ಸ್ವರೂಪ-ತಂತ್ರಗಳ ವೈಶಿಷ್ಟ್ಯವನ್ನು ಅರಿತುಕೊಂಡು ಕೈಹಾಕುವುದು ಒಳ್ಳೆಯದು. ಹಿಂದಿನ ಕಥೆಗಳ ಒರೆಗಲ್ಲಿಗೆ ಹಚ್ಚಿ ಇದರ ಬಣ್ಣ-ಬೆಲೆಗಳನ್ನು ಕಟ್ಟಬಾರದು. ವಾಸ್ತವತಾ ಪ್ರಧಾನ ಸಾಹಿತ್ಯವನ್ನು ಒರೆಹಚ್ಚಿನೋಡುವ ಮೊದಲು, ಅದರ ಸೌಂದರ್ಯವೆಂತಹದೆಂಬುದನ್ನು ಕಾಣುವ ವಾಸ್ತವ ದೃಷ್ಟಿಯನ್ನು ವಿಮರ್ಶಕ ಪಡೆದಿರಬೇಕು.

ಮುಂದಿನ ತಿಂಗಳ **ಮೇಲಾಟ**ಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ **'ತಿಮ್ಮುಡು ಕೈಹಿಡಿದ ಹುಡುಗಿ'** ಎಂಬ ಕಥೆಯನ್ನಾಗಲಿ, **'ಶ್ರೀ ಶಂಕರಾಚಾರ್ಯರು'** ಎಂಬ ತರಂಗರೂಪಕವನ್ನಾಗಲಿ ಕುರಿತು, ವಿಮರ್ಶೆಗಳನ್ನು ಬರೆದು ಕಳುಹಿಸಬೇಕು. ಎರಡೂ ವೈಶಿಷ್ಟ್ಯಪೂರ್ಣವಾದ ಕೃತಿಗಳು. ವಿಮರ್ಶಕರು ಒಂದು ಸಲವಲ್ಲದೆ ಮತ್ತೆ ಮತ್ತೆ ಓದಿಕೊಂಡು ವಿಮರ್ಶೆಗೆ ತೊಡುಗುವುದು ಒಳ್ಳೆಯದು.

—ಸಂಪಾದಕರು

"ಬೆದರು"

ರೂಪಕದ ವಿಮರ್ಶೆ

ಶ್ರೀ. ಕೆ. ವಿ. ತಿರುಮಲೇಶ, ಹೊನ್ನೆಪ್ಪಲ

'ಬೆದರು' ಎಂಬ ಈ ರೇಡಿಯೋ ಪ್ರಹಸನದಲ್ಲಿ ಶ್ರೀ. ವಿ. ಬಿ. ದೇಶಪಾಂಡೆ ಅವರು ನಮ್ಮ ಸಮಾಜಜೀವನದಲ್ಲಿ ಕಾಣಿಸಿಕೊಳ್ಳುತ್ತಿರುವ ತೊಡಕುಗಳ ಒಂದು ಓರೆನೋಟವನ್ನು ಚಿತ್ರಿಸಿದ್ದಾರೆ. ಸುನೀತಾ ಎಂಬವಳು ಇನ್ನೂ ಮದುವೆಯಾಗದ ತರುಣಿ. ಅವಳು ಧಾರವಾಡದಲ್ಲಿ ಟಾಯಿಪಿಸ್ಟ್ ಕ್ಲಾರ್ಕ್ ಆಗಿ ಕೆಲಸಮಾಡುತ್ತಿದ್ದಳು. ಆಗ ಕೃಷ್ಣರಾಯ ಎಂಬ ಪುಂಡ ಅವಳನ್ನು ಕೆಡಿಸಬೇಕು ಎಂದು ಹೊಂಚುಹಾಕಿದ. ಇದನ್ನು ತಿಳಿದ ಇಂಜನೀಯರ್, ಸುನೀತಾಳಿಗೆ ಬೆಳಗಾಂವಿಗೆ ವರ್ಗಮಾಡಿದರು. ಬೆಳಗಾಂವಿಯ ಆಫೀಸಿನ ಹೆಡ್ ಕ್ಲಾರ್ಕ್ ಪಾಟೀಲ ಪಾಂಡಪ್ಪನಾದರೂ ಕೃಷ್ಣರಾಯನಿಗಿಂತ ಒಂದು ಹೆಜ್ಜೆ ಮುಂದೆ. ಪಾಂಡಪ್ಪನ ಹೆಂಡತಿ ರೋಗಗ್ರಸ್ತಳು. ಅವಳನ್ನು ಬದುಕಿಸುವ ಗೊಡವೆಗೆ ಪಾಂಡಪ್ಪ ಹೋದವನಲ್ಲ. ಅವಳ ದಹನವನ್ನು ಮನಸ್ಸಿನಲ್ಲೇ ಮಾಡಿದ ಪಾಂಡಪ್ಪ, ತರುಣಿ ಸುನೀತಾಳನ್ನು ಮದುವೆಯಾಗ ಬಯಸಿದ. ಈ ಕೆರುಕುಳದಿಂದ ಬಿಡುಗಡೆಗೊಳ್ಳಲಿಕ್ಕಾಗಿ ಸುನೀತಾ ಬೆಂಗಳೂರಿನ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿದಳು. ಮದುವೆಯಾಗದ ಹುಡುಗಿಯರನ್ನು ಎಲ್ಲರೂ ಕೆಟ್ಟ ದೃಷ್ಟಿಯಿಂದ ನೋಡುತ್ತಾರೆ; ಆದರೆ ಮದುವೆಯಾದ ಸ್ತ್ರೀಯರ ಗೊಡವೆಗೆ ಯಾರೂ ಹೋಗುವುದಿಲ್ಲ ಎಂಬುದನ್ನು ಸುನೀತಾ ಕಂಡುಕೊಂಡಳು; ಅವಳು ನಕಲಿ ತಾಳಿಯೊಂದನ್ನು ತನ್ನ ಕುತ್ತಿಗೆಗೆ ಕಟ್ಟಿಕೊಂಡು ಹೊಸ ಕಂಪೆನಿಗೆ ಸೇರಿದಳು. ಆ ಕಂಪೆನಿಯ ಮ್ಯಾನೇಜರ್ ರಾಜಾರಾವ್ ಒಳ್ಳೆಯ ಮನುಷ್ಯ. ಸುನೀತಾ ತನಗೆ ಮದುವೆಯಾಗಿದೆಯೆಂದು ನೊದಲು ಸುಳ್ಳುಹೇಳುತ್ತಾಳೆ. ಆದರೆ ಕೊನೆಗೆ ರಾಜಾರಾಯನ ಒಳ್ಳೆಯತನಕ್ಕೆ ಮನಸೋಹಿಸಿ, ಅವನನ್ನು ಮದುವೆಯಾಗುತ್ತಾಳೆ.

ಇಲ್ಲಿ ಮುಖ್ಯನಾದ ಒಂದು ವ್ಯಕ್ತಿಚಿತ್ರಣ ಪಾಟೀಲ ಪಾಂಡಪ್ಪನದು. ಇಂತಹ ವ್ಯಕ್ತಿಗಳನ್ನು ನಾವು ನಮ್ಮ ಪರಿಸರದಲ್ಲಿ ಕಾಣುತ್ತೇವೆ. ಪಾಂಡಪ್ಪ ಸ್ವಾರ್ಥಿ. ಆದರೆ ಅವನ ಸ್ವಾರ್ಥ ಬಹು ಖಂಡನೀಯವಾದುದು. ತನ್ನ ಧರ್ಮಪತ್ನಿ ರೋಗಪೀಡಿತೆಯಾಗಿ ನವೆಯುತ್ತಿದ್ದಾಳೆ. ಇಷ್ಟರತನಕ ಅವಳು ಅವನಿಗೆ ಸುಖಕೊಟ್ಟಿದ್ದಾಳೆ. ಅವನಿಗಾಗಿ ತನ್ನ ಆರೋಗ್ಯದ ತ್ಯಾಗಮಾಡಿದ್ದಾಳೆ. ಅಂತಹ ತ್ಯಾಗಮಯಿ ಜೀವಿ ಪಾಸಿಗೆ ಹಿಡಿದು ನರಳುತ್ತಿರುವಾಗ, ಒಂದು ಬಿಂದು ಕಣ್ಣೀರು ಹರಿಸುವ 'ಹೃದಯ' ಪಾಂಡಪ್ಪನಿಗಿಲ್ಲ. ಅವಳು ಬದುಕಿದರೂ ತನಗೆ ಅವಳಿಂದ ಇನ್ನು ಮುಂದೆ ಪ್ರಯೋಜನವಿಲ್ಲ. ಅವಳು ಸಾಯಬೇಕೆಂಬುದು ಅವನ ಪೈಶಾಚಿಕ ರೀತಿಯ ಬಯಕೆಯಾಗಿದೆ. 'ತನ್ನ ಹೆಂಡತಿ ಇನ್ನೂ ಜೀವದಿಂದ ಇದ್ದಾಗಲೇ, ಅವಳು ಸತ್ತುಹೋಗುತ್ತಾಳೆಂದು ನಿಶ್ಚಯ ಮಾಡಿಕೊಂಡು, ಮನಸ್ಸಿನೊಳಗೇ ಅವಳನ್ನ ದಹನಮಾಡಿ, ಈಗಾಗಲೇ ಎರಡನೇ ಮದುವೆಯ ವಿಚಾರ ನಡೆಸಿದ್ದಾನೆ ಪಾಂಡಪ್ಪ.' 'ಪಾಂಡಪ್ಪ' ಎಂದು ಕರೆದರೆ ಯಾರೋ ಮುದುಕರನ್ನು ಕರೆದಂತೆ ಅನಿಸಿಗೆ ಎನಿಸುತ್ತದೆ! ಅದಕ್ಕಾಗಿ ಅವನನ್ನು ಮಿ. ಪಾಟೀಲ ಎಂದು ಕರೆಯಬೇಕಂತೆ! ಇದೇನೂ ಲೇಖಕರ ಅತಿಶಯೋಕ್ತಿಯಲ್ಲ. ಇಂತಹ ಮುಂದಿಯನ್ನು ನಾವು ಸುತ್ತಮುತ್ತ ಕಾಣುತ್ತಿದ್ದೇವೆ. ಹತ್ತುಮಕ್ಕಳ ತಂದೆಯಾದರೂ ಹರಯದ ಹುಡುಗಿಯರನ್ನು ಮದುವೆಯಾಗುವ 'ನಾಯಿಯ ಚಪಲ'ದ ಮುದುಕರನ್ನು ಕಾಣುವುದು ಸಂಭವನೀಯ. ಪಾಟೀಲ ಪಾಂಡಪ್ಪ ಮಾನವೀಯತೆಯನ್ನು ಗಾಳಿಗೊಡ್ಡಿದ ಒಬ್ಬಾನೊಬ್ಬ ರೂಕ್ಷಸರು. ಪಾಂಡಪ್ಪನ ಚಿತ್ರಣ ಪ್ರಹಸನದಲ್ಲಿ ಸಹಜವಾಗಿ, ಒಳಿತಾಗಿ ಮೂಡಿದೆಯೆಂಬುದರಲ್ಲಿ ಸಂಶಯವಿಲ್ಲ.

ಸುನೀತಾ ದಿಟ್ಟಿಯಾದ ಹುಡುಗಿ. ಅವಳ ಮಾತು ಹಾಗೆ ನಾದುದು. ಪಾಂಡವ್ಯನಿಗೆ ಅವಳು ಕೆರಳಿ ಹೇಳುವ ಮಾತು ಸಮಾಜಚಿತ್ರಣವನ್ನು ರೂಪಿಸಿದರೆ, ಅವಳು ತಾಯಿಯೊಡನೆ ಹೇಳುವ ಧೈರ್ಯದ ಮಾತು ಸಮಾಜದಲ್ಲಿ ಬದುಕಬೇಕೆಂಬ ದಿಟ್ಟ ತನದ ಪ್ರತೀಕವಾಗಿದೆ. ಅವಳು ನಕಲಿ ತಾಳಿ ಕಟ್ಟಿಕೊಂಡುದಾದರೂ ಇದಕ್ಕೇನೇ. ಅವಳ ಸಾಹಸ ಜೀವನವೇ ಈ ಪ್ರಹಸನದ ಜೀವಾಳವಾಗಿದೆ.

ಶ್ರೀ. ದೇಶಪಾಂಡೆಯವರು ರಚಿಸುವ ಸಂಭಾಷಣೆ ನಿಜಕ್ಕೂ ಉತ್ಸಾಹದಿಂದೊಡಗೂಡಿದೆ. ಸಂಭಾಷಣೆಯ ಶೈಲಿ ಎಲ್ಲರಿಗೂ ಸಿದ್ಧಿಸುವುದಿಲ್ಲ. ಕಷ್ಟಪಟ್ಟು ರಚಿಸಿದ ಸಂಭಾಷಣೆಯಲ್ಲಿ ಸಹಜತ್ವ ಮಾಯವಾಗಿ ಕೃತಕತ್ವ ಕಂಡುಬರುತ್ತದೆ. ಆದರೆ ಈ ನಾಟಕದಲ್ಲಿ ಸಂಭಾಷಣೆಗೆ ಜೀವಕಳೆ ಬಂದಿದೆ; ಸಹಜತ್ವ ತುಂಬಿದೆ. ಅಡಿತೋರುವ ನಾಟಕದಲ್ಲಾದರೆ ಮಾತಿಗಿಂತಲೂ ನಟನೆಗೆ ಹೆಚ್ಚು ಪ್ರಾಧಾನ್ಯ. ಆದರೆ ರೇಡಿಯೋ ನಾಟಕದಲ್ಲಿ ಮಾತಿನಿಂದಲೆ ಎಲ್ಲ ಆಗಬೇಕು. ಶ್ರಾವಕನ ಕಣ್ಣುಗಳಲ್ಲಿ ನಾಟಕವನ್ನು ಕಟ್ಟಿ ತೋರಿಸುವ ಸಾಮರ್ಥ್ಯ ಮಾತುಗಳಲ್ಲಿರಬೇಕು. ಅದು ಶ್ರೀಯುತರ ಶೈಲಿಯಲ್ಲಿ ಇದೆ ಎಂಬುದರಲ್ಲಿ ಸಂಶಯವಿಲ್ಲ.

ಈ ವಿಮರ್ಶೆ ಪೂರ್ಣವಾಗಬೇಕಾದರೆ ಇನ್ನೂ ಸಾಲ್ಕು ಮಾತುಗಳನ್ನು ಹೇಳಬೇಕಾಗುತ್ತದೆ. ಇದನ್ನು ನಾನು ರಚನಾತ್ಮಕ ವಿಮರ್ಶೆಯ ದೃಷ್ಟಿಯಿಂದ ಬರೆಯುವುದು ಅನಿವಾರ್ಯವಾಗಿದೆ.

ಈ ರೂಪಕವನ್ನು ಸೂಕ್ಷ್ಮವಾಗಿ ಅವಲೋಕಿಸುವಾಗ ಒಂದು ವಿಚಾರ ಸುಳಿಯುತ್ತದೆ. ಇದು ಯಾವ ಉದ್ದೇಶವನ್ನು ಒಳಗೊಂಡಿದೆ ಎಂದು ನನಗೆ ತಿಳಿಯುವುದಿಲ್ಲ. ಇದು ರಚನಾತ್ಮಕವಾಗಿಯಂತೂ ಇಲ್ಲವೇ ಇಲ್ಲ. ಇದರಲ್ಲಿ ನನಗೆ ಯಾವ ರೀತಿಯಿಂದಲೂ ಮನೋರಂಜನೆಯು ಕಾಣಿಸುವುದಿಲ್ಲ. ಮನೋರಂಜನೆಯು ದೊರೆಯಬೇಕಾದರೆ ಕೃತಿಯಲ್ಲಿ ಯಾವುದಾದರೊಂದು ಪ್ರಶ್ನವಾದ ರಸನಿರಬೇಕು. ಇದರಲ್ಲಿ ಯಾವ ರಸವಿದೆ? ಇದು ನೀರಸವಾಗಿದೆ ಎಂದು ಅಭಿಪ್ರಾಯಪಟ್ಟರೆ ತಪ್ಪಾಗಲಾರದು. ಇದಕ್ಕೆ ತಕ್ಕುದಾದ ವಿವರಣೆಯನ್ನು ಕೊಡುವೆನು.

ವಿಮರ್ಶೆ, ಲೇಖನ, ಶಾಸ್ತ್ರಾದಿಗಳು ಪ್ರಭುಸಮಿತ್ವವಾದ ಸಾಹಿತ್ಯಗಳು. ಉಳಿದುದನ್ನು ಕಾಂತಾಸಮ್ಮಿತ ಸಾಹಿತ್ಯವೆಂದು ಹೇಳಬಹುದು. ಕಾಂತಾಸಮ್ಮಿತ ಸಾಹಿತ್ಯವು ಮನೋರಂಜನೆಯೊಂದಿಗೆ ಸಮಾಜದ ಹಿತವನ್ನು ಕಾಪಾಡಬೇಕು. ಇದನ್ನು ಒಪ್ಪಿಕೊಂಡರೆ ಈ ಪ್ರಹಸನವು ಇದಕ್ಕೆ ಅನುಗುಣವಾಗಿಲ್ಲವೆಂಬುದು ಗೊತ್ತಾಗುತ್ತದೆ.

ಶ್ರೇಷ್ಠ ವಿಮರ್ಶಕರಾದ Whitehead ಈ ರೀತಿ ಹೇಳುತ್ತಾರೆ. Human beings require something which absorbs them for a time, something out of the routine which they can stare at..... It (art) justifies itself both by its immediate enjoyment, and also by its discipline of the inmost being. Its discipline is not distince from enjoyment, but by reason of it. ಸ್ವಲ್ಪ ಸಮಯಕ್ಕಾದರೂ ತನ್ನನ್ನು ಮರೆತು ಬೇರೊಂದು ಜಗತ್ತಿನಲ್ಲಿ ವಿಹರಿಸಲು ಮಾನವನು ಬಯಸುತ್ತಾನೆ. ಮನೋರಂಜನೆಯುಳ್ಳ ಸಾಹಿತ್ಯಕೃತಿಗೆ ಇದು ಸಾಧ್ಯ. ಲೇಖಕನು ಪ್ರತಿಪಾದಿಸುವ ತತ್ತ್ವವು ಮನೋರಂಜನೆಗೆ ಹೊರತಾಗಿರಬಾರದು. ಅವನು ಹೇಳುವ ತತ್ತ್ವವು ಮನೋರಂಜನೆಯ ಪರಿಣಾಮವಾಗಿ ಬೇಕು. 'ಕೃತಿಯು ಓದುಗನನ್ನು ತನ್ನೆಡೆಗೆ ಸೆಳೆದು ಓದುಗ ಲಕ್ಷ್ಯವನ್ನು ತನ್ನಲ್ಲಿ ಕೇಂದ್ರೀಕರಿಸಬೇಕು. ಕತೆಯು ಕುತೂಹಲ ಜನಕವಾಗಿದ್ದರೆ ಮಾತ್ರವೇ ಇದು ಸಾಧ್ಯ. ಮತ್ತು ಹೀಗಿಲ್ಲ ಕೃತಿಯು ನಿರರ್ಥಕವೆಂದು' ಪ್ರಖ್ಯಾತ ವಿಮರ್ಶಕ ಡಬ್ಲ್ಯು ಸಾಮರ್ಸೆಟ್ ಮಾಮ್ ಅಭಿಪ್ರಾಯಪಡುತ್ತಾರೆ.

ಇದರ ತಳಹದಿಯಿಂದ ನಾವು 'ಬೆದರು' ರೇಡಿಯೋ ಪ್ರಹಸನವನ್ನು ವಿಮರ್ಶಿಸಿದರೆ, ಇದೊಂದು 'ಸೋಲು' ಎಂದು ಹೇಳಬೇಕಾಗುತ್ತದೆ. ಓದುಗನಿಗೆ (ಅಥವಾ ಶ್ರಾವಕನಿಗೆ) ಇದರಲ್ಲಿ ಕುತೂಹಲವಾಗಲಿ, ಆಸಕ್ತಿಯಾಗಲಿ ಉಂಟಾಗುವುದು ಸಾಧ್ಯವಿಲ್ಲ. ಓದುಗ ಲಕ್ಷ್ಯವನ್ನು ಹಿಡಿದು ನಿಲ್ಲಿಸಲು ಇದು ಶಕ್ತವಾಗಿಲ್ಲ. ಮನೋರಂಜನೆ ಇದರಲ್ಲಿ ಅವಕಾಶವಿಲ್ಲ. ಬಾನುಲಿಯಲ್ಲಿ ಪ್ರಸಾರವಾಗುವ ಯೋಗ್ಯತೆ ಇದಕ್ಕೆ ಇಲ್ಲ.

ಲೇಖಕರ ಪ್ರಯತ್ನಕ್ಕೆ ತಣ್ಣೀರೆರಚುವುದು ನನ್ನ ಉದ್ದೇಶವಲ್ಲ. ಲೇಖಕರು ಒಳ್ಳೆಯ ಪ್ರಬಂಧವನ್ನು ಬರೆಯಲಿ. ಆದರೆ ಇಂತಹ ನಾಟಕಗಳನ್ನು ಬರೆಯುವುದು ಬೇಡ. ಅಥವಾ ಬರೆದರೆ ಅದು ಸ್ವಾಯೋಗಿಕ ತಳಹದಿಯಲ್ಲಿಯೆ ಇರಲಿ.

ಆದರೆ ಶ್ರೀಯುತರ ಸಂಭಾಷಣಾಶೈಲಿಯನ್ನು ಅವಲೋಕಿಸುವಾಗ ಇವರು ಒಳ್ಳೆಯ ನಾಟಕಗಳನ್ನು ಬರೆಯಬಲ್ಲರು ಎಂದು ನನಗೆ ಕಾಣುತ್ತದೆ. ಒಳ್ಳೆಯ ಕಥಾವಸ್ತು, ಓದುಗನನ್ನು ತನ್ನೆಡೆಗೆ ಸೆಳೆಯುವ ತಂತ್ರ ಮತ್ತು ತತ್ತ್ವ ಪ್ರತಿಪಾದನೆಯ ಪರಿಣಾಮವನ್ನು ಒಳಗೊಂಡ— ಅದರೆ ಅದಕ್ಕಿಂತ ಬೇರೆಯಲ್ಲವೆ— ಮನೋರಂಜನೆ ಇವುಗಳನ್ನು ಸಾಧಿಸಿಕೊಂಡರೆ, ಶ್ರೀ. ದೇಶಪಾಂಡೆ ಒಳ್ಳೆಯ ನಾಟಕಕಾರರಾಗಬಲ್ಲರು.

ಗೋಪಣ್ಣನ ಪ್ರಶ್ನೆ

"ವಸಂತ ಲಕ್ಷ್ಮಿ" ಮದ್ರಾಸ್

(ಕಥೆಯ ವಿಮರ್ಶೆ)

"ಎಲ್ಲವೂ ಒಗಟು, ಒಗಟು, ಒಗಟು" ಎಂಬುದು ಗೋಪಣ್ಣನ ಪ್ರಶ್ನೆ; ಅದು ಎಲ್ಲರ ಪ್ರಶ್ನೆಯೂ ಆಹುದು. ನಮ್ಮ ಸುತ್ತಲಿನ ಸೃಷ್ಟಿ, ನಮ್ಮ ಜೀವನ ಮತ್ತು ನಮ್ಮ ಸುತ್ತಮುತ್ತಲಿನ ಜೀವನ ಇವುಗಳನ್ನು ಅರಿಯಲು ಮನುಷ್ಯನು ಎಷ್ಟು ಪ್ರಯತ್ನಗಳನ್ನು ಮಾಡಿದರೂ ಅವು ಇನ್ನೂ ಒಡೆಯಲಾರದ ಒಗಟುಗಳೇ ಆಗಿವೆ. ಗೋಪಣ್ಣ ಬೆಳಗಿನಿಂದ ಸಾಯಂಕಾಲದ ವರೆಗೆ ಕಂಡ ವಿವಿಧ ಜೀವನದೃಶ್ಯಗಳು ಒಂದೊಂದು ಬಗೆಯ ಒಗಟುವಾಗಿವೆ; ಈ ದೃಶ್ಯಗಳು ಗೋಪಣ್ಣನ ತಲೆಯಲ್ಲಿ ಪ್ರಶ್ನೆಗಳ ತುಮುಲವನ್ನೇ ಎಬ್ಬಿಸಿ, ಅವನನ್ನು ಅಸ್ವಸ್ಥ ಮಾಡುತ್ತವೆ; ಆ ಅಸ್ವಸ್ಥತೆಯಲ್ಲಿಯೇ ಅವನಿಗೆ ನಿದ್ರೆ ಬರುತ್ತದೆ

ಗೋಪಣ್ಣನು ಬೆಳಗ್ಗೆ ಗುಡಿಗೆ ಹೋದಾಗ ಗುಡಿಯ ಮುಂದಿದ್ದ ಕಿರಾಣಿಯ ಅಂಗಡಿಯಲ್ಲಿ, ನೊದಲನೆಯ ಗಂಡನನ್ನು ಕಳೆದುಕೊಂಡು ಬಡಿಕೆಯಾಗಿದ್ದ ನೀಲವ್ವನಿದ್ದರೆ, ನೀಲವ್ವನನ್ನೇ ರೂಪದಲ್ಲಿ ಹೋಲುತ್ತಿದ್ದ ಗೋಪಣ್ಣನ ತಂಗಿ ಸುಶೀಲೆ, ಮಕ್ಕಳಾಗದ ಗಂಡನ ಹಿಂಸೆಯನ್ನು ಸಹಿಸಿ ಸತ್ತು ಹೋದ ಸಂಗತಿಯು ನೆನಪಾಗಿ, ಅವಳ ಚಿತ್ರವೂ ಗೋಪಣ್ಣನ ಕಂಗಳ ಮುಂದೆ ಬಂದು ನಿಲ್ಲುತ್ತದೆ. ಕಷ್ಟಜೀವಿಯಾದ ಕಲ್ಲು ಮುದಿ ಎತ್ತುಗಳನ್ನು ಹೊಡೆದುಕೊಂಡು ಬರುವ ದೃಶ್ಯವು, ಮಲ್ಲು ಸುತ್ತು ಅವನ ಹೆಂಡತಿ ದುಡಿದು ಮನೆಗೆ ಹಿಂತಿರುಗುತ್ತಿದ್ದ ದೃಶ್ಯವು ಜೀವನವೆಂದರೆ ಬರಿ ಕಷ್ಟ ಎಂದು ಸಾರುತ್ತವೆ. ಗೋಪಣ್ಣ ಈ ದೃಶ್ಯಗಳನ್ನು ಕಂಡು ನುಂದೆ ಬರುವುದರಲ್ಲಿಯೇ ಪುಷ್ಪವಾಗಿ ಬೆಳೆದ ಕೋಣನಂತಿದ್ದ ಶೇಷಾಚಾರಿಯು ಬರುತ್ತಾನೆ. ಯಾವಾಗಲೂ ಊಟದ ನಿಚಾರವನ್ನೇ ಮಾಡುತ್ತಿದ್ದ ಶೇಷಾಚಾರಿ, ಕಷ್ಟಜೀವಿಗಳಾದ ಮಲ್ಲು, ಕಲ್ಲು: ಇಲ್ಲಿ ಬಾಳಿನ ಎರಡು ಭಿನ್ನಚಿತ್ರಗಳನ್ನೇ ತೋರಿಸಲಾಗಿದೆ. ಇದಾದನಂತರ ಸಂಗ್ಯಾ-ಬಾಳ್ಯಾನ ಬಯಲಾಟದ ತಾಲೀಮಿನ ದೃಶ್ಯವನ್ನು ಗೋಪಣ್ಣನು ಕಾಣುತ್ತಾನೆ. ಪ್ರಾಣಿಗಳ ಕುಣಿತ; ಮಂಗ, ನಾಯಿ, ಒಂಟೆ ಇವುಗಳ ಮುಖಗಳನ್ನು ಹೋಲುವ ಅಲ್ಲಿಯ ಜನರ ಮುಖಗಳು— ಇವೆಲ್ಲ ಜಗತ್ತಿನಲ್ಲಿಯ ನಿಲಾಸದ ಮತ್ತೊಂದು ಚಿತ್ರ. ಬಯಲಾಟದ ಸಂಗಡ ಕರಡಿಯ ಮಜಲಿನ ಚಿತ್ರ—ಪ್ರಾಣಿಯನ್ನು ಮನುಷ್ಯನು ತನ್ನ ಸ್ವಾಧೀನತೆಯಲ್ಲಿಟ್ಟು ತನ್ನ ಸ್ವರಕ್ಕೆ ಕುಣಿಸಿದ ಚಿತ್ರ. ಪ್ರಾಣಿಯನ್ನು ಸ್ವಾಧೀನತೆಯಲ್ಲಿಡುವ ಯೋಗ್ಯತೆ ಬಂದರೂ ತನ್ನವೇ ಮುಖವನ್ನೆಲ್ಲ ಇಲ್ಲವಾಗಿಸುವ ಯೋಗ್ಯತೆ ಬಂದಿಲ್ಲ ಎಂದು ಸಾರಿ ಹೇಳುತಿವೆ. ಹಂಕು ಸೀರೆಯ ಹುಂಗಸು ಮತ್ತು ಅವಳ ಮುದ್ದುಮಿದ ಮಗು. ಶವಪ್ಪ ಶೆಟ್ಟರದು ಮತ್ತೊಂದು ಬಗೆ—ಮಗನಿಗೆ ಶಿಕ್ಷಣವನ್ನು ಕೊಡುವ ಯೋಗ್ಯತೆ ಇದೆ; ಆದರೆ ಮಗನಿಗೆ ಅದನ್ನು ಸ್ವೀಕರಿಸುವ ಯೋಗ್ಯತೆ ಇಲ್ಲ—ಪ್ರತಿ ಸಲ ಬಿ. ಎ. ಪರೀಕ್ಷೆಗೆ ಕಟ್ಟುತ್ತಲೇ ಇರುತ್ತಾನೆ. ಕಲ್ಲಪ್ಪನ ಪರಿಸ್ಥಿತಿಯು ತುಂಬಾ ಹದಗೆಟ್ಟದೆ—ಶರೀರವೆಲ್ಲ ಕೊಳೆಯುತ್ತಿದೆ ಅದೆಂಥಹೋ ರೋಗ!

ಈ ದೃಶ್ಯಗಳನ್ನೆಲ್ಲ ನೋಡಿದಾಗ ಜಗತ್ತೇ ದ್ವಂದ್ವಮಯವಾಗಿರುವಂತೆ ತೋರುತ್ತದೆ—ಸುಖ-ದುಃಖ, ಆರೋಗ್ಯ-ಅನಾರೋಗ್ಯ, ಕಷ್ಟ-ನಿರಾಸು, ಸಿರಿವಂತಿಕೆ-ಬಡತನ—ಇವುಗಳ ದ್ವಂದ್ವದೇ ಜಗತ್ತಿನಲ್ಲಿ ನಡೆದಂತೆ ತೋರುತ್ತದೆ.

ಈ ದೃಶ್ಯಗಳನ್ನೆಲ್ಲ ಕಂಡ ಗೋಪಣ್ಣನಿಗೆ ಪಗಡೆಯ ಆಟಕ್ಕೆ ಕರೆಯು ಬರುತ್ತದೆ. ಆಟಕ್ಕೆ ಹೋದಲ್ಲಿ ಬಂದ ಗೌಡರ ಬಸಪ್ಪನದು ಒಂದು ಬಗೆಯ ಕಲೆಯಾದರೆ, ಬಿಳಿಯ ಕೂದಲಿನ ಹರಿಪಂತರದು ಮತ್ತೊಂದು ವಿಧ! ಹರಿಪಂತನು ಹೊನ್ನು ಮುಟ್ಟಿದರೂ ಮಣ್ಣಾದೆ ಗೌಡರ ಬಸಪ್ಪನು ಮಾಡಿದುದೆಲ್ಲ ಮೂಲಿಗುಂಪಾಗುತ್ತದೆ.

ಪಗಡೆಯ ಆಟನನ್ನು ಆಡಿ ಬಂದ ಗೋಪಣ್ಣನಿಗೆ ಜಗತ್ತೇ ಒಂದು ಗುಡಿ, ನಾವೆಲ್ಲರೂ ಆ ಗುಡಿಯಲ್ಲಿ ನಡೆದ ಪಗಡೆಯಾಟದಲ್ಲಿಯ ಪಗಡೆಗಳು ಎಂಬೆನಿಸುತ್ತದೆ. ಆಟನನ್ನು ಆಡುವವರೇ ಬೇರೆ, ನಾವೆಲ್ಲ ಆಟದಲ್ಲಿಯ ಪಗಡೆಗಳಂತೆ ಅವರ ಇಚ್ಛೆಯನ್ನು ಅನುಸರಿಸಬೇಕು. ಹೀಗೇಕೆ, ಎಂಬ ಪ್ರಶ್ನೆಗೆ ಉತ್ತರವೇ ಹೊಳೆಯುವದಿಲ್ಲ ಗೋಪಣ್ಣನಿಗೆ! ಆದುದರಿಂದ ಅವನ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ, ನಾವಿರಾರು ಚೀಳುಗಳು ಕಡಿದಷ್ಟು ವೇದನೆ ಅವನಿಗೆ ಆದರೆ ಆ ವೇದನೆಯನ್ನು ನಿವಾರಿಸುವ ಮಾರ್ಗವನ್ನೇ ಗೊತ್ತಿಲ್ಲ—ಇದೇ ಗೋಪಣ್ಣನ ಅನಸ್ಥೆಯ ಪರ್ಣನೆ. ಹೀಗಿರುವುದಕ್ಕಿಂತ ಮಗುವಿನ ಹಾಗೆ ಅಜ್ಞಾನಿಯಲ್ಲಿರುವುದೇ ಒಳಿತು, ಅಥವಾ ಕಲ್ಲಿನ ಹಾಗೆ ನಿರ್ವಿಕಾರವಾದರೂ ಆಗಬೇಕು ಎಂದು ಗೋಪಣ್ಣನಿಗೆ ಅನಿಸಿದರೂ, ಆದರಿಂದ ಯಾವ ಪ್ರಯೋಜನವೂ ಇಲ್ಲ.

ಹೀಗೆ ಗೋಪಣ್ಣನ ಪ್ರಜ್ಞೆಯ ಓಟವು ಒಂದು ದಿನದಲ್ಲಿ ಸಾಗಿದ ರೀತಿಯನ್ನು ಈ ಕತೆಯಲ್ಲಿ ನಿರೂಪಿಸಲಾಗಿದೆ. ಜೀವನವೇ ಒಂದು ದೊಡ್ಡ ಪಗಡೆಯಾಟವಿದ್ದಂತೆ ಎಂಬ ಪ್ರತಿಮೆಯೂ ಅಲ್ಲಿ ಬರುತ್ತದೆ. ಕತೆಯಲ್ಲಿ ಬರುವ ಒಂದೊಂದು ದೃಶ್ಯವು ಪಗಡೆಯ ಪಟ್ಟದಲ್ಲಿಯ ಒಂದೊಂದು ಮನೆಯಿದ್ದಂತೆ. ಹೀಗಿದ್ದರೂ ಈ ಕತೆಯು ನವ್ಯ ಕತೆಯೇ ಎಂದೆನಿಸುತ್ತದೆ. ಏಕೆಂದರೆ ಕತೆಯಲ್ಲಿ ಇರುವದು ಒಂದು ದೀರ್ಘವಾದ ದೃಶ್ಯಾವಳಿ ಮತ್ತು ಆ ದೃಶ್ಯಾವಳಿಯ ಮೂಲಕ ಹೊಳೆದ ಒಗಟುಮಯ ಪ್ರಶ್ನೆಗಳು. ಗೋಪಣ್ಣನ ಮನಸ್ಸನ್ನು ನಾವು ಹೆಚ್ಚಾಗಿ ಕಾಣನೆ, ಬಾಹ್ಯ ಜಗತ್ತನ್ನೇ ಹೆಚ್ಚಾಗಿ ಕಾಣುತ್ತೇವೆ. ಗೋಪಣ್ಣ ಮತ್ತು ಹಳ್ಳಿಯ ದೃಶ್ಯಗಳು ಇನೆರಡರಲ್ಲಿ ನಾವು ಹೆಚ್ಚಾಗಿ ಅರಿಯುವ ನಮ ಹಳ್ಳಿಯ ದೃಶ್ಯಗಳನ್ನು! ಕತೆಯಲ್ಲಿ ಒಂದೆಂಡು ಕಡೆಗೆ ಗೋಪಣ್ಣನಿಗೆ ತನ್ನ ಬಾಲ್ಯಜೀವನ ನೆನಪಾವಾಗ, ತಂಗಿಯ ಜೀವನವು ನೆನಪಾದಾಗ ಕತೆಯು ಮನೋವಿಶ್ಲೇಷಣೆಯ ಕಡೆಗೆ ಸಾಗಿದಂತಿದೆ. ಆದರೆ ಕತೆಗಾರರು ಅವನ್ನು ಅಲ್ಲಿಯೇ ಬಿಟ್ಟು ಮತ್ತೆ ಬೇರೆ ಹಾದಿಯನ್ನು ಹಿಡಿಯುತ್ತಾರೆ. ಆದುದರಿಂದ ಗೋಪಣ್ಣನು ಈ ಕತೆಯಲ್ಲಿ ಇದ್ದಂತೆ ಅನಿಸುವುದಿಲ್ಲ. ಕತೆಯ ವಿಶೇಷನಾಮವು ಗೋಪಣ್ಣನ ಪ್ರಶ್ನೆಯೆಂದಿ-

ದ್ದರೂ ಇದು ಗೋಪಣ್ಣನ ಕತೆಯನಿಸುವುದಿಲ್ಲ. ನವ್ಯಕತೆಯ ಜಾಡಿನಲ್ಲಿ ಹೊರಟಿದ್ದರೂ ಇದು ಸಂಪೂರ್ಣವಾಗಿ ನವ್ಯ-ಕತೆ ಅನಿಸುವುದಿಲ್ಲ.

ಮನುಷ್ಯನು ಅವನ ಶಕ್ತಿಗೆ ಮೀರಿದ ಒಂದು ಶಕ್ತಿಗೆ ಕೈಗೊಂಬೆಯಾಗಿದ್ದಾನೆ ಎಂದು ಹೇಳಿದ್ದಂತಿದೆ. "ನಾವೆಲ್ಲರೂ ಪಗಡೆಗಳು" ಎಂದು ಹೇಳಿದಾಗ ಆದರೆ ಇಷ್ಟು ದೈವವಾದವು ಉಚಿತವೇ ಮನುಷ್ಯನಿಗೆ ತನ್ನ ಕೃತುಶಕ್ತಿ ಎಂಬುದು ಇಲ್ಲವೇ? ಎಂದು ಒಂದು ಕ್ಷಣ ಅನಿಸುತ್ತದೆ ಕತೆಯನ್ನು ಓದಿದಾಗ.

ಅದೇನೆ ಇರಲಿ, ಕತೆಯು ಚಿಕ್ಕದಾಗಿಯೂ, ಕಲಾತ್ಮಕವೂ ಆಗಿರುವುದರಿಂದ ಮನಸ್ಸನ್ನು ನೇರವಾಗಿ ಮುಟ್ಟುತ್ತದೆ.

ಕತೆಯಲ್ಲಿ ಆರಂಭಕ್ಕೆ ಬರುವ ಗುಡಿಯ ವರ್ಣನೆಯು ವಾಸ್ತವಿಕವೂ ವ್ಯಂಗ್ಯಪೂರಿತವೂ ಆಗಿದೆ. ನಮ್ಮ ಹಳ್ಳಿಗಳಲ್ಲಿ ನಾವು ಇಂಥ ಎಷ್ಟೋ ಗುಡಿಗಳನ್ನು ಕಾಣಬಹುದು. ಗ್ರಾಮದ ಪಂಚಾಯತಿ ಕೂಡುವ ಸ್ಥಳ, ಹರಟೆಯ ಚಾವಡಿ, ದೊಣ್ಣೆಹಚ್ಚಿ ಆಡುವವರ ಆಶ್ರಮ, ದನಗಳ ಕೊಟ್ಟಿಗೆ, ಮಠದ ಸ್ವಾಮಿಗೆ ವಿಶ್ರಾಂತಿಗೃಹ, ಪಾತರದ ಮಲ್ಲಿಯ ಬಿಡಾರ—ದೇವರ ಮೂರ್ತಿಯನ್ನಿಟ್ಟ ಪುನೀತವಾದ ಸ್ಥಳವಾದ ಗುಡಿಯು ನಮ್ಮ ಸಮಾಜದಲ್ಲಿ ಎಂಥ ವಿಕೃತ ಸ್ವರೂಪವನ್ನು ತಾಳಿದೆ!

ಹಲವಾರು ಕಡೆಗೆ ಕತೆಯ ನಿರೂಪಣೆಯು ತುಂಬ ಪ್ರಭಾವಿಯಾಗಿದೆ ಕರಡಿಯ ಮಜಲನ್ನು ವರ್ಣಿಸುವಾಗ ಹೀಗೆ ಹೇಳಲಾಗಿದೆ: "ಇದು ಮಜಲಿನವರ ನಿತ್ಯಕಾರ್ಯ. ಅದೇ ತಾಳ, ಅದೇ ಸ್ವರ, ಅದೇ ಕುಣಿತ. ಅವರಿಗೆ ಯಾವ ಸಮಾಧಾನವಾಗುತ್ತಿತ್ತು? ಕುಣಿಯುವಾಗ ಕರಡಿಯ ಸದ್ದು! ಸತ್ತಾಗ ಹಲಗೆಯ ಸದ್ದು! ಅದೂ ವಾದ್ಯನೇ!" ಜಗತ್ತಿನಲ್ಲಿ ವಿಲಾಸವೂ ಇದೇ, ದುಃಖವೂ ಇದೆ ಎಂದು ಹೇಳಲು ಒಳ್ಳೆಯ ಮಾರ್ಗವಿದು. ಹಾಗೆಯೇ ಮಲ್ಲಿ ಮತ್ತು ಕಲ್ಲ ಇವರ ಸರಸಸಲ್ಲಾಪವನ್ನು ವರ್ಣಿಸುವಾಗ ಕತೆಗಾರರು ಹೀಗೆ ಬರೆಯುತ್ತಾರೆ: "ಕಲ್ಲ ಕೊರಳಿಗೆ ತಾಯಿತ ಕಟ್ಟಿದ್ದ. ಅಲ್ಲಿ ಒಬ್ಬ ಸಾಧುವಿನ ಸಮಾಧಿ" ಕಲ್ಲನ ಡಾಂಭಿಕತನವನ್ನು ಈ ವರ್ಣನೆಯಲ್ಲಿ ಚೆನ್ನಾಗಿ ಮೂಡಿಸಲಾಗಿದೆ ಇಂಥ ವರ್ಣನೆಗಳು ಕತೆಯಲ್ಲಿ ಇನ್ನೂ ಹೆಚ್ಚು ಬಂದಿದ್ದರೆ, ಕತೆಯು ಹೆಚ್ಚು ಕಲಾತ್ಮಕವಾಗುತ್ತಿತ್ತು, ಕತೆಯ ಜೀವಕಳೆಯು ಇಮ್ಮಡಿಯಾಗುತ್ತಿತ್ತು—ಎಂದು ಅನಿಸುತ್ತದೆ.

ಆದರೆ ಕತೆಯ ಅಂತ್ಯವು ಮನಸ್ಸನ್ನು ಸೆಳೆಯುತ್ತದೆ. ಕತೆಯ ಅಂತ್ಯಕ್ಕೆ ಗೋಪಣ್ಣನ ಮುಂದೆ ಪ್ರಶ್ನೆಗಳ ಮಾಲೆಯೇ ನಿಲ್ಲುತ್ತದೆ—"ಬಿತ್ತಿದ ಬೀಜಕ್ಕೆ ಮೊಳಕೆ. ಹೇಗೆ ಒಡೆಯುತ್ತದೆ? ಜೇನು ಹುಟ್ಟು ಹೇಗೆ ಕಟ್ಟುತ್ತದೆ? ಹೂವುಗಳಿಗೆ ಮಾತ್ರ ವಾಸನೆ ಏಕೆ? ನಿಜವಾಗಿಯೂ ಏಕೆ? ಇವು ಮೂಲಭೂತವಾದ ಪ್ರಶ್ನೆಗಳು; ಎಲ್ಲ ವಿಚಾರವಂತರನ್ನೂ ಅಸ್ವಸ್ಥ ಮಾಡಿದ ಪ್ರಶ್ನೆಗಳು, ಆದರೆ ಕತೆಯಲ್ಲಿ ನಾವು ಮೊದಲು ಓದಿದ ದೃಶ್ಯಗಳ ಮೂಲಕ ಈ ಪ್ರಶ್ನೆಗಳು ಉದ್ಭವಿಸಬಹುದೆ? ಎಂಬ ಪ್ರಶ್ನೆ ಹುಟ್ಟುತ್ತದೆ ಮತ್ತು ಓದುಗರ ಮನಸ್ಸಿನಲ್ಲಿ ಅಸಮಾಧಾನವನ್ನು, ಅತೃಪ್ತಿಯನ್ನು ಹುಟ್ಟಿಸುತ್ತದೆ.

ಎಲ್ಲಿರುವೆ ಆನಂದ ಬಾರಾ!

ಶ್ರೀ. ಎಂ. ಗಂಗಾಧರ ಭಟ್ಟ, ನಿರ್ಜಾಲು

೧

ಬಾಳಿನುಪವನದೊಳಗೆ ಕಹಿ-ಸಿಹಿಯೆಂದೆನ್ನವರು
ಸಿಹಿ ಎಲ್ಲಿ ಬಂತೊ ಕಾಣೆ!
ಜೀವನವು ಸಾಗಿಹುವು ನೋಣ ಕಹಿಯನುಂಡಿಹುದು
ಅದರಿನ್ನೂ ತಪ್ಪಲಿಲ್ಲ ಬವಣೆ!

೨

ಬಾಂದಳದಿ ಚಂದ್ರಮನು ಅಪ್ಸರೆಯರೊಡಗೂಡಿ
ಹಾಲ ಬೆಳಕನು ಚೆಲ್ಲಿ ರವಿಸಮನಂತೆ!
ಮೂಡುಗಡೆಯಲಿ ತಾನು ಹೊಂಬಣ್ಣ ಕಿರಣದಲಿ
ದಿನಕರನು ಮೂಡಿ ಅನಂದಿಸುವನಂತೆ!

೩

ಮನುಜರಿವನೀಕ್ಷಿಸಲು ರಸಿಕರಾದವರಿಲ್ಲೆ
ಇಳೆಯಲ್ಲಿ ಸ್ವರ್ಗವನು ಕಾಂಬರಂತೆ
ಬಡತನದ ಬೇಗೆಯಲಿ ಬೆಂದು ಬಾಡಿಹುದಿಂದು
ಹೃದಯಪುಷ್ಪವು ಎಲ್ಲವೂ ಅಂತೆ-ಕಂತೆ!

೪

ಹೃದಯ ಬಟ್ಟಲು ಎಲ್ಲೊ ಗಾಳಿಯಲಿ ಸಾಗುತಿದೆ
ಸಂತಸವನರಸಲೋಸುಗ ತೇಲಿ-ತೇಲಿ
ಸ್ವಚ್ಛಂದ ಅನಂದ ತಂಬೆಲರ ಬಯಸುತಿದೆ
ಅಗಸದಿ ನಲಿದಾಡೆ ಹಾಡಿ-ಹಾಡಿ!

೫

ಅನಂದ, ಅನಂದ ಎಲ್ಲಿರುವುವಾನಂದ?
ಹುಚ್ಚೆಳುತಿದೆ ಮನಕೆ ಅರಸ ಅನಂದ!
ನೊಂದ ಹೃದಯವದಿಂದು ಕಾತರದಿ ಬೇಡುತಿದೆ
ಎಲ್ಲಿಹುದು ಸ್ವಚ್ಛಂದ-ನಿರ್ಮಲಾನಂದ?

೬

ಗಾಣದೆತ್ತಿನಲಿ ಸಿಕ್ಕ ಕಬ್ಬಿನಂತಾಗಿಹೆನು
ಎಲ್ಲಿರುವೆ ಅನಂದ ಬಾರಾ!
ಬಡತನದಿ ಬಾಡಿರುವ ಹೃದಯಲತೆಗಿಂದು ನೀ
ಮಧು-ಮಧುರ ತಂಬೆಲರ ಚಿಮ್ಮು ಬಾರಾ!

ಸಾದರ ಸ್ವೀಕಾರ

೭೪. ವಿಜಾಪುರದ ಪಿ. ಡಿ. ಜೆ. ಹೈಸ್ಕೂಲಿನ **ಸುವರ್ಣ ಮಹೋತ್ಸವ ಸಂಪುಟ** (ಸಚಿತ್ರ). ಒಂಬತ್ತು ಜನ ಮಹನೀಯರ ಸಂಪಾದಕ ಮಂಡಲದಿಂದ ಸಂಪಾದಿತವಾಗಿದೆ. ಪ್ರಕಾಶಕರು ಶ್ರೀ. ಆರ್. ಆರ್. ದೇಶಪಾಂಡೆ, ಚೇಯರ್‌ಮನ್ ಗೋಲ್ಡನ್ ಜೂಬಿಲಿ ಕಮೀಟಿ, ಬಿ. ಡಿ. ಇ. ಸೊಸೈಟಿ ಮತ್ತು ಪಿ. ಡಿ. ಜೆ. ಹೈಸ್ಕೂಲ್, ವಿಜಾಪುರ. ಕ್ರೌ. ೧/೪ದ ೬೨ ಪುಟಗಳು. ಇಂಗ್ಲಿಷ್ ಲೇಖನಗಳಿಗೆ:೪೦ ಪುಟ ಕನ್ನಡ ಲೇಖನಗಳಿಗೆ. ಜಾಹೀರಾತಿನ ಪುಟಗಳೂ ತುಂಬ ಇವೆ.

೫೦ ವರ್ಷಗಳ ಹಿಂದಿನ ಉತ್ತರ ಕರ್ನಾಟಕವೆಂದರೆ, ಶಿಕ್ಷಣ ವಲ್ಲಿ ತುಂಬ ಹಿಂದುಳಿದ ಪ್ರದೇಶವಾಗಿತ್ತು. ಅದರಲ್ಲಿಯೂ ವಿಜಾಪುರದ ಪರಿಸ್ಥಿತಿಯೆಂದರೆ ಇನ್ನೂ ನಿಕೃಷ್ಟ, ಅಂತಹಕಾಲದಲ್ಲಿ ಚಿಕ್ಕದಾಗಿ ಹುಟ್ಟಿದ ಈ ಸಂಸ್ಥೆ, ಅನೇಕ ಆಪತ್ತಿಗಳನ್ನು ಅನುಭವಿಸಿಯೂ ವಿರೋಧ ಪರಿಸ್ಥಿತಿಯನ್ನು ಎದುರಿಸುತ್ತಲೂ ಇಂದು ಮಹಾವಟ ವೃಕ್ಷದಂತೆ ಬೆಳೆದು ನಿಂತಿದೆ. ಸದ್ಯದ ವ್ಯವಸ್ಥಾಪಕ ಮಂಡಲಿಯ ಸದಸ್ಯರೂ ಮುಖ್ಯಾಧ್ಯಾಪಕರೂ, ಮಿಕ್ಕ ಸಹಾಯೋಪಾಧ್ಯಾಯರೂ ತಮ್ಮ ಕಾರ್ಯಶಕ್ತಿಯಿಂದ, ವಿಜಾಪುರದಲ್ಲಿ ಆಕರ್ಷಕ ಸಂಸ್ಥೆಯನ್ನಾಗಿ ಅಣಿಗೊಳಿಸಿದ್ದಾರೆ. ವಿಜಾಪುರದಲ್ಲಿ 'ಬೋಲೇಗುಂಬಜ್' 'ಇಬ್ರಾಹಿಮ್ ರೋಜಾ' ಇವು ಸಂದರ್ಶನೀಯವಿದ್ದಂತೆ, ಸುಶಿಕ್ಷಿತ ವರ್ಗಕ್ಕೆ ಪಿ. ಡಿ. ಜೆ. ವಿದ್ಯಾಸಂಸ್ಥೆಯೂ ಸಂದರ್ಶನೀಯವಾಮದೆಂದು ಸಂದರ್ಶನೀಯವಾಮದೆಂದು ಖಂಡಿತವಾಗಿ ಹೇಳಬಹುದು.

ನೊಸ್ಸೆ ನೊಸ್ಸೆ ಈ ಸಂಸ್ಥೆಯ ಸುವರ್ಣಮಹೋತ್ಸವವನ್ನು ನೊಸ್ಟ ಪ್ರಮಾಣದಿಂದಲೇ ನಡೆಯಿತು. ಆವರ ನೆನಪಿಗಾಗಿ ಹೊರಡಿಸಿದ ಲೇಖನಸಂಪುಟವಿದು. ಸಂಸ್ಥೆಯ ಸಂಬಂಧಿಕರನೇಕರು, ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಸಂಸ್ಥೆಯನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳು ಈ ವಿದ್ಯಾಸಂಸ್ಥೆಯ ಬಗೆಗೆ ಎಲ್ಲರಲ್ಲಿಯೂ ಆದರ ಆತ್ಮೀಯತೆಗಳನ್ನು ಹುಟ್ಟಿಸುವಂತಿವೆ. ಇವಲ್ಲದೆ ಬೇರೆ ಬೇರೆ ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಲೇಖನಗಳೂ ಇವ ಲ್ಲಿ ಇವೆ. ಸುವರ್ಣಮಹೋತ್ಸವ ಸಂಭ್ರಮವನ್ನು ನೆನಪಿಸಿಕೊಳ್ಳುವಂತೆ ಕಾಗದ, ಅಚ್ಚುಕಟ್ಟು, ಬಾಹ್ಯಾಂಗ ಎಲ್ಲವೂ ಮನೋಹರವಾಗಿವೆ ಪಿ. ಡಿ. ಜೆ. ವಿದ್ಯಾಸಂಸ್ಥೆ ಬಹುಕಾಲಬಾಳಿ, ಸುಸಂಸ್ಕೃತ ನಾಗರಿಕರನ್ನು ನಿರ್ಮಿಸುತ್ತಿರಲಿ.

೭೫. ಮಲ್ಲ-ಮಲ್ಲಾಣಿ (ಮಹಾಶೃಂಗಾರ ಹಾಡುಗಬ್ಬ). ಸಂಪಾದಕರು ಡಾ. ಬಿ. ಎಸ್. ಗದ್ದಿಗಿಮಠ ಎಂ.ಎ.,ಪಿ.ಎಚ್.ಡಿ. ವಿಶ್ವವಿದ್ಯಾಲಯ ವಸಾಹತು, ಧಾರವಾಡ. ಸಂಪಾದಕರೇ ಪ್ರಕಾಶಕರು. ಕ್ರೌ. ೧/೮ದ ೮೩ ಪುಟಗಳು. ಬೆಲೆ ೦೦-೭೫.

೭೬. ಅರುಣೋದಯ (ಗದುಗಿನ ವಿದ್ಯಾದಾನ ಸಮಿತಿಯ ಹೈಸ್ಕೂಲುಗಳ ವಾರ್ಷಿಕ ಪತ್ರಿಕೆ) ಮುಖ್ಯ ಸಂಪಾದಕರು ಶ್ರೀ. ಕೆ. ಎಸ್. ಎನ್. ಅಯ್ಯಂಗಾರ್ ಬಿ. ಎಸ್ಸಿ., ಬಿ. ಟಿ. ಪ್ರಕಾಶಕರು ಶ್ರೀ. ಬಿ. ಪಿ. ಹುಯಿಲಗೋಳ, ಗೌರವಕಾರ್ಯದರ್ಶಿ ವಿದ್ಯಾದಾನ ಸಮಿತಿ ಗದಗ. ಕ್ರೌ. ೧/೪ದ ಸುಮಾರು ೧೦೦ ಪುಟಗಳು. ಅನೇಕ ಚಿತ್ರಗಳಿವೆ.

ಕರ್ನಾಟಕ ಕರ್ನಾಟಕದಾದ ನೋಲೂ ಇಂತಹ ವಿದ್ಯಾಸಂಸ್ಥೆಯ ಪತ್ರಿಕೆಗಳಲ್ಲಿ ಬೇರೆ ಬೇರೆ ಪರಭಾಷೆಗಳು ತಮ್ಮ ಕಾಲಿನ ಪುಟಗಳನ್ನು ಒತ್ತಾಯದಿಂದ ತೆಗೆದುಕೊಳ್ಳದೆ ಬಿಡುತ್ತಿಲ್ಲ. ಈ ಪದ್ಧತಿಯು ಇನ್ನಾವ ರಾಜ್ಯದಲ್ಲಿಯೂ ವಿದ್ಯಾಸಂಸ್ಥೆಗಳ ಪತ್ರಿಕೆಗಳಲ್ಲಿಯೂ ಕಂಡುಬರುತ್ತಿಲ್ಲ. ಕನ್ನಡಿಗರು ಅನ್ಯಭಾಷೆಯವರಿಗೆ ಕೊಡುವ ಮನ್ನಣೆಯನ್ನು ಅನ್ಯಭಾಷೆಯವರೂ ಕನ್ನಡಿಗರಿಗೆ ಕೊಟ್ಟರೆ ಅದೆಷ್ಟೋ ಸಂತೋಷದ ಸಂಗತಿ. ಆದರೆ ಅಮ ನಮ್ಮ 'ರೌರಾಜ್ಯದ ಕನಸು'.

ವಿದ್ಯಾರ್ಥಿ-ವಿದ್ಯಾರ್ಥಿನಿಯರು ಬರೆದ ವಿವಿಧ ವಿಷಯಕ ಲೇಖನ, ಪ್ರಬಂಧ, ಕವಿತೆ, ಕಥೆಗಳು ಇದರಲ್ಲಿವೆ. ಮುದ್ರಣ-ಬಂಧನ-ಗಳು ಚೆನ್ನಾಗಿವೆ.

೭೭. ಅಂತಃಶಕ್ತಿ (ಕಥಾ ಸಂಕಲನ). ಲೇಖಕರು ಶ್ರೀ. ಜಿ. ಎಸ್. ಅನ್ನದಾನಿಯವರು. ಪ್ರಕಾಶಕರು ಗ್ರಾಮಸೇವಕರ ಬಳಗ, ಸಿಂದಗಿ— ಜಿಲ್ಲಾ ವಿಜಾಪುರ. ಕ್ರೌ. ಅ. ೧೦೨ ಪುಟಗಳು. ಬೆಲೆ ೧-೦೦.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ ! **ಜಾನಪದ ಪ್ರೀತಿಗೀತಗಳು !!**

ಈಗಾಗಲೇ ತಮ್ಮ ಗೇಯಕಾವ್ಯಗುಣದಿಂದಲೂ ಭಾವಪೂರ್ಣತೆಯಿಂದಲೂ ಜನಪ್ರೀತಿಗೆ ಪಾತ್ರವಾಗಿರುವ 'ಬುತ್ತಿ ತೊಗೊಂಡು ಹೋಗ್ತಿನಿ!' 'ನಮ್ಮೂರ ಜಾತ್ರಿ' 'ಬೆಣ್ಣಿಯಾಕಿ' 'ಎಲ್ಲಿ ಹೋದರು ನನಕಡೆ ಕಣ್ಣ!' 'ನಾಜುಕಪ ನಾರಿ' ಮೊದಲಾದ ಪ್ರೀತಿಗೀತಗಳಲ್ಲದೆ, ಅವಕ್ಕೆ ಸರಿ–ಮಿಗಿಲೆನಿಸುವ ಬೇರೆ ಅನೇಕ ಪ್ರಣಯಜೀವನದ ಹಾಡು – ಪಾಡುಗಳೂ ಇದರಲ್ಲಿ ಸಂಕಲಿತವಾಗಿವೆ.

X X X X X

ಲಲಿತಸಂಗೀತಕಾರರಿಗೆ ಗೆಲವನ್ನು ತಂದುಕೊಡಬಲ್ಲ ನಲ್ವಾಡುಗಳಿವು. ಅರ್ಥ-ಭಾವಗಳು ಪಂಡಿತ ಪಾಮರರಿಬ್ಬರ ಮನಸ್ಸಿಗೂ ಆನಂದವನ್ನು ನೀಡಬಲ್ಲವು. ಈ ಸಂಕಲನದ ಪ್ರೀತಿಗೀತಗಳನ್ನು ಕೇಳಿದವರು, ಇದರಲ್ಲಿಯ ಗೀತವೊಂದರಲ್ಲಿ ನಾಯಿಕೆಯೊಬ್ಬಳು ತನ್ನ ಭಾವನೆಯನ್ನು ವ್ಯಕ್ತಪಡಿಸಿದಂತೆ :

ನಂದನವನ ಪಾರಿಜಾತಾ — ಬಂದು ಭೂಮಿಗಿಳಿದೈತವ್ವಾ —
ಮುಂದ ಹಿಂದ ಮ್ಯಾಲ ತಳಗs — ಚೆಂದs ಗಂಧs ಹರಡೈತವ್ವಾ !

ಎಂಬ ಆನಂದಾನುಭವನವನ್ನು ವ್ಯಕ್ತಪಡಿಸಿದೆ ಇರಲಾರರು.

X X X X X

ಕ್ರಾ. ಅ. ೮೦ ಪುಟಗಳು **ಬೆಲೆ ರೂ. ೧. ೨೫ ನ. ಪೈ.**

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೆ ಪತ್ರ ಬರೆಯಬೇಕು :

ಶ್ರೀ. ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪೂರ, ಜಿಲ್ಲಾ ಬೆಳಗಾಂವಿ

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.